CC-O. In Public Domain. Digitized by eGangotri

సాహిత్య సురభి

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಹಿತ್ಯ ಜೀವಿ

(ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರಿಗೆ ಅರ್ಪಿಸಿದ ಸಂಭಾವನಾ ಗ್ರಂಥ)

ಸಂಪಾದಕ

ಎಲ್. ಎಸ್. ಶೇಷಗಿರಿ ರಾವ್

ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ ಸನ್ಮಾನ ಸಮಿತಿ

ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sahitya Jeevi—Felicitation Volume presented to Professor G. Venkatasubbaiah. Editor: L. S. Seshagiri Rao. Published by Prof. G. Venkatasubbaiah Felicitation Committee, Bangalore. First Edition : March 1976, Pp. viii + 294. Price Rs. 15·00 (Calico Rs. 20·00).

ಮೊದಲನೆಯ ಮುದ್ರಣ: ಮಾರ್ಚ್ 1976

ಸಂಪಾದಕ ಮಂಡಲಿ

ಎಲ್. ಎಸ್. ಶೇಷಗಿರಿ ರಾವ್

ಟಿ. ಎಸ್ ರಾಮಚಂದ್ರ ರಾವ್

ಡಾ॥ ಎಂ. ಚಿದಾನಂದಮೂರ್ತಿ

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ವಿ. ನಾಗರಾಜರಾವ್

ಬೆಲೆ: ಕ್ಯಾಲಿಕೊ ಪ್ರತಿ ರೂ. 20.00
ಸಾದಾ ಪ್ರತಿ ರೂ. 15.00

ಪ್ರತಿಗಳಿಗೆ:

ಕಾರ್ಯದರ್ಶಿ

ಪ್ರೊ. ಜಿ. ವೆಂಕಟಸುಬ್ಬಯ್ಯ ಸನ್ಮಾನ ಸಮಿತಿ

4, ಪಟಾಲಮ್ಮ ಗುಡಿ ರಸ್ತೆ, ಬೆಂಗಳೂರು–560004

ಮುದ್ರಕರು

ಬೆಂಗಳೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪನಿ ಲಿಮಿಟೆಡ್, ಮೈಸೂರು ರಸ್ತೆ, ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿಕೆ

ಕನ್ನಡ ನಾಡು, ನುಡಿ, ಸಾಹಿತ್ಯಗಳ ಸೇವೆ ಮಾಡಿದ ಹಿರಿಯರಿಗೆ ಕೃತಜ್ಞತೆ ಸೂಚಿಸಿ ಅಭಿನಂದನಾಗ್ರಂಥವೊಂದನ್ನು ಸಮರ್ಪಿಸುವ ಸತ್ಸಂಪ್ರದಾಯ ಮೂರು ದಶಕಗಳಿಂದ ನಡೆದುಬರುತ್ತಿದೆ. ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರು ಭಾಷೆ–ಸಾಹಿತ್ಯ ಎರಡು ಕ್ಷೇತ್ರಗಳಲ್ಲಿಯೂ ವಿಶೇಷವಾದ ವಿದ್ವತ್ತನ್ನು ಸಂಪಾದಿಸಿದವರು. ಸುಮಾರು ನಲವತ್ತು ವರ್ಷಗಳ ಕಾಲ ಅಧ್ಯಾಪಕರಾಗಿದ್ದು ಸಾವಿರಾರು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಹಿತ್ಯದಲ್ಲಿ ಅಭಿರುಚಿಯನ್ನುಂಟು ಮಾಡಿದವರು. ಜೀವನದ ಶ್ರೇಷ್ಠ ಮೌಲ್ಯಗಳನ್ನು ಬೆಳಗಿಸಿದವರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ, ಅನಂತರ ಅಧ್ಯಕ್ಷರಾಗಿ ಆ ಸಂಸ್ಥೆಯ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿದರು. ಈಗ ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಗೊಳಿಸುತ್ತಿರುವ ಕನ್ನಡ ನಿಘಂಟು ಸಮಿತಿಯ ಉಪಾಧ್ಯಕ್ಷರೂ ನಿಘಂಟಿನ ಪ್ರಧಾನ ಸಂಪಾದಕರೂ ಆಗಿ ಕನ್ನಡಿಗರ ಒಂದು ಮುಖ್ಯವಾದ ಕೊರತೆಯನ್ನು ತುಂಬಿಕೊಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಈಚೆಗೆ ಬಿಡುಗಡೆಯಾದ ಸಂಕ್ಷಿಪ್ತ ಕನ್ನಡ ನಿಘಂಟಿನ ಪ್ರಧಾನ ಸಂಪಾದಕರು ಅವರು. ಬೋಧನೆ ಸಂಘಸಂಸ್ಥೆಗಳನ್ನು ಕಟ್ಟುವ ಕೆಲಸ ಇವುಗಳಲ್ಲಿ ಅವರಿಗೆ ದೊರೆತ ವಿರಾಮ ಕಡಮೆ. ಆದರೆ ಅವರು ಬರೆದಿರುವ ಸಂಶೋಧನಾ ಲೇಖನಗಳೂ, ಸಾಹಿತ್ಯ ವಿಮರ್ಶೆಯ ಲೇಖನಗಳೂ ಸಂಖ್ಯೆಯಲ್ಲಿ ಮಿತವಾದುವಾದರೂ ಗುಣದಲ್ಲಿ ಅಮೂಲ್ಯವಾದವು. ಇಂತಹ ಹಿರಿಯರನ್ನು ಕನ್ನಡ ನಾಡು ಅಭಿನಂದಿಸುವ ಸಂದರ್ಭದಲ್ಲಿ ಒಂದು ಗ್ರಂಥವನ್ನು ಸಮರ್ಪಿಸಬೇಕೆಂಬ ಆಲೋಚನೆಯನ್ನು ಅವರ ಶಿಷ್ಯವರ್ಗದವರೂ ಮಿತ್ರರೂ ಮಾಡಿದರು. ಹಲವರ ಸಹಕಾರದಿಂದ ಆ ಪ್ರಯತ್ನ ಫಲಿಸಿ 'ಸಾಹಿತ್ಯ ಜೀವಿ' ಕನ್ನಡಿಗರ ಕೈ ಸೇರುತ್ತಿದೆ. ಇದು ನಮಗೆ ಹೆಮ್ಮೆಯ ಸಂಗತಿ.

ಭಾಷೆ–ಸಾಹಿತ್ಯಗಳ ಅಧ್ಯಯನಕ್ಕೆ ತಮ್ಮ ಕಾಲವನ್ನು ಮುಡುಪಾಗಿಟ್ಟು ಆ ಅಧ್ಯಯನದ ದಾರಿಯಲ್ಲಿ ಹಲವರಿಗೆ ಮಾರ್ಗದರ್ಶನ ಮಾಡಿದ ಪ್ರೊಫೆಸರ್ ವೆಂಕಟಸುಬ್ಬಯ್ಯನವರಿಗೆ ಸಮರ್ಪಿಸುವ ಗ್ರಂಥ ಕನ್ನಡ ಭಾಷೆ ಮತ್ತು ಸಾಹಿತ್ಯಗಳನ್ನು ಅಧ್ಯಯನ ಮಾಡುವವರಿಗೆ ಉಪಯುಕ್ತವಾಗಬೇಕು ಎಂದು ಸಂಪಾದಕ ಮಂಡಲಿಯ ಆಶಯ. ಹಲವರು ವಿದ್ವಾಂಸರ ನೆರವಿನಿಂದ ಆ ಆಶಯ ಸಾರ್ಥಕವಾಗಿದೆ. ತಮ್ಮ ಅಭಿಪ್ರಾಯಗಳನ್ನು ಖಚಿತವಾಗಿ ನಿರೂಪಿಸಿ ಸಂಸ್ಕೃತಿ–ಭಾಷೆ–ಸಾಹಿತ್ಯಗಳ ಅಧ್ಯಯನ ಮಾಡುವವರಿಗೆ ಅವರು ನೆರವಾಗಿದ್ದಾರೆ. ಬಹು ಸ್ವಲ್ಪ ಕಾಲದೊಳಗಾಗಿ ಲೇಖನಗಳನ್ನು ಬರೆದುಕೊಟ್ಟು ಉಪಕಾರ ಮಾಡಿದ ಆ ವಿದ್ವಾಂಸರಿಗೆ ನಾವು ಕೃತಜ್ಞರಾಗಿದ್ದೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಪ್ರಯತ್ನ ಕಾರ್ಯರೂಪಕ್ಕೆ ಬರಲು ಪ್ರೊಫೆಸರ್ ಜಿ. ವೆಂಕಟ ಸುಬ್ಬಯ್ಯ ಸನ್ಮಾನ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಜಿ. ಸುಬ್ಬರಾಮಶೆಟ್ಟಿ ಅವರು ಮತ್ತು ಸದಸ್ಯರೆಲ್ಲರ ಕಾರ್ಯಶೀಲ ನೆರವೇ ಆಧಾರ. ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಛಾಯಾಚಿತ್ರಗಳನ್ನು ಒದಗಿಸಿ ಶ್ರೀ ಕೆ. ಜಿ. ಸೋಮಶೇಖರ ಅವರು, ರಕ್ಷಾ ಪತ್ರದ ನಮೂನೆಯನ್ನು ಸಿದ್ಧಪಡಿಸಿಕೊಟ್ಟು 'ಪ್ರಜಾವಾಣಿ'ಯ ಶ್ರೀ ರಮೇಶ್ ಅವರು ಉಪಕಾರ ಮಾಡಿದ್ದಾರೆ. ಬೆಂಗಳೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪೆನಿಯವರು ಬಹು ಸ್ವಲ್ಪ ಕಾಲದಲ್ಲಿ ಸಂಭಾವನಾ ಗ್ರಂಥವನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರು.

ಗ್ರಂಥಕ್ಕೆ ವಿದ್ವಾಂಸರಿಂದ ಲೇಖನಗಳನ್ನು ಪ್ರಾರ್ಥಿಸಿ ತರುವ ಕಾರ್ಯದಲ್ಲಿ, ಲೇಖನಗಳನ್ನು ಅಚ್ಚಿಗೆ ಸಿದ್ಧಮಾಡಿ ಮುದ್ರಣದ ಕೆಲಸಕ್ಕೆ ಗಮನಕೊಡುವಲ್ಲಿ ಸಂಪಾದಕ ಮಂಡಲಿಯ ಸದಸ್ಯರ ಮತ್ತು ಸನ್ಮಾನ ಸಮಿತಿಯ ಸದಸ್ಯರ ಸೌಜನ್ಯದ ಸಹಕಾರವನ್ನು ಸಂಪಾದಕ ಕೃತಜ್ಞತೆಯಿಂದ ಸ್ಮರಿಸುತ್ತಾನೆ.

ಈ ಅಭಿನಂದನಾಗ್ರಂಥ ಪ್ರೊಫೆಸರ್ ವೆಂಕಟಸುಬ್ಬಯ್ಯನವರ ವಿದ್ವತ್ತು, ಪ್ರತಿಭೆ ಮತ್ತು ಬಹುಮುಖ ಸೇವೆಗಳ ನೆನಪನ್ನು ಹಸಿರಾಗಿಸಿ, ಭಾಷೆ, ಸಾಹಿತ್ಯ ಮತ್ತು ಕಲೆಗಳಲ್ಲಿ ಆಸಕ್ತಿ ಇರುವವರಿಗೆಲ್ಲ ಉಪಯುಕ್ತವಾಗಲಿ ಎಂದು ಹಾರೈಸುತ್ತೇವೆ.

ಎಲ್. ಎಸ್. ಶೇಷಗಿರಿ ರಾವ್
ಸಂಪಾದಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಿಡಿ

		ಪುಟ
ಅರಿಕೆ	...	iii
ಎಲ್. ಎಸ್. ಶೇಷಗಿರಿ ರಾವ್		
ಆಪ್ತಮಿತ್ರ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರು	...	1
ಎಚ್. ಎಂ. ಶಂಕರನಾರಾಯಣರಾವ್		
ಮಹಾಕಾವ್ಯ—ರುದ್ರನಾಟಕ	...	25
ಎಚ್. ತಿಪ್ಪೇರುದ್ರಸ್ವಾಮಿ		
ಕಾವ್ಯ ವಿಷಯವಾಗಿ ಛಂದಸ್ಸು	...	35
ಟಿ. ವಿ. ವೆಂಕಟಾಚಲಶಾಸ್ತ್ರೀ		
'ಸಭಾಮಧ್ಯಲಬ್ಧವರಂ ಶ್ರೀವಿಜಯಂ'	...	57
ಎಂ. ವಿ. ಸೀತಾರಾಮಯ್ಯ		
'ಗೀತವೀತರಾಗ ಪ್ರಬಂಧ'—ಕರ್ತೃ ಮತ್ತು ಕಾಲವಿಚಾರ	...	79
ಎ. ಎನ್. ಉಪಾಧ್ಯೆ		
ಅಲ್ಲಮಪ್ರಭುದೇವನ ಕಿರುಕೃತಿ ಮತ್ತು ಪದಗಳು	...	83
ಎಸ್. ಎಂ. ವೃಷಭೇಂದ್ರಸ್ವಾಮಿ		
ವೆಂಕಟಕವಿ—ಒಂದು ಟಿಪ್ಪಣಿ	...	89
ಎಸ್. ಶಿವಣ್ಣ		
ಭದ್ರಬಾಹು ಭಟಾರರ ಕಥೆ: ಪರಿಶೀಲನೆ	...	91
ಹಂಪ. ನಾಗರಾಜಯ್ಯ		
ವಚನಗಳಲ್ಲಿ ಶೀಲವಂತರ ವಿಚಾರ	...	122
ಪಿ. ವಿ. ನಾರಾಯಣ		
ಬಸವಣ್ಣನವರ ಕ್ರಾಂತಿಕಲ್ಪನೆ ವಿವರಿಸುವ ಒಂದು ವಚನ	...	132
ಚಂದ್ರಶೇಖರ ಕಂಬಾರ		
ಕುಮಾರವ್ಯಾಸನಲ್ಲಿ 'ವಿದ್ಯಾಪರಿಣತರ ಅಲಂಕಾರ'	...	135
ಕೆ. ಕೃಷ್ಣಮೂರ್ತಿ		
ಓ ನನ್ನ ಜನವೇ! ಒಂದು ಪರಿಶೀಲನೆ	...	145
ಜಾ. ಗೋ.		
ವಿರಾಗಿ ವರ್ಧಮಾನ	...	154
ಕೆ. ನರಸಿಂಹಮೂರ್ತಿ		
ನೆನಪುಗಳೆ ಹಾಗೆ	...	159
ಎಚ್. ಎಸ್. ವೆಂಕಟೇಶಮೂರ್ತಿ		
ಪ್ರತಿಮಾತ್ಮಕ ಕವನವಾಗಿ 'ಹೇಳತೇನ ಕೇಳ'	...	167
ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ		

Sri Vidyabharathi Book Centre, Sringeri

CC-O. In Public Domain. Digitized by eGangotri

		ಪುಟ
'ಸಂಕ್ರಾಂತಿ'ಯ ದ್ವಂದ್ವಗಳು ಜಿ. ಎಸ್. ರಂಗನಾಥರಾವ್	...	177
ವೀರಚರಿತಕಾವ್ಯದ ಕೆಲವು ಮೂಲಗಳು ಸಾ. ಶಿ. ಮರುಳಯ್ಯ	...	191
ಕನ್ನಡ ಭಾಷಾಶುದ್ಧಿ ವಿಚಾರ ತೆಕ್ಕುಂಜ ಗೋಪಾಲಕೃಷ್ಣ ಭಟ್ಟ	...	203
ಶಬ್ದಕೋಶ ಪ್ರಪಂಚದ ಅಗ್ನಿಕುಂಡ ಬೈಗುಳಗಳು ಎಂ. ಚಿದಾನಂದಮೂರ್ತಿ	...	230
ಶಾಸನಗಳಲ್ಲಿ ಕನ್ನಡ ಭಾಷೆ ಬಾ. ರಾ. ಗೋಪಾಲ್	...	240
ಕನ್ನಡ ಭಾಷೆಯಲ್ಲಿ ನಿಘಂಟು ಕೆ. ನಾರಾಯಣ	...	246
ಕರ್ನಾಟಕದ ಜಾನಪದ ಚಟುವಟಿಕೆಗಳು—ಒಂದು ಸ್ಥೂಲ ಸಮೀಕ್ಷೆ ಹಾ. ಮಾ. ನಾಯಕ	...	256
ಹರ್ತಿ ಬಯಲಿನ ಜನಪದ ಖಂಡಕಾವ್ಯಗಳು ಎ. ಕೃಷ್ಣಮೂರ್ತಿ ಮತ್ತು ಎಂ. ಎಸ್. ಪ್ರಭಾಕರ್	...	265
ಲೇಖಿಕೆಯರಿಗೆ—ಮಹಿಳೆಯರಿಗೆ ಶಂಕರ ಮೊಕಾಶಿ ಪುಣೇಕರ	...	280
ಸೌರಾಷ್ಟ್ರದ ಕೆಲವು ಜನಪದ ಕಲೆಗಳು—ಒಂದು ಪ್ರತ್ಯಕ್ಷ ವರದಿ ಎಲ್. ಜಿ. ಸುಮಿತ್ರ	...	285

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರು

ಜೀವನದ ಕೆಲವು ಮುಖ್ಯ ವರ್ಷಗಳು

23-8-1913	ಜನನ
1937	ಎಂ.ಎ. ಪದವಿ.
1938	ಬಿ.ಟಿ. ಪದವಿ.
1939	ಮಂಡ್ಯ ಪುರಪ್ರೌಢಶಾಲೆ ಅಧ್ಯಾಪಕರು.
1939-1943	ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರು.
1943-1945	ಬೆಂಗಳೂರು ಹೈಸ್ಕೂಲು ಅಧ್ಯಾಪಕರು.
1945-1972	ಬೆಂಗಳೂರು ವಿಜಯ ಕಾಲೇಜಿನಲ್ಲಿ ಪ್ರಾಧ್ಯಾಪಕರು.
1954-1956	ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳು.
1965-1969	ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು.
1972-1973	ವಿಜಯ ಸಂಜೆ ಕಾಲೇಜಿನ ಪ್ರಿನ್ಸಿಪಾಲರು.
1973ರಿಂದ	ಕನ್ನಡ-ಕನ್ನಡ ಕೋಶ ಸಮಿತಿಯ ಉಪಾಧ್ಯಕ್ಷರು.

ಗ್ರಂಥಗಳು

ನಯಸೇನ (ವಿಮರ್ಶೆ)
ಅನುಕಲ್ಪನೆ (ವಿಮರ್ಶೆ)
ವಿಕಾಸ (ಇತರರೊಡನೆ)
ನಳಚಂಪು ಸಂಗ್ರಹ
ಅಕ್ರೂರ ಚರಿತ್ರೆಯ ಸಂಗ್ರಹ
ಕರ್ಣಕರ್ಣಾಮೃತ (ಸಂಕಲನ)
ಕನ್ನಡ ಶಾಸನ ಪರಿಚಯ
ಭಾಷಾಂತರ ಪಾಠಗಳು (1, 2, 3)
ಕಾಲೇಜ್ ಭಾಷಾಂತರ
ಕಾವ್ಯಲಹರಿ—ಸಂಪಾದಿತ (ಇತರರೊಡನೆ)
ಕಾವ್ಯ ಸಂಪುಟ (ಇತರರೊಡನೆ)
ಶಂಕರಾಚಾರ್ಯ (ಅನುವಾದ)
ಕಬೀರ (ಅನುವಾದ)
ಲಿಂಡನ್ ಜಾನ್‌ಸನ್ ಕಥೆ (ಅನುವಾದ)
ಸಂಯುಕ್ತ ಸಂಸ್ಥಾನಗಳನ್ನು ಪರಿಚಯ ಮಾಡಿಕೊಳ್ಳಿ (ಅನುವಾದ)
ರಾಬಿನ್‌ಸನ್ ಕ್ರೂಸೋ (ಮಕ್ಕಳಿಗಾಗಿ)
ಕವಿ ಜನ್ನ (ಮಕ್ಕಳಿಗಾಗಿ)
ಚಾವುಂಡರಾಯ (ಮಕ್ಕಳಿಗಾಗಿ)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಚ್. ಎಂ. ಶಂಕರನಾರಾಯಣರಾವ್

ಆಪ್ತಮಿತ್ರ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರು

ಸ್ವರ್ಗದೊಳಗೀ ಸ್ನೇಹ ದೊರೆವುದೇನು ?
ಈ ಪರಿಯ ಸೌಹಾರ್ದ ಕೆಳೆಯ ವೈಭವವು ?
ಇಲ್ಲದಿರೆ ನನಗಿಲ್ಲ ನೂರು ಜನ್ಮಗಳಿರಲಿ
ಎಲ್ಲ ಪರಿ ಮಮತೆಗಳ ಸತ್ಯಜೀವನವು.

ವಿ.ಸೀ.

Those friends thou hast, and their adoption tried,
Grapple them to thy soul with hoops of steel.

'HAMLET'—Shakespeare

ಸ್ನೇಹವೆಂಬುದು ಅಪೂರ್ವ ವಸ್ತು; ಅದನ್ನು ಹಣದಿಂದ ಕೊಳ್ಳುವುದಕ್ಕಾಗುವುದಿಲ್ಲ. ಸಮಾನವಯಸ್ಸಿನ, ಸಮಮನೋಧರ್ಮದ ವ್ಯಕ್ತಿಗಳಲ್ಲಿ ಅವರ ಪೂರ್ವಪುಣ್ಯದಿಂದ ಅನಿರೀಕ್ಷಿತವಾಗಿ ಬೇರೂರಿಕೊಂಡು ಅದು ಸ್ಥಿರವಾಗಿ ನೆಲೆಗೊಳ್ಳುತ್ತದೆ. ಚಿಕ್ಕವಯಸ್ಸಿನಲ್ಲಿ ನಮಗೆ ನೂರಾರು ಜನರ ಪರಿಚಯ, ಸ್ನೇಹ, ಸಂಪರ್ಕ ಇವು ದೊರಕುತ್ತವೆ. ಆದರೆ, ಇವು ಯಾವುವೂ ಸ್ಥಿರವಲ್ಲ. ಮಾಗಿಯ ಎಲೆಗಳಂತೆ ಅವು ಬಲು ಬೇಗ ಒಂದೊಂದಾಗಿ ಉದುರಿಹೋಗುತ್ತವೆ. ನಡುವಯಸ್ಸಿನಲ್ಲಿ ನಮಗೆ ತಿಳಿಯದೆಯೇ ಯಾವುದೊ ಆಯ್ಕೆ ನಡೆದು ನಮಗೆ ಕೆಲವರು ಸ್ನೇಹಿತರು ಉಳಿದುಕೊಳ್ಳುತ್ತಾರೆ. ಇದು ನಿಜವಾದರೂ ಜೀವನದ ಉದ್ದಕ್ಕೂ ನಮ್ಮ ಹಿತೈಷಿಗಳಾಗಿ, ನಮ್ಮ ಸುಖದುಃಖಗಳಲ್ಲಿ ಸಮಭಾಗಿಗಳಾಗಿ, ಕಷ್ಟದಲ್ಲಿ ಊರುಗೋಲಾಗಿ, ನಿಲ್ಲುವವರು ಎಲ್ಲಿಯೋ ಒಬ್ಬಿಬ್ಬರು ಮಾತ್ರ. ನನಗಾದರೂ ವಿದ್ಯಾರ್ಥಿಯಾಗಿದ್ದ ದಿನಗಳಿಂದ ಇಂದಿನವರೆಗೆ ಒಂದೇ ಸಮನಾಗಿ ನನ್ನಲ್ಲಿ ವಿಶ್ವಾಸವಿಟ್ಟು ಬೆಂಬಲವಾಗಿ ನಿಂತಿರುವ ಇಬ್ಬರು ಆಪ್ತ ಸ್ನೇಹಿತರಲ್ಲಿ ನನಗಿಂತಲೂ ಹಿರಿಯರಾದ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರು ಒಬ್ಬರು; ನನಗಿಂತಲೂ ಕಿರಿಯರಾದ ಪ್ರೊಫೆಸರ್ ಎಸ್. ವಿ. ಪರಮೇಶ್ವರಭಟ್ಟರು ಮತ್ತೊಬ್ಬರು. ಇವರಿಬ್ಬರ ಹಿರಿಯಕಿರಿಯತನದಲ್ಲಿ ಇರುವ ಕಾಲದ ಅಂತರ ಕೇವಲ ಮೂರು ಮೂರೇ ತಿಂಗಳು.

ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರು 23–8–1915 ರಲ್ಲಿ ಅವರ ತಾಯಿಯ ತೌರುಮನೆಯಾದ ಕೈಗೋನಹಳ್ಳಿಯಲ್ಲಿ ಕುಟುಂಬದ ಹಿರಿಯ ಮಗನಾಗಿ ಜನ್ಮವೆತ್ತಿದರು. ಗಂಜಾಂ ತಿಮ್ಮಣ್ಣಯ್ಯನವರು ಇವರ ತಂದೆ. ತಾಯಿ ಸುಬ್ಬಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ನವರು. ಗಂಜಾಂ, ಶ್ರೀರಂಗಪಟ್ಟಣದಿಂದ ಒಂದು ಮೈಲಿ ದೂರದಲ್ಲಿ ಇರತಕ್ಕ ಸಣ್ಣ ಊರು. ಇದು ಹೈದರ್, ಟಿಪ್ಪುಸುಲ್ತಾನರ ಕಾಲದಲ್ಲಿ ಶ್ರೀರಂಗಪಟ್ಟಣದ ಪೇಟೆ ಆಗಿತ್ತು ಎಂಬ ಕಥೆ ಇದೆ. ಶ್ರೀರಂಗಪಟ್ಟಣವು ಕೋಟೆ ಎಂದೂ ಗಂಜಾಂ ಪೇಟೆ ಎಂದೂ ಹೆಸರು ಪಡೆದಿದ್ದುವು. ಗಂಜಾಂ ತಿಮ್ಮಣ್ಣಯ್ಯನವರ ಪೂರ್ವಿಕರು ಈ ಊರಿನಲ್ಲಿ ಜನಪ್ರಿಯ ಪುರೋಹಿತರಾಗಿದ್ದರು. ತಿಮ್ಮಣ್ಣಯ್ಯನವರು ಸ್ವಲ್ಪ ಕುಳ್ಳಗಿದ್ದರೂ ಕೆಂಪು ಬಣ್ಣದ ತೇಜಸ್ವಿಯಾದ ವ್ಯಕ್ತಿ. ನಾನು ಇವರನ್ನು ನೋಡಿದಾಗ ಜ್ಞಾನ ಪರಿಪಕ್ವತೆಯ, ಸಾತ್ವಿಕತೆಯ ಚಿಹ್ನೆ ಇವರ ಪ್ರಸನ್ನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಮೈಸೂರಿನ ಶಿಕ್ಷಕರ ತರಬೇತಿ ಕಾಲೇಜಿನಲ್ಲಿ ಸೀನಿಯರ್ ಕನ್ನಡ ಪಂಡಿತರಾಗಿ ನಿವೃತ್ತಿ ಹೊಂದಿದ ಈ ಹಿರಿಯರು ವೇದ ಉಪನಿಷತ್ತುಗಳಲ್ಲಿ ಪಾರಂಗತರು; ಕನ್ನಡ ಸಂಸ್ಕೃತಗಳಲ್ಲಿ ನಿಷ್ಣಾತರು. ನಮ್ಮ ಕಾಲದಲ್ಲಿ ಪ್ರಸಿದ್ಧ ವಿದ್ವಾಂಸರೆಂದು ಖ್ಯಾತರಾಗಿದ್ದ ಶ್ರೀ ಮಹದೇವ ಪ್ರಭಾಕರ ಪೂಜಾರರೂ ಇವರೂ ಒಂದೇ ಕೊಠಡಿಯಲ್ಲಿದ್ದು ಸಹಾಧ್ಯಾಯಿಗಳಾಗಿದ್ದರಂತೆ. ಸದಾಚಾರ ಸಂಪನ್ನರಾಗಿ ನಿತ್ಯಕರ್ಮ ಪೂಜಾವಿಧಿಗಳಲ್ಲಿ ಆಸಕ್ತರಾಗಿ ಶಿಷ್ಯವತ್ಸಲರಾಗಿದ್ದ ತಿಮ್ಮಣ್ಣಯ್ಯನವರು ದೊಡ್ಡ ಕುಟುಂಬಿಗಳು. ಶ್ರೀಮಂತರಲ್ಲದ ತಿಮ್ಮಣ್ಣಯ್ಯನವರು ತಮ್ಮ ಹೃದಯದ ಶ್ರೀಮಂತಿಕೆಯನ್ನು ಮರೆತು ಒಂದು ದಿನವೂ ಗೊಣಗದೆ. ಸದಾ ಹಸನ್ಮುಖಿಗಳಾಗಿದ್ದು ತಮ್ಮ ಏಳು ಜನ ಗಂಡು ಮಕ್ಕಳನ್ನೂ ವಿದ್ಯಾವಂತರನ್ನಾಗಿ ಮಾಡಿ ಮುಂದಕ್ಕೆ ತಂದರು.

ಪಂಡಿತ ತಿಮ್ಮಣ್ಣಯ್ಯನವರು ಬದುಕಿದ್ದ ಕಾಲ ಅನ್ನವನ್ನೂ ವಿದ್ಯೆಯನ್ನೂ ಮಾರಿಕೊಳ್ಳಕೂಡದೆಂದು ಜನರು ನಂಬಿದ್ದ ಕಾಲ; ತಾವು ಗಳಿಸಿದ ವಿದ್ಯೆಯನ್ನು ಇತರರಿಗೆ ನಿರ್ವಂಚನೆಯಿಂದ ಹಂಚಿಕೊಡಬೇಕೆಂದು ತಿಳಿದಿದ್ದ ಕಾಲ. "ಯಸ್ಯಾಗಮಃ ಕೇವಲ ಜೀವಿಕಾಯೈ ತಂ ಜ್ಞಾನಪಣ್ಯಂ ವಣಿಜಂ ವದಂತಿ" ಎಂಬ ಕಾಳಿದಾಸನ ಉಕ್ತಿಯನ್ನು ಇವರು ಮನಗಂಡು ಅದನ್ನು ತಮ್ಮ ವ್ಯವಹಾರದ ನೀತಿಯನ್ನಾಗಿ ಮಾಡಿಕೊಂಡಿದ್ದರು. ಶಾಲೆಯಲ್ಲಲ್ಲದೆ ಹೊರಗಡೆಯಲ್ಲಿಯೂ ಜನರ ತಿಳಿವಳಿಕೆಯ ಮಟ್ಟವನ್ನು ಹೆಚ್ಚಿಸಬೇಕೆಂಬ ಘನ ಉದ್ದೇಶದಿಂದ "ಪುರಾಣ ಕಥಾವಳಿ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು. ಸಂಸ್ಕೃತದ ಹದಿನೆಂಟು ಮಹಾಪುರಾಣಗಳನ್ನೂ ಉಪಪುರಾಣಗಳನ್ನೂ ಕನ್ನಡಕ್ಕೆ ಅನುವಾದ ಮಾಡಬೇಕೆಂಬುದು ಇವರ ಮಹದಾಸೆ. ಪ್ರಯತ್ನ ಎಷ್ಟು ಸ್ತುತ್ಯವಾದುದ್ದಾದರೂ ಆರ್ಥಿಕ ಬೆಂಬಲವಿಲ್ಲದಿದ್ದರೆ ಅದು ಮುಂದುವರೆಯುವುದು ದುಸ್ಸಾಧ್ಯ. ಹೀಗಾಗಿ ಕೈ ಕಚ್ಚಿಸಿಕೊಂಡಮೇಲೆ, ಈ ಮಾಸಪತ್ರಿಕೆಯನ್ನು ಅವರು ನಿಲ್ಲಿಸಬೇಕಾಯಿತು. ಮೈಸೂರಿನಲ್ಲಿ ಜಯಚಾಮರಾಜೇಂದ್ರ ಗ್ರಂಥಮಾಲೆ ಪ್ರಾರಂಭವಾದಮೇಲೆ ಅನೇಕ ವಿದ್ವಾಂಸರು ಅನುವಾದ ಕಾಲದಲ್ಲಿ ತಿಮ್ಮಣ್ಣಯ್ಯನವರ ಸಹಾಯವನ್ನು ಅಪೇಕ್ಷಿಸಿ ಅವರ ಮನೆಗೆ ಬರುತ್ತಿದ್ದರು. ವಿಷ್ಣುಪುರಾಣವನ್ನು ಸಂಪೂರ್ಣವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇದಲ್ಲದೆ 'ದೇವೀ ಭಾಗವತ', 'ಸೂತ ಸಂಹಿತೆ', 'ಲಿಂಗಪುರಾಣ', 'ತ್ರಿಪುರಾ ರಹಸ್ಯ', 'ಶಿವ ಮಹಾಪುರಾಣ', 'ಶುಕ ರಹಸ್ಯೋಪನಿಷತ್', 'ಬ್ರಹ್ಮ ಪುರಾಣ', 'ಭವಿಷ್ಯ ಪುರಾಣ', 'ಪದ್ಮ ಪುರಾಣ' ಮುಂತಾದ ಅನೇಕ ಗ್ರಂಥಗಳ ಅನುವಾದಕಾರ್ಯದಲ್ಲಿ ಇವರು ತಮ್ಮ ಸಹಾಯ ನೀಡಿದುದನ್ನು ವಿವರಿಸುವ ದಾಖಲೆಗಳಿವೆ. ಗಣೇಶ ಪುರಾಣವನ್ನು ಸಂಗ್ರಹಿಸಿ ಅನುವಾದ ಮಾಡಿದ್ದಾರೆ. ಕನ್ನಡದಲ್ಲಿ 'ರಘುವೀರ ವಿಜಯ' ವೆಂಬ ಸ್ವಂತ ನಾಟಕವನ್ನು ರಚಿಸಿದ್ದಾರೆ. ಅದು ಇನ್ನೂ ಹಸ್ತಪ್ರತಿಯಲ್ಲಿಯೇ ಇದೆ. 'ಮಾಲತೀ ಮಾಧವ' ನಾಟಕವನ್ನು ಇವರು ಅನುವಾದ ಮಾಡಿದ್ದರು. ವಿದ್ಯಾರ್ಥಿಗಳಾಗಿದ್ದ ನಮ್ಮ ಮಟ್ಟಿಗೆ ಹೇಳುವುದಾದರೆ ನಮ್ಮ ಆನರ್ಸ್ ಪರೀಕ್ಷೆಗೆ ಇಟ್ಟಿದ್ದ ಕಬ್ಬಿಣದ ಕಡಲೆಯಂತಿದ್ದ ರುದ್ರಭಟ್ಟನ 'ಜಗನ್ನಾಥ ವಿಜಯ' ವನ್ನು ಇವರು ಪಾಠ ಹೇಳಿದ್ದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ಇಂತಹ ತಂದೆಯ ಪಾಂಡಿತ್ಯದಿಂದ ಮತ್ತು ಆಶೀರ್ವಾದದಿಂದ ಮಗನಲ್ಲಿ ತಿಳಿವಳಿಕೆ ಇಳಿದು ಬಂದಿದ್ದರೆ ಅದೇನೂ ಸೋಜಿಗವಲ್ಲ.

ಸಮಸ್ತ ತಾಯ್ತನ ಮತ್ತು ಮುತ್ತೈದೆತನದ ಸಾಕ್ಷಾತ್ಕಾರದಂತಿದ್ದ ಶ್ರೀಮತಿ ಸುಬ್ಬಮ್ಮನವರ ಬಗ್ಗೆ ಈ ಮಾತುಗಳನ್ನು ಹೇಳಲು ತುಂಬ ಆನಂದವಾಗುತ್ತದೆ. ಈ ಕಾಲದಲ್ಲಿ ಅಂತಹ ಜನರನ್ನು ಕಾಣುವುದು ಅಪರೂಪ ಅಥವಾ ಅಸಾಧ್ಯ ಎಂದೇ ಹೇಳಬೇಕು. ಶ್ರೀಮತಿ ಸುಬ್ಬಮ್ಮನವರ ಮಾತು ತುಂಬ ಮೃದು: ಅವರು ದನಿ ಏರಿಸಿದುದನ್ನು ನಾನು ಕೇಳಿಯೇ ಇಲ್ಲ. ತಮ್ಮ ಕಷ್ಟಗಳನ್ನು ತಮ್ಮಲ್ಲಿಯೇ ನುಂಗಿಕೊಂಡು ಯಾವುದಕ್ಕೂ ಕಾರ್ಪಣ್ಯವನ್ನು ವ್ಯಕ್ತಪಡಿಸದೆ, ಮಕ್ಕಳ ಅಭಿವೃದ್ಧಿಯೇ ತಮ್ಮದೆಂದು ಭಾವಿಸಿ, ಮನೆಗೆ ಬಂದವರನ್ನು ತುಂಬುಮನಸ್ಸಿನಿಂದ ಸತ್ಕರಿಸಿ ಇವುಗಳಲ್ಲಿಯೇ ನೆಮ್ಮದಿಯನ್ನು ಕಂಡುಕೊಂಡು ಬಾಳಿದವರು, ಆ ತಾಯಿ. ಮಗನ ಸ್ನೇಹಿತನೆಂದು ನನ್ನನ್ನೂ ಮಗನಂತೆಯೇ ವಿಶ್ವಾಸದಿಂದ ಕಂಡು, ತಿಂಡಿಕೊಟ್ಟು, ಊಟಹಾಕಿದ್ದನ್ನು —ಕೈ ತುತ್ತನ್ನೂ ಸಹ — ನಾನೆಂದಿಗೂ ಮರೆಯಲಾರೆ. ಮಾರ್ದವ. ಸ್ವಚ್ಛತೆ, ಸಾತ್ವಿಕತೆ ಈ ಗುಣಗಳು ವೆಂಕಟಸುಬ್ಬಯ್ಯನವರಿಗೆ ಅವರ ತಾಯಿಯಿಂದ ಬಳುವಳಿಯಾಗಿ ಬಂದಿರಬೇಕು.

1927 ರಿಂದ 1930 ರವರೆಗಿನ ತಮ್ಮ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಮಧುಗಿರಿಯಲ್ಲೂ. 1932 ರ ಇಂಟರ್‌ಮೀಡಿಯಟ್ ಪರೀಕ್ಷೆಯನ್ನು ಮೈಸೂರಿನ ಇಂಟರ್‌ಮೀಡಿಯಟ್ ಕಾಲೇಜಿನಲ್ಲೂ ಮುಗಿಸಿ ವೆಂಕಟಸುಬ್ಬಯ್ಯನವರು ಕನ್ನಡ ಆನರ್ಸ್ ಓದಲು 1933 ರ ಜುಲೈ ತಿಂಗಳಿನಲ್ಲಿ ಮೈಸೂರಿನ ಮಹಾರಾಜ ಕಾಲೇಜನ್ನು ಸೇರಿದರು. ಮಧುಗಿರಿಯ ಬೆಟ್ಟವನ್ನು ಹತ್ತುವುದರಲ್ಲಿದ್ದ ಸೊಗಸನ್ನೂ, ಆ ಊರಿನ ದಾಳಿಂಬೆ ಮತ್ತು ಸೀತಾಫಲಗಳ ಸವಿಯನ್ನೂ, ಹುಣ್ಣಿಮೆಯ ದಿನಗಳಲ್ಲಿ ಆಡಿದ 'ಪೇಪರ್ ಛೇಸ್' ಆಟದ ವೈಭವವನ್ನೂ ಶ್ರೀಯುತರು ಆಗಾಗ ಹೇಳುತ್ತಿದ್ದುದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ಕೇಳಿದ್ದೇನೆ. ಆ ಊರಿನಲ್ಲಿ ಅಪರೂಪಕ್ಕೆ ಬರುತ್ತಿದ್ದ ಚಿರತೆಗಳ ಬೇಟೆಯನ್ನು ಅವರು ಬಹು ರಸವತ್ತಾಗಿ ವರ್ಣಿಸುತ್ತಾರೆ. ಮಧುಗಿರಿಯಲ್ಲಿ ಅವರು ಕಳೆದ ಕಾಲ ಅವರಿಗೆ ಈಗಲೂ ತುಂಬ ಪ್ರಿಯವಾಗಿದೆ.

ನಾವು ಕನ್ನಡ ಆನರ್ಸ್ ತರಗತಿಯನ್ನು ಸೇರಿದ ಕಾಲ ಹೊಸಗನ್ನಡ ಸಾಹಿತ್ಯದ ವಸಂತಕಾಲ ; ಅನೇಕ ಕವಿಕೋಗಿಲೆಗಳು ಹಾಡಲು ಪ್ರಾರಂಭಿಸಿದ್ದ ಕಾಲ. ಆಗ ಹೊಸಗನ್ನಡದಲ್ಲಿ ಬರೆಯುವವರಿಗೆ ಉತ್ತೇಜನಕರವಾದ ವಾತಾವರಣವಿತ್ತು. ಬೆಂಗಳೂರಿನಲ್ಲಿ ನಾನು ಕೇಳಿದ ಆಚಾರ್ಯ ಶ್ರೀ ಅವರ ಉಪನ್ಯಾಸಗಳು. ಡಾ|| ಎ. ಆರ್. ಕೃಷ್ಣಶಾಸ್ತ್ರಿಗಳ ಪ್ರವಚನ, ಪ್ರೊ|| ವಿ. ಸೀತಾರಾಮಯ್ಯನವರ ರಸ ಸ್ಯಂದಿಯಾದ ಪಾಠ — ಇವುಗಳಿಂದ ಪ್ರೇರಿತನಾಗಿ ನಾನು ಮೈಸೂರಿಗೆ ಬಂದದ್ದು. 1933 ರಲ್ಲಿ ಕನ್ನಡ ಆನರ್ಸ್ ತರಗತಿಗೆ ಸೇರಿದವರು ಮೂರು ಮಂದಿ—ನಾನು, ಜಿ. ವೆಂಕಟಸುಬ್ಬಯ್ಯನವರು ಮತ್ತು ವಿದ್ಯಾರ್ಥಿದೆಸೆಯಲ್ಲಿಯೇ ಅಕಾಲಮರಣ ವನ್ನಪ್ಪಿದ ಜಿ. ಡಿ. ರಾಜಶೇಖರಪ್ಪನವರು. ಹಳಗನ ಡದಲ್ಲಿ ನಮ್ಮ ಹಿರಿಯರು ಸಂಪಾದಿಸಿಟ್ಟ ನಿಧಿ ಇದೆ, ಅದನ್ನು ಕೈವಶಮಾಡಿಕೊಳ್ಳಬೇಕು. ಜನರಲ್ಲಿ ಅದನ್ನು ಹಂಚಬೇಕು — ಈ ಧ್ಯೇಯಗಳಿಂದಲೇ ಪ್ರೇರಿತನಾಗಿ ನಾನು ಕನ್ನಡವನ್ನು ಅಭ್ಯಾಸ ವಿಷಯವನ್ನಾಗಿ ತೆಗೆದುಕೊಂಡಿದ್ದು. ಉಳಿದ ನನ್ನಿಬ್ಬರು ಸ್ನೇಹಿತರು ಯಾವ ಭಾವನೆ ಗಳಿಂದ ಪ್ರೇರಿತರಾಗಿ ಕನ್ನಡವನ್ನು ಓದಲು ಬಂದರೋ ನನಗೆ ಅಂದು ತಿಳಿಯದಾಗಿತ್ತು. ಆದರೂ, ಕನ್ನಡ ಇಲಾಖೆಯಲ್ಲಿ ಹೆಸರು ಗಳಿಸಿದ್ದ ಉಪಾಧ್ಯಾಯರ ಸಾನ್ನಿಧ್ಯವು ನಮಗೆ ಒಂದು ಆಕರ್ಷಣೆಯಾಗಿತ್ತು. ಅಂದು ನಮ್ಮ ಕಾಲೇಜಿಗೆ ಪ್ರೊಫೆಸರ್ ಜೆ. ಸಿ. ರಾಲೊ ಅವರು ಪ್ರಿನ್ಸಿಪಾಲರಾಗಿದ್ದರು. ನಾಟಕಗಳನ್ನು ಓದಿ ವಿದ್ಯಾರ್ಥಿಗಳನ್ನು ಕುಣಿಸುವುದರಲ್ಲಿ ಅವರು ಅಗ್ರಮಾನ್ಯರು (ಈಗ ಅವರು ತಮ್ಮ ಹಣ್ಣು ಹಣ್ಣು ವಾರ್ಧಕ್ಯದಲ್ಲಿ ಅವರ ತಾಯಿನಾಡಾದ ಇಂಗ್ಲೆಂಡಿನಲ್ಲಿ ದ್ದಾರೆ ಎಂದು ಕೇಳಿದ್ದೇವೆ). ಅವರ ಸರಸಭಾಷಣ ರಸಿಕರಿಗೆ ಒಂದು ರಸದೌತಣ. ಪ್ರೊ. ರಾಲೊ ಅವರು ನೇರವಾಗಿ ತರಗತಿಗಳಲ್ಲಿ ನಮಗೆ ಪಾಠಹೇಳದಿದ್ದರೂ, ಅವರ ಉಪನ್ಯಾಸಗಳು ನಮ್ಮ ಮೇಲೆ ಪ್ರಭಾವ ಬೀರುತ್ತಿದ್ದವು. ಆಟಗಳಲ್ಲಿಯೂ ನಾಟಕ ರಂಗದ ಮೇಲೂ ಅವರು ಆಗಾಗ ಕಾಣಿಸಿಕೊಳ್ಳುತ್ತಿದ್ದರು. ಕನ್ನಡದ ವಿಷಯದಲ್ಲಿ ವಿದ್ವಾಂಸರೂ ವಿಮರ್ಶಕಶ್ರೇಷ್ಠರೂ ಎಂದು ಪ್ರಖ್ಯಾತರಾಗಿದ್ದ ನಸುಬಾಗಿದ ಎತ್ತರದ ವ್ಯಕ್ತಿ ಟಿ. ಎಸ್. ವೆಂಕಣ್ಣಯ್ಯನವರು ಕನ್ನಡದ ಪ್ರಾಧ್ಯಾಪಕರಾಗಿದ್ದರು. ಸಾತ್ವಿಕಶಿರೋಮಣಿಗಳಾಗಿದ್ದ ಇವರು ಪಂಪಭಾರತ, ಕುಮಾರವ್ಯಾಸಭಾರತ, ಶಬ್ದಮಣಿದರ್ಪಣ—ಇವುಗಳನ್ನು ಪಾಠಹೇಳುವುದರಲ್ಲಿ ನಿಷ್ಣಾತರೆಂದು ಪ್ರತೀತಿ ಇತ್ತು. ಆದರೆ ಈ ಗ್ರಂಥಗಳನ್ನು ಕುರಿತ ಪಾಠವನ್ನು ಅವರ ಬಾಯಿಂದ ಕೇಳುವ ಪುಣ್ಯ ತರಗತಿಗಳಲ್ಲಿ ನಮಗೆ ಒದಗಿಬರಲಿಲ್ಲ. ಶ್ರೀ ತೀ. ನಂ. ಶ್ರೀಕಂಠಯ್ಯನವರು ಇಂಗ್ಲೀಷ್, ಕನ್ನಡ, ಸಂಸ್ಕೃತಗಳಲ್ಲಿ ಸಮನಾದ ಪಾಂಡಿತ್ಯವನ್ನು ಗಳಿಸಿಕೊಂಡು,

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲಭೂತವಾದ ಸಂಶೋಧನೆಗಳಿಗೆ ತಳಹದಿಯನ್ನು ಹಾಕಿಕೊಳ್ಳುವ ಸಿದ್ಧತೆ ಯಲ್ಲಿದ್ದರು. ನಮಗೆ ಪಾಠಹೇಳಿದ ಇನ್ನೊಬ್ಬ ಗುರುವರ್ಯರಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರಿಗೆ ಅಗಾಧವಾದ ಜ್ಞಾಪಕಶಕ್ತಿ ಇದ್ದು ಅವರ ಕುತೂಹಲ ವಿಶ್ವವ್ಯಾಪಿಯಾಗಿತ್ತು. ವಿಧಿವತ್ತಾಗಿ ಪರೀಕ್ಷೆಗಳನ್ನು ಕೊಡದಿದ್ದರೂ ಇಂಗ್ಲೀಷ್, ಕನ್ನಡ, ತೆಲುಗು, ಸಂಸ್ಕೃತ, ಪ್ರಾಕೃತ ತಮಿಳು, ಸಂಗೀತ ಇವುಗಳೆಲ್ಲದ ರಲ್ಲೂ ವಿಶಾರದರಾಗಿದ್ದ ಶ್ರೀ ರಾಳ್ಳಪಳ್ಳಿ ಅನಂತಕೃಷ್ಣಶರ್ಮರು ಒಬ್ಬರೇ ಒಂದು ವಿದ್ವತ್ ಸಂಸ್ಥೆಗೆ ಸಮನಾಗಿದ್ದರು. ಪಾಂಡಿತ್ಯ ರಸಿಕತೆಗಳು ಅವರಲ್ಲಿ ಪರಿಮಳಿಸು ತ್ತಿದ್ದುವು. ಚರಿತ್ರೆಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದು ಅಖಿಲ ಭಾರತ ಖ್ಯಾತಿ ಯನ್ನು ಪಡೆದಿದ್ದ ಡಾ. ಎಂ. ಎಚ್. ಕೃಷ್ಣ ಅವರೂ, ಮುಂದೆ ಅವರಿಗಿಂತಲೂ ಹೆಚ್ಚು ಪ್ರಸಿದ್ಧರಾದ ಡಾ. ಎಸ್. ಶ್ರೀಕಂಠಶಾಸ್ತ್ರಿಗಳೂ ನಮಗೆ ಕರ್ನಾಟಕ ಚರಿತ್ರೆ ಸಂಸ್ಕೃತಿಗಳನ್ನು ಬೋಧಿಸಿದರು. ನಮ್ಮ ಸಂಸ್ಕೃತ ವಿಭಾಗದಲ್ಲಿ ನಮಗೆ ಪಾಠ ಹೇಳಿದವರು ಪ್ರೊ. ಡಿ. ಶ್ರೀನಿವಾಸಾಚಾರ್ಯರು. ಪ್ರೊಫೆಸರ್ ಸಿ ಆರ್. ನರಸಿಂಹ ಶಾಸ್ತ್ರಿಗಳು ಮತ್ತು ಪ್ರೊಫೆಸರ್ ಲಕ್ಷ್ಮೀನರಸಿಂಹಯ್ಯನವರು. ನಮ್ಮ ಗುರುಗಳೊಬ್ಬರು "ಅನಂತಕೃಷ್ಣಶರ್ಮ is deep, ನರಸಿಂಹಶಾಸ್ತ್ರಿ is brilliant" ಎಂದು ಹೇಳುತ್ತಿದ್ದ ಮಾತು ಇಲ್ಲಿ ನೆನಪಿಗೆ ಬರುತ್ತದೆ. ಇದಲ್ಲದೆ ವರುಷದ ಕೊನೆ ಯಲ್ಲಿ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಬೆಂಗಳೂರಿನಿಂದ ಬಂದು ಒಂದು ವಾರ ಕಾಲ ಅಖಂಡವಾಗಿ ದಿನದಿನವೂ ಆರೆಂಟು ಗಂಟೆಗಳಂತೆ ಕನ್ನಡ ಛಂದಸ್ಸು ಭಾಷಾಚರಿತ್ರೆ, ಸಾಹಿತ್ಯ ಚರಿತ್ರೆ, ಪಾಶ್ಚಾತ್ಯ ಕಾವ್ಯ ಮೀಮಾಂಸೆ, ತೌಲನಿಕ ವಿಮರ್ಶೆ, ಹಳಗನ್ನಡ ಗ್ರಂಥವಾಚನ ಕ್ರಮ—ಇವೇ ಮೊದಲಾದ ವಿಷಯಗಳ ಮೇಲೆ ಅಮೋಘವಾದ ಉಪನ್ಯಾಸವನ್ನು ಮಾಡುತ್ತಿದ್ದರು. ಇದೇ ಸಮಯದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ವತಿಯಿಂದ ಎಂಟನೆಯ ಪ್ರಾಚ್ಯ ವಿದ್ಯಾ ಸಮ್ಮೇಳನವನ್ನು (Oriental Conference) ಡಾ. ಎಂ. ಎಚ್. ಕೃಷ್ಣ ಅವರು ಏರ್ಪಡಿಸಿದುದರಿಂದ ಡಾ. ಎಸ್. ಕೆ. ಡೇ, ಡಾ. ಸುಕ್ತಂಕರ್ ಮುಂತಾದ ವಿದ್ವಾಂಸರನ್ನು ನೋಡಿ. ಅವರ ಭಾಷಣಗಳನ್ನು ಕೇಳಲು ಸಾಧ್ಯವಾಯಿತು. ನಾವು ಅಭ್ಯಾಸ ಮಾಡುತ್ತಿದ್ದ ವಿಷಯಗಳಲ್ಲದೆ ದರ್ಶನಶಾಸ್ತ್ರಕ್ಕೆ ಎ. ಆರ್. ವಾಡಿಯ ಅವರೂ, ಅರ್ಥ ಶಾಸ್ತ್ರಕ್ಕೆ ವಿ. ಎಲ್. ಡಿಸೌಜ ಅವರೂ, ಮನಃಶಾಸ್ತ್ರಕ್ಕೆ ಡಾ. ಎಂ. ವಿ. ಗೋಪಾಲಸ್ವಾಮಿ ಅವರೂ, ಶಿಕ್ಷಣಶಾಸ್ತ್ರಕ್ಕೆ ಡಾ. ಎಂ. ಸಿದ್ಧಲಿಂಗಯ್ಯನವರೂ ಪ್ರಸಿದ್ಧರಾಗಿದ್ದರು. ಈ ಎಲ್ಲ ಅಂಶಗಳನ್ನೂ ಇಲ್ಲಿ ನಿರೂಪಿಸಲು ಕಾರಣ ಇಷ್ಟೆ— ನಾವು ನಮ್ಮ ವಿದ್ಯಾರ್ಥಿದೆಸೆಯಲ್ಲಿ ರತ್ನದಂತಹ ಎಂಥ ಗುರುಗಳ ಬಳಿ ಪಾಠ ಕಲಿಯುವ ಅವಕಾಶವಿತ್ತು ಎಂಬುದನ್ನು ತಿಳಿಸುವುದಕ್ಕಾಗಿ. ಪ್ರೊ. ವೆಂಕಟಸುಬ್ಬಯ್ಯ ನವರು ಈ ಎಲ್ಲ ಪ್ರಭಾವಗಳಿಗೂ ಒಳಗಾಗಿ ತಮ್ಮ ಚೈತನ್ಯವನ್ನು ತುಂಬಿಕೊಂಡರು.

Sri Vidyabharathi Book Centre, Sringeri

CC-O. In Public Domain. Digitized by eGangotri

1933 ರ ಜುಲೈ ತಿಂಗಳ ಎರಡನೆಯ ವಾರದಲ್ಲಿ ಪ್ರೊ. ವೆಂಕಣ್ಣಯ್ಯನವರ ತರಗತಿಯಲ್ಲಿ ಮೊದಲ ಬಾರಿಗೆ ನಾನು ನನ್ನ ಮಿತ್ರರನ್ನು ನೋಡಿದುದು. "ನಿಮಗೆ ಅಂಕಗಳು ಸ್ವಲ್ಪ ಕಡಿಮೆ ಬಂದಿದ್ದರೂ ಪಂಡಿತರಾದ ನಿಮ್ಮ ತಂದೆಯವರ ಬಳಿ ಚೆನ್ನಾಗಿ ವ್ಯಾಸಂಗ ಮಾಡುವ ಭರವಸೆಯ ಮೇಲೆ ನಿಮಗೆ ಸೀಟು ಕೊಟ್ಟಿದೆ" ಎಂದು ಇವರಿಗೆ ಪ್ರಾಧ್ಯಾಪಕರು ಹೇಳಿದುದುಂಟು. ಇದರಿಂದ ನನಗೆ ಹೆಚ್ಚು ಅಂಕಗಳು ಬಂದಿದ್ದವೆಂದು ಭಾವನೆಯಲ್ಲ. ಈಗಿನಂತೆ ವಿದ್ಯಾರ್ಥಿಗಳಿಗೆ ಮಾರ್ಕ್ಸ್ ಕಾರ್ಡ್‌ಗಳನ್ನು ಕೊಡುತ್ತಿರಲಿಲ್ಲವಾದ್ದರಿಂದ ನಮಗೆ ಬಂದಿದ್ದ ಅಂಕಗಳು ಪ್ರಾಧ್ಯಾಪಕರಿಗೆ ಮಾತ್ರ ಗೊತ್ತಾಗುತ್ತಿದ್ದವು. ಅಂತೂ ನಾವು ಒಂದು ತರಗತಿಯಲ್ಲಿ ಸೇರಿದೆವು. ತರಗತಿಗೆ ಪ್ರವೇಶಿಸಿದಾಗ ನನ್ನ ಕಣ್ಣಿಗೆ ಬಿದ್ದ ಮೂರ್ತಿ ಚಿತ್ರ ಇದು: ಶುಭ್ರವಾದ ಬಟ್ಟೆಯುಟ್ಟಿದ್ದ, ದಟ್ಟಿ ಬಿಗಿದಿದ್ದ ಮಾಸಲು ಕೆಂಪು ಬಣ್ಣದ ಈ ಹುಡುಗ ಗತ್ತಿನಿಂದ ತರಗತಿಯನ್ನು ಪ್ರವೇಶಿಸಿದ್ದ. ತಲೆ ತುಂಬ ಜುಟ್ಟು. ಧರಿಸಿದ್ದದ್ದು ಬಿಳಿಯ ಖಾದಿ ಟೋಪಿ. ಎತ್ತರ ಕಡಿಮೆ. ಅಷ್ಟೇನೂ ದಷ್ಟ ಪುಷ್ಟವಲ್ಲದ ಶರೀರವಾದರೂ ತುಂಬಿದ ಮುಖ, ಹೊಳೆಯುವ ದಂತಪಂಕ್ತಿ, ಚುರುಕಾದ ಕಣ್ಣುಗಳು—ಇವು ಯಾರನ್ನಾದರೂ ಆಕರ್ಷಿಸುತ್ತಿದ್ದವು. ನಮಸ್ಕಾರ ಚಮತ್ಕಾರಗಳಾದಮೇಲೆ, ಪರಸ್ಪರ ಪರಿಚಯ ಮಾಡಿಕೊಂಡು ತರಗತಿಯಲ್ಲಿ ಸ್ಥಾಪಿತರಾದೆವು.

42 ವರ್ಷಗಳ ಹಿಂದಿನ ಹುಳಿಮುರಿದುಕೊಂಡು ತಕ್ಕಮಟ್ಟಿಗೆ ಮಾಗಿದನುಭವದಿಂದ ಈ ಮಾತುಗಳನ್ನು ಬರೆಯುತ್ತಿದ್ದೇನೆ. ವಿದ್ಯಾರ್ಥಿದೆಸೆಯಲ್ಲಿ ನಮ್ಮಲ್ಲಿ ಬಡತನ— ಈಗ ನಾವು ಶ್ರೀಮಂತರೆಂದು ಅರ್ಥವಲ್ಲ—ಮನೆಮಾಡಿತ್ತು : ನಿಜ. ಊಟಕ್ಕಾಗಿ, ತಿಂಡಿಗಾಗಿ, ಪರದಾಡುತ್ತಿದ್ದೆವು : ಸತ್ಯವಾದ ಮಾತು. ಎಷ್ಟೋ ವೇಳೆ ಪಠ್ಯಪುಸ್ತಕಗಳಿಲ್ಲದೆ ಪಾಠಗಳನ್ನು ಸರಿಯಾಗಿ ನೋಡಿಕೊಂಡು ಬರಲಾರದೆ ಉಪಾಧ್ಯಾಯರಿಂದ, ಪ್ರಾಧ್ಯಾಪಕರಿಂದ ಗದರಿಸಿಕೊಂಡಿದ್ದಾಯಿತು ; ಇಲ್ಲವೆಂದವರಾರು ? ಒಮ್ಮೆ ಶ್ರೀ ಡಿ. ಎಲ್. ನರಸಿಂಹಾಚಾರ್ಯರ ತರಗತಿಯಲ್ಲಿ ಮೂವರ ಬಳಿಯಲ್ಲಿಯೂ ಪುಸ್ತಕವಿಲ್ಲದೆ ಕುಳಿತಾಗ ಅವರು "ಇದೇನು ಹರಿಕಥೆ ಎಂದು ಭಾವಿಸಿದ್ದೀರಾ?" ಎಂದು ಕೋಪಗೊಂಡರೂ ನಮ್ಮ ಬಡತನದ ನೆನಪು ಬಂದು ನಸುನಕ್ಕುದುಂಟು. ಆಗಿನ ನಮ್ಮ ಕಷ್ಟಕಾರ್ಪಣ್ಯಗಳು ಏನೇ ಇರಲಿ, ಅಂತಹ ಸುಂದರವಾದ ಸುಖದ ದಿನಗಳು ನಮ್ಮ ಜೀವನದಲ್ಲಿ ಮತ್ತೆ ಬಾರವು. ಅವುಗಳ ನೆನಪೇ ಒಂದು ಸುಖ, ಸಂತೋಷ. ತರಗತಿಯಲ್ಲಿ ನಮ್ಮ ಮಿತ್ರರು ನಮ್ಮಿಬ್ಬರಿಗಿಂತ ಸ್ವಲ್ಪ ಮುಂದಿದ್ದರು. ಕನ್ನಡ ಆನರ್ಸ್ ತರಗತಿಗಳಿಗೆ ಸಂಸ್ಕೃತವನ್ನು ನಾವು ಕಡ್ಡಾಯವಾಗಿ ಅಭ್ಯಾಸ ಮಾಡಬೇಕಾಗಿತ್ತು. ವೆಂಕಟಸುಬ್ಬಯ್ಯನವರಾದರೋ ಇಂಟರ್‌ಮೀಡಿಯಟ್‌ನಲ್ಲಿಯೇ ಸಂಸ್ಕೃತವನ್ನು ದ್ವಿತೀಯ ಭಾಷೆಯನ್ನಾಗಿ ತೆಗೆದುಕೊಂಡಿದ್ದ ಕಾರಣ ನಾವು ಕಷ್ಟಪಟ್ಟು ಓದಬೇಕಾಗಿದ್ದ ಪಠ್ಯದ ವಿಷಯದಲ್ಲಿ ಸ್ವಲ್ಪ ವಿಮುಖತೆ ಇತ್ತೆಂದು ಕಾಣುತ್ತದೆ. "ದ್ವಿತೀಯ ಭಾಷೆಯನ್ನಾಗಿ ಸಂಸ್ಕೃತವನ್ನು ಓದುವ ನನಗೆ ಇದೇನು ಮಹಾ?

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ಸಮಯವನ್ನು ನಾನು ಬೇರೆ ವಿಷಯಗಳನ್ನು ಓದಲು ವಿನಿಯೋಗಿಸ ಬಹುದು" ಎಂಬುದು ಇವರ ಭಾವನೆಯಾಗಿದ್ದಿರಬೇಕು. ನಮಗೆ ಇಂಗ್ಲೀಷ್ ಪ್ರಶ್ನೆ ಪತ್ರಿಕೆ ಒಂದು ಕುತ್ತಾಗಿತ್ತು. ಆದರಲ್ಲಿ ಜಯ ಹೊಂದಲು ಜಪ ಮಾಡುತ್ತಿದ್ದೆವು. ಈ ವಿಷಯದಲ್ಲಿ ಒಬ್ಬ ಪ್ರಿನ್ಸಿಪಾಲರ ಅಚಾತುರ್ಯದಿಂದ ಇಂಗ್ಲೀಷ್ ಪರೀಕ್ಷೆ ಎರಡು ದಿನ ಮುಂದಕ್ಕೆ ಹೋಗಿ ನನಗೆ ಆದರಲ್ಲಿ ಜಯ ದೊರಕಿತು, ಎಂದು ನನ್ನ ದೃಢವಾದ ನಂಬಿಕೆ. ನನ್ನ ಮಿತ್ರರಾದ ವೆಂಕಟಸುಬ್ಬಯ್ಯನವರಿಗಾದರೋ ಇಂಗ್ಲೀಷ್ ನೀರು ಕುಡಿದಂತೆ. ಇಂಗ್ಲೀಷ್ ಮತ್ತು ಕನ್ನಡ ಚರ್ಚಾಸ್ಪರ್ಧೆಗಳಲ್ಲಿ ಇವರು ಭಾಗವಹಿಸುತ್ತಿದ್ದರು. ಅಲ್ಲದೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿಯೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೂ ಆಗಾಗ ನಡೆಯುತ್ತಿದ್ದ ಇಂಗ್ಲೀಷ್ ಮತ್ತು ಕನ್ನಡ ಅಂತರಕಾಲೇಜು ಚರ್ಚಾಸ್ಪರ್ಧೆಗಳಲ್ಲಿಯೂ ಇವರು ನಮ್ಮ ಕಾಲೇಜನ್ನು ಪ್ರತಿನಿಧಿಸು ತ್ತಿದ್ದರು.

ನಮ್ಮ ವಿದ್ಯಾರ್ಥಿದೆಸೆಯಲ್ಲಿ ಮೈಸೂರು ಬೆಂಗಳೂರು ನಗರಗಳಲ್ಲಿ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಸಂಘಗಳಿರುತ್ತಿದ್ದುವು. ಇವುಗಳ ಮುಖ್ಯ ಕೆಲಸ ಪ್ರಾಂತ್ಯದ ಹೊರಗಡೆಯಿಂದ ಸುಪ್ರಸಿದ್ಧ ವಿದ್ವಾಂಸರನ್ನು ಆಹ್ವಾನಿಸಿ ಅವರಿಂದ ಉಪನ್ಯಾಸಗಳನ್ನು ಏರ್ಪಡಿಸುವುದು, ವಿದ್ಯಾರ್ಥಿಗಳಲ್ಲಿ ಮಾತುಗಾರಿಕೆಯನ್ನು ಬೆಳೆಸಲು ಚರ್ಚಾಕೂಟವನ್ನು ಏರ್ಪಡಿಸುವುದು, ಹಳೆಯ ಹೊಸ ನಾಟಕಗಳನ್ನು ಏರ್ಪಡಿಸು ವುದು. ಆಶುಭಾಷಣ ಸ್ಪರ್ಧೆಯನ್ನು ನಡೆಸುವುದು. ಈ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಆಗ ತುಂಬ ಬೆಲೆಯುಳ್ಳ ಬಹುಮಾನಗಳನ್ನು ಕೊಡುತ್ತಿದ್ದರು. ಹಣಕ್ಕೆ ತುಂಬ ಬೆಲೆ ಇದ್ದ ಕಾಲ ಅದು. ನಮ್ಮ ವಿದ್ಯಾರ್ಥಿದೆಸೆಯ ಕೊನೆಯ ಎರಡು ವರ್ಷಗಳಲ್ಲಿ ಶ್ರೀ ವೆಂಕಟಸುಬ್ಬಯ್ಯನವರು ಎಸ್. ವಿ. ಪರಮೇಶ್ವರಭಟ್ಟರೊಂದಿಗೆ ಅನೇಕ ಬಹುಮಾನಗಳನ್ನು ಸೂರೆಗೊಂಡರೆಂದು ನನಗೆ ಚೆನ್ನಾಗಿ ನೆನಪಿದೆ. ಈ ಸಂಸ್ಥೆಯ ಮೂಲಕವೇ ನಾವೆಲ್ಲರೂ. ಸರೋಜಿನಿ ನಾಯ್ಡು. ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿ. ಸತ್ಯಮೂರ್ತಿ. ಟಿ. ಆರ್. ವೆಂಕಟರಾಮಾಶಾಸ್ತ್ರಿ. ಹುಮಾಯೂನ್ ಕಬೀರ್ ಮುಂತಾದ ಅನೇಕ ಪ್ರಖ್ಯಾತ ವ್ಯಕ್ತಿಗಳನ್ನು ನೋಡುವ, ಅವರ ಭಾಷಣಗಳನ್ನು ಕೇಳುವ ಅವಕಾಶಗಳನ್ನು ಪಡೆದೆವು. ಲೀಲಾ ದೇಸಾಯಿ ಎಂಬ ಅಂದಿನ ಪ್ರಖ್ಯಾತ ಸಿನಿಮಾ ನಟಿಯನ್ನು ಈ ಸಂಸ್ಥೆಗೆ ಕರೆದ ಸಮಯದಲ್ಲಿ ದೊಡ್ಡ ಗೊಂದಲವಾಗಿ ಯೂನಿಯನ್ ಹೋಟೆಲ್‌ನ ಚಪ್ಪರ ಉರುಳಿಬಿದ್ದಿತ್ತು ಎಂಬ ನೆನಪಿದೆ. ಆ ಕಾಲದಲ್ಲಿ ಕಾಲೇಜಿನಲ್ಲಿ ಸಿ. ಬಿ. ಜಯರಾವ್, ಎ. ಸಿ. ನರಸಿಂಹ ಮೂರ್ತಿ, ಬಿ. ಕೃಷ್ಣಮೂರ್ತಿ (ತುಪ್ಪ), ನಟೇಶ ಮೊದಲಿಯಾರ್, ವಿ. ಕೆ. ಶ್ರೀನಿವಾಸನ್ ಮುಂತಾದವರನ್ನೊಳಗೊಂಡ ಪ್ರಸಿದ್ಧ ನಟವೃಂದವಿತ್ತು. ಎನ್. ಎಸ್. ನಾರಾಯಣ ಶಾಸ್ತ್ರಿಗಳೂ, ಎನ್. ಕಸ್ತೂರಿಯವರೂ ಇದರ ನಾಯಕರಾಗಿದ್ದರು. ಇವರ ನೇತೃತ್ವದಲ್ಲಿಯೇ ನಾವು "ಅಶ್ವತ್ಥಾಮನ್", "ಪಾರಸೀಕರು", "ರಕ್ತಾಕ್ಷಿ",

Sri Vidyabharathi Book Centre, Sringeri

CC-O. In Public Domain. Digitized by eGangotri

"ಆಷಾಢಭೂತಿ," ಕೈಲಾಸಂ ಅವರ ಅನೇಕ ನಾಟಕಗಳು—ಇವುಗಳನ್ನೆಲ್ಲಾ ನೋಡಲು ಸಾಧ್ಯವಾಯಿತು. ಇಂತಹ ನಾಟಕಗಳಲ್ಲಿ ನನ್ನ ಮಿತ್ರರೂ ಪಾತ್ರವಹಿಸುತ್ತಿದ್ದರು.

ಶ್ರೀ ಜಿ. ವೆಂಕಟಸುಬ್ಬಯ್ಯನವರ ವಿದ್ಯಾರ್ಥಿದೆಸೆಯ ಒಂದೆರಡು ವಿಶೇಷ ಚಟುವಟಿಕೆಗಳನ್ನು ನಾನು ಇಲ್ಲಿ ನಿರೂಪಿಸಬೇಕು. ಇವುಗಳಲ್ಲಿ ಒಂದು ಪಿಂಗ್ ಪಾಂಗ್ ಮತ್ತು ಕೇರಂ ಆಟ. ಇದರಲ್ಲಿ ಇವರ ಆಸಕ್ತಿ ಎಷ್ಟರಮಟ್ಟಿನದಾಗಿತ್ತೆಂದರೆ ಅನೇಕ ವೇಳೆ ಇವರು ತರಗತಿಗಳಿಗೆ ತಪ್ಪಿಸಿಕೊಂಡು ಆಟದಲ್ಲಿ ಭಾಗವಹಿಸುತ್ತಿದ್ದರು. ಇವರ ಈ ಪ್ರವೃತ್ತಿ ಒಂದೊಂದು ವೇಳೆ ನನಗೆ ಆಶ್ಚರ್ಯವನ್ನೂ ಪರೀಕ್ಷೆಯಲ್ಲಿ ಏನಾಗುವುದೋ ಎಂಬ ಶಂಕೆಯನ್ನೂ ಉಂಟುಮಾಡುತ್ತಿತ್ತು. ಆದರೆ ತಮ್ಮ ಶಕ್ತಿಯ ವಿಷಯದಲ್ಲಿ ಇವರಿಗೆ ನಂಬಿಕೆ ಇತ್ತು. ಇನ್‌ಡೋರ್ ಆಟಗಳಲ್ಲಿ ಇವರು ಅನೇಕ ಬಹುಮಾನಗಳನ್ನು ಗಳಿಸಿದುದಲ್ಲದೆ, ಮೂರು ವರ್ಷ ಕಾಲ ಅದರ ಛಾಂಪಿಯನ್ನರೂ ಆಗಿದ್ದು ಕನ್ನಡಕ್ಕೆ ಕೋಡನ್ನು ತಂದರು. ಇದರಿಂದ ಇವರ ಪರೀಕ್ಷೆಗೆ ವ್ಯಾಸಂಗಕ್ಕೆ ಯಾವ ಅಡ್ಡಿಯೂ ಉಂಟಾಗಲಿಲ್ಲ. ತಮ್ಮ ವಿದ್ಯಾರ್ಥಿ ದೆಸೆಯ ಕೊನೆಯಲ್ಲಿ ಇವರು ಟೆನಿಸ್ ಆಡುತ್ತಿದ್ದರು.

ವಿದ್ಯಾರ್ಥಿದೆಸೆಯೆಂದರೆ ಅದರ ಗುರಿ ಜ್ಞಾನಾರ್ಜನೆಯೊಂದೇ ಅಲ್ಲ. ನಮ್ಮ ಸುತ್ತಮುತ್ತಲ ಸನ್ನಿವೇಶವನ್ನು ಗಮನಿಸಿ ಅದಕ್ಕೆ ಹೊಂದಿಕೊಂಡು, ಅದರೊಡನೆ ಒಂದಾಗಿ ಬೆರೆಯುವುದು. ಈ ನಲವತ್ತು ವರ್ಷಗಳಲ್ಲಿ ಸಮಾಜ ತುಂಬ ಪರಿವರ್ತನೆ ಯಾಗಿದೆ. ಈ ಪರಿವರ್ತನೆಯ ಗುರುತಾಗಿ ನನ್ನಲ್ಲಿ, ನನ್ನ ಸ್ನೇಹಿತರಲ್ಲಿ ಉಪಾಧ್ಯಾಯರಲ್ಲಿ ಆದ ಒಂದೆರಡು ಬದಲಾವಣೆಗಳನ್ನು ಇಲ್ಲಿ ಹೇಳಬಯಸು ತ್ತೇನೆ. ಆಗ ನಮ್ಮ ತಲೆಯ ಮೇಲೆ ಜುಟ್ಟಿರುತ್ತಿತ್ತು. ಅದನ್ನು ಟೋಪಿಯ ಒಳಗಡೆ ಹುದುಗಿಸಿಕೊಳ್ಳುತ್ತಿದ್ದೆವು. ಉಪಾಧ್ಯಾಯರು ರುಮಾಲಿನ ಒಳಗಡೆ. ಹುಡುಗರು ಕ್ರಾಪ್ ಬಿಟ್ಟರೆ ಏನೋ ಪ್ರಳಯವಾದಂತೆ ಹಿರಿಯರ ಭಾವನೆ. ಕ್ರಮೇಣ ಶ್ರೀ ವೆಂಕಟಸುಬ್ಬಯ್ಯನವರ ತಲೆಯ ಜುಟ್ಟು ಮಾಯವಾಗಿ ಕ್ರಾಪು ಬಂತು. ವೈದಿಕನಾದ ನನ್ನ ತಲೆಯ ಮೇಲೂ ಸಹ. ಇವರ ಲೇವಡಿಯಿಂದ, ಚುಚ್ಚುಮಾತಿನಿಂದ ಪ್ರೊಫೆಸರ್ ತೀ. ನಂ. ಶ್ರೀ ಅವರು ಪರಿವರ್ತಿತರಾಗಿ ಕ್ರಾಪು ಬಿಟ್ಟರು. ಅಂದಿನ ಇವರ ಎದೆಗಾರಿಕೆಯನ್ನು ನಾನು ಮೆಚ್ಚಿದ್ದೇನೆ; ಹಾಗೆಯೇ ಉಪಾಧ್ಯಾಯರೊಡನೆ ನಡೆದುಕೊಂಡ ಸಲಿಗೆಗಾಗಿ ನಡುಗಿದ್ದೇನೆ. ಇವರ ಬಟ್ಟೆಯೂ ಕ್ರಮೇಣ ಪರಿವರ್ತಿತವಾಗಿ ಸೊಗಸಾದ ಸೂಟನ್ನು ಧರಿಸುವುದರಲ್ಲಿ ಪರ್ಯವಸಾನಗೊಂಡಿದೆ. ಅಂದು ಉಡುಪಿನಲ್ಲಿ ಸಾಧಿಸಿದ ಠೀವಿಯನ್ನು ಶ್ರೀಯುತರು ಇಂದಿನವರೆಗೂ ಬಿಟ್ಟಿಲ್ಲ. ಕನ್ನಡ ಪ್ರಾಧ್ಯಾಪಕರಾದ ಇವರ ಉಡುಪಿನ ಠೀವಿ ಇತರರನ್ನು ಕರುಬುವಂತೆ ಮಾಡಿದ್ದರೆ ಏನೂ ಆಶ್ಚರ್ಯವಿಲ್ಲ.

ಆಟದಲ್ಲಿ, ಪಠ್ಯೇತರ ಚಟುವಟಿಕೆಗಳಲ್ಲಿ ಶ್ರೀಯುತರ ಆಸಕ್ತಿ ಸೀಮಿತವಾಗದೆ, ವ್ಯಾಸಂಗದಲ್ಲಿಯೂ ಇವರು ಅಪೂರ್ವ ಯಶಸ್ಸನ್ನು ಗಳಿಸಿದ್ದಾರೆ. ಎರಡನೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವರುಷದ ಆನರ್ಸ್ ತರಗತಿಯಲ್ಲಿದ್ದಾಗ ಸಬ್ಜೆಕ್ಟ್ ಸ್ಕಾಲರ್‌ಷಿಪ್ಪನ್ನು ಪಡೆದಿದ್ದರು. ವಿಶ್ವವಿದ್ಯಾನಿಲಯದವರು ನಡೆಸಿದ ಹೊನ್ನಸೆಟ್ಟಿ ಬಹುಮಾನ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದರು. ಎಂ.ಎ. ತರಗತಿಯಲ್ಲಿ ಮೊದಲ ಸ್ಥಾನವನ್ನು ಪಡೆದ ಕಾರಣ ಇವರಿಗೆ ಕೇಣಿ ಸಿದ್ದಪ್ಪನವರ ಸ್ವರ್ಣಪದಕ ಲಭಿಸಿತು.

ಆನರ್ಸ್ ಮತ್ತು ಎಂ.ಎ. ತರಗತಿಯ ನಾಲ್ಕು ವರುಷಗಳು ಸುಖವಾಗಿ ಕಳೆದುಹೋದವು. ಒಳ್ಳೆಯ ಆವರಣ, ಆದರ್ಶಪ್ರಾಯರಾದ ಗುರುಗಳು, ಆಪ್ತ ಮಿತ್ರರ ಸಹವಾಸ. ಹೀಗಿರುವಲ್ಲಿ ಕಾಲ ಕಳೆದುಹೋದದ್ದು ಅರಿವಾಗದಿದ್ದರೂ, ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಲೇ ಹೊರಗಿನ ನಿರುದ್ಯೋಗಪ್ರಪಂಚ ಭೂತಾಕಾರವಾಗಿ ನಿಂತಿತ್ತು. ಈ ವೇಳೆಗೆ ನಮ್ಮಿಬ್ಬರಿಗೂ ಮದುವೆಯಾಗಿತ್ತು. ನಮ್ಮ ಮಿತ್ರರು ಉದ್ಯೋಗದ ಸಮಸ್ಯೆಯನ್ನು ಇನ್ನೊಂದು ವರ್ಷ ಮುಂದಕ್ಕೆ ತಳ್ಳಲೋ ಎಂಬಂತೆ — ಅದು ನನ್ನ ಭಾವನೆ — ಬಿ.ಟಿ. ತರಗತಿಯನ್ನು ಸೇರಿದರು. ಆಗ ಬಿ.ಟಿ. ತರಗತಿ ಮಹಾರಾಜರವರ ಕಾಲೇಜಿನ ಒಂದು ಇಲಾಖೆಯಾಗಿತ್ತು. 45 ರಿಂದ 50 ರವರೆಗೆ ವಿದ್ಯಾರ್ಥಿಗಳ ಸಂಖ್ಯೆಗೆ ಸೀಮಿತವಾಗಿದ್ದ ಆ ತರಗತಿಗೆ ಈಗಿನಂತೆ ಸಾವಿರಾರು ರೂಪಾಯಿಗಳನ್ನು ಸುರಿದು ಸೇರಬೇಕಾಗಿರಲಿಲ್ಲ. ಸುಲಭವಾಗಿ ಪ್ರವೇಶ ದೊರಕುತ್ತಿತ್ತು. ಫೀಜು ಕಡಿಮೆ. ಅಲ್ಲದೆ ಅರ್ಧ ಇಲ್ಲವೆ ಪೂರ್ತಿ ರಿಯಾಯಿತಿಯನ್ನು ಪಡೆಯುವುದು ಕಷ್ಟವಾಗಿರಲಿಲ್ಲ. ಇದರಿಂದಾಗಿ ನನ್ನ ಮಿತ್ರರು 1938 ರಲ್ಲಿ ಬಿ.ಟಿ. ಪದವಿಯನ್ನೂ ಸಂಪಾದಿಸಿಬಿಟ್ಟರು. ಈ ಸಮಯದಲ್ಲೇ ಇವರು ಡಾ. ಎಂ. ವಿ. ಗೋಪಾಲಸ್ವಾಮಿಯವರ ಪ್ರಿಯಶಿಷ್ಯರಾಗಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಕ್ಕಳ ಮನೋವಿಜ್ಞಾನವನ್ನು (child psychology) ಆಳವಾಗಿ ವ್ಯಾಸಂಗಮಾಡಿದರು. ಕೆಲವು ದಿನ ಶಿಶುವಿಹಾರದಲ್ಲಿ ಅಧ್ಯಾಪಕರಾಗಿ ಕೆಲಸಮಾಡಿದರು. ಬಿ.ಟಿ. ಪದವಿಗೆ ಓದುತ್ತಿದ್ದಾಗ ಆ ತರಗತಿಯ ಎಜ್ಯುಕೇಷನ್ ಅಸೋಸಿಯೇಷನ್ನಿನ ಪ್ರಧಾನ ವಿದ್ಯಾರ್ಥಿ ಪ್ರತಿನಿಧಿಯಾಗಿ, ಅದರ ಉಪಾಧ್ಯಕ್ಷರಾಗಿದ್ದರು.

ಆ ಕಾಲದ ಒಂದೆರಡು ವೈಶಿಷ್ಟ್ಯಗಳನ್ನು ಇಲ್ಲಿ ನೆನೆಯುವುದು ಅಪ್ರಕೃತವಾಗಲಾರದು. ಆಗಿನ ಮಹಾರಾಜರವರ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಮಿತವಾಗಿದ್ದು, ಉಪಾಧ್ಯಾಯರು ಅಧ್ಯಯನ ಅಧ್ಯಾಪನದಲ್ಲಿ ನಿರತರಾಗಿದ್ದರು. ಅವರ ವೇಷಭೂಷಣಗಳಿಂದ ನಡತೆಯಿಂದ ಅವರು ಸರ್ವಜ್ಞರೆಂಬ ಭಾವನೆ ನಮ್ಮಲ್ಲಿ ಮೂಡುತ್ತಿತ್ತು. ಉಪಾಧ್ಯಾಯರಂತೂ ಒಂದು ಗಂಟೆಗೆ ಅರವತ್ತು ನಿಮಿಷಗಳೂ ಪೂರ್ಣವಾಗಿ ಪಾಠಹೇಳುತ್ತಿದ್ದರು. ಪರೀಕ್ಷೆಗೆ ಗೊತ್ತಾದ ಪಾಠಗಳು ಮುಗಿಯದಿದ್ದಾಗ ನಮ್ಮಿಬ್ಬರು ಮೂವರನ್ನೂ, ಜೊತೆಗೆ ಶ್ರೀ ಪರಮೇಶ್ವರ ಭಟ್ಟರನ್ನೂ ಮನೆಗೆ ಕರೆಸಿಕೊಂಡು ಕಾಫಿತಿಂಡಿಗಳನ್ನು ಕೊಟ್ಟು ಪಾಠ ಮುಗಿಸುತ್ತಿದ್ದರು. ಸ್ಥೂಲದೇಹಿಗಳಾದ ಗುರುವರ್ಯ ಶ್ರೀ ಡಿ. ಎಲ್.

Sri Vidyabharathi Book Centre, Sringeri

CC-O. In Public Domain. Digitized by eGangotri

ನರಸಿಂಹಾಚಾರ್ಯರನ್ನು ನನ್ನ ಸ್ನೇಹಿತರೂ ಇತರರೂ ಸೈಕಲ್ಲಿನ ಮೇಲೆ ಎತ್ತಿ ಕೂರಿಸಿ ಸವಾರಿ ಕಲಿಸಿದುದನ್ನು ನೆನೆದರೆ, ಈಗ ನಗು ಬರುತ್ತದೆ. ಇಂಥ ಎಷ್ಟು ರಸನಿಮಿಷಗಳೋ ! ಈ ಮೂರು ವರ್ಷಗಳ ಕಾಲ ನಾನೂ ಭಟ್ಟರೂ ವೆಂಕಟ ಸುಬ್ಬಯ್ಯನವರೂ ಎಲ್ಲಿಗೇ ಹೋಗಲಿ ಒಟ್ಟಾಗಿರುತ್ತಿದ್ದೆವು. ಎಂ.ಎ. ತರಗತಿ ಯಲ್ಲಿದ್ದಾಗ ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವ ಬಂದು, ಶ್ರೀ ದ. ರಾ. ಬೇಂದ್ರೆಯವರು ತಮ್ಮ ಕಾವ್ಯವಾಚನದಿಂದ ನಮ್ಮನ್ನು ಮರುಳುಗೊಳಿಸಿ ದಾಗ, ಶ್ರೀ ವೆಂಕಟಸುಬ್ಬಯ್ಯನವರ ಮನೆಯಲ್ಲಿ ಮಾಡಿದ ಸೊಗಸಾದ ಊಟ ಈಗಲೂ ನೆನಪಿಗೆ ಬರುತ್ತದೆ. ಆ ದಿನ ಅವರ ಮನೆಗೆ, ಟಿ. ಎಸ್. ವೆಂಕಣ್ಣಯ್ಯನವರು, ಟಿ. ಎನ್. ಶ್ರೀಕಂಠಯ್ಯನವರು, ಡಿ. ಎಲ್. ನರಸಿಂಹಾಚಾರ್ಯರು, ಎ. ಆನಂದ (ಸೀತಾರಾಮ್) ಮುಂತಾದವರೆಲ್ಲ ಬಂದು ಭೋಜನಕೂಟದಲ್ಲಿ ಭಾಗವಹಿಸಿದ್ದರು. ಭೋಜನದ ತರುವಾಯ ಬೇಂದ್ರೆಯವರು ತಮ್ಮ ಕವನಗಳನ್ನು ವಾಚನಮಾಡಿ ನಮ್ಮನ್ನೆಲ್ಲ ತಣಿಸಿದರು. ಆ ಕೂಟವೊಂದು ಮರೆಯಲಾರದ ಅನುಭವವಾಗಿದೆ. ಇಂಥ ನೆನಪುಗಳ ಭಂಡಾರವಾದ ಕಾಲೇಜನ್ನು ಬಿಟ್ಟಾಗ ನಮ್ಮಿಬ್ಬರಿಗೂ ಮನಸ್ಸಿಗೆ ತುಂಬಾ ನೋವಾಯಿತು.

ಶ್ರೀ ಜಿ. ವೆಂಕಟಸುಬ್ಬಯ್ಯನವರು ಎಂ.ಎ. ಮತ್ತು ಬಿ.ಟಿ. ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ ವಿಶ್ವವಿದ್ಯಾನಿಲಯದಿಂದ ಹೊರಬಿದ್ದಾಗ, ಯುವಕರಿಗೆ—ಅದರಲ್ಲೂ ಕನ್ನಡವನ್ನೇ ಪ್ರಧಾನ ವಿಷಯವನ್ನಾಗಿ ತೆಗೆದುಕೊಂಡವರಿಗೆ—ಕೆಲಸಗಳು ದೊರಕದಿದ್ದ ಕಾಲ, ಅಂದು ಸಾಮಾನ್ಯವಾಗಿಯೇ ಆರ್ಥಿಕ ಮುಗ್ಗಟ್ಟು: ಜೊತೆಗೆ ಸಂಸ್ಥಾನದ ಪ್ರೌಢಶಾಲೆಗಳಿಗೆ ಪಂಡಿತರನ್ನಲ್ಲದೆ, ಎಂ.ಎ. ಪದವಿಗಳನ್ನು ಪಡೆದವ ರನ್ನು ಸೇರಿಸುತ್ತಿರಲಿಲ್ಲ. ಪಂಡಿತರಿಗೂ, ಮೇಲಣ ಅಧಿಕಾರಿಗಳಿಗೂ ನಮ್ಮಗಳ ವಿಷಯದಲ್ಲಿ ತಾತ್ಸಾರಭಾವವಿತ್ತು. ನಮ್ಮಲ್ಲಿ ಪಾಂಡಿತ್ಯವಿಲ್ಲವೆಂದು ಪಂಡಿತರು ಹಾಗೂ ಇತರರು ಮೂಗು ಮುರಿಯುತ್ತಿದ್ದರು. ವಿಶ್ವವಿದ್ಯಾನಿಲಯದಲ್ಲಿಯೋ ಅಧ್ಯಾಪಕ ವೃತ್ತಿಯ ಕೆಲಸಗಳು ಕಡಿಮೆ. ಇಲ್ಲವೆಂದರೂ ತಡೆಯುತ್ತಿತ್ತು. ಹೀಗಿರುವಲ್ಲಿ ಶ್ರೀ ವೆಂಕಟಸುಬ್ಬಯ್ಯನವರ ಅದೃಷ್ಟ ತೆರೆಯಿತೆಂಬಂತೆ—ಆ ಕಾಲದ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ—ಮಂಡ್ಯದ ಪುರಪ್ರೌಢ ಶಾಲೆಯಲ್ಲಿ ಉಪಾಧ್ಯಾಯರ ಕೆಲಸ ದೊರಕಿತು. ಅಲ್ಲಿ ಇವರು ಕನ್ನಡವನ್ನು ಮಾತ್ರವಲ್ಲ—ಇಂಗ್ಲೀಷ್, ಚರಿತ್ರೆ ಮುಂತಾದ ಇತರ ವಿಷಯಗಳನ್ನೂ ಬೋಧಿಸುತ್ತಿದ್ದರು, ತಾವಾಯಿತು, ತಮ್ಮ ಪಾಠವಾಯಿತು ಎಂದು ಸುಮ್ಮನೆ ಕುಳಿತುಕೊಳ್ಳುವ ಚೈತನ್ಯವಲ್ಲ ಶ್ರೀಯುತರದು. ತಮ್ಮ ಪ್ರಭಾವವನ್ನು ಸಾಹಿತ್ಯದ ವಿಷಯದಲ್ಲಿ ವಿದ್ಯಾರ್ಥಿಗಳಮೇಲೆ ಬೀರುತ್ತಿದ್ದರು. ದಿವಂಗತ ಶ್ರೀಮತಿ ತ್ರಿವೇಣಿಯವರು ಇವರ ವಿದ್ಯಾರ್ಥಿಯಾಗಿದ್ದುದೇ ಇದಕ್ಕೆ ನಿದರ್ಶನ. ಅಲ್ಲದೆ ಮಂಡ್ಯದಲ್ಲಿರುವವರೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ಪಟ್ಟಣದ "ಕರ್ಣಾಟಕ ಸಂಘ" ದ ಕಾರ್ಯದರ್ಶಿಯಾಗಿ ದುಡಿದು ಅದನ್ನು ಏಳ್ಗೆಗೆ ತಂದರು.

ಒಂದು ವರ್ಷದಲ್ಲಿಯೇ ಮಂಡ್ಯದ ಅದೃಷ್ಟ ಇವರನ್ನು ಕೈಬಿಟ್ಟಿತು. 1939 ರಲ್ಲಿ ಮಂಡ್ಯದ ಖಾಯಂ ಕೆಲಸವನ್ನು ಬಿಟ್ಟು, ಮೈಸೂರಿನ ಮಹಾರಾಜರವರ ಕಾಲೇಜಿನಲ್ಲಿ ನಲವತ್ತು ರೂಪಾಯಿಗಳ ತಾತ್ಕಾಲಿಕ ಕೆಲಸಕ್ಕೆ ಬಂದರು. ಸಂಬಳದ ಮಾತು ಹಾಗಿರಲಿ, ತಮ್ಮ ಪ್ರತಿಭೆಯ ಪ್ರಕಾಶನಕ್ಕೆ ತಕ್ಕ ಅವಕಾಶ ದೊರಕಿತೆಂದು ಅವರು ಬಗೆದಿರಬೇಕು. ನಿಜ, ಆಗ ಮಹಾರಾಜರವರ ಕಾಲೇಜಿನಲ್ಲಿ ಕನ್ನಡದ ವಿಷಯದಲ್ಲಿ—ಮಿಕ್ಕ ವಿಷಯಗಳಿಗೂ—ಅತಿರಥ ಮಹಾರಥರಿದ್ದರು. (ಈಗ ಇಲ್ಲವೆಂದು ನನ್ನ ಅಭಿಪ್ರಾಯವಲ್ಲ). ಅವರನ್ನು ಮೆಚ್ಚಿಸುವುದು ಸುಲಭಸಾಧ್ಯವಾದ ಮಾತಾಗಿರಲಿಲ್ಲ. ಮುಂದಿನ ಈ ಸಂದರ್ಭವನ್ನು ಶ್ರೀಯುತರೇ ನನ್ನೊಡನೆ ಹೇಳಿದ್ದಾರೆ. ಒಮ್ಮೆ ಇವರು ಪಾಠಮಾಡುತ್ತಿದ್ದಾಗ ಸಮೀಪದಲ್ಲಿಯೇ ಹೋಗುತ್ತಿದ್ದ ಪ್ರೊಫೆಸರ್ ಎ. ಆರ್. ಕೃಷ್ಣಶಾಸ್ತ್ರಿಗಳು ಶ್ರೀಯುತರು ಒಂದು ಪದಕ್ಕೆ ತಪ್ಪು ಅರ್ಥ ಹೇಳಿದ್ದನ್ನು ಗಮನಿಸಿ, ಇವರನ್ನು ತಮ್ಮ ಕೊಠಡಿಗೆ ಕರೆಸಿಕೊಂಡು 'ವೆಂಕಟಸುಬ್ಬಯ್ಯ. ಇನ್ನು ಮೂರು ತಿಂಗಳು ಕಾಲ ನಿನ್ನ ಟಿಪ್ಪಣಿಗಳನ್ನು ನನಗೆ ತೋರಿಸಬೇಕು' ಎಂದು ಅಪ್ಪಣೆ ಮಾಡಿದರಂತೆ. ಪ್ರೊಫೆಸರ್ ಎ. ಆರ್. ಕೃ, ಪ್ರೊಫೆಸರ್ ತೀ. ನಂ. ಶ್ರೀ, ಪ್ರೊಫೆಸರ್ ಡಿ. ಎಲ್. ಎನ್.—ಇವರ ಸಂಪರ್ಕದಲ್ಲಿದ್ದು ನಾಲ್ಕು ವರ್ಷಗಳ ಕಾಲ ಇವರು ತಮ್ಮ ಪಾಂಡಿತ್ಯವನ್ನು ಎತ್ತರಿಸಿಕೊಂಡರು; ಬಿತ್ತರಿಸಿಕೊಂಡರು. ಬೇರೆಡೆಗೆ ನೇಮಕಗೊಂಡಿದ್ದ ಕ. ವೆಂ. ರಾಘವಾಚಾರ್ಯರು ಕಾಲೇಜಿಗೆ ಹಿಂದಿರುಗಿ ಇವರ ಅದೃಷ್ಟ ಇಲ್ಲಿಯೂ ಖೋಟಾನಾಣ್ಯವೆಂದು ಸ್ಪಷ್ಟ ವಾಯಿತು. 1943 ರಲ್ಲಿ ಇವರು ಮಹಾರಾಜರವರ ಕಾಲೇಜಿನಿಂದ ಹೊರಬೀಳ ಬೇಕಾಯಿತು.

ನಾವು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕಾಲ ಹಿಂದಿನ ಪದ್ಧತಿಗಳನ್ನು ಬಿಟ್ಟು ನಾಗಾಲೋಟದಿಂದ ಸಮಾಜ ಪರಿವರ್ತನೆಯಾಗುತ್ತಿದ್ದ ಕಾಲ — ಮದುವೆ ಯೊಂದನ್ನು ಬಿಟ್ಟು. ಓದುತ್ತಿರುವಾಗಲೇ ನಮ್ಮ ಹಿರಿಯರು ನಮ್ಮ ಒಪ್ಪಿಗೆ ಯನ್ನು ನಿರೀಕ್ಷಿಸದೆ ಮದುವೆ ಮಾಡಿಬಿಡುತ್ತಿದ್ದರು. ದುಡಿಯಲು ತೋಳಿನಲ್ಲಿ ಸ್ವಲ್ಪ ಬಲ ಬರಲಿಯೆಂದು ಗೊಣಗಿದರೆ 'ಅದರ ಯೋಚನೆ ನಿನಗೇಕೆ? ನಿನ್ನ ಸಂಸಾರವನ್ನು ಹಿಡಿಯಲು ನಾವಿಲ್ಲವೇ?' ಎಂದು ಬಾಯಿಮುಚ್ಚಿಸಿಬಿಡುತ್ತಿದ್ದರು. ಹೀಗಿರುವಲ್ಲಿ ಸಂಸಾರದ ಹೊರೆ ಹೊತ್ತು, ಕೆಲಸ ಕಳೆದುಕೊಂಡು ತೊಳಲಾಡು ತ್ತಿದ್ದವರ ಪಾಡನ್ನು ಊಹಿಸಿಕೊಳ್ಳಬೇಕೇ ಹೊರತು ಬರೆದು ಮುಗಿಸುವಂತಿಲ್ಲ. ಆ ಕಾಲದ ನನ್ನ ಮಿತ್ರರ ಮನಸ್ಥಿತಿಯನ್ನು ಅನುಭವದಿಂದ ನಾನು ಅರ್ಥಮಾಡಿ ಕೊಳ್ಳಬಲ್ಲೆ. ಆದರೇನು? ದೈವನಿಯಮವನ್ನು ಬಲ್ಲವರಾರು? ಯಾರಿಂದ ಯಾವ ಸಂಸ್ಥೆಗೆ ಏನು ಸೇವೆ ಕಾದಿದೆಯೋ? 'ಆದದ್ದೆಲ್ಲ ಒಳಿತೇ ಆಯಿತು' ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂಕ್ತಿಯಂತೆ, ಕೊನೆಗೊಮ್ಮೆ ಬೆಂಗಳೂರಿನ ಪ್ರೌಢಶಾಲೆ ಇವರಿಗೆ ತನ್ನ ಮಡಿಲಿನಲ್ಲಿ ಆಶ್ರಯಕೊಟ್ಟಿತು. 1943 ರಿಂದ ಬೆಂಗಳೂರು ಇವರ ತೌರುಮನೆಯಾಯಿತು. ಇವರು ಮಾಡಿದ ಬಿ.ಟಿ. ಪರೀಕ್ಷೆ ಹೈಸ್ಕೂಲಿನ ಬೋಧನೆಗೆ ಸಹಾಯಮಾಡಿತು.

1945 ನಮ್ಮ ಬದುಕಿನಲ್ಲಿ ಒಂದು ಪರ್ವಕಾಲ. ಹೈಸ್ಕೂಲು ಮಟ್ಟವನ್ನು ದಾಟಿ ಪಾಠಹೇಳಲು ಇನ್ನು ಶಕ್ಯವಿಲ್ಲವೆಂದು ತಲೆಯ ಮೇಲೆ ಕೈಹೊತ್ತು ಕುಳಿತಾಗ ಸಂತಸದ ಸುದ್ದಿಯೊಂದು ಕೇಳಿಬಂತು. ಆಗ ದೇಶದಲ್ಲಿ ಕಾಲೇಜನ್ನು ಸೇರಿ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿತ್ತು. ಸರ್ಕಾರದ ಕಾಲೇಜುಗಳ ಸಂಖ್ಯೆಯೋ ಅತ್ಯಂತ ಪರಿಮಿತವಾಗಿತ್ತು. ಹೀಗಿರುವಲ್ಲಿ ಸರ್ಕಾರದ ಅದರಲ್ಲಿಯೂ ಮುಖ್ಯವಾಗಿ ಆಗ ದಿವಾನರಾಗಿದ್ದ ದಿವಂಗತ ಶ್ರೀ ಎನ್. ಮಾಧವರಾಯರ ಉದಾರ ನೀತಿಯಿಂದಾಗಿ ಖಾಸಗೀ ವಿದ್ಯಾ ಸಂಸ್ಥೆಗಳು ಕಾಲೇಜುಗಳನ್ನು ತೆರೆಯಲು ಅನುಕೂಲವಾಗಿ ವಿದ್ಯಾರ್ಥಿಗಳ ಬವಣೆ ನೀಗಿತು. ಮೈಸೂರು ವಿಶ್ವವಿದ್ಯಾನಿಲಯದ ಕಕ್ಷ್ಯದಲ್ಲಿ ಮೊದಲು ಬಂದ ಖಾಸಗೀ ಕಾಲೇಜುಗಳೆಂದರೆ ಮೈಸೂರಿನಲ್ಲಿ ಶಾರದಾ ವಿಲಾಸ ಕಾಲೇಜು, ಬೆಂಗಳೂರಿನಲ್ಲಿ ವಿಜಯಾ ನ್ಯಾಷನಲ್ ಕಾಲೇಜುಗಳು. ಶಾರದಾ ವಿಲಾಸ ಮತ್ತು ವಿಜಯಾ ಕಾಲೇಜುಗಳು ನಮ್ಮಿಬ್ಬರ ಅಭ್ಯುದಯಕ್ಕಾಗಿಯೇ ಜನ್ಮವೆತ್ತಿದುವೆಂದು ನನ್ನ ಭಾವನೆ. ವಿಜಯಾ ಕಾಲೇಜು ಸಂಸ್ಥೆಯಲ್ಲಿ ಶ್ರೀ ಜಿ. ವೆಂಕಟಸುಬ್ಬಯ್ಯನವರು ಮೊದಲು ಕನ್ನಡದ ಉಪನ್ಯಾಸಕರಾಗಿದ್ದು, ಕ್ರಮೇಣ ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕ ಪದವಿಗೇರಿ 1972 ರಲ್ಲಿ ಸಂಜೆ ಕಾಲೇಜಿನ ಪ್ರಿನ್ಸಿಪಾಲರಾಗಿ 23–8–1973 ರಲ್ಲಿ ಮೂವತ್ತೈದು ವರುಷಗಳ ಕಾಲ ಶಿಕ್ಷಣಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ನಂತರ ನಿವೃತ್ತರಾದರು.

ಉಪಾಧ್ಯಾಯನಾದವನು ಶ್ರದ್ಧೆವಹಿಸಿ ಪಾಠಹೇಳಿದರೆ ಅವನಿಗೆ ಅದರಿಂದ ಕನಕವೃಷ್ಟಿಯಾಗುವುದೋ ಏನೋ ನಾನರಿಯೆ. ಆದರೆ ತಮ್ಮಿಂದ ಪಾಠ ಕಲಿತ ವಿದ್ಯಾರ್ಥಿ ಕೃತಜ್ಞತೆ ಗೌರವಗಳನ್ನು ತೋರಿದರೆ ಉಪಾಧ್ಯಾಯನಿಗೆ ಕೋಡು ಮೂಡಿ, ನಾಲ್ಕು ತೋಳು ಹುಟ್ಟಿದಂತಾಗುವುದು. ವಿದ್ಯಾರ್ಥಿ ಸಂಪತ್ತೇ ಉಪಾಧ್ಯಾಯನ ನಿಜವಾದ ಸಂಪತ್ತು. ಈ ವಿಷಯದಲ್ಲಿ ಪ್ರೊ. ವೆಂಕಟಸುಬ್ಬಯ್ಯನವರು ಪುಣ್ಯವಂತರು. ಅವರು ಆಕರ್ಷಕವಾಗಿ ಪಾಠಹೇಳಬಲ್ಲವರೆಂದೂ ಶಿಷ್ಯ ವತ್ಸಲರೆಂದೂ ಕೇಳಿದ್ದೇನೆ. ಅವರ ಕಾಲೇಜಿಗೆ ಹೋದಾಗಲೆಲ್ಲಾ ಅವರ ಪಾಠವನ್ನು ಕದ್ದುಕೇಳಿ ಇವರ ವಾಗ್ಮಿತೆಗೆ ತಲೆದೂಗಿದ್ದೇನೆ. ಹೀಗಿರುವಲ್ಲಿ ಅವರ ವಿದ್ಯಾರ್ಥಿಗಳು ಅವರನ್ನು ಹೊಗಳುವುದರಲ್ಲಿ ಏನು ಸೋಜಿಗ? ಉಪಾಧ್ಯಾಯನು ವಿಶ್ವಕುತೂಹಲಿಯಾಗಿ ಬಹುಶ್ರುತತ್ವವನ್ನು ಹೊಂದಿ, ವಿಷಯವನ್ನು ಮನನಮಾಡಿ, ತೊಡಕನ್ನು ಬಿಡಿಸಿ, ವಿದ್ಯಾರ್ಥಿಗಳ ಮನಮುಟ್ಟುವಂತೆ ಬೋಧಿಸಬೇಕು. ಈ ಕಲೆ ಇವರಿಗೆ ಕರಗತವಾಗಿದೆ. ಅಲ್ಲದೆ ವಿದ್ಯಾರ್ಥಿಗಳ ಬೆನ್ನುತಟ್ಟಿ ಅವರಲ್ಲಿರುವ ಪ್ರತಿಭೆಯನ್ನು ಹೊರತರುವುದರಲ್ಲಿ ಇವರು ಸಮರ್ಥರು. ಶ್ರೀ ವೆಂಕಟಸುಬ್ಬಯ್ಯನವರು ವಿಜಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲೇಜಿನಲ್ಲಿ ಕನ್ನಡ ಆನರ್ಸ್ ತರಗತಿಗಳನ್ನು ತೆರೆಯಲು ಮಾಡಿದ ಸಾಹಸ, ಅದಕ್ಕಿದ್ದ ವಿರೋಧವನ್ನು ಗೆದ್ದು ಕೆಲವು ವರ್ಷ ಅದನ್ನು ಮುಂದುವರಿಸಿದ ರೀತಿ—ಇದು ಬೇರೆಯ ವಿಸ್ತಾರವಾದ ವಿವರಣೆಯನ್ನು ನಿರೀಕ್ಷಿಸುತ್ತದೆ. ವಿದ್ಯಾರ್ಥಿಗಳ ಬರಹಕ್ಕಾಗಿ ತಮ್ಮ ಕಾಲೇಜಿನಿಂದ 'ಉತ್ಸಾಹ' ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದುದೇ ನನ್ನ ಮಾತಿಗೆ ಸಾಕ್ಷಿಯಾಗಿದೆ. ಈ ಪತ್ರಿಕೆಯ ಸಂಚಿಕೆಗಳನ್ನು ಓದಿ ನಾನು ಸಂತೋಷಪಟ್ಟಿದ್ದೇನೆ.

ತಾವು ಬೋಧಿಸುವ ವಿಷಯದಲ್ಲಿ ಅಖಂಡವಾದ ಜ್ಞಾನವನ್ನು ಸಂತತವಾಗಿ ಸಂಪಾದಿಸಿ, ವಿದ್ಯಾರ್ಥಿಗಳ ಮನಮುಟ್ಟುವಂತೆ ಪಾಠಹೇಳಿದರೆ ಅಲ್ಲಿಗೆ ಉಪಾಧ್ಯಾಯ ನಾದವನ ಕರ್ತವ್ಯ ಮುಗಿಯಿತೆಂದು ಉಪಾಧ್ಯಾಯನೂ ಜನರೂ ತಿಳಿದಿದ್ದ ಕಾಲವೊಂದಿತ್ತು. ಒಂದು ದೃಷ್ಟಿಯಿಂದ ಈ ಅಭಿಪ್ರಾಯ ಸರಿಯಾದದ್ದೇ. ಆದರೆ ಇಂಥ ಪಾಠಪ್ರವಚನದಿಂದ ಅವನ ವಿದ್ಯಾರ್ಥಿಗಳು ಮಾತ್ರ ಪ್ರಭಾವಿತರಾಗುತ್ತಾರೆ. ಆದರೆ ಉಪಾಧ್ಯಾಯನ ಮಾತು ತುಂಡುಮೋಡದಂತೆ ಚದುರಿಹೋಗುತ್ತದೆ. 'ಛಿನ್ನಾಭ್ರಮಿವ ನಶ್ಯತಿ' ಆದಕಾರಣ ಸಮಾಜ, ಒಳ್ಳೆಯ ಉಪಾಧ್ಯಾಯನಾದವನು ಕನ್ನಡದಲ್ಲಿ ತನ್ನ ಭಾವಗಳು ಹಿಡಿದಿಡುವುದನ್ನು ನಿರೀಕ್ಷಿಸುತ್ತದೆ. ಏಕೆಂದರೆ ಮಾತಿಗಿಂತ ಬರವಣಿಗೆ ಹೆಚ್ಚು ಶಾಶ್ವತ. ದೇಶದ ಜನ ವಿದ್ಯಾವಂತರಾಗಿ ಮುಂದುವರಿಯ ಬೇಕಾದರೆ ಸಮಸ್ತ ವಿಷಯಗಳೂ ಕನ್ನಡದಲ್ಲಿ ಮೂಡಿಬರಬೇಕು.

ಕನ್ನಡ ಸಾಹಿತ್ಯವನ್ನು ಬೆಳೆಸುವ ಈ ಕೈಂಕರ್ಯದಲ್ಲಿಯೂ ಪ್ರೊ. ವೆಂಕಟ ಸುಬ್ಬಯ್ಯನವರು ಹಿಂದಾಗಿಲ್ಲ. ಅವರು ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ತಮ್ಮ ಕೈಯ್ಯಲ್ಲಾದ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಅನೇಕ ಲೇಖನಗಳು ಕನ್ನಡದ ವಿದ್ವತ್ಪತ್ರಿಕೆಗಳಲ್ಲಿ ಚದುರಿಹೋಗಿವೆ. ಶ್ರೀಯುತರು ಮಹಾರಾಜರವರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗಲೇ ಪ್ರಚಾರೋಪನ್ಯಾಸ ಪುಸ್ತಕಮಾಲೆಗೆ 'ನಯಸೇನ'ನ ಮೇಲೆ ಸಂಗ್ರಹವೂ ಸಾರವತ್ತೂ ಆದ ಪುಸ್ತಿಕೆಯನ್ನು ರಚಿಸಿಕೊಟ್ಟರು. ಈ ಚಿಕ್ಕ ವಿಮರ್ಶ ಗ್ರಂಥದೊಡನೆ 'ಅನುಕಲ್ಪನೆ' ಮತ್ತು ಇತರರೊಡನೆ ಸಹಕರಿಸಿ ಬರೆದ 'ವಿಕಾಸ'ವನ್ನು ಸೇರಿಸಿಕೊಳ್ಳಬೇಕು. 'ಅನುಕಲ್ಪನೆ'ಯ ಸ್ವರೂಪವನ್ನು ಮೊದಲು ವಿವರಿಸಿದವರು ಶ್ರೀ ವೆಂಕಟಸುಬ್ಬಯ್ಯನವರೇ. ನಮ್ಮ ಪ್ರಾಚೀನ ಕಾವ್ಯಗಳು ಸೀಗೆಯ ಬೇಲಿಯಂತೆ ಹೆಣೆದುಕೊಂಡಿರುತ್ತವೆ. ಅವುಗಳ ಪ್ರವೇಶ ಅನೇಕ ವೇಳೆ ದುಸ್ಸಾಧ್ಯವಾಗಿರುತ್ತದೆ. ಪೊದೆ ಬೇಲಿಮುಳ್ಳುಗಳನ್ನು ಸವರಿ, ಸರಿಮಾಡಿ ಕೊಂಬೆಗಳನ್ನು ಕತ್ತರಿಸಿ ನಯ ಮಾಡಿ, ಕಾವ್ಯವನ್ನು ನಂದನೋದ್ಯಾನವನ್ನಾಗಿಸುವುದು ಸಂಗ್ರಹಕಾರನ ಕರ್ತವ್ಯ. ಚೌಂಡರಸನ 'ನಳಚಂಪು'. ಸೋಮನಾಥನ 'ಅಕ್ರೂರ' ಚರಿತ್ರೆಗಳಿಗೆ ಶ್ರೀಯುತರು ಕತ್ತರಿ ಪ್ರಯೋಗಮಾಡಿ ಇವೆರಡನ್ನೂ ಸುಂದರ ಸಂಗ್ರಹಗಳನ್ನಾಗಿಸಿರುವುದಲ್ಲದೆ, ಇವುಗಳಿಗೆ ಪೀಠಿಕೆ ಶಬ್ದಕೋಶಗಳನ್ನೊದಗಿಸಿದ್ದಾರೆ. 'ಕರ್ಣಕರ್ಣಾಮೃತ' ಕುಮಾರವ್ಯಾಸ ಭಾರತದಿಂದ ಕರ್ಣನ ಜೀವನಕ್ಕೆ ಸಂಬಂಧಿಸಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪದ್ಯಗಳ ಸಂಗ್ರಹ. 'ಕಾವ್ಯಲಹರಿ' 'ಕಾವ್ಯಸಂಪುಟ'ಗಳು ಇತರರೊಡನೆ ಸಂಪಾದಿಸಿದ ಕಾವ್ಯಸಂಗ್ರಹಗಳು. 'ಶಾಸನ ಪರಿಚಯ'ವೆಂಬ ಚಿಕ್ಕ ಗ್ರಂಥ ನಮ್ಮ ನಾಡಿನ ಶಾಸನಗಳನ್ನು ಪರಿಚಯಿಸಿಕೊಟ್ಟು ವಿದ್ಯಾರ್ಥಿಗಳಿಗೂ ಜನಸಾಮಾನ್ಯಕ್ಕೂ ಉಪಯುಕ್ತವಾಗಿದೆ. ಈ ಸಂದರ್ಭದಲ್ಲಿ ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಇವರು ರಚಿಸಿರುವ ಭಾಷಾಂತರ ಪಾಠಗಳ ಮೂರು ಭಾಗಗಳನ್ನೂ 'ಕಾಲೇಜ್ ಭಾಷಾಂತರ'ದ ಪುಸ್ತಕಗಳನ್ನೂ ಇಲ್ಲಿ ನೆನೆದುಕೊಳ್ಳಬೇಕು.

ಮಕ್ಕಳ ಸಾಹಿತ್ಯವೂ ಇವರ ಬರವಣಿಗೆಯ ಕಕ್ಷ್ಯದಿಂದ ಹೊರಗಾಗಿಲ್ಲ. 'ರಾಬಿನ್‌ಸನ್ ಕ್ರೂಸೋ'. 'ಕವಿಜನ್ನ'. 'ಚಾವುಂಡರಾಯ' ಇವು ಇವರಿಂದ ರಚಿತವಾದ ಮಕ್ಕಳ ಪುಸ್ತಕಗಳು. 'ಲಿಂಡನ್ ಜಾನ್‌ಸನ್', 'ಸಂಯುಕ್ತ ಸಂಸ್ಥಾನಗಳನ್ನು ಪರಿಚಯಮಾಡಿಕೊಳ್ಳಿ'. 'ಶಂಕರಾಚಾರ್ಯ'. 'ಕಬೀರ'—ಈ ಅನುವಾದಗಳು ನಮ್ಮ ಸಾಹಿತ್ಯಸಂಪತ್ತನ್ನು ಹೆಚ್ಚಿಸಿವೆ.

ಈ ಎಲ್ಲ ಸಾಹಿತ್ಯ ಸೇವೆಗಿಂತಲೂ ಸಾರವತ್ತಾದ್ದೂ ಬೆಲೆಯುಳ್ಳದ್ದೂ ಅವರ ಸಂಶೋಧನೆ. ಕವಿಚರಿತ್ರೆಕಾರರಾದ ಆರ್. ನರಸಿಂಹಾಚಾರ್ಯರು ಮೂರು ಸಂಪುಟಗಳಲ್ಲಿ ಸಾಹಿತ್ಯರಚನೆಗೆ ಅವಶ್ಯಕವಾದ ಬೆಲೆಯುಳ್ಳ ಬೆರಗುಗೊಳಿಸುವ ಸಾಮಗ್ರಿಯನ್ನು ಬಿಟ್ಟುಹೋಗಿದ್ದರಷ್ಟೆ. ಇತ್ತೀಚೆಗೆ ದೊರೆತ ಶಾಸನಸಂಪತ್ತು ಗ್ರಂಥಗಳ ನೆರವಿನಿಂದ ಈ ಸಂಪುಟಗಳ ಪರಿಷ್ಕರಣ ಅವಶ್ಯಕವಾಗಿತ್ತು. ಪರಿಷತ್ತು ಈ ಕೆಲಸವನ್ನು ಪ್ರೊ. ವೆಂಕಟಸುಬ್ಬಯ್ಯನವರಿಗೆ ವಹಿಸಿತು. ಶ್ರೀಯುತರು ಈ ಕಾರ್ಯನಿರ್ವಹಣೆಗಾಗಿ ಮದ್ರಾಸ್. ಉದಕಮಂಡಲ ಮುಂತಾದ ಸ್ಥಳಗಳಿಗೆ ಹೋಗಿ. ನೂರಾರು ಶಾಸನಗಳನ್ನೂ ಗ್ರಂಥಗಳನ್ನೂ ಪರಿಶೀಲಿಸಿ ಕವಿಚರಿತ್ರೆಯ ಸಂಪುಟಗಳಿಗೆ ಅನುಬಂಧರೂಪವಾದ ಸಾಮಗ್ರಿಗಳನ್ನು ಒದಗಿಸಿರುವುದಲ್ಲದೆ. ಮೊದಲನೆಯ ಸಂಪುಟಕ್ಕೆ ಆರ್. ನರಸಿಂಹಾಚಾರ್ಯರ ಜೀವನ ಮತ್ತು ಕೃತಿಗಳ ಮೇಲೆ ಸಾರವತ್ತಾದ ಲೇಖನವನ್ನು ಬರೆದಿದ್ದಾರೆ. ಸಂಶೋಧನೆಯ ಸ್ವರೂಪ ಕಷ್ಟಗಳೇನೆಂಬುದು ಅದರಲ್ಲಿ ತೊಡಗಿದವರಿಗೆ ಮಾತ್ರ ಗೊತ್ತು. ಒಂದು ಕಡೆ ಕೈಯಿಟ್ಟರೆ ಅದು ಕವಲೊಡೆದು ಎತ್ತೆತ್ತಲೋ ಹೋಗಿ. ಅನೇಕ ವೇಳೆ ಮೈ ಪರಚಿಕೊಳ್ಳುವಂತಾಗುತ್ತದೆ. ಬುದ್ಧಿಶಕ್ತಿ. ಅನೇಕ ಭಾಷೆಗಳಲ್ಲಿ ಸಲಿಗೆ. ವಿಷಯ ಪರಿಷ್ಕರಣ ಸಾಮರ್ಥ್ಯ, ಎಲ್ಲಕ್ಕೂ ಮಿಗಿಲಾಗಿ ಸಹನೆ ಇವೇ ಮೊದಲಾದ ಗುಣಗಳನ್ನು ಸಂಶೋಧನೆ ಅಪೇಕ್ಷಿಸುತ್ತದೆ. ಈ ಗುಣಗಳನ್ನು ಪೂರ್ಣಪ್ರಮಾಣಗಳಲ್ಲಿ ಹೊಂದಿರುವ ನನ್ನ ಮಿತ್ರರು ಬೃಹದ್ಗ್ರಂಥದ ಪರಿಷ್ಕರಣಕ್ಕೆ ಪಟ್ಟಿರುವ ಶ್ರಮ ನಾಡಿನ ವಿದ್ವಾಂಸರ ಕೃತಜ್ಞತೆಗೆ ಅರ್ಹವಾಗಿದೆಯೆಂಬ ಅಂಶವನ್ನು ಇಲ್ಲಿ ತಿಳಿಸ ಬಯಸುತ್ತೇನೆ. ಈ ಸಂಶೋಧನೆಯ ಜೊತೆಗೆ ನನ್ನ ಮಿತ್ರರು ಕನ್ನಡ ನಿಘಂಟಿನ ಮೊದಲ ಸಂಪುಟಕ್ಕೆ. ಸಂಕ್ಷಿಪ್ತ ಕನ್ನಡ ಕೋಶಕ್ಕೆ ಬರೆದ ಮುನ್ನುಡಿಗಳನ್ನು ಕೂಡಿಸಿಕೊಳ್ಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡದ ಬೇರೆ ಬೇರೆ ಪತ್ರಿಕೆಗಳಿಗೆ ಬಂದ ಗ್ರಂಥಗಳಲ್ಲಿ ಕೆಲವನ್ನು ಇವರು ಆಗಾಗ ವಿಮರ್ಶೆ ಮಾಡಿರುವರೆಂಬುದನ್ನು ಇಲ್ಲಿ ನೆನೆದುಕೊಳ್ಳಬೇಕು. ಶ್ರೀಯುತರ ಈ ಎಲ್ಲ ಬರವಣಿಗೆಗಳೂ ಅಕ್ಲಿಷ್ಟಪ್ರಸನ್ನರೀತಿಯಲ್ಲಿದ್ದು ಆಕರ್ಷಕವಾಗಿವೆ. ಇವರ ಭಾಷೆಯಲ್ಲಿ ತೊಡಕಿಲ್ಲ, ನಿರೂಪಿಸುವ ವಿಷಯದಲ್ಲಿ ಸಂದಿಗ್ಧತೆ ಇಲ್ಲ.

ಎಂ.ಎ. ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳಲ್ಲದೆ ವಾಚಾಪರೀಕ್ಷೆಯೂ ಉಂಟು. ವಿದ್ಯಾರ್ಥಿಗಳು ಹೆಚ್ಚಾಗಿರುವ ಈ ಕಾಲದಲ್ಲಿ ವಾಚಾಪರೀಕ್ಷೆಗೆ ವಿದ್ಯಾರ್ಥಿಗಳು ಅಷ್ಟಾಗಿ ಹೆದರಬೇಕಾಗಿಲ್ಲವೆಂದು ತೋರುತ್ತದೆ. ನಮ್ಮ ಕಾಲದಲ್ಲಿ ಹಾಗಿರಲಿಲ್ಲ. ಪ್ರಾಧ್ಯಾಪಕ ರೆಂದರೆ ನಾವು ಮೈಲಿದೂರ ನಿಲ್ಲುತ್ತಿದ್ದೆವು. ಅದರಲ್ಲೂ ಆಚಾರ್ಯಶ್ರೀಯವರು ವಾಚಾಪರೀಕ್ಷಕರೆಂದರೆ ಎದೆನಡುಕ. ನಾವು ಎಂ.ಎ. ಪರೀಕ್ಷೆಗೆ ಇದ್ದವರು ಮೂರುಜನ. ಒಬ್ಬೊಬ್ಬರನ್ನೂ ಒಂದೊಂದು ಗಂಟೆ ಕಾಲ ಜಗ್ಗಿಸಿದಮೇಲೆ. ಕನ್ನಡದ ಅಭಿಮಾನ ಉಕ್ಕೇರಿದ ಶ್ರೀಯವರು ಪ್ರತಿಯೊಬ್ಬರಿಗೂ ಕೈಮುಗಿದು 'ಕನ್ನಡವನ್ನು ನಿಮ್ಮ ಕೈಯಲ್ಲಿಟ್ಟಿದ್ದೇವೆ. ಅದನ್ನು ಕಾಪಾಡಿ' ಎಂದು ಕಳಕಳಿಯಿಂದ ನುಡಿದರು. ಮೊದಲೇ ಅವರ ಅಮೃತ ವಾಣಿಯನ್ನಾಲಿಸಿ ಕನ್ನಡದ ಕೈಂಕರ್ಯವನ್ನು ಕೈಕೊಳ್ಳಬೇಕೆಂಬ ಸ್ಫೂರ್ತಿಯೊದಗುತ್ತಿದ್ದಾಗ ಅವರಿಂದ ಈ ಮಾತನ್ನು ಕೇಳಿ ನಮ್ಮ ಮೈ ನಿಮಿರೆದ್ದಿತು. ನನ್ನ ಗೆಳೆಯರು ತಮ್ಮ ಗುರುಗಳ ಮಾತನ್ನು ಅಕ್ಷರಶಃ ಪಾಲಿಸಿ ಗುರುದಕ್ಷಿಣೆಯನ್ನು ಸಲ್ಲಿಸಿ ಕೃತಕೃತ್ಯರಾಗಿರುವುದು ಹೆಮ್ಮೆಯ ವಿಷಯ. ಅವರು ಜೀವನದ ವ್ರತದಂತೆ ನಡೆಸಿರುವ ಕನ್ನಡದ ಕೈಂಕರ್ಯ, ಸೇವೆಗಳನ್ನು ಇಲ್ಲಿ ಸಂಗ್ರಹಿಸಿದೆ.

ಪ್ರೊಫೆಸರ್ ವೆಂಕಟಸುಬ್ಬಯ್ಯನವರದು ಪಾದರಸದ ಚಟುವಟಿಕೆ. ಎಂದೂ ಅವರು ಸುಮ್ಮನೆ ಕುಳಿತವರಲ್ಲ. ಬೆಲ್ಲಕ್ಕೆ ಇರುವೆ ಮುತ್ತಿದಂತೆ ಅವರ ಸುತ್ತಲೂ ವಿದ್ಯಾರ್ಥಿಗಳೋ ಇತರರೋ ಮುತ್ತಿರುತ್ತಾರೆ. ಸಾಹಿತ್ಯದ ವಿಷಯದಲ್ಲಿ ಇತರರಿಗೆ ಅವರ ಆಲೋಚನೆ ಆವಶ್ಯಕ. ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅವರು 'ಬಾಲಕರ್ಣಾಟಕ ಸಂಘ' ವನ್ನು ಹುಟ್ಟು ಹಾಕಿ ಬೆಳೆಸಿದರು. ಈ ಸಂದರ್ಭದಲ್ಲಿ ನನ್ನ ಸ್ವಂತ ವಿಷಯವೊಂದನ್ನು ನಿವೇದಿಸಬೇಕಾಗಿದೆ. ಈಗಿನ ಯುವರಾಜರವರ ಕಾಲೇಜಿನಲ್ಲಿ 'ತರುಣರ ದಂಡು' ಎಂಬ ಕನ್ನಡ ಸಂಘವಿತ್ತು. ಕಾವ್ಯವಾಚನ, ಪ್ರಬಂಧವಾಚನ, ಉಪನ್ಯಾಸಗಳ ಏರ್ಪಾಟು—ಇವುಗಳನ್ನು ಇದು ಏರ್ಪಡಿಸು ತ್ತಿದ್ದುದಲ್ಲದೆ ಸಂಘ 'ರೋಹಿಣಿ' ಎಂಬ ಕೈಬರಹದ ಪತ್ರಿಕೆಯನ್ನೂ ಹೊರಡಿಸು ತ್ತಿತ್ತು. ನಾನು ಈ ಸಂಘಕ್ಕೆ ಮೂರು ವರ್ಷಗಳ ಕಾಲ ಕಾರ್ಯದರ್ಶಿಯಾಗಿದ್ದ ನೆನಪು. ಈ ಅವಧಿಯಲ್ಲಿ ನನ್ನ ಮಿತ್ರರು ನನಗೆ ಕೊಟ್ಟ ಬೆಂಬಲವನ್ನು ಇಲ್ಲಿ ವಿಶೇಷ ಕೃತಜ್ಞತೆಯಿಂದ ನೆನೆಯುತ್ತೇನೆ. ಇವರ ಜೊತೆಗೆ 1936 ರಿಂದ 1938ರ ವರೆಗೆ ಸ್ವಸ್ತಿಕ ಸಂಘಗಳನ್ನು ಸ್ಥಾಪಿಸಿ ದಿಗ್ದರ್ಶನಮಾಡಿದರು.

ಮಂಡ್ಯದಲ್ಲಿ ಉಪಾಧ್ಯಾಯರಾಗಿದ್ದಾಗ 1939 ರ ಪೂರ್ತಿ ಅಲ್ಲಿನ ಕರ್ಣಾಟಕ ಸಂಘದ ಕಾರ್ಯದರ್ಶಿಯಾಗಿದ್ದು ಅದನ್ನು ಅಭಿವೃದ್ಧಿಗೆ ತಂದರು. ಇವರು ಕಾರ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದರ್ಶಿಯಾಗಿದ್ದಾಗಲೇ ನಾನು ಮುಂಬೈದ ಕರ್ನಾಟಕ ಸಂಘದ ಆಶ್ರಯದಲ್ಲಿ
'ಹರಿಶ್ಚಂದ್ರ ಕಾವ್ಯ'ದ ಮೇಲೆ ಉಪನ್ಯಾಸ ಮಾಡಿದ ನೆನಪು. ನಮ್ಮ ಜೀವನದ
ವಸಂತ ಕರ್ನಾಟಕ ಸಂಘಗಳ ಪ್ರಾಬಲ್ಯದ ಕಾಲ. ಅದರಲ್ಲೂ ಮುಂಬೈದ
ಕರ್ನಾಟಕ ಸಂಘ ನಾಡಿನ ಪ್ರತಿಷ್ಠಿತ ಸಂಘಗಳಲ್ಲಿ ಒಂದಾಗಿತ್ತು. ಹೀಗಿರುವಲ್ಲಿ
ಒಬ್ಬ ವ್ಯಕ್ತಿ ಅದರ ಕಾರ್ಯದರ್ಶಿಯೆಂದರೆ ಅದು ಪ್ರತಿಷ್ಠೆಯ ಮಾತೇ ಸರಿ.

ಶ್ರೀಯುತರು ಬೆಂಗಳೂರಿನಲ್ಲಿ ನೆಲೆಸಿದ್ದು ಒಂದು ದೊಡ್ಡ ಮೀನನ್ನು
ಕೊಳದಿಂದ ಸಮುದ್ರಕ್ಕೆ ತಂದು ಬಿಟ್ಟಂತಾಯಿತು. ಕಾಲೇಜಿನ ಪಠ್ಯೇತರ
ಚಟುವಟಿಕೆಗಳಲ್ಲದೆ, ಸಾರ್ವಜನಿಕ ಚಟುವಟಿಕೆಗಳಲ್ಲಿ. ಅದರಲ್ಲೂ ಮುಖ್ಯವಾಗಿ
1954ರಿಂದ 1956 ರವರೆಗೆ ಇವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗೌರವ ಕಾರ್ಯದರ್ಶಿ
ಯಾಗಿದ್ದುದು ಇವರ ಜೀವನದ ಒಂದು ಮೈಲುಗಲ್ಲು. ಬೆಂಗಳೂರಿನ ಕನ್ನಡ
ಸಾಹಿತ್ಯ ಪರಿಷತ್ತು ನಾಡಿನ ಹೆಮ್ಮೆಯ ಸಂಸ್ಥೆ. ಮಹಾರಾಜರು ಪೋಷಕರಾಗಿ,
ಯುವರಾಜರು ಅಧ್ಯಕ್ಷರಾಗಿದ್ದ ಸಂಸ್ಥೆ. ಅತಿರಥ ಮಹಾರಥರಾದ ವಿದ್ವಾಂಸರು
ಇದರ ರಥವನ್ನು ಎಳೆದಿದ್ದಾರೆ. ಇಂಥ ಮಹಾಸಂಸ್ಥೆಯ ಕಾರ್ಯದರ್ಶಿಯಾಗಿ
ಅನೇಕ ವಿದ್ವಜ್ಜನರ ಸಂಪರ್ಕ ಪಡೆದು ಅವರ ಮೆಚ್ಚಿಗೆಯನ್ನು ಗಳಿಸಿ ಕೊನೆಗೆ
1965 ರಿಂದ 1969 ರವರೆಗೆ ಸರಸ್ವತಿ ವರದೆಯಾಗಿ ಇವರ ತಲೆಯ ಮೇಲೆ
ಆಶೀರ್ವಾದ ಹಸ್ತವನ್ನು ಪೂರ್ಣವಾಗಿ ಇಟ್ಟಳೆಂಬಂತೆ ಇವರು ಪರಿಷತ್ತಿನ
ಅಧ್ಯಕ್ಷ ಪದವಿಗೇರಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ
ನಡೆದ ಕಾರ್ಯವನ್ನು ಇಲ್ಲಿ ಸ್ಥೂಲವಾಗಿ ಅವಲೋಕಿಸಬಹುದು. ಮೊದಲನೆ
ಯದಾಗಿ ಪರಿಷತ್ತು ಕೈಕೊಂಡಿದ್ದ ಕನ್ನಡ ಬೃಹತ್ಕೋಶದ ಮೊದಲನೆಯ ಸಂಚಿಕೆ
ಬಿಡುಗಡೆಯಾಗಿ, ಕೋಶದ ರಚನೆಯ ವಿಷಯದಲ್ಲಿ ಜನರ ಮನಸ್ಸಿನಲ್ಲಿದ್ದ ಶಂಕೆಗಳು
ಮಾಯವಾಗಿ, ಜನಾಭಿಪ್ರಾಯ ಈ ವಿಷಯದಲ್ಲಿ ಸುಮುಖವಾಯಿತು. ಎರಡನೆಯ
ದಾಗಿ ಕಾರವಾರದಲ್ಲಿ ಸಾಹಿತ್ಯ ಸಮ್ಮೇಳನ ನಡೆದು, ಅಲ್ಲಿಯ ಕಾರ್ಯಕಲಾಪಗಳ
ಸ್ವರೂಪ ಬದಲಾಗಿ ವಿಮರ್ಶೆಗೆ ಪ್ರಾಧಾನ್ಯ ದೊರಕಿತು. ಮೂರನೆಯದಾಗಿ
ಹದಗೆಟ್ಟಿದ್ದ ಪರಿಷತ್ತಿನ ಆರ್ಥಿಕಸ್ಥಿತಿಯನ್ನು ಇವರು ಉತ್ತಮಪಡಿಸಿದರು.
ನಾಲ್ಕನೆಯದಾಗಿ 1968 ರಲ್ಲಿ ಪರಿಷತ್ತಿಗೆ ಇವರು ನೂತನ ಅಂಗರಚನೆಯನ್ನು
ಒದಗಿಸಿದರು. ಐದನೆಯದಾಗಿ ಇವರು ಪರಿಷತ್ತಿಗೆ ಕೆಲವು ದತ್ತಿಗಳನ್ನು ತಂದರು.
ನನಗೆ ನೆನಪಿರುವ ಇವರ ಸ್ಥೂಲವಾದ ಕಾರ್ಯರೇಖೆ ಇದು. ಇನ್ನೂ ಅನೇಕ
ಕಾರ್ಯಗಳು ಇವರ ಕಾಲದಲ್ಲಿ ಪರಿಷತ್ತಿನಲ್ಲಿ ಜರುಗಿರಬೇಕು. ಇನ್ನು ಏನೇ
ಇರದಿದ್ದರೂ ಒಬ್ಬನ ಯಶೋದುಂದುಭಿಯನ್ನು ಮೊಳಗಿಸಲು ಮೇಲೆ ನಿರೂಪಿಸಿದಷ್ಟೇ
ಕಾರ್ಯಗಳು ಸಾಕು. ಇನ್ನೊಂದು ನೆನಪಿನಲ್ಲಿಡಬೇಕಾದ ಅಂಶ. ಶ್ರೀಯುತರು
ಪರಿಷತ್ತಿನ ಅಧ್ಯಕ್ಷರಾಗಿದ್ದಾಗಲೇ ಪರಿಷತ್ತಿನ ಮಾಸಪತ್ರಿಕೆಯಾಗಿದ್ದ 'ಕನ್ನಡ
ನುಡಿಗೆ' ಸಂಪಾದಕರೂ ಆಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದೇ ಸಂದರ್ಭದಲ್ಲಿ ಶ್ರೀಯುತರು ನಾಡಿನ ಕೆಲವು ಮುಖ್ಯ ಸಮಿತಿಗಳ ಸದಸ್ಯರಾಗಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 1954 ರಿಂದ ಪ್ರೊಫೆಸರ್ ವೆಂಕಟಸುಬ್ಬಯ್ಯನವರು ಪರಿಷತ್ತು ಪ್ರಕಟಿಸುತ್ತಿರುವ ಕನ್ನಡ ನಿಘಂಟಿನ ಸಮಿತಿಯ ಸದಸ್ಯರಾಗಿದ್ದು ಈಗ ಅದರ ಪ್ರಧಾನ ಸಂಪಾದಕರಾಗಿದ್ದಾರೆ. ಈ ವಿಷಯವಾಗಿ ಮುಂದೆ ಎರಡು ಮಾತುಗಳನ್ನು ಹೇಳಲಾಗುವುದು. 1965 ರಿಂದ 67 ರವರೆಗೆ ಇವರು ವಿಶ್ವಕೋಶದ ಸಮಿತಿಯ ಸದಸ್ಯರಾಗಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಶ್ರೀಯುತರು ಸಲ್ಲಿಸಿರುವ ಸೇವೆ ಅಮೂಲ್ಯವಾದುದು, ಗಣನೀಯವಾದುದು. 1975 ರಿಂದ ನಿವೃತ್ತರಾಗುವವರೆಗೆ ಉಪನ್ಯಾಸ ಸಮಿತಿಯ ಸದಸ್ಯರಾಗಿ ಈ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಸಭೆಗಳ ಸದಸ್ಯರಾಗಿ ಕನ್ನಡ ಪಠ್ಯಪುಸ್ತಕ ಸಮಿತಿಯ ಪರೀಕ್ಷೆಯ ಸಮಿತಿಯ ಸದಸ್ಯರಾಗಿಯೋ ಇಲ್ಲವೆ ಅಧ್ಯಕ್ಷರಾಗಿಯೋ ಸೇವೆ ಸಲ್ಲಿಸಿ ತಮ್ಮ ಪ್ರಭಾವ ಮುದ್ರೆಯನ್ನೊತ್ತಿದ್ದಾರೆ. ಪರಿಷತ್ತಿನ ಪದಾಧಿಕಾರಿಗಳಾಗಿದ್ದಾಗ ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ದೆಹಲಿ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಕನ್ನಡದ ಕೆಲಸಕ್ಕೆ ನೆರವಾಗಿದ್ದಾರೆ. 1965 ರಿಂದ ಕೇಂದ್ರ ಭಾಷಾ ಸಮಿತಿಯ ಸದಸ್ಯರಾಗಿದ್ದಾರೆ. ಮೇಲಿನ ವಿವರಣೆಯಿಂದ ವಿದ್ವತ್ ಪ್ರಪಂಚದಲ್ಲಿ ಶ್ರೀಯುತರ ಪ್ರಭಾವದ ವ್ಯಾಪ್ತಿಯ ಸ್ವರೂಪ ತಕ್ಕಮಟ್ಟಿಗಾದರೂ ಗ್ರಹಿಕೆಯಾಗುವುದೆಂದು ನನ್ನ ಭಾವನೆ.

ಆಚಾರ್ಯ ಶ್ರೀಯವರು ತಮ್ಮ ಶಿಷ್ಯರಿಗೆ ಒಪ್ಪಿಸಿಕೊಟ್ಟ ಕರ್ತವ್ಯಗಳಲ್ಲಿ ಕನ್ನಡದ ಪ್ರಚಾರವೂ ಒಂದಾಗಿತ್ತು. ವಿದ್ಯಾರ್ಥಿಯಾಗಿದ್ದಾಗ ಬೀಳ್ಕೊಡಿಗೆಯ ಸಮಾರಂಭವೊಂದರಲ್ಲಿ ತಾವು ಮನಃಪೂರ್ವಕವಾಗಿ ಈ ಕೆಲಸವನ್ನು ಮಾಡುವುದಾಗಿ ಆಚಾರ್ಯರಿಗೆ ನುಡಿದಿದ್ದರು. ಆದರೆ ಸಾಹಿತ್ಯ ಪ್ರಚಾರ ನುಡಿಯ ಸೇವೆ ಎಲ್ಲರಿಗೂ ದಕ್ಕತಕ್ಕವುಗಳಲ್ಲ. ಅದಕ್ಕೆ ವಿಶೇಷ ಯೋಗ್ಯತೆ ಬೇಕು. ಈ ಸಂದರ್ಭದಲ್ಲಿ ಕಾಳಿದಾಸನ ಪದ್ಯವೊಂದು ನೆನಪಿಗೆ ಬರುತ್ತದೆ.

ಶ್ಲಿಷ್ಟಾಕ್ರಿಯಾ ಕಸ್ಯಚಿದಾತ್ಮಸಂಸ್ಥಾ
ಸಂಕ್ರಾಂತಿರನ್ಯಸ್ಯ ವಿಶೇಷಯುಕ್ತಾ
ಯಸ್ಯೋಭಯಂ ಸಾಧುಸಶಿಕ್ಷಕಾಣಾಂ
ಧುರಿಪ್ರತಿಷ್ಠಾಪಯಿತವ್ಯ ಏವ

(ವಿದ್ಯೆ ಕೆಲವರಲ್ಲಿ ಅಂತರ್ಗತವಾಗಿರುತ್ತದೆ. ಇನ್ನೊಬ್ಬರ ಮನಸ್ಸನ್ನು ಹೋಗುವಂತೆ ಬೋಧಿಸುವುದು ಮತ್ತೊಬ್ಬನ ವಿಶೇಷ. ಇವೆರಡು ಶಕ್ತಿಗಳನ್ನೂ ಒಳಗೊಂಡವನು ಶಿಕ್ಷಕರಲ್ಲಿ ಅಗ್ರಗಣ್ಯ.)

ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರಂಥವರನ್ನು ನೋಡಿ ಕಾಳಿದಾಸ ಈ ಪದ್ಯವನ್ನು ಕಟ್ಟಿರಬೇಕು. ಇವರು ವಿದ್ವಾಂಸರು, ನುರಿತ ಶಿಕ್ಷಕರು, ಒಳ್ಳೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗ್ಮಿಗಳು. ವಿಶ್ವವಿದ್ಯಾನಿಲಯದಲ್ಲಿ ಇವರು ಅಧ್ಯಾಪಕರಾಗಿದ್ದಾಗ ಸಂಸ್ಥಾನದ ಅನೇಕ ಸ್ಥಳಗಳಿಗೆ ಹೋಗಿ ಪ್ರಚಾರೋಪನ್ಯಾಸಗಳನ್ನು ಮಾಡಿ ಪಳಗಿದ್ದರು. ಪರಿಷತ್ತಿನ ಕಾರ್ಯದರ್ಶಿಗಳಾದಾಗ, ಅಧ್ಯಕ್ಷರಾದಾಗ ಇವರ ಭಾಷಣಕಲೆಗೆ ಪುಟವಿಟ್ಟಂತಾಯಿತು. ಕನ್ನಡನಾಡಿನ ಉದ್ದಗಲ ಅನೇಕ ಬಾರಿ ಸಂಚಾರ ಮಾಡಿ, ನಾಡುನುಡಿಗಳ ವಿಷಯವಾಗಿ ಉಪನ್ಯಾಸಗಳನ್ನು ಮಾಡಿ ಜನರಲ್ಲಿ ಕನ್ನಡದ ಅಭಿಮಾನವನ್ನು ಪ್ರಚೋದನೆಗೊಳಿಸಿದ್ದಾರೆ. ಹೊರನಾಡಿನ ಕನ್ನಡಿಗರೊಡನೆ ಸಂಪರ್ಕವನ್ನು ಬೆಳೆಸಿ, ಸ್ನೇಹವನ್ನು ಬೆಸೆಸಿದ್ದಾರೆ. ಈ ಮೂಲಕ ಅವರು ತಮ್ಮ ಗುರುಗಳಿಗೆ ಕೊಟ್ಟ ಮಾತನ್ನು ನೂರಕ್ಕೆ ನೂರರಷ್ಟು ಸಾರ್ಥಕಗೊಳಿಸಿದ್ದಾರೆ. ಇಂಥ ಎಷ್ಟೋ ವಿಷಯಗಳಲ್ಲಿ ಇವರೂ ಮತ್ತು ಪ್ರೊಫೆಸರ್ ಎಸ್. ವಿ. ಪರಮೇಶ್ವರ ಭಟ್ಟರೂ ನನ್ನನ್ನು ಹಿಂದಕ್ಕೆ ಹಾಕಿರುವುದು ಹೆಮ್ಮೆಯ ವಿಷಯ. ಪುಸ್ತಕದ ಓದಿಗಿಂತ, ನೋಟ, ಜನಸಂಪರ್ಕ, ಲೋಕಾನುಭವ ಶ್ರೇಷ್ಠವೆಂದು ಹೇಳುವ ಷೇಕ್ಸ್‌ಪಿಯರ್ ಮಹಾಕವಿಯ 'ರಿಚ್ ಐಸ್' (Rich Eyes) ಪದಪುಂಜ ಇವರಲ್ಲಿ ಸಾರ್ಥಕ್ಯವನ್ನು ಪಡೆದಿದೆ.

ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರ ವಿದ್ವತ್ತು, ಅನುಭವ, ಅನೇಕ ಭಾಷೆಗಳಲ್ಲಿ ಅವರಿಗಿರುವ ಸಲಿಗೆ — ಈ ಗುಣಗಳಿಗೆ ಕಲಶವಿಟ್ಟಂತೆ ಈಗ ಅವರು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಲು ಉದ್ದೇಶಿಸಿರುವ ವಿಸ್ತಾರವಾದ ಪ್ರಮಾಣಭೂತವಾದ ಕನ್ನಡ ನಿಘಂಟಿಗೆ ಪ್ರಧಾನಸಂಪಾದಕರಾಗಿದ್ದಾರೆ. ಈ ಕೋಶದ ವಿಸ್ತಾರ, ವೈವಿಧ್ಯ, ಪ್ರಾಮಾಣ್ಯ, ಇದರ ಸಂಯೋಜನೆಯಲ್ಲಿ ಒದಗಬಹುದಾದ ಕಷ್ಟಗಳನ್ನು ಕುರಿತು ಇಲ್ಲಿ ಒಂದೆರಡು ಮಾತುಗಳನ್ನಾಡಿದರೆ ಅದು ಅಪ್ರಕೃತವೆನಿಸಲಾರದು. ಭಾಷೆ ನಿಂತ ನೀರಲ್ಲ: ಹರಿಯುವ ನದಿ. ನದಿಯಲ್ಲಿ ಪ್ರವಾಹ ಉಕ್ಕೇರಿಬಂದಾಗ ನೀರು ತಿಳಿಯಾದಾಗ ನೀರಿನ ಜೊತೆಗೆ ಕಸಕಡ್ಡಿಗಳು ಹುಲ್ಲು ಜೊಂಡುಗಳೂ ತೇಲಿಬರುವುವಷ್ಟೆ. ನಾವು ಆಡುವ ದಿನನಿತ್ಯದ ಭಾಷೆಗೆ ಹೊಸ ಹೊಸ ಶಬ್ದಗಳು ಬಂದು ದುಮುಕುತ್ತಿರುತ್ತವೆ. ಒಂದು ಕೋಶ ಭಾಷೆಯ ಶಬ್ದಗಳನ್ನು ಸಂಪೂರ್ಣವಾಗಿ ಹಿಡಿದಿಡಲಾರದು. ಕೇಶಿರಾಜನ ಮಾತಿನಂತೆ 'ಶಬ್ದ ಪಾರಂ ಆರ್ಗಂ ಅಶಕ್ಯಂ': ಆದರೂ ವಿದ್ವಾಂಸರ, ಜನಸಾಮಾನ್ಯರ ಉಪಯೋಗಕ್ಕೆ ಅನುಕೂಲವಾದ ಪ್ರಮಾಣಭೂತವಾದ ನಿಘಂಟಿನ ಕನಸನ್ನು ನಾಡ ಹಿರಿಯರು ಕಂಡು 1943 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಒಂದು ಆಕಾರವನ್ನು ಕೊಡಲು ಯತ್ನಿಸಿದರು. ಕೋಶದ ರಚನೆಗೆ ಮೊದಲು ಪ್ರಯೋಗ ಸಂಗ್ರಹಕ್ಕಾಗಿ ಪ್ರಮಾಣ ಗ್ರಂಥಪಟ್ಟಿ ಸಿದ್ಧವಾಗಬೇಕು. ಪ್ರಯೋಗ ಸಂಗ್ರಹವಾಗಬೇಕು. ಬೆಟ್ಟದಂತೆ ರಾಶಿಯಾಗಿ ಬೀಳುವ ಪ್ರಯೋಗಗಳನ್ನು ವಿಂಗಡಿಸಬೇಕು. ಪದಗಳನ್ನು ಸಿದ್ಧಪಡಿಸಿ, ಅರ್ಥ ಬರೆಯುವಾಗ ಸಲೀಸಾಗಿ ಹೋಗುವ ಶಬ್ದರಥ ಮುಗ್ಗರಿಸಿ ನಿಲ್ಲುವುದುಂಟು. ಒಂದು ಅಜ್ಞಾತಪದದ ಅರ್ಥದ ಮೂಲವನ್ನು ಹುಡುಕುತ್ತ ಹೊರಟಾಗ ಆ ಪದ

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ಅರ್ಥವನ್ನು ಬಿಟ್ಟುಕೊಡಲು ಗಂಟೆಗಳನ್ನು ದಿನಗಳನ್ನು ನುಂಗಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಒಂದು ಅಜ್ಞಾತಪದದ ಅರ್ಥ ತಿಳಿದಾಗ ನಿಘಂಟುಕಾರನಿಗೆ ಆಗುವ ಸಂತೋಷ ಪುತ್ರೋತ್ಸವಕ್ಕೆ ಸಮಾನ. ನಿಘಂಟಿನ ಕೆಲಸ ಅಸಿಧಾರಾವ್ರತ. ಸಮಿತಿ ಇರಬಹುದು. ಸಂಪಾದಕನಿಗೆ ಸಹಾಯಕರಿರಬಹುದು. ಆದರೆ ನಿಘಂಟಿನ ಕೊನೆಯ ಹೊಣೆ ಪ್ರಧಾನಸಂಪಾದಕನದು. ಸುಸಮರ್ಥರಾದ ವಿದ್ವಾಂಸರನ್ನೊಳಗೊಂಡ ಸಮಿತಿಯ ಸಹಾಯದಿಂದ, ವಿದ್ಯಾದಿಗ್ಗಜಗಳಂತಿದ್ದ ಪ್ರಧಾನಸಂಪಾದಕರ ನೆರವಿನಿಂದ ಕನ್ನಡ ನಿಘಂಟಿನ ಮೊದಲ ಸಂಪುಟವನ್ನು ಪರಿಷತ್ತು ಹೊರತಂದಿದೆ. ಪ್ರಧಾನಸಂಪಾದಕರಿಗೆ ಕನ್ನಡದಲ್ಲಿ, ಸಂಸ್ಕೃತದಲ್ಲಿ, ಪ್ರಪಂಚದ ಬೇರೆ ಕಡೆ ನಡೆದಿರುವ ಕೆಲಸವನ್ನು ದೃಷ್ಟಿಸಲು ಇಂಗ್ಲೀಷ್ ಭಾಷೆಯಲ್ಲಿ ಪಾಂಡಿತ್ಯವಿರಬೇಕೆಂದು ನಿರೀಕ್ಷಿಸಿದರೆ ಅದೇನೂ ಆಶ್ಚರ್ಯವಲ್ಲ. ಜೊತೆಗೆ ದ್ರಾವಿಡಭಾಷೆಗಳ ಸಲಿಗೆಯಿದ್ದರೆ ನಿಘಂಟಿನ ಕೆಲಸಕ್ಕೆ ಅದು ಉಪಯುಕ್ತ. ಭಾರತದ ಬೇರೆ ಭಾಷೆಗಳ ಪರಿಚಯ ಪ್ರಧಾನ ಸಂಪಾದಕನಿಗಿದ್ದರೆ ಅದು ಅಪೇಕ್ಷಣೀಯವೇ. ಇಂಥ ಯೋಗ್ಯತೆಯನ್ನು ಹೊಂದಿದ್ದ ಹಿಂದಿನ ಪ್ರಧಾನಸಂಪಾದಕರನ್ನು ನೆನೆದರೆ ಇದರ ಹೊಣೆಯನ್ನು ಹೊರಲು ಮುಂದೆ ಬರುವ ತರುಣಸಂಪಾದಕನು ಎರಡು ಬಾರಿ ಯೋಚಿಸಬೇಕಾಗುತ್ತದೆ. ಅವನ ಎದೆ ನಡುಗುತ್ತದೆ. ನಿಘಂಟಿನ ಈ ಪ್ರಧಾನಸಂಪಾದಕತ್ವದ ಹೊಣೆ ಹೊರುವ ಪ್ರಸಂಗ ಬಂದಾಗ ಪ್ರೊಫೆಸರ್ ವೆಂಕಟಸುಬ್ಬಯ್ಯನವರು ಜಗ್ಗಲಿಲ್ಲ; ಕುಗ್ಗಲಿಲ್ಲ. ಅದಕ್ಕೆ ಪ್ರತಿಯಾಗಿ ಹೊಸಹುರುಪಿನಿಂದ ಕಾರ್ಯವನ್ನು ಕೈಕೊಂಡರು. ಇದಕ್ಕೆ ಕಾರಣ ಇಷ್ಟೆ—ನನಗೆ ತಿಳಿದಂತೆ ನಿಘಂಟುರಚನೆಗೆ ಶ್ರೀ ವೆಂಕಟಸುಬ್ಬಯ್ಯನವರು ಪಳಗಿದ ಹಳೆಯ ಹುಲಿ. ನಿಘಂಟು ಸಮಿತಿಗೆ ಮೊದಲಿನಿಂದಲೂ ಅವರು ಸದಸ್ಯರು. ಅಧಿಕಾರದ ನಿಮಿತ್ತವೂ ಅವರು ಸಮಿತಿಯಲ್ಲಿದ್ದರು. ಆದ್ದರಿಂದ ನಿಘಂಟುರಚನೆಯ ವಿಷಯ ಅವರಿಗೆ ಕರತಳಾಮಲಕ. ಈಗಂತೂ ನಿವೃತ್ತರಾಗಿರುವ ಅವರು ತಮ್ಮ ಶಕ್ತಿ ಸತ್ವಗಳನ್ನೆಲ್ಲ ನಿಘಂಟಿನ ಕೆಲಸಕ್ಕೆ ವಿನಿಯೋಗಿಸಿ ಅದನ್ನು ಅಸಿಧಾರಾವ್ರತವೆನ್ನುವಂತೆ ಸಾಧಿಸುತ್ತಿದ್ದಾರೆ. ಇಂಥ ಶ್ರೇಷ್ಠವಿದ್ವಾಂಸರು ಈ ಕೆಲಸಕ್ಕೆ ದೊರಕಿರುವುದು ಪರಿಷತ್ತಿನ ಪುಣ್ಯ.

ನೂರು ವರುಷ ಕೆಲಸಮಾಡುತ್ತ—ಒಳ್ಳೆಯ ಕೆಲಸಮಾಡುತ್ತ—ದೃಢಕಾಯನಾಗಿ ಬದುಕು ಎಂದಲ್ಲವೇ ಈಶಾವಾಸ್ಯ ಉಪನಿಷತ್ತಿನ ಸಂದೇಶ? ಸತ್ಕಾರ್ಯವನ್ನು ಮಾಡಿದವರಿಗೆ ಶುಭವಾಗುತ್ತದೆ; ಲೋಕ ಅವರ ಸತ್ಕಾರ್ಯವನ್ನು ಗುರುತಿಸುತ್ತದೆ ಎನ್ನುವ ಅಂಶ ನನ್ನ ಬಾಳಿನಲ್ಲಿ ಎಷ್ಟೋ ವೇಳೆ ನಿದರ್ಶನಕ್ಕೆ ಬಂದಿದೆ. ಪ್ರೊಫೆಸರ್ ವೆಂಕಟಸುಬ್ಬಯ್ಯನವರೇ ಈ ಮಾತಿಗೆ ಸಾಕ್ಷಿ. ಅವರ ಉತ್ತಮವಾದ ಕೆಲಸವನ್ನು ಮನಸ್ಸಿಗೆ ತಂದುಕೊಂಡು ನಮ್ಮ ಜನ ಅವರನ್ನು ಸನ್ಮಾನಿಸಿದ್ದಾರೆ; ಗೌರವಿಸಿದ್ದಾರೆ. ಇಂಥವರಿಂದ ತಾನೆ ಈ ಸನ್ಮಾನಗಳಿಗೆ ಸಾರ್ಥಕ್ಯ? ಇವರಿಗೆ ಸಂದ ಗೌರವಗಳಲ್ಲಿ ಕೆಲವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. 1965 ರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಮಿತ್ರರು ಅವಿರೋಧವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದಾಗ ವಿಜಯಾ ಕಾಲೇಜಿನ, ಬೆಂಗಳೂರು ಹೈಸ್ಕೂಲಿನ ಆಡಳಿತ ವರ್ಗ, ಅಧ್ಯಾಪಕರು ವಿದ್ಯಾರ್ಥಿಗಳು ಇವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಗೌರವಿಸಿದರು. 1966 ರಲ್ಲಿ ಚಿಕ್ಕನಾಯಕನಹಳ್ಳಿಯ ಕರ್ನಾಟಕ ಸಂಘ, 1967 ರಲ್ಲಿ ಮಂಡ್ಯದ ಕರ್ನಾಟಕ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿದಾಗ ಆ ಕರ್ನಾಟಕ ಸಂಘ, 1973 ರಲ್ಲಿ ಇವರ ಅರವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಇವರ ವಿದಾರ್ಥಿಗಳು ಕೊಟ್ಟ ಬಿನ್ನವತ್ತಳೆಗಳು ಮುಖ್ಯವಾದುವು. ಅಲ್ಲದೆ 1970ರಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಆ ಮಹಾ ಸಂಸ್ಥೆ ಇವರ ಕಾರ್ಯವನ್ನು ಮನಗಂಡು ಸನ್ಮಾನಿಸಿತು. ಇವೇ ಅಲ್ಲದೆ ನಾಡಿನ ಅನೇಕ ಭಾಗಗಳಲ್ಲಿ ಇವರಿಗೆ ಗೌರವ ಸಂದಿದೆ. ಎಲ್ಲಕ್ಕೂ ಮಿಗಿಲಾಗಿ ಇವರು ಅಧ್ಯಕ್ಷರಾದಾಗ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು ತಮ್ಮ ಮೆಚ್ಚಿಗೆ ಸಂತೋಷಗಳನ್ನು ವ್ಯಕ್ತಪಡಿಸಿ ಆಶೀರ್ವದಿಸಿದುದು ಅತ್ಯಮೂಲ್ಯವಾದ ಗೌರವವೆಂದು ನಾನು ಭಾವಿಸುತ್ತೇನೆ.

ಪ್ರೊ. ವೆಂಕಟಸುಬ್ಬಯ್ಯನವರಲ್ಲಿ ವ್ಯಾಸಂಗಮಾಡಿ. ಅವರ ವಾತ್ಸಲ್ಯಕ್ಕೆ ಪಾತ್ರರಾದ ಅವರ ಶಿಷ್ಯರನೇಕರು ಜೀವನದಲ್ಲಿ ಅನೇಕ ದೊಡ್ಡ ಸ್ಥಾನಗಳನ್ನು ಅಲಂಕರಿಸಿರುತ್ತಾರೆ. ಅವರೆಲ್ಲರೂ ಸೇರಿ ತಮ್ಮ ಗುರುವಿಗೆ ಕೃತಜ್ಞತೆಯ ಕುರುಹಾಗಿ ಅರ್ಪಿಸಲಿರುವ ಈ ಅಭಿನಂದನಗ್ರಂಥದ ಗೌರವ ಚಿರಕಾಲ ನಿಲ್ಲುತ್ತದೆ.

ಇನ್ನೊಂದು ವಿಷಯ. ಪ್ರೊಫೆಸರ್ ವೆಂಕಟಸುಬ್ಬಯ್ಯನವರು ಇತರರಿಗೆ ಸಭೆ ಸನ್ಮಾನಗಳನ್ನು ಏರ್ಪಡಿಸಿ ಅವರನ್ನು ಸಂತೋಷಗೊಳಿಸಿ, ತಾವು ತೃಪ್ತಿಗೊಂಡಿರುವುದೇನೋ ನಿಜ. ಹಾಗೆಯೇ ಇವರ ಪೈದುಷ್ಯವನ್ನು ಕಂಡುಕೊಂಡು ಅನೇಕ ಕಡೆಗಳಲ್ಲಿ ಸಹೃದಯರು ಇವರನ್ನು ಅಧ್ಯಕ್ಷಪಟ್ಟದಲ್ಲಿ ಕುಳ್ಳಿರಿಸಿದ್ದಾರೆ. ಆ ಸಂದರ್ಭಗಳಲ್ಲಿ ಕೆಲವು ಇವು. 1972 ರಲ್ಲಿ ಚಿಕ್ಕಮಗಳೂರಿನ ಜಿಲ್ಲಾ ಸಾಹಿತ್ಯ ಗೋಷ್ಠಿಗೆ ಅಧ್ಯಕ್ಷರಾಗಿದ್ದರು. ಹಾಗೆಯೇ 1973 ರಲ್ಲಿ ಶೃಂಗೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅಗ್ರಾಸನವನ್ನು ಅಲಂಕರಿಸಿದ್ದರು. ಅಷ್ಟೇಕೆ, ಮೊನ್ನೆ 1975 ಅಕ್ಟೋಬರಿನಲ್ಲಿ ಚಿತ್ರದುರ್ಗದಲ್ಲಿ ನಡೆದ ಜಗದ್ಗುರು ಶ್ರೀ ಮುರುಘರಾಜೇಂದ್ರರು ಏರ್ಪಡಿಸಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಅಗ್ರಾಸನವನ್ನು ವಹಿಸಿದ್ದರು. ಇದೆಲ್ಲ ಶ್ರೀಯುತರ ವಿದ್ವತ್ತು, ಜನಪ್ರಿಯತೆ, ಶಿಷ್ಯಬಾಹುಳ್ಯ ಸುಹೃತ್‌ವರ್ಗದ ವಾತ್ಸಲ್ಯಗಳ ದ್ಯೋತಕವಾಗಿದೆ. ಮೊನ್ನೆ ಬೆಂಗಳೂರಿನಲ್ಲಿ ನಡೆದ ಶೃಂಗೇರಿ ಮಠದ ಧರ್ಮ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ಶ್ರೀಯುತರು ಮತ್ತೆ ಆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ 'ಶಾಂತರಸ'ವನ್ನು ಕುರಿತು ಸ್ವಾರಸ್ಯವಾದ ಭಾಷಣ ಮಾಡಿದರು. ಇವರನ್ನು ತಮ್ಮ ಸಂಸ್ಥೆಗೆ ಕರೆದು ಸನ್ಮಾನಿಸುವುದು ತಮಗೇ ಗೌರವವೆಂದು ಅನೇಕ ಸಂಸ್ಥೆಗಳು ಭಾವಿಸಿವೆ. ಹೀಗೆ ಗೌರವಿಸಿರುವ ಸಂಸ್ಥೆಗಳ ಹೆಸರು ಅನೇಕವಿವೆ. 'ಮನುಷ್ಯನಂತೆ ಮನಸ್ಸು', 'ಮನಸ್ಸಿನಂತೆ ಮಹಾದೇವ' ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾದೆಗಳು ಕನ್ನಡದಲ್ಲಿ ಪ್ರಚಾರದಲ್ಲಿವೆ. ನನ್ನ ಗೆಳೆಯರಂಥವರನ್ನು ನೋಡಿ ಈ ಗಾದೆ ಹುಟ್ಟಿರಬೇಕೆಂದು ತೋರುತ್ತದೆ. ಈ ವ್ಯಕ್ತಿಯ ಮತ್ತು ಅವರ ಪರಿಸರವ ಸುತ್ತಲೂ ನೈರ್ಮಲ್ಯ, ಪರಿಶುದ್ಧತೆ ತಾಂಡವವಾಡುತ್ತಿರುತ್ತವೆ. ನನಗೂ ನನ್ನ ಗೆಳೆಯರಿಗೂ ಆತ್ಮೀಯತೆ ಇದೆಯೆಂಬುದನ್ನು ಪುನರುಚ್ಚರಿಸಬೇಕಾಗಿಲ್ಲವಷ್ಟೆ. ಆದರೆ ತಪ್ಪು ಮಾಡಿದ ಹುಡುಗನಂತೆ ನಾನು ಅವರ ಮನೆಯನ್ನೂ, ಆಫೀಸನ್ನೂ ಪ್ರವೇಶಿಸುತ್ತೇನೆ. ಅಕ್ರಮ ಹಾಗೂ ಪುಸ್ತಕಗಳ ರಾಶಿ (ಓದುವ ಪುಸ್ತಕಗಳಲ್ಲ, ಮಾರಾಟ ಮಾಡುವ ಪುಸ್ತಕಗಳು) ಯ ನಡುವೆ ಬಿದ್ದು ಒದ್ದಾಡುವ ನನಗೆ ಇವರ ಮನೆಯನ್ನು ಪ್ರವೇಶಿಸಿದ ಕೂಡಲೇ ನಿರ್ಮಲವಾದ, ಗಂಭೀರವಾದ, ದೇವತಾ ವಾಸವನ್ನು ಹೊಕ್ಕ ಅನುಭವವಾಗುತ್ತದೆ. ಪಾದರಕ್ಷೆಗಳನ್ನು ಒಳಗೆ ತರಲು ಯಾರಿಗೂ ಮನಸ್ಸಾಗುವುದಿಲ್ಲ. ಪ್ರತಿಯೊಂದು ಪದಾರ್ಥವನ್ನೂ ಇಲ್ಲಿ ಕಲಾತ್ಮಕ ವಾಗಿ ಜೋಡಿಸಿ ಇಟ್ಟಿರುತ್ತದೆ. ಧೂಳಿನ ಕಣವೊಂದೂ ಅಲ್ಲಿ ನಮ್ಮ ಕಣ್ಣಿಗೆ ಬೀಳುವುದಿಲ್ಲ. ಪ್ರೊಫೆಸರ್ ವೆಂಕಟಸುಬ್ಬಯ್ಯನವರ ದಿವಾನಖಾನೆಯಲ್ಲಿ ಮೊದಲು ನನ್ನ ಕಣ್ಣನ್ನು ಸೆಳೆಯುವುದು ಪುಸ್ತಕಗಳು. ನಾನು ಕಂಡು ಕೇಳದ ಎಷ್ಟೋ ಇಂಗ್ಲೀಷ್ ಪತ್ರಿಕೆಗಳು ಪುಸ್ತಕಗಳು ಇವರ ಮೇಜಿನ ಮೇಲೆ ಇರುತ್ತವೆ. ಇವರು ಅಷ್ಟೇನೂ ಶ್ರೀಮಂತರಲ್ಲದಿದ್ದರೂ, ಇಂಥ ಗ್ರಂಥಗಳನ್ನು ಕೊಂಡು ಓದುತ್ತಾರೆಂಬುದು ಆಶ್ಚರ್ಯದ ಸಂಗತಿ. ಇದರಲ್ಲಿ ಆಶ್ಚರ್ಯವೇನಿಲ್ಲ. ಕನ್ನಡ ಬೋಧಕನಿಗೆ ಇಂಗ್ಲೀಷ್ ಸಂಸ್ಕೃತಗಳಲ್ಲಿ ಗಾಢವಾದ ವಿದ್ವತ್ತಿರಬೇಕೆನ್ನುವ ಅಚಲವಾದ ನಂಬಿಕೆಯೇ ಈ ಗ್ರಂಥಗಳು ಇವರ ಮೇಜಿನ ಮೇಲಿರಲು ಕಾರಣ. ಇದು ಹಾಗಿರಲಿ, ಮಿಕ್ಕವರ ಮಾತು ಹೇಗೋ ? ಬೆಂಗಳೂರಿಗೆ ಹೋದಾಗ, ಕಾಫಿಯ ಮೇಲೆ ಅತಿಯಾದ ಮೋಹವಿರುವ ನಾನು ಬೆಳಿಗ್ಗೆ ಹೊತ್ತಿಗೆಮುಂಚೆ ಇವರ ಮನೆಗೆ ಹೋಗುವ ಪದ್ಧತಿಯುಂಟು. ನಾನು ಬಂದಿರುವ ಸುಳಿವನ್ನರಿತ ಇವರ ಶ್ರೀಮತಿ ಲಕ್ಷ್ಮಮ್ಮ ನವರು ನಗುಮುಖದಿಂದ ಸುಖೋಷ್ಣವಾದ ಕಾಫಿಯನ್ನು ತಂದುಕೊಟ್ಟು ನನ್ನ ಮತ್ತು ಮಕ್ಕಳ ಯೋಗಕ್ಷೇಮವನ್ನು ವಿಚಾರಿಸುತ್ತಾರೆ. ಪಾತ್ರೆ ಶುಭ್ರ, ಕಾಫಿ ಅಮೃತ ; ವಿಶ್ವಾಸ ಅಪರಿಮಿತ. ಈ ವರ್ಣನೆ ಅತ್ಯುಕ್ತಿಯ ಅತಿರೇಕವನ್ನು ಮುಟ್ಟಿ ತೆಂದು ಯಾರಿಗಾದರೂ ಎನಿಸಬಹುದು. ಆದರೆ ಇದು ಸ್ವಭಾವೋಕ್ತಿ. ಅರವತ್ತರ ಗಡಿಯನ್ನು ದಾಟಿರುವ ನಾನು ಅತ್ಯುಕ್ತಿಯ ಮಾತುಗಳನ್ನಾಡಿ ಯಾವ ಪುರುಷಾರ್ಥ ವನ್ನು ಸಾಧಿಸಬೇಕಾಗಿದೆ ? ದಿವಾನಖಾನೆ ಮಾತ್ರ ಸ್ವಚ್ಛವೋ ಎಂದು ಇವರ ಮನೆಯನ್ನು ಕಣ್ಣಿಟ್ಟು ನೋಡಿದಾಗ ಎಲ್ಲಕಡೆ ಮೇಲಿನ ಅನುಭವವನ್ನೆ ಪಡೆದಿದ್ದೇನೆ. ಊಟದಲ್ಲಿಯೂ ಅಷ್ಟೇ—ಅದೇ ಸ್ವಚ್ಛತೆ, ಧಾರಾಳ, ಪಾಕದಲ್ಲಿ ಸಿದ್ಧಹಸ್ತವನ್ನು ಕಂಡಿದ್ದೇನೆ. ನಾಲ್ಕುದಿನ ನಮ್ಮ ಮಕ್ಕಳನ್ನು ನಿಮ್ಮಲ್ಲಿ ತಂದುಬಿಡುತ್ತೇನೆ, ಅವರು ನಿಮ್ಮಿಂದ ಸ್ವಚ್ಛತೆಯನ್ನು ಕಲಿಯಲಿ ಎಂದು ಹೇಳಿದರೆ ಶ್ರೀಮತಿಯವರು ಮುಗುಳು ನಗುವುದುಂಟು. 'ಒಡಲೆರಡು ಅಸು ಒಂದು' ಎಂಬ ಸೂತ್ರದಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೆಡೆವಕ್ಕಿಗಳಂತಿರುವ ಈ ದಂಪತಿಗಳ ಸ್ವಚ್ಛತೆಯು ಧಾರಾಳಮನಸ್ಸಿನ ಧರ್ಮ ಸಮಾನವಾದುದು. ನನ್ನ ಮಿತ್ರರು ಧರಿಸುವ ಬಟ್ಟೆಬರೆಗಳಲ್ಲಿ, ಆಫೀಸಿನ ಕಾರ್ಯಗಳಲ್ಲಿ ಇದೇ ಮನೋಧರ್ಮ ಕಂಡುಬರುತ್ತದೆ. ವಿಸ್ತಾರವಾದ ಅವರ ಮೇಜಿನ ಮೇಲಿನ ಪುಸ್ತಕಗಳು ಓರಣವಾಗಿರುತ್ತವೆ. ಒಂದು ಕಾಗದವೂ ಬಾಕಿ ಇರುವುದಿಲ್ಲ. ಇವರೊಡನೆ ಕೆಲಸಮಾಡುವ ಯಾರೊಬ್ಬರೂ ಮುಖ ಗಂಟಿಕ್ಕಿಕೊಂಡಿರುವುದನ್ನು ನಾನು ಕಂಡಿಲ್ಲ. ಸಾರವತ್ತಾದ ಇತರರ ಮಾತಿಗೆ ಬೆಲೆ ಕೊಡುವುದೇ ನನ್ನ ಮಿತ್ರರ ಜಯಕ್ಕೆ ಕಾರಣವೆಂದು ನನ್ನ ಅಚಲವಾದ ನಂಬಿಕೆ.

ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರ, ಅವರ ಪತ್ನಿಯವರ ಮನೋಧರ್ಮವನ್ನು ಪ್ರತಿಬಿಂಬಿಸುವ ಒಂದು ಸಂದರ್ಭವನ್ನು ಇಲ್ಲಿ ಉಲ್ಲೇಖಿಸಿದರೆ ಅದು ಅಪ್ರಕೃತವೆನಿಸಲಾರದು. ಎರಡು ವರ್ಷಗಳಿಗೂ ಮಿಕ್ಕ ಹಿಂದಿನ ಮಾತು. ಜುಲೈ ತಿಂಗಳಲ್ಲಿ ಅವರ ಮನೆಗೆ ಹೋಗಿದ್ದಾಗ ಆ ಮಾತು ಈ ಮಾತುಗಳ ನಡುವೆ ಶ್ರೀ ವೆಂಕಟಸುಬ್ಬಯ್ಯನವರು '23-8-1973 ರಂದು ನನಗೆ ಅರವತ್ತು ತುಂಬುತ್ತದೆ. ನಾನು ನಿವೃತ್ತನಾಗುತ್ತೇನೆ' ಎಂದರು. ಇವರ ಮಾತು ನನ್ನನ್ನು ದಂಗುಬಡಿಸಿತು. ಕಾರಣ ಇಷ್ಟೇ, ಇನ್ನು ಮೂರು ತಿಂಗಳಾದ ಮೇಲೆ ನನಗೂ ಅರವತ್ತು ತುಂಬುವುದರಲ್ಲಿತ್ತು. ನಾನು ಕನ್ನಡ ಆನರ್ಸ್ ಸೇರಿದಾಗ ಇದ್ದ ಮೂವರು ವಿದ್ಯಾರ್ಥಿಗಳಲ್ಲಿ ನಾನೇ ಜಾಂಬುವಂತನೆಂದು ತಿಳಿದಿದ್ದೆ. ಏಕೆಂದರೆ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಎರಡುಬಾರಿ ಅನುತ್ತೀರ್ಣನಾಗಿ ಮೂರನೆಯ ಬಾರಿ ಉತ್ತೀರ್ಣನಾಗಿದ್ದೆ. ಮಿಕ್ಕ ಇಬ್ಬರು ವಿದ್ಯಾರ್ಥಿಗಳು ಒಂದೇ ನೆಗೆತಕ್ಕೆ ಆಗ ಬಹು ಕಷ್ಟವಾಗಿದ್ದ ಇಂಟರ್‌ಮೀಡಿಯೆಟ್ ಪ್ರವಾಹವನ್ನು ಈಜಿ ದಡ ಸೇರಿದ್ದರು. ನನ್ನ ಮಿತ್ರರು ನನಗಿಂತ ಎರಡು ವರ್ಷಗಳಿಗಿಂತ ಕಿರಿಯರೆಂಬ ಭ್ರಮೆ, ಪೂರ್ತಿ ನಿರಸನವಾಯಿತು. ತಕ್ಷಣ ನಾನು 'ಏನಯ್ಯ, ನಿನ್ನ ಮಕ್ಕಳು ಯಾವಾಗ ಶಾಂತಿ ಏರ್ಪಡಿಸುತ್ತಾರೆ ತಿಳಿಸು' ಎಂದೆ. ಹತ್ತಿರ ನಿಂತಿದ್ದ ಅವರ ಪತ್ನಿ ನಮಗೆ ಅದರ ಅವಶ್ಯಕತೆ ಕಾಣಲಿಲ್ಲ. ಇಷ್ಟೆಲ್ಲ ದಿವಸ, ವರ್ಷ ಅತಿಥಿಸತ್ಕಾರ ನಡೆಸಿ, ಅದರಲ್ಲಿ ಸುಖ ಕಂಡಿದ್ದೇನೆ. ಅದಕ್ಕಿಂತ ಹೆಚ್ಚಿನ ಶಾಂತಿ ಏನಿದೆ ?' ಎಂದರು. ವಚನ ಭಾರತದ ರಚನೆಯೇ ನಾನು ಮಾಡಿಕೊಂಡ ಅರವತ್ತನೆಯ ವರ್ಷದ ಶಾಂತಿಯೆಂದು ಹೇಳಿದ ನನ್ನ ಪ್ರಿಯಗುರುಗಳಾದ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ಮಾತು ನೆನಪಿಗೆ ಬಂದಿತು. ಈ ತಾಯಿಯ ವಿಷಯದಲ್ಲಿ ಮನಸ್ಸಿನಲ್ಲಿಯೇ ಗೌರವ ಮೂಡಿತು. ಶ್ರೀಯುತರು ವಿಧ್ಯುಕ್ತವಾಗಿ ಶಾಂತಿ ಮಾಡಿಕೊಳ್ಳದಿದ್ದರೂ ನನಗೆ ಅರವತ್ತು ತುಂಬಿದಾಗ, ಗೊತ್ತಾದ ದಿನ ಬೆಂಗಳೂರಿನಿಂದ ಕಾರಿನಲ್ಲಿ ಪತ್ನೀ ಸಮೇತರಾಗಿ ಬಂದು, ಶಾಲು ಹೊದಿಸಿ ಫಲಪುಷ್ಪಗಳನ್ನು ಕೊಟ್ಟು ಹರಸಿ ನನ್ನ ಕಣ್ಣುಗಳನ್ನು ತೇವಗೊಳಿಸಿದರು. ಅಂದಿನ ದೃಶ್ಯ ನನ್ನ ಮನಸ್ಸಿನಲ್ಲಿ ಹಸಿರಾಗಿ ನಿಂತಿದೆ. ಅವರು ವಿಶ್ವಾಸದಿಂದ ಕೊಟ್ಟ ಶಾಲನ್ನು ಗುರು ಕೊಟ್ಟ ವಸ್ತ್ರವೆಂದು ಇಂದಿಗೂ ಹೊದ್ದು ಕೊಳ್ಳುತ್ತಿದ್ದೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೊಂದು ವಿಷಯವನ್ನು ಇಲ್ಲಿ ನೆನೆದುಕೊಳ್ಳಬೇಕು. ಶ್ರೀಯುತರು ಪರಿಷತ್ತಿನ ಅಧಿಕಾರದಲ್ಲಿದ್ದಾಗ ಪ್ರಸಿದ್ಧ ಲೇಖಕರನ್ನೋ ಇಲ್ಲವೆ ಉದಯೋನ್ಮುಖ ಲೇಖಕರನ್ನೋ ಕಂಡಾಗ ಅವರಿಗೆ ಪ್ರೋತ್ಸಾಹದಾಯಕವಾದ ಮಾತುಗಳನ್ನು ಆಡಿ, ಬೆನ್ನುತಟ್ಟಿ, ತಮ್ಮ ಕೈಲಾದ ಸಹಾಯ ಮಾಡಿದ್ದಾರೆ. ನನ್ನ ಮಾಲೆಯ ಮೂಲಕ ಬೆಳಕಿಗೆ ಬಂದ ಒಬ್ಬಿಬ್ಬರು ಲೇಖಕರು ಈ ಮಾತಿಗೆ ಸಾಕ್ಷಿಯಾಗಿದ್ದಾರೆ. ಹೀಗೆಯೇ ಇತರರೂ ಇವರಿಂದ ನೆರವು ಪಡೆದಿರಲು ಸಾಕು.

ಉಮರ್ ಖಯಾಮ್ ಮಹಾಕವಿಯ, ಗುರುವಿನ ಸಾನ್ನಿಧ್ಯದಲ್ಲಿ ಕುಳಿತು ವ್ಯಾಸಂಗಮಾಡಿದ ಶಿಷ್ಯರು ಉನ್ನತ ಪದವಿಗೇರುವರೆಂಬ ಪ್ರತೀತಿ ಆ ಕಾಲದಲ್ಲಿ ರೂಢಮೂಲವಾಗಿತ್ತು. ಈ ಮಾತನ್ನು ಪ್ರೊಫೆಸರ್ ಟಿ. ಎಸ್. ವೆಂಕಣ್ಣಯ್ಯನವರ ವಿಷಯದಲ್ಲಿ, ಮುಖ್ಯವಾಗಿ ನಮ್ಮ ವಿಷಯದಲ್ಲಿ ಅನ್ವಯಿಸಬಹುದು. ಪ್ರೊಫೆಸರ್ ವೆಂಕಣ್ಣಯ್ಯನವರ ಆಶೀರ್ವಾದಬಲದಿಂದ ಪ್ರೊಫೆಸರ್ ಎಸ್. ವಿ. ಪರಮೇಶ್ವರ ಭಟ್ಟರು ಹಂತಹಂತವಾಗಿ ಏರಿ ಕೊನೆಗೆ ಮಂಗಳೂರಿನ ಮಂಗಳ ಗಂಗೋತ್ರಿಯಲ್ಲಿ ಸ್ನಾತಕೋತ್ತರ ಕನ್ನಡ ವಿಭಾಗದ ಪ್ರಾಚಾರ್ಯರಾದರು : ಕನ್ನಡ ವಿಭಾಗವನ್ನು ಅಲ್ಲಿ ಹುಟ್ಟಿಹಾಕಿ, ಬೆಳೆಸಿ ಅದು ಹೆಮ್ಮರವಾಗುವಂತೆ ಮಾಡಿದರು; ಆ ಮಹಾನ್ ಸಂಸ್ಥೆಯ ನಿರ್ದೇಶಕರಾದರು. ಈ ಮಾತು ಪ್ರೊಫೆಸರ್ ವೆಂಕಟಸುಬ್ಬಯ್ಯನವರಿಗೆ ಇನ್ನೂ ವ್ಯಾಪಕವಾಗಿ ಅನ್ವಯಿಸುತ್ತದೆ. ಅವಕಾಶಗಳೇ ಇಲ್ಲದಿದ್ದ ಅಥವಾ ಅತ್ಯಂತ ಮಿತವಾಗಿದ್ದ ಕಾಲದಲ್ಲಿ ಖಾಸಗಿಯ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿ, ಮೆಟ್ಟಿಲು ಮೆಟ್ಟಿಲಾಗಿ ಉದಯ ಪರಂಪರೆಯನ್ನು ಹೊಂದಿ, ಅದೇ ಸಂಸ್ಥೆಯ ಒಂದು ಶಾಖೆಯಾದ ಸಂಜೆ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾಗುವುದು ಈ ಸ್ಪರ್ಧೆಯ ದಿವಸಗಳಲ್ಲಿ ಸಾಮಾನ್ಯವಾದ ಮಾತಲ್ಲ. ನಿವೃತ್ತರಾದಮೇಲೆ ಹಿಂದಿನ ದಿನಗಳ ಅನುಭವಗಳನ್ನು ಮೆಲುಕು ಹಾಕುವುದರಲ್ಲಿ ಸುಖವಿರುವುದಾದರೂ ಆ ದಿನಗಳ ಕಷ್ಟನಷ್ಟಗಳನ್ನು ಅನುಭವಿಸಿದ ವ್ಯಕ್ತಿಯೇ ಹೇಳಬೇಕು. ಆ ಮಾತು ಹಾಗಿರಲಿ, ಈ ಮೊದಲೇ ತಿಳಿಸಿರುವಂತೆ ನಮ್ಮ ಮಿತ್ರರು ಕಾಲೇಜಿನ ಹೊರಗಿನ ಪ್ರಪಂಚದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್, ಸೆನೆಟ್ ಸಭೆಗಳ ಸದಸ್ಯರಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ಅಧ್ಯಕ್ಷರಾಗಿದ್ದು ವಿರಾಜಮಾನರಾಗಿದ್ದಾರೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಈ ಸಾಧನೆಗಳು ಸಾಮಾನ್ಯವಲ್ಲವೆಂದೇ ನನ್ನ ಎಣಿಕೆ. ಅವರು ಈಗ ಏರಿಕುಳಿತಿರುವ ಪೀಠ ಸ್ವಂತಸಿದ್ಧಿಯ ಫಲವಾದರೂ ನನ್ನ ಗೆಳೆಯರ ಪ್ರಗತಿಗೆ ಪ್ರೊಫೆಸರ್ ವೆಂಕಣ್ಣಯ್ಯನವರ ಆಶೀರ್ವಾದ, ಅವರ ಹಿರಿಯರು ಸಂಪಾದಿಸಿದ ಪುಣ್ಯ ಮತ್ತು ಮಾಡಿದ ಪೂಜಾಫಲ, ಶ್ರೀಯುತರ ಸಾತ್ವಿಕ ಮನೋಧರ್ಮಗಳೇ ಕಾರಣ ಗಳೆಂದು ನನ್ನ ದೃಢವಾದ, ಅಚಲವಾದ ನಂಬಿಕೆ. ಮನುಷ್ಯನ ಬದುಕು ಒಂದು ಕುರುಕ್ಷೇತ್ರ. ಕಷ್ಟಕಾರ್ಪಣ್ಯಗಳು ರೋಗರುಜಿನಗಳು, ನೂರಾರು ಚಿಂತೆಗಳು ನಮ್ಮನ್ನು ಸುತ್ತಿ ಮುತ್ತಿ ಕಿತ್ತು ತಿನ್ನುತ್ತಿರುವ ಶತ್ರುಗಳು ಇವುಗಳಿಂದ ಬಿಡುಗಡೆ ಹೊಂದಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಮ್ಮದಿವಂತನಾದ ವ್ಯಕ್ತಿ ಈ ಪ್ರಪಂಚದಲ್ಲಿ ಒಬ್ಬನೂ ಇಲ್ಲವೆಂದು ತೋರುತ್ತದೆ. ನಮ್ಮಲ್ಲಿ ಏನಾದರೂ ಒಂದು ನ್ಯೂನತೆಯನ್ನಿಟ್ಟು ತಲೆಯೆತ್ತಿ ಮೆರೆಯಬೇಡಿರೆಂದು ದೇವರು ನಮಗೆ ಎಚ್ಚರಿಕೆ ಕೊಡುತ್ತಿರುವನೆಂದು ತೋರುತ್ತದೆ. ಶ್ರೀಯುತರು ಈ ವಿಷಯದಲ್ಲಿಯೂ ಪುಣ್ಯವಂತರು. ಇವರು ಅಷ್ಟೇನೂ ಶ್ರೀಮಂತವಂಶದಲ್ಲಿ ಹುಟ್ಟದಿದ್ದರೂ ಈಗ ತಮ್ಮ ಕಾರ್ಯದಲ್ಲಿ ನಿರಾತಂಕವಾಗಿ ಮುಂದುವರಿಯುವಷ್ಟರ ಮಟ್ಟಿನ ಆರ್ಥಿಕ ನೆಮ್ಮದಿಯನ್ನು ಪಡೆದಿದ್ದಾರೆ. ಗುಣವತಿಯೂ ಸ್ವಸುಖ ನಿರಭಿಲಾಷಿಯೂ ಆದ ಮಡದಿ. ವಿದ್ಯಾವಂತರೂ ಸಂಸ್ಕೃತರೂ ಕುಲಭೂಷಣರೂ ಆದ ಮಕ್ಕಳು ಮತ್ತು ತುಂಬು ಪಾಂಡಿತ್ಯ ಅನುಭವಗಳಿಂದ ಕೂಡಿದ ನನ್ನ ಆಪ್ತಮಿತ್ರನು (ಬೇಕೆಂದೇ ಏಕವಚನವನ್ನು ಪ್ರಯೋಗಿಸಿದ್ದೇನೆ. ಕ್ಷಮೆ ಇರಲಿ.) ಆರೋಗಿಯಾಗಿ, ದೃಢಕಾಯನಾಗಿ, ನೂರುವರುಷ ಬಾಳಿ, ಕೈಕೊಂಡಿರುವ ಕನ್ನಡ ನಿಘಂಟಿನ ಕೆಲಸವನ್ನು ಕೊನೆ ಮುಟ್ಟಿಸಿ, ತನ್ನ ಕೀರ್ತಿಯನ್ನು ಹತ್ತು ದಿಕ್ಕುಗಳಲ್ಲಿ ಹರಡಿ ಕಿಟೆಲ್ ಮುಂತಾದ ಮಹನೀಯರ ಪಂಕ್ತಿಯಲ್ಲಿ ತನ್ನ ಹೆಸರನ್ನು ನಿಲ್ಲಿಸುವ ಸೌಭಾಗ್ಯವನ್ನು ಕರುಣಿಸಲೆಂದು ತುಂಬುಮನಸ್ಸಿನಿಂದ ಕನ್ನಡದ ಅಧಿದೈವವನ್ನು ಪ್ರಾರ್ಥಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಚ್. ತಿಪ್ಪೇರುದ್ರಸ್ವಾಮಿ

ಮಹಾಕಾವ್ಯ—ರುದ್ರನಾಟಕ

ಇವೆರಡೂ ಸಾಹಿತ್ಯದ ಎರಡು ಪ್ರಧಾನವಾದ ಪ್ರಕಾರಗಳು. ರುದ್ರನಾಟಕ (Tragedy) ಪಾಶ್ಚಾತ್ಯ ಸಾಹಿತ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಗ್ರೀಕ್ ಸಾಹಿತ್ಯದಲ್ಲಿ ಪ್ರಮುಖವಾದ ಸಾಹಿತ್ಯಪ್ರಕಾರವಾಗಿ ಬಹು ಪ್ರಾಚೀನದಲ್ಲಿಯೇ ಪೂರ್ಣತೆಯನ್ನು ಪಡೆಯಿತು. ಭಾರತೀಯ ಸಾಹಿತ್ಯದಲ್ಲಿಯೂ ನಾಟಕ ತುಂಬಾ ಪ್ರಾಚೀನವೇ. ನಮ್ಮ ಮೊದಲನೆಯ ಅಲಂಕಾರಗ್ರಂಥವೇ ನಾಟ್ಯಶಾಸ್ತ್ರ. "ಕಾವ್ಯೇಷು ನಾಟಕಂ ರಮ್ಯಂ" ಎಂಬ ಜನಪ್ರಿಯತೆಯನ್ನು ನಾಟಕ ಪಡೆಯಿತು. ಆದರೆ ಅದು ಗ್ರೀಕ್ ಮಾದರಿಯ ರುದ್ರನಾಟಕವಲ್ಲ. ಆ ರೂಪ ನಮಗೆ ಹೊಸದು. ಮಹಾಕಾವ್ಯ (Epic) ಮಾತ್ರ ಎರಡು ಕಡೆಯಲ್ಲಿಯೂ ಮುಖ್ಯ ಮಾಧ್ಯಮವಾಗಿ ವಿಕಾಸಮಾರ್ಗದಲ್ಲಿ ಬೆಳೆದು ಬಂದಿದೆ. ಅಲ್ಲಿ ಹೋಮರನ ಇಲಿಯಡ್, ಒಡಿಸ್ಸಿ ಬಂದರೆ, ಇಲ್ಲಿ ರಾಮಾಯಣ, ಮಹಾಭಾರತಗಳು ಆವಿರ್ಭವಿಸಿದುವು. ಅನಂತರ ಅಲ್ಲಿ ಲ್ಯಾಟಿನ್ ಭಾಷೆಯಲ್ಲಿ ವರ್ಜಿಲ್, ಇಟ್ಯಾಲಿಯನ್ ಭಾಷೆಯಲ್ಲಿ ಡಾಂಟೆ,— ಈ ಮೊದಲಾದ ಕವಿಗಳಿಂದ ಇಲ್ಲಿ ಸಂಸ್ಕೃತದ ಕಾಳಿದಾಸ, ಬಾಣ ಮತ್ತು ಇತರ ಪ್ರಾದೇಶಿಕ ಭಾಷೆಗಳ ಕವಿಗಳಿಂದ ಮಹಾಕಾವ್ಯಪರಂಪರೆ ಶ್ರೀಮಂತವಾಗಿದೆ. ಈ ಲೇಖನದ ಉದ್ದೇಶ ಈ ಎರಡು ಸಾಹಿತ್ಯ ಪ್ರಕಾರಗಳನ್ನು ವಿವರವಾಗಿ ವಿವೇಚಿಸುವುದಲ್ಲ. ಇವುಗಳ ಸಾಹಿತ್ಯ ಸಾಧ್ಯತೆಗಳನ್ನು, ಅದರಲ್ಲೂ ಮುಖ್ಯವಾಗಿ ಒಂದೆರಡು ಅಂಶಗಳನ್ನು, ತೌಲನಿಕವಾಗಿ ನೋಡುವುದು.

ಪಾಶ್ಚಾತ್ಯ ಜಗತ್ತಿನ ಆದಿಅಲಂಕಾರಿಕನೆನ್ನಬಹುದಾದ ಅರಿಸ್ಟಾಟಲ್, ಮಹಾಕಾವ್ಯಕ್ಕಿಂತ ರುದ್ರನಾಟಕಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಂತೆ ತೋರುತ್ತದೆ. ಹಾಗೆಂದು ಮಹಾಕಾವ್ಯದ ಸತ್ವವನ್ನೂ ಸ್ವರೂಪವನ್ನೂ ಆತ ಅರಿಯನೆಂದಲ್ಲ. ಏಕಮುಖ ಪರಿಣಾಮದ ದೃಷ್ಟಿಯಿಂದ ರುದ್ರನಾಟಕ ಹೆಚ್ಚು ಶಕ್ತವಾದುದೆಂದು ಆತನ ಅಭಿಪ್ರಾಯ. ಆ ಮಾತಿನಲ್ಲೇ ಮಹಾಕಾವ್ಯದ ಮುಖ್ಯ ಲಕ್ಷಣ ಅಡಗಿದೆ. ಮಹಾಕಾವ್ಯ ಏಕಮುಖವಾದುದಲ್ಲ; ಬಹುಮುಖವಾದ ಅನುಭವವನ್ನುಳ್ಳದ್ದು; ವ್ಯಾಪಕವಾದ ಹಿನ್ನೆಲೆಯನ್ನುಳ್ಳದ್ದು. ಈ ಅಂಶವನ್ನು ಭಾರತೀಯ ಕಾವ್ಯಮೀಮಾಂಸಕರೂ ಗುರುತಿಸಿದ್ದಾರೆ, ಭಾಮಹ ತನ್ನ ಕಾವ್ಯಾಲಂಕಾರದಲ್ಲಿ ಹೀಗೆ ಹೇಳಿದ್ದಾನೆ:

"ಸರ್ಗಬಂಧೋ ಮಹಾಕಾವ್ಯಂ ಮಹತಾಂ ಚ ಮಹಚ್ಚ ಯತ್ ।
ಅಗ್ರಾಮ್ಯ ಶಬ್ದಮರ್ಥ್ಯಂ ಚ ಸಾಲಂಕಾರಂ ಸದಾಶ್ರಯವತ್ ॥
ಮಂತ್ರದೂತ ಪ್ರಯಾಣಾ ಚ ನಾಯಕಾಭ್ಯುದಯೈಶ್ಚ ಯತ್ ।
ಪಂಚಭಿಃ ಸಂಧಿಭಿರ್ಯುಕ್ತಂ ನಾತಿವ್ಯಾಖ್ಯೇಯಮೃದ್ಧಿಮತ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚತುರ್ವರ್ಗಾಭಿಧಾನೇಽಪಿ ಭೂಯಸಾರ್ಥೋಪದೇಶಕೃತ್ ।
ಯುಕ್ತಂ ಲೋಕಸ್ವಭಾವೇನ ರಸೈಶ್ಚ ಸಕಲೈಃ ಪೃಥಕ್ ॥

(ಅಧ್ಯಾಯ ೧–೧೯, ೨೦, ೨೧)

—ಮಹಾಕಾವ್ಯ ಅನೇಕ ಸರ್ಗಗಳಿಂದ ಕೂಡಿರುತ್ತದೆ. ಅದು ಮಹಾಪುರುಷರನ್ನು ಕುರಿತಿರುವುದಲ್ಲದೆ ಪ್ರಮಾಣದಲ್ಲಿಯೂ ಮಹತ್ತಾಗಿರುತ್ತದೆ. ಅದರ ಶಬ್ದಗಳಲ್ಲಿ ಗ್ರಾಮ್ಯದೋಷವಿರುವುದಿಲ್ಲ; ಅರ್ಥಗಾಂಭೀರ್ಯವಿರುತ್ತದೆ. ಅಲಂಕಾರ ಸಹಿತವಾಗಿರುವುದಲ್ಲದೆ ಉತ್ತಮ ವಸ್ತುವನ್ನೂ ಆಶ್ರಯಿಸಿರುತ್ತದೆ. ಮಂತ್ರಾಲೋಚನೆ, ದೂತರು, ಯುದ್ಧ, ನಾಯಕಾಭ್ಯುದಯಗಳಿಂದಲೂ, ಐದು ಸಂಧಿಗಳಿಂದಲೂ ಕೂಡಿರುತ್ತದೆ. ಕಷ್ಟಪಟ್ಟು ವ್ಯಾಖ್ಯಾನ ಬರೆಯುವಂತಿರುವುದಿಲ್ಲ ; ಮತ್ತು ಎಲ್ಲ ಅಂಶಗಳಿಂದಲೂ ಸಮೃದ್ಧವಾಗಿರುತ್ತದೆ. ಚತುರ್ವಿಧ ಪುರುಷಾರ್ಥಗಳನ್ನು ಪ್ರತಿಪಾದಿಸುತ್ತಿದ್ದರೂ ಐಹಿಕ ಉಪದೇಶಕ್ಕೆ ಪ್ರಾಧಾನ್ಯವಿರುತ್ತದೆ. ಲೋಕಸ್ವಭಾವವನ್ನು ಚಿತ್ರಿಸುವುದಲ್ಲದೆ ಎಲ್ಲ ರಸಗಳನ್ನೂ ಒಳಗೊಂಡಿರುತ್ತದೆ.—ಎಂದು ಮುಂತಾಗಿ ಮಹಾಕಾವ್ಯದ ಲಕ್ಷಣಗಳನ್ನು ಆತ ನಿರೂಪಿಸುತ್ತಾನೆ. ಇಲ್ಲಿ ಮಹಾಕಾವ್ಯದ ವ್ಯಾಪ್ತಿ, ಉದ್ದೇಶ, ವಸ್ತು, ವಿನ್ಯಾಸಾದಿಗಳೆಲ್ಲಾ ಸೂಚಿತವಾಗಿವೆ. ಮುಂದಿನ ಆಲಂಕಾರಿಕರು ಈ ಅಭಿಪ್ರಾಯವನ್ನು ಇನ್ನೂ ಹೆಚ್ಚು ವಿವರವಾಗಿ ಖಚಿತವಾಗಿ ಹೇಳಲು ಪ್ರಯತ್ನಿಸಿದ್ದಾರೆ.

ಮಹಾಕಾವ್ಯವನ್ನು ಕುರಿತ ಈಚೆಗಿನ ವಿವೇಚನೆಯಲ್ಲಿ ಪಾಶ್ಚಾತ್ಯ ವಿದ್ವಾಂಸರು ಒಂದು ಮುಖ್ಯವಾದ ಅಂಶವನ್ನು ಗುರುತಿಸಿದ್ದಾರೆ. ಮಹಾಕಾವ್ಯಗಳಲ್ಲಿ ಎರಡು ಬಗೆಗಳನ್ನು ಅವರು ಹೇಳುತ್ತಾರೆ. ಅವನ್ನು ಹೆಸರಿಸುವಲ್ಲಿ ವ್ಯತ್ಯಾಸವಿದ್ದರೂ ಆ ಅಂತರವನ್ನು ಎಲ್ಲರೂ ಗುರುತಿಸಿದ್ದಾರೆ. ಕೆಲವರು Primary Epic, Secondary Epic—ಎಂದರೆ ಇನ್ನು ಕೆಲವರು Primitive Epic, Artificial Epic ಎಂದಿದ್ದಾರೆ. Epic of Growth ಮತ್ತು Epic of Culture ಎಂಬುದಾಗಿಯೂ Authentic Epic ಮತ್ತು Literary Epic ಎಂಬುದಾಗಿಯೂ ಇವುಗಳನ್ನು ಕರೆದವರುಂಟು. ಈ ಹೆಸರುಗಳು ಏನೇ ಇರಲಿ, ಇಲಿಯೆಡ್ ಒಡಿಸ್ಸಿ ಈ ಮಹಾಕಾವ್ಯಗಳಿಗೂ ಅನಂತರ ಬಂದ 'ಡಿವೈನ್ ಕಾಮಿಡಿ' 'ಪ್ಯಾರಡೈಸ್ ಲಾಸ್ಟ್' ಗಳಿಗೂ ಮುಖ್ಯವಾದ ಅಂತರವಿದೆಯೆಂದು ಗುರುತಿಸಿರುವುದು ಗಮನಾರ್ಹ. ನಮ್ಮಲ್ಲಿಯೂ ರಾಮಾಯಣ, ಮಹಾಭಾರತಗಳಿಗೂ ರಘುವಂಶ, ಕುಮಾರಸಂಭವ, ಕಾದಂಬರಿ ಈ ಮೊದಲಾದ ಕಾವ್ಯಗಳಿಗೂ ಈ ಅಂತರ ಕಾಣುತ್ತದೆ. ಆದರೆ ನಮ್ಮವರು ಮೊದಲನೆಯದನ್ನು ಮಹಾಕಾವ್ಯವೆಂದು ಕರೆಯದೆ ಇತಿಹಾಸಗಳೆಂದು ಬೇರೆ ನಿಲ್ಲಿಸಿಬಿಟ್ಟದ್ದರಿಂದ ಮಹಾಕಾವ್ಯದಲ್ಲಿ ಎರಡು ಬಗೆಗಳನ್ನು ಗುರುತಿಸುವ ಅಗತ್ಯ ಅವರಿಗೆ ಬರಲಿಲ್ಲ. ಆದರೆ ಇಂದು ನಾವು ರಾಮಾಯಣ, ಮಹಾಭಾರತಗಳನ್ನು ಮಹಾಕಾವ್ಯ ಎನ್ನುವಾಗ ಅವುಗಳಿಗೂ ಅನಂತರದ ಮಹಾಕಾವ್ಯಗಳಿಗೂ ಇರುವ ಅಂತರವನ್ನು ಕಂಡುಕೊಳ್ಳಬೇಕಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಾಯಣ ಮಹಾಭಾರತಗಳು ಮೂಲ ಮಹಾಕಾವ್ಯಗಳು, ಇಲಿಯಡ್, ಒಡಿಸ್ಸಿ ಇದ್ದಂತೆ; ಅವುಗಳ ಸೃಷ್ಟಿ ನೆಪಮಾತ್ರಕ್ಕೆ ಒಬ್ಬ ವ್ಯಕ್ತಿಯಿಂದಾದರೂ ವಾಸ್ತವವಾಗಿ ಅವು ಸಮಷ್ಟಿ ಮನಸ್ಸಿನ ರಚನೆಗಳು. ಆಶ್ಚರ್ಯವೆಂದರೆ ಅವರ ಕರ್ತೃಗಳ ಹೆಸರೇ ನಮಗೆ ತಿಳಿಯದು. ವಾಲ್ಮೀಕಿ ವ್ಯಾಸ ವ್ಯಕ್ತಿಗತವಾದ ಹೆಸರುಗಳಲ್ಲ. ಅದೊಂದು ನಿಲವು. ವೈಯಕ್ತಿಕತೆ ಅಳಿದು ಸಮಷ್ಟಿ ಚೇತನದ ಸಾಂಕೇತಿಕ ಸೂಚನೆಯಾಗಿ ವ್ಯಾಸ ವಾಲ್ಮೀಕಿಗಳು ಉಳಿದಿದ್ದಾರೆ. ಸಮಷ್ಟಿ ಜೀವನವನ್ನು ಇಷ್ಟರಮಟ್ಟಿಗೆ ಅರಗಿಸಿಕೊಂಡವು ಮಾತ್ರ ನಿಜವಾದ ಅರ್ಥದಲ್ಲಿ ಮಹಾಕಾವ್ಯಗಳೆಂಬುದು ರವೀಂದ್ರನಾಥ ಟ್ಯಾಗೋರರ ಅಭಿಪ್ರಾಯ. ಅವರು ಹೇಳುವುದು:

"ಕಾವ್ಯಗಳನ್ನು ಸ್ಥೂಲವಾಗಿ ಎರಡು ಪಂಗಡ ಮಾಡಬಹುದು. ಕೆಲವು ಒಬ್ಬ ಕವಿಯ ಮಾತುಗಳು, ಮತ್ತೆ ಕೆಲವು ಒಂದು ದೊಡ್ಡ ಸಂಪ್ರದಾಯದ ಮಾತುಗಳು.

"ಒಬ್ಬ ಕವಿಯ ಮಾತುಗಳೆಂದರೆ ಮತ್ತಾರಿಗೂ ತಿಳಿಯತಕ್ಕುವಲ್ಲವೆಂದು ಅರ್ಥವಲ್ಲ; ಹಾಗಾಗುವ ಪಕ್ಷಕ್ಕೆ ಆ ಕವಿಯನ್ನು ಹುಚ್ಚನೆನ್ನಬೇಕಾಗುತ್ತದೆ. ಆ ಮಾತಿನ ಅರ್ಥವಿಷ್ಟೆ:— ಕವಿಗೆ ತನ್ನ ಸ್ವಂತ ಸುಖದುಃಖ, ಕಲ್ಪನೆ, ಜೀವನದ ಅಭಿಜ್ಞತೆಗಳ ಮೂಲಕ ಮಾನವ ಜಾತಿಗೆ ಸಾಮಾನ್ಯವಾದ ಚಿರಂತನ ಹೃದಯಾವೇಗವನ್ನೂ ಜೀವನದ ಮಾರ್ಮಿಕ ವಿಷಯಗಳನ್ನೂ ವ್ಯಕ್ತಪಡಿಸುವ ಶಕ್ತಿ ಇರುತ್ತದೆ.

"ಈ ಪಂಗಡದ ಕವಿಗಳಿರುವಂತೆಯೇ ಮತ್ತೊಂದು ಪಂಗಡದ ಕವಿಗಳೂ ಇರುತ್ತಾರೆ. ಅವರ ಕಾವ್ಯಗಳ ಮುಖಾಂತರವಾಗಿ ಒಂದು ಸಮಗ್ರ ದೇಶವು ಅಥವಾ ಕಾಲವು ತನ್ನ ಹೃದಯವನ್ನೂ ಅಭಿಜ್ಞತೆಯನ್ನೂ ವ್ಯಕ್ತಪಡಿಸಿ ಅದನ್ನು ಮಾನವನ ಶಾಶ್ವತ ಸಾಮಗ್ರಿಯನ್ನಾಗಿ ಮಾಡುತ್ತದೆ.

"ಈ ಎರಡನೆಯ ಪಂಗಡದ ಕವಿಗೆ ಮಹಾಕವಿ ಎಂದು ಹೆಸರು. ಸಮಗ್ರ ದೇಶದ ಅಥವಾ ಜನಾಂಗದ ವಾಣಿಯು ಇವರನ್ನು ಆಶ್ರಯಿಸಬಲ್ಲುದು. ಇವರು ರಚಿಸುವ ಕಾವ್ಯವು ಒಬ್ಬ ಮನುಷ್ಯನು ರಚಿಸಿದ್ದೆಂದು ಮನಸ್ಸಿಗೆ ತೋರುವುದಿಲ್ಲ. ಅದು ಒಂದು ಮಹಾವೃಕ್ಷದಂತೆ ದೇಶದ ಭೂಗರ್ಭದಿಂದ ಆವಿರ್ಭವಿಸಿ ಆ ದೇಶಕ್ಕೆ ಆಶ್ರಯ ಛಾಯೆಯನ್ನು ದಾನಮಾಡುವಂತೆ ತೋರುತ್ತದೆ. ಶಾಕುಂತಲ ಕುಮಾರಸಂಭವಗಳಲ್ಲಿ ಕಾಳಿದಾಸನ ಲೇಖನ ನೈಪುಣ್ಯದ ಪರಿಚಯವನ್ನು ಹೊಂದಬಹುದು. ಆದರೆ ರಾಮಾಯಣ ಮಹಾಭಾರತಗಳು ಗಂಗಾ ಹಿಮಾಲಯಗಳಂತೆ ಸಮಗ್ರ ಭರತಖಂಡದವುಗಳು; ವ್ಯಾಸ ವಾಲ್ಮೀಕಿಗಳು ಉಪಲಕ್ಷ್ಯ ಮಾತ್ರ."[1]

—ಈ ಅರ್ಥದಲ್ಲಿ ನೋಡುವುದಾದರೆ ರಾಮಾಯಣ ಮಹಾಭಾರತಗಳು ಮಾತ್ರ ಮಹಾಕಾವ್ಯಗಳಾಗುತ್ತವೆ. ಅಲ್ಲಿ ಇಲಿಯೆಡ್, ಒಡಿಸ್ಸಿಗಳನ್ನು ಮಾತ್ರ ಹೇಳಬೇಕಾಗು

---

[1] ರವೀಂದ್ರನಾಥ ಟಾಗೋರ್ ಪ್ರಾಚೀನ ಸಾಹಿತ್ಯ.—ಅನು. ಟಿ. ಎಸ್. ವೆಂಕಣ್ಣಯ್ಯ: (ಪ್ರಬುಧ, ರಾಮಾಯಣ)

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತದೆ. ಆಗ ಈನಿಯೆಡ್, ಡಿವೈನ್ ಕಾಮಿಡಿ, ಪ್ಯಾರಡೈಸ್ ಲಾಸ್ಟ್, ರಘುವಂಶ, ಕುಮಾರಸಂಭವ, ವಿಕ್ರಮಾರ್ಜುನ ವಿಜಯಗಳಂತಹ ಕೃತಿಗಳನ್ನು ಏನೆಂದು ಕರೆಯಬೇಕು? ಈ ಕಾರಣಕ್ಕಾಗಿ ಪಾಶ್ಚಾತ್ಯ ವಿದ್ವಾಂಸರು ಮಹಾಕಾವ್ಯಗಳಲ್ಲಿ ಎರಡು ಬಗೆಗಳನ್ನು ಮಾಡಿ ಮೊದಲನೆಯವನ್ನು ಮೂಲ ಮಹಾಕಾವ್ಯಗಳೆಂದೂ ಎರಡನೆಯ ಬಗೆಯನ್ನು ಸಾಹಿತ್ಯಕ ಮಹಾಕಾವ್ಯಗಳೆಂದೂ ಗುರುತಿಸಿದ್ದಾರೆ. ಮೊದಲನೆಯ ಮಹಾಕಾವ್ಯಗಳ ಸತ್ವವನ್ನೇ ಇವು ಒಂದು ಪರಿಮಿತ ವಲಯದಲ್ಲಿ ಅಡಗಿಸಿಕೊಂಡು ಅನಂತರದ ಮಹಾಕಾವ್ಯಗಳಾಗಿ ಬೆಳೆದು ಬಂದಿವೆ.

ಮಹಾಕಾವ್ಯದ ಮೊಟ್ಟಮೊದಲನೆಯ ಅವಶ್ಯಕತೆ ವಸ್ತು ಉದಾತ್ತ, ಶೈಲಿ ಗಂಭೀರ. ಈ ಮಾತು ರುದ್ರನಾಟಕಕ್ಕೂ ಅನ್ವಯಿಸುತ್ತದೆ. ರುದ್ರನಾಟಕದ ಲಕ್ಷಣಗಳನ್ನು ಸೂತ್ರೀಕರಿಸಿ ಅರಿಸ್ಟಾಟಲ್ ಹೀಗೆ ಹೇಳಿದ್ದಾನೆ. ತನ್ನ Politics ಎಂಬ ಕೃತಿಯಲ್ಲಿ:

"Tragedy is an imitation of an action that is serious, complete and of a certain magnitude, in language embellished with each kind of artistic ornament, the several kinds being found in separate parts of the play; in the form of action, not of narrative; through pity and fear "affecting its proper purgation of these emotions".

ಅಂದರೆ ರುದ್ರನಾಟಕ ತಕ್ಕಮಟ್ಟಿನ ವ್ಯಾಪ್ತಿಯುಳ್ಳ ಗಂಭೀರವಾದ ಮತ್ತು ಪೂರ್ಣವಾದ ಘಟನೆಯೊಂದರ ಅನುಕರಣ. ಕಲಾತ್ಮಕವಾದ ಭಾಷೆಯಲ್ಲಿ ಅಲಂಕೃತವಾಗಿ ಅದು ಹೊರಹೊಮ್ಮುತ್ತದೆ. ವಿವಿಧ ಭಾಗಗಳಲ್ಲಿ ಅದರ ಒಂದೊಂದು ರೂಪ ವ್ಯಕ್ತವಾಗುತ್ತದೆ. ಅದರ ರೀತಿ ಅಭಿನಯಾತ್ಮಕವಾದದ್ದು; ಕಥನಾತ್ಮಕವಾದುದಲ್ಲ. ಅನುಕಂಪ ಭೀತಿಗಳ ಮೂಲಕ ತನ್ನ ಉದ್ದೇಶವನ್ನು ಅದು ಸಾಧಿಸುತ್ತದೆ—ಎನ್ನುತ್ತಾನೆ. ವಸ್ತು, ವಿನ್ಯಾಸ, ಭಾಷೆ, ಮತ್ತು ಪರಿಣಾಮ ಎಲ್ಲವನ್ನೂ ಇಲ್ಲಿ ಸೂಚ್ಯವಾಗಿ ಹೇಳಿದ್ದಾನೆ. ಮಹಾಕಾವ್ಯದಂತೆ ರುದ್ರನಾಟಕವೂ ಗಂಭೀರ ಪರಿಣಾಮವನ್ನು ಸಾಧಿಸಬೇಕಾದುದರಿಂದ ಅದರ ವಸ್ತುವೂ ಮಹಾಕಾವ್ಯದಂತೆ ಗಂಭೀರವಾಗಿರಬೇಕು. ಲಘುವಾದ ವಸ್ತುವನ್ನು ಆಶ್ರಯಿಸಿದ ಕೃತಿ ಕಲಾತ್ಮಕವಾಗಬಹುದಾದರೂ ಮಹಾಕಾವ್ಯದ ಅಥವಾ ರುದ್ರನಾಟಕದ ಪರಿಣಾಮವನ್ನು ಅದು ಸಾಧಿಸಲಾರದು. ಹುಲ್ಲನ್ನು ಆಶ್ರಯಿಸಿದ ಬೆಂಕಿಯಂತೆ ಅದು ಬಗ್ಗನೆ ಉರಿಯಬಹುದು; ಆದರೆ ಕಲ್ಲಿದ್ದಲನ್ನು ಆಶ್ರಯಿಸಿದ ಬೆಂಕಿ ಸಾಧಿಸುವ ಪರಿಣಾಮವನ್ನುಂಟುಮಾಡಲಾರದು.

ಭಾಷೆ ಮತ್ತು ಶೈಲಿಯ ದೃಷ್ಟಿಯಿಂದಲೂ ರುದ್ರನಾಟಕ ಮಹಾಕಾವ್ಯಗಳೆರಡಕ್ಕೂ ಸಾಮ್ಯ ಕಂಡುಬರುತ್ತದೆ. ಭಾಷೆ ಗಂಭೀರವಾದ ವಸ್ತುವಿನ್ಯಾಸಕ್ಕೆ ಅನುಗುಣವಾಗಿರಬೇಕು; ಶೈಲಿಯೂ ಉನ್ನತವಾಗಿರಬೇಕು. ಆದರೆ ಮಹಾಕಾವ್ಯದಲ್ಲಿ ಇವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಮಿತಿಗಳೂ ವೈವಿಧ್ಯಗಳೂ ಹೆಚ್ಚು. ರುದ್ರನಾಟಕ ಏಕಮುಖ ಪರಿಣಾಮದ ದೃಷ್ಟಿಯಿಂದ ನೇರವಾಗಿ ವೇಗವಾಗಿ ಮುಂದುವರಿಯುತ್ತದೆ.

ವಾಸ್ತವವಾಗಿ ಮಹಾಕಾವ್ಯಕ್ಕೂ ರುದ್ರನಾಟಕಕ್ಕೂ ಇರುವ ಪ್ರಮುಖವಾದ ವ್ಯತ್ಯಾಸ ಇದೇ: ಮಹಾಕಾವ್ಯದ ಹಿನ್ನೆಲೆ ತುಂಬಾ ವಿಸ್ತಾರವಾದುದು: ವ್ಯಾಪಕವಾದುದು. ಅದರ ಹರಹು (amptitude), ಸರ್ವವನ್ನೂ ಒಳಗೊಳ್ಳುವ ಬಹುಮುಖ ಶಕ್ತಿ (inclusiveness),—ಇವುಗಳಿಂದ ಮಹಾಕಾವ್ಯ ಸಾಧಿಸುವ ಪರಿಣಾಮ ರುದ್ರನಾಟಕಕ್ಕಿಂತ ಬೇರೆಯಾದುದು. ಅರಿಸ್ಟಾಟಲ್ ರುದ್ರನಾಟಕವನ್ನು ಮಹಾಕಾವ್ಯಕ್ಕಿಂತ ಮೇಲಿಡುವಾಗ ಈ ಅಂಶವನ್ನು ಆತ ಮುಖ್ಯವಾಗಿ ಗಮನಿಸುತ್ತಾನೆ. ರುದ್ರನಾಟಕ ಏಕಮುಖವಾಗಿ ದಟ್ಟವಾದ ಅನುಭವವನ್ನು ಚಿತ್ರಿಸುವುದರಿಂದ ಅದು ಸಾಂದ್ರವಾದ ಪರಿಣಾಮವನ್ನು ಬೀರುತ್ತದೆ. ಆದರೆ ಮಹಾಕಾವ್ಯದ ದೃಷ್ಟಿ ಅನೇಕ ಕಡೆ ಹರಿದು ಹಂಚಿಹೋಗುವುದರಿಂದ ದುರ್ಬಲವಾಗುತ್ತದೆ—ಎನ್ನುತ್ತಾನೆ. "...Concentrated is more pleasurable than the diluted effect" ಎಂಬ ಅಭಿಪ್ರಾಯ ಆತನದು. ಉದಾಹರಣೆಗಾಗಿ ಸಾಫೋಕ್ಲೀಸನ "ಈಡಿಪಸ್" ಅನ್ನು "ಇಲಿಯೆಡ್"ನಷ್ಟು ವಿಸ್ತರಿಸಿದರೆ ಏನಾಗಬಹುದೆಂದು ಊಹಿಸಿಕೊಳ್ಳುವಂತೆ ಹೇಳುತ್ತಾನೆ. ಇಲ್ಲಿ ರುದ್ರನಾಟಕವನ್ನು ಕುರಿತಷ್ಟರಮಟ್ಟಿಗೆ ಆತನ ಅಭಿಪ್ರಾಯ ಸರಿ. ಅದರ ಅನುಭವ ಸಾಂದ್ರವಾದುದರಿಂದ ಗಾಢವಾದ ಪ್ರಭಾವವನ್ನು ಬೀರುತ್ತದೆ; ಆ ಮೂಲಕ ಮನಸ್ಸಿನ ಶೋಧನೆಗೆ ಕಾರಣವಾಗುತ್ತದೆ. ಆದರೆ ಈ ಭರದಲ್ಲಿ ಮಹಾಕಾವ್ಯದ ಪ್ರಭಾವ ದುರ್ಬಲವೆಂದು ಹೇಳುವುದು ಸರಿಯಲ್ಲ.

ಈ ಮಾಧ್ಯಮದ ಶಕ್ತಿ ಮತ್ತು ಸಾಧ್ಯತೆಗಳೇ ಬೇರೆ. ಇದು ಬಹುಮುಖವಾದುದೆಂದು ಅರಿಸ್ಟಾಟಲನೇ ಹೇಳುತ್ತಾನೆ. ಈ ಬಹುಮುಖತೆ, ಆತ ಹೇಳುವಂತೆ ಅನುಭವದ ದುರ್ಬಲತೆಗೆ ಕಾರಣವಾಗುವುದಿಲ್ಲ; ಸಮಗ್ರ ಸತ್ಯದ ದರ್ಶನಕ್ಕೆ ಕಾರಣವಾಗುತ್ತದೆ. ರುದ್ರನಾಟಕ ಸತ್ಯದ ಒಂದು ಮುಖವನ್ನು ಮಾತ್ರ ನೋಡುತ್ತದೆ, ಆಳವಾಗಿ ಇಳಿದು ನೋಡುತ್ತದೆ. ಆದರೆ ಪೂರ್ಣ ಸತ್ಯದರ್ಶನದ ವ್ಯಾಪಕ ದೃಷ್ಟಿ, ಅದಕ್ಕಿಲ್ಲ. ಈ ಅಭಿಪ್ರಾಯವನ್ನು ಆಲ್ಡಸ್ ಹಕ್ಲೀ (Aldus Huxley) "Tragedy and The Whole Truth"—ಅಂದರೆ 'ರುದ್ರನಾಟಕ ಮತ್ತು ಪೂರ್ಣ ಸತ್ಯ—ಎಂಬ ತಮ್ಮ ಒಂದು ಪ್ರಬಂಧದಲ್ಲಿ ಬಹಳ ಚೆನ್ನಾಗಿ ಚರ್ಚಿಸಿದ್ದಾರೆ.

ಮಹಾಕಾವ್ಯದಿಂದ ಒಂದು ಉದಾಹರಣೆಯನ್ನು ಉದ್ಧರಿಸುವುದರ ಮೂಲಕ ಅವರು ಪ್ರಬಂಧವನ್ನು ಪ್ರಾರಂಭಿಸಿದ್ದಾರೆ. 'ಒಡಿಸ್ಸಿ'ಯ ಹನ್ನೆರಡನೇ ಅಧ್ಯಾಯದಲ್ಲಿ ಒಂದು ಘಟನೆ ಬರುತ್ತದೆ: ಒಡಿಸ್ಸಿಯಸ್ ತನ್ನ ಸಂಗಡಿಗರೊಡನೆ ನಾವೆಯಲ್ಲಿ ಹೋಗುತ್ತಿರುವಾಗ ವಿಕಾರವಾದ ಕ್ರೂರ ಪ್ರಾಣಿ ಶಿಲ್ಲ (Scylla) ತನ್ನ ದೀರ್ಘವಾದ ಕತ್ತನ್ನು ಬಾಗಿಸಿ ಇವರ ಹಡಗಿನಿಂದ ಆರು ಜನರನ್ನು ಒಟ್ಟಿಗೆ ಹಾರಿಸುತ್ತದೆ. ಆವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕರುಣಾಜನಕವಾಗಿ ಆಕ್ರಂದಿಸುತ್ತಿರಲು ಇವರು ನಿಸ್ಸಹಾಯಕರಾಗಿ ನೋಡುತ್ತಿರುವಂತೆಯೇ ಅವರನ್ನು ಮುಗಿಸುತ್ತದೆ. ಗೆಳೆಯರ ಅಳಿವಿನಿಂದ ನೊಂದ ಒಡಿಸ್ಸಿಯಸ್ ಮತ್ತು ಸಂಗಡಿಗರು ತಾವು ಹೇಗೋ ತಪ್ಪಿಸಿಕೊಂಡು ಮುಂದೆ ನಡೆಯುತ್ತಾರೆ. ಸಿಸಲಿ ದ್ವೀಪದಲ್ಲಿ ನಾವೆಯನ್ನು ನಿಲ್ಲಿಸಿ, ಅಂದು ರಾತ್ರಿಗೆ ಅಲ್ಲಿ ಏನನ್ನೋ ಬೇಯಿಸಿ ತಿನ್ನುತ್ತಾರೆ. ಅನಂತರ ತಮ್ಮೆದುರಿನಲ್ಲೇ ಕ್ರೂರ ಪ್ರಾಣಿಗೆ ತುತ್ತಾದ ತಮ್ಮ ಸಂಗಡಿಗರಿಗಾಗಿ ದುಃಖಿಸುತ್ತಾರೆ. ಇದು ಮಾನವ ಸ್ವಭಾವದ ಪೂರ್ಣ ಚಿತ್ರ, ಮೊದಲು ತಮ್ಮ ಹಸಿವೆಯನ್ನು ಅಡಗಿಸಿಕೊಂಡು ಸತ್ತವರಿಗಾಗಿ ಅನಂತರ ಅಳುವುದು. ಮೊದಲು ತಾನು ಅನಂತರ ಇತರರು, —ಇದು ಕಟುವಾದರೂ ದಿಟ. ಇದನ್ನು ರುದ್ರನಾಟಕ ಚಿತ್ರಿಸಲಾರದು, ಮಹಾಕಾವ್ಯಕ್ಕೆ ಮಾತ್ರ ಸಾಧ್ಯ ಎನ್ನುತ್ತಾನೆ ಹಕ್ಸ್ಲೆ. ಏಕೆಂದರೆ ರುದ್ರನಾಟಕದ ದೃಷ್ಟಿ ಪರಿಮಿತವಾದದ್ದು. ವಿಸ್ತಾರವಾಗಿ ಹರಿಯುತ್ತಿರುವ ನದಿಯ ಮಹಾಪ್ರವಾಹದಲ್ಲಿ ಒಂದು ಕ್ಷಣದ ಹೊನಲನ್ನು ಮಾತ್ರ ಅದು ತೆಗೆದುಕೊಂಡು ಅಲ್ಲಿ ಕೇಂದ್ರೀಕರಿಸುತ್ತದೆ. ಇದರ ವಿವರಗಳನ್ನು ಆತನ ಮಾತಿನಲ್ಲಿಯೇ ನೋಡಬಹುದು:

"Tragedy is an arbitrarily isolated eddy on the surface of a vast river that flows majestically, irresistibly, around, beneath, and to either side of it. Wholly—Truthful art contrives to imply the existence of the entire river as well as of the eddy... In Wholly-Truthful art the agonies may be just as real, love and unconquerable mind just as admirable, just as important as in tragedy...... But the agonies and the indomitabilities are placed by the Wholly-Truthful writer in another, wider context; with the result that they cease to be the same as the intrinsically identical agonies and indomitabilities of tragedy"

—ಎಂಬ ಈ ಮಾತಿನಲ್ಲಿ ಆತನ ದೃಷ್ಟಿ ವ್ಯಕ್ತವಾಗಿದೆ. ಅವನ ಪ್ರಕಾರ ರುದ್ರನಾಟಕ ಸಮಗ್ರ ಸತ್ಯವನ್ನು ನಿರೂಪಿಸುವ ಕಲೆಯಲ್ಲ. ಗಂಭೀರವಾಗಿ ತುಂಬಿ ಹರಿಯುವ ಸತ್ಯವಾಹಿನಿಯ ಒಂದು ಸುಳಿಯತ್ತ ದೃಷ್ಟಿಯನ್ನು ಕೇಂದ್ರೀಕರಿಸುತ್ತದೆ. ಆದರೆ ಮಹಾಕಾವ್ಯ ಆ ಸುಳಿಯನ್ನೂ ಒಳಗೊಂಡಂತೆ ಇಡೀ ಹೊನಲಿನ ಒಳಹೊರಗುಗಳನ್ನೆಲ್ಲಾ ವ್ಯಾಪಿಸುತ್ತದೆ. ರುದ್ರನಾಟಕದ ನೋವು ನಲಿವುಗಳು, ಕಟ್ಟಕಡೆಯವರೆಗೂ ಹೋರಾಡುವ ದಿಟ್ಟತನದ ನಿಲವು ಮಹಾಕಾವ್ಯದಲ್ಲೂ ಬರುತ್ತವೆ. ಆದರೆ ಅವು ರುದ್ರನಾಟಕಕ್ಕಿಂತ ಭಿನ್ನವಾಗಿ ವ್ಯಾಪಕ ಸತ್ಯದ ಹಿನ್ನೆಲೆಯಲ್ಲಿ ಪೂರ್ಣದೃಷ್ಟಿಯಿಂದ ನಿರೂಪಿತವಾಗುತ್ತವೆ.

ಹೀಗೆ ಮಹಾಕಾವ್ಯದಲ್ಲಿ ರುದ್ರನಾಟಕದ ಸತ್ಯವೂ ಅಡಗಿದೆ ಎಂಬ ಅಂಶ ಮುಖ್ಯವಾದದ್ದು. ಮುಂದೆ ಇದನ್ನು ಉದಾಹರಿಸಲು ಆತ ಆರಿಸಿಕೊಂಡಿರುವ ಲೇಖಕ

Sri Vidyabharathi Book Centre, Sringeri

CC-O. In Public Domain. Digitized by eGangotri

ರನ್ನೂ ಅವರ ಕೃತಿಗಳನ್ನೂ ನೋಡಿದಾಗ ಅಲ್ಲಿ ಈತ ಹೇಳುವ ಪೂರ್ಣಸತ್ಯ ಪ್ರಕಟವಾಗಿದೆಯೇ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಇಲ್ಲಿ ಮುಖ್ಯವಾದ ಮಾತೆಂದರೆ ಮಹಾಕಾವ್ಯದ ವ್ಯಾಪ್ತಿಯನ್ನು ಗುರುತಿಸಿರುವುದು. ಮಹಾಕವಿ ಪೂರ್ಣಸತ್ಯವನ್ನು ಕಂಡು ಕಾಣಿಸಬೇಕಾದವನಾದುದರಿಂದ ತನ್ನ ವೈಯಕ್ತಿಕ ಅನಿಸಿಕೆಗಳಿಂದ ಆದಷ್ಟುಮಟ್ಟಿಗೆ ಆತ ಹೊರಬರಬೇಕು. ಕವಿಯು ವ್ಯಕ್ತಿತ್ವ ನಿರಸನದಿಂದ ಕಾವ್ಯತ್ವ ಸಿದ್ಧಿಸುತ್ತದೆಂಬ ಟಿ. ಎಸ್. ಎಲಿಯಟ್ಟನ ಮಾತು ಮಹಾಕಾವ್ಯಕ್ಕೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ಜಗತ್ತಿನ ವಿಕೃತಿಯನ್ನು ಪ್ರಕೃತಿಯಿಂದ, ಕುಟಿಲತೆಯನ್ನು ಸರಳತೆಯಿಂದ, ವಕ್ರತೆಯನ್ನು ಋಜುಮಾರ್ಗದಿಂದ ಅಳೆಯುವ ವಸ್ತುನಿಷ್ಠ ಸತ್ಯದ ಆವಿಷ್ಕಾರ ದೃಷ್ಟಿಯನ್ನು ಮಹಾಕವಿ ಅಳವಡಿಸಿಕೊಳ್ಳುತ್ತಾನೆ; ಆ ಮೂಲಕ ಸಮಷ್ಟಿ ಚೇತನಕ್ಕೆ ಪ್ರಣಾಳಿಕೆಯಾಗುವ ಯುಗಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾನೆ.

ಸನ್ನಿವೇಶಗಳ ವ್ಯಾಪಕವಾದ ನಿರೂಪಣೆ ಮತ್ತು ಸಮೃದ್ಧವಾದ ವರ್ಣನೆಗಳ ಜೊತೆಗೆ ಮಹಾಕಾವ್ಯದ ಇನ್ನೊಂದು ಅವಶ್ಯಕತೆಯೆಂದರೆ ಚಿಂತನಶೀಲತೆ ಮತ್ತು ಸಂಯಮ. ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ, ಅದು ಭಾವಗೀತೆಯಾಗಲೀ, ಸಣ್ಣ ಕಥೆಯಾಗಲೀ, ನಾಟಕವಾಗಲೀ, ಅದಕ್ಕೆ ವಿವೇಚನೆಯಿಂದ ವ್ಯವಸ್ಥಿತವಾದ ರೂಪು ಕೊಡುವ ಪ್ರಯತ್ನ ಅವಶ್ಯಕ. ಮಹಾಕಾವ್ಯ ಉಳಿದೆಲ್ಲ ಕಾವ್ಯಪ್ರಕಾರಗಳಿಂದ ದೀರ್ಘವಾದುದರಿಂದ ಇಲ್ಲಿ ಕವಿಯ ಸಂಕಲ್ಪಶಕ್ತಿ ಮತ್ತು ನಿಯಂತ್ರಣಶಕ್ತಿ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ವ್ಯಕ್ತಿಜೀವನದ ಏಳುಬೀಳುಗಳ ಕಥೆಯನ್ನು ಏಕಮುಖವಾಗಿ ಚಿತ್ರಿಸಿ ದುರಂತಪರಿಣಾಮದ ಮೂಲಕ ಸಹೃದಯರ ಮನಸ್ಸನ್ನು ಶೋಧಿಸುವುದು ರುದ್ರನಾಟಕದ ಉದ್ದೇಶ. ಅದಕ್ಕನುಗುಣವಾಗಿ ಸನ್ನಿವೇಶಗಳನ್ನೂ ಸಂಭಾಷಣೆಗಳನ್ನೂ ಚಿತ್ರಿಸುವುದರ ಕಡೆಗೆ ರುದ್ರನಾಟಕಕಾರನ ಶಕ್ತಿ ಕೇಂದ್ರೀಕೃತವಾಗುತ್ತದೆ. ಆದರೆ ಮಹಾಕವಿಯ ವ್ಯಾಪ್ತಿ ಮತ್ತು ಸಾಧನೆ ಇನ್ನೂ ಹೆಚ್ಚಿನದು, ಇಡೀ ಒಂದು ಜನಾಂಗದ ಸಮಷ್ಟಿ ಮನಸ್ಸನ್ನು ಪ್ರತಿಬಿಂಬಿಸುವಂತೆ, ಪ್ರತಿನಿಧಿಸುವಂತೆ ಆತನ ಚಿಂತನಶಕ್ತಿ ಬೆಳೆಯಬೇಕಾಗುತ್ತದೆ. ಹಲವಾರು ಪಾತ್ರಗಳ ಹಿನ್ನೆಲೆಯಲ್ಲಿ ಪ್ರಮುಖವಾದ ಪಾತ್ರಗಳ ಉದಾತ್ತ ನಡೆಯನ್ನೂ ವೀರಜೀವನವನ್ನೂ ಚಿತ್ರಿಸಬೇಕಾಗುತ್ತದೆ ಮಹಾಕಾವ್ಯ. ಪ್ರಾರಂಭದ ವೀರಗೀತ (Heroic poetry)ಗಳಿಗಿಂತ ಬೇರೆಯಾದರೂ ಇದೂ ಒಂದು ರೀತಿಯಲ್ಲಿ ವೀರದ ಪರಿಣಾಮವನ್ನೂ ಪರಿಸರವನ್ನೂ ಸೃಷ್ಟಿಸುತ್ತದೆ

ಇಲ್ಲಿ ವೀರ ಎನ್ನುವುದನ್ನು ವಿಶಾಲವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಹೋಮರನ ಕಾವ್ಯಗಳಾಗಲೀ ಅಥವಾ ಅನಂತರದ ವರ್ಜಿಲನ ಈನಿಯೆಡ್ ಆಗಲೀ ರಾಮಾಯಣ ಮಹಾಭಾರತಗಳಾಗಲೀ ವೀರಜೀವನವನ್ನು ಚಿತ್ರಿಸಬಹುದಾದ ನಾಯಕರನ್ನು ಪಡೆದಿದ್ದಾರೆ. ಆದರೆ ಇತರ ಅನೇಕ ಮಹಾಕಾವ್ಯಗಳಲ್ಲಿ, ಬಹಳ ಒಳ್ಳೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಉದಾಹರಣೆ ಎಂದರೆ ಡಿವೈನ್ ಕಾಮಿಡಿ. ಡಿವೈನ್ ಕಾಮಿಡಿಯಲ್ಲಿ ವೀರಜೀವನ ಪ್ರಧಾನವಲ್ಲ, 'ಯುದ್ಧವೀರ' ಇಲ್ಲಿ ಪ್ರಮುಖವಲ್ಲವಾದರೂ 'ದಯಾವೀರ' 'ದಾನವೀರ'ಗಳೂ ಒಂದು ಉನ್ನತ ಪರಿಣಾಮವನ್ನು ಸೃಷ್ಟಿಸಬಲ್ಲವು. ವೀರರಸದ ಸ್ಥಾಯಿ ಉತ್ಸಾಹ ಎಂಬ ಭಾರತೀಯ ಕಾವ್ಯಮೀಮಾಂಸೆಯ ಮಾತು ಅರ್ಥವತ್ತಾಗಿದೆ. ಡಿವೈನ್ ಕಾಮಿಡಿಯಾಗಲೀ, ಕುಮಾರ ಸಂಭವವಾಗಲೀ 'ಹರಿಶ್ಚಂದ್ರ ಕಾವ್ಯ'ವಾಗಲೀ ಈ ಅರ್ಥದಲ್ಲಿ ವೀರದ ಪರಿಸರವನ್ನು ಸೃಷ್ಟಿಸುತ್ತವೆ. ಕವಿಯ ಅಗಾಧವಾದ ಸಂಕಲ್ಪ ಶಕ್ತಿ ಇದನ್ನು ಸಾಧಿಸಲು ಕಾರಣವಾಗುತ್ತದೆ. ಇದಿಲ್ಲದೆ ಹೋದರೆ ವೀರ ಜೀವನದ ವರ್ಣನೆ ಇದ್ದರೂ ವೀರದ ಪರಿಭಾವನೆಯನ್ನುಂಟುಮಾಡುವುದರಲ್ಲಿ ವಿಫಲನಾಗುತ್ತದೆ. ಉದಾಹರಣೆಗೆ ಸ್ಪೆನ್ಸರನ 'ಫೇರಿ ಕ್ವೀನ್' ಅನ್ನು ಹೇಳಬಹುದು.

ರುದ್ರನಾಟಕಕಾರನ ದೃಷ್ಟಿ ವಸ್ತು ಪಾತ್ರ ಶೈಲಿಗಳತ್ತ ಕೇಂದ್ರೀಕೃತವಾಗಿ ಉದ್ದೇಶಿತ ದುರಂತ ಪರಿಣಾಮವನ್ನು ಸಾಧಿಸುತ್ತದೆ. ಆಂತರಿಕ ಸಂಘರ್ಷವನ್ನು ಹೆಚ್ಚಿಯಾಗಿ ಬೆಳೆಸುತ್ತಾ ಮಾನಸಿಕ ಹಿನ್ನೆಲೆಯಲ್ಲಿ ಚಿತ್ರಿಸುವುದರ ಕಡೆಗೆ ಆತನ ಗಮನವೆಲ್ಲಾ ಹರಿಯುತ್ತದೆ. ಅದನ್ನು ಅನೇಕ ರೀತಿಯಲ್ಲಿ ಆತ ಸಾಧಿಸಬಹುದು. ಅಗಮೆಮ್ನಾನ್ ಯೂಮೆನೈಡ್ಸ್‌ಗಳಲ್ಲಿ ಅಲ್ಲದೆ ಈಡಿಪಸ್ ಅಂತಿಗೊನೆ ಇತ್ಯಾದಿ ಗ್ರೀಕ್ ರುದ್ರನಾಟಕಗಳಲ್ಲಿ ಅದರ ಉಜ್ವಲ ಉದಾಹರಣೆಗಳನ್ನು ಕಾಣುತ್ತೇವೆ. ಅವರ ದುರಂತದೃಷ್ಟಿ, ಅದಕ್ಕನುಗುಣವಾಗಿ ಪಾತ್ರಗಳು ಬೆಳೆಯುವ ಕ್ರಮ, ಕೊನೆಯಲ್ಲಿ ಅವು ಬೀರುವ ಪರಿಣಾಮ ಇವುಗಳಲ್ಲಿ ನಾಟಕದ ಒಂದು ಹಂತವನ್ನು ಕಂಡರೆ ಷೇಕ್ಸ್‌ಪಿಯರನ ದುರಂತನಾಟಕಗಳು ಇನ್ನೊಂದು ನಿಲವಿನಿಂದ ಜೀವನದ ಗಂಭೀರ ಸಂಘರ್ಷಣೆಯನ್ನು ಚಿತ್ರಿಸುತ್ತವೆ. ಹ್ಯಾಮ್ಲೆಟ್, ಜೂಲಿಯಸ್ ಸೀಸರ್, ಒಥೆಲೊ, ಮ್ಯಾಕ್‌ಬೆತ್, ಕಿಂಗ್ ಲಿಯರ್—ಈ ಮೊದಲಾದ ಯಾವುದೇ ನಾಟಕಗಳನ್ನು ತೆಗೆದುಕೊಂಡರೂ ಅಲ್ಲಿ ದುರಂತವಿನ್ಯಾಸದ ವಿವಿಧ ಬಗೆಗಳನ್ನೂ ಕಾರಣಗಳನ್ನೂ ಕಂಡು ಮನಸ್ಸು ಅಂತರ್ಮುಖಿ ಪರಿಭಾವನೆಗೆ ತೊಡಗುತ್ತದೆ. ಒಂದೊಂದು ಕೃತಿಯಲ್ಲೂ ಮನಸ್ಸಿನ ವಿವಿಧ ಪದರಗಳನ್ನು ವಿಶ್ಲೇಷಿಸಿ ತೋರಿಸುತ್ತಾ ಹೋಗುತ್ತಾನೆ, ಷೇಕ್ಸ್‌ಪಿಯರ್.

ಇದು ಒಂದು ಬಗೆಯಾದರೆ ಮಹಾಕಾವ್ಯದ ಸಾಧನೆ ಇನ್ನೊಂದು ಬಗೆಯದು. ರುದ್ರನಾಟಕ ಘಟನಾಕೇಂದ್ರವಾಗಿ ಪಾತ್ರಪ್ರಧಾನವಾಗಿ ಪರಿಣಮಿಸಿದರೆ ಮಹಾಕಾವ್ಯ ಜೀವನಕೇಂದ್ರವಾಗಿ ಸಮಷ್ಟಿ ಸೂತ್ರಸಂಘಟನಾ ಶಕ್ತಿಯಾಗುತ್ತದೆ. ಸಮಕಾಲೀನ ಪ್ರಜ್ಞೆಯ ಆವಿರ್ಭಾವ ಮಹಾಕಾವ್ಯದ ಇನ್ನೊಂದು ಆವಶ್ಯಕತೆ.

"The Epic writer must express the feelings of large group of people living in or near his own time."

— ಎಂದು E. M. W. Tillyard ಅವರು "The English Epic and its Background" ಎಂಬ ತಮ್ಮ ಗ್ರಂಥದಲ್ಲಿ ಹೇಳುವ ಮಾತು ಅರ್ಥವತ್ತಾದದ್ದು. ಅಂದರೆ ಇದು ದೇಶಾಭಿಮಾನ ಅಥವಾ ದೇಶಭಕ್ತಿಯನ್ನು ಕುರಿತದ್ದಾಗಿರಬೇಕೆಂದೇನೂ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಟ್ಟು ಆ ಕಾಲದ ಜನಜೀವನವನ್ನೂ, ಜೀವನಮೌಲ್ಯಗಳನ್ನೂ, ಅವನ್ನು ಕುರಿತ ಸಮಷ್ಟಿ ಅಭೀಪ್ಸೆಯನ್ನೂ ಪ್ರತಿಬಿಂಬಿಸುವಂತಿರಬೇಕು. ಇದನ್ನು ಅಬರ್‌ಕ್ರೊಂಬಿ ತಮ್ಮ 'The Epic' ಎಂಬ ಕೃತಿಯಲ್ಲಿ "The accepted unconscious metaphysic of the time" ಎಂದು ಕರೆದಿದ್ದಾರೆ. ಅಪ್ರಜ್ಞಾಪೂರ್ವಕವಾಗಿ ಇಡೀ ಒಂದು ಜನಾಂಗ ಒಪ್ಪಿಕೊಂಡಿರುವ ತಾತ್ವಿಕ ನಿಲವನ್ನು ಇದು ಸೂಚಿಸುತ್ತದೆ. ಅಂದರೆ ಮಹಾಕಾವ್ಯಕ್ಕೆ ಆ ಕಾಲದ ಜನರ ಸಮಷ್ಟಿ ಮನಸ್ಸು ಹಿನ್ನೆಲೆಯಾಗಿ ನಿಲ್ಲುತ್ತದೆ. ಪ್ರಸಿದ್ಧವಾದ ಕಥೆಯೊಂದರ ಮೂಲಕ ಅಥವಾ ಸಾಂಕೇತಿಕ ನಿರೂಪಣೆಯ ಮೂಲಕ ಪಾತ್ರಗಳ ವಿಶಿಷ್ಟ ನಿರ್ಮಾಣವನ್ನವಲಂಬಿಸಿ ಇದನ್ನು ಮಹಾಕವಿ ನಿರ್ವಹಿಸುತ್ತಾನೆ. ಅಷ್ಟರಮಟ್ಟಿಗೆ ಇದು ರುದ್ರನಾಟಕದ ಅಂಶಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಜೀವನದ ಆಂತರಿಕ ಸಂಘರ್ಷಣೆ, ಅದಕ್ಕೆ ಅಗತ್ಯವಾದ ಮಾನಸಿಕ ಹಿನ್ನೆಲೆ, ಅದರ ಮೇಲೆ ಶಾಶ್ವತ ಮೌಲ್ಯಗಳ ಉಜ್ವಲ ಚಿತ್ರನಿರ್ಮಾಣ ಇತ್ಯಾದಿ ಗಂಭೀರ ಸಾಧನೆಗಳನ್ನು ಮಹಾಕಾವ್ಯವೂ ಕೈಕೊಳ್ಳುತ್ತದೆ. ಆದರೆ ಇದು ರುದ್ರ ನಾಟಕದಂತೆ ಏಕಮುಖವಾದ ದುರಂತ ಪರಿಣಾಮವನ್ನು ಅದಕ್ಕಾಗಿ ಅವಲಂಬಿಸುವುದಿಲ್ಲ. ಸಮಗ್ರ ಜೀವನ ನಿರೂಪಣೆಯ ಒಂದು ಪ್ರಾಂತವಾಗಿ ಅದನ್ನು ಆಕ್ರಮಿಸುತ್ತದೆ. ಇದು ಮಹಾಕಾವ್ಯಕ್ಕೂ ರುದ್ರನಾಟಕಕ್ಕೂ ಇರುವ ಬಹು ದೊಡ್ಡ ಅಂತರ

ಆದರೆ ಇವು ಪರಸ್ಪರ ವಿರೋಧಿಗಳಲ್ಲ; ಒಂದರ್ಥದಲ್ಲಿ ಪರಸ್ಪರ ಪೂರಕಗಳು. ಕವಿ ತನ್ನ ಉದ್ದೇಶಕ್ಕೆ ಅನುಗುಣವಾಗಿ ಮತ್ತು ತನ್ನ ವಸ್ತುವಿಗೆ ಅನುಕೂಲಕರವಾಗಿ ಮಾಧ್ಯಮವನ್ನು ಆರಿಸಿಕೊಳ್ಳುತ್ತಾನೆ; ಮತ್ತು ಆ ಮಾಧ್ಯಮಕ್ಕನುಗುಣವಾಗಿ ವಸ್ತು ವಿನ್ಯಾಸ ಸಿದ್ಧವಾಗುತ್ತದೆ. ಸಾಹಿತ್ಯಲೋಕಕ್ಕೆ ಈ ಎರಡೂ ಆವಶ್ಯಕ. ಸಾಫೋಕ್ಲೀಸನನ್ನೋ ಷೇಕ್ಸ್‌ಪಿಯರನನ್ನೋ ಮೆಚ್ಚುವ ನಾವು ಹೋಮರನನ್ನಾಗಲೀ ವರ್ಜಿಲನನ್ನಾಗಲೀ ಹೀಗಳೆಯಬೇಕಾಗಿಲ್ಲ. ಅಂತೆಯೇ 'ಪ್ಯಾರಡೈಸ್ ಲಾಸ್ಟ್' ಅನ್ನೋ, 'ಡಿವೈನ್ ಕಾಮಿಡಿ' ಯನ್ನೋ ಮೆಚ್ಚಿದವರು 'ಏಜಾಕ್ಸನ್ನಾಗಲೀ' 'ಈಡಿಪಸ್' ಅನ್ನಾಗಲೀ ಪರಿಮಿತವಲಯದ ಭಾವೋದ್ರೇಕವೆಂದು ಭಾವಿಸಬೇಕಾಗಿಲ್ಲ. ಇವೆರಡೂ ಪ್ರಕಾರಗಳು ಸಾಹಿತ್ಯಾನುಭವದ ಪೂರ್ಣತೆಯನ್ನು ಕಂಡುಕೊಳ್ಳುವ ಮಹತ್ತರವಾದ ಹೆಜ್ಜೆಗಳು. ಆದುದರಿಂದ ಡಾಂಟೆಯನ್ನೂ ಷೇಕ್ಸ್‌ಪಿಯರನನ್ನೂ ಸ್ಪರ್ಧೆಗೆ ನಿಲ್ಲಿಸಿ ಒಬ್ಬನನ್ನು ಮಾತ್ರ ಗೆಲ್ಲಿಸುವ ಅವಶ್ಯಕತೆಯಿಲ್ಲ. ಆದರಿಂದ ಮಾನವ ಚೇತನದ ಅನುಭವಮಯವನ್ನು ಅನವಶ್ಯವಾಗಿ ಸೀಮಿತಗೊಳಿಸಿದಂತಾಗುತ್ತದೆ. ಮಾನವನ ಬಹುಮುಖ ಅನುಭವದ ಮತ್ತು ಅದರ ಅಭಿವ್ಯಕ್ತಿಯ ಸಾಧ್ಯತೆಗಳಲ್ಲಿ ಈ ಎರಡು ಪ್ರಕಾರಗಳು ಮಹತ್ತರವಾದುದನ್ನು ಸಾಧಿಸಿವೆ.

ಭಾರತೀಯ ಸಾಹಿತ್ಯ ಇವುಗಳಲ್ಲಿ ಒಂದರಿಂದ ವಂಚಿತವಾಗಿದೆ. ಅಂದರೆ ರುದ್ರ ನಾಟಕಗಳ ರೂಪ ಮೊದಲಿನಿಂದಲೂ ನಮ್ಮಲ್ಲಿ ಬೆಳೆದು ಬರಲಿಲ್ಲ. ಜೀವನವನ್ನು ಕುರಿತ ಮೂಲಭೂತವಾದ ನಮ್ಮ ದೃಷ್ಟಿಯೇ ಅದಕ್ಕೆ ಕಾರಣವೆನ್ನಬಹುದು. ಜೀವನವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರ ಆತ್ಯಂತಿಕ ಪರಿಣಾಮದ ದೃಷ್ಟಿಯಿಂದ ನೋಡಿ ಮಂಗಳಾಂತವಾಗಿಯೇ ಮುಗಿಸುವುದು ನಮ್ಮ ನಾಟಕಕಾರರ ದೃಷ್ಟಿ ಎಂದು ತೋರುತ್ತದೆ. ಅದರ ವಿವರವಾದ ವಿವೇಚನೆ ಇಲ್ಲಿ ಅನಗತ್ಯ. ಇಷ್ಟನ್ನು ಮಾತ್ರ ಹೇಳಬಹುದು; ರುದ್ರನಾಟಕಗಳು ನಮ್ಮಲ್ಲಿಲ್ಲದೇ ಹೋದರೂ ದುರಂತ ಪರಿಣಾಮವನ್ನುಂಟುಮಾಡುವ ನಾಯಕರು ಇಲ್ಲದೇ ಇಲ್ಲ. ಬಿ. ಎಂ. ಶ್ರೀಯವರು ದುರ್ಯೋಧನನಲ್ಲಿ, ಅದರಲ್ಲೂ ಪಂಪ ರನ್ನರ ದುರ್ಯೋಧನನಲ್ಲಿ, ಜೈನ ರಾವಣನಲ್ಲಿ ಇದನ್ನು ಗುರುತಿಸಿದರು. ಅಂತೆಯೇ ಅಶ್ವತ್ಥಾಮನನ್ನು ರುದ್ರನಾಟಕಕ್ಕೆ ಅಳವಡಿಸಿ ತೋರಿಸಿದರು. ಈ ದುರಂತ ದೃಷ್ಟಿಯನ್ನು ನಮ್ಮ ಸಾಹಿತ್ಯ ಸ್ಪಷ್ಟವಾಗಿ ಪ್ರತಿಪಾದಿಸದಿದ್ದರೂ ಈ ಗಂಭೀರ ಅನುಭವವನ್ನು ನಮ್ಮ ಮಹಾಕಾವ್ಯಗಳು ಒಂದಲ್ಲ ಒಂದು ರೀತಿಯಲ್ಲಿ ಪೂರೈಸಿಕೊಟ್ಟವು. ಇಂದು ಪಾಶ್ಚಾತ್ಯ ಸಾಹಿತ್ಯದ ಪರಿಚಯದಿಂದ ಹೊಸ ಮಹಾಕಾವ್ಯಗಳ ಜೊತೆಗೆ ರುದ್ರನಾಟಕದ ಈ ಒಂದು ಹೊಸ ಪ್ರಕಾರವೂ ನಮ್ಮ ಕರಗತವಾಗಿದೆ. ಇಂದಿನ ಅನುಭವದಿಂದ ನಮ್ಮ ಹಿಂದಿನ ಮಹಾಕಾವ್ಯಗಳನ್ನು ನೋಡುವ ದೃಷ್ಟಿ ಬೆಳೆಯುತ್ತಿದೆ; ಹೊಸ ಹೊಸ ಅನುಭವಗಳನ್ನು ಅವು ನಮಗೆ ತಂದುಕೊಡುತ್ತಿವೆ. ಸಾಹಿತ್ಯದ ಇತರ ಪ್ರಕಾರಗಳೂ ಬೆಳೆಯುತ್ತಿವೆ. ಕಾದಂಬರಿ ಸಣ್ಣಕಥೆಗಳು ಜನಪ್ರಿಯವಾಗಿ ಇಂದಿನ ಸಂಕೀರ್ಣ ಜೀವನದ ಅಭಿವ್ಯಕ್ತಿಗೆ ಅನುಕೂಲವಾದ ಸಶಕ್ತ ಮಾಧ್ಯಮಗಳಾಗಿವೆ; ಮುಂದೆ ಬಹುಶಃ ಮಹಾಕಾವ್ಯ ರಚನೆ ಸಾಧ್ಯವಿಲ್ಲ ಅಥವಾ ಅಗತ್ಯವಿಲ್ಲ ಎನ್ನುವವರೆಗೆ ಇವುಗಳ ಪ್ರಾಧಾನ್ಯ ಮತ್ತು ಮಹತ್ವ ಬೆಳೆಯುತ್ತಿದೆ. ಆದರೆ ಮಹಾಕಾವ್ಯದ ರೂಪ ಬದಲಾಗ ಬಹುದಾದರೂ ಅದರ ಸತ್ವ ಉಳಿಯಲೇಬೇಕಾಗುತ್ತದೆ; ಈ ಮಾತು ರುದ್ರನಾಟಕಕ್ಕೂ ಅನ್ವಯಿಸುತ್ತದೆ. ಮಹಾಕಾವ್ಯ ಮತ್ತು ರುದ್ರನಾಟಕಗಳು ಬದಲಾಗುತ್ತಿರುವ. ಜೀವನದ ಪರಿಸರಕ್ಕೆ ಹೊಂದಿಕೊಂಡು ಇದುವರೆಗೂ ವಿಕಾಸ ಮಾರ್ಗದಲ್ಲಿ ಬೆಳೆದು ಬಂದಂತೆ ಮುಂದೆಯೂ ಸತ್ವಶಾಲಿಯಾಗಿ ಉಳಿಯುವಂತಹ ಪ್ರಭಾವಶಾಲಿಯಾದ ಪ್ರಕಾರಗಳಾಗಿ ಪರಿಣಮಿಸಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾ|| ಟಿ. ವಿ. ವೆಂಕಟಾಚಲಶಾಸ್ತ್ರೀ

ಕಾವ್ಯ ವಿಷಯವಾಗಿ ಛಂದಸ್ಸು

ಛಂದಸ್ಸು ಪದ್ಯಸಾಹಿತ್ಯದ ಒಂದು ಅವಶ್ಯಾಂಗ ಎಂಬುದು ತಿಳಿದದ್ದು. ಛಂದೋಬದ್ಧವಾದ ವಾಣಿಯೇ ಕವಿತೆ. ಕಾವ್ಯ ಎಂಬುದೂ ತಿಳಿದದ್ದೇ. ಕವಿಮನೋಧರ್ಮವನ್ನೂ ಕಾವ್ಯರಹಸ್ಯವನ್ನೂ ತಿಳಿಯುವ ಪ್ರಯತ್ನಗಳಲ್ಲಿ ಛಂದಸ್ಸಿನ ವಿಶ್ಲೇಷಣೆ ಗಣನೀಯವಾದ್ದು. ಆದರೆ ಕೆಲವೊಮ್ಮೆ ಕವಿಗಳು ತಮಗಿರುವ ಛಂದಶ್ಶಾಸ್ತ್ರದ ವಿಶೇಷ ಪರಿಚಯ ಅದರ ಭಾವಗಳಿಂದಾಗಿ, ಆ ಶಾಸ್ತ್ರದ ಪ್ರಕ್ರಿಯೆಯನ್ನೇ ಕಾವ್ಯವಿಷಯವಾಗಿ ಮಾಡಿಕೊಂಡು ಒಂದು ಬಗೆಯ ಚಮತ್ಕಾರವನ್ನು ಪ್ರಕಟಿಸಿರುವುದು ಕೂಡ ನಮ್ಮ ಗಮನವನ್ನು ಸೆಳೆಯುತ್ತದೆ. ಕನ್ನಡ ಸಾಹಿತ್ಯದಲ್ಲಿ ಕಂಡು ಬರುವ ಅಂಥ ಕೆಲವು ನಿದರ್ಶನಗಳನ್ನು ಈ ಪ್ರಬಂಧದಲ್ಲಿ ಒಗ್ಗೂಡಿಸಲು ಪ್ರಯತ್ನಿಸಿದೆ.

ಮುಖ್ಯವಾಗಿ ಸಂಜ್ಞಾಪ್ರಕರಣಕ್ಕೆ ಸಂಬಂಧಿಸಿದ ಲಘುಗುರುಗಳು. ಗಣ ಪ್ರಸ್ತಾರ. ಯತಿ, ಪಾದ. ವೃತ್ತ, ವೃತ್ತನಾಮ ಈ ಕೆಲವು ವಿಷಯಗಳಿಗೆ ಸ್ಥಾನ ದೊರೆತಿರುವುದು ಹೆಚ್ಚು ಎನ್ನುವುದು ನಿದರ್ಶನಗಳ ಪರಿಶೀಲನೆಯಿಂದ ತಿಳಿಯುತ್ತದೆ. ಅನಂತರ ಛಂದೋವಿಶಿಷ್ಟವಾದ ಮುದ್ರಾಲಂಕಾರದ ಕೆಲವು ಸಂದರ್ಭಗಳೂ, ಛಂದಃಪರಿಕೀರ್ತನದ ವಿರಳ ಸಂದರ್ಭಗಳೂ ಸ್ಥಾನ ಪಡೆಯುವಂತೆ ತೋರುತ್ತವೆ. ಈ ಮೂರು ವಿಭಾಗಗಳಲ್ಲಿ ದೊರೆಯುವ ಸಾಮಗ್ರಿಯನ್ನೂ ಕವಿ ಕಾಲಾನುಕ್ರಮದಲ್ಲಿ ಇಲ್ಲಿ ಸರಗೊಳಿಸಿದೆ.

೧

(1) ಸಂಜಯ ಸಹಾಯನಾಗಿ ಯುದ್ಧಾಂತ ಕುರುಭೂಮಿಯಲ್ಲಿ ನಡೆದು ಬರುತ್ತಿದ್ದ ದುರ್ಯೋಧನನು ಒಂದು ಕಡೆ ಶರಜಾಲಜರ್ಜರಿತಗಾತ್ರತ್ರಾಣನಾದ ದ್ರೋಣನನ್ನು ಕಂಡನಂತೆ. ಆಗ ಆತನ ದೃಷ್ಟಿಗೆ ಆ ನೋಟ ಹೇಗೆ ಕಂಡಿತು ಎನ್ನುವುದನ್ನು ರನ್ನ ತನ್ನ 'ಗದಾಯುದ್ಧ' ಕಾವ್ಯದಲ್ಲಿ ಹೀಗೆ ತಿಳಿಸುತ್ತಾನೆ :

ಗುರುವಂ ಲಘುಸಂಧಾನದೆ
ನರನಿಸೆ ಗುರುಲಘುವಿಮಿಶ್ರಿತಂ ದೊರೆಕೊಳೆ ತ
ದ್ಗುರುತಚ್ಛಂದೋವೃತ್ತಿಗೆ
ದೊರೆಯೆನಿಸಿರ್ದುದು ಮನಕ್ಕೆ ದುರ್ಯೋಧನನಾ ॥ (4–49)

'ಗುರುವಾದ ದ್ರೋಣನನ್ನು ಅರ್ಜುನನು ತನ್ನ ಹಗುರವಾದ ಬಾಣ ಪ್ರಯೋಗಗಳಿಂದಲೇ ಘಾತಿಸಿದ. ಗುರುಲಘುಗಳು ಬೆರೆತು ಬರುತ್ತಿರಲು, ಗುರುವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂದ ಮೊದಲಾಗುವ ಆ ಛಂದೋವೃತ್ತಿಗೆ ಎಂದರೆ ಪ್ರಸ್ತಾರವಿಧಿಗೆ ಸಮಾನವಾಗಿ ಅದು ದುರ್ಯೋಧನನ ಮನಸ್ಸಿಗೆ ತೋರಿತು.' ಪ್ರಾಯಶಃ ಪದ್ಯದ ತಾತ್ಪರ್ಯ ಇದು. ಹೇಗೆ ಲಘು ತನ್ನ ಪ್ರವೇಶದಿಂದಲೂ ಪ್ರಭಾವದಿಂದಲೂ ಗುರುವನ್ನು ವಿವಿಧ ಲಯಗಳನ್ನು ಪಡೆಯಲು ಅನುಸರಿಸಬೇಕಾದ ಪ್ರಸ್ತಾರವಿಧಿಗೆ ಸೆಳೆಯಲು ಶಕ್ತವಾಯಿತೋ, ಹಾಗೆಯೇ ಅರ್ಜುನನ ಲಘುಸಂಧಾನವೇ ಎಂದರೆ ಒಲ್ಲದ ಮನಸ್ಸಿನ ಹಗುರವಾದ ಬಾಣಪ್ರಯೋಗವೇ ಗುರುವನ್ನು ಎಂದರೆ ದ್ರೋಣನನ್ನು ಯುದ್ಧದಲ್ಲಿ ಘಾತಿಸಲು ಶಕ್ತವಾಯಿತು. ಹೀಗೆ ಹೇಳುವ ಮೂಲಕ, ಅರ್ಜುನನಿಗೆ ಗುರುವಾಗಿಯೂ ದ್ರೋಣನು ತನ್ನ ಶಿಷ್ಯನ ಸಾಮಾನ್ಯ ಬಾಣಪ್ರಯೋಗಕ್ಕೇ ಮೈಯ ಕವಚವೆಲ್ಲ ಜರ್ಜರಿತವಾಗಿ ಗಾಸಿಪಡುವಂತಾಯಿತಲ್ಲ, ಇದೆಂಥ ಆಶ್ಚರ್ಯ ಎಂಬ ಇಂಗಿತಾರ್ಥವನ್ನು ಈ ಪದ್ಯದಲ್ಲಿ ತರಲು ರನ್ನನು ಪ್ರಯತ್ನಿಸಿರುವಂತೆ ತೋರುತ್ತದೆ. ರಸದೃಷ್ಟಿಯನ್ನು ಎಷ್ಟು ಮಾತ್ರವೂ ಪ್ರಕಟಿಸದ, ಅಂಥ ಒಳ್ಳೆಯ ಕಲ್ಪನೆಯೂ ಅಲ್ಲದ ಈ ದೃಷ್ಟಾಂತ ಪಂಡಿತಕವಿಯೊಬ್ಬನ ಛಾಂದಸಕವಿತ್ವದ ಒಂದು ನಿದರ್ಶನ. ಆದರೆ ಕವಿ ರನ್ನನ ಛಂದಸ್ಸಿನ ಪ್ರೀತಿ, ಲಾಕ್ಷಣಿಕ ಪ್ರಜ್ಞೆ ಇವನ್ನು ಈ ನಿದರ್ಶನದಲ್ಲಿ ಗುರುತಿಸಿ. ಅಷ್ಟರಮಟ್ಟಿಗೆ ಅದನ್ನು ನಾವು ಮೆಚ್ಚಿಕೊಳ್ಳಬಹುದು.

(2) ನಯಸೇನನ 'ಧರ್ಮಾಮೃತ' ದಲ್ಲಿ (1112) ಎಂದಿರುವ ಸರಸ್ವತೀ ಸ್ತುತಿಯಿದು :

> ಕುಂದದ ಕೋಮಲಾಂಗರುಚಿಯಿಂ ಚೆಲುವಿಂಗೆಡೆಯಾಗಿ ವೃತ್ತದೊಂ
> ದಂದದೊಳಿರ್ದ ಪೆರ್ಮೆಲೆಯಿನಂತೆಸೆದೊಪ್ಪುವನೇಕ ಛಂದದೊ
> ಳಂದದ ಯಾನದೊಂದು ರಮಣೀಯತೆಯಿಂ ಕಡುಗಾಡಿವೆತ್ತ ವಾ
> ಕ್ಸುಂದರಿ ಕೂರ್ತು ನಿಲ್ಕೆ ನಯಸೇನಮುನೀಂದ್ರ ಮುಖಾಬ್ಜಷಂಡದೊಳ್ ॥ (1-8)

ಇಲ್ಲಿ ಮೇಲುನೋಟಕ್ಕೇ ತೋರುವಂತೆ 'ವೃತ್ತ ಮತ್ತು 'ಛಂದ ಎಂಬೆರೆಡು ಮಾತುಗಳು ಛಂದಸ್ಸಿನ ವಲಯಕ್ಕೆ ಸೇರಿದವು. ಮೊದಲನೆಯ ಶಬ್ದದಲ್ಲಿ 'ಉರುಟಾದ ಆಕೃತಿಯಲ್ಲಿರುವ' ಎಂದೂ 'ವಿಧವಿಧವಾದ ವೃತ್ತಗಳ ರೂಪದ' ಎಂದೂ ಅಭಿಪ್ರಾಯವಾಗುವ ದ್ವಂದ್ವಾರ್ಥವನ್ನಿಟ್ಟಿದೆ; ಎರಡನೆಯ ಶಬ್ದದಲ್ಲಿ ಹೀಗೆಯೇ ದ್ವಂದ್ವಾರ್ಥವನ್ನಿಟ್ಟಿದ್ದು 'ಅನೇಕ ಛಂದದ (ಚಂದದ) ಒಂದು ಅಂದದ ಯಾನದ' ಎಂಬ ವಾಕ್ಯಭಾಗದ ಅರ್ಥ 'ತನಗೆ ಇಷ್ಟವಾದ ಸೊಗಸಾದ ವಾಹನದ' ಎಂದೂ 'ಅನೇಕ ಛಂದಸ್ಸುಗಳ ಸೊಗಸಾದ ವಾಹನದ' ಎಂದೂ ಸ್ಫುರಿಸುವಂತಿದೆ. ವಾಕ್ಸುಂದರಿಯ ಚೆಲುವಿನ ನಿಲುವು ಎಂದರೆ ಕವಿತೆಯಲ್ಲಿ ಬಳಸುವ ವೃತ್ತಗಳು, ಆಕೆಯನ್ನು ನಡಸುವ ವಾಹನ ಎಂದರೆ ಅಲ್ಲಿ ಬರುವ ಬಗೆಬಗೆಯ ಛಂದಸ್ಸುಗಳು – ಎಂದು ಹೇಳುವಲ್ಲಿ ಸ್ವಲ್ಪ ರಮಣೀಯತೆಯೇನೋ ಇದೆ. ಆದರೆ ಔಪಮ್ಯ ಕಲ್ಪನೆಯಲ್ಲಿ ಅಂಥ ಜಾಣ್ಮೆಯಿಲ್ಲದೆ. ಪುನರುಕ್ತಿಗೆ ಎಡೆಗೊಟ್ಟು ಸ್ವಾರಸ್ಯ ತಗ್ಗಿದಂತಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

(3) ಛಂದಸ್ಸು ವ್ಯಾಕರಣಗಳೆರಡರಲ್ಲಿಯೂ ವಿಷಯುವಾಗಿ ಬರುವ ಶಿಥಿಲ ದ್ವಿತ್ವ ಪ್ರಕ್ರಿಯೆಯನ್ನು ಬಳಸಿ, ಒಬ್ಬ ಅಜ್ಞಾತಕವಿ ಒಂದು ಸಾಮಾಜಿಕ ಸಂದರ್ಭ ವನ್ನು ಹೀಗೆ ವಿವರಿಸಿದ್ದಾನೆ :

ಒರೆಂಜಲ್ಗೊರ್ಪಂತಿಗೆ
ವಾರದ ಖಳರೊಡನೆ ಬೆರಸಿ ಮೇಳಂಗೊಂಡಂ
ದಾರುಂ ಲಘುವಪ್ಪರ್ ಪ್ರ
ಸ್ತಾರದೊಳಮರ್ದೆಂಬ ಶಿಥಿಲಸಂಯೋಗದವೊಲ್ ॥ (ಪ. 259)

'ಕಾವ್ಯಾವಲೋಕನ' ದೊಳಗಿನ ಈ ಕಂದಪದ್ಯದ ಕವಿ ಯಾರೋ, ಆಕರ ಯಾವುದೋ ತಿಳಿಯದು. ಇದನ್ನು ಆಯ್ದು, ನಾಗವರ್ಮನು ತನ್ನ ರಸಜ್ಞತೆ ಛಂದಃಪ್ರೀತಿಗಳನ್ನು ಏಕಕಾಲದಲ್ಲಿ ತೋರಿದ್ದಾನೆ ಎನ್ನಬಹುದು. 'ಒಂದು' ಎಂಬ ಸಂಖ್ಯಾವಾಚಿಗೆ ಕಡೆಯಲ್ಲಿ ರೇಫಾದೇಶವಾಗಿ 'ಒರ್' ಎಂದಾಗುವುದು ಎಂದು ಹೇಳುವಾಗ, ಕೊಟ್ಟ ಪ್ರಯೋಗವಿದು. "ಒಂದು ತಣಿಗೆಯಲ್ಲಿ ಉಣ್ಣಲೂ ಒಟ್ಟಿಗೆ ಕೂತು ಉಣ್ಣಲೂ ಯೋಗ್ಯರಲ್ಲದ ದುಷ್ಟರೊಡನೆ ಸೇರಿ ಸ್ನೇಹ ಬೆಳೆಸಿದಾಗ, ಯಾರೇ ಆಗಲಿ, ಪ್ರಸ್ತಾರದಲ್ಲಿ 'ಅಮರ್ದು' ಎಂಬ ಶಿಥಿಲದ್ವಿತ್ವವುಳ್ಳ ಪದದ ಹಾಗೆ ತಾವೂ ಲಘುವಾಗುತ್ತಾರೆ, ಎಂದರೆ ಅಲ್ಪರಾಗುತ್ತಾರೆ"—ಇದು ಪದ್ಯದ ಆಶಯ.

'ಶಬ್ದಮಣಿದರ್ಪಣ'ದ ಪರಿಚಯವಿರುವವರಿಗೆ ಈ ಉಪಮೆಯ ಅರ್ಥ ಸುಲಭವಾಗಿ ಹೊಳೆಯುತ್ತದೆ. 'ಅಮರ್ದು' ಸಹಜ ಶಿಥಿಲ ವೃತ್ತಿಯ ಶಬ್ದಗಳಲ್ಲಿ ಒಂದು (ಶಮದ. ಸೂತ್ರ ೫೫). ಇಲ್ಲಿಯ 'ರ್ದು' ಶಿಥಿಲದ್ವಿತ್ವವಾಗಿ ಉಚ್ಚಾರ ವಾಗುವುದರಿಂದ 'ಮ' ಸಂಯುಕ್ತಾಕ್ಷರದ ಹಿಂದಿನ ಅಕ್ಷರ ಗುರುವಾಗಬೇಕೆಂಬ ಸಾಮಾನ್ಯನಿಯಮಕ್ಕೆ ಸಿಕ್ಕದೆ ಲಘುವಾಗಿಯೇ ಉಳಿಯುತ್ತದೆ. ನ್ಯಾಯವಾಗಿ ಗುರುವಾಗಬೇಕಾಗಿದ್ದ ಸಂಯುಕ್ತಾಕ್ಷರದ ಹಿಂದಿನ ಅಕ್ಷರ, ಸಂಯುಕ್ತಾಕ್ಷರದ ಶೈಥಿಲ್ಯಲಕ್ಷಣದ ಕಾರಣ ಗುರುವಾಗದೆ ಉಳಿಯಬೇಕಾಯಿತಷ್ಟೇ ; ಹಾಗೆಯೇ ಅನೇಕ ದೋಷದೌರ್ಬಲ್ಯಗಳಿಂದ ಕೂಡಿದ ಖಳರ ಸ್ವಭಾವಸಂಪರ್ಕ ಸಂಸರ್ಗಗಳ ಕಾರಣವಾಗಿ ಎಂಥವರೂ, ಸಜ್ಜನರೇ ಆದವರೂ, ತಮ್ಮ ಗುರುತ್ವವನ್ನು ಎಂದರೆ ಹಿರಿಮೆಗರಿಮೆಗಳನ್ನು ಕಳೆದುಕೊಂಡು ತಾವು ಆ ಖಳರ ಹಾಗೆಯೇ ಅಲ್ಪರಾಗಿ ಬಿಡುತ್ತಾರೆ – ಎಂಬುದು ಒಟ್ಟಿನಲ್ಲಿ ಪದ್ಯದ ಅಂತರಾರ್ಥ. ಆದರೆ ಈ ಉಪಮೆಯ ಸ್ವಾರಸ್ಯ ಇಷ್ಟರಲ್ಲೇ ಮುಗಿಯದೆ ಆಲೋಚಿಸಿದ ಹಾಗೆಲ್ಲ ಅರ್ಥವ್ಯಾಪ್ತಿ ಬೆಳೆಯುವಂತೆ ತೋರುತ್ತದೆ. ಶೈಥಿಲ್ಯಲಕ್ಷಣವಿಲ್ಲದ ಸಂಯುಕ್ತಾಕ್ಷರದ ಹಿಂದಿನ ಲಘ್ವಕ್ಷರ ಗುರು ವಾಗುವುದು ಸಹಜವಷ್ಟೇ. ಹಾಗೆಯೇ ಅಂಥ ಸಂಯುಕ್ತಾಕ್ಷರಕ್ಕೆ ಸದೃಶರಾದ ಸಜ್ಜನರ ಸಂಪರ್ಕದಿಂದ ಅಲ್ಪರೂ ಗುರುತ್ವವನ್ನು ಎಂದರೆ ಹಿರಿಮೆಗರಿಮೆಗಳನ್ನು ಪಡೆಯುವುದು ಸಾಧ್ಯ; ಮೊದಲೇ ಹಿರಿತನವುಳ್ಳವರಾಗಿದ್ದ ಪಕ್ಷದಲ್ಲಿ, ಯಾವ ಭಂಗವೂ ಕೊರತೆಯೂ ಇಲ್ಲದಂತೆ ಅವರು ನೆಮ್ಮದಿಯಿಂದ ಇದ್ದುಕೊಳ್ಳುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಿಯೇ ಸರಿ. ಹೀಗೆ ಅರ್ಥಕಲ್ಪನೆ ಬೆಳೆಯುವುದಕ್ಕೆ ಅವಕಾಶವಿರುವ ಈ ಪದ್ಯ ಪ್ರತಿಭೆ ಪಾಂಡಿತ್ಯಗಳ ಒಂದು ಸಮರಸಸೃಷ್ಟಿ.

(4) ಕವಿಯ ಪದ್ಯಪಾದದ ರಚನೆಯನ್ನು ಲಕ್ಷಿಸುವ ಒಂದು ಪದ್ಯ —

ಅತಿಶಯ ಪದಾರ್ಥನಿಕರ
ಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂ
ನುತಮಾಗದಲ್ತೆ ನಿರ್ದೋ
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥ (1-47)

ಎಂಬುದಾಗಿ ಅಗ್ಗಳನ 'ಚಂದ್ರಪ್ರಭಪುರಾಣ'ದಲ್ಲಿ (1189) ದೊರೆಯುತ್ತದೆ. 'ಕವಿಗೂ ರವಿಗೂ ಪದಾರ್ಥನಿಕರ ಪ್ರತೀತಿ ಉದ್ದಿಷ್ಟವಾದ ಒಂದು ಧ್ಯೇಯ. ಅದನ್ನು ಸಾಧಿಸುವುದು ಪಾದವಿನ್ಯಾಸ. ಅದು ನಿರ್ದೋಷತೆಯಿಂದ ಕೂಡಿದ್ದರೆ ಮಾತ್ರ ಧ್ಯೇಯಸಾಧನೆ'. ಇದು ಪದ್ಯದ ಆಶಯ. ಈ ವರ್ಣನೆಯಲ್ಲಿ ಪದಾರ್ಥನಿಕರ ಪ್ರತೀತಿ, ಪಾದವಿನ್ಯಾಸ, ನಿರ್ದೋಷತೆ ಈ ಪದಗಳಿಗೆ ಕವಿಪರವಾಗಿ ಅರ್ಥ ಮಾಡಿದರೆ ಶಬ್ದಗಳ ಅರ್ಥವನ್ನು ಹೊಮ್ಮಿಸುವುದು, ಪದ್ಯಪಾದಗಳನ್ನು ಕಟ್ಟುವುದು ಮತ್ತು ಛಂದಸ್ಸಂಬಂಧಿಯಾದ ಯಾವ ದೋಷಗಳೂ ಇಲ್ಲದಿರುವುದು ಎಂದಾಗುವುದು; ರವಿಪರವಾಗಿ ಲೋಕದ ಪದಾರ್ಥಗಳನ್ನು ಕಾಣುವಂತೆ ಮಾಡುವುದು, ಕಿರಣಗಳನ್ನು ಹರಡುವುದು ಮತ್ತು ಕತ್ತಲಿಲ್ಲದಿರುವುದು ಎಂದಾಗುತ್ತದೆ. ಉದ್ದಿಷ್ಟವಾದ ಶಬ್ದಾರ್ಥಗಳನ್ನು ತಕ್ಕ ರೀತಿಯಲ್ಲಿ ಕವಿ ಹೊಮ್ಮಿಸಬೇಕಾದರೆ, ಗಣ ಪ್ರಾಸ ಯತಿ ಮುಂತಾದ ಛಂದೋಲಕ್ಷಣಗಳಲ್ಲಿ ಯಾವುದಕ್ಕೂ ಭಂಗವಾಗದ ಹಾಗೆ ಪದ್ಯಪಾದಗಳನ್ನು ಕಟ್ಟಿರಬೇಕು — ಎಂದು ಶ್ಲಿಷ್ಟವಿಧಾನದಲ್ಲಿ ಪೂರ್ವೋಕ್ತ ಪದ್ಯ ತಿಳಿಸುತ್ತದೆ.

(5) ಆಚಣ್ಣನ 'ವರ್ಧಮಾನಪುರಾಣದ'ಲ್ಲಿ (ಸು. 1195) ವಿಶಾಖನಂದಿ ಎಂಬವನ ದುಶ್ಚರಿತವನ್ನು ಪರಿಪರಿಯಾಗಿ ವಿವರಿಸುತ್ತಾ—

"...ಚರಮ ಪ್ರಸ್ತಾರಿತ ವೃತ್ತದಂತೆ ಅತಿಕ್ರಾಂತ ಗುರೂಪದೇಶನುಂ" (2-35 ವ.)

ಎಂದು ಹೇಳಿದ್ದಾನೆ. ಇದರ ಸ್ಪಷ್ಟವಾದ ಆಶಯವೇನೆಂದು ತಿಳಿಯುವುದು ಕಷ್ಟ. ಛಂದಸ್ಸಿನಲ್ಲಿ ಪ್ರಸ್ತಾರದ ಕೊನೆಗೆ ಯಾವುದೂ ಗುರುವಿರದೆ ಲಘುವೇ ಇರುವುದಷ್ಟೇ. ಅಂಥ ಲಘುಗಳಿಂದ ಕಟ್ಟಿದ ವೃತ್ತದ ಹಾಗೆ, ವಿಶಾಖನಂದಿ ಗುರುಜನರ ಹಿತೋಪದೇಶವನ್ನು ಮೀರಿದವನಾದ್ದರಿಂದ ತಾನೂ ಪೂರ್ತಿಯಾಗಿ ಲಘುವಾದವನು, ಎಂದರೆ ಅಲ್ಪನೆನಿಸಿದನು — ಎಂದು ಈ ಗದ್ಯಭಾಗದ ಅಭಿಪ್ರಾಯವಿರಬಹುದು.

(6) ದೇವ ಕವಿಯ (ಸು. 1200) 'ಕುಸುಮಾವಳಿ' ಯಲ್ಲಿ ಈ ಬಗೆಯ ಪಾಂಡಿತ್ಯವಿಲಾಸ ಸ್ವಲ್ಪ ಅಧಿಕ ಪ್ರಮಾಣದಲ್ಲಿ ಬೊಗದೋರಿದೆ. ಒಂದೊಂದಾಗಿ ನಿದರ್ಶನವನ್ನು ಇಲ್ಲಿ ಪ್ರಸ್ತಾಪಿಸಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

(i) ವಸಂತಕ ವಿಷಯದಲ್ಲಿ 'ಲಘುತ್ವವೆನ್ನುವುದು ಅನ್ಯತ್ರ ಎಲ್ಲಿಯೂ ಇಲ್ಲ, ಛಂದೋಗಣಗಳಲ್ಲಿ ಉಂಟು' ಎಂದು ಅಭಿಪ್ರಾಯವಾಗುವ

ಲಘುತ್ವಂ ಛಂದೋ ಗಣಂಗಳೊಳ್

ಎಂಬ ಮಾತುಂಟು. ಈ ಬಗೆಯ ಶ್ಲೇಷಾಲಂಕಾರದ ಕಲ್ಪನೆ ಹಳೆಯ ಕಾವ ಗಳಲ್ಲಿ ಸಾಮಾನ್ಯ.

(ii) ಗರ್ಭವತಿಯಾದ ವಿಜಯಾವತಿದೇವಿಯ ನಡಿಗೆಯನ್ನು ಕುರಿತು —

ನವಪುತಿಯಿಲ್ಲದ ಕುಕವಿಯ
ಕವಿತೆಯವೋಲ್ ಮಾಂದ್ಯಮಾಯ್ತು ಪದವಿನ್ಯಾಸಂ
ಯುವತಿಗೆ ಮಹಿಮೋನ್ನತಿಮೋ
ರುಮೆನಿಪ್ಪಾ ಗರ್ಭದರ್ಭಕನ ಗೌರವದಿಂ ॥ (5-16)

ಎಂಬುದಾಗಿಯೂ

(iii) ಮಳೆಗಾಲ ತೊಲಗಿ ಶರತ್ಕಾಲ ಕಾಣಿಸಿಕೊಂಡು ಜನಸಂಚಾರ ತೊಡಗಿತೆನ್ನುವಾಗ –

.........ಸತ್ಕವೀಂದ್ರನು
ಜ್ವಳಕವಿತಾವಳಿವೋಲ್ ಮೃದುಪದನ್ಯಸನೋಚಿತಮಾಯ್ತಿಳಾತಳಂ ॥ (6-44)

ಎಂಬುದಾಗಿಯೂ

(iv) ವಿಶ್ವಂಭರಮಹಾರಾಜ ಮತ್ತು ವಿನಯಾವತಿಯರ ಕುಮಾರನಾದ ಕಂದರ್ಪನ ಬಾಲಲೀಲೆಯನ್ನು

ಮೃದುಪದ ವಿನ್ಯಾಸ ವಿಳಾ
ಸದಿನೆಸಕದ ಸುಕವಿಯಂತೆ...... ॥ (6-154)

ಎಂಬುದಾಗಿಯೂ ಬರೆದಿರುವಲ್ಲಿ, ಹೆಜ್ಜೆಯನ್ನೂ ಪದ್ಯದ ಸಾಲನ್ನೂ ಶ್ಲೇಷೆಯಿಂದ ಒಟ್ಟಿಗೆ ಕುರಿತಿರುವುದು ಕಂಡುಬರುತ್ತದೆ.

ವಿಮಳಾಪುರಿಯ ಅರಸು ವಿಶ್ವಂಭರರಾಜ; ಆತನ ಪತ್ನಿ ವಿಜಯಾವತಿ, ಈಕೆ ಗರ್ಭವತಿಯಾದ ಸಂದರ್ಭವನ್ನು ಕುಮಾರೋದಯದ ಸಾಂಪ್ರದಾಯಿಕ ವರ್ಣನೆಗೆ ಹಿನ್ನೆಲೆಯಾಗಿ ಸ್ವಲ್ಪ ವಿಸ್ತಾರವಾಗಿ ವರ್ಣಿಸಿದ್ದಾನೆ ದೇವ ಕವಿ. ಈ ಪ್ರಸ್ತಾವದ ಒಂದು ಪದ್ಯ:

ರಗಣಮನೆ ಪೋಲ್ತು ಪಿರಿದುಂ
ಸೊಗಯಿಪ ದೇವಿಯ ತದೀಯ ತ[ನು] ಮಧ್ಯಮದಾ
ಜಗಣಮನೆ ಪೋಲ್ತು ಪಿರಿದುಂ
ಸೊಗಯಿಸಿದುದು ಗರ್ಭದರ್ಭಕನ ಕೊರ್ಬುಗೆಯಿಂ ॥ (6-6)

Sri Vidyabharathi Book Centre, Sringeri

CC-O. In Public Domain. Digitized by eGangotri

'ಮೊದಲು ರಗಣವನ್ನು (—v—) ಹೋತು ಸೊಗಸಿದ ವಿಜಯಾವತಿಯ ತೆಳುವಾದ ನಡು, ಗರ್ಭಸ್ಥಶಿಶುವಿನ ಬೆಳವಣಿಗೆಯಿಂದ ಕಾಲಕ್ರಮದಲ್ಲಿ ಜಗಣವನ್ನು (v—v) ಹೋತು ಸೊಗಸಿತು' ಎಂಬುದು ಪದ್ಯದ ತಾತ್ಪರ್ಯ. ಪದ್ಯದ ಸ್ವಾರಸ್ಯ ರಸಿಕರಿಗೆ ಸುಲಭವಾಗಿ ತಿಳಿಯುತ್ತದೆ! ಗರ್ಭವತಿಯಾಗುವ ಮೊದಲು ಮತ್ತು ಅನಂತರದಲ್ಲಿ ಸುಂದರಿಯಾದ ಸ್ತ್ರೀಯ ಅಂಗಾಂಗಗಳು ಹೇಗೆ ಕಾಣುತ್ತವೆಯೆಂಬು ದನ್ನು ಕನ್ನಡ ಕವಿಗಳು ಬಗೆಬಗೆಯಾಗಿ ಬಣ್ಣಿಸಿದ್ದಾರೆ. ಇವುಗಳಲ್ಲಿ ಪ್ರಾಯಃ ದೇವ ಕವಿಯದು ಅನ್ಯಾದೃಶ್ಯವಾದ್ದು. ಛಂದಸ್ಸನ್ನು ಇಷ್ಟು ಆರ್ದ್ರತೆಯಿಂದ ಭಾವ ನಿರೂಪಣೆಗೆ ಬಳಸಿದ ಕನ್ನಡ ಕವಿಗಳು ವಿರಳ.

(vi) ಪೂರ್ವೋಕ್ತ ಪದ್ಯದಲ್ಲಿ ಉಕ್ತನಾದ ಗರ್ಭದರ್ಭಕ ಎಂದರೆ ಕಂದರ್ಪ ದೇವನೆಂಬವನೇ. ಈತನ ಅಂಗಸೌಷ್ಠವವನ್ನು ವರ್ಣಿಸುತ್ತ ದೇವಕವಿ ಒಂದು ಕಡೆ

> ಛಂದೋಲಂಕಾರದ್ವಯ
> ದಂದದಿನೆಸಂ ಸುವೃತ್ತ ಶೋಭಾವಹದಿಂ
> ಸೌಂದರ್ಯ ಕಾಂತಿ ಸಂಯುತ
> ದಿಂದಸೆದತ್ತಾ ಕುಮಾರನೂರುದ್ವಿತಯಂ ॥ (6–129)

ಎಂಬುದಾಗಿಯೂ ಇನ್ನೊಂದು ಕಡೆ

> ಛಂದೋಲಂಕಾರದ ತೆಱ
> ದಿಂದುರುತರ ವೃತ್ತ ಶೋಭೆ ಸತ್ಕಾಂತಿ ವಿಳಾ
> ಸಂ ದೊರೆವೆತ್ತೆಸೆದವು ನೃಪ
> ಕಂದರ್ಪನ ನಿರುಪಮೋರು ಕಾಂಡಯುಗಂಗಳ್ ॥ (7–129)

ಎಂಬುದಾಗಿಯೂ ಬರೆದಿದ್ದಾನೆ. ಕ್ರಮವಾಗಿ ಇಲ್ಲಿಯ 'ಸುವೃತ್ತಶೋಭಾವಹದಿಂ', 'ವೃತ್ತಶೋಭೆ' ಎಂಬ ಮಾತುಗಳು ಪೂರ್ವಪರಿಚಿತ ಶ್ಲೇಷೆಯ ವಿಧಾನದಲ್ಲಿದೆ. 'ರಾಜಕುಮಾರನ ತೊಡೆಗಳು ದುಂಡಗಿದ್ದವು' ಎನ್ನುವುದನ್ನು ತಿಳಿಸಲು ಛಂದಸ್ಸಿನ ವೃತ್ತದ ಹಾಗೆ ಎಂಬ ಉಪಮಾನವನ್ನು ಕೊಟ್ಟಿದೆ.

(viii) ಅರಣ್ಯವೊಂದು ಬೇಟೆಯ ಕೋಲಾಹಲದಿಂದ ಹೇಗೆ ತೋರುತ್ತಿತ್ತು ಎಂಬುದನ್ನು ಶ್ಲೇಷೆಯಿಂದ ವಿವರಿಸುತ್ತ

> "ಛಂದೋವಿಶೇಷದಂತೆ ಮತ್ತೇಭ ಶಾರ್ದೂಲ ಹರಿಣ್ಯುತ್ಪಲಮಾಲಾಕೀರ್ಣಮುಂ..."
> (14–50 ವ.)

ಎಂಬುದಾಗಿಯೂ ಹೇಳಿದ್ದು, ಇಲ್ಲಿ ಛಂದಸ್ಸಿನ ಆಯಾ ಪ್ರಸಿದ್ಧವೃತ್ತಗಳ ಜತೆಗೆ ಶ್ಲೇಷೆಯಿಂದ ಮದ್ದಾನೆ, ಹುಲಿ, ಜಿಂಕೆ ಮತ್ತು ಬಳ್ಳಿಗಳೆಂಬ ಅರ್ಥಗಳೂ ಹೊರಡು ತ್ತವೆ.

(7) ಕೃತಿವಧುವನ್ನು ಬಂಧುವರ್ಮನು (ಸು. 1200) ತನ್ನ ಹರಿವಂಶಾಭ್ಯುದಯದಲ್ಲಿ ಹೀಗೆ ವರ್ಣಿಸಿದ್ದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪದ್ಯಾಂಗಿ ವಚ[ನ]ಸನ್ಮುಖಿ
ಗದ್ಯ ಮಹಾರಚನೆ ವಿಳಸದುಭಯಾಳಂಕಾ.
ರ್ಯೋದ್ಯತ್ಕುಚ ಮತ್ತವಧೂ
ವಿದ್ಯಾವಿಜ್ಞನದ ಮನದೊಳಿರೆ ವಿರಚಿಸುವೆಂ ॥ (1-9)

ಪದ್ಯವೇ ಅಂಗ, ವಚನವೇ ಮುಖ, ಗದ್ಯವೇ ಉತ್ಕೃಷ್ಟವಾದ ಸೌಷ್ಠವ (?), ಶಬ್ದಾರ್ಥಾಲಂಕಾರಗಳೇ ಸ್ತನಗಳು ಆಗಿರುವ ಕಾವ್ಯಕನ್ನಿಕೆಯನ್ನು ಎಂದರೆ ಕಾವ್ಯವನ್ನು ವಿದ್ಯಾವಂತರ ಮನಸ್ಸಿನಲ್ಲಿ ನೆಲೆಗೊಳ್ಳುವ ಹಾಗೆ ನಾನು ಮಾಡುತ್ತೇನೆ ಎಂದರೆ ಕೃತಿಯನ್ನು ನಿರ್ಮಿಸುತ್ತೇನೆ. ಇದು ಪದ್ಯದ ತಾತ್ಪರ್ಯ. ಕೃತಿ ಚಂಪುವೆಂದು ವರ್ಣನೆಯಲ್ಲಿ ವಿವಕ್ಷಿತವಾಗಿದೆ.

(8) ಕಾಶೀವಿಷಯದಲ್ಲಿ ಜನಿಸಿದ ಮಧುವೆಂಬ ದಾನವನು ಲೋಕಕಂಟಕನಾದ್ದನ್ನು ವಿವರಿಸುತ್ತ, ಜನ್ನನು ತನ್ನ 'ಅನಂತನಾಥಪುರಾಣ'ದಲ್ಲಿ (1230) ಒಂದು ಕಡೆ ಹೀಗೆಂದಿದ್ದಾನೆ:

ಗುರುಲಘುಗಣನಂ ಕೆಟ್ಟುದು
ಪಿರಿದಾದುದು ವರ್ಣಸಂಕರಂ ದಾನವನಿಂ
ದೊರೆಯಾದುದು ಭೂವಲಯಂ
ಪರಿಣತನಲ್ಲದನ ಕವಿತೆಗಂ ಚಿತ್ರಕ್ಕಂ ॥ (13-32)

'ದಾನವನ ದೆಸೆಯಿಂದ ಗುರುಲಘುಗಣನೆ ಕೆಟ್ಟಿತು, ವರ್ಣಸಂಕರ ಹೆಚ್ಚಾಯಿತು. ಭೂಮಿ ಪರಿಣತನಲ್ಲದವನ ಕವಿತೆಗೂ ಚಿತ್ರಕ್ಕೂ ಸಮಾನವಾಯಿತು' ಇದು ಪದ್ಯಾರ್ಥ. ಮಧು ದಾನವನ ವಿಪರೀತ ವೃತ್ತಿಯಿಂದ ದೊಡ್ಡವರು ಚಿಕ್ಕವರು ಎಂಬ ಕ್ರಮಗಣನೆಯ ಮರ್ಯಾದೆಯೇ ಇಲ್ಲವಾಯಿತು; ಚತುರ್ವರ್ಣಗಳ ನಡುವೆ ಸಂಬಂಧಗಳಾಗುವುದು ಹೆಚ್ಚಿತು. ಸರಿಯೇ; ಆದರೆ ಇದು ಪರಿಣತನಲ್ಲದವನ ಕವಿತೆಗೂ ಚಿತ್ರಕ್ಕೂ ಹೇಗೆ ಸಮ? ಕವಿತೆಯ ಕಟ್ಟುಪಾಡುಗಳನ್ನು ತಿಳಿಯದವನ ಕವಿತೆಯಲ್ಲಿ ಗುರುಲಘ್ವಕ್ಷರವಿನ್ಯಾಸ ಕೆಟ್ಟಿರುತ್ತದೆ. ಕಲೆಗಾರಿಕೆಯ ಲಕ್ಷಣಗಳನ್ನು ತಿಳಿಯದವನ ಚಿತ್ರದಲ್ಲಿ ಬಣ್ಣಗಳ ಮಿಶ್ರಣ ಅಗತ್ಯಕ್ಕಿಂತ ಹೆಚ್ಚಿರುತ್ತದೆ. ಹಾಗೆಯೇ ಆ ದಾನವನ ಕೆಲಸ ಕೂಡ. ಗುರು, ಲಘು ಮತ್ತು ವರ್ಣಗಳೆಂಬ ಶಬ್ದ ಗಳಿಸಿರುವ ದ್ವ್ಯರ್ಥದಿಂದ ಈ ಅರ್ಥಚಮತ್ಕಾರ ಸಾಧ್ಯವಾಗಿದೆ.

(9) ಮಲ್ಲಿಕಾರ್ಜುನನು (ಸು. 1245) 'ಸೂಕ್ತಿ ಸುಧಾರ್ಣವ'ವೆಂಬ ತನ್ನ ಸಂಕಲನಗ್ರಂಥಕ್ಕೆ, ಅದರ ಪುರವರ್ಣನೆಯೆಂಬ 4ನೆಯ ಆಶ್ವಾಸಕ್ಕೆ, ಆಯ್ದುಕೊಂಡ, ಆಕರತಿಳಿಯದ ಒಂದು ಪದ್ಯ ಈ ರೀತಿಯಿದೆ!

ಶ್ರುತದೊಳ್ ಚಿಂತೆ ಮದೇಭದೊಳ್ ಸೆಱೆ[3] ನಿರೋಧಂ ಪಂಜರಾನೀಕದೊಳ್
ಯತಿಭಂಗಂ ಕೃತಿಯೊಳ್ ಭಯಂ ನಟನದೊಳ್ ನಿಷ್ಕಿಂಚನತ್ವಂ ಮಹಾ
ವ್ರತದೊಳ್ ಶೂನ್ಯಗೃಹಂ ದುರೋದರದೊಳಾದಂ ವಿಗ್ರಹಸ್ಥಾನಮ
ನ್ವಿತವಾದಂಗಳೊಳಲ್ಲದಿಲ್ಲ ಮಱಿದುಂ ಮತ್ತೆಲ್ಲಿಯುಂ ದೇಶದೊಳ್ ॥ (4-21)

Sri Vidyabharathi Book Centre, Sringeri

CC-O. In Public Domain. Digitized by eGangotri

ಯತಿಭಂಗವೆಂಬುದು ಕೃತಿಯಲ್ಲಿ ಅಲ್ಲದೆ ದೇಶದಲ್ಲಿ ಮತ್ತೆಲ್ಲಿಯೂ ಕಂಡುಬರುವುದಿಲ್ಲ ಎಂದಿದೆಯಷ್ಟೆ. ಕೃತಿಗೆ ಅನ್ವಯವಾದರ್ಥದಲ್ಲಿ ಯತಿಭಂಗ ತೋರಬಹುದು. ಯತಿಯು ಇನ್ನೊಂದರ್ಥದಲ್ಲಿ, ಮುಖ್ಯಾರ್ಥದಲ್ಲಿ, ಮುನಿಗಳಿಗೆ ಅಪಮಾನಹಾನಿ ಎಂಬವು ಆ ಪುಣ್ಯವಂತದೇಶದಲ್ಲಿಲ್ಲ ಎಂಬುದು ಪ್ರಕೃತಾರ್ಥ. 'ಯತಿಭಂಗ' ಛಂದಶ್ಶಾಸ್ತ್ರದ ಒಂದು ಪರಿಭಾಷೆ. ಪದ್ಯದಲ್ಲಿ ಸೂಚಿತಸ್ಥಾನದಲ್ಲಿ ಯತಿಯನ್ನು ಕೆಲವೆಡೆ ಬಳಸಿ ಇನ್ನು ಕೆಲವೆಡೆ ಬಳಸದೆ ಹೋಗುವುದು 'ಯತಿಭಂಗ' ದೋಷ (ಕವಿರಾ. 1–69, 73) ಪದ್ಯರಚನೆಯಲ್ಲಿ ಒಮ್ಮೊಮ್ಮೆ ಹೀಗೆ ಆಗಬಹುದು. ಕನ್ನಡ ಪದ್ಯಪದ್ಧತಿಯಲ್ಲಿ ಇದು ಸಾಮಾನ್ಯ.

(10) ಲಕ್ಷ್ಮೀಶಕೃತ 'ಜೈಮಿನಿಭಾರತ'ದ ಆರಂಭಭಾಗದಲ್ಲಿಯ ಒಂದು ಪದ್ಯದಲ್ಲಿ 'ಸತ್ಪುರುಷನ ಗಂಭೀರದಶೆಯನ್ನೂ' 'ಕಾವ್ಯಪ್ರಬಂಧ'ವನ್ನೂ ಪರಸ್ಪರವಾಗಿ ಹೋಲಿಸಿದೆ. ಆ ಹೋಲಿಕೆಯು ಆರಂಭವು

(i) ಪಾರದೆ ಪದಾರ್ಥಮಂ ವರಯತಿಗೆ ಭಂಗಮಂ
ತಾರದೆ... (1–5)

ಎಂದು ಮುಂತಾಗಿದ್ದು, ಇಲ್ಲಿ 'ಪದಾರ್ಥ' 'ವರಯತಿ' ಎಂಬುವು ಸತ್ಪುರುಷನ ಪರವಾದ ಅರ್ಥದಲ್ಲಿ 'ಇನ್ನೊಬ್ಬರ ಸಂಪತ್ತು' ಮತ್ತು 'ಉತ್ತಮನಾದ ಸಂನ್ಯಾಸಿ' ಎಂದೂ, ಕಾವ್ಯಪರವಾದ ಅರ್ಥದಲ್ಲಿ 'ಬೇರೆಯವರ ಅಭಿಪ್ರಾಯ', ಕಾವ್ಯದ ಶೋಭಾವಹವಾದ ಛಂದೋಲಕ್ಷಣಗಳಲ್ಲಿ ಒಂದಾದ 'ಯತಿ' ಎಂದೂ ಅರ್ಥವಾಗುವಂತೆ ಪ್ರಯೋಗಗೊಂಡಿವೆ. (ಸಮಗ್ರ+ಪದ್ಯ+ಸಂಸೃಷ್ಟಿಯೆಂಬ ಮಿಶ್ರಾಲಂಕಾರದಲ್ಲಿದೆಯೆಂದು ಕನ್ನಡ ಕೈಪಿಡಿಕಾರರ ಮತ).

ಹೀಗೆಯೇ ಸಂಧ್ಯಂತದಲ್ಲಿಯ ಈ ಪದ್ಯವೂ ಉಲ್ಲೇಖನಾರ್ಹ :

(ii) ವರವರ್ಣದಿಂದೆ ಶೋಭಿತಮಾಗಿ ರೂಪವಿ
ಸ್ತರದಿಂದೆ ಚೆಲ್ವಾಗಿ ಮಧುರತರ ನವರಸೋ
ದರ ಭರಿತದಿಂದೆ ವಿಲಸಿತಮಾಗಿ ಸುಮನೋನುರಾಗದಿಂ ಪ್ರಚುರವಾಗಿ
ನಿರುತ ಮಂಜುಳ ಶಬ್ದದಿಂದೆ ಕಿವಿಗಿಂಪಾಗಿ
ಚಲಿಸುವ ಸುಲಲಿತಷಟ್ಪದಿಗಳೆಡೆಬಿಡದೆ ರೋಂ
ಕರಿಸದಿರ್ಪುವೆ ಬಂದು ನೆರೆದ ವಿದ್ವತ್ಸಭಾನಿರೇರುಹಾಕರದೊಳು ॥ (1-12)

ಇಲ್ಲಿ 'ಷಟ್ಪದಿ' ಎಂಬ ಮುಖ್ಯಶಬ್ದ ಆ ಹೆಸರಿನ ಒಂದು ಛಂದಸ್ಸನ್ನೂ ದುಂಬಿಯೆಂಬ ಅರ್ಥವನ್ನೂ ಏಕಕಾಲದಲ್ಲಿ ಕೊಡುವಂತೆ ಇದೆ. ಶ್ಲೇಷೆಯಿಂದ ವಿಶೇಷಣಗಳು ಎರಡಕ್ಕೂ ಅನ್ವಯಿಸುತ್ತವೆ. ಒಳ್ಳೆಯ ಅಕ್ಷರ ಪ್ರಯೋಗ, ದೊಡ್ಡ ಹರವು, ನವರಸಗಳ ಪೋಷಣೆ, ಒಳ್ಳೆಯ ಚಿತ್ತವೃತ್ತಿ, ಮೃದುವಾದ ಶಬ್ದಗಳು ಇವುಗಳಿಂದ ಕೂಡಿದ ತನ್ನ ಕಾವ್ಯದ ಷಟ್ಪದೀಪದ್ಯಗಳು ವಿದ್ವಜ್ಜನರಿಗೆ ಶ್ರುತಿಹಿತವಾಗುತ್ತವೆ ಎಂಬುದು ಇಲ್ಲಿ ಕವಿಯ ಅಭಿಪ್ರಾಯ. ದುಂಬಿಯೆಂಬರ್ಥದಲ್ಲಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಮವಾಗಿ ಒಳ್ಳೆಯ ಬಣ್ಣ, ರೂಪ, ಮಕರಂದ ಪಾನ, ಪುಷ್ಪ ಪ್ರೀತಿ, ಝೇಂಕಾರ— ಈ ಅರ್ಥಗಳನ್ನೂ ಇಲ್ಲಿಯ ಷಟ್ಪದಿ ಶಬ್ದಕ್ಕಿರುವ ವಿಶೇಷಣಗಳು ತಳೆಯಬಲ್ಲವಾಗಿವೆ. ವಿವಿಧಗುಣ ಪರಿಪೂರ್ಣವಾದ ತನ್ನ ಸುಂದರ ಷಟ್ಪದೀಪದ್ಯಗಳ ಗಾಯನವು ವಿದ್ವಜ್ಜನರ ಸಭೆಯಲ್ಲಿ ಸೊಗಸುತ್ತದೆ, ತಾವರೆಗೊಳದಲ್ಲಿ ದುಂಬಿಗಳ ಝೇಂಕಾರ ಸೊಗಸುವಂತೆ — ಎಂಬ ಕಲ್ಪನೆ ಚೆನ್ನಾಗಿಯೇ ಇದೆ.

(11) 'ಶಂಕರಲಿಂಗ' ಎಂಬ ಅಂಕಿತದ 'ಪುನರ್ದೀಕ್ಷೆಯ' ರಗಳೆಯಿಂದ ಎರಡು ಸಾಲುಗಳು :

> ಗುರುವ ಲಘುವೆನಬಹುದೆ ಲಘುವ ಗುರುವೆನಬಹುದೆ
> ಗುರುವೆ ಗುರು ಲಘುವೆ ಲಘುವೆನುತಿಹ ಪುನರ್ದೀಕ್ಷೆ॥

(ಕವಿಚರಿತೆ, 3, ಪು. 283)

ಗುರು ಮತ್ತು ಲಘು ಎಂಬ ಶಬ್ದಗಳನ್ನು ಛಂದಸ್ಸಿನ ಗುರುತ್ವ ಲಘುತ್ವಗಳೆಂಬ ಆಧ್ಯಾತ್ಮಿಕವಾಗಿ ಮಾರ್ಗದರ್ಶನ ಮಾಡುವ ಮಹನೀಯ ಮತ್ತು ರಾಗದ್ವೇಷಾದಿಗಳಿಂದ ಕೂಡಿದ ಸಾಧಾರಣ ವ್ಯಕ್ತಿಯೆಂಬ ದ್ವಂದ್ವಾರ್ಥದಲ್ಲಿ ಬಳಸಿರುವುದು ಸ್ಪಷ್ಟ.

(12) ಷಡಕ್ಷರಿ (17ನೆಯ ಶ.) ತನ್ನ 'ಶಬರಶಂಕರವಿಲಾಸ'ದಲ್ಲಿ, ಆ ಕೃತಿಯ ಹಿರಿಮೆಯನ್ನು ಮೊದಲಲ್ಲಿ ಹೇಳಿಕೊಳ್ಳುತ್ತ

(i) "ಘನಕಾಂತಾಸ್ತನಮಂ ಕುಲೀನಜನಮಂ ಸದ್ವೃತ್ತ ಶೋಭಾವಹಂ..." (1-28)

ಮುಂತಾಗಿ ಬರೆದಿದ್ದಾನೆ. ಪ್ರಬಂಧವು ಎಂದರೆ ತನ್ನ ಕೃತಿಯು ದುಂಡನೆಯ ಕಾಂತಾಸ್ತನಗಳನ್ನೂ ಸದಾಚರಣೆಯ ಕುಲೀನಜನರನ್ನೂ ಹೋಲುತ್ತದೆ ಎಂದಿದ್ದಾನೆ. ಇದು ಹೇಗೆ? ಶ್ಲೇಷೆಯಿಂದ, ಒಳ್ಳೆಯ ವೃತ್ತಜಾತಿಗಳಿಂದ ಪ್ರಬಂಧ ಶೋಭಿಸಿತು ಎಂದು ಅಭಿಪ್ರಾಯ.

ಅದೇ ಕೃತಿಯಲ್ಲಿ ಶಿವನ ಓಲಗಸಾಲೆಯನ್ನು ಸಾಲಂಕಾರವಾಗಿ ವರ್ಣಿಸುವಾಗ —

> (ii) ಛಂದಶ್ಶಾಸ್ತ್ರದಂತೆ ಸ್ವಾಗತ ಮತ್ತೇಭ ಶಾರ್ದೂಲ ಬಹುವಿಧ ಸುವೃತ್ತ
> ಗಣಬಂಧುರಮುಂ ಸದಕ್ಷರ ನಿಯಮಯತಿ ವಿರಾಜಿತಮುಂ...(1-80)

ಎಂದೂ ವರ್ಣಿಸಿದ್ದಾನೆ. ದೇವಕವಿ ಅರಣ್ಯ ವರ್ಣನೆಯ ಸಂದರ್ಭದಲ್ಲಿ ಇದೇ ಬಗೆಯ ಮಾತುಗಾರಿಕೆ ತಂದಿರುವುದನ್ನು ಈಗಾಗಲೇ ಗಮನಿಸಿದೆ (14–50 ವ). ಛಂದಶ್ಶಾಸ್ತ್ರದಂತೆ ಸ್ವಾಗತ, ಮತ್ತೇಭವಿಕ್ರೀಡಿತ, ಶಾರ್ದೂಲ ವಿಕ್ರೀಡಿತ ಮುಂತಾದ ಹಲವು ತೆರನ ಒಳ್ಳೆಯ ವರ್ಣವೃತ್ತಗಳ ಸಮೂಹದಿಂದ ಮನೋಹರವಾಗಿಯೂ ಅಕ್ಷರಗಳ ಸಂಖ್ಯೆ ವಿನ್ಯಾಸಗಳ ನಿಯಮ ಮತ್ತು ವಿರಾಮಸ್ಥಾನಗಳ ನಿಯಮದಿಂದ ಶೋಭಾಯಮಾನವಾಗಿಯೂ ಶಿವನ ಓಲಗಸಾಲೆ ಇತ್ತೆಂದು ಕವಿ ಹೇಳಿದ್ದಾನೆ. ಶಬ್ದಗಳಿಗಿರುವ ಭಿನ್ನಾರ್ಥದಿಂದ ಇಲ್ಲಿಯ ಅಭಿಪ್ರಾಯವನ್ನು ಗ್ರಹಿಸಬೇಕು. ಶಿವನ ಓಲಗಸಾಲೆ ಬಂದವರನ್ನು ಸ್ವಾಗತಿಸುವ ಗಜಮುಖ ವ್ಯಾಘ್ರಮುಖ ಮೊದಲಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾಚಾರಯುಕ್ತ ಶಿವಗಣಗಳವರಿಂದ ಮನೋಹರವಾಗಿಯೂ(?) ಶಿವಪಂಚಾಕ್ಷರಿಯನ್ನು ಜಪಿಸುವ ನಿಯಮವನ್ನು ನಿಷ್ಠೆಯಿಂದ ಆಚರಿಸುವ ಸಂನ್ಯಾಸಿಗಳಿಂದ ಶೋಭಾಯಮಾನವಾಗಿಯೂ ಇದ್ದಿತೆಂದು ಇಲ್ಲಿ ಮುಖ್ಯಾರ್ಥ.

(13) ಷಡಕ್ಷರಿಯೇ ತನ್ನ ಇನ್ನೊಂದು ಕೃತಿ 'ವೃಷಭೇಂದ್ರವಿಜಯ' ದಲ್ಲಿ, ತನ್ನ ಕೃತಿ ಬಸವಣ್ಣನವರಂತೆ ಶೋಭಿಸುವುದೆಂದು ತಿಳಿಸಲು—

ಸರಸತರಂ ಪ್ರಸನ್ನವದನಂ ಬುಧಸನ್ನುತಸಾರವೃತ್ತವಿ
ಸ್ಫುರಿತಂ... (1–60)

ಮಂತಾಗಿ ಬಣ್ಣಿಸಿದ್ದಾನೆ. 'ಬುಧಸನ್ನುತಸಾರವೃತ್ತವಿಸ್ಫುರಿತ' ಎನ್ನುವುದು ವಿದ್ವಜ್ಜನರಿಂದ ಖ್ಯಾತವಾದ ಉತ್ಕೃಷ್ಟ ಆಚರಣೆಯನ್ನುಳ್ಳ ಬಸವಣ್ಣ, ಹಾಗೆ ಖ್ಯಾತವಾದ ಒಳ್ಳೆಯ ವೃತ್ತಗಳನ್ನುಳ್ಳ ಕೃತಿ—ಎಂದು ಉಭಯಾರ್ಥ ಪ್ರತೀತಿಯನ್ನು ಕೊಡತಕ್ಕದ್ದಾಗಿದೆ.

(14) ತಿಮ್ಮರಸನೆಂಬ ಕವಿ ತನ್ನ 'ಮಾರ್ಕಂಡೇಯ ಪುರಾಣ' ವೆಂಬ ಕೃತಿಯಲ್ಲಿ (ಸು. 1650) ಋಷ್ಯಮೂಕಪರ್ವತದ ವರ್ಣನೆಯನ್ನು ಮಾಡುತ್ತ—

ಸಮಚರಣದಿಂ ತ್ರಿಪದಿಯಿಂದೆ ಚೌಪದದಿನು
ತ್ತಮಷಟ್ಪದಿಗಳಿಂದೆ ಪಲವು ದಂಡಕಗಳಿಂ
ಸಮುಚಿತ ಧ್ವನಿಗಳಿಂ ವರಪದಾರ್ಥಂಗಳಿಂ ಸರಸಕಾವ್ಯಂಗಳಂತೆ ॥

(ಕವಿಚರಿತೆ, 2, ಪು. 366)

ಎಂದು ಶೋಭಿಸಿತೆಂದಿದ್ದಾನೆ. ಇಲ್ಲಿ ದ್ವಿಪದಿ, ತ್ರಿಪದಿ, ಚೌಪದ (ದಿ) ಮತ್ತು ದಂಡಕಗಳು ಕಾವ್ಯಪ್ರಯುಕ್ತವಾದ ಛಂದಸ್ಸುಗಳೆಂಬುದು ಸುವಿದಿತ. ಆದರೆ ಪರ್ವತಕ್ಕೆ ಹೊಂದುವ ಅರ್ಥದಲ್ಲಿ ಆ ಶಬ್ದಗಳು ಕ್ರಮವಾಗಿ ಹಕ್ಕಿಗಳು, ಗೋಧಾಪಧೀ ಎಂಬ ಸಸ್ಯವಿಶೇಷ, ಆನೆ ಹುಲಿ ಮುಂತಾದ ನಾಲ್ಕುಕಾಲಿನ ಪ್ರಾಣಿಗಳು, ದುಂಬಿಗಳು, ಬೊಂಬಿನಂತಹ ದಂಡಗಳು—ಎಂಬ ಅರ್ಥವನ್ನು ಕೊಡುತ್ತವೆ.

(15) ಗುಣಚಂದ್ರನ 'ಛಂದಸ್ಸಾರ'ದಲ್ಲಿ ಯತಿನಿಯಮ ಕುರಿತ ಪದ್ಯ ಹೀಗಿದೆ:

ಗಣನಿಯಮದಿಂದ ಯತಿಯಂ
ಗಣಿಸುವರಾಗಣವು ಕೆಡಲು ಯತಿಯುಂ ಕೆಡುಗುಂ
ಗಣಯತಿಯಿಲ್ಲದ ಕವಿತೆಯು
ತಣಿಪುವುದೇ ವಿಬುಧತತಿಯ ನಿಯಮಸ್ಥಳದೊಳ್ ॥

ಮುನಿಸಂಘವು ಎಷ್ಟು ನಿಯಮನಿಷ್ಠೆಯಿಂದಿದೆ ಎಂಬುವರ ಮೇಲಿಂದ ಆ ಸಂಘಕ್ಕೆ ಸೇರಿದ (ಜೈನ) ಯತಿಗೆ ಗಣ್ಯತೆ ಇರುತ್ತದೆ; ಸಂಘವು ಕೆಟ್ಟರೆ ಯತಿಯೂ ಕೆಟ್ಟಂತೆಯೇ. ಹಾಗೆಯೇ ಪದ್ಯದಲ್ಲಿ ಗಣರಚನೆ ಶುದ್ಧವಾಗಿದ್ದರೆ, ಅದನ್ನು ಹೊಂದಿಕೊಂಡು ಅದರ ಅಂಗವಾಗಿ ಬರುವ ಯತಿ (ವಿರಾಮಸ್ಥಾನ)ಯೂ ಯಥೋಚಿತಸ್ಥಾನದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಲಿತವಾಗಿರುತ್ತದೆ. ಗಣವಿನ್ಯಾಸ ಯತಿಪಾಲನೆ ನಿಯಮದಂತೆ ಇದ್ದರೆ ಮಾತ್ರ ವಿದ್ವಾಂಸರಿಗೆ ಮೆಚ್ಚಾಗುವುದು ಸಾಧ್ಯ.

(16) ತಾನು ರಚಿಸಿದ 'ಮಿತ್ರವಿಂದಾ ಗೋವಿಂದ' (ಸು. 1680) ಎಂಬ ನಾಟಕದ ಉತ್ಕೃಷ್ಟತೆಯನ್ನು ಸಿಂಗರಾರ್ಯ ಹೀಗೆ ಹೇಳಿಕೊಂಡಿದ್ದಾನೆ:

ಕಳೆಯಿಂದಂ ಪೊಳೆವಚ್ಚಬಣ್ಣದೊದವಿಂ ಸದ್ವೃತ್ತ ಸಂಪತ್ತಿಯಿಂ
ಬೆಳಗಿಂದಂದದೆ ಸುಣ್ಣನಿಂದರ್ದೆಗೆ ವರ್ಪುದ್ವದ್ಗುಣಶ್ಲೇಷದಿಂ
ಲಳಿತಾಲಂಕ್ರಿಯೆಗಾಢ್ಯಮಾಗಿ ಸೊಗಸಿಂ ಕಂಠಕ್ಕೆ ಕರ್ಣಕ್ಕೆ ಸೈ
ತಳವಟ್ಟಿರ್ಪುವು ಸಿಂಗರಾರ್ಯರುಸಿರ್ದೀ ಶ್ರೀಸೂಕ್ತಿಮುಕ್ತಾಳಿಗಳ್ ॥

ಕಾವ್ಯದ ಮಾತುಗಳನ್ನು ಮುತ್ತುಗಳೆಂಬುದಾಗಿ ಕಲ್ಪಿಸಿ, ಮುತ್ತಿನ ಒಂದೊಂದು ಗುಣಲಕ್ಷಣವೂ ಆ ಮಾತಿನಲ್ಲಿ ಕಂಡುಬರುತ್ತಿತ್ತು ಎಂದು ಹೇಳಿರುವುದು ಇಲ್ಲಿ ಕವಿಯ ಕೌಶಲ. ಮುತ್ತುಗಳು ದುಂಡಗಿರುತ್ತವೆಯಷ್ಟೇ ; ಹಾಗೆಯೇ ಕಾವ್ಯದ ಮಾತುಗಳು ಒಳ್ಳೆಯ ವೃತ್ತಗಳಲ್ಲಿ ವಿನ್ಯಾಸಗೊಂಡಿವೆ. ಇದು ಒಟ್ಟಿನಲ್ಲಿ 'ಸದ್ವೃತ್ತ ಸಂಪತ್ತಿಯಿಂ' ಎಂಬ ಭಾಗದ ಆಶಯ,

(17) ಅದೇ ಅವಧಿಯ ಮಲ್ಲರಸನೆಂಬ ಕವಿ (ಸು. 1680) ತನ್ನ 'ದಶಾವತಾರ ಚರಿತೆ'ಯನ್ನು ಕಾವ್ಯಕನ್ನಿಕೆಯೆಂದು ಕಲ್ಪಿಸಿ ಆಕೆಯನ್ನು 'ವೃತ್ತಕುಚೆ'ಎಂದಿದ್ದಾನೆ;

'ವೃತ್ತಕುಚಂ ರಸಗಂಧದಿಂ'

ಎಂಬುದು ಮೂಲದ ಮಾತು (ಕವಿಚರಿತೆ, 2, ಪು. 479) ; ಅಲಂಕಾರ ಪೂರ್ವ ಪರಿಚಿತ.

(18) ವೆಂಕಟರಮಣಯ್ಯನೆಂಬ ಈಚಿನ ಕಾಲದ ಒಬ್ಬ ಕವಿ 1857ರಲ್ಲಿ 'ಗಯೋಪಾಖ್ಯಾನ'ವೆಂಬ ಒಂದು ಚಂಪುವನ್ನು ರಚಿಸಿದ್ದು, ಈತನ ವಿಷಯವನ್ನು ಕವಿಚರಿತಕಾರರು ಸ್ವಲ್ಪಮಟ್ಟಿಗೆ ಕೊಟ್ಟಿರುತ್ತಾರೆ. ಈ ಕಾವ್ಯದಿಂದ ದ್ವಾರಕಾ ಪುರವನ್ನು ವರ್ಣಿಸುವ ಈ ಪದ್ಯವನ್ನು ಅವರೇ ಉದ್ಧರಿಸಿದ್ದಾರೆ.

ಪರಿಲಸಚ್ಛಂದೋನುವರ್ತಿ ಸದ್ವೃತ್ತಭಾ
ಸ್ವರಮಾಗಿಯರ್ಥ ವಿಸ್ತಾರಮಂ ತೋರುತ
ಕ್ಷರಪದಂ ತಾನಾಗಿ ಪ್ರಾಸಶೋಭಿತಮಾಗಿ ಯತಿಗಣಾರಾಧ್ಯಮಾಗಿ
ಗುರುಮಾತ್ರೆಗಳ ಕೂಡಿ ಸಂಧಿಸದ್ವಿಗ್ರಹ
ಸ್ಫುರಿತಾಶಯ ಪ್ರದಾಭಿಖ್ಯೆಯಿಂದೊಪ್ಪಿತಾ
ಪುರವರಂ ಪ್ರೌಢಕವಿ ರಚಿತ ಸತ್ಕೃತಿಯಂತೆ ವಿಬುಧಚಯಸೇವ್ಯಮಾಗಿ ॥

(ಕವಿಚರಿತೆ, 3, ಪು. 206)

ಪ್ರೌಢಕವಿಯಿಂದ ರಚಿತವಾದ ಸತ್ಕೃತಿಯಂತೆ ದ್ವಾರಕೆಯು ಶೋಭಿಸಿತೆಂದು ತಿಳಿಸುವಲ್ಲಿ ಛಂದಸ್ಸು, ವೃತ್ತ ಮೊದಲಾದ ಶಬ್ದಗಳಿಗೆ ಇರುವ ಭಿನ್ನಾರ್ಥಗಳನ್ನು ಇಲ್ಲಿ ಬಳಸಿಕೊಂಡಿದೆ. ಛಂದಸ್, ವೃತ್ತ, ಅಕ್ಷರಪದ, ಪ್ರಾಸ, ಯತಿ, ಗಣ, ಗುರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತ್ರ ಎಂಬವುಗಳ ಅರ್ಥ ಛಂದಶ್ಶಾಸ್ತ್ರದ ದೃಷ್ಟಿಯಿಂದ ಪರಿಚಿತವಾದವೇ. ನಗರ ವರ್ಣನೆಗೆ ಆ ಶಬ್ದಗಳನ್ನು ಹೊಂದಿಸಿದರೆ ತಮ್ಮ ಮನಸ್ಸಿನಂತೆ ನಡೆದುಕೊಳ್ಳುವ ಸ್ವಾತಂತ್ರ್ಯವಿರುವ ಒಳ್ಳೆಯ ನಡತೆವಂತರಿಂದ ಶೋಭಾಯಮಾನವಾಗಿ ಸಂಪತ್ಸಮೃದ್ಧಿಯಿಂದ ಕೂಡಿ, ಸಾಕ್ಷಾತ್ ಮುಕ್ತಿಸ್ಥಾನವೇ ಆಗಿ, ಪ್ರಾಸಾಯುಧದಿಂದ (ಎಂದರೆ ಈಟಿಯಂಥ ಆಯುಧ) ಸಜ್ಜಾಗಿ, ಸಂನ್ಯಾಸಿಗಳ ಸಮೂಹದಿಂದ ಆರಾಧಿಸಲ್ಪಡುವುದಾಗಿ, ಗುರುವರ್ಗದವರಿಂದ ಅಥವಾ ದೊಡ್ಡ ಅಳತೆಗಳಿಂದ ಕೂಡಿ, ಸಂಧಿ ಮತ್ತು ಯುದ್ಧಗಳ ರಾಜಕಾರ್ಯವನ್ನು ಉಳ್ಳದ್ದಾಗಿ ಆ ಮಹಾ ನಗರವು ಶೋಭಿಸುತ್ತಿತ್ತು. ಎಂದಾಗುವುದು. ಕವಿಯ ಶಬ್ದಚಮತ್ಕಾರಾಕಾಂಕ್ಷೆ ಸ್ಪಷ್ಟವಾಗಿಯೇ ಇದೆ.[1]

ಈವರೆಗೆ ನಾವು ಛಂದಸ್ಸಿನ ಅಕ್ಷರ, ಲಘುಗುರುಗಳು, ಯತಿಪ್ರಾಸಗಳು, ಶಿಥಿಲದ್ವಿತ್ವ ಇಂತಹ ಕೆಲವು ಪರಿಭಾಷೆಯ ಶಬ್ದಗಳನ್ನು ಕಾವ್ಯವಿಷಯದ ವಿವರಣೆಗೆ ಹೇಗೆ ಬಳಸಿಕೊಳ್ಳುವರೆಂಬುದನ್ನು ನೋಡಿದ್ದೇವೆ. ಉಪಮೆ, ಶ್ಲೇಷೆ, ರೂಪಕ ಇಂತಹ ಅಲಂಕಾರ ವಿಧಾನವನ್ನು ಆಶ್ರಯಿಸಿ ಇದನ್ನು ಸಾಧಿಸಿದೆ; ಪಾಂಡಿತ್ಯವನ್ನು ಮೆರೆಯಬೇಕೆಂಬ ಗರ್ವಚಾಪಲ್ಯಗಳು ಅದನ್ನು ಪ್ರೇರಿಸಿವೆ. ವಿರಳವಾಗಿ ಮಾತ್ರ ಪ್ರತಿಭೆ–ಪಾಂಡಿತ್ಯಗಳ ಸಮರಸ ದಾಂಪತ್ಯವನ್ನೂ ಕಲ್ಪನೆಯ ನಾವೀನ್ಯವನ್ನೂ ಕಾಣುತ್ತೇವೆ.

ಯಾವುದಾದರೊಂದು ವೃತ್ತವನ್ನು ಬರೆದು ಅದರ ಹೆಸರನ್ನು ಆ ವೃತ್ತದಲ್ಲಿಯೇ ಎಲ್ಲಿಯಾದರೂ ಒಂದು ಕಡೆ ಶ್ಲೇಷೆಯಿಂದಲೋ ನೇರವಾಗಿಯೋ ಹೇಳುವ ಪದ್ಯರಚನಾಚಮತ್ಕಾರವೊಂದು ಸಂಸ್ಕೃತಕಾವ್ಯ ಪದ್ಧತಿಯಲ್ಲಿ ಪ್ರಸಿದ್ಧವಿದೆ. ಈ ಚಮತ್ಕಾರವನ್ನು ಆ ಭಾಷೆಯ ಅಲಂಕಾರಗ್ರಂಥಗಳಲ್ಲಿ 'ಮುದ್ರಾಲಂಕಾರ'ವೆಂದು ಕರೆದಿದೆ. ಈ ಅಲಂಕಾರದ ವ್ಯಾಪ್ತಿ ದೊಡ್ಡದು. 'ಅಗ್ನಿಪುರಾಣ', (ಅ. 342–ಶ್ಲೋ. 26), ಭೋಜನ 'ಸರಸ್ವತೀಕಂಠಾಭರಣ' (ಅ. 2–ಶ್ಲೋ. 40, 41), ಕೇಶವಮಿಶ್ರನ 'ಅಲಂಕಾರ ಶೇಖರ' (ಸೂ. 4), ಅಪ್ಪಯ್ಯ ದೀಕ್ಷಿತನ 'ಕುವಲಯಾನಂದ' (140, ಪು. 158) ಈ ಕೆಲವು ಗ್ರಂಥಗಳಲ್ಲಿ ಅದರ ವಿವರಣೆಯಿದೆ. ಕವಿಯ ಹೆಸರನ್ನೂ ಆತನಿಗೆ ಇಷ್ಟವಾದೊಂದು ಶಬ್ದವನ್ನೂ ಕೃತಿಯ ಆದ್ಯಂತ ಭಾಗಗಳಲ್ಲಿಯೋ ಅನ್ಯತ್ರವೋ ಅಂಕಿತಗೊಳಿಸುವುದಕ್ಕೆ ಸಾಮಾನ್ಯವಾಗಿ ಮುದ್ರಾಲಂಕಾರ ಎಂದು ಕರೆದಿದ್ದರೂ ಕುವಲಯಾನಂದಕಾರನು ಕೊಡುವ ವಿವರಣೆಯನ್ನು ನೋಡಿದರೆ ವೃತ್ತದೊಳಗೇ ವೃತ್ತನಾಮ

[1] ಹೊಸಗನ್ನಡ ಸಾಹಿತ್ಯದಲ್ಲೂ ಈ ಪ್ರವೃತ್ತಿ ಸ್ವಲ್ಪಮಟ್ಟಿಗೆ ಕಂಡುಬಂದಿದೆ. ಉದಾಹರಣೆ ನೋಡಿ: (i) ಕುವೆಂಪು: 'ಶ್ರೀರಾಮಾಯಣದರ್ಶನಂ' 'ಅಭಿಷೇಕವಿರಾಡ್‌ದರ್ಶನಂ' ಎಂಬ ಸಂಚಿಕೆ, ಸಾಲು 214-17; (ii) ಎಸ್. ವಿ. ಪರಮೇಶ್ವರ ಭಟ್ಟ: 'ಉಪ್ಪು ಕಡಲು', ವಚನ 35.

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಹೆಣೆದಿರುವ ಒಂದು ಚಮತ್ಕಾರವೂ ಆ ಅಲಂಕಾರದೊಳಗೇ ಸೇರುತ್ತದೆ ಎನ್ನಬಹುದು.[2]

ಸಂಸ್ಕೃತ ಸಾಹಿತ್ಯದಿಂದ ಒಂದು ನಿದರ್ಶನ:

ಕಾಕುಸ್ಥೋಽಪ್ಯಥ ರಕ್ಷಸಾಮಧಿಪತೇರ್ವಾಗ್ಬಾಗುರಾವೇಷ್ಟಿತೇ
ಕೃತ್ವಾ ಹಾಟಕ ತಾಟಕೇಯ ಹರಿಣೇ ಶಾರ್ದೂಲವಿಕ್ರೀಡಿತಮ್
ಆಗಚ್ಛನ್ನನುಜೇನ ತತ್ರ ಗದಿತಾಮಾಕರ್ಣ್ಯವಾರ್ತಾಂ ತತಃ
ಸೀತಾಸಂಗಮ ಲಾಲಸಸ್ತದಂಟಜಂ ರಾಮಃ ಪ್ರತಸ್ಥೇ ದ್ರುತಮ್ ॥

(ಭೋಜ : ಚಂಪೂರಾಮಾಯಣ, ಅರಣ್ಯ, ಪ. 34)

ಸಂಸ್ಕೃತ ಭಾಷೆಯ ಶಾಸನ ಸಾಹಿತ್ಯದಿಂದ ಒಂದು ನಿದರ್ಶನ:

ಪೂರ್ವ್ವಂ ಪಾಟಲಿಪುತ್ರ ಮಧ್ಯನಗರೇ ಭೇರೀ ಮಯಾ ತಾಡಿತಾ
ಪಶ್ಚಾನ್ಮಾಳವ ಸಿಂಧುಠಕ್ಕವಿಷಯೇ ಕಾಂಚೀಪುರೇ ವೈದಿಶೇ
ಪ್ರಾಪ್ತೋಽಹಂ ಕರಹಾಟಕಂ ಬಹುಭಟಂ ವಿದ್ಯೋತ್ಕಟಂ ಸಂಕಟಂ
ವಾದಾರ್ತ್ಥೀ ವಿಚರಾಮ್ಯಹನ್ನರಪತೇ ಶಾರ್ದ್ದೂಲವಿಕ್ರೀಡಿತಂ ॥

[ಎಕ. 77 (67) 1129]

ಮುದ್ರಾಲಂಕಾರದ ಎಲ್ಲ ವಿಧಗಳಿಗೂ ಕನ್ನಡ ಸಾಹಿತ್ಯದಲ್ಲಿ ನಿದರ್ಶನಗಳಿವೆ. ಆದರೆ ಪ್ರಕೃತ ಛಂದೋವಿಶಿಷ್ಟವಾದ್ದನ್ನು ಕೆಲಮಟ್ಟಿಗೆ ಇಲ್ಲಿ ನಿದರ್ಶಿಸಲಾಗುತ್ತದೆ.

(1) ದ್ವೈತವನದಲ್ಲಿ ಪಾಂಡವರು ತಂಗಿದ್ದಾಗ ಮಾಯಾಮತ್ತಹಸ್ತಿಯೊಂದು ಕೋಲಾಹಲ ಮಾಡಿದ ಸನ್ನಿವೇಶ ಒಂದು ಒದಗಿತು. 'ಪಂಪಭಾರತ' ದಲ್ಲಿ ಅದರ ವರ್ಣನೆ ಹೀಗಿದೆ:

ಮುಸಕಂ ಕಾಯ್ಪು ಜವಂ ಜವಂಗಮಿದಿರೊಳ್ ನೋಡಲ್ಕಗುರ್ವಾಗೆ ಮಾಂ
ದಿಸಿಮೀ ಮಂದುದು ಕೋದುದೆಂದು ಭಯದಿಂ ವಿಪ್ರರ್ ತೆರಳ್ದೋಡೆ ತಾ
ಪಸರಂ ಬೆರ್ಚಿಸಿ ತೂಳ್ದಿ ಬೇಳ್ವರಣೆಯುಂ ಕೊಂಡಾಶ್ರಮಕ್ಕಿಂತು ಬೇ
ವಸಮಂ ಮಾಡುವುದಾಯ್ತದೊಂದು ವಿಭವಂ ಮತ್ತೇಭವಿಕ್ರೀಡಿತಂ ॥(8-37)

ಈ ವರ್ಣನೆಯಲ್ಲಿ ಕವಿ ಉದ್ದೇಶಪೂರ್ವಕವಾಗಿ ಆನೆಯ ಆಟ, ಕೋಲಾಹಲ ಎಂಬರ್ಥದಲ್ಲಿ 'ಮತ್ತೇಭವಿಕ್ರೀಡಿತ'ವೆಂಬ ಮಾತನ್ನು ಯೋಜಿಸಿದ್ದಾನೆ. ಪದ್ಯದ ಛಂದಸ್ಸೂ ಮತ್ತೇಭವಿಕ್ರೀಡಿತವೇ. ಮೇಲಣ ಪದ್ಯಕ್ಕೆ ಕರ್ತೃಪದ ಹಿಂದಿನ ಗದ್ಯದಲ್ಲಿಯೇ 'ಮಾಯಾಮತ್ತಹಸ್ತಿ' ಎಂದು ಬಂದಿರುವುದರಿಂದ ಪದ್ಯದ ಕೊನೆಯಲ್ಲಿ 'ಅದೊಂದು ವಿಭವಂ ಮತ್ತೇಭವಿಕ್ರೀಡಿತಂ' ಎಂದು ಹೇಳುತ್ತಿರುವುದು, ಛಂದಸ್ಸಿನ ಹೆಸರನ್ನು ಬೇಕೆಂದೇ ಪದ್ಯದಲ್ಲಿ ತರುವ ಉದ್ದೇಶಮೂಲವಾಗಿ

---

[2] ಮುದ್ರಾಲಂಕಾರದ ವಿವರಣೆಯ ಆಕರಗಳನ್ನು ಒದಗಿಸಿದವರು ವಿದ್ವಾನ್ ಎಚ್. ವಿ. ನಾಗರಾಜರಾವ್ ಅವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನಬಹುದು. ಆ ಛಂದಸ್ಸಿನ ಗತಿಗಮಕಗಳನ್ನು ಆ ಮಾಯಾಹಸ್ತಿಯ ಗತಿ ಗಮಕಗಳಲ್ಲಿ ಕಾಣಬಹುದಾಗಿತ್ತು ಎಂದು ಒಂದು ಇಂಗಿತಾರ್ಥವು ಇಲ್ಲಿದೆ. ('ಛಂದೋಂಬುಧಿ'ಯಲ್ಲಿ ನಾಗವರ್ಮ ಹೇಳುವುದಕ್ಕೆ ಮೊದಲೇ ಕನ್ನಡ ಭಾಷೆಗೆ ವಿಶಿಷ್ಟವಾದ ಆ ವರ್ಣವೃತ್ತಕ್ಕೆ ಆ ಹೆಸರು ಇದ್ದುದನ್ನು ಈ ಉಲ್ಲೇಖ ಸ್ಪಷ್ಟವಾಗಿ ಸೂಚಿಸುತ್ತದೆ. ಇದೇ ಮೊದಲ ಉಲ್ಲೇಖವೂ ಇರಬಹುದು).

(2) 'ಪಂಪಭಾರತ'ದಲ್ಲಿಯೇ ಪಾಂಡವರು ತಮ್ಮ ವನವಾಸಾಜ್ಞಾತ ವಾಸಗಳ ಅವಧಿಯನ್ನು ಕಳೆದು ದುರ್ಯೋಧನನಿಂದ ತಮ್ಮ ಪಾಲಿನ ರಾಜ್ಯವನ್ನು ಪಡೆದುಕೊಳ್ಳುವುದು ಹೇಗೆಂದು ಕೃಷ್ಣನೊಡನೆ ಸಮಾಲೋಚನೆ ನಡೆಸಿದಾಗ ಭೀಮನು ಕೌರವರೊಡನೆ ಸಂಧಿಯ ಪ್ರಯತ್ನವನ್ನು ಪ್ರಬಲವಾಗಿ ವಿರೋಧಿಸುತ್ತಾನೆ. ಆಗ ಕೃಷ್ಣನೂ ಧರ್ಮರಾಯನೂ ಆತನನ್ನು ಸಮಾಧಾನಪಡಿಸುತ್ತ ಹೀಗೆಂದರಂತೆ:

ಬಕ ಕಿಮ್ಮೀರ ಜಟಾಸುರೋದ್ಧತ ಜರಾಸಂಧರ್ಕಳಂ ಸಂದ ಕೀ
ಚಕರಂ ನೂರ್ವರುಮಂ ಪಡಲ್ವಡಿಸಿದೀ ತ್ವಚ್ಚಂಡದೋರ್ದಂಡಮು
ಗ್ರಕುರುಕ್ಷ್ಮಾಪಮಹೀರುಹಪ್ರಕರಮಂ ಮತ್ತೇಭವಿಕ್ರೀಡಿತ
ಕ್ಕೆ ಕರಂ ಪೋಲ್ವೆಗೆ ವಂದು ಭೀಮ ರಣದೊಳ್ ನುರ್ಗಾಡದೇಂ ಪೋಕುಮೇ (9-25)

ಇಲ್ಲಿಯ ವೃತ್ತ ಮತ್ತೇಭವಿಕ್ರೀಡಿತವೇ ಆಗಿದ್ದು, ಅದರ ಹೆಸರೂ ವೃತ್ತದಲ್ಲಿ ಸೇರಿಕೊಂಡಿದೆ. ಇಲ್ಲಿಯ ಅಕ್ಷರಸಂಘಟನೆ ಪದಪ್ರಯೋಗಗಳು ವೀರರಸೋಚಿತವಾಗಿದ್ದು ವೃತ್ತದ ವೈಲಕ್ಷಣ್ಯವನ್ನು ಹೇಳುವಂತಿವೆ.

(3) 'ಛಂದೋಂಬುಧಿ'ಯ ಕರ್ತೃ ನಾಗವರ್ಮನು (ಸು. 990) ಸ್ವವಿಚಾರವನ್ನು ಕೃತಿಯ ಆರಂಭದಲ್ಲಿ ಹೇಳಿಕೊಳ್ಳುತ್ತ ಒಂದು ಕಡೆ ಹೀಗೆಂದಿದ್ದಾನೆ:

ಮತಿವಂತರ್ ಸಮನೆಂಬೊಡಾವೆಡೆಯೊಳಂ ಮತ್ತೊರ್ವರಿಲ್ಲಬ್ಧಿವೇ
ಷ್ಟಿತ ಭೂಚಕ್ರದೊಳೆಂತು ಮೇರುಗಿರಿಗಂ ಮತ್ತೊಂದು ಶೈಲೇಂದ್ರಮು
ನ್ನತಮಿಲ್ಲಂತುಟೆ ನಾಕಿಗಂಗೆನುತುಮಾ ಮತ್ತೇಭವಿಕ್ರೀಡಿತಾ
ಪ್ರತಿಯೆಂದಿಂತು ತಗುಳ್ದು ಕೊಂಡುಕೊನೆಗುಂ ವಿಶ್ವಂಭರಾಮಂಡಲಂ ॥ (1-26)

ಆನೆ ಸಿದ್ಧವಾದ ದಾರಿಯಲ್ಲಿ ನಡೆಯುವುದಿಲ್ಲ. ಅದು ನಡೆದದ್ದೆ ದಾರಿ ಎನ್ನುವಂತೆ. ತನಗೆ ತಾನೆ ಮಾದರಿಯಾಗಿ ತಾನಿದ್ದೇನೆ ಎಂಬುದು ಕರ್ತೃವಿನ ಅಭಿಮಾನೋಕ್ತಿ. ವೃತ್ತದ ಹೆಸರು ಪದ್ಯದಲ್ಲಿಯೇ ಸೇರಿದೆ.

(4) 'ಗದಾಯುದ್ಧ'ದಲ್ಲಿ (ಸು. 1000) ಇರಿವಬೆಡಂಗ ಸತ್ಯಾಶ್ರಯನ ಸಾಹಸಗಳನ್ನು ವರ್ಣಿಸುವ ಕಥಾರಂಭಭಾಗದಲ್ಲಿ ರನ್ನಕವಿ ಅಪರಾದಿತ್ಯನೆಂಬವನ ಮಂಡಲವನ್ನು ಹಿಡಿದಮೇಲೆ ಸತ್ಯಾಶ್ರಯನು ಏನು ಮಾಡಿದನೆಂಬುದನ್ನು ಈ ಒಂದು ಪದ್ಯದಲ್ಲಿ ವರ್ಣಿಸಿದ್ದಾನೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿರಿದುರ್ಗಂಗಳನೇೞಿಯನ್ಯಪುರದೊಳ್ ರತ್ನಾಳಿಕೇರಾಂಬುವಂ
ಮರವಾಂಪ್ಪೊದ್ದಿರೆ ಕೊಂಡುಬಂದುದಪರಾಂಭೋರಾಶಿಯೊಳ್ ಪುಟ್ಟುಗ
ಪ್ಪುರದೊಳ್ ಬೂದಿಯನೊಟ್ಟಿಕೊಂಡುದದಟಿಂ ಮತ್ತೇಭವಿಕ್ರೀಡಿತಂ
ದೊರೆವೆತ್ತಮ್ಮನ ಗಂಧವಾರಣಮಿದೇನನ್ವರ್ಥಮಾಗಿರ್ದುದೋ ॥ (1-27)

3 ನೆಯ ಪಾದದಲ್ಲಿ ವೃತ್ತನಾಮವಿದೆ. ಸತ್ಯಾಶ್ರಯನಿಗೆ 'ಅಮ್ಮನ ಗಂಧವಾರಣ' ಎಂಬ ಬಿರುದು ಅನ್ವರ್ಥವಾಯಿತು ಎನ್ನುವುದನ್ನು ಹೇಳಲು ಆನೆಯೆಂದೇ ಅವನನ್ನು ಕಲ್ಪಿಸಿ ಅವನ ಸಾಧನೆಯನ್ನು ಇಲ್ಲಿ ವರ್ಣಿಸಿದೆ. ಅಲ್ಲಿ ಇಲ್ಲಿ ಗಿಡಮರಗಳನ್ನು ಕಿತ್ತು ಹಾಕುತ್ತ ಸಿಕ್ಕಿದಂತೆ ನುಗ್ಗಿ ತೊತ್ತಳದುಳಿದು ಸಾಗುವ ಆನೆಯ ಹಾಗೆ ಸತ್ಯಾಶ್ರಯನು ಪಶ್ಚಿಮ ಸಮುದ್ರದವರೆಗೆ ಕೋಲಾಹಲಕರನಾಗಿ ನುಗ್ಗಿದನೆಂದು ಹೇಳುವುದು ಇಲ್ಲಿ ಕವಿಯ ಉದ್ದೇಶ.

(5) ನಾಗಚಂದ್ರನ (ಸು. 1140) 'ಮಲ್ಲಿನಾಥ ಪುರಾಣದಲ್ಲಿ ವೀತಶೋಕಪುರದರಸು ವೈಶ್ರವಣನು ಶರತ್ಕಾಲದ ಒಂದು ವಿಹಾರದಲ್ಲಿ ಸಿಡಿಲೇಟಿಗೆ ಸಿಕ್ಕಿ ಉರುಳಿದ ಆಲದ ಮರವೊಂದನ್ನು ಕಂಡು ಸಂಸಾರ ವಿಷಯದಲ್ಲಿ ವೈರಾಗ್ಯಗೊಂಡ ಸನ್ನಿವೇಶವೊಂದು ಚಿತ್ರಿತವಾಗಿದೆ. ಆತನಲ್ಲಿ ವಿರಕ್ತಿಯುಂಟಾದ ಒಂದು ಘಟ್ಟದಲ್ಲಿ. ವಿಧಿವಿಲಾಸವನ್ನು ಆತ ಹೀಗೆ ನೆನೆದನಂತೆ:

ಯುವಸಪ್ತಚ್ಛದಮಂ ವಯಃ ಪರಿಣತ ಶ್ರೀಖಂಡಮಂ ಬಾಳಶಾ
ಳಿವನ ಶ್ರೇಣಿಗಳಂ ಪಡಲ್ವಡಿಸಿ ನಾನಾದೇಹಭೂಜಂಗಳಂ
ಕವಳಂಗೊಂಡು ಕಲಂಕಿದತ್ತು ಪಲವುಂ ಪಾತಾಳಕಾಸಾರಮಂ
ಭವಕಾಂತಾರದೊಳದ್ಭುತಂ ವಿಧಿಮದೋನ್ಮತ್ತೇಭವಿಕ್ರೀಡಿತಂ ॥ (9–54) [3]

ವಿಧಿಯೆಂಬುದು ಮದೋನ್ಮತ್ತವಾದ ಒಂದು ಆನೆ. ಅದು ಈ ಸಂಸಾರವೆಂಬ ಆರಣ್ಯದಲ್ಲಿ ವಿಸ್ಮಯಕರವಾಗಿ ಕೋಲಾಹಲ ನಡೆಸುತ್ತದೆ. ಯೌವನಸ್ಥರೆಂಬ ಎಳೆಲೆ ಬಾಳೆಯಗಿಡಗಳನ್ನೂ ವಯಸ್ಕರೆಂಬ ಗಂಧದ ಮರಗಳನ್ನೂ ಬಾಲಕರೆಂಬ ಬತ್ತದ ಸಸಿಗಳನ್ನೂ ಕಿತ್ತು ತುಳಿದು ದಾಂಧಲೆ ಮಾಡುತ್ತದೆ. ಹೀಗೆ ಎಷ್ಟೋ ಜೀವಿಗಳೆಂಬ ಮರಗಳನ್ನು ಕಬಳಿಸುತ್ತದೆ. ಈ ರೀತಿ ವಿಧಿಯ ವಿಕಟವರ್ತನವನ್ನು ಅನಿರೀಕ್ಷಿತವಾಗಿ ಒಳ್ಳೆಯ ತೋಟತುಡಿಕೆಗಳ ಮೇಲೆ ಧಾಳಿಮಾಡಿ ಎಲ್ಲವನ್ನೂ ಹಾಳುಗೆಡಹಿ ಹೋಗುವ ಮದ್ದಾನೆಗೆ ಹೋಲಿಸಿರುವುದು ತುಂಬಾ ಉಚಿತವಾಗಿದೆ.

(6) ಇಮ್ಮಡಿ ನಾಗವರ್ಮನ (1042–1145) 'ಕಾವ್ಯಲೋಕನ' ಭಾಗವಾದ ಶಬ್ದಸ್ಮೃತಿಯಲ್ಲಿ ಸಂಧಿಪ್ರಕರಣದಲ್ಲಿ ವ್ಯಂಜನಸಂಧಿಯ ವಿಧಿಗಳನ್ನು ವಿವರಿಸುವಾಗ ವಾಕ್ಯಸಂಧಿಗೆ ಕೊಟ್ಟಿರುವ ಲಕ್ಷ್ಯ ಈ ರೀತಿಯಾಗಿದೆ:

---

[3] ಈ ಪದ್ಯದ ಕಡೆಗೆ ನನ್ನ ಗಮನವನ್ನು ಸೆಳೆದವರು ಶ್ರೀ ಎನ್. ಎಸ್. ತಾರಾನಾಥ್ ಅವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಮನೀಯ ವಿಭ್ರಮಗುಣಾನ್ವಿತೆಯರ್
ಪ್ರಮಿತಾಕ್ಷರಾಭರಣ ಭೂಷಿತೆಯರ್
ತಮರೂರ್ಗೆ ಪೋಪ ಕುಲಜಾಂಗನೆಯರ್
ಕಮಲೋದರಂಗೆ ಪಡೆದರ್ ಮುದಮಂ ॥ (ಪ. 72)

ಇರುವಂತೆ ಪದ್ಯದ ಅರ್ಥವನ್ನು ಸುಗಮವಾಗಿ ಹೇಳಬಹುದು. ಇದೊಂದು ವರ್ಣ ವೃತ್ತ; ಆದರೆ ಪರಿಚಿತವಾದ ಯಾವ ಒಂದು ವೃತ್ತದ ಹೆಸರಾಗಲಿ ಪದ್ಯಾಂತ ರಾಳದಲ್ಲಿ ಬಂದಿರುವಂತೆ ಮೇಲುನೋಟಕ್ಕೆ ತೋರುವುದಿಲ್ಲ. ಈ ಚಿಕ್ಕವೃತ್ತದ ಗಣವಿನ್ಯಾಸ 'ಸಜಸಸ' ಎಂದಿದ್ದು, ಭರತನ ನಾಟ್ಯಶಾಸ್ತ್ರದಲ್ಲಿಯೂ ಪಿಂಗಲ ಜಯದೇವಾದ್ಯರ ಛಂದೋಗ್ರಂಥಗಳಲ್ಲಿಯೂ ಛಂದಸ್ಸಿನ ಹೆಸರನ್ನು 'ಪ್ರಮಿತಾ ಕ್ಷರಾ' ಎಂದಿದೆ. ಪೂರ್ವೋಕ್ತವೃತ್ತದ 2 ನೆಯ ಪಾದದಲ್ಲಿ ಆ ಹೆಸರು ಬಂದಿರು ವುದರಿಂದ, ಕವಿ ಪದ್ಯವನ್ನು ಮುದ್ರಾಲಂಕಾರದಲ್ಲಿ ಕಟ್ಟಿದ್ದಾನೆನ್ನಬೇಕು. ನಾಗ ವರ್ಮನ ವರ್ಧಮಾನ ಪುರಾಣದಲ್ಲಿಯೂ ಇಂಥ ಇನ್ನೊಂದು ಪದ್ಯವಿದೆ.

ದ್ರುತವಿಳಂಬಿತ ಮನ್ಯುಚಯಂಗಳ್
ತತಘನಾದಿ ಚತುರ್ವಿಧವಾದ್ಯದೊಳ್
ವಿತತವೃತ್ತಿಯ ವಿಕ್ರಮ ಭಂಗಿಯೊಳ್
ಶತಮುಖಂ ಮೆಱೆದರ್ತಿಯೊಳಾಡಿದಂ ॥

ದ್ರುತವಿಳಂಬಿತವೆಂಬುದೇ ಇಲ್ಲಿಯ ಛಂದಸ್ಸು, ಇಂದ್ರನು ದ್ರುತನೂ ವಿಳಂಬಿತವೂ ಆದ ರೀತಿಯಲ್ಲಿ ಭಾವೋಗ್ರತೆಯನ್ನು ತೋರಿಸಿ ನರ್ತಿಸಿದನೆಂದು ತಿಳಿಸುವಾಗ ವೃತ್ತದ ಹೆಸರನ್ನೂ ಕವಿ ಜೊತೆಯಲ್ಲೇ ಹುದುಗಿಸಿದ್ದಾನೆ.

(7) ಅಗ್ಗಳನ ಚಂದ್ರಪ್ರಭಪುರಾಣ(1189)ದಲ್ಲಿ ಚಂದ್ರೋದಯ ವರ್ಣನೆಯ ಒಂದು ಪದ್ಯ ಈ ಪ್ರಕಾರವಾಗಿದೆ.

ನೆರೆದೆತ್ತಂ ಭಗಣಂ ನಿರೀಕ್ಷಿಸೆ ಬೆಸಂಬೆತ್ತೇಱಿ ಚಿತ್ತೋದ್ಭವಂ
ಬರೆ ಲಕ್ಷ್ಮಚ್ಛಲದಿಂದಮುಬ್ಬಿ ಪಥವೀಥೀಭಾಗದೊಳ್ ಬೇಗಮೊ
ತ್ತರಿಸುತ್ತುಂ ಪರಿಕಾಱಿನಂ ತಿಮಿರಮಂ ಚೆನ್ನಟ್ಟಿ ಪಾದಂಗಳಿಂ
ದೊರಸಿತ್ತೇನತಿ ಚೋದ್ಯಮೋ ವಿಧುಮದೋನ್ಮತ್ತೇಭವಿಕ್ರೀಡಿತಂ ॥ (8-33)

ಈ ಪದ್ಯದಲ್ಲಿ ರೂಪಕಾಲಂಕಾರ ವಿಧಾನದಿಂದ ಚಂದ್ರನನ್ನು ಮದೋನ್ಮತ್ತವಾದ ಒಂದು ಮತ್ತೇಭವೆಂದು ಕಲ್ಪಿಸಿ ಚಂದ್ರೋದಯವನ್ನು ವರ್ಣಿಸಿದೆ. ವೃತ್ತದ ಹೆಸರಿನಿಂದ ಪದ್ಯ ಕೊನೆಗೊಂಡಿದೆ.

(8) ಮಲ್ಲಿಕಾರ್ಜುನನ (ಸು. 1245) ಸೂಕ್ತಿಸುಧಾರ್ಣವದ ಪರ್ವತ ವರ್ಣನೆಯಲ್ಲಿ, ಕವಿಕೃತಿ ವಿವರವೇನೂ ತಿಳಿದಿಲ್ಲದ ಪದ್ಯವೊಂದು ಜಿಂಕೆಗಳ ಬೇಟೆ ಯಾಡುವ ಹುಲಿಗಳ ಚಿತ್ರವನ್ನು ಹೀಗೆ ಕೊಡುತ್ತದೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಲಶ್ಮಶ್ರುಮುಖಿಂ ತೆಱಂಬೊಳೆವಿನಂ ಗಾಹಿಂಗೆ ಬೇಟ್ವಿನ್ನವಾ
ಭೀಳಾಲೋಕದೆ ಸಾರ್ದು ಪಲ್ಮೊಱೆದು ಕೋಪಾಟೋಪದಿಂ ಚೆಚ್ಚರಂ
ನೀಳಾಲಂಘನದಿಂದೆ ಬಪ್ಪೆರಳೆಯಂ ಪೊಯ್ಸುತ್ತಿ ಸೀಳ್ದೆತ್ತಿ ಶಾ
ರ್ದೂಲಂಗಳ್ ಕುಲಶೈಲದೊಳ್ ಸೊಗಯಿಕುಂ ಶಾರ್ದೂಲವಿಕ್ರೀಡಿತಂ ॥ (3-31)

ವೃತ್ತಪಾದಾಂತದಲ್ಲಿ ಶಾರ್ದೂಲವಿಕ್ರೀಡಿತವೆಂದಿರುವುದು ಕೂಡಲೇ ಸುಪರಿಚಿತವಾದ ಆ ಹೆಸರಿನ ವರ್ಣವೃತ್ತದ ನೆನಪನ್ನು ಪದ್ಯಪಾಠಕನಿಗೆ ತಂದುಕೊಡುತ್ತದೆ. ವೃತ್ತದ ಗಣವಿನ್ಯಾಸವನ್ನು ಗಮನಿಸಿದಾಗ ಛಂದಸ್ಸು ಕೂಡ ಶಾರ್ದೂಲವಿಕ್ರೀಡಿತವೇ ಆಗಿರುವುದು ಕಾಣುತ್ತದೆ. ಜಿಂಕೆಗಳನ್ನು ಬೇಟೆಯಾಡುತ್ತಿರುವ ಹುಲಿಗಳು ಪಕ್ಕದ ಬೆಟ್ಟದಲ್ಲಿ ಶಾರ್ದೂಲವಿಕ್ರೀಡಿತವನ್ನು ಎಂದರೆ ಹುಲಿಯ ಕೋಲಾಹಲಕರವಾದ ಆಟವನ್ನು ತೋರಿಸುತ್ತವೆ ಎಂದು ಕವಿ ಹೇಳುವಾಗ ಛಂದಸ್ಸಿನ ಹೆಸರೂ ಅಲ್ಲಿ ಸೇರುವಂತೆ ಮಾಡಿದ್ದಾನೆ.

(9) ಚಿಕ್ಕುಪಾಧ್ಯಾಯನ 'ಹಸ್ತಿಗಿರಿಮಾಹಾತ್ಮ್ಯ'ದಲ್ಲಿ (1679) ದೊರೆಯಾದ ಚಿಕ್ಕದೇವರಾಯನನ್ನು ಕೀರ್ತಿಸುವ ಒಂದು ಪದ್ಯ ಈ ರೀತಿಯಾಗಿದೆ:

ಮೃಗಲಕ್ಷ್ಮಂ ಮೊಗಮಂಬರಾಪಗೆ ಕರಂ ಕೈಲಾಸಮಾಲಾನಮಾ
ಭಗಣಂ ಬಿಂದುಗಣಂ ಸುಧಾಬ್ಧಿ ಪದಪಾಶಂ ಸಾಂದ್ರಚಂದ್ರಾತಪಂ
ಬಗೆವಂದುಜ್ವಲಕಾಯಮಾಗಿರೆ ಯಶೋಮತ್ತೇಭವಿಕ್ರೀಡಿತಂ
ನೆಗಟ್ದಿತ್ತಚ್ಚರಿ ದೇವಭೂವರಸುತ ಶ್ರೀಚಿಕ್ಕದೇವೇಂದ್ರನಾ ॥

(ಕವಿಚರಿತೆ, 2, ಪು. 441)

ಚಿಕ್ಕದೇವರಾಜನ ಕೀರ್ತಿಯೆಂಬ ಮದ್ದಾನೆಯ ವರ್ಣನೆಯನ್ನು ಇಲ್ಲಿ ಮಾಡಿದೆ: ಆ ಕೀರ್ತಿಯೆಂಬ ಮದ್ದಾನೆಗೆ ಚಂದ್ರನೇ ಮುಖ, ದೇವಗಂಗೆಯೇ ಸೊಂಡಿಲು, ಕೈಲಾಸವೇ ಕಟ್ಟುಗಂಬ, ನಕ್ಷತ್ರಗಳೇ ಶರೀರದ ಮಚ್ಚೆ, ಕ್ಷೀರಸಾಗರವೇ ಕಾಲ್ತೊಡರು, ದಟ್ಟವಾದ ಬೆಳದಿಂಗಳೇ ಪ್ರಕಾಶಮಾನವಾದ ಶರೀರ. ಈ ವರ್ಣನೆಯಲ್ಲಿ ಚಿಕ್ಕ ದೇವರಾಯನ ಕೀರ್ತಿಯು ದಿಗಂತವ್ಯಾಪ್ತವಾಗಿತ್ತೆಂದು ಕವಿಯ ಅತ್ಯುಕ್ತಿ. ವೃತ್ತದ ಹೆಸರು ವರ್ಣನೆಯಲ್ಲಿ ಸೇರಿದೆ.

ಈ ಪರಿಶೀಲನೆಯ ಸಾರಾಂಶವನ್ನು ಈ ರೀತಿಯಲ್ಲಿ ಸಂಗ್ರಹಿಸಬಹುದು: (1) ಛಂದೋವಿಶಿಷ್ಟವಾದ ಮುದ್ರಾಲಂಕಾರದ ಬಳಕೆ ಕನ್ನಡಸಾಹಿತ್ಯದಲ್ಲಿ ಸು. 10 ನೆಯ ಶತಮಾನದಿಂದಲೂ ಇದೆ. (2) ಈಗ ತಿಳಿದ ಮಟ್ಟಿಗೆ ಅದು ಪಂಪ 1 ನೆಯ ನಾಗವರ್ಮ, ರನ್ನ, ಇಮ್ಮಡಿ ನಾಗವರ್ಮ (ಉದ್ಧೃತ), ಮಲ್ಲಿಕಾರ್ಜುನ, (ಉದ್ಧೃತ), ಚಿಕ್ಕುಪಾಧ್ಯಾಯ ಈ ಕೆಲವರಲ್ಲಿ ಕಂಡುಬಂದಿದೆ. (3) ಮತ್ತೇಭ ವಿಕ್ರೀಡಿತ ಕವಿಜನಪ್ರಿಯವಾದ ಆಯ್ಕೆ. 'ಪಂಪಭಾರತ' 9–25, ಗದಾಯುದ್ಧ 1–27, ಛಂದೋಂಬುಧಿ 1–26, ಹಸ್ತಿಗಿರಿಮಾಹಾತ್ಮ್ಯ ಇವುಗಳಲ್ಲಿ ವೃತ್ತ ನಾಮ ಪಾದಾಂತದಲ್ಲಿರುವುದೂ, ಪಂಪಭಾರತ 8–37, ಚಂದ್ರಪ್ರಭ ಪುರಾಣ

Sri Vidyabharathi Book Centre, Sringeri

CC-O. In Public Domain. Digitized by eGangotri

8-33. 'ಸೂಕ್ತಿ ಸುಧಾರ್ಣವ 3-31 ಇವುಗಳಲ್ಲಿ ಪದ್ಯಾಂತದಲ್ಲಿರುವುದು ಪದ್ಯರಚನೆಯ ದೃಷ್ಟಿಯಿಂದ ಗಮನಿಸತಕ್ಕದ್ದಾಗಿದೆ. (4) ಕವಿಗಳು ಆಕಸ್ಮಿಕವಾಗಿ ಅಲ್ಲದೆ ಉದ್ದೇಶಪೂರ್ವಕವಾಗಿಯೇ ಈ ಚಮತ್ಕಾರವನ್ನು ಯೋಜಿಸಿರುವುದು ಸಾಧ್ಯ.

೨

ಕವಿಗಳು ತಮ್ಮ ಕೃತಿಗಳಲ್ಲಿ ವಿಶೇಷವಾಗಿ ಬಳಸುವ ಅಥವಾ ತಮ್ಮ ಮೆಚ್ಚುಗೆಯ ಛಂದಸ್ಸುಗಳನ್ನೇ ಕೊಂಡಾಟದ ವಿಷಯವಾಗಿ ಮಾಡಿಕೊಂಡಿರುವ ಕೆಲವು ನಿದರ್ಶನಗಳು ಕೂಡ ಕನ್ನಡದಲ್ಲಿ ಕಂಡುಬಂದಿರುವುದುಂಟು. ಗೋಚರವಾದ ಕೆಲವನ್ನಿಲ್ಲಿ ಕೂಡಿಸಿಕೊಟ್ಟಿದೆ.

(1) ಹರಿಹರನು (ಸು. 1200) 'ಗಿರಿಜಾಕಲ್ಯಾಣ'ದಲ್ಲಿ ಕಂದಪದ್ಯವನ್ನೂ ಪದ್ಯಸಾಮಾನ್ಯವನ್ನೂ ಕುರಿತು ಆಡಿರುವ ಮಾತುಗಳಿವು:

ಕಂದಂಗಳಮೃತಲತಿಕಾ
ಕಂದಂಗಳನೂನ ವಾಕ್ಯ ಫಲವಿಲಸನ್ಮಾ
ಕಂದಂಗಳ್ ತನಿರಸದು
ಕ್ಕಂದಂಗಳ್ ಸೊಗಯಿಸಿರ್ಪುವೀತನ ಕೃತಿಯೊಳ್ ॥

ಪದ್ಯಂಗಳ್ ನವರಸನಿರ
ವದ್ಯಂಗಳ್ ಸುಜನಸಂಕುಳಕ್ಕಂ ನಿರತಂ
ಹೃದ್ಯಂಗಳ್ ಧಾರಿಣಿಗತಿ
ಚೋದ್ಯಂಗಳ್ ಮೆಱೆಯುತಿರ್ಪುವೀ ಸತ್ಕೃತಿಯೊಳ್ ॥ (1-12,13)

ಇವುಗಳಲ್ಲಿ ಮೊದಲನೆಯದು ಪ್ರಸಿದ್ಧವಾದ್ದು. 'ಅಮೃತಲತೆಯ ಗೆಡ್ಡೆಗಳು ಕುಂದುಕೊರತೆಗಳಿಲ್ಲದ ವಾಕ್ಯಗಳೆಂಬ ಹಣ್ಣುಗಳಿಂದ ಶೋಭಿಸುವ ಮಾವಿನ ಮರಗಳು. ಪಕ್ವಗೊಂಡ ರಸದ ಸ್ರೋತಗಳು—ಎಂಬ ಕಂದಗಳು ಈತನ ಕೃತಿಯಲ್ಲಿ ಸೊಗಸುತ್ತಿವೆ'. ಇದು ಪದ್ಯದ ತಾತ್ಪರ್ಯ. ಇಲ್ಲಿಯೂ ವ್ಯವಹಿತವೆಂಬ ಯಮಕಾಲಂಕಾರವನ್ನು ಕಾಣಬಹುದು. ಇನ್ನು ಎರಡನೆಯ ಪದ್ಯವಾದರೋ 'ಪದ್ಯಗಳು (ವೃತ್ತಗಳಿರಬಹುದು) ನವರಸಭರಿತಗಳು, ಸಹೃದಯಾಹ್ಲಾದಕಾರಿಗಳು, ಲೋಕಾಶ್ಚರ್ಯಕರಗಳು' ಎಂದು ಪದ್ಯಸಾಮಾನ್ಯವನ್ನು ಕೀರ್ತಿಸಲು ಬರೆದದ್ದಾಗಿದೆ.

(2) ಸುರಂಗ ಕವಿ (ಸು. 1500) ತ್ರಿಷಷ್ಟಿ ಪುರಾತನರ ಚರಿತೆ ಎಂಬ ತನ್ನ ಚಂಪುವಿನಲ್ಲಿ ಪ್ರಾಯಃ ಹರಿಹರ ಕವಿಯ ಮಾದರಿಯನ್ನೇ ಹಿಡಿದು ಈ ಕೆಲವು ಪದ್ಯಗಳನ್ನು ಬರೆದಿರುವಂತೆ ತೋರುತ್ತದೆ:

(i) ಲಲಿತಗತಿ ಪ್ರಯುಕ್ತ ಲಘುಮಧ್ಯ ಗುರುಸ್ತನಯುಗ್ಮೆ ಮತ್ತಕೋ
ಕಿಲರವೆ ಕಾಂಚನಾಂಗಿ ತರಳಾಕ್ಷಿ ಮಯೂರಕಚಾಭಿರಾಮೆಯು
ತ್ಪಳಸುಖವಕ್ತ್ರ ಚಂಪಕಸುನಾಸಿಕೆ ವೃತ್ತಕಪೋಳೆಯಪ್ಪ ಕೋ
ಮಳ ಕೃತಿಲಕ್ಷ್ಮಿ ಛಂದದ ಪದೋನ್ನತಿಯಿಂ ನಮಗೀಗೆ ಸಂತತಂ

Sri Vidyabharathi Book Centre, Sringeri

CC-O. In Public Domain. Digitized by eGangotri

(ii) ವೃತ್ತಮನೇಕಮಿಲ್ಲಿ ರಸಭಾವಸಮೇತದಿ ಪುಟ್ಟಿ ಕಾಮಿನೀ
ವೃತ್ತಕುಚಗಳಂತೆ ಜನಮಂ ಮಿಗೆ ಮೋಹಿಸುತಿರ್ಪಿನಂ ಮಹೋ
ದ್ವೃತ್ತ ಸಮೂಹದಜ್ಞತೆಯಡಂಗ ನೆಗಳ್ದು ಪೊದಳ್ದು ಕೇಳ್ದು ಸ
ದ್ವೃತ್ತ ಸಭಾಜನಂ ಪೊಗಳೆ ಪೇಳಲೊಡರ್ಚಿದನೀ ಪ್ರಬಂಧಮಂ ॥

(iii) ಕಂದಂಗಳ್ ವಾಗ್ವನಿತೆಯ
ಕಂದಂಗಳ್ ಸಜ್ಜನನವ್ಯಕಾವ್ಯಲಸನ್ಮಾ
ಕಂದಂಗಳ್ ನವರಸದು
ಕ್ಕಂದಂಗಳಿನಲ್ಕೆ ಕವಿಸುರಂಗಂ ಪೇಳ್ದಂ ॥ (1-39-41)

ಮೊದಲ ಪದ್ಯದಲ್ಲಿ ಸುರಂಗಕವಿ ಕೃತಿಯಲ್ಲಿ ಮುಖ್ಯವಾಗಿ ಬಳಸುವ ಬಗೆಬಗೆಯ ವೃತ್ತಗಳು ಆ ಕೃತಿಗೆ ಹೇಗೆ ಒಂದು ರಮಣೀಯವೂ ಆಕರ್ಷಕವೂ ಆದ ರೂಪವನ್ನು ತರಬಲ್ಲವೆಂಬುದನ್ನು ಲಕ್ಷಿಸಿ, ಆ ವೃತ್ತಗಳನ್ನು ಕೃತಿಲಕ್ಷ್ಮಿಯ ದೇಹದ ವಿವಿಧಾಂಗಗಳನ್ನಾಗಿಯೂ ಅಲಂಕಾರಗಳನ್ನಾಗಿಯೂ ಕಲ್ಪಿಸಿದ್ದಾನೆ. ಮೃದುವಾದ ನಡಿಗೆಯುಳ್ಳವಳೂ ತೆಳ್ಳನೆಯ ನಡು, ಭಾರವಾದ ಸ್ತನ ಇವನ್ನುಳ್ಳವಳೂ ಉತ್ಕಂಠಿತವಾದ ಕೋಗಿಲೆಯ ದನಿಯಂತೆ ದನಿಯುಳ್ಳವಳೂ ಚಿನ್ನದಂತಹ ಮೈಯುವಳೂ ಚಂಚಲವಾದ ಕಣ್ಣುಗಳುಳ್ಳವಳೂ ನವಿಲ ಸೋಗೆಯಂತಹ ಮನೋಹರವಾದ ಮುಡಿಯುಳ್ಳವಳೂ ಚಂದ್ರಮಂಡಲದಂತಹ ಮುಖವುಳ್ಳವಳೂ ಸಂಪಿಗೆಯಂತಹ ಮೂಗನ್ನುಳ್ಳವಳೂ ದುಂಡನೆಯ ಕೆನ್ನೆಯುಳ್ಳವಳೂ ಆದ ಕೃತಿಲಕ್ಷ್ಮಿ ಛಂದಸ್ಸಿನಲ್ಲಿ ಪದೋನ್ನತಿಯನ್ನು ನಮಗೆ ಮಾಡಲಿ ಎನ್ನುವುದರಲ್ಲಿ ವಿರೋಧಾಭಾಸವಿದೆ; ಇಲ್ಲಿ ಲಲಿತಗತಿ ಮತ್ತಕೋಕಿಲ, ಕಾಂಚನ, ತರಳ, (ಮತ್ತ) ಮಯೂರ, ಉತ್ಪಲಮಾಲೆ, ಚಂಪಕಮಾಲೆ, ವೃತ್ತ—ಎಂಬ ಹೆಸರಿನ ವೃತ್ತಗಳನ್ನೂ ಲಘ್ವಕ್ಷರ ಗುರ್ವಕ್ಷರಗಳನ್ನೂ ಯಥೋಚಿತವಾಗಿ ಅನ್ವಯಿಸಿದರೆ ಪದ್ಯದ ಅರ್ಥ ಹೆಚ್ಚು ಸ್ಫುಟವಾಗುತ್ತದೆ.

ಇನ್ನು 'ರಸಭಾವಗಳು ತುಂಬಿರುವ ವೃತ್ತಿಗಳು ಕಾಮಿನಿಯರ ವೃತ್ತ ಕುಚಗಳಂತೆ' ಎಂಬುದು ಈ ಹಿಂದೆಯೇ ಪರಿಚಿತವಾದ ಅಲಂಕಾರೋಕ್ತಿ. ಇದರಲ್ಲಿ ಗಮನಿಸತಕ್ಕ ವಿಶೇಷವೇನಿಲ್ಲ.

ಮೂರನೆಯ ಪದ್ಯ : ಇದು ಹರಿಹರ ಕವಿಯ ಸದೃಶಪದ್ಯವನ್ನು ನೇರವಾಗಿ ನೆನಪಿಗೆ ತರತಕ್ಕದ್ದಾಗಿದೆ. ಕಂದಗಳು ಸರಸ್ವತಿಯ ಮಕ್ಕಳು. ಸಜ್ಜನರಿಗೆ ಪ್ರಿಯವೂ ನವೀನವೂ ಆದ, ಕಾವ್ಯವೆಂಬುದ್ಯಾನದೊಳಗಿನ ಮಾವಿನ ಮರಗಳು. ಒಂಬತ್ತು ರಸಗಳನ್ನೂ ತುಂಬಿಕೊಂಡಿರುವ ಸ್ರೋತಗಳು ಎನ್ನುವಂತೆ ಸುರಂಗಕವಿ ಅವನ್ನು ತನ್ನ ಕಾವ್ಯದಲ್ಲಿ ಬಳಸಿದನು. ಇದು ತಾತ್ಪರ್ಯ.

(3) ಚಿಕ್ಕದೇವರಾಯನ ಆಸ್ಥಾನಿಕನಾಗಿದ್ದ ತಿರುಮಲಾರ್ಯನ (1645–1706) 'ಚಿಕದೇವರಾಜವಿಜಯ'ದಲ್ಲಿ ಕೂಡ ಕಂದಪದ್ಯದ ಮೆಚ್ಚುಗೆ ಎರಡು ಪದ್ಯಗಳಲ್ಲಿ ಬಂದಿರುವುದರಿಂದ ಅವನ್ನೂ ಇಲ್ಲಿಯೇ ನೋಡಬಹುದು :

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂದಂ ಕವಿಕೋಕಿಲಮಾ
ಕಂದಂ ಕೋಮಳ ವಿಕಾಸಿ ಕೃತಿ ಕಲ್ಪಲತಾ
ಕಂದಂ ವಿಸ್ರಮರರಸದು
ಕ್ಕಂದಂ ಚಿಕದೇವರಾಯ ಚಂದನಚಂದಂ ॥

ಕಂದಂಗಳ್ ಮಱುಕದ ಕಿಱು
ಗಂದಂಗ[ಳ್] ಮುದ್ದುನುಡಿಗಳಂ ಮೂದಲಿಕುಂ
ಚಂದಂ ಪ್ರಾಸಂ ಜತಿಯುಂ
ಚಂದಮನನುಸರಿಸಿ ಬರ್ಕುಮಮರ್ದುಗುವಿನೆಗಂ ॥ (1-53-54)

ಹರಿಹರನ ಮೆಚ್ಚುಮಾತಿನ ಪ್ರತಿಧ್ವನಿಯನ್ನೇ ಮೊದಲ ಪದ್ಯದಲ್ಲಿ ಕೇಳಬಹುದು. ಬಂಧದಲ್ಲಿಯೂ ಭಾವದಲ್ಲಿಯೂ ಇದು ಸುಬೋಧ. 'ಕವಿಗಳೆಂಬ ಕೋಗಿಲೆಗಳನ್ನು ಆಕರ್ಷಿಸುವ ಮಾವಿನಮರ, ಮೃದುವಾಗಿ ಹಬ್ಬುವ ಕೃತಿಯೆಂಬ ಕಲ್ಪಲತೆಯ ಗೆಡ್ಡೆ, ಮೆಲ್ಲಗೆ ಹರಿವ ರಸದ ಸ್ರೋತ, ಚಿಕದೇವರಾಯನು ಹಣೆಗಿಡುವ ಶ್ರೀಗಂಧದ ಬೊಟ್ಟು (?)' ಇದು ತಾತ್ಪರ್ಯ. ಇಲ್ಲಿಯ ಯಮಕಾಲಂಕಾರವೂ ವ್ಯವಹಿತವೇ.

ಎರಡನೆಯ ಪದ್ಯದಲ್ಲಿ ಕಂದಗಳು ಕರುಣೆಯ ಎಳಗೂಸುಗಳ ಮುದ್ದು ಮಾತುಗಳನ್ನು ಮೂದಲಿಸುವಷ್ಟು ಚೆಲುವಾದವು; ಅವುಗಳ ಲಕ್ಷಣ, ಪ್ರಾಸ ಮತ್ತು ಯತಿಗಳು ಅಮೃತ ಸೂಸುವಂತೆ ಲಕ್ಷಣಾನುಸಾರವಾಗಿ ಬರುತ್ತವೆ—ಎಂದು ಹೇಳಿದೆ, ಕಂದವು ಚಿಕ್ಕದಾದ ಚೆಲುವಾದ ಛಂದಸ್ಸು ಎಂಬುದೂ ಪ್ರಾಸ ಯತಿಗಳನ್ನು ಅದರಲ್ಲಿ ಪಾಲಿಸಲಾಗುತ್ತದೆ ಎಂಬುದೂ ಇಲ್ಲಿ ಗಮನಿಸಬೇಕಾದ ವಿಷಯ. ಕಂದ ಪದ್ಯದಲ್ಲಿ ಯತಿಗೆ ಯಾವ ಸ್ಥಾನವಿದೆ ಎನ್ನುವುದನ್ನು ತಿಳಿಯುವಲ್ಲಿ ಈ ಉಲ್ಲೇಖವನ್ನು ನೆನಪಿಡಬೇಕು.

ಇದೇ ಕಾವ್ಯದಲ್ಲಿ ವೃತ್ತದ ಬಗೆಗೆ ಹೀಗೆಂದಿದೆ :

ವೃತ್ತಂಗಳುತ್ತುಂಗರಸೋದಯಾನು
ವೃತ್ತಂಗಳಿತ್ತಂಗಜಲೀಲೆಯುಂ ಸ
ದ್ವೃತ್ತಂಗಳಂ ಪೆಣ್ಗಳ ಮತ್ತು ರೋಜ
ವೃತ್ತಂಗಳಂ [ಪೋಲ್ತೈ]ರ್ದಯೇಱಿ ಬಾಟ್ಟುಂ ॥ (1-55)

ಕಾವ್ಯದಲ್ಲಿ ಬಳಸುವ ವೃತ್ತಗಳನ್ನೂ ಸ್ತ್ರೀಯ ಸ್ತನಗಳನ್ನೂ ಶ್ಲೇಷೆಯಿಂದ ಹೋಲಿಸುವ ಪ್ರಯತ್ನ ಈ ಇಂದ್ರವಜ್ರ ವೃತ್ತದಲ್ಲಿ ನಡೆದಿದೆ. ಕಾವ್ಯದ ವೃತ್ತಗಳೂ ಸ್ತ್ರೀಯ ಸ್ತನಗಳೂ ಅತ್ಯಧಿಕವಾದ ರಸೋತ್ಪಾದನೆಯನ್ನು ಮಾಡಬಲ್ಲವು, ಅನುರಾಗವನ್ನು ಕೊಡಬಲ್ಲವು, ಹೃದಯವನ್ನು ಆಕ್ರಮಿಸಿ ಬಾಳಬಲ್ಲವು—ಎನ್ನುವುದು ಪದ್ಯದ ತಾತ್ಪರ್ಯ. ಪದ್ಯದಲ್ಲಿ ರಸಿಕರು ಇನ್ನೂ ಹೆಚ್ಚಿನ ಅರ್ಥ ಸ್ವಾರಸ್ಯವನ್ನು ಕಾಣಲು ಸಾಧ್ಯವಿದೆ. ಇಲ್ಲಿಯೂ ಯಮಕಾಲಂಕಾರವುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದಿನ ಪದ್ಯದಲ್ಲಿ ಗದ್ಯದ ಬಗ್ಗೆ ಹೀಗಿದೆ:

ವಚನಂಗಳುಚಿತಚಾಟುವಿ
ರಚನಂಗಳ್ ಪ್ರಚುರ ರುಚಿರ ಸಾಹಿತ್ಯ ಸುಧಾ
ವಚನಂಗಳಿನಿಯಳೊಲ್ಮೆಯ
ವಚನಂಗಳಿನಲ್ಕೆ ಮನಮನಿರ್ಕುಳಿಗೊಟ್ಟುಂ ॥ (1-56)

ಚಾಟೂಕ್ತಿಗಳು. ಅಮೃತೋಕ್ತಿಗಳು ಹಾಗೂ ಪ್ರಿಯೋಕ್ತಿಗಳು ಎನ್ನುವಂತೆ ಗದ್ಯ ಮನಸ್ಸನ್ನು ಆಕರ್ಷಿಸುವುದೆಂದಿದ್ದಾನೆ ತಿರುಮಲಾರ್ಯನು ಇಲ್ಲಿ.

ಹೊಸಗನ್ನಡ ಕಾಲದ ಕವಿಗಳ ರಚನೆಯಲ್ಲಿಯೂ ಕೆಲಮಟ್ಟಿಗೆ ಈ ಪ್ರವೃತ್ತಿ ಕಂಡುಬಂದಿದೆ. ಎರಡು ಉದಾಹರಣೆಗಳನ್ನಿಲ್ಲಿ ಕೊಡಬಹುದು.

(4) ಸಾನೆಟ್ ಎಂಬ ಇಂಗ್ಲಿಷ್ ಪದ್ಯ ಪ್ರಕಾರದ ಕನ್ನಡರೂಪವಾದ 'ಅಷ್ಟಷಟ್ಪದಿ'ಯ ಸ್ವರೂಪವನ್ನೇ ಕವಿತೆಯ ವಿಷಯವಾಗಿ ಮಾಡಿಕೊಂಡು ಬೇಂದ್ರೆಯವರು ಒಂದು ಪದ್ಯವನ್ನು ರಚಿಸಿದ್ದಾರೆ. ಇದು ಅವರ 'ಉಯ್ಯಾಲೆ' ಎಂಬ ಕವನ ಸಂಕಲನದೊಳಗೆ (1938, 1950) ಆ ಬಗೆಯ ಪದ್ಯಗಳ ಗುಚ್ಛದೊಳಗೆ ಮೊದಲ ಪದ್ಯವಾಗಿ ಸೇರಿದೆ. ಪದ್ಯದ ಹೆಸರು 'ಅಷ್ಟಷಟ್ಪದಿ' ಯೆಂದೇ ಇದೆ.

ಅಷ್ಟಷಟ್ಪದಿಯಲ್ಲಿ ಉಯ್ಯಾಲೆಯಾಡಿದ—ಕೌತುಕದ ಬಗೆ

ಎಂದು ಆರಂಭವಾಗಿರುವ ಈ ಪದ್ಯದಲ್ಲಿ ಆ ಛಂದಸ್ಸಿನ ಸ್ವರೂಪವನ್ನೂ ಜೀವನರಹಸ್ಯವನ್ನೂ ಒಟ್ಟಿಗೇ ಬೆಸೆದು ಬಿಂಬಿಸುವ ಪ್ರಯತ್ನ. ನಡೆದಿದೆ.

(5) 'ರಾಘವರ' 'ಹಂಸಪಥ' ಎಂಬ ಪದ್ಯ ಸಂಕಲನದಲ್ಲಿ (1971) ಪ್ರಾಸವನ್ನು ಕುರಿತ ಒಂದು ಪದ್ಯವಿದೆ. ಈ ಪದ್ಯದ ಒಂದು ನುಡಿಯನ್ನಿಲ್ಲಿ ಉದ್ಧರಿಸಬಹುದು :

ಸುಲಭದಿ ದೊರೆತರೆ ಜೋಡಿಸು ಪ್ರಾಸ:
  ಸಂತೋಷ;
ಅದರಿಂದಿದೆ ಕವಿತೆಗೆ ತುಸು ಮೆರಗು.
ಪ್ರಾಸಕಾಗಿಯೇ ಪಡುವ ಪ್ರಯಾಸ
  ಕವಿತೆಯ ಕೊರಳಿಗೆ ಪಾಶ;
  ನಿತ್ಯದ ಕೊರಗು.
ಈ ಮಾತಿಗೆ ಈ ಪದ್ಯವೆ ಸಾಕ್ಷಿ
  ನಿನಗಿರೆ 'ಕವಿತಾಕ್ಷಿ' (ಪ್ರ. 56)

ಪದ್ಯಕ್ಕೆ ಹತ್ತು ಸಾಲಿನ ಇನ್ನೂ ಒಂದು ನುಡಿಯಿದೆ. ಕವಿತೆಯಲ್ಲಿ ಪ್ರಾಸವನ್ನು ಸಹಜವಾಗಿ ತರುವುದು ಎಷ್ಟು ಕಷ್ಟ, ಕಷ್ಟಪಟ್ಟು ಹೊಂದಿಸುವ ಪ್ರಾಸವು ಹೇಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕವಿತೆಯ ಸೊಗಸಿಗೆ ಭಂಗತರುತ್ತದೆ ಎನ್ನುವುದನ್ನಿಲ್ಲಿ ಹೇಳಿದೆ. ಕವಿತೆಗೆ ಪ್ರಾಸ ಇರಲೇಬೇಕೆಂಬ ನಿರ್ಬಂಧ ಹಾಕಿಕೊಂಡು ಬರೆಯಲು ಹೊರಡಬಾರದು, ಅದು ಸಹಜವಾಗಿ ತನಗೆ ತಾನೇ ಹೊಂದಿಕೊಂಡು ಬಂದರೆ ಇರಲಿ, ಆದರಿಂದ ಕವಿತೆಯ ಕಳೆ ಸ್ವಲ್ಪ ಹೆಚ್ಚಬಹುದು ಎನ್ನುವುದು ಲೇಖಕರ ದೃಷ್ಟಿ: ಇದನ್ನು ಒಪ್ಪಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂ. ವಿ. ಸೀತಾರಾಮಯ್ಯ

' ಸಭಾಮಧ್ಯಲಬ್ಧವರಂ ಶ್ರೀವಿಜಯಂ '

ಶ್ರೀವಿಜಯಪರಂಪರೆ

ಕನ್ನಡ ಕಾವ್ಯಲೋಕದಲ್ಲಿ ಶ್ರೀವಿಜಯನ ಹೆಸರು ಕವಿರಾಜಮಾರ್ಗದೊಂದಿಗೆ ಹೆಣೆದುಕೊಂಡು ಮೊತ್ತಮೊದಲಿಗೆ ಬೆಳಕಿಗೆ ಬಂದುದು ದಿವಂಗತರಾದ ಆರ್. ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆಯಲ್ಲಿ 1907ರಲ್ಲಿ. ಕವಿರಾಜಮಾರ್ಗವನ್ನು ಕುರಿತು ಬರೆಯುತ್ತ, "ಯದ್ಯಪಿ ಈ ಗ್ರಂಥವು ನೃಪತುಂಗಕೃತವೆಂದು ಪ್ರತೀತಿ ಯಿದ್ದರೂ ಶ್ರೀವಿಜಯ ಕೃತವೋ ಎಂದು ಸಂದೇಹಪಡುವುದಕ್ಕೆ ಅವಕಾಶವಿದೆ" ಎಂದು ಅವರು ಹೇಳಿದಂದಿನಿಂದ ಇಂದಿನವರೆಗೆ ಕವಿರಾಜಮಾರ್ಗದ ಕರ್ತೃತ್ವದ ಬಗೆಗೆ ವಾದವಿವಾದಗಳು ವಿಪುಲವಾಗಿ ನಡೆದು, ಶ್ರೀವಿಜಯನೇ ಕವಿರಾಜಮಾರ್ಗ ಕವಿ ಎಂಬ ತೀರ್ಮಾನ ವಿದ್ವತ್ಪ್ರಪಂಚದಲ್ಲಿ ಬಹುಮಟ್ಟಿಗೆ ಮಾನ್ಯತೆ ಪಡೆದ ಸಂಗತಿಯಾಗಿದೆ. ಹೀಗಿದ್ದರೂ, ನೃಪತುಂಗನ ಕವಿರಾಜಮಾರ್ಗ ಎಂದು ಹೇಳುವುದೇ ರೂಢಿ. ರೂಢಿ ಅಷ್ಟು ಬಲವತ್ತರವಾದುದು. ಕನ್ನಡದ ಆದಿಗ್ರಂಥವಾದ ಕವಿರಾಜ ಮಾರ್ಗ ಗ್ರಂಥದ ರಚನೆಯಲ್ಲಿ ರಾಷ್ಟ್ರಕೂಟ ಚಕ್ರವರ್ತಿಯಾದ ನೃಪತುಂಗನ (ಕ್ರಿ.ಶ. 814–877) ಗಣ್ಯವಾದ ಪ್ರಭಾವ ಮುದ್ರೆ ಬೀಳದೆ ಇಲ್ಲ. ಗ್ರಂಥದ ಪ್ರತಿಯೊಂದು ಪರಿಚ್ಛೇದಾಂತ ಗದ್ಯದಲ್ಲಿಯೂ 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗ' ಎಂಬ ಒಕ್ಕಣೆ ಇರುವುದರಿಂದ 'ನೃಪತುಂಗದೇವಾನುಮತಮಪ್ಪ, ಶ್ರೀವಿಜಯ ಕೃತ ಕವಿರಾಜಮಾರ್ಗ ಎಂದು ಹೇಳುವುದು ವಸ್ತುಸ್ಥಿತಿಗೆ ಹೆಚ್ಚು ಹತ್ತಿರವಾದ ಮಾತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲನೆಯ ಮೈಲಿಗಲ್ಲು ಎನ್ನಬಹುದಾದ ಮಹತ್ತ್ವದ ಕೃತಿ ಕವಿರಾಜಮಾರ್ಗದ ಕರ್ತೃತ್ವ ವಿಚಾರದ ಚರ್ಚೆಯು ಸ್ಥೂಲವಾದ ಶ್ರೀವಿಜಯನನ್ನೇ ಕುರಿತಾದ ಈ ಪ್ರಬಂಧದಲ್ಲಿ ಅಗತ್ಯವೆನಿಸುತ್ತದೆ. ಅಲ್ಲದೆ ಕವಿರಾಜಮಾರ್ಗದ ಕರ್ತೃತ್ವ ಪರಿಚಯ ವಿಚಾರದ ವಾದ ವಿವಾದ ಬೆಳೆದು ವಿಸ್ತಾರಗೊಂಡಂತೆ, ಅನೇಕ ಶ್ರೀವಿಜಯರು ಈ ವಾದಕ್ಕೆ ಅಂಟಿಕೊಂಡಂತೆ ಗಮನಕ್ಕೆ ಬರುತ್ತಾರೆ. ಅವರ ಪೈಕಿ ಕವಿರಾಜಮಾರ್ಗಕಾರ ಶ್ರೀವಿಜಯನನ್ನು ಗುರುತು ಹಚ್ಚಿ, ಪ್ರತ್ಯೇಕ ಮಾಡಿ ತಿಳಿಯುವುದಕ್ಕಾಗಿ ಶ್ರೀ ವಿಜಯ ಪರಂಪರೆಯ ಅರಿವೂ ಆವಶ್ಯಕ.

1. ಶ್ರೀ ವಿಜಯಾಚಾರ್ಯ : 'ಆರಾಧನಾ' ಜೈನಧರ್ಮದ ಅತ್ಯಂತ ಪ್ರಸಿದ್ಧ ವಾದ ಪ್ರಾಚೀನ ಗ್ರಂಥ. ವಡ್ಡಾರಾಧನಾ ಇದರ ಒಂದು ಶಾಖೆಗೆ ಸೇರಿದ್ದು. ಈ ಮೂಲ ಆರಾಧನಾ ಗ್ರಂಥದ ಮೇಲೆ ಅನೇಕ ಪ್ರಾಚೀನ ಪ್ರಾಕೃತ ಭಾಷಾ ಟೀಕೆಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಟ್ಟಿಕೊಂಡಿವೆ. ಈ ಟೀಕೆಗಳು 6-7ನೆಯ ಶತಮಾನಕ್ಕಿಂತ ಈಚಿನವಲ್ಲ. ಇವುಗಳ ಪೈಕಿ ಒಂದರ ಕರ್ತೃ ಅಪರಾಜಿತ ಸೂರಿ; ಟೀಕೆಯ ಹೆಸರು ವಿಜಯೋದಯಾ (ವಿಜಯನಿಂದ ಹುಟ್ಟಿದ್ದು, ರಚಿತವಾದದ್ದು). ಅಪರಾಜಿತ ಸೂರಿಯ ಕಾಲ ಕ್ರಿ.ಶ. ಸು. 750 ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈತನಿಗೆ ಶ್ರೀ ವಿಜಯಾಚಾರ್ಯ ಎಂಬ ನಾಮಾಂತರವೂ ಇದ್ದುದಾಗಿ ತಿಳಿದುಬರುತ್ತದೆ. ಈ ಹೆಸರಿನಿಂದಾಗಿಯೇ ಟೀಕೆಗೂ 'ವಿಜಯೋದಯಾ' ಎಂಬ ಹೆಸರು ಬಂದಿರಬೇಕು. ಆದ್ದರಿಂದ ಈಗ ತಿಳಿದುಬಂದಿರುವ ಮಟ್ಟಿಗೆ ಅಪರಾಜಿತ ಸೂರಿ ಪ್ರಪ್ರಥಮ ಶ್ರೀ ವಿಜಯ (ಆಚಾರ್ಯ).[1]

2. ಶ್ರೀವಿಜಯ—ಸಮಂತಭದ್ರ : "ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ ಎಂಬ ಮೂವರು ಜೈನಕವಿಗಳನ್ನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವ ಪ್ರಬಲರಾದ ಜೈನಕವಿಗಳೆಲ್ಲಾ ತಮ್ಮ ತಮ್ಮ ಗ್ರಂಥಗಳ ಆದಿಭಾಗದಲ್ಲಿ ವಿಶೇಷವಾಗಿ ಸ್ತುತಿಸಿದ್ದಾರೆ."[2] ಈತನ ಕಾಲ ಕ್ರಿ.ಶ. ಸು. 400 ಎಂಬುದು ಕವಿಚರಿತೆಕಾರರ ಅಭಿಪ್ರಾಯ. ಜಿನಸೇನಾಚಾರ್ಯರು ಇವನನ್ನು ಹೊಗಳಿರುವುದರಿಂದ ಇವನ ಕಾಲ 8ನೆಯ ಶತಮಾನಕ್ಕಿಂತ ಹಿಂದಿನದು ಎಂಬಲ್ಲಿ ಸಂದೇಹವಿಲ್ಲ. ಎಷ್ಟು ಹಿಂದೆ ಎಂಬುದರಲ್ಲಿ ಭಿನ್ನಾಭಿಪ್ರಾಯಗಳಿವೆ. ಕವಿರಾಜಮಾರ್ಗದಲ್ಲಿ (1-32) ಪೂರ್ವಪದ್ಯಕವಿಗಳ ಸಾಲಿನಲ್ಲಿ ಪರಮ ಶ್ರೀವಿಜಯ ಕವೀಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳು ಉಕ್ತರಾಗಿರುವರಷ್ಟೆ. ಡಾ. ದ. ರಾ. ಬೇಂದ್ರೆಯವರು ತಮ್ಮ ಲೇಖನವೊಂದರಲ್ಲಿ[3] ಮೇಲ್ಕಂಡ ಮೂವರನ್ನು ಕವಿರಾಜಮಾರ್ಗದ ಈ ಕವಿಪಂಕ್ತಿಯ ಮೊದಲ ಮೂವರೊಂದಿಗೆ ಸಮೀಕರಿಸಿ ಸಮಂತಭದ್ರನಿಗೆ ಇದ್ದ ಅನೇಕ ಹೆಸರುಗಳಲ್ಲಿ ಶ್ರೀವಿಜಯ ಎಂಬುದೂ ಒಂದಿರಬಹುದೆಂದೂ ಈತನ ಪರಮಾಗಮ ಸೂತ್ರ ಗ್ರಂಥವೇ (ದುರ್ಗಸಿಂಹನು ಹೊಗಳುವ) 'ಶ್ರೀವಿಜಯರ ಕವಿಮಾರ್ಗ ರೂಪಗೊಂಡಿರಬಹುದೆಂದೂ ಈ 'ಕವಿಮಾರ್ಗ'ವನ್ನೇ ನೃಪತುಂಗನು ಕವಿರಾಜಮಾರ್ಗವಾಗಿ ವಿಸ್ತರಿಸಿರುವನೆಂದೂ ಒಂದು ವಾದವನ್ನು ಮುಂದಿಟ್ಟಿದ್ದಾರೆ. ಕವಿರಾಜಮಾರ್ಗ ಭಾಮಹ ಮತ್ತು ದಂಡಿಗಳ ಅಲಂಕಾರ ಶಾಸ್ತ್ರ ಗ್ರಂಥಗಳನ್ನು ಆಧರಿಸಿ ಬರೆದಿರತಕ್ಕದ್ದು ಸುವಿದಿತವಾಗಿದೆ. ಇವರ ಕಾಲ 6ನೆಯ ಶತಮಾನಕ್ಕಿಂತ ಈಚೆಗೆ. ಅಲ್ಲದೆ ಸಮಂತಭದ್ರನಿಗೆ ಶ್ರೀವಿಜಯ ಎಂಬ

---

[1] 'ಆರಾಧನಾ ಮತ್ತು ಅದರ ಟೀಕೆಗಳು'—ಮೂಲ ಲೇಖಕ: ಪ. ನಾಥೂಲಾಲ್ ಪ್ರೇಮಿ: ಅನುವಾದಕ: ಡಾ॥ ಎಂ. ಎಸ್. ಕೃಷ್ಣಮೂರ್ತಿ (ಪ್ರಬುದ್ಧ ಕರ್ಣಾಟಕ, ಚೈತ್ರ ಸಂಚಿಕೆ, ಸಂ. 151, 1952).

[2] ಕರ್ಣಾಟಕ ಕವಿ ಚರಿತೆ, ಸಂ. I, 1924ರ 2ನೆಯ ಆವೃತ್ತಿ, ಪು. 1-4.

[3] 'ಸಾಹಿತ್ಯ-ಸಂಶೋಧನ,—ಡಾ॥ ದ. ರಾ. ಬೇಂದ್ರೆ, ಮನೋಹರ ಗ್ರಂಥ ಪ್ರಕಾಶನ, ಧಾರವಾಡ; 1940.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಸರಿದ್ದಿತು ಎಂದು ಹೇಳಲು ಯಾವ ಆಧಾರವೂ ಇಲ್ಲ. ಹೀಗಿರುವುದರಿಂದ ಸಮಂತಭದ್ರನಿಗೂ ಶ್ರೀವಿಜಯ: ಕವಿಮಾರ್ಗ-ಕವಿರಾಜ ಮಾರ್ಗಗಳಿಗೂ ಸಂಬಂಧ ಕಲ್ಪಿಸುವುದು ಸಾಧ್ಯವಿಲ್ಲ.

3. ಶ್ರೀವಿಜಯ—ಜಿನಸೇನ: ವೀರಸೇನಾಚಾರ್ಯರು ಪ್ರಸಿದ್ಧವಾದ ಜೈನಾಗಮಗ್ರಂಥ 'ಷಟ್ಖಂಡಾಗಮ ಸೂತ್ರ'ಗಳಿಗೆ ಧವಲ ಎಂಬ ಟೀಕೆಯನ್ನು ಬರೆದಿರುವರು. ಇವರ ಕಾಲ ಕ್ರಿ.ಶ. 748-823. 814ರಲ್ಲಿ ಪಟ್ಟಕ್ಕೆ ಬಂದ ಅಮೋಘವರ್ಷ ನೃಪತುಂಗನ ಗೌರವಾರ್ಥ ಅದಕ್ಕೆ 'ಧವಲ' ಎಂದು ಹೆಸರಿಟ್ಟಿರಬಹುದೆಂದು ವಿದ್ವಾಂಸರ ಹೇಳಿಕೆ. (ನೃಪತುಂಗನಿಗೆ 'ಅತಿಶಯಧವಳ' ಎಂಬ ಬಿರುದಿದ್ದುದನ್ನು ಇಲ್ಲಿ ನೆನೆಯಬಹುದು). ವೀರಸೇನನು ಆಚಾರ್ಯ ಗುಣಧರರ ಕಸಾಯಪಾಹುಡ (ಕಷಾಯ ಪ್ರಾಭೃತ)ಕ್ಕೆ 20,000 ಶ್ಲೋಕಗಳ ಟೀಕೆಯನ್ನೂ ಬರೆದು, ಮುಗಿಸುವ ಮುನ್ನ ಕಾಲವಾದರು. ವೀರಸೇನರ ಶಿಷ್ಯ ಜಿನಸೇನರು. (ಕ್ರಿ.ಶ. 763-843) ಕಸಾಯಪಾಹುಡಕ್ಕೆ 40,000 ಶ್ಲೋಕಗಳ ಟೀಕೆಯನ್ನು ಸೇರಿಸಿ ಅಪೂರ್ಣವಾಗಿದ್ದ ಟೀಕಾಗ್ರಂಥವನ್ನು ಮುಗಿಸಿ, ಅದಕ್ಕೆ 'ಜಯಧವಲಾ' ಎಂದು ನಾಮಕರಣ ಮಾಡಿದರು. ಈ ಜಯಧವಲ ಎಂಬ ಹೆಸರಿನಲ್ಲಿನ ಜಯ, ಜಯಧವಲಾ ಟೀಕಾಗ್ರಂಥದಲ್ಲಿ ಒಂದೆಡೆಯಲ್ಲಿ "ಟೀಕಾಶ್ರೀಜಯಚಿಹ್ನತೋರು ಧವಲಾ ಸೂತ್ರಾರ್ಥ ಸಂದ್ಯೋತನೀ" ಎಂದಿರುವ ಮಾತು, ಜಿನಸೇನಕೃತ ಆದಿಪುರಾಣದಲ್ಲಿಯೂ ಕವಿರಾಜಮಾರ್ಗದಲ್ಲಿಯೂ ಕೆಲವೆಡೆ ಕಂಡುಬರುವ ಉಕ್ತಿಸಾಮ್ಯಗಳು—ಇವುಗಳ ಆಧಾರದ ಮೇಲೆ ಶ್ರೀ ಭೀಮರಾವ್ ಚಿಟಗುಪ್ಪಿಯವರು "ಶ್ರೀವಿಜಯ ಜಿನಸೇನನ ಅಂಕಿತ ಅರ್ಥಾತ್ ಶ್ರೀ ವಿಜಯ ಜಿನಸೇನ ಏಕವ್ಯಕ್ತಿ" ಎಂಬ ಹೊಸ ವಿಚಾರವನ್ನು ಮುಂದಿಟ್ಟಿರುವರು. ಮಂಗರಸ ಮತ್ತು ದೊಡ್ಡಯ್ಯ ಎಂಬ ಕನ್ನಡ ಕವಿಗಳು ಚಂದ್ರಪ್ರಭ ಪುರಾಣಕರ್ತನಾದ ಒಬ್ಬ ಶ್ರೀವಿಜಯನನ್ನು ಸ್ಮರಿಸಿರುವರು. ದುರ್ಗಸಿಂಹನು ಶ್ರೀವಿಜಯರ ಕವಿಮಾರ್ಗಂ ಎಂದು ಉಲ್ಲೇಖಿಸಿರುವನು. ಜಿನಸೇನರು ಜಯಧವಲ ಟೀಕೆಯ ಮಂಗಲ ಶ್ಲೋಕದಲ್ಲಿ ಚಂದ್ರಪ್ರಭ ತೀರ್ಥಂಕರನನ್ನು ಸ್ತುತಿಸಿರುವರು. ಈ ಎಲ್ಲ 'ಅಂಶ-ಆಧಾರ ಊಹೆ'ಗಳನ್ನು ಒಟ್ಟುಗೂಡಿಸಿ, ಶ್ರೀವಿಜಯ ಎಂಬ ನಾಮಾಂತರವುಳ್ಳ ಜಿನಸೇನನು ಚಂದ್ರಪ್ರಭಪುರಾಣವನ್ನೂ 'ಕವಿಮಾರ್ಗ'ವನ್ನೂ ರಚಿಸಿದ್ದನೆಂದೂ: ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನು ಶ್ರೀವಿಜಯ ಎಂಬ ಆಚಾರ್ಯ ನಾಮಾಂಕವನ್ನು ಧರಿಸಿ, "ಶ್ರೀವಿಜಯನ ಅರ್ಥಾತ್ ಜಿನಸೇನನ ಮೂಲಕೃತಿ ಕವಿಮಾರ್ಗವನ್ನು, ಮಾತೃಕೆಯೆಂದು ಇಟ್ಟುಕೊಂಡು ಕವಿರಾಜಮಾರ್ಗವನ್ನು ರೂಪಿಸಿರುವನು" ಎಂದೂ ಚಿಟಗುಪ್ಪಿಯವರು ತೀರ್ಮಾನಿಸಿರುವರು.[4] ಜಿನಸೇನರಿಗೆ ಶ್ರೀವಿಜಯ ಎಂಬ

---

[4] 'ಕವಿರಾಜಮಾರ್ಗ ಪ್ರಶಸ್ತಿ'—ಶ್ರೀ. ಭೀಮರಾವ್ ಚಿಟಗುಪ್ಪಿ: ಮನ್ವಂತರ ಪ್ರಕಾಶನ, ಧಾರವಾಡ; 1972 ; ಪು. 152-172.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಸರೂ ಇದ್ದಿತೆಂಬುದಕ್ಕೆ ಅವರ ಗ್ರಂಥಗಳಿಂದ ಹುಡುಕಿ ತೆಗೆದ ದುರ್ಬಲ-ಆಂತರಿಕ ಆಧಾರಗಳಲ್ಲದೆ ಪ್ರಬಲರೂ ಬೇರೆಯ ಬಾಹ್ಯ ಪ್ರಮಾಣಗಳು ಇದ್ದಂತಿಲ್ಲ. ಒಂದು ವೇಳೆ ಆ ಹೆಸರು ಅವರಿಗೆ ಇದ್ದಿರಬಹುದು ಎಂದು ಇಟ್ಟುಕೊಂಡರೂ, ಕವಿರಾಜಮಾರ್ಗಕ್ಕೂ ಜಿನಸೇನರಿಗೂ ಸಂಬಂಧ ಕಲ್ಪಿಸುವುದರಲ್ಲಿ ತೊಡಕುಗಳಿವೆ. (ಈ ವಿಚಾರವನ್ನು ಕವಿರಾಜಮಾರ್ಗದ ಕರ್ತೃತ್ವ ವಿಚಾರವನ್ನು ಎತ್ತಿಕೊಂಡಾಗ ಚರ್ಚಿಸಲಾಗುವುದು.

4. ಶ್ರೀವಿಜಯ: ಚಂದ್ರಪ್ರಭಪುರಾಣ ಕರ್ತೃ—(i) ಮಂಗರಸನು (ಸು. 1508) ತನ್ನ 'ನೇಮಿಜಿನೇಶ ಸಂಗತಿ'ಯಲ್ಲಿ "ದೇವ ಚಂದ್ರಪ್ರಭರನ್ನು ಕೊಂಡಾಡಿದ! ಶ್ರೀವಿಜಯರ..." ಎಂದು ಚಂಪೂಕಾವ್ಯಕರ್ತರ ವೃಂದದಲ್ಲಿ ಶ್ರೀವಿಜಯನ ಹೆಸರನ್ನು ಸೇರಿಸಿ ಸ್ಮರಿಸಿದ್ದಾನೆ, (ii) ಪಿರಿಯ ಪಟ್ಟಣದ ದೊಡ್ಡಯ್ಯನು (ಸು. 1550) ತನ್ನ 'ಚಂದ್ರಪ್ರಭಸಾಂಗತ್ಯ' ದಲ್ಲಿ "ಚಂದ್ರಪ್ರಭ ಪುರಾಣವ ಪೇಳ್ದ ವಿಜಯ ಕವೀಂದ್ರ" ಎಂದು ಉಲ್ಲೇಖಿಸಿದ್ದಾನೆ. ಈ ಚಂದಪ್ರಭ ಪುರಾಣ ಇನ್ನೂ ದೊರಕಿಲ್ಲ. ಕವಿರಾಜಮಾರ್ಗದಲ್ಲಿ ಉಕ್ತನಾದ (1–32) 'ಪರಮಶ್ರೀ ವಿಜಯ ಕವೀಶ್ವರ' ಈ ಕೃತಿಯ ಕರ್ತೃವೋ, 'ಕವಿಮಾರ್ಗ —' ಕವಿರಾಜಮಾರ್ಗಗಳ ಶ್ರೀವಿಜಯನು ಇದರ ಕರ್ತೃವೋ, ಹೇಳುವುದು ಕಷ್ಟ. ಚಂದ್ರಪ್ರಭ ಪುರಾಣವನ್ನು ರಚಿಸಿರುವ ಅಗ್ಗಳನು (ಕ್ರಿ.ಶ. 1189) ಶ್ರೀವಿಜಯನ ಹೆಸರನ್ನು ಸ್ಮರಿಸದಿರುವುದರಿಂದ, ಮಂಗರಸ ಮತ್ತು ದೊಡ್ಡಯ್ಯ ಇವರುಗಳು ಸ್ಮರಿಸುವ ಶ್ರೀ ವಿಜಯ ತೀರ ಅರ್ವಾಚೀನ (ಎಂದರೆ, 12 ನೆಯ ಶತಮಾನ ಮತ್ತು 16 ನೆಯ ಶತಮಾನಗಳ ನಡುವೆ ಇದ್ದವನು) ಎಂದು ಡಾ. ಎಂ. ಎಂ. ಕಲಬುರ್ಗಿ ಅವರ ಅಭಿಪ್ರಾಯ.[5] ಅಗ್ಗಳ ಸ್ಮರಿಸಿಲ್ಲ ಎಂಬ ಕಾರಣದಿಂದ ಚಂದ್ರಪ್ರಭ ಪುರಾಣದ ಶ್ರೀವಿಜಯನನ್ನು ಅರ್ವಾಚೀನ ಎನ್ನುವುದು ತರ್ಕಬದ್ಧವಲ್ಲ. ಉಲ್ಲೇಖನಾಭಾವ ಒಂದು ಪ್ರಮಾಣವೆನಿಸದು. ಚಂದ್ರಪ್ರಭ ಪುರಾಣವನ್ನು ಬರೆದ ಶ್ರೀವಿಜಯ ನೊಬ್ಬನಿದ್ದನೆಂಬುದಂತೂ ಖಚಿತ. ಶ್ರೀವಿಜಯ ಪರಂಪರೆಯಲ್ಲಿ ಇವನು ಯಾರಾಗಿರಬಹುದು, ಇವನ ಕಾಲ ಯಾವುದು ಎಂಬುದನ್ನು ಖಚಿತವಾಗಿ ಹೇಳುವುದು ಕಷ್ಟ.

5. ಶ್ರೀವಿಜಯ — ರಘುವಂಶಮಹಾಪುರಾಣದ ಕರ್ತ: ಜನ್ನನು (ಕ್ರಿ.ಶ. ಸು. 1200–1250) ತನ್ನ ಅನಂತನಾಥ ಪುರಾಣದಲ್ಲಿ 'ಜಿನೇಂದ್ರ ಪುರಾಣ ಕರ್ತೃ'ಗಳ ಶ್ರೇಣಿಯಲ್ಲಿ ನಾಗವರ್ಮನನ್ನು ಹೆಸರಿಸಿದ್ದಾನೆ. ಈ ಉಲ್ಲೇಖದ ಆಧಾರದ ಮೇಲೆ, 2 ನೆಯ ನಾಗವರ್ಮನು ಒಂದು ಜೈನಪುರಾಣವನ್ನು ಬರೆದಿರ

---

5 ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ—ಡಾ॥ ಎಂ. ಎಂ. ಕಲಬುರ್ಗಿ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ: 1973: ಪು. 85.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕೆಂಬ ಊಹೆಗೆ ಆಧಾರವಿದ್ದಿತು. ಇತ್ತೀಚೆಗೆ 'ವರ್ಧಮಾನ' ಪುರಾಣದ ಹಸ್ತಪ್ರತಿಯೊಂದು ದೊರಕಿದ್ದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಗಿದೆ. ಅದರ ಸಂಪಾದಕರಾದ ಶ್ರೀ ಬಿ. ಎಸ್. ಸಣ್ಣಯ್ಯನವರು, ಅದು 2 ನೆಯ ನಾಗವರ್ಮ ರಚಿಸಿದ್ದು ಎಂದು ತೀರ್ಮಾನಿಸಿದ್ದಾರೆ. ಈ ವರ್ಧಮಾನ ಪುರಾಣದ ಒಂದು ಪದ್ಯದಿಂದ. "ಪೇಳ್ದಂ ರಘುವಂಶ ಮಹಾಪುರಾಣಮಂ ಶ್ರೀವಿಜಯಂ" ಎಂದು ತಿಳಿದುಬರುತ್ತದೆ.[6] ಈ ಶ್ರೀವಿಜಯ ಯಾರು ಎಂಬುದನ್ನು ವಿಚಾರಮಾಡಬೇಕಾಗಿದೆ.

6. ಅನ್ಯಕವಿಸ್ತುತರಾದ ಇತರ ಶ್ರೀವಿಜಯರು: (i) 'ವರ್ಧಮಾನ ಪುರಾಣ, ಕರ್ತನಾದ ಆಚಣ್ಣನು (ಕ್ರಿ.ಶ. ೧೧೯೫) ಶ್ರೀವಿಜಯ, ಗಜಾಂಕುಶ. ಗುಣವರ್ಮ, ನಾಗವರ್ಮ, ಅಸಗ, ಹಂಪ, ಹೊನ್ನಿಗ, ರನ್ನಿಗ, ಅಗ್ಗಳ, ಬೊಪ್ಪ— ಈ "ಕವಿದರ್ಪಕರಿಂದೆಸೆದತ್ತು ಭೂತಳಂ" ಎಂದು[7] ಕವಿಪಂಕ್ತಿಯಲ್ಲಿ ಶ್ರೀವಿಜಯನನ್ನು ಅಗ್ರಗಣ್ಯನಾಗಿ ಸೇರಿಸಿರುವುದು ಗಮನಾರ್ಹವಾಗಿದೆ. (ii) ಧರ್ಮನಾಥ ಪುರಾಣ ಕರ್ತೃವಾದ ಮಧುರಕವಿ (ಸು. ೧೪೦೦) ಆತ್ಮಪ್ರಶಂಸೆಯ ಒಂದು ಪದ್ಯದಲ್ಲಿ ರನ್ನ, ಜನ್ನ, ಪುಷ್ಪದಂತ, ಗಜಾಂಕುಶ. ಮನಸಿಜ ಮುಂತಾದ ಕವಿಗಳ ಪಂಕ್ತಿಯಲ್ಲಿ ಶ್ರೀವಿಜಯನ ಹೆಸರನ್ನು ಸೇರಿಸಿ ಅವರ ಹೆಸರುಗಳು ಅಂಕಿತನಾಮವಾಗುವಂತೆಯೂ ತನ್ನ ಗುಣವಿಶೇಷವೊಂದನ್ನು ಸೂಚಿಸುವ ವಿಶೇಷಣವಾಗುವಂತೆಯೂ ಶ್ಲೇಷೆಯ ಚಮತ್ಕಾರವನ್ನು ಮೆರೆದಿದ್ದಾನೆ. ಈ ಸಂದರ್ಭದಲ್ಲಿ 'ಸಭಾಮಧ್ಯಲಬ್ಧವರಂ ಶ್ರೀವಿಜಯಂ' ಎಂದು ತನಗೂ (ಸಭಾ ಮಧ್ಯದಲ್ಲಿ ಶ್ರೀ ಮತ್ತು ವಿಜಯಗಳನ್ನು ವರವಾಗಿ ಪಡೆದವನು), ಶ್ರೀವಿಜಯ ಕವಿಗೂ (ಸಭೆಯ ವಿದ್ವಾಂಸರ ನಡುವೆ ನೃಪತುಂಗನಿಗೆ 'ಲಬ್ಧನಾದ' ಶ್ರೇಷ್ಠನಾದ ಶ್ರೀವಿಜಯ ಎಂದು ಮಧುರ ಹೇಳಿರುವುದು 'ನೃಪತುಂಗ ಸಭಾಸದನಾದ ಶ್ರೀವಿಜಯ' ನನ್ನೆ ಕುರಿತಿದೆ, (iii) ದೇವಪ್ಪ ಕವಿ (೧೬ನೆಯ ಶತಮಾನ) ತನ್ನ 'ರಾಮ ವಿಜಯಕಾವ್ಯ'ದಲ್ಲಿ ಗಜಗ, ಗುಣವರ್ಮ, ಶಾಂತಿವರ್ಮ, ಪೊನ್ನ, ಅಗ್ಗಳ, ಸುಜನೋತ್ತಂಸ. ರನ್ನ, ಮಧುರ, ಮನಸಿಜ ಈ ಕವಿಗಳೊಂದಿಗೆ 'ವಿಜಯ' ನನ್ನು ಸ್ಮರಿಸಿರುವನು. ಈ ವಿಜಯ, (ಒಬ್ಬ) ಶ್ರೀವಿಜಯನೇ ಇರಬೇಕು.

7. 'ಕವಿಮಾರ್ಗದ ಶ್ರೀವಿಜಯ: ದುರ್ಗಸಿಂಹನು (ಸು. 1115) ತನ್ನ 'ಪಂಚತಂತ್ರ' ದಲ್ಲಿ—"ಶ್ರೀವಿಜಯರ ಕವಿಮಾರ್ಗಂ. ಭಾವಿಪ ಕವಿಜನದ ಮನಕೆ ಕನ್ನಡಿಯುಂ। ಕೈ ಯ್ದೀವಿಗೆಯುಂ ಮಾಡುವದಱಿಂ" ಶ್ರೀವಿಜಯರ್ ದೇವ

---

[6] ಕರ್ಣಾಟಕ ಕವಿಚರಿತೆ, ಸಂ. 1, ಪು. 300.

[7] ಹೆಚ್ಚಿನ ವಿವರಗಳಿಗೆ. ನೋಡಿ: 'ಕವಿರಾಜಮಾರ್ಗ: ಶ್ರೀವಿಜಯಕರ್ತೃತ್ವದ ಮೇಲೆ ಹೊಸ ಬೆಳಕು'—ಎಂ. ವಿ. ಸೀತಾರಾಮಯ್ಯ; ಪ್ರಬುದ್ಧ ಕರ್ಣಾಟಕ, 55-3, 1973.

Sri Vidyabharathi Book Centre, Sringeri

CC-O. In Public Domain. Digitized by eGangotri

ರವರನೇವಣ್ಣಿಪುದೋ ॥" ಎಂದು ಅತ್ಯಂತ ಗೌರವದಿಂದ ಸ್ಮರಿಸಿದ್ದಾನೆ. ಇಲ್ಲಿ ಕವಿಮಾರ್ಗ ಎಂದರೆ 'ಕವಿಗಳ ಮಾರ್ಗ' (ಕಾವ್ಯಮಾರ್ಗ) ಎಂದು ಕೆಲವು ವಿದ್ವಾಂಸರು ಅರ್ಥ ಮಾಡುತ್ತಾರೆ. ಈ ಸಂದರ್ಭದಲ್ಲಿಯೇ ಕೇಶಿರಾಜನು (ಸು. 1260) 'ಶಬ್ದಮಣಿದರ್ಪಣ'ದಲ್ಲಿ—"ಗಜಗನ ಗುಣನಂದಿಯ ಮನ। ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ। ವಿಜಯರ ಪೊನ್ನನ ಪಂಪನ। ಸುಜನೋತ್ತಂಸನ ಸುಮಾರ್ಗಮಿದಜೊಳೆ ಲಕ್ಷ್ಯಂ॥" ಎಂದಿರುವುದನ್ನೂ ಗಮನಿಸಬಹುದು. ದುರ್ಗಸಿಂಹನು ಶ್ರೀವಿಜಯನ ಕಾವ್ಯಮಾರ್ಗವನ್ನು ಉದ್ದೇಶಪಟ್ಟಿದ್ದರೆ ಕೇಶಿರಾಜನು ಹೇಳಿದಂತೆ 'ಶ್ರೀವಿಜಯರ ಮಾರ್ಗಂ' ಎಂದಷ್ಟೇ ಹೇಳುತ್ತಿದ್ದನು. ಆದ್ದರಿಂದ 'ಕವಿಮಾರ್ಗ' ಶಬ್ದವನ್ನು ಗ್ರಂಥವಾಚಕವಾಗಿಯೇ ಗ್ರಹಿಸಬೇಕು. ಕೇಶಿರಾಜನು ಶ್ರೀವಿಜಯನ ಹೆಸರು ಹೇಳಿರುವುದಲ್ಲದೆ ಕವಿರಾಜಮಾರ್ಗದ ಪದ್ಯಗಳನ್ನು (i—15; ii—6. 7. 33. 59) ಉದಾಹರಿಸಿರುವುದರಿಂದ ಕವಿಮಾರ್ಗ-ಕವಿರಾಜಮಾರ್ಗ ಎರಡೂ ಒಂದೇ ಕೃತಿಯ ಹೆಸರುಗಳು ಎಂದು ತಿಳಿಯಬಹುದು.

8. ಶಾಸನೋಕ್ತ ಶ್ರೀವಿಜಯರು : (i) ಚೆನ್ನಗಿರಿಯ 52ನೆಯ ಶಾಸನದಲ್ಲಿ "ಶ್ರೀವಿಜಯರ್ ದಶಕೀರ್ತಿದೇವರ್ ವಿರಚಿಸಿದರ್ ಸೇವ್ಯಶಾಸನ ಕೃತಿಯುಂ" ಎಂದು ಹೇಳಿದೆ. ಈ ಶಾಸನದ ಕಾಲ ಕ್ರಿ.ಶ. 1234.[8] ತುಂಬ ಈಚಿನವನಾದ ಈ ಶ್ರೀವಿಜಯನ ಪ್ರಸಕ್ತಿ ನಮ್ಮ ವಿವೇಚನೆಯಲ್ಲಿ ಅನಗತ್ಯ. ಇಲ್ಲಿಯೂ 'ಶ್ರೀವಿಜಯರ್ ದೇವರ್' ಎಂದು ಗೌರವಾರ್ಥಕ ಪ್ರಯೋಗವಿರುವುದನ್ನು ಗಮನಿಸಬಹುದು.

(ii) ಜೈನ ಆಚಾರ್ಯ ಮಲ್ಲಿಷೇಣನನ್ನು ಕುರಿತ ಒಂದು ಶಾಸನದಲ್ಲೂ (ಕ್ರಿ.ಶ. 977) ಒಬ್ಬ ಶ್ರೀವಿಜಯನ ಉಲ್ಲೇಖವಿದೆ. ಈತನ ವಿಚಾರ ನಮಗೆ ಅಪ್ರಸಕ್ತ.

(iii) ಅನುಪಮ ಕವಿ ಶ್ರೀವಿಜಯ: ಕಡಪ ಜಿಲ್ಲೆಯ ದಾನವುಲಪಾಡು ಎಂಬಲ್ಲಿ ದೊರೆತಿರುವ ಒಂದು ಶಾಸನದಲ್ಲಿ 'ಅನುಪಮ ಕವಿ', 'ಅಜಿವಿಂಗೋಜ' ಎಂಬ ವಿಶೇಷಣಗಳುಳ್ಳ ಶ್ರೀವಿಜಯನ ಉಲ್ಲೇಖವಿದೆ. ಶಾಸನ ಹುಟ್ಟಿದ ಕಾಲ ಅದರಲ್ಲಿ ನಿರ್ದಿಷ್ಟವಾಗಿಲ್ಲ. ಶಾಸನದ ಲಿಪಿಯ ಸ್ವರೂಪ, ಹಾಗೂ ಅದರಲ್ಲಿ ಉಕ್ತನಾದ ರಾಜನ ಹೆಸರು (ನರೇಂದ್ರದೇವ. ಇಂದ್ರ) ಮುಂತಾದ ಆಧಾರಗಳ ಮೇಲೆ ಈ ಶಾಸನ ರಾಷ್ಟ್ರಕೂಟರ 3ನೆಯ ಇಂದ್ರನ ಕಾಲಕ್ಕೆ (ಕ್ರಿ.ಶ. 915–917) ಸೇರಿದ್ದು ಎಂದು ಶಾಸನದ ಸಂಪಾದಕರು ಊಹಿಸಿದ್ದಾರೆ. ಶ್ರೀವಿಜಯನೇ ಕವಿರಾಜಮಾರ್ಗದ ಕರ್ತೃ ಎಂದು ಹೇಳುವ ಈ ವಿದ್ವಾಂಸರು ಅವನಿಗೂ, ಈ ಶಾಸನದ ಶ್ರೀವಿಜಯನಿಗೂ ಯಾವ ಸಂಬಂಧವೂ ಇಲ್ಲವೆಂದು ಖಡಾಖಂಡಿತವಾಗಿ ಹೇಳಿದ್ದಾರೆ. ಹಾಗಿದ್ದರೂ ಕವಿರಾಜಮಾರ್ಗದಲ್ಲಿ ವರ್ಣಿತನಾದ ನೃಪತುಂಗ

---

[8] ಕರ್ಣಾಟಕ ಕವಿಚರಿತೆ, ಸಂ. I. ಪು. 200.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಭಾಸದ ಶ್ರೀವಿಜಯನಿಗೂ ಈ ಶಾಸನೋಕ್ತ ಶ್ರೀವಿಜಯನಿಗೂ ಕೆಲವಂಶಗಳಲ್ಲಿ ಹೋಲಿಕೆ ಕಂಡುಬರುತ್ತದೆ. ನೃಪತುಂಗ ಸಭಾಸದ ಶ್ರೀವಿಜಯನು ನೃಪತುಂಗನ ಮಗ ಕೃಷ್ಣನ (ಕನ್ನರ) (ಕ್ರಿ.ಶ. 877–913) ಮತ್ತು ಇಂದ್ರರ ಕಾಲದಲ್ಲೂ ಅವರ ಆಶ್ರಿತನಾಗಿ ಇದ್ದನೆಂದೂ ಊಹಿಸಬಹುದು. ಶ್ರೀವಿಜಯನು ನೃಪತುಂಗನ ಆಶ್ರಯದಲ್ಲಿ 30–35ರ ಪ್ರಾಯದಲ್ಲಿ (ಸು. 860–70ರಲ್ಲಿ) ಕವಿರಾಜಮಾರ್ಗ ವನ್ನು ರಚಿಸಿ ಇಂದ್ರನ ಕಾಲದಲ್ಲಿ (ಜಿನಸೇನಾಚಾರ್ಯರಂತೆ 85ರ ವೃದ್ಧಾಪ್ಯದಲ್ಲಿ) ಮುಗಿಸಿರಬಹುದು. ಈ ಬಗೆಗೆ ನಿಶ್ಚಿತವಾಗಿ ಹೇಳುವುದು ಸಾಧ್ಯವಿಲ್ಲ.[9]

(iv) ಬಾದಾಮಿ ಚಾಲುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ಹುಟ್ಟಿದ ಲಕ್ಷ್ಮೇಶ್ವರನ ಶಾಸನದಲ್ಲಿ (ಕ್ರಿ.ಶ. 735) ಒಬ್ಬ 'ಶ್ರೀವಿಜಯದೇವ ಪಂಡಿತಾ ಚಾರ್ಯ'ರ ಉಲ್ಲೇಖವಿದೆ. "ಕವಿವಾದಿತ್ವಾದಿಯಾಗಿರುವ ಈ 'ಶ್ರೀವಿಜಯ ದೇವ' ಮತ್ತು ದುರ್ಗಸಿಂಹ ಹೇಳುವ 'ಶ್ರೀವಿಜಯರ್ ದೇವರ್' ಗಳಲ್ಲಿರುವ ನಾಮಸಾಮ್ಯ ಮತ್ತು ಕವಿತ್ವಗಳನ್ನು ನೆನೆದರೆ ಇಬ್ಬರೂ ಒಬ್ಬನೇ ಎಂಬ ಅನುಮಾನ ಹುಟ್ಟುತ್ತದೆ" ಎಂದು ಡಾ. ಎಂ. ಎಂ. ಕಲಬುರ್ಗಿ ಅವರು ಊಹಿಸಿ "ಇದಕ್ಕೆ ಇನ್ನೂ ಬಲವಾದ ಬೇರೆ ಆಧಾರಗಳು ಬೇಕು"[10] ಎಂದಿ ದ್ದಾರೆ. ಆದ್ದರಿಂದ ಈ ಶ್ರೀವಿಜಯನ ವಿಚಾರವನ್ನು ಕೈಬಿಡಬಹುದು.

(v) ನೆಲಮಂಗಲ ತಾಲ್ಲೂಕು ಮಣ್ಣೇಗ್ರಾಮದ ಒಂದು ತಾಮ್ರಶಾಸನ (ಕ್ರಿ.ಶ. 793) ಇನ್ನೊಂದು ತಾಮ್ರಶಾಸನ (ಕ್ರಿ.ಶ. 802)—ಈ ಎರಡೂ ಶಾಸನಗಳ ಕೆಲವು ಭಾಗಗಳನ್ನು ಉದ್ಧರಿಸಿ ಈ ಎರಡನೆಯ ಶಾಸನದ "ಶ್ರೀ ನಿರುಪಮದೇವ ಪ್ರಭೂತವರ್ಷ ಪ್ರಸಾದೋಪಲಬ್ಧ ಮಹಾಸಾಮನ್ತಾಧಿ ಪತ್ಯಾಲಂಕೃತೇನ.........ಶ್ರೀವಿಜಯರಾಜೇನ' ಎಂಬ ಮಾತಿನಂತೆ ಶ್ರೀವಿಜಯನು ನಿರುಪಮದೇವನ (ಮಗನಾದ) ಪ್ರಭೂತವರ್ಷ ಅಂದರೆ ರಾಷ್ಟ್ರಕೂಟ ಮೂರನೆಯ ಗೋವಿಂದನ ಸಾಮಂತ. ಈತನು ರಾಷ್ಟ್ರಕೂಟ ಮನೆತನದೊಂದಿಗೆ ಇಟ್ಟುಕೊಂಡ ನೇರಸಂಪರ್ಕ ಮತ್ತು ಮೂರನೆಯ ಗೋವಿಂದನ (ಬಹುಶಃ ನೃಪತುಂಗನ)

---

[9] Epigraphia Indica. Vol. X. pp. 147-152. (ಕಡಪಾ ಜಿಲ್ಲೆಯ ದಾನವುಲ ಪಾಡು ಎಂಬಲ್ಲಿನ ಈ ಶಾಸನದಲ್ಲಿ ಹೇಳಿರುವ ಶ್ರೀವಿಜಯನ ವಿಚಾರವಾಗಿ ಆರ್. ನರಸಿಂಹಾಚಾರ್ಯರು ಧಾರವಾಡದ 4ನೆಯ ಕ. ಸಾಹಿತ್ಯ ಸಮ್ಮೇಳನದ (1918) ಅಧ್ಯಕ್ಷ ಭಾಷಣದಲ್ಲಿಯೂ, ಎಚ್. ಕೃಷ್ಣ ಶಾಸ್ತ್ರಿಗಳು ಕೋಲಾರದ ಹತ್ತನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿಯೂ ಪ್ರಸ್ತಾಪ ಮಾಡಿದ್ದಾರೆ. ಕವಿರಾಜಮಾರ್ಗದ ಶ್ರೀವಿಜಯನಿಗೂ ಈ ಶಾಸನದ ಶ್ರೀವಿಜಯನಿಗೂ ಯಾವ ಸಂಬಂಧವೂ ಇಲ್ಲವೆಂದು ಇಬ್ಬರೂ ಅಭಿಪ್ರಾಯ ಪಟ್ಟಿದ್ದಾರೆ.)

[10] ಡಾ॥ ಎಂ. ಎಂ. ಕಲಬುರ್ಗಿ: 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ,' 1973: ಪು. 30-32 (S. I. I. XX, No. 7; E.C. IX, ನೆಲಮಂಗಲ, 60, 61, ಮಣ್ಣೇಗ್ರಾಮ.) ಅಲ್ಲದೆ "ಶ್ರೀವಿಜಯದೇವ ಎಂಬ ಹೆಸರು ಇಡಿಯಾಗಿ ಬಳಕೆಯಾದುದನ್ನು 11ನೆಯ ಶತಮಾನದ ಹುಮ್ಮಜದ ಹಲವು ಶಾಸನಗಳಲ್ಲಿಯೂ ಕಾಣಬಹುದು." (E. C. VIII, ನಗರ, 35, 36, 40).

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಕಾಲೀನತೆಗಳು ಇಲ್ಲಿ ಸಂಶೋಧಕರ ಗಮನ ಸೆಳೆವ ಸಂಗತಿಗಳಾಗಿವೆ. 'ಅಗ್ರಣೀ ರಸಿಕಾನಾಂ ಸ್ರಷ್ಟಾ ಕಾವ್ಯರಚನಾನಾಂ' 'ಸುರಮಂತ್ರೀವ ಶಾಸ್ತ್ರಾರ್ಥೇ' ಎಂಬ ವರ್ಣನೆಗಳಲ್ಲಿ ಶ್ರೀವಿಜಯನ ಕಾವ್ಯಮತಿ ಶಾಸ್ತ್ರಗತಿ ಎದ್ದುಕಾಣುತ್ತಿದೆ. ಮೇಲಾಗಿ ದುರ್ಗಸಿಂಹನು ತೋರುವ "ಶ್ರೀವಿಜಯರ್ ದೇವರ್' ಎಂಬ ಗೌರವ ಈತನಿಗೆ ಸಂಪೂರ್ಣ ಒಪ್ಪುತ್ತದೆ. ಆದಕ್ಕಾಗಿ ಈತನೇ ಕವಿಮಾರ್ಗದ ಶ್ರೀವಿಜಯನಾಗಿರ ಬಹುದೆಂದು ನಮ್ಮ ಎಣಿಕೆ. ಕವಿಮಾರ್ಗದ ಹಾಗೆ ಕವಿರಾಜಮಾರ್ಗದೊಂದಿಗೂ ಶ್ರೀವಿಜಯನೆಂಬ ಹೆಸರು ಹೆಣೆದು ನಿಂತಿದೆ. ಅದರ ಕೊನೆಯಲ್ಲಿ ಕರ್ತೃವನ್ನು ಕುರಿತು ಬರುವ 'ಪಾರ್ಥಿವ (ಕ್ಷತ್ರಿಯ) ಲೋಕಂ' 'ಅಸಹಾಯ ಸಾಹಸ 'ವಿನೋದಂ', 'ಜಯಾವತಾರಂ', 'ಪುರುಷವ್ರತನ್', ಎಂಬ ಹೊಗಳಿಕೆಗಳು ಈ ಶಾಸನೋಕ್ತ ಶ್ರೀವಿಜಯನನ್ನು ನೆನಪಿಗೆ ತರುತ್ತವೆ. ಆದಕ್ಕಾಗಿ ಇವನು ಕವಿ ಮಾರ್ಗದ ಶ್ರೀವಿಜಯನೂ ಹೌದು, ಕವಿರಾಜಮಾರ್ಗದ ಶ್ರೀವಿಜಯನೂ ಹೌದು ಎನಿಸುತ್ತದೆ. ಒಂದು ಸಮಯದಲ್ಲಿ ರಚಿಸಿದ ತನ್ನ ಕವಿಮಾರ್ಗವನ್ನು ಈತನು ಇನ್ನೊಂದು ಸಮಯದಲ್ಲಿ ಪರಿಷ್ಕಾರಗೊಳಿಸಿ ಕವಿರಾಜಮಾರ್ಗವನ್ನಾಗಿಸಿರ ಬಹುದು" ಎಂಬುದು ಡಾ. ಎಂ. ಎಂ. ಕಲಬುರ್ಗಿಯವರ ಸಂಭವನೀಯವಾದ ಊಹೆ.

ಒಬ್ಬ ಕವಿಗೆ ಸಂಬಂಧಪಟ್ಟಂತೆ ಒಂದೇ ಹೆಸರಿನ ವ್ಯಕ್ತಿಗಳು ಇಷ್ಟೊಂದು ವಿಪುಲ ಸಂಖ್ಯೆಯಲ್ಲಿ ವಿಚಾರಕ್ಕೆ ಬರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಲ್ಲ ವೆಂದೇ ಹೇಳಬೇಕು. ಈ ಶ್ರೀವಿಜಯ ಪರಂಪರೆಯಲ್ಲಿ ಕವಿರಾಜಮಾರ್ಗಕಾರನೂ ಒಬ್ಬ—ಇವರ ಪೈಕಿ ಒಬ್ಬ; ಇಲ್ಲ ಬೇರೊಬ್ಬ.

ಈ ಬಹುಸಂಖ್ಯಾತ ಶ್ರೀವಿಜಯರ ಪ್ರಸ್ತಾಪ ಮಾಡಿದ್ದರ ಉದ್ದೇಶ ಇಷ್ಟು: ಕವಿರಾಜಮಾರ್ಗ ಶ್ರೀವಿಜಯ ರಚಿಸಿದ್ದಿರಬಹುದು ಎಂದು ಮೊದಲಿಗೆ ಆರ್. ನರಸಿಂಹಾಚಾರ್ಯರು ಹೇಳಿದ ಮೇಲೆ ನೃಪತುಂಗನೇ ಗ್ರಂಥಕರ್ತ ಎಂಬ ಪ್ರಮೇಯ ವನ್ನು ಸ್ಥಾಪಿಸುವುದಕ್ಕಾಗಿ ಶ್ರೀ ನಾ. ಶ್ರೀ. ರಾಜಪುರೋಹಿತರೇ ಮೊದಲಾದ ವಿದ್ವಾಂಸರು 'ಶ್ರೀವಿಜಯ' ಎಂಬುದು ನೃಪತುಂಗನ ಬಿರುದುಗಳಲ್ಲಿ ಒಂದು ಎಂದು ವಾದಿಸತೊಡಗಿದರು. ಈಚೆಗೆ ಶ್ರೀ ಚಿಟಗುಪ್ಪಿಯವರು 'ಶ್ರೀವಿಜಯ' ಜಿನಸೇನಾಚಾರ್ಯರ ನಾಮಾಂತರ, ನೃಪತುಂಗನೂ ಆಚಾರ್ಯನಾಮವನ್ನು ಧರಿಸಿದನು ಎಂಬ ವಾದವನ್ನು ಮುಂದಿಟ್ಟಿರುವರು. ಶ್ರೀವಿಜಯನಾಮವುಳ್ಳ ಅನೇಕ ಜೈನ ವ್ಯಕ್ತಿಗಳು ಆಗಿಹೋಗಿರುವುದರಿಂದಲೂ ಕವಿರಾಜಮಾರ್ಗಕಾರನು ಜೈನನೆನ್ನುವುದಕ್ಕೆ ನಿರ್ವಿವಾದವಾದ ಗ್ರಂಥಸ್ಥ ಆಧಾರಗಳಿರುವುದರಿಂದಲೂ, ಶ್ರೀವಿಜಯನನ್ನು ಸ್ತುತಿಸಿರುವ ಕವಿಗಳೆಲ್ಲರೂ ಪ್ರಾಯಿಕವಾಗಿ ಜೈನ ಕವಿಗಳೇ ಆಗಿರುವುದರಿಂದಲೂ, ಕವಿರಾಜಮಾರ್ಗಕಾರನು 'ಶ್ರೀವಿಜಯ' ಎಂಬ ನಾಮಾಂತರವನ್ನು (ಬಿರುದನ್ನು) ಹೊಂದಿದ್ದ ವ್ಯಕ್ತಿ ಎಂದು ಸಾಧಿಸುವ ಪ್ರಯತ್ನ ಸಕಾರಣವಾಗಿಲ್ಲ. ಅನೇಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಿಜಯರಲ್ಲಿ ಕವಿರಾಜಮಾರ್ಗವನ್ನು ರಚಿಸಿದಾತನೂ ಒಬ್ಬ ಶ್ರೀವಿಜಯ. ಬಹುಶಃ ಅವನೇ ಚಂದ್ರಪ್ರಭ ಪುರಾಣವನ್ನೂ ರಘುವಂಶಪುರಾಣವನ್ನೂ ರಚಿಸಿರುವನು—ಎಂದು ಹೇಳಲು ಗ್ರಂಥಸ್ಥಪ್ರಮಾಣಗಳೂ ಬಾಹ್ಯಪ್ರಮಾಣಗಳೂ ಸಾಧಕಗಳಾಗಿವೆ.

ಕವಿರಾಜ ಮಾರ್ಗಕಾರ ಶ್ರೀವಿಜಯ

ಕವಿರಾಜಮಾರ್ಗ ಅಲಂಕಾರಶಾಸ್ತ್ರವನ್ನು ವಿವರಿಸುವ ಮೊದಲ ಕನ್ನಡ ಗ್ರಂಥ. ಇದಕ್ಕೆ ಮೊದಲು ಸಂಸ್ಕೃತದಲ್ಲಿ ಭಾಮಹ (ಕಾವ್ಯಾಲಂಕಾರ), ದಂಡಿ (ಕಾವ್ಯಾದರ್ಶ), ಉದ್ಭಟ (ಕಾವ್ಯಾಲಂಕಾರಸಾರ ಸಂಗ್ರಹ), ವಾಮನ (ಕಾವ್ಯಾಲಂಕಾರ ಸೂತ್ರ ವೃತ್ತಿ)—ಇವರ ಗ್ರಂಥಗಳು ಪ್ರಸಿದ್ಧವಾಗಿದ್ದುವು. ಕವಿರಾಜಮಾರ್ಗ ಮುಖ್ಯವಾಗಿ ದಂಡಿಯ ಕಾವ್ಯಾದರ್ಶವನ್ನೂ. ಕೆಲವೆಡೆಗಳಲ್ಲಿ ಭಾಮಹನ ಕಾವ್ಯಾಲಂಕಾರವನ್ನೂ ಅನುಸರಿಸಿ ರಚಿತವಾಗಿರುವ ಗ್ರಂಥ.

ಕವಿರಾಜಮಾರ್ಗವು ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದ ಅಮೋಘವರ್ಷ ನೃಪತುಂಗನ ಆಳ್ವಿಕೆಯಲ್ಲಿ (ಕ್ರಿ.ಶ. 814–877) ರಚಿತವಾದದ್ದು. ನೃಪತುಂಗನೇ ಇದರ ಕರ್ತೃ ಎಂಬ ತಿಳಿವಳಿಕೆ ಪ್ರಾಚೀನ ಕಾಲದಲ್ಲಿಯೇ ಇದ್ದಿತು. ಕನ್ನಡ ವ್ಯಾಕರಣ ವಿಚಾರವನ್ನು ಸಂಸ್ಕೃತದಲ್ಲಿ ಬರೆದಿರುವ ಭಟ್ಟಾಕಲಂಕನು (ಕ್ರಿ.ಶ. 1604) ತನ್ನ 'ಶಬ್ದಾನುಶಾಸನ'ದಲ್ಲಿ ದಕ್ಷಿಣೋತ್ತರ ಮಾರ್ಗಪ್ರಯೋಗ ವಿಚಾರವನ್ನು ಎತ್ತಿ ಇದರ ವಿವರಣೆಯನ್ನು ನೃಪತುಂಗಗ್ರಂಥದಲ್ಲಿ ನೋಡತಕ್ಕದ್ದು ಎಂದು ಹೇಳಿದ್ದಾನೆ. ಕವಿರಾಜಮಾರ್ಗದಲ್ಲಿ ದಕ್ಷಿಣೋತ್ತರ ಮಾರ್ಗವಿವೇಚನೆ ಇರುವುದರಿಂದ, ಭಟ್ಟಾಕಲಂಕನು ಕವಿರಾಜಮಾರ್ಗವನ್ನೇ ಕುರಿತಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ. ಈಚಿಗೆ ಪ್ರೊ॥ ಡಿ. ಕೆ. ಭೀಮಸೇನರಾಯರಿಗೆ ದೊರೆತ ಶಬ್ದಮಣಿದರ್ಪಣದ ಒಂದು ಹಸ್ತಪ್ರತಿಯಲ್ಲಿ ಅದರ ವ್ಯಾಖ್ಯಾನಕಾರನು ತನ್ನ ವೃತ್ತಿಯಲ್ಲಿ ಒಂದು ಕಡೆ ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಷಟ್‌ಪ್ರಾಸ ವಿಚಾರವನ್ನು ವಿವರಿಸಿರುವುದಾಗಿಯೂ, ಇನ್ನೊಂದು ಪದ್ಯದ ವೃತ್ತಿಯಲ್ಲಿ "ನೃಪತುಂಗದೇವನ ಮತದಿಂ ಪೇೞ್ವಿಂ" ಎಂದಿರುವುದಾಗಿಯೂ, ಮತ್ತೊಂದು ಪದ್ಯದ ಅಡಿಯಲ್ಲಿ "ಶ್ರೀವಿಜಯನ ಪ್ರಯೋಗ" ಎಂದಿರುವುದಾಗಿಯೂ ತಿಳಿಸಿ, "ಶ್ರೀವಿಜಯನೇ ನೃಪತುಂಗದೇವನೆಂಬುದು ಈ ವ್ಯಾಖ್ಯಾನಕಾರನ ಬರವಣಿಗೆಯಿಂದ ಸ್ಪಷ್ಟವಾಗಿದೆ" ಎಂದು[11] ಶ್ರೀ ರಾಜಪುರೋಹಿತರ ತೀರ್ಮಾನಕ್ಕೆ ಬೆಂಬಲ ಕೊಟ್ಟಿದ್ದಾರೆ. ಭಟ್ಟಾಕಳಂಕನ ಪ್ರಮಾಣ ಗ್ರಂಥಕರ್ತೃತ್ವವನ್ನು ನೃಪತುಂಗನಿಗೆ ಆರೋಪಿಸಲು ಅಷ್ಟು

[11] 'ಶಬ್ದಮಣಿದರ್ಪಣದ ಪಾಠಾಂತರಗಳು'—ಪ್ರೊ॥ ಡಿ. ಕೆ. ಭೀಮಸೇನರಾವ್ (1951). ಪು. 37–44.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಬಲವಾಗಿಲ್ಲ. ಕವಿರಾಜಮಾರ್ಗದ ಪ್ರತಿಪರಿಚ್ಛೇದಾಂತ ಗದ್ಯದಲ್ಲಿ "ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್" ಎಂದಿರುವುದರಿಂದಲೂ, ಗ್ರಂಥದಲ್ಲಿ ಮೇಲಿಂದ ಮೇಲೆ ನೃಪತುಂಗನ ಹೆಸರೂ ಆತನ ಬಿರುದುಗಳೂ ತಲೆಯ ಮೇಲೆ ಹೊಡೆದಂತೆ ಉಕ್ತವಾಗಿರುವುದರಿಂದಲೂ, ಕವಿರಾಜಮಾರ್ಗವು ನೃಪತುಂಗಕೃತ ಎಂಬ ಪ್ರತೀತಿ ವಿದ್ವತ್ಪ್ರಪಂಚದಲ್ಲಿ ಬಲವಾಗಿ ಬೇರೂರಿದ್ದಿರಬೇಕು. ಈ ಪ್ರತೀತಿಯ ಪ್ರಭಾವದಿಂದಾಗಿ, ಗ್ರಂಥಕರ್ತೃತ್ವ ವಿಚಾರದಲ್ಲಿ ತಲೆಕೆಡಿಸಿಕೊಳ್ಳದ ಭಟ್ಟಾಕಲಂಕನು ರೂಢಿಬಲದಿಂದ ಕವಿರಾಜಮಾರ್ಗವನ್ನು ನೃಪತುಂಗಗ್ರಂಥ ಎಂದು ತಿಳಿದಿದ್ದರೆ ಆಶ್ಚರ್ಯವಿಲ್ಲ. ಅಲ್ಲದೆ, ಶಬ್ದಾನುಶಾಸನದ ಸೂತ್ರಕಾರನೇ ಬೇರೆ, ವೃತ್ತಿ–ವ್ಯಾಖ್ಯಾನ ಕಾರನೇ ಬೇರೆ ಎಂಬ ಅಭಿಪ್ರಾಯವೂ ಇದೆ.[12] ವ್ಯಾಖ್ಯಾನದಲ್ಲಿ ಬರುವ ನೃಪ ತುಂಗನಿರ್ದೇಶ ಇನ್ನೂ ಅರ್ವಾಚೀನವೆನಿಸಿ, ಈ ಪ್ರಮಾಣದ ವಿಶ್ವಾಸಾರ್ಹತೆ ಇನ್ನೂ ಕಡಮೆಯಾಗುತ್ತದೆ. ಶಬ್ದಮಣಿದರ್ಪಣದ ವ್ಯಾಖ್ಯಾನಕಾರನ ಉಲ್ಲೇಖ ಗಳನ್ನು ಭೀಮಸೇನರಾಯರು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ; ಆದ್ದರಿಂದ, ಅವರ ತೀರ್ಮಾನವೂ ತಪ್ಪು. ಷಟ್ಪ್ರಾಸ ವಿಚಾರವನ್ನು ಪ್ರಸ್ತಾಪಿಸುವಾಗ ವ್ಯಾಖ್ಯಾನ ಕಾರನು "ನೃಪತುಂಗದೇವನ ಮತದಿಂ ಪೇೞ್ವಂ" ಎಂದು ಸರಿಯಾಗಿಯೇ ಹೇಳಿ ದ್ದಾನೆ. ಕಾರಣ, ಕವಿರಾಜಮಾರ್ಗಕಾರನೇ ಪ್ರಾಸಪ್ರಕರಣಾರಂಭದಲ್ಲಿ "ಕೃತಕೃತ್ಯ ಮಲ್ಲವಲ್ಲಭಮತದಿಂದದಱ ಪ್ರಪಂಚಮೀತೆಱನಕ್ಕುಂ" ಎಂದು ಹೇಳಿ, ಪ್ರಕರಣಾಂತ್ಯ ದಲ್ಲಿ "ಪ್ರಾಸಾನುಪ್ರಾಸಾಂತ ಪ್ರಾಸಂಗಳ್ ಮೂಱುಮತಿಶಯಂಗಳ್, ಪ್ರಾಸಾ ಭಾಸಂಗಳುೞಿದ ಮೂಱುಂ ಭಾಸುರ ನೃಪತುಂಗದೇವ ವಿದಿತ ಕ್ರಮದಿಂ" ಎಂದು ತಿಳಿಸಿದ್ದಾನೆ. ಪ್ರಾಸಲಕ್ಷಣ ನೃಪತುಂಗದೇವ ಮತಕ್ಕೆ ಅನುಸಾರಿಯಾದದ್ದು ಎಂಬ ಸೂಚನೆ ಗ್ರಂಥದಲ್ಲಿಯೇ ಇದೆ. ಶಬ್ದಮಣಿದರ್ಪಣದ ವ್ಯಾಖ್ಯಾನಕಾರನು ಭೀಮಸೇನರಾಯರು ಹೇಳುವಂತೆ, ಱಟಾಕ್ಷರ ಪ್ರಾಸಕ್ಕೆ ಕವಿರಾಜಮಾರ್ಗದ ಪದ್ಯ ವನ್ನು (ii-5) ಉದಾಹರಿಸಿ, ಅದರ ಕೆಳಗೆ 'ಶ್ರೀವಿಜಯನ ಪ್ರಯೋಗ' ಎಂದಿರು ವುದೂ ಸಮಂಜಸವಾಗಿಯೇ ಇದೆ. ಶ್ರೀವಿಜಯನ 'ಸುಮಾರ್ಗ'ವನ್ನು ಕೇಳಿ ರಾಜನು ಅಂಗೀಕರಿಸಿದ್ದಾನೆ ಎಂಬುದನ್ನು ಬಲ್ಲ ವ್ಯಾಖ್ಯಾನಕಾರನು ಕವಿರಾಜಮಾರ್ಗದ ಒಂದು ಪದ್ಯವನ್ನು ಉದ್ಧರಿಸಿದಾಗ, ಆ ಪದ್ಯದ ಮೇಲೆ 'ನೃಪತುಂಗದೇವಮತ'ದ ಗಾಳಿಯ ಸೋಂಕೂ ಇಲ್ಲದಿರುವಾಗ, ಅದನ್ನು 'ಶ್ರೀವಿಜಯ ಪ್ರಯೋಗ' ಎಂದು ಗುರಿಯಿಟ್ಟು ಹೇಳಬೇಕಾದರೆ ಇಡಿಯ ಕೃತಿ ಶ್ರೀವಿಜಯಕೃತ ಎಂಬ ಅರಿವು ಈ ವ್ಯಾಖ್ಯಾನಕಾರನಿಗೆ ನಿಚ್ಚಳವಾಗಿದ್ದಿತು ಎಂಬುದರಲ್ಲಿ ಸಂದೇಹವಿಲ್ಲ. ಭೀಮಸೇನರಾಯರು ಒದಗಿಸಿರುವ ಈ ಬಾಹ್ಯಪ್ರಮಾಣ

---

12 'ಶಬ್ದಾನುಶಾಸನ ತತ್ತ್ವಾಲೋಕ'—ದಿ॥ ಪಂಡಿತ ಕಾನಕಾನಹಳ್ಳಿ ವರದಾಚಾರ್ಯರು (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಅಕ್ಟೋಬರ್ 1916).

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಿಜಯ ಪರವಾಗಿಯೇ ಇದೆ. ಸದ್ಯದಮಟ್ಟಿಗೆ, ನೃಪತುಂಗ ಕವಿರಾಜಮಾರ್ಗ ಕರ್ತೃ ಎಂದು ಸಾಧಿಸಲು ಬೇರೆಯ ಬಾಹ್ಯಪ್ರಮಾಣ ಯಾವುದೂ ದೊರೆತಿಲ್ಲ.

ಕೃತಿ–ಕರ್ತೃಗಳ ಹೆಸರುಗಳನ್ನು ಒಂದಿಗೆಯೆ ಹೇಳುವುದರಿಂದ ಬಾಹ್ಯ ಪ್ರಮಾಣಗಳಲ್ಲಿ ದುರ್ಗಸಿಂಹನ ಹೇಳಿಕೆ ಬಹು ಮುಖ್ಯವಾದುದು. ಇದನ್ನು ಈ ಹಿಂದೆಯೇ ಗಮನಿಸಿದೆ. ಇದರಲ್ಲಿ ಹುಟ್ಟಿಕೊಳ್ಳುವ ಒಂದು ತೊಡಕಿಗೆ ಪರಿಹಾರ ವನ್ನು ಹೇಳಬೇಕಾಗಿದೆ. ದುರ್ಗಸಿಂಹನು ಗ್ರಂಥನಾಮವನ್ನು 'ಕವಿರಾಜಮಾರ್ಗ' ಎಂದು ಹೇಳದೆ, 'ಕವಿಮಾರ್ಗ' ಎಂದೇಕೆ ಹೇಳಿದನು? ಇದೇ ತೊಡಕಿನ ಪ್ರಶ್ನೆ. ಇದಕ್ಕೆ ಪರಿಹಾರಕ ಉತ್ತರಗಳೂ ಹಲವು ಮುಂದೆ ಬಂದಿವೆ. (i) ಕವಿರಾಜ ಮಾರ್ಗ ಎಂಬ ದೀರ್ಘಪದ ಕಂದಪದ್ಯದ ಛಂದೋರಚನೆಗೆ ಒದಗಿ ಬರಲಿಲ್ಲ ವಾದ್ದರಿಂದ, ಅದನ್ನು ಸಂಕ್ಷೇಪಗೊಳಿಸಿ ಉಪಯೋಗಿಸಿದನು ಎಂಬುದು ಯಾರಿ ಗಾದರೂ ಹೊಳೆಯುವ ಒಂದು ಪರಿಹಾರ. ದುರ್ಗಸಿಂಹನಂತಹ ಸಮರ್ಥ ಪದ್ಯ ಕಾರನಿಗೆ ಒಂದು ದೀರ್ಘಪದವನ್ನು ಪದ್ಯದಲ್ಲಿ ಅಳವಡಿಸುವುದು ಕಷ್ಟವಾಯಿ ತೆನ್ನುವುದು ನಂಬಲಾಗದ ಮಾತು ಎಂಬ ಆಕ್ಷೇಪವೂ ಇದೆ. ಈ ಬಗೆಗೆ 'ಇದು ಹೀಗೆಯೇ' ಎಂದು ಹೇಳುವುದು ಕಷ್ಟ. (ii) ಕವಿರಾಜಮಾರ್ಗದ ಸಂಪಾದಕ ರಾದ ಕೆ. ಬಿ. ಪಾಠಕರು ಗ್ರಂಥಕಾರನು ನೃಪತುಂಗ ಎಂದು ಮೊತ್ತಮೊದಲಿಗೆ (1898) ತಮ್ಮ ಮುನ್ನುಡಿಯಲ್ಲಿ ಪ್ರತಿಪಾದಿಸಿದ್ದರು. ಡಾ. ಜೆ. ಎಫ್. ಫ್ಲೀಟ್ ಅವರು ಇವರ ವಾದವನ್ನು ಅಲ್ಲಗಳೆದು, 'ಕವಿರಾಜಮಾರ್ಗದ ಕರ್ತೃ ಕವೀಶ್ವರ' ಎಂದು ಹೊಸ ವಾದವನ್ನು ಮುಂದಿಟ್ಟರು. ಫ್ಲೀಟರು ತಮ್ಮ ಪಾಂಡಿತ್ಯವನ್ನೆಲ್ಲ ವಿನಿಯೋಗಿಸಿ, ನೃಪತುಂಗನು ಗ್ರಂಥಕಾರನಲ್ಲ ಎಂದು ಸಾಧಿಸುವುದರಲ್ಲಿ ತಕ್ಕ ಮಟ್ಟಿನ ಯಶಸ್ಸನ್ನು ಪಡೆದಿದ್ದರೂ ಕವೀಶ್ವರನೆಂಬುವನು ಕರ್ತೃ ಎಂದು ಸಮರ್ಥಿಸಲು ಪ್ರಬಲವಾದ ಪ್ರಮಾಣಗಳು ಅವರ ಕಡೆಗಿಲ್ಲದಿರುವುದರಿಂದ, ಅವರ ವಾದವನ್ನು ಇಲ್ಲಿ ನಿರೂಪಿಸುವ ಅಗತ್ಯವಿಲ್ಲ. ಕವಿರಾಜಮಾರ್ಗವನ್ನು (1930 ರಲ್ಲಿ) ಎರಡನೆಯ ಬಾರಿಗೆ ಪರಿಷ್ಕರಣಮಾಡಿ ಮದರಾಸು ವಿಶ್ವವಿದ್ಯಾನಿಲಯದ ಪರವಾಗಿ ಹೊರ ತಂದ ಶ್ರೀ ಎ. ವೆಂಕಟರಾವ್ ಮತ್ತು ಪಂಡಿತ ಹೆಚ್. ಶೇಷಯ್ಯಂಗಾರ್ ಅವರು ಗಳು ಫ್ಲೀಟರ ಸೂಚನೆಯನ್ನು ಹಿಡಿದು ತಮ್ಮದೇ ಆದ ಇನ್ನೊಂದು ವಾದವನ್ನು ಮುಂದಿಟ್ಟರು; ಇದರಲ್ಲಿ ಮೇಲೆ ಹೇಳಿದ, ತೊಡಕಿಗೆ ಒಂದು ಬಗೆಯ ಪರಿಹಾರವಿದೆ.[13] ಅದನ್ನು ಸಾರಾಂಶವಾಗಿ ಹೀಗೆ ಹೇಳಬಹುದು:—

> ನೃಪತುಂಗನು ಈ ಗ್ರಂಥದ ಕರ್ತೃವಲ್ಲ. ದುರ್ಗಸಿಂಹನ ಹೇಳಿಕೆಯಂತೆ, ಶ್ರೀವಿಜಯನು 'ಕವಿಮಾರ್ಗದ ಕರ್ತೃ. ಕವಿರಾಜಮಾರ್ಗದಲ್ಲಿ ಪದ್ಯಕವಿಗಳ ಗುಂಪಿನಲ್ಲಿ ಹೇಳಿರುವ 'ಪರಮ ಶ್ರೀವಿಜಯ'ನೇ ಈತ. ಪರಿಚ್ಛೇದಾಂತ ಪದ್ಯಗಳಲ್ಲಿಯೂ, 'ಶ್ರೀವಿಜಯನಿಂದ ಉಂಟಾದದ್ದು,

---

13 ಕವಿರಾಜಮಾರ್ಗ, ಮದರಾಸು ವಿಶ್ವವಿದ್ಯಾನಿಲಯದ ಪರಿಷ್ಕೃತ ಮುದ್ರಣ (1930); ಪೀಠಿಕೆ, ಪು. iii.

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಟ್ಟಿದ್ದು' ಎಂಬ ಅರ್ಥ ಕೊಡುವ ಮಾತುಗಳಿವೆ. ('ಶ್ರೀವಿಜಯ ಪ್ರಭೂತಂ', ಇತ್ಯಾದಿ) "ಕವೀಶ್ವರನೆಂಬ ಬಿರುದುಳ್ಳ ಒಬ್ಬ ಕವಿ ಶ್ರೀವಿಜಯಕೃತವಾದ ಈ ಕವಿಮಾರ್ಗವನ್ನೇ ತೆಗೆದು ಕೊಂಡು ಕೆಲವೆಡೆಗಳಲ್ಲಿ ಮಾರ್ಪಡಿಸಿ,...ಹೊಸದಾಗಿ ಕೆಲವು ವಿಷಯಗಳನ್ನು ಸೇರಿಸಿ, 'ಕವಿರಾಜ ಮಾರ್ಗ'ವೆಂಬ ಹೆಸರಿನಿಂದ ಈ ಗ್ರಂಥವನ್ನು ಬರೆದು. ತನ್ನ ಆಶ್ರಯದಾತ...ಅಮೋಘವರ್ಷ ನೆಂಬ ರಾಷ್ಟ್ರಕೂಟ ಸಾರ್ವಭೌಮನಿಂದ ವಿಶೇಷ ಪ್ರಯೋಜನವನ್ನು ಹೊಂದಿ. ನೃಪತುಂಗನೇ ಗ್ರಂಥವನ್ನು ಬರೆದನೆಂಬ ಪ್ರವಾದವು ಬರಬೇಕೆಂದು ತನ್ನ ಹೆಸರನ್ನು ಎಲ್ಲಿಯೂ ಸ್ಪಷ್ಟವಾಗಿ ಹೇಳದೆ. ಸೂಕ್ಷ್ಮವಿಚಾರಿಗಳಿಗೆ ಮಾತ್ರ ತಿಳಿಯುವಂತೆ. ಅಲ್ಲಲ್ಲಿ ಈ ವಿಷಯವನ್ನು ಸೂಚಿಸಿರುವನೆಂದು ಊಹಿಸು ವುದಕ್ಕೆ ಕಾರಣಗಳಿವೆ."

ಕವಿರಾಜಮಾರ್ಗದ ಕರ್ತೃ 'ಕವೀಶ್ವರ' ಎನ್ನುವುದಕ್ಕೆ ಪ್ರಬಲವಾದ ಬಾಹ್ಯ ಪ್ರಮಾಣಗಳು ಯಾವುವೂ ಇಲ್ಲ. ಕವಿರಾಜಮಾರ್ಗದಲ್ಲಿ ವಿಶೇಷವಾಗಿಯೂ. ತದನಂತರದ ಕಾವ್ಯಗಳಲ್ಲಿಯೂ 'ಕವಿಶ್ರೇಷ್ಠ' ಎಂಬ ಅರ್ಥದಲ್ಲಿ ಕವೀಶ್ವರ. ಕವಿ ವೃಷಭ, ಕವಿಪುಂಗವ ಎಂಬ ಪರ್ಯಾಯಪದಗಳು ಕವಿ ಸಾಮಾನ್ಯವಾಚಕವಾಗಿ ಪ್ರಯೋಗವಾಗಿರುವುದುಂಟು. 'ಶ್ರೀವಿಜಯ' ಎಂಬ ಹೆಸರಿನಂತೆ 'ಕವೀಶ್ವರ' ಎಂಬ ಹೆಸರು ವ್ಯಕ್ತಿಯ ಅಂಕಿತವಾಗಿ ಶಾಸನಗಳಲ್ಲಿಯಾಗಲಿ, ಕಾವ್ಯಗಳಲ್ಲಿಯಾಗಲಿ ಉಕ್ತವಾಗಿಲ್ಲ. ಕವಿರಾಜಮಾರ್ಗದ "ಪರಮ ಶ್ರೀವಿಜಯ ಕವೀಶ್ವರ" (i–32) ಎಂಬ ಉಕ್ತಿಯನ್ನೂ. "ಅವಜಿಂ ಸಮೆದೊಂದು ಕಾವ್ಯದಿಂ ಶ್ರೀವಿಜಯ ಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ" (ii–155) ಎಂಬ ಉಕ್ತಿ ಯನ್ನೂ ಮುಖ್ಯವಾಗಿ ಅವಲಂಬಿಸಿ. ಶ್ರೀವಿಜಯನೆಂಬ ಪೂರ್ವಕವಿಯಿಂದ ರಚಿತ ವಾದ 'ಕವಿಮಾರ್ಗ'ವನ್ನು (ಶ್ರೀವಿಜಯ ಪ್ರಭೂತವಾದದ್ದನ್ನು) ಕವೀಶ್ವರ ನೆಂಬವನು ತನ್ನದಾಗಿ ಮಾಡಿಕೊಂಡನು ('ತನಗಾಗಿಸಿದೊಂ') (ಎಂದರೆ, ಕವಿ ರಾಜಮಾರ್ಗವಾಗಿ ಪರಿವರ್ತಿಸಿಕೊಂಡನು) ಎಂದು ಈ ಕವೀಶ್ವರ ಪಕ್ಷದವರು ವಾದಿಸಿದ್ದಾರೆ. ಪೂರ್ವಕವಿಗಳ ಗುಂಪಿನಲ್ಲಿ ಕವೀಶ್ವರನು ತನ್ನ ಹೆಸರನ್ನೇ ಸೇರಿಸಿ ಕೊಂಡಿರುವುದು ಯುಕ್ತವಲ್ಲ ಎಂಬ ಆಕ್ಷೇಪಕ್ಕೆ ಅವರು ಕೊಡುವ ಸಮಾಧಾನ ವನ್ನು ಶ್ರೀವಿಜಯನ ಪರವಾಗಿಯೇ ಉಪಯೋಗಿಸಿಕೊಳ್ಳಬಹುದು. 'ಕವೀಶ್ವರ' ಎಂಬುದು ಶ್ರೀವಿಜಯನ ವಿಶೇಷಣ ಎಂದು ಗ್ರಹಿಸಬೇಕು. ಈ 'ಪರಮ ಶ್ರೀವಿಜಯ ಕವೀಶ್ವರ' ಕವಿರಾಜಮಾರ್ಗದ ಕರ್ತೃವಾಗಿರಬಹುದು; ಅಥವಾ ಒಬ್ಬ ಪೂರ್ವಕವಿಯೇ ಆಗಿರಬಹುದು. ಶ್ರೀವಿಜಯ ಎಂಬ ಹೆಸರಿನವರು ಅನೇಕರಿರುವು ದನ್ನು ಆಗಲೇ ಗಮನಿಸಿದೆ. ಎರಡನೆಯ ಉಕ್ತಿಗೆ. "ಶ್ರೀವಿಜಯಕೃತವಾದ ಕವಿರಾಜಮಾರ್ಗದಿಂದ ಒದಗುವ ಮುದವನ್ನು ಯಾವನು ತನಗೆ ಆಗಿಸಿಕೊಳ್ಳು ವನೋ ಅವನೇ ಕವಿಶ್ರೇಷ್ಠ" ಎಂದು ಅರ್ಥ ಮಾಡಬೇಕು. ಒಟ್ಟಿನಮೇಲೆ, ಕವೀಶ್ವರನೆಂಬವನು ಕವಿರಾಜಮಾರ್ಗದ ಕರ್ತೃವಲ್ಲ.

ಇನ್ನು 'ಕವಿರಾಜಮಾರ್ಗದ ಕರ್ತೃ ನೃಪತುಂಗ.' ಎಂಬ ವಾದವನ್ನು ಪರಿಶೀಲಿಸಬಹುದು. ಈ ವಾದವನ್ನು ಎತ್ತಿ ಹಿಡಿಯುವವರು ಈಗಲೂ ಇದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ವಾದದ ಪುರಸ್ಕರ್ತರಲ್ಲಿ ಪ್ರಮುಖರಾದವರು, ಶ್ರೀ ಕೆ. ಬಿ. ಪಾಠಕ್, ನಾ. ಶ್ರೀ. ರಾಜಪುರೋಹಿತ, ಡಿ. ಕೆ. ಭೀಮಸೇನರಾವ್ ಮುಂತಾದವರು; ಈಚೆಗೆ ಡಾ. ಎಸ್. ಸಿ. ನಂದಿಮಠ, ಡಾ॥ ಕೆ. ಕೃಷ್ಣಮೂರ್ತಿ, ಮುಂತಾದವರು.

ನೃಪತುಂಗ ಪಕ್ಷದವರಿಗೆ ಬಾಹ್ಯಪ್ರಮಾಣಗಳಿಗಿಂತ ಗ್ರಂಥದಲ್ಲಿನ ಹಲ ಕೆಲವು ಮಾತುಗಳು ಹೆಚ್ಚು ಬೆಂಬಲವಾಗಿರುವಂತೆ ತೋರುತ್ತವೆ. ಅವುಗಳಲ್ಲಿ, ಕೆಲವನ್ನು ಸಂಕ್ಷೇಪವಾಗಿ ಪರಿಶೀಲಿಸಬಹುದು.

(1) ಪ್ರತಿ ಪರಿಚ್ಛೇದಾಂತ ಗದ್ಯದಲ್ಲಿಯೂ—"ಶ್ರೀ ಪರಮ ಶ್ರೀ ನೃಪ ತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್" ಎಂದಿದೆ. ನೃಪತುಂಗನೇ ಕರ್ತೃವಾಗಿದ್ದ ಪಕ್ಷದಲ್ಲಿ, 'ನೃಪತುಂಗದೇವ ವಿರಚಿತಮಪ್ಪ' ಎಂದು ನೇರವಾಗಿ ಹೇಳದೆ 'ಅನುಮತಮಪ್ಪ' ಎಂದು ಹೇಳಿರುವುದರಿಂದ, ಇದರ ಕರ್ತೃ ಬೇರೆಯ ವ್ಯಕ್ತಿ ಎಂಬ ಸಂದೇಹವು ಹುಟ್ಟುತ್ತದೆ. ಆರ್. ನರಸಿಂಹಾಚಾರ್ಯರು ಈ ಸಂದೇಹ ವನ್ನು ವ್ಯಕ್ತಪಡಿಸಿದ್ದಾರೆ. ಕವಿರಾಜಮಾರ್ಗ ನೃಪತುಂಗಕೃತ ಎಂಬ ಪ್ರತೀತಿಗೆ ಈ ಗದ್ಯ ಭಾಗ ಬಲವಾದ ಆಧಾರವಾಗಿ ನಿಂತಿದೆ. 'ಅನುಮತ' ಶಬ್ದಕ್ಕೆ 'ವಿರಚಿತ' ಎಂಬ ಅರ್ಥವನ್ನು ಕಲ್ಪಿಸಲು ನೃಪತುಂಗಾಭಿಮಾನ ಹೊರತು ಬೇರೆಯ ಕಾರಣ ಏನೂ ಇಲ್ಲ; ಈ ವಿಪರೀತಾರ್ಥವನ್ನು ಸಾಧಿಸಲು ನಿಘಂಟು ಶಬ್ದಶಾಸ್ತ್ರ ಮುಂತಾದ ಯಾವ ಶಾಸ್ತ್ರಗಳ ಬೆಂಬಲವೂ ಇಲ್ಲ. ಗ್ರಂಥದಲ್ಲಿ ಹಲವು ಕಡೆ ನೃಪತುಂಗದೇವ ಮತ ಕ್ರಮ ಮಾರ್ಗ ಎಂಬ ಮಾತುಗಳು ಮೇಲಿಂದ ಮೇಲೆ ಪ್ರಯುಕ್ತವಾಗಿವೆ. "ವ್ಯಾಕರಣ ಕಾವ್ಯ ನಾಟಕ, ಲೋಕ ಕಳಾ ಸಮಯಮಾದಳಂಕೃತಿಗಳೊಳಂ॥ ವ್ಯಾಕುಳನಲ್ಲದನದೇಕೆ ವಿವೇಕ ಬೃಹಸ್ಪತಿಯ ನಗರಮಂ ಪುಗುತರ್ಪಂ॥" (i–6) ಎಂಬ ಪದ್ಯದಿಂದ, ನೃಪತುಂಗನ ರಾಜಧಾನಿಗೆ ವಿದ್ವಾಂಸರು ಹೇಗೆ ಆಕರ್ಷಿತ ರಾಗುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅವನ ವಿದ್ವತ್ಸಭೆಯಲ್ಲಿ ಎಲ್ಲ ಧರ್ಮಗಳ ವಿದ್ವಾಂಸರಿಗೂ ಕವಿಗಳಿಗೂ ಆಶ್ರಯವಿದ್ದಿತು. ಆ ಸಭೆಯಲ್ಲಿ ಧರ್ಮ ವಿಚಾರಗಳ ಬಗ್ಗೆಯೂ ವ್ಯಾಕರಣ ಕಾವ್ಯಶಾಸ್ತ್ರ ಮುಂತಾದುವುಗಳ ಬಗ್ಗೆಯೂ ವ್ಯಾಖ್ಯಾನಗಳೂ ಚರ್ಚೆಗಳೂ ನಡೆಯುತ್ತಿದ್ದಿರಬೇಕು. ಸ್ವತಃ ವಿದ್ವಾಂಸನೂ ಸಾಹಿತ್ಯಶಾಸ್ತ್ರ ಪಾರಂಗತನೂ ಆದ ನೃಪತುಂಗನು ಚರ್ಚಾಸ್ಪದ ವಿಷಯಗಳನ್ನು ನಿರ್ಣಯಿಸಿ, ತನ್ನ ಅಭಿಮತವನ್ನು ತಿಳಿಸಿ ನಿರ್ಣಯಗಳಿಗೆ ರಾಜ ಮುದ್ರೆಯೊತ್ತುತ್ತಿದ್ದನು. ಕವಿರಾಜಮಾರ್ಗ ಇಂಥ ಸನ್ನಿವೇಶವನ್ನು ನಿಚ್ಚಳವಾಗಿ ಪ್ರತಿಬಿಂಬಿಸಿದೆ. ದಂಡಿಭಾಮಹರನ್ನು ಅನುಸರಿಸಿರುವ ಕವಿರಾಜಮಾರ್ಗವು ಎಲ್ಲೆಲ್ಲಿ ಸ್ವತಂತ್ರ ವಿಚಾರಗಳನ್ನು ಮಂಡಿಸಿದೆಯೋ ಅಲ್ಲೆಲ್ಲ ನೃಪತುಂಗದೇವಮತ, ಮಾರ್ಗ, ಮುಂತಾದ ಪದಗಳು ಪ್ರಯೋಗವಾಗಿವೆ; ಪರಿಚ್ಛೇದಗಳ ಕೊನೆಯಲ್ಲಿ ನೃಪತುಂಗನ 'ಅನುಮತ' ಅಥವಾ ಅನುಮೋದನೆ ವ್ಯಕ್ತಪಟ್ಟಿದೆ. ನೃಪತುಂಗನ ಆಶ್ರಿತನಾದ ಶಾಕಟಾಯನನು ತನ್ನ ವ್ಯಾಕರಣದ ವೃತ್ತಿಗೆ 'ಅಮೋಘವೃತ್ತಿ'

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದೇ ಹೆಸರಿಸಿದ್ದಾನೆ. ಇಷ್ಟರಿಂದ ಆ ವೃತ್ತಿ ಅಮೋಘವರ್ಷರಚಿತ ಎಂದು ಅರ್ಥ ಮಾಡಬಹುದೇ ? ಹೀಗೆ, ಪರಿಚ್ಛೇದಾಂತ ಗದ್ಯಖಂಡಗಳಾಗಲಿ, ಗ್ರಂಥದಲ್ಲಿ ಅಲ್ಲಲ್ಲಿ ಕಾಣಸಿಕ್ಕುವ ನೃಪತುಂಗಪರವಾದ ಉಕ್ತಿಗಳಾಗಲಿ* ನೃಪತುಂಗನೇ ಗ್ರಂಥ ಕಾರನೆಂದು ನಿರ್ಣಯಿಸಲು ಎಷ್ಟು ಮಾತ್ರಕ್ಕೂ ಸಹಾಯಕವಾಗಲಾರವು.

(2) ಈ ನೃಪತುಂಗಪರವಾದ ಉಕ್ತಿಗಳೆಲ್ಲವೂ ಪ್ರಥಮ ಪುರುಷದಲ್ಲಿರುವ ಅಂಶವನ್ನು ನೃಪತುಂಗಪಕ್ಷದವರೂ ವಿರುದ್ಧಪಕ್ಷದವರೂ ತಮ್ಮ ತಮ್ಮ ವಾದ ಗಳಿಗೆ ಅನುಕೂಲವಾಗುವಂತೆ ತಿರುಗಿಸಿಕೊಳ್ಳಲು ಅವಕಾಶವಿದೆ. ಆದರೆ, ಒಂದೇ ಪದ್ಯದಲ್ಲಿ ಒಂದೇ ಸಂದರ್ಭದಲ್ಲಿ ಪ್ರಥಮ ಪುರುಷ ಉತ್ತಮ ಪುರುಷಗಳ ಪ್ರಯೋಗಗಳು ಒಂದಿಗೆಯೇ ಬಂದಿರುವುದು ಗಮನಾರ್ಹ : ಉದಾ.. "ಅತಿಶಯ ಧವಳ ಧರಾಧಿಪ ಮತದಿಂದಂ... ತೋರ್ಪೆಂ" (ii–11), "ಸವಿಶೇಷಗುಣ ಮನತಿಶಯಧವಳೋಕ್ತಿಕ್ರಮದಿನಜಿಪುವೆಂ ತದ್ಭವದೊಳ್" (ii–55), "ತದನು ಮತ† ಲಕ್ಷ್ಯಲಕ್ಷಣ ನಿದರ್ಶನಂಗಳನನುಕ್ರಮೋಕ್ತಿಯೆ ಪೇಟ್ವೆಂ" (iii–5)—ಈ ಉಕ್ತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ನೃಪತುಂಗನೇ ಬೇರೆ, ಆತನ ಅನುಮತ ದಂತೆ ಕೆಲವು ಶಾಸ್ತ್ರಾಂಶಗಳನ್ನು ನಿರೂಪಿಸುತ್ತಿರುವ ವ್ಯಕ್ತಿಯೇ ಬೇರೆ ಎಂಬ ಅಂಶವು ಯಾರಿಗಾದರೂ ಸುವೇದ್ಯವಾಗುವುದು. ಮೇಲ್ಕಂಡ ಎರಡನೆಯ ವಾಕ್ಯ ವನ್ನು ಉದಾಹರಿಸಿ, ನೃಪತುಂಗ ಕರ್ತೃತ್ವವನ್ನು ಮೊದಲು ಮಂಡಿಸಿದ ಕೆ. ಬಿ. ಪಾಠಕರೇ—"ಕೃತಿಕಾರನು ನೃಪತುಂಗನಿಗಿಂತ ಭಿನ್ನನು ಎಂಬ ಅಭಿಪ್ರಾಯ ಇದರಿಂದ ಉಂಟಾಗುತ್ತದೆ......ನೃಪತುಂಗನೇ ಗ್ರಂಥಕರ್ತನೆಂಬ ಸಿದ್ಧಾಂತಕ್ಕೆ ವಿರೋಧವಾಗ ದಂತೆ ಅದಕ್ಕೆ ತೃಪ್ತಿಕರವಾದ ವ್ಯಾಖ್ಯಾನವನ್ನು ಬರೆಯುವುದು ಸುಲಭಸಾಧ್ಯವಲ್ಲ" ಎಂದು ತಮ್ಮ ಪ್ರಾಮಾಣಿಕವಾದ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ.

(3) ಗ್ರಂಥದಲ್ಲಿ ಹಲವು ಕಡೆ ಹಲವು ಪ್ರಕಾರಗಳಲ್ಲಿ ಸ್ತೋತ್ರಪಾತ್ರನಾದ ನೃಪತುಂಗನೇ ಬೇರೆ, ಕೃತಿಕಾರನೇ ಬೇರೆ—ಎನ್ನುವುದಕ್ಕೆ ಇತರ ಪ್ರಬಲವಾದ ಆಂತರಿಕ ಪ್ರಮಾಣಗಳೂ ಕೆಲವಿವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಸೂಚಿಸ ಬಹುದು:

---

* ಕೆಲವು ಉದಾಹರಣೆಗಳು: 'ಬಸಸಿದನ್ ಅಖಿಳಧರಾವಲ್ಲಭಂ ಅಮೋಘವರ್ಷ ನೃಪೇಂದ್ರಂ'; 'ಎಂದನತಿಶಯಧವಳಂ'; 'ಅತಿಶಯಧವಳೋಕ್ತ ಕ್ರಮದೆ'; 'ನೃಪತುಂಗದೇವ ಮಾರ್ಗಾಂತರಗತ ಬೋಧ ವಿಶೇಷಯಾನ ಪಾತ್ರಂ'—ಇತ್ಯಾದಿ.

† 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳ್' ಎಂಬಲ್ಲಿ 'ಅನುಮತ' ಶಬ್ದಕ್ಕೆ ಅರ್ಥಮಾಡುವಾಗ, ಅದು ಇಲ್ಲಿ ಯಾವ ಅರ್ಥದಲ್ಲಿ ಪ್ರಯೋಗವಾಗಿದೆಯೋ ಅದೇ ಸರಿಯಾದ ಅರ್ಥ.

Sri Vidyabharathi Book Centre, Sringeri

CC-O. In Public Domain. Digitized by eGangotri

(i) ಕವಿರಾಜಮಾರ್ಗದ ಮಂಗಳಾಚರಣೆಯ ಎರಡು ಪದ್ಯಗಳೂ, ಸರಸ್ವತೀ ಪ್ರಾರ್ಥನೆಯೂ ಅತ್ಯಂತ ಗಮನಾರ್ಹವಾದವು. ಅವುಗಳನ್ನು ಇಲ್ಲಿ ಉದ್ಧರಿಸುವುದು ಅಗತ್ಯ :

ಶ್ರೀ ತಳ್ತುರದೊಳ್ ಕೌಸ್ತುಭ–
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ–
ಪ್ರೀತಿಯಿನಾವನನಗಲಳ್
ನೀತಿ ನಿರಂತರನುದಾರನಾ ನೃಪತುಂಗಂ (I. 1)

ಕೃತಕೃತ್ಯಮಲ್ಲನಪ್ರತಿ–
ಹತ ವಿಕ್ರಮನೊಸೆದು ವೀರನಾರಾಯಣನ–
ಪ್ರತಿಶಯಧವಳಂ ನಮಗೀ
ಗತರ್ಕಿತೋಪಸ್ಥಿತ ಪ್ರತಾಪೋದಯಮಂ (I. 2)

ಶ್ರೀವಿಶದವರ್ಣೆ ಮಧುರಾ-
ರಾವೋಚಿತೆ ಚತುರರುಚಿರಪದರಚನೆ ಚಿರಂ
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತುಮಸ್ಮಾನಸದೊಳ್ (I. 3)

ಈ ಪದ್ಯಗಳಲ್ಲಿ, ಮೊದಲಿನ ಎರಡು ವಿಷ್ಣುಸ್ತುತಿ. ಇವುಗಳಲ್ಲಿ ವಿಷ್ಣುವಿಗೂ ನೃಪತುಂಗನಿಗೂ ಅಭೇದವನ್ನು ಕಲ್ಪಿಸಿ ಸ್ತೋತ್ರಮಾಡಿರುವುದು ಸ್ಪಷ್ಟವಾಗಿದೆ. ಇದರಿಂದ ನೃಪತುಂಗನು ಕವಿರಾಜಮಾರ್ಗದ ರಚನಾಕಾಲದಲ್ಲಿ ವಿಷ್ಣುಭಕ್ತನಾದ ವೈದಿಕಮತಾವಲಂಬಿಯಾಗಿದ್ದನೆಂದು ಹೇಳಬಹುದು. ಮೂರನೆಯ ಪದ್ಯ ದಂಡಿಯ ಶ್ಲೋಕದ ಅನುವಾದ. ಆ ಶ್ಲೋಕ ಹೀಗಿದೆ:

ಚತುರ್ಮುಖ ಮುಖಾಂಭೋಜ ವನಹಂಸವಧೂರ್ಮಮ ।
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ॥

ಅನುವಾದಗೊಂಡ (ಮೇಲ್ಕಂಡ 3 ನೆಯ ಪದ್ಯದಲ್ಲಿ) 'ಚತುರ್ಮುಖ' (ಬ್ರಹ್ಮ) ನ ಹೆಸರೂ, ಸರಸ್ವತೀದೇವಿ ಬ್ರಹ್ಮನ ಮುಖದಿಂದ ಹುಟ್ಟಿ ಬಂದವಳು ಎಂಬ ವೈದಿಕ ಧರ್ಮದ ಕಲ್ಪನೆಯೂ ಬಿಟ್ಟುಹೋಗಿರುವುದು ಆಕಸ್ಮಿಕವಲ್ಲ.

ಮೂರನೆಯ ಪರಿಚ್ಛೇದದಲ್ಲಿ ವಿಶೇಷಣ ರೂಪಕಾಲಂಕಾರಕ್ಕೆ ಕೊಟ್ಟಿರುವ ಉದಾಹರಣೆಯೂ ಇದೇ ಸಂದರ್ಭದಲ್ಲಿ ಗಮನಾರ್ಹವಾಗಿದೆ. ದಂಡಿಯ ಮೂಲ ಶ್ಲೋಕ ವಿಷ್ಣುಸ್ತುತಿಯಾಗಿರುವಲ್ಲಿ, ಇದು ಜಿನಸ್ತುತಿಯಾಗಿ ಮಾರ್ಪಟ್ಟಿದೆ.

ದಂಡಿಯ ಶ್ಲೋಕ:

ಹರಿಪಾದಶಿರೋಲಗ್ನ ಜಹ್ನುಕನ್ಯಾಜಲಾಂಶುಕಃ ।
ಜಯತ್ಯಸುರನಿಶ್ಶಂಕ ಸುರಾನಂದೋತ್ಸವಧ್ವಜಃ ॥ (ii-81)

Sri Vidyabharathi Book Centre, Sringeri

CC-O. In Public Domain. Digitized by eGangotri

ಕವಿರಾಜಮಾರ್ಗದ ಪದ್ಯ

ಜನಚರಣನಖಾದರ್ಶಂ
ವಿನತಾಮರರಾಜ ರಾಜವದನಪ್ರತಿಮಂ
ಮನದೊಳ್ ಸಲೆ ನಿಲ್ಕೆಂಬುದು
ವಿನಿಶ್ಚಿತ ವಿಶೇಷಣೋರು ರೂಪಕಮುಕ್ಕುಂ (iii-18)

ಇಂತಹ ಜಿನಪರವಾದ, ಜೈನಧರ್ಮಸಂಬಂಧಿಯಾದ ಅನೇಕ ಉಲ್ಲೇಖಗಳನ್ನು ಗ್ರಂಥದಿಂದ ತೆಗೆದು ತೋರಿಸಿರಬಹುದು. ಇವೆಲ್ಲವೂ ತಾತ್ಪರ್ಯವಾಗಿ ಗ್ರಂಥಕರ್ತನು ವಿಷ್ಣುಭಕ್ತನಾದ ನೃಪತುಂಗನಲ್ಲ, ಜೈನಧರ್ಮೀಯನಾದ ಒಬ್ಬ ಆಶ್ರಿತ ಕವಿ ಎಂದು ಸೂಚ್ಯವಾಗಿ ತಿಳಿಸುವಂತಿವೆ. ಮಂಗಳ ಪದ್ಯಗಳೂ ನೃಪತುಂಗ ಪ್ರಶಂಸಾತ್ಮಕವಾದ ಇನ್ನು ಕೆಲವು ಗ್ರಂಥದ ಉಕ್ತಿಗಳೂ ಶಾಸನಾಧಾರಗಳೂ ನೃಪತುಂಗನು ವಿಷ್ಣುಭಕ್ತನಾದ ವೈದಿಕಧರ್ಮಾವಲಂಬಿ ಎಂಬ ಅಂಶವನ್ನು ಘಂಟಾಘೋಷವಾಗಿ ಸಾರುತ್ತಿವೆ. ನೃಪತುಂಗನೇ ಗ್ರಂಥಕರ್ತನಾಗಿದ್ದ ಪಕ್ಷದಲ್ಲಿ, ಎಷ್ಟೇ ಆತ್ಮಪ್ರಶಂಸಾಪ್ರಿಯನಾಗಿದ್ದರೂ ತನ್ನನ್ನು ವಿಷ್ಣುವಿಗೆ ಹೋಲಿಸಿಕೊಂಡು ಸ್ತೋತ್ರ ಮಾಡುತ್ತಿರಲಿಲ್ಲ. ಅಲ್ಲದೆ, ಮೇಲೆ ಉದಾಹರಿಸಿದ ಮಂಗಳ ಪದ್ಯಗಳಲ್ಲಿ, ಎರಡನೆಯದರ 'ನಮಗೆ ಈಗೆ ಪ್ರತಾಪೋದಯಮಂ,' ಎಂಬಲ್ಲಿ ಬಹುವಚನದ ಸರ್ವನಾಮವೂ, ಮೂರನೆಯದರ 'ನೆಲೆಗೊಳ್ಗೆ ಮನ್ಮಾನಸದೊಳ್ (ನನ್ನ ಮನಸ್ಸಿನಲ್ಲಿ) ಎಂಬಲ್ಲಿ ಏಕವಚನದ ಪ್ರಯೋಗವೂ ಇಬ್ಬರು ವ್ಯಕ್ತಿಗಳನ್ನು ಸೂಚಿಸುವಂತಿವೆ. ಗ್ರಂಥಕರ್ತನು ಮೊದಲೆರಡು ಪದ್ಯಗಳಲ್ಲಿ ವಿಷ್ಣುಸದೃಶನಾದ ನೃಪತುಂಗನು 'ನಮಗೆ' (ಎಂದರೆ, ತನಗೆ + ಓದುಗರಿಗೆ) ಪ್ರತಾಪೋದಯವನ್ನು ಕೊಡಲಿ ಎಂದು ಪ್ರಾರ್ಥಿಸಿ ಮುಂದಿನ ಪದ್ಯದಲ್ಲಿ—'ನನ್ನ ಮನಸ್ಸಿನಲ್ಲಿ ಸರಸ್ವತಿ ನೆಲೆಸಿರಲಿ' ಎಂದು ಪ್ರಾರ್ಥಿಸಿದ್ದಾನೆ. ಒಟ್ಟಿನ ಮೇಲೆ, ಈ ಮೂರು ಪದ್ಯಗಳಲ್ಲಿ—ಗ್ರಂಥಾರಂಭದಲ್ಲಿ—ಆಶ್ರಯದಾತನಾದ ನೃಪತುಂಗ ಮತ್ತು ಆಶ್ರಿತ ಕವಿ, ಇವರಿಬ್ಬರ ಸಂಬಂಧದ ಸೂಚನೆ ದೊರಕುತ್ತದೆ. ಬೇರೆ ಬೇರೆ ಧರ್ಮಗಳಿಗೆ ಸೇರಿದ ಇಬ್ಬರು ವ್ಯಕ್ತಿಗಳ ಪರಿಚಯವಾಗುವ ಈ ಸನ್ನಿವೇಶ ಕರ್ತೃತ್ವನಿರ್ಣಯಕ್ಕೆ ಅತ್ಯಂತ ಪ್ರಬಲವಾದ ಒಂದು ಆಂತರಿಕ ಪ್ರಮಾಣ. ಗ್ರಂಥದ ಕೊನೆಯಲ್ಲಿ ವಿವರಪೂರ್ಣವಾದ ನೃಪತುಂಗ ಸಭಾಸದನ ವರ್ಣನೆ ಇದೆ. ನೃಪತುಂಗನೇ ಗ್ರಂಥಕರ್ತನಾಗಿದ್ದ ಪಕ್ಷದಲ್ಲಿ ಅವನು ತನ್ನ ಸಭಾಸದನೊಬ್ಬನನ್ನು ಕುರಿತು ಯಾವ ಸ್ಪಷ್ಟ ಕಾರಣವೂ ಇಲ್ಲದೆ ದೀರ್ಘವಾಗಿ ವರ್ಣನೆ ಮಾಡುವ ಅಗತ್ಯವಿಲ್ಲ. ಜೈನಧರ್ಮೀಯನಾದ ಆಶ್ರಿತಸಭಾಸದನೇ ಗ್ರಂಥಕರ್ತ, ಅವನ ಹೆಸರು ಶ್ರೀವಿಜಯ ಎಂಬ ಅನಿವಾರ್ಯ ನಿರ್ಧಾರದತ್ತ ಮುಖ್ಯಪ್ರಮಾಣಗಳು ನಮ್ಮನ್ನು ಒಯ್ಯುತ್ತವೆ.

ಗ್ರಂಥಕರ್ತನಾದ ಆಶ್ರಿತ ಸಭಾಸದನು ಶ್ರೀವಿಜಯ ಎಂಬುದಕ್ಕೆ ದುರ್ಗಸಿಂಹನ ಹೇಳಿಕೆಯೂ ಶಬ್ದಮಣಿದರ್ಪಣದ ಉಲ್ಲೇಖಗಳೂ ಹೇಗೆ, ಎಷ್ಟರಮಟ್ಟಿಗೆ. ಸಾಧಕಪ್ರಮಾಣಗಳಾಗಬಲ್ಲವು ಎಂಬುದನ್ನು ಈ ಮೊದಲೇ ಪರಿಶೀಲಿಸಿದೆ. ಈಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಿಜಯ ಕರ್ತೃತ್ವವನ್ನು ಸೂಚ್ಯವಾಗಿಯೇ ಆದರೂ ಸ್ಪಷ್ಟವಾಗಿ ತಿಳಿಸುವ ಆಂತರಿಕ ಪ್ರಮಾಣ ಎಂದರೆ, ಪರಿಚ್ಛೇದಾಂತಪದ್ಯಗಳ ಬಹುಮಟ್ಟಿಗೆ ಏಕರೂಪದ ಈ ಹೇಳಿಕೆಗಳು:—

(i) "...ಕವಿಪ್ರಕರಂ ಶ್ರೀವಿಜಯಪ್ರಭೂತಮಂ ಇದಂ ಕೈಕೊಳ್ವುದು..."

(ii) "ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ".

(iii) "ಪರಮ ಶ್ರೀವಿಜಯಪ್ರಭೂತಿಜಯಶಂ...ನೆಲೆಗೊಳ್ಗಾ ಚಂದ್ರ ತಾರಂಬರಂ"

'ಶ್ರೀವಿಜಯಪ್ರಭೂತ' ಮತ್ತು 'ಶ್ರೀವಿಜಯಪ್ರಭೂತಿ' ಎಂಬ ಮಾತುಗಳಿಗೆ ಕ್ರಮವಾಗಿ 'ವಿಜಯನಿಂದ ಉಂಟಾದದ್ದು-ಉತ್ಪನ್ನವಾದದ್ದು-ಜನಿಸಿದ್ದಂ—ನಿರ್ವಾಣವಾದದ್ದು' ಮತ್ತು 'ಶ್ರೀವಿಜಯಮೂಲವಾದದ್ದು' ಎಂಬ ಅರ್ಥಗಳು ಪ್ರಸಿದ್ಧವಾದವು. ಬೇರೆಯ ರೀತಿಯಲ್ಲಿ ಅರ್ಥಮಾಡುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ. ಈ ಸಂದರ್ಭದಲ್ಲಿ, ಶ್ರೀ ವಿಜಯಾಚಾರ್ಯ ಎಂಬ ಹೆಸರನ್ನೂ ಹೊಂದಿದ್ದ ಅಪರಾಜಿತ ಸೂರಿ ತನ್ನ 'ಆರಾಧಾನಾ' ಟೀಕೆಯನ್ನು 'ವಿಜಯೋದಯ' (ವಿಜಯನಿಂದ ಹುಟ್ಟಿದ್ದು) ಎಂದು ಕರೆದಿರುವುದನ್ನು ಸ್ಮರಿಸಬಹುದು (ನೋಡಿ: ಪು, 2).

ಪರಿಚ್ಛೇದಾಂತ ಪದ್ಯಗಳಲ್ಲಿನ ಈ 'ಶ್ರೀವಿಜಯ' ನಾಮಾಂಕಿತವು ನೃಪತುಂಗನ ಬಿರುದುಗಳಲ್ಲಿ ಒಂದು ಎಂಬ ವಾದಕ್ಕೆ ಬುಡವಿಲ್ಲ. ಗ್ರಂಥದಲ್ಲಿ ನೃಪತುಂಗನ ಎಲ್ಲ ಬಿರುದುಗಳೂ ಬೇರೆ ಬೇರೆ ಸಂದರ್ಭಗಳಲ್ಲಿ ಕಾಣಿಸಿಕೊಂಡಿವೆ; ಆದರೆ ಈ ಶ್ರೀವಿಜಯನಾಮ ಪರಿಚ್ಛೇದಾಂತ್ಯದಲ್ಲಿ ಹೊರತಾಗಿ ಬೇರೆಲ್ಲಿಯೂ ಕಾಣಸಿಕ್ಕದು. ಕರ್ತೃತ್ವನಿರ್ದೇಶನಕ್ಕೆ ಪ್ರಸಿದ್ಧವಾದ ಬಿರುದನ್ನು ಉಪಯೋಗಿಸಿಕೊಳ್ಳದೆ ಯಾವ ಶಾಸನದಲ್ಲಿಯೂ ಉಕ್ತವಾಗದೆ ಅಪ್ರಸಿದ್ಧವೆಂದು ತೋರುವ ಈ ಬಿರುದನ್ನು—ಅದು ಬಿರುದೇ ಆಗಿದ್ದಲ್ಲಿ—ನೃಪತುಂಗನು ಉಪಯೋಗಿಸಿದ್ದಾನೆ ಎನ್ನುವುದು ನಿರಾಧಾರವಾದ ಊಹೆಯೆನಿಸುತ್ತದೆ. ಈ ವಾದ ನಿರರ್ಥಕವೆಂದು ತೋರಿದ ರಿಂದ, ಭಾರವಿ ತನ್ನ ಕಿರಾತಾರ್ಜುನೀಯದಲ್ಲಿ 'ಲಕ್ಷ್ಮೀ' ಎಂಬ ಮುದ್ರೆಯನ್ನು ಉಪಯೋಗಿಸಿರುವಂತೆ, ಅವನಿಂದ ಕೆಲವು ಪದ್ಯಭಾವಗಳನ್ನು ಸ್ವೀಕರಿಸಿರುವ ಕವಿರಾಜಮಾರ್ಗಕಾರನು ಅವನನ್ನು ಅನುಸರಿಸಿ 'ಶ್ರೀವಿಜಯ ಎಂಬ ಮುದ್ರೆಯನ್ನು ಬಳಸಿದ್ದಾನೆ' ಎಂಬ ಹೊಸ ವಾದವೂ ಹುಟ್ಟಿಕೊಂಡಿದೆ.[14] ಭಾರವಿ

---

14 ಕವಿರಾಜಮಾರ್ಗ—ಕವಿಕಾವ್ಯ ಪರಂಪರೆ—1: ಸಂ. ಶ್ರೀ ವಿ. ಸೀತಾರಾಮಯ್ಯ, ಪು. 81 (ಈ ಗ್ರಂಥದಲ್ಲಿನ ಡಾ॥ ಕೆ. ಕೃಷ್ಣಮೂರ್ತಿಯವರ ಲೇಖನದ ಹಸ್ತಪ್ರತಿಯನ್ನು, ಅವರ ಒಪ್ಪಿಗೆ ಪಡೆದು, ಸಂಪಾದಕರಿಂದ ಪಡೆದು ಓದಿನೋಡಿದ್ದೆ. ಲೇಖನದಲ್ಲಿ ಭಾರವಿಯ 'ಲಕ್ಷ್ಮೀ' ಮುದ್ರಿಕೆಯ ಪ್ರಸ್ತಾಪವೂ, ಅದರ ಹಾಗೆ 'ಶ್ರೀವಿಜಯ' ಎಂಬುದೂ ನೃಪತುಂಗನ ಗ್ರಂಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ಗಗಳ ಕೊನೆಯ ವೃತ್ತಗಳಲ್ಲಿ 'ಲಕ್ಷ್ಮೀ' ಎಂಬ ಮುದ್ರೆಯನ್ನು ಬಳಸಿದ್ದರೂ ಗದ್ಯಭಾಗದಲ್ಲಿ "ಭಾರವಿ ಕೃತೌ" (ಭಾರವಿ ರಚಿಸಿದ್ದು) ಎಂದು ಸ್ಪಷ್ಟವಾಗಿಯೇ ತಿಳಿಸಿದ್ದಾನೆ. ನೃಪತುಂಗನೆ ಕರ್ತೃವಾಗಿದ್ದರೆ, ಒಂದು ಅಂಶದಲ್ಲಿ ಭಾರವಿಯನ್ನು ಅನುಸರಿಸಿ ಇನ್ನೊಂದರಲ್ಲಿ ಅನುಸರಿಸದೆ ಇರುತ್ತಿರಲಿಲ್ಲ; 'ನೃಪತುಂಗ ದೇವಾನುಮತಮಪ್ಪ' ಎಂದು ಹೇಳದೆ, '**ನೃ**ಪತುಂಗದೇವಕೃತ' (ಇಲ್ಲವೆ ವಿರಚಿತ) ಎಂದು ಸ್ಪಷ್ಟವಾಗಿ ತಿಳಿಸುತ್ತಿದ್ದನು. ಅಲ್ಲದೆ, ಬೇರೆಯ ದೃಷ್ಟಾಂತಗಳು ನಿರ್ಣಾಯಕ ಪ್ರಮಾಣಗಳಾಗಲಾರವು.

ಎಲ್ಲ ಪ್ರಮಾಣಗಳನ್ನೂ ಯಾವ ಪೂರ್ವಾಭಿಪ್ರಾಯಕ್ಕೂ ಕಟ್ಟುಬೀಳದೆ ತೂಗಿನೋಡಿ ಪರಿಶೀಲಿಸಿದಲ್ಲಿ, ನೃಪತುಂಗನ ಸಭಾಸದನಾದ ಶ್ರೀವಿಜಯನು ಕವಿರಾಜಮಾರ್ಗದ ಕರ್ತೃ ಎಂಬ ಸತ್ಯಾಂಶ ಹೊರಪಡುತ್ತದೆ.

ಶ್ರೀವಿಜಯನೇ ಕವಿರಾಜಮಾರ್ಗದ ಕರ್ತೃ ಎಂದಾದಮೇಲೆ, ದುರ್ಗಸಿಂಹನು 'ಶ್ರೀವಿಜಯರ ಕವಿಮಾರ್ಗಂ' ಎಂದೇಕೆ ಹೇಳಿರುವನು? ಪ್ರಸಿದ್ಧವಾದ ಕವಿರಾಜಮಾರ್ಗಂ ಎಂಬ ಹೆಸರನ್ನು ಮೊಟಕು ಮಾಡಿರುವುದೇಕೆ? ಎಂಬ ಸಂದೇಹದ ಪ್ರಶ್ನೆಗಳು ಹುಟ್ಟುವುದು ಸಹಜ. ಈ ಸಮಸ್ಯೆಗೆ ಪರಿಹಾರವನ್ನು ಹುಡುಕುವಲ್ಲಿ, ವಿದ್ವಾಂಸರು ಬೇರೆ ಬೇರೆ ಸೂಚನೆಗಳನ್ನು ಮುಂದಿಟ್ಟಿದ್ದಾರೆ. ಛಂದಸ್ಸಿನ ಅಗತ್ಯಕ್ಕೋಸ್ಕರ ದುರ್ಗಸಿಂಹ ಹೆಸರನ್ನು ಸಂಕ್ಷೇಪಗೊಳಿಸಿರಬಹುದು ಎಂಬ ಪರಿಹಾರಸೂಚನೆಯ ಸಾಧಕಬಾಧಕಗಳನ್ನು ಈ ಹಿಂದೆಯೇ ಗಮನಿಸಿದೆ. ಶ್ರೀವಿಜಯನೆಂಬ ಪೂರ್ವಕವಿಯ ಕವಿಮಾರ್ಗವನ್ನು ಕವೀಶ್ವರನೆಂಬವನು ಕವಿರಾಜಮಾರ್ಗವಾಗಿ ಮಾರ್ಪಡಿಸಿ, ನೃಪತುಂಗನ ಅಂಕಿತದಲ್ಲಿ ಪ್ರಕಾಶಕ್ಕೆ ತಂದನು ಎಂಬ ವಾದವನ್ನೂ ಪರೀಕ್ಷೆ ಮಾಡಿದೆ. ಅತ್ಯಂತ ಈಚಿನ ವಾದವೆಂದರೆ, ಈ ಹಿಂದೆಯೆ ಸೂಚಿಸಿರುವ ಶ್ರೀ ಭೀಮರಾವ್ ಚಿಟಗುಪ್ಪಿಯವರದ್ದು (ನೋಡಿ: ಪು. 4). ಶ್ರೀವಿಜಯ ಎಂಬ ನಾಮಾಂತರವುಳ್ಳ ಜಿನಸೇನರು ಕವಿಮಾರ್ಗದ ಕರ್ತೃ ಎಂದು ನಿರ್ಧರಿಸಲು ಆಧಾರಗಳೇ ಇಲ್ಲ. ಮಂಗಳಶ್ಲೋಕಗಳನ್ನು (i–12) ನೃಪತುಂಗ ಬರೆದಿರಲಾರನೆಂದು ಆಗಲೇ ಕಂಡುಕೊಂಡಿದ್ದೇವೆ. ಈ ಪದ್ಯಗಳಲ್ಲಿಯೂ, ನೃಪತುಂಗನನ್ನು ಕೊಂಡಾಡುವ ಇನ್ನೊಂದು ಪದ್ಯದಲ್ಲಿಯೂ (iii–180) 'ವೀರನಾರಾಯಣ' ಎಂಬ ಅವನ ಬಿರುದು ಉಕ್ತವಾಗಿದೆ. ಈ ಪದ್ಯಗಳು ನೃಪತುಂಗ ಕೃತವಲ್ಲವಾಗಿರುವ ಕಾರಣ, 'ಕವಿಮಾರ್ಗ'ದ ಪದ್ಯಗಳು ಎನ್ನಬೇಕಾಗುತ್ತದೆ. ನೃಪತುಂಗನಿಗೆ ಕ್ರಿ.ಶ. ಸು. 845–850ರ ಸುಮಾರಿನಲ್ಲಿ 'ವೀರನಾರಾಯಣ'

ಮುದ್ರಿಕೆಯೆಂಬ ವಿಚಾರವೂ ಇದ್ದುವು. ಈ ವಿಚಾರವಾಗಿ ಇದೇ ಗ್ರಂಥದಲ್ಲಿನ ನನ್ನ ಲೇಖನದಲ್ಲಿ ಶ್ರೀ ಕೃಷ್ಣಮೂರ್ತಿಯವರ ಅಭಿಪ್ರಾಯವನ್ನು ವಿಮರ್ಶೆ ಮಾಡಲು ಸಂದರ್ಭ ಒದಗಿದ್ದು ಹೀಗೆ. ಈಗ ಅಚ್ಚಾಗಿರುವಂತೆ, ಅವರ ಲೇಖನದಲ್ಲಿ ಈ ವಿಚಾರ ಪ್ರಸ್ತಾಪ ಇಲ್ಲ.)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಬಿರುದು ಸಂದಿರಬೇಕು ಎನ್ನುವುದಕ್ಕೆ ಶಾಸನದ ಆಧಾರವಿದೆ. ಆದ್ದರಿಂದ ಕವಿರಾಜಮಾರ್ಗಕ್ಕೆ ಮೂಲವಾಗಿದ್ದಿರಬಹುದಾದ 'ಕವಿಮಾರ್ಗ' ಕೂಡ ಆ ವೇಳೆಗೆ ಮುಂಚೆ ರಚಿತವಾಗಿರಲು ಸಾಧ್ಯವಿಲ್ಲ. ಜಿನಸೇನರು ಕ್ರಿ.ಶ. 843 ರಲ್ಲಿ ತೀರಿಕೊಂಡರು. ಹೀಗಿರುವಲ್ಲಿ, ಜಿನಸೇನರು ಕವಿಮಾರ್ಗದ ಕರ್ತೃ ಎಂಬ ವಾದದ ತಳಹದಿಯೇ ಬಿದ್ದುಹೋಗುತ್ತದೆ.

ಈ ಸಂದರ್ಭದಲ್ಲಿ, ಇನ್ನೊಂದು ಊಹೆ[15] ಬಹು ಸಂಭವನೀಯವಾಗಿ ಕಾಣುತ್ತದೆ. ದಂಡಿಭಾಮಹರನ್ನು ಅನುಸರಿಸಿ ಶ್ರೀವಿಜಯನು 'ಕವಿಮಾರ್ಗ'ವನ್ನು ರಚಿಸಿದ್ದನು. ಅವನು ಅದನ್ನು ನೃಪತುಂಗನ ವಿದ್ವತ್ಸಭೆಯಲ್ಲಿ ಶ್ರುತಪಡಿಸಿದಾಗ ಸ್ವತಃ ವಿದ್ವಾಂಸನಾಗಿದ್ದ ನೃಪತುಂಗನು ಅನೇಕ ವಿಚಾರಗಳಲ್ಲಿ ತನ್ನ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರಬೇಕು. ಶ್ರೀವಿಜಯನು ಆ ಅಭಿಪ್ರಾಯಗಳನ್ನು ತನ್ನ 'ಕವಿಮಾರ್ಗ'ದಲ್ಲಿ ಅಳವಡಿಸಿ 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗಂ' ಎಂದು ಅದನ್ನು ಪ್ರಸಿದ್ಧಪಡಿಸಿರಬೇಕು. ದುರ್ಗಸಿಂಹನಿಗೆ 'ಕವಿಮಾರ್ಗ' ಗ್ರಂಥ ಪಾಠದ ಹಸ್ತಪ್ರತಿ ಕೈಗೆ ಸಿಕ್ಕಿರಬೇಕು. ಶಬ್ದಮಣಿದರ್ಪಣ, ಅದರ ವ್ಯಾಖ್ಯಾನ ಛಂದೋಂಬುಧಿ ಮುಂತಾದ ಗ್ರಂಥಗಳಲ್ಲಿ ಉದ್ಧೃತವಾಗಿರುವ ಕವಿರಾಜಮಾರ್ಗದ ಪದ್ಯಗಳಿಗೂ ಈಗ ದೊರೆತಿರುವ ಕವಿರಾಜಮಾರ್ಗದ ಹಸ್ತಪ್ರತಿಗಳಲ್ಲಿ ಪಾಠ್ಯೈಕ್ಯವಿರುವ ಅವೇ ಪದ್ಯಗಳಿಗೂ ಇರುವ ಪಾಠವ್ಯತ್ಯಾಸಗಳಿಗೂ ಬಹುಶಃ ಇದೇ ಕಾರಣವೆಂದು ತೋರುತ್ತದೆ. ಈ ವಿಚಾರದಲ್ಲಿ ಕಡೆಯ ತೀರ್ಮಾನಕ್ಕೆ ಬರಲು ಇನ್ನೂ ಸಂಶೋಧನೆಯಾಗಬೇಕಾಗಿದೆ. ಇದು ಹೇಗಿದ್ದರೂ ಕವಿರಾಜಮಾರ್ಗದ ಕರ್ತೃ ಶ್ರೀವಿಜಯನೆನ್ನುವ ತೀರ್ಮಾನಕ್ಕೆ ಈಗ ಎಂದಿಗಿಂತ ಹೆಚ್ಚಿನ ಪುಷ್ಟಿ ದೊರಕಿದೆ; ನಾಡಿನ ಪ್ರಮುಖ ವಿದ್ವಾಂಸರು ಈ ತೀರ್ಮಾನವನ್ನು ಒಪ್ಪುತ್ತಾ ಬಂದಿದ್ದಾರೆ.

ಶ್ರೀವಿಜಯನ ವ್ಯಕ್ತಿತ್ವ

ಶ್ರೀವಿಜಯನ ಬಹುಮುಖವಾದ ವ್ಯಕ್ತಿತ್ವವನ್ನು ತಕ್ಕಮಟ್ಟಿಗೆ ಪರಿಚಯ ಮಾಡಿಕೊಡುವ ಉಲ್ಲೇಖಗಳು ಕವಿರಾಜಮಾರ್ಗ ಗ್ರಂಥದಲ್ಲಿಯೇ ದೊರಕುತ್ತವೆ. 'ಕವಿವೃಷಭರ ಪ್ರಯೋಗಗಳಲ್ಲಿ ಪರಿಚಯಬಲವುಳ್ಳವನನ್ನು ಅತಿಶಯಧವಳನ ಸಭಾಸದರು ಮನ್ನಿಸುವರು'; 'ವ್ಯಾಕರಣ, ಕಾವ್ಯ, ನಾಟಕ, ಲೋಕಕಲೆ, ಮುಂತಾದ ಅಲಂಕಾರಪ್ರಾಯವಾದ ವಿದ್ಯೆಗಳಲ್ಲಿ ಪರಿಣತನಲ್ಲವನು ನೃಪತುಂಗನ ನಗರವನ್ನು (ಎಂದರೆ ಮಾನ್ಯ ಖೇಟವನ್ನು) ಏಕೆ ಪ್ರವೇಶಿಸುವನು' (i –5, 6)

---

15 ಇದೇ ಲೇಖಕನಿಂದ ಸಂಪಾದಿತವಾದ 'ಕವಿರಾಜಮಾರ್ಗ'ದ ಪರಿಷ್ಕೃತ ಮುದ್ರಣ, 1968; ಪೀಠಿಕೆ, ಪು. XLIX [ಇದೇ ಅಭಿಪ್ರಾಯವನ್ನು ಡಾ॥ ಎಂ. ಎಂ. ಕಲಬುರ್ಗಿಯವರು ವ್ಯಕ್ತಪಡಿಸಿದ್ದಾರೆ: ನೋಡಿ, 'ಕವಿರಾರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ,' 1973; ಪು. 32].

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ವಾಕ್ಯಗಳಲ್ಲಿ—ಶ್ರೀವಿಜಯನು ನೃಪತುಂಗನ ವಿದ್ವತ್‌ಪಕ್ಷಪಾತವನ್ನು ಕೇಳಿ ತಿಳಿದವನಾಗಿ ಹೊರಗಡೆಯಿಂದ ನೃಪತುಂಗನಗರವನ್ನು ಪ್ರವೇಶಿಸಿ, ನೃಪ ತುಂಗ ಸಭಾಸದನೆನ್ನಿಸಿಕೊಂಡು ಇತರ ಸಭಾಸದರ ಮನ್ನಣೆಗೆ ಪಾತ್ರನಾದ ಸಂಗತಿ ಸೂಚ್ಯವಾಗಿ ನಿರೂಪಣೆಗೊಂಡಿದೆ. ಆತ್ಮಪರಿಚಯ, ಪ್ರಭುಪ್ರಶಂಸೆ, ಎರಡೂ ಕೂಡಿಯೆ ಆಗಿವೆ ಇಲ್ಲಿ. ನೃಪತುಂಗನ ಯುದ್ಧಗಳೆಲ್ಲ ಮುಗಿದು ಶಾಂತಿ ಸುಭಿಕ್ಷ ಗಳು ನೆಲಸಿ, ನೃಪತುಂಗನ ಆಸ್ಥಾನದಲ್ಲಿ ವಿದ್ವಾಂಸರ ಕವಿಗಳ ಸದಸ್ಸು ಸೇರು ತ್ತಿದ್ದಂತಹ ಸಮಯದಲ್ಲಿಯೇ ಶ್ರೀವಿಜಯನು ಮಾನ್ಯಖೇಟಕ್ಕೆ ಹೋಗಿರಬೇಕು; ಆ ತರುವಾಯವೇ ಕವಿರಾಜಮಾರ್ಗಗ್ರಂಥ ರಚನೆಗೊಂಡಿರಬೇಕು. ಈ ಸಮಯ ಸು. ಕ್ರಿ.ಶ. 850–870 ರ ನಡುವಣ ಅವಧಿಯದು ಎಂದು ಎಣಿಸಬಹುದು.

ಕವಿರಾಜಮಾರ್ಗದಲ್ಲಿ ಕನ್ನಡ ನಾಡನ್ನೂ ಕನ್ನಡ ಜನವನ್ನೂ ನುಡಿಯನ್ನೂ ತುಂಬು ಅಭಿಮಾನದಿಂದ ಹೊಗಳುವ ಪದ್ಯಗಳಿವೆ. ಇವು ನೃಪತುಂಗನ ನಾಡು ನುಡಿಗಳ ಅಭಿಮಾನಕ್ಕೆ ಎಂತೋ ಅಂತೆಯೆ ಶ್ರೀವಿಜಯನ ಅಭಿಮಾನಕ್ಕೂ ಉಜ್ವಲ ನಿದರ್ಶನಗಳಾಗಿವೆ.

ನೃಪತುಂಗ ಸಭಾಸದರು ತನ್ನನ್ನು ಕೊಂಡಾಡಿದ ಬಗೆಯನ್ನು ಶ್ರೀವಿಜಯನು ಗ್ರಂಥಸಮಾಪ್ತಿ ಭಾಗದಲ್ಲಿ ವರ್ಣಿಸಿದ್ದಾನೆ (iii—218 ರಿಂದ 230 ಪದ್ಯಗಳು). ಅಲ್ಲಿ ದೊರೆಯುವ ಅವನ ವ್ಯಕ್ತಿಚಿತ್ರ ಹೀಗಿದೆ:

(ಆಶ್ರಿತ ಮಹಾನೃಪತುಂಗ ಸಭಾಸದನಾದ ಕವಿ) ಸಕಲ ಲೌಕಿಕ ಸಾಮಯಿಕ ವೈದಿಕ ವಿಚಾರಗಳಲ್ಲಿ ಪರಾಯಣನು; ಸಾಹಿತ್ಯವಿದ್ಯೆಯಲ್ಲಿ ಉಕ್ತಿಕಲಾಕಲಾಪವನ್ನು ಪ್ರಕಟಪಡಿಸಿರುವವನು; ಅತಿಶಯಪ್ರತಿಭಾಶಾಲಿ; ವ್ಯಾಖ್ಯಾನಮಾಡುವುದರಲ್ಲಿ ಬಲ್ಲಿದನು; ಲಕ್ಷಣ ಲಕ್ಷ್ಯನು (ಎಂದರೆ ಕಾವ್ಯಲಕ್ಷಣವನ್ನೂ ಅದಕ್ಕೆ ಅನುಗುಣವಾಗಿ ಕಾವ್ಯವನ್ನೂ ನಿರೂಪಿಸಬಲ್ಲವನು); ವಿಚಾರಪರನು, ಬಲು ಜಾಣನು; ಸಮಸ್ತ ಭಾಷಾ ವಿಷಯಗಳಲ್ಲಿ ಅತಿಶಯವೂ ನಿರ್ದುಷ್ಟವೂ ಆದ ಕುಶಲತೆಯುಳ್ಳವನು; ದೇವತೆ, ಗುರು, ಗುಣೋದಯ (ನೃಪತುಂಗ?), ವೃದ್ಧಜನರು (ಎಂದರೆ ಜ್ಞಾನ ವೃದ್ಧರು)—ಇವರ ಸೇವೆ ಮಾಡುವುದರಲ್ಲಿ ಆಸಕ್ತನು; ಚಪಲಸ್ವಭಾವ ವಿಕೃತಿ ಗಳನ್ನು ಹೊಂದಿಲ್ಲದವನು; ಪರಮ ಕಾರುಣಿಕನು; ದೋಷರಹಿತನು; ಎಲ್ಲ ಜನರಲ್ಲಿಯೂ ಆದರವನ್ನು ಹುಟ್ಟಿಸತಕ್ಕವನು; ಪರರ ಗುಣದಲ್ಲಿ ಅಸಹನೆಯಿಲ್ಲ ದವನು; ತನ್ನ ಗುಣೋದಯದಲ್ಲಿ ಸಿದ್ಧಿಸ್ವರೂಪನು: ಅಖಿಲಾಗಮಗಳ ಪಾರವನ್ನು ಮುಟ್ಟುವುದರಲ್ಲಿ ನಿರತನಾದವನು. ವಂಶದ ಏಳಿಗೆಗೂ ಮೋಕ್ಷಸುಖಕ್ಕೂ ಕಾರಣವಾದ ಪರಮಧರ್ಮವನ್ನು ಪ್ರೀತಿಯಿಂದ ವಿಚಾರಮಾಡಿ, ಲಭಿಸಿದ ನಿರ್ಮಲವಾದ ಕೀರ್ತಿವಿತಾನವನ್ನು ಸಮಕಟ್ಟುವುದಕ್ಕಾಗಿ ಯಾವ ರೀತಿಯಿಂದಲೂ ಹೆರರ ಮೆಚ್ಚಿಗೆಯನ್ನು ಅವಲಂಬಿಸದೆ ಯಾವನಿಂದಲೂ ಏನನ್ನೂ ಕುರಿತು ನಿರೀಕ್ಷಿಸದೆ ಅಭಿಮಾನಿಯೂ 'ಮಹಾಪುರುಷವ್ರತ' ನಿಶ್ಚಿತನೂ (ಎಂದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನೈಷ್ಠಿಕ ಬ್ರಹ್ಮಚಾರಿಯೂ) ಆದ ಈತನು ಜಗತ್ತಿನ ಅಜ್ಞಾನವನ್ನು ಕಳೆಯುವುದಕ್ಕಾಗಿ ದೀಪದಂತಿರುವ ನುತಕಾವ್ಯವನ್ನು ಹೇಳಿದನು." ಇಷ್ಟು ಮಾತ್ರವಲ್ಲ. ನೃಪತುಂಗ ಸಭಾಸದರ ವರ್ಣನೆಯಂತೆ ಈ ಆಶ್ರಿತ ಸಭಾಸದನು (ಎಂದರೆ ಶ್ರೀವಿಜಯನು)—"ಪಾರ್ಥಿವಲೋಕಕ್ಕೆ ಸೇರಿದವನು (ಎಂದರೆ ಕ್ಷತ್ರಿಯನು) *, ಕವಿ; ಸಂಪದ್ಯುಕ್ತನು; ನೃಪತುಂಗನ ಸಾರ್ಥಕಸೇವೆಯಲ್ಲಿ ನಿರತನಾದವನು; ಅವನ ಕುಲ ಜಾತಿ ದೇಶ—ಎಲ್ಲವೂ ವಿಶದ (ಪ್ರಸಿದ್ಧ) ವಾದವು ; ವಿನಯಶಾಲಿ; ಉಪಚಾರಪರ; ಏಕಾಂತವಾಸ ಪ್ರಿಯ; ಗುಣದೋಷವಿವೇಕದಿಂದ ಕೂಡಿದ ಗುರೂಪದೇಶದ ನಿರ್ಮಲಬೋಧೆಯಿಂದ ಸಕಲವನ್ನೂ ಬಲ್ಲವನು. ಮದ, ಮಾನ, ಮಾಯ, ಭಯ, ಲೋಭ, ಹರ್ಷ, ವಿಷಾದ ಎಂಬ ಅಂತರಂಗರಿಪುಗಳನ್ನು ಜಯಿಸಿದವನು : ತನ್ನ ಬುದ್ಧಿಶಕ್ತಿಯಿಂದಾಗಿ ಸಮಸ್ತಲೋಕದ ಗೌರವಕ್ಕೆ ಪಾತ್ರನಾದವನು: ವಿದ್ವಾಂಸರನ್ನು ಪ್ರೀತಿಯಿಂದ ಸಂರಕ್ಷಿಸುವವನು; ಕೈಕೊಂಡ ವಚನವನ್ನು ಪಾಲಿಸ ತಕ್ಕವನು; ಪರಮಾನುಭಾವನು; ಅಭಿಮಾನಿ; ವಿನೋದಶೀಲನು; ಅತ್ಯಂತ ಉದಾರಚರಿತನು; ಮಹಾರಸಿಕ; ಪರೋಪಕಾರಿ; ನಿರ್ವ್ಯಾಜವಾದ ಮೈತ್ರಿಯನ್ನು ತೋರಬಲ್ಲವನು. ಏಕಾಂಗ ಸಾಹಸದಲ್ಲಿ ಸಂತೋಷಪಡತಕ್ಕವನು; ಪ್ರಕಾಶಮಾನವಾದ ತತ್ತ್ವಸತ್ತ್ವವುಳ್ಳವನು: ದುರ್ವ್ಯಸನಗಳಿಲ್ಲದವನು; ಅನೇಕ ಕಲೆಗಳಲ್ಲಿ ನಿಪುಣನಾದವನು: ನಿರ್ಮಲವಾದ ಕೀರ್ತಿಭೂಷಣಗಳಿಂದ ಭೂಷಿತನಾದವನು. ನೃಪತುಂಗದೇವಮಾರ್ಗದ ಕಾವ್ಯಲಕ್ಷಣಗಳಿಗೆ ಅನುಗುಣವಾದ ಮಹಾಕಾವ್ಯವನ್ನು ರಚಿಸ ಬಲ್ಲವನು.

ಮೇಲಿನ ವರ್ಣನೆಯಲ್ಲಿ ಆತ್ಮಸ್ತುತಿಗೆ ಸಹಜವಾದ ಅತ್ಯುಕ್ತಿಯ ಅಂಶ ಅಲ್ಲಲ್ಲಿ ತಲೆಹಾಕಿರಬಹುದು. ಆದರೆ ಶ್ರೀವಿಜಯನು ಪಂಪನಂತೆ ಕವಿಯೂ ಕಲಿಯೂ ಅನೇಕ ಭಾಷೆ ಶಾಸ್ತ್ರ ಕಲೆಗಳಲ್ಲಿ ಪರಿಣತನೂ ರಸಿಕನೂ ಆಗಿದ್ದನೆಂಬ ಸಂಗತಿ ಗಮನಾರ್ಹ. ಅವನು 'ಪುರುಷವ್ರತ' ನಿಷ್ಠನಾಗಿದ್ದುದು ಅವನ ವ್ಯಕ್ತಿತ್ವಕ್ಕೆ ಘನತೆಯನ್ನು ನೀಡಿದೆ. ನೃಪತುಂಗನಂತೆ ಜೈನಧರ್ಮ ಪ್ರವಣನಾದ ದುರ್ಗಸಿಂಹನು ಇಂಥ ಪೂಜ್ಯವ್ಯಕ್ತಿಯನ್ನು 'ಶ್ರೀವಿಜಯರ್ ದೇವರ್' ಎಂದು ಗೌರವಿಸಿರುವುದರಲ್ಲಿ ಆಶ್ಚರ್ಯವಿಲ್ಲ.

ಕವಿರಾಜಮಾರ್ಗವನ್ನಲ್ಲದೆ ಶ್ರೀವಿಜಯನು ಇತರ ಕೃತಿಗಳು ಯಾವುವನ್ನು ರಚಿಸಿರುವನೋ ಹೇಳುವುದು ಕಷ್ಟ. ಮಂಗರಸ ದೊಡ್ಡಯ್ಯ—ಈ ಕವಿಗಳು ತಿಳಿಸುವ ಚಂದ್ರಪ್ರಭಪುರಾಣಕರ್ತ ಇವನೇಯೋ, ಇಲ್ಲವೆ ಕವಿರಾಜಮಾರ್ಗದಲ್ಲಿ ಉಕ್ತನಾದ, ಪೂರ್ವಕವಿಯಾಗಿರಬಹುದಾದ 'ಪರಮ ಶ್ರೀವಿಜಯ ಕವೀಶ್ವರ' ನೋ—ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲ. ವಿರುದ್ಧ ಪ್ರಮಾಣಗಳು ದೊರೆಯುವವರೆಗೆ.

---

* ಈ ವಿವರಾಂಶ ಜಿನಸೇನರ ವ್ಯಕ್ತಿತ್ವಕ್ಕೆ ಹೊಂದುವುದಿಲ್ಲವೆಂಬುವುದನ್ನು ಗಮನಿಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕವಿರಾಜಮಾರ್ಗಕಾರ ಶ್ರೀವಿಜಯನೇ ಚಂದ್ರಪ್ರಭಪುರಾಣಕರ್ತನೆಂದು ಭಾವಿಸಿದರೆ ತಪ್ಪಾಗದು.

ಈಚೆಗೆ ದೊರೆತು ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ 2ನೆಯ ನಾಗವರ್ಮನ 'ವರ್ಧಮಾನಪುರಾಣ'ದಲ್ಲಿ—ಒಬ್ಬ ಶ್ರೀವಿಜಯನ ಪ್ರಸ್ತಾಪವಿರುವುದನ್ನು ಈ ಹಿಂದೆಯೇ ಗಮನಿಸಿದೆ, ಆ ಪದ್ಯ ಹೀಗಿದೆ :

ಅಘವಿಘಟನಕಾರಣಮಂ ।
[ಸು]ಘಟಿತ ಪದಬಂಧ ಬಂಧುರಾಳಂಕೃತಿಯಂ ॥
ಲಘುವಾಗೆ ಪೊಗಟಿ³ ಪೇಟ್ದಂ ।
ರಘುವಂಶ ಮಹಾಪುರಾಣಮಂ ಶ್ರೀವಿಜಯಂ ॥

ಈ ರಘುವಂಶ ಮಹಾಪುರಾಣ ಕಾಳಿದಾಸನ ರಘುವಂಶ ಕಾವ್ಯದ ಅನುವಾದ ವಿದ್ದಿರಲಾರದು. ವಿಮಲಸೂರಿಯ 'ಪಉಮಚರಿಯಂ', ಇಲ್ಲವೇ ರವಿಷೇಣನ ಸಂಸ್ಕೃತಕೃತಿ 'ಪದ್ಮಪುರಾಣಂ'—ಇವುಗಳಲ್ಲಿ ಒಂದನ್ನು ಇಲ್ಲವೇ ಎರಡನ್ನೂ ಅನುಸರಿಸಿ ರಚಿತವಾದ, ರಾಮಾಯಣ ಕಥೆಯನ್ನೂ ರಾಮನ ವಂಶದ ವೃತ್ತಾಂತ ವನ್ನೂ ಒಳಗೊಂಡ ಕೃತಿಯಾಗಿರಬೇಕು. ಇದು ಪದ್ಯಕಾವ್ಯವೋ, ಗದ್ಯಪದ್ಯ. ಸಂಮಿಶ್ರವಾದ 'ಗದ್ಯಕಥೆ'ಯೋ (ಚಂಪೂ ಕಾವ್ಯ !) ಊಹಿಸುವುದು ದುಸ್ಸಾಧ್ಯ. ಕವಿರಾಜಮಾರ್ಗದಲ್ಲಿ ರಾಮಾಯಣದ ಕಥೆಗೆ ಸಂಬಂಧಪಟ್ಟ ಕೆಲವು ಪದ್ಯಗಳಿವೆ, ಅವುಗಳನ್ನು ಕವಿರಾಜಮಾರ್ಗಕಾರನ ಸ್ವಂತ ಲಕ್ಷ್ಯಪದ್ಯಗಳೆಂದು ಊಹಿಸಲು ಅವಕಾಶವಿದೆ. ಈ ಪದ್ಯಗಳನ್ನು ಮಾರ್ಗಕಾರನು ತನ್ನ ಕೃತಿಯಿಂದಲೇ ಆಯ್ದು ತೆಗೆದುಕೊಟ್ಟಿರುವುದೂ ಶಕ್ಯ. ಈ ಕೃತಿ ನಾಗವರ್ಮನ ವರ್ಧಮಾನಪುರಾಣದಲ್ಲಿ ಹೇಳಿರುವ ರಘುವಂಶ ಮಹಾಪುರಾಣವೇ ಆಗಿರಬೇಕೆಂದು ಸದ್ಯದ ಮಟ್ಟಿಗೆ ಊಹಿಸ ಬಹುದು.

ಎಂದಮೇಲೆ, ಶ್ರೀವಿಜಯನು ಕವಿರಾಜಮಾರ್ಗವೆಂಬ ಲಕ್ಷಣಗ್ರಂಥವನ್ನಲ್ಲದೆ, ರಘುವಂಶ ಮಹಾಪುರಾಣವನ್ನೂ ರಚಿಸಿರುವನೆಂದು ಹೇಳಬಹುದು. ಚಂದ್ರಪ್ರಭ ಪುರಾಣಕರ್ತೃವೂ ಆಗಿರಬಹುದು. ಈ ಎರಡು ಕೃತಿಗಳ ಹಸ್ತಪ್ರತಿಗಳು ನಮ್ಮ ಪುಣ್ಯದಿಂದ ದೊರೆತರೆ, ಈ ವಿಚಾರದಲ್ಲಿ ಹೆಚ್ಚಿನ ಬೆಳಕು ಬೀಳುವ ಸಂಭವವಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎ. ಎನ್. ಉಪಾಧ್ಯೆ

‘ಗೀತವೀತರಾಗ ಪ್ರಬಂಧ’—ಕರ್ತೃ ಮತ್ತು ಕಾಲವಿಚಾರ

ಜಯದೇವನ ಗೀತಗೋವಿಂದವನ್ನು ಆದರ್ಶವಾಗಿಟ್ಟುಕೊಂಡು ಗೀತವೀತರಾಗವು ಬರೆಯಲ್ಪಟ್ಟಿದೆ. ಇವುಗಳಲ್ಲಿ ಕಥೆಯು ಭಿನ್ನತೆಯಿದೆ, ಮತ್ತು ವಾತಾವರಣವು ಭಿನ್ನವಾಗಿದೆ. ಈ ಪ್ರಬಂಧದಲ್ಲಿ ಋಷಭದೇವನ ಚರಿತ್ರೆಯು ಬರುತ್ತದೆ. ಹಿಂದಿನ ಭವಗಳ ನಿರ್ದೇಶವು, ಅಲ್ಲಿಯ ಅನುಭವಗಳು ಸರಸ ಕಾವ್ಯ ಶೈಲಿಯಲ್ಲಿ ಹೇಳಲ್ಪಟ್ಟಿವೆ. ಇದರಲ್ಲಿ ಇಪ್ಪತ್ನಾಲ್ಕು ಪ್ರಬಂಧಗಳಿವೆ. ಕೊನೆಯದಾಗಿ ಗ್ರಂಥಕಾರ ಪ್ರಶಸ್ತಿಯಿದೆ. ವಿಷಯಗಳನ್ನು ಮುಖ್ಯವಾಗಿ ಜಿನಸೇನರ ಆದಿಪುರಾಣದಿಂದ ತೆಗೆದುಕೊಳ್ಳಲಾಗಿದೆ. ಈ ಎಲ್ಲ ವಿಷಯಗಳನ್ನೂ ಇತ್ತೀಚೆಗೆ (1972) ಭಾರತೀಯ ಜ್ಞಾನಪೀಠದಿಂದ ಪ್ರಕಟಿತವಾದ ಮತ್ತು ನನ್ನಿಂದ ಸಂಪಾದಿತವಾದ ಗೀತವೀತರಾಗ ಪ್ರಬಂಧದ ಇಂಗ್ಲೀಷ್ ಪ್ರಸ್ತಾವನೆಯಲ್ಲಿ ನೋಡಬಹುದು.

ಹಸ್ತಪ್ರತಿಗಳ ಪುಷ್ಪಿಕೆಗಳಲ್ಲಿ ಗ್ರಂಥಕಾರನ ಹೆಸರು ಈ ರೀತಿಯಾಗಿ ಬರುತ್ತದೆ: ಶ್ರೀಮದ್–ಅಭಿನವ–ಚಾರುಕೀರ್ತಿ–ಪಂಡಿತಾಚಾರ್ಯ(ವರ್ಯ) ಎಂದೂ ಮತ್ತು ಕೊನೆಯ ಶ್ಲೋಕಗಳಲ್ಲಿ ಪಂಡಿತವರ್ಯ ಮತ್ತು ಪಂಡಿತಾಚಾರ್ಯವರ್ಯ ಎಂದೂ ನಿರ್ದೇಶವು ಬರುತ್ತದೆ. ಶ್ರೀಮದ್ ಮತ್ತು ವರ್ಯ ಇವು ಸ್ಪಷ್ಟವಾಗಿ ಸನ್ಮಾನ ಸೂಚಕ ಶಬ್ದಗಳು. ಶ್ರವಣಬೆಳಗೊಳದ ಭಟ್ಟಾರಕರೆಲ್ಲರೂ ಎಲ್ಲ ಕಾಲದಲ್ಲಿಯೂ ಚಾರುಕೀರ್ತಿಯೆಂಬ ಸಮಾನ ಬಿರುದಿನಿಂದ ಕರೆಯಲ್ಪಡುತ್ತಾರೆ ಮತ್ತು ಹೊಸದಾಗಿ ಪಟ್ಟಕ್ಕೆ ಬಂದ ಭಟ್ಟಾರಕರಿಗೆ ಅಭಿನವವೆಂಬ ವಿಶೇಷಣವು. ಆದ್ದರಿಂದ ಈ ನಮ್ಮ ಗ್ರಂಥಕಾರರ ಹೆಸರು ಸಂಕ್ಷೇಪದಲ್ಲಿ ಬರೆಯುವದೆಂದರೆ ಪಂಡಿತಾಚಾರ್ಯ ಎಂದು ನಾವು ತೆಗೆದುಕೊಳ್ಳಬಹುದು. ಆತನು ಹುಟ್ಟಿದ್ದು ಸಿಂಹಪುರದಲ್ಲಿ. ಆರಾದಲ್ಲಿದ್ದ ಕನ್ನಡ ಟೀಕೆಯ ಹಸ್ತಪ್ರತಿಯಲ್ಲಿ ಸಿಂಹಪುರವೆಂದರೆ ಚಿಟ್ಟಾಂಬೂರ್ ಎಂದು ಅರ್ಥ ಕೊಡಲ್ಪಟ್ಟಿದೆ. ಇದು ತಮಿಳುನಾಡಿನ ಈಗಿನ ಚಿತ್ತಾಮೂರ್. ಅಲ್ಲಿ ಇಂದಿಗೂ ಒಂದು ಜೈನ ಮಠವಿದೆ. ಅವರು ಶ್ರವಣಬೆಳಗೊಳದಲ್ಲಿ ಭಟ್ಟಾರಕರಾಗಿದ್ದುದರಿಂದ ಅವರಿಗೆ ಚಾರುಕೀರ್ತಿ ಎಂಬ ವಿಶೇಷಣವು.

ಆರಾಪ್ರತಿಯ ಪುಷ್ಪಿಕೆಯಲ್ಲಿ ಈ ಚಾರುಕೀರ್ತಿಗೆ ‘ಬಲ್ಲಾಳರಾಯ–ಜೀವ–ರಕ್ಷಾಪಾಲ’ ಎಂದೂ ವಿಶೇಷಣವಿದೆ. ಇದರ ಅರ್ಥವನ್ನು ನಾವು ಅರಿಯಬೇಕಾಗಿದೆ. ಶ್ರವಣಬೆಳಗೊಳದ ಎರಡು ಶಿಲಾಲೇಖಗಳಲ್ಲಿ 254 (105) [ಕ್ರಿ.ಶ. 1398] ಮತ್ತು 258 (108) [ಕ್ರಿ.ಶ. 1432] ಸ್ಥಾನೀಯ ಮಠದ ಗುರುಗಳಾದ ಚಾರುಕೀರ್ತಿ ಪಂಡಿತರು ಹೊಯ್ಸಳ ದೊರೆಯಾದ ಮೊದಲನೆಯ ಬಲ್ಲಾಳನನ್ನು (1100–

Sri Vidyabharathi Book Centre, Sringeri

CC-O. In Public Domain. Digitized by eGangotri

1106) ಒಂದು ಭಯಂಕರ ರೋಗದಿಂದ ಬಿಡುಗಡೆ ಮಾಡಿದರು. ಆದ್ದರಿಂದ ಅವರಿಗೆ ಬಲ್ಲಾಳರಾಯ ಜೀವ ರಕ್ಷಕರೆಂಬ ಬಿರುದು ದೊರೆಯಿತು (E.C. Vol. II, ಬೆಂಗಳೂರು, 1923, ಪ್ರಸ್ತಾವನೆ, ಪು. 31, 63). ಈ ಸಂಗತಿಯು ತುಸು ಬೇರೆ ವಿವರಗಳಲ್ಲಿ ಶಕ 1515ರ ಅಥವಾ ಕ್ರಿ.ಶ. 1592–93 ಬಿಳಿಗಿ ಶಿಲಾಲೇಖದಲ್ಲಿಯೂ ದೊರೆಯುತ್ತದೆ (ನೋಡಿ : ಶ್ರೀ ಪಂಜೆಯವರ ನೆನಪಿಗಾಗಿ, ಪುತ್ತೂರು, 1952, ಭಾಗ 2, ಪುಟ 18, 19). ಇಲ್ಲಿ ಗುರುಗಳ ಹೆಸರು ಚಾರುಕೀರ್ತಿಪಂಡಿತದೇವಾಚಾರ್ಯ ಎಂದು ಹೇಳಿದೆ. ಶ್ರುತಕೀರ್ತಿ ದೇವರು ಅವರ ಉತ್ತರಾಧಿಕಾರಿ ಶಿಷ್ಯರು. ಕ್ರಿ. ಶ. 1189 ರಲ್ಲಿ ಮುಗಿದ ಚಂದ್ರಪ್ರಭ ಪುರಾಣವನ್ನು ತಮ್ಮ ಶಿಷ್ಯನಾದ ಅಗ್ಗಳನಿಂದ ಬರೆಸಿದರು (ಕ. ಕ, ಚ. Vol. I, ಪು. 323 ಇತ್ಯಾದಿ, ಬೆಂಗಳೂರು, 1961).

ಪಂಡಿತಾಚಾರ್ಯನು ಗೀತವೀತರಾಗವನ್ನು ಶ್ರವಣಬೆಳಗೊಳದಲ್ಲಿ ಬಾಹುಬಲಿ ಜಿನನ (ಪ್ರಸಿದ್ಧ ಗೊಮ್ಮಟೇಶ್ವರನ) ಪವಿತ್ರ ಸಾನ್ನಿಧ್ಯದಲ್ಲಿ ಬರೆದನು. ಆತನು ತಾನು ಕುಂದಕುಂದಾನ್ವಯ, ಪುಸ್ತಕಗಚ್ಛ, ದೀಶೀಗಣದವನೆಂದು ಹೇಳಿಕೊಂಡಿದ್ದಾನೆ. ತನ್ನ ಈ ಗ್ರಂಥದ ಹೆಸರನ್ನು ಮೂರು ವಿಧವಾಗಿ ಹೇಳಿದ್ದಾನೆ: 1. ಗೀತವೀತರಾಗ ಪ್ರಬಂಧ, 2. ಋಷಭನಾಥವರಚರಿತ ಮತ್ತು 3. ಗೀತವೀತರಾಗ. ಇದರ ಅಧಿಕಾರಗಳ ಹೆಸರು ಪ್ರಬಂಧ, ಮತ್ತು ಇಲ್ಲಿ ಹೇಳಿರುವುದು ಋಷಭನಾಥರ ಚರಿತೆ. ಆದ್ದರಿಂದ ಈ ಗ್ರಂಥನಾಮಗಳು ಅನ್ವರ್ಥವಾಗಿವೆ. ಗಾಂಗೇಯ ವಂಶದ ರಾಜಪುತ್ರನಾದ ದೇವರಾಜನ ಅನುರೋಧದಿಂದ ಈ ಗ್ರಂಥವನ್ನು ತಾನು ರಚಿಸಿದೆನೆಂದು ನಿರ್ದೇಶಿಸುತ್ತಾನೆ. ಈ ಸಂಗತಿಗಳನ್ನು ನಾವು ಕೆಳಗಿನ ಶ್ಲೋಕಗಳಿಂದ ಗುರ್ತಿಸಬಹುದು:

ಗಾಂಗೇಯ ವಂಶಾಂಬುಧಿ ಪೂರ್ಣಚಂದ್ರೋ
ಯೋ ದೇವರಾಜೋಽಜನಿ ರಾಜಪುತ್ರಃ ।
ತಸ್ಯಾನುರೋಧೇನ ಚ ಗೀತವೀತ
ರಾಗಪ್ರಬಂಧಂ ಮುನಿಪಶ್ಚಕಾರ ॥ 13 ॥
ದ್ರಾವಿಡದೇಶವಿಶಿಷ್ಟೇ ಸಿಂಹಪುರೇ ಲಬ್ಧಶಸ್ತಜನ್ಮಾಸೌ,
ಬೆಳಗೊಳಪಂಡಿತವರ್ಯಶ್ಚಕ್ರೇ ಶ್ರೀ ವೃಷಭನಾಥಚರಿತಮ್ ॥ 14 ॥

ಸ್ವಸ್ತಿಶ್ರೀ ಬೆಳ್ಗೊಳೇ ದೋರ್ಬಲಿಜಿನನಿಕಟೇ ಕುಂದಕುಂದಾನ್ವಯೇನೋ
ಭೂಸ್ತುತ್ಯಃ ಪುಸ್ತಕಾಂಶುಃ ಶ್ರುತಗುಣಭರಣಃ ಖ್ಯಾತದೇಶೀಗಣಾರ್ಯಃ ।
ವಿಸ್ತೀರ್ಣಾಶೇಷರೀತಿಸುಗುಣರಸಭೃತಂ ಗೀತಯುಗ್ ವೀತ-ರಾಗಂ
ಶಸ್ತಾದೀಶಪ್ರಬಂಧಂ ಬುಧನುತಮತನೋತ್ ಪಂಡಿತಾಚಾರ್ಯವರ್ಯ : ॥ 36 ॥

ಗೀತವೀತರಾಗದ ರಚನೆಯ ಕಾಲವನ್ನು ಅವನು ಎಲ್ಲಿಯೂ ಹೇಳಿಲ್ಲ. ಇದನ್ನು ನಾವು ಬಾಹ್ಯಪ್ರಮಾಣಗಳಿಂದಲೇ ನಿಶ್ಚಯಿಸಬೇಕು.

1. ಕ್ರಿ.ಶ, 1842–44ರಲ್ಲಿ ಬೊಮ್ಮರಸನು ಇದರ ಮೇಲೆ ಟೀಕೆಯನ್ನು ಬರೆದಿದ್ದಾನೆ, ಮತ್ತು ನಮಗೆ ದೊರೆತ ಗೀತವೀತರಾಗದ ಒಂದು ಪ್ರತಿಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಿ.ಶ. 1758 ರಲ್ಲಿ ಬರೆಯಲ್ಪಟ್ಟಿದೆ. ಆದ್ದರಿಂದ ಗೀತವೀತರಾಗವು 1758 ಕ್ಕಿಂತ ಪ್ರಾಚೀನ.

2. ಜಿನಸೇನನ ಪಾರ್ಶ್ವಾಭ್ಯುದಯದ (ಮುಂಬಯಿ, 1909) ಮೇಲೆ ಸಂಸ್ಕೃತ ಟೀಕೆಯ ಕರ್ತನು ತನ್ನ ಹೆಸರನ್ನು ಪಂಡಿತಾಚಾರ್ಯ ಯೋಗಿರಾಜ್ ಎಂದು ಹೇಳುತ್ತಾನೆ. ಬೆಳಗೊಳದೊಡನೆ ಆತನು ತನ್ನ ಸಂಬಂಧವನ್ನು ವರ್ಣಿಸುತ್ತಾನೆ:

> ಶ್ರೀಮದ್ ಬೆಳಗುಳ ವಿಂಧ್ಯಾದ್ರಿಪ್ರೋಲ್ಲಸದ್ಗೋರ್ಜಲೀಶಿನಃ ।
> ಶ್ರೀಪಾದಾಂಬುಜಮೂಲಸ್ಥಃ ಪಂಡಿತಾಚಾರ್ಯ ಯೋಗಿರಾಟ್ ॥
> ತನ್ಮುನೀಂದ್ರಮತಿಪ್ರೌಢಪ್ರಕಟೀಕರಣೋತ್ಸುಕಃ ।
> ತದ್ವ್ಯಾಖ್ಯಾಂ ಪ್ರಾರ್ಥಿತಶ್ಚಕ್ರೇ ನಿಜಸುಂದರಸೂನುನಾ ॥

ಇದೆಲ್ಲ ಗೀತವೀತರಾಗದಲ್ಲಿಯ ವರ್ಣನೆಗೆ ಹೋಲುತ್ತದೆ.

ಪಂಡಿತಾಚಾರ್ಯ ಯೋಗಿರಾಜ್ ಇವನೂ ಶ್ರವಣಬೆಳಗೊಳದ ಜೈನಮಠದ ಗುರುವೆ. ಆದ್ದರಿಂದ ಗೀತವೀತರಾಗವನ್ನು ಬರೆದ ಪಂಡಿತಾಚಾರ್ಯನೇ ಪಾರ್ಶ್ವಾಭ್ಯುದಯದ ಮೇಲೆ ಟೀಕೆಯನ್ನು ಬರೆದಿರುವುದೇ ಸಂಭವನೀಯ. ಗೀತವೀತರಾಗವನ್ನು ಬರೆದಾಗ ಆತನು ತುಸುಕಾಲದ ಹಿಂದೆಯೇ ಭಟ್ಟಾರಕನಾಗಿರಬಹುದು. ಆದ್ದರಿಂದ ಅವನಿಗೆ ಅಭಿನವ ಚಾರುಕೀರ್ತಿ ಎಂದು ಬಿರುದು ಒಪ್ಪುತ್ತದೆ. ಮುಂದೆ ಹೆಚ್ಚು ವಯಸ್ಸಾದ ಮೇಲೆ ಆತನು ತನ್ನ ಶ್ರೇಷ್ಠತಮ ಯೋಗಾಭ್ಯಾಸದ ಮೂಲಕ ಯೋಗಿರಾಜ್ ಎಂದು ಪ್ರಸಿದ್ಧನಾದನು ಮತ್ತು ಆಗ ಆತನ ಶಿಷ್ಯನು ಪಟ್ಟಕ್ಕೆ ಬಂದಿರಬೇಕು. ತನ್ನ ಸೂನು ಅಂದರೆ ಪಟ್ಟಕ್ಕೆ ಬಂದ ಶಿಷ್ಯನ ವಿನಂತಿಯ ಮೇಲೆ ಈ ಟೀಕೆಯನ್ನು ಬರೆದನು. ಈ ಟೀಕೆಯ ಕಾಲ ಶಕ 1321 ಅಂದರೆ ಕ್ರಿ.ಶ. 1399ರ ನಂತರದ್ದು. ಯಾಕೆಂದರೆ ಈ ಟೀಕೆಯಲ್ಲಿ ಎರಡನೇ ಹರಿಹರನ ಕಾಲದಲ್ಲಿ ಆಗಿಹೋದ (ಶಕ 1321) ಇರುಗದಂಡನಾಥನ 'ನಾನಾರ್ಥ ರತ್ನಮಾಲಾ' ಇದರ ಉಲ್ಲೇಖಗಳು ಬರುತ್ತವೆ. ಆದ್ದರಿಂದ ನಾವು ಪಂಡಿತಾಚಾರ್ಯರ ಕಾಲವನ್ನು ಕ್ರಿ.ಶ. 1400 ಮತ್ತು ಕ್ರಿ.ಶ. 1758 ಇವೆರಡರ ನಡುವೆ ಇಡಬೇಕು.

3. ಮೇಲೆ ನಿರ್ದೇಶಿಸಿದ ಕ್ರಿ.ಶ. 1398 ಮತ್ತು 1492ರ ಶ್ರವಣಬೆಳಗೊಳದ, 254 (105), ಮತ್ತು 258 (108) ಎರಡು ಶಿಲಾಲೇಖಗಳಲ್ಲಿ ಈ ಗ್ರಂಥಕರ್ತರ ಬಗ್ಗೆ ಮತ್ತೂ ಹಲವು ಸಂಗತಿಗಳು ದೊರೆಯುತ್ತವೆ. ದಿವಂಗತ ಗುರುವಿನ ಸ್ಮರಣಾರ್ಥವಾಗಿ ಕ್ರಿ.ಶ. 1398ರಲ್ಲಿ ಅಭಿನವ ಪಂಡಿತಾಚಾರ್ಯರು ಒಂದು ಲೇಖವನ್ನು ಕೆತ್ತಿಸಿದರು. ಅದರಲ್ಲಿ 1432ರಲ್ಲಿ ಸಲ್ಲೇಖನವನ್ನು ಸ್ವೀಕರಿಸಿದ ಅವರ ಶಿಷ್ಯ ಶ್ರುತಮುನಿಯು ಅವರನ್ನು ಪಂಡಿತೇಂದ್ರ ಯೋಗಿರಾಜ್ ಎಂದು ಸಂಬೋಧಿಸುತ್ತಾನೆ. ಅಂದರೆ ಪಂಡಿತಾಚಾರ್ಯರ ಜೀವನ ಕಾಲದ ಎರಡು ವರ್ಷಗಳು ಕ್ರಿ.ಶ. 1398 ಮತ್ತು 1432 ನಮಗೆ ದೊರೆಯುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

4, ಗಾಂಗೇಯ ವಂಶದ ದೇವರಾಯನ ದೆಸೆಯಿಂದ ಗೀತವೀತರಾಗವು ಬರೆಯಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರವಣಬೆಳಗೊಳದ ಎರಡು ಶಿಲಾಲೇಖಗಳನ್ನು ನಾವು ಅವಲೋಕಿಸಬಹುದು (No. 337–41), ಇವುಗಳಲ್ಲಿ ಮೂಲಸಂಘ ದೇಶೀಯಗಣ ಪುಸ್ತಕಗಚ್ಛ ಮತ್ತು ಕುಂದಕುಂದಾನ್ವಯದ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ ಇವರ ನಿರ್ದೇಶವು ಬರುತ್ತದೆ. ಕೆಲವೆಡೆಗಳಲ್ಲಿ ಇವರ ಹೆಸರು ಸಂಕ್ಷೇಪವಾಗಿ ಶ್ರೀಮತ್ ಪಂಡಿತಾಚಾರ್ಯ ಅಥವಾ ಶ್ರೀಮತು ಪಂಡಿತದೇವರು ಎಂದು ಬರುತ್ತದೆ. 337ನೇ ಶಿಲಾಲೇಖದಲ್ಲಿ ಅವರ ಶಿಷ್ಯಳಾದ ಭೀಮಾದೇವಿಯ ನಿರ್ದೇಶವಿದೆ. ಅವಳು ದೇವರಾಯ ಮಹಾರಾಯರ ರಾಣಿ. ಈ ದೇವರಾಯನೇ ಗೀತವೀತರಾಗವನ್ನು ಬರೆಯಿಸಿದ ದೇವರಾಯನಾಗಿರಬಹುದು. ಆರ್. ನರಸಿಂಹಾಚಾರ್ಯರು [E.C. Vol. II, ಪ್ರಸ್ತಾವನೆ, ಪು. 29] ಹೇಳುವಂತೆ ಈ ದೇವರಾಯನು ಬಹುಶಃ ವಿಜಯನಗರದ ದೊರೆಯಾದ ಮೊದಲನೆ ದೇವರಾಯನಿರಬೇಕು (ಕ್ರಿ.ಶ. 1406–16) ಮತ್ತು ಈ ಶಿಲಾಶಾಸನದ ಕಾಲವು ಸಾಧಾರಣವಾಗಿ ಕ್ರಿ.ಶ. 1410. ಗೀತವೀತರಾಗದಲ್ಲಿ ದೇವರಾಜನು ರಾಜಪುತ್ರನೆಂದು ಕರೆಯಲ್ಪಟ್ಟಿದ್ದಾನೆ. ಇದರ ಅರ್ಥವನ್ನು ನಾವು ಅಕ್ಷರಶಃ ತೆಗೆದುಕೊಂಡರೆ ಗೀತವೀತರಾಗದ ರಚನೆಯ ಕಾಲ ಸು. ಕ್ರಿ.ಶ. 1400 ಮತ್ತು ಅನಂತರ ಗ್ರಂಥಕಾರನು ಯೋಗಿರಾಜ್ ಎಂದು ಪ್ರಸಿದ್ಧನಾದ ಮೇಲೆ ಪಾರ್ಶ್ವಾಭ್ಯುದಯ ಟೀಕೆಯು ಸು. 1432 ರಲ್ಲಿ ಬರೆದಿರಬಹುದು. ಯಾಕೆಂದರೆ ಆ ವರ್ಷದ ಶಿಲಾಲೇಖದಲ್ಲಿ ಯೋಗಿರಾಜ್ ಎಂಬ ನಿರ್ದೇಶವು ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಸ್. ಎಂ. ವೃಷಭೇಂದ್ರಸ್ವಾಮಿ

ಅಲ್ಲಮಪ್ರಭುದೇವನ ಕಿರುಕೃತಿ ಮತ್ತು ಪದಗಳು

ಅಲ್ಲಮಪ್ರಭುದೇವ ಶ್ರೇಷ್ಠ ದಾರ್ಶನಿಕ, ಅನುಭಾವಿ. ಆತ ಶಿವಾದ್ವೈತ ಸಿದ್ಧಿಯ ಶರಣ, ಶಿವಶರಣ ಸಮುದಾಯದ ಆರಾಧ್ಯ ಮೂರ್ತಿ. ಆಧ್ಯಾತ್ಮಿಕ ಶಕ್ತಿ. ಆತನ ಸ್ವಯ ವಚನಗಳು ಅತೀತವಾದ ಅನುಭವಗಳ ಅಭಿವ್ಯಕ್ತಿಗಳಾದ್ದರಿಂದ, ಅವುಗಳಲ್ಲಿ ವಿನೂತನತೆ. ವಿಶಿಷ್ಟತೆ, ಅನ್ಯಾದೃಶತೆ ಮೈದೋರಿದೆ. ಅಂಥ ವಚನಗಳು—ಅರ್ಥ, ಭಾವ ಸ್ಪಷ್ಟವಾಗದಿದ್ದರೂ—ಸಾಹಿತ್ಯದ ಅಭ್ಯಾಸಿಗಳಿಗೆ ಪರಿಚಿತವಾಗಿವೆ. ಪ್ರಭುದೇವನ "ದಿವ್ಯ ವ್ಯಕ್ತಿತ್ವ" ಹಾಗೂ 'ದಿವ್ಯದರ್ಶನ'ದ ಕನ್ನಡಿಗಳಾಗಿವೆ. ಅಲ್ಲಮಪ್ರಭುದೇವನ ಈ ಸ್ವಯ ವಚನಗಳಲ್ಲದೆ, ಆತನ ಹೆಸರಿನಲ್ಲಿ ಇತರ ಕಿರುಕೃತಿಗಳು ಪ್ರಸಿದ್ಧವಿವೆ. ಮಂತ್ರಗೋಪ್ಯ[1] ವೆಂಬ ಅನುಭಾವಕೃತಿ ಅವುಗಳಲ್ಲಿ ಮುಖ್ಯವಾದುದು. ಇದು ಪದ–ಗೀತ ರೂಪದಲ್ಲಿರುವುದರಿಂದ, ಮಂತ್ರ ಮಹಿಮೆ ಹಾಗೂ ಯೋಗ ಮಹತ್ವ ಬಿಂಬಿಸುತ್ತಿರುವುದರಿಂದ, ಇದಕ್ಕೆ 'ಪದಮಂತ್ರಗೋಪ್ಯ', 'ಪರಮಯೋಗ ಅಥವಾ ಪಂಚಾಕ್ಷರಯೋಗ', 'ಪರಮಯೋಗ ಮಂತ್ರಗೋಪ್ಯ' ಮುಂತಾದ ಹೆಸರುಗಳಿವೆ. ಇಪ್ಪತ್ತೇಳು ಚೌಪದಿಗಳು ಹಾಗೂ ಒಂದು ಪಲ್ಲವವಿರುವ ಈ ಅಧ್ಯಾತ್ಮಾನುಭವದ ಹಾಡುಗಬ್ಬ ಅಲ್ಲಮಪ್ರಭುದೇವರು ಸಿದ್ಧರಾಮನಿಗೆ ತತ್ವವಿವೇಕ ಬೋಧಿಸಿದ ರೂಪದಲ್ಲಿ ರಚಿತವಾಗಿದೆ. ಇದಕ್ಕೆ ಎರಡು ವ್ಯಾಖ್ಯಾನಗಳಿವೆ.[2] ಅತೀಂದ್ರಿಯವಾದ ಶಿವಾನುಭಾವಯೋಗದ ರಹಸ್ಯಾನುಭವಗಳನ್ನು ಬೆಡಗಿನ ನುಡಿರೂಪಕದಲ್ಲಿ ಬಿಂಬಿಸಲಾಗಿದೆ.

ಉರಿಯ ಬೊಂಬೆಯ ಮಾಡಿ, ಸಿರಿಯ ಸೀರೆಯನುಡಿಸಿ,
ಪರಿಪರಿಯ ಕೇರಿ ಕೇರಿಯಾಲಿ ಸುಳಿಸಿ,
ಉರಿಯ ಬೊಂಬೆಯ ನೆರೆದು, ಸಿರಿಯ ಸೀರೆಯ ಸೆಳೆದು,
ಪರಮ ಪರಿಣಾಮದೊಳಗೋಲಾಡಿದೆ : :

ಎಂಬಲ್ಲಿ ಆತ್ಮ–ಪರಮಾತ್ಮ–ದೇಹ–ಪ್ರಪಂಚದ ಮೂಲ ಅನುಭವವನ್ನು ರೂಪಕ ವಿಧಾನದಿಂದ ವರ್ಣಿಸಲಾಗಿದೆ.

---

1 ಶಿವದಾಸ ಗೀತಾಂಜಲಿ, ಪು. 224.

2 ಸಿದ್ಧರಾಮ ಸಾಹಿತ್ಯ ಸಂಗ್ರಹ, ಶ್ರೀ ಚ. ಉತ್ತಂಗಿ, ಪು. 115.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಜ್ಜೆಯಿಲ್ಲದ ಮೃಗವ, ಹಲವು ದ್ವೀಪಕೆ ಹೋಗಿ
ವೆಜ್ಜವಿಲ್ಲದ ಮಣಿಯ ನೋಡಿ--ಕಂಡು.
ಪ್ರಜ್ವಲಿಸುವ ಬೆಳಗಿನ ದಾರವನೆ ಹೊಸೆದು
ವೆಜ್ಜವಿಲ್ಲದ ಮಣಿಯ ಪವಣಿಸಿದನು : :

ಎಂಬ ಆತ್ಮಾನುಭವ, ಮೃಗ–ದ್ವೀಪ–ಮಣಿ–ದಾರಗಳ ರೂಪಕ ವಿಧಾನದಲ್ಲಿ ಅಭಿವ್ಯಕ್ತಗೊಂಡಿದೆ ; ಆಧ್ಯಾತ್ಮಿಕವಾದ ಅರ್ಥ ಮೈದುಂಬಿ ನಿಂತಿದೆ. ಜನ್ಮಜನ್ಮಾಂತರಗಳ ಆತ್ಮಸಾಧನೆ, ಹಾಗೂ ಸುಸೂಕ್ಷ್ಮ ಸಾಹಸಗಳ ವರ್ಣನೆ ಇಲ್ಲಿದೆ. ಒಟ್ಟಿನಲ್ಲಿ, ಮಂತ್ರ ಗೋಪ್ಯ ಬೆಡಗಿನ ವಚನಗಳ ಮಾದರಿಯ, ಆಧ್ಯಾತ್ಮಿಕ ಹಾಡುಗಬ್ಬವಾಗಿದೆ. ಪ್ರಚಲಿತವಿರುವ ಇತರ ಶರಣರ ಮಂತ್ರಗೋಪ್ಯಗಳಂತೆ[3] ಶಿವಯೋಗ ಸಾರ ಸಾರಾಯದ ಕೆನೆಯಾಗಿದೆ. ಇಲ್ಲಿ ಪ್ರಭುದೇವನ ವಿಶೇಷಾನುಭವ. ವಿಶೇಷಾಭಿವ್ಯಕ್ತಿಯಾಗಿ ಮೂಡಿಬಂದಿರುವಂತೆ ತೋರುತ್ತದೆ. ಕಲ್ಲುಮಠದ ಪ್ರಭುದೇವನ ವ್ಯಾಖ್ಯಾನ ಈ ಅನುಭವ-ಅಭಿವ್ಯಕ್ತಿಗಳ ಸಕೀಲವನ್ನು ಸರಳವಾಗಿ ಬಿಡಿಸಿ ಬಿಸ್ನಣಗೈದಿದೆ.

ಅಲ್ಲಮಪ್ರಭುದೇವನ ಕೃತಿಗಳೆಂದು ಪ್ರತೀತವಾಗಿರುವ 'ಸೃಷ್ಟಿಯ ವಚನ' ಹಾಗೂ 'ಮಂತ್ರಮಹಾತ್ಮ್ಯ' ಗಳು ಇದೇ ಬಗೆಯ ತಾತ್ವಿಕಕೃತಿಗಳಾಗಿವೆ. ಇವೆಲ್ಲ ಶಾಸ್ತ್ರೀಯವಾಗಿ ಸಂಪಾದನೆಗೊಳ್ಳುವವರೆಗೆ, ನಿರ್ಣಾಯಕವಾದ ಮಾತುಗಳನ್ನು ಆಡುವುದು ಕಷ್ಟ. ಅಂಥ ಸಂಪಾದನೆ ಇನ್ನೂ ಆಗಬೇಕಾಗಿರುವ ಕೆಲಸ. ಅಂತೆಯೇ, ಗುಹೇಶ್ವರನ ಅಂಕಿತ (?)ವಿರುವ ಇಪ್ಪತ್ತಾರು ಪದ (ಗೀತ–ಸ್ವರವಚನ–ಸ್ಥಲ ನಿರ್ದೇಶನ ಪದಗಳು) ಶಿವದಾಸ ಗೀತಾಂಜಲಿಯಲ್ಲಿ ಪ್ರಕಟವಾಗಿವೆ.[4] ಇವು ವಿವಿಧ ತಾಳ–ಲಯ–ರಾಗ–ಛಂದಗಳಲ್ಲಿ ದೊರೆಯುತ್ತಿವೆ. ಪ್ರಭುದೇವನ ವಚನಗಳ ಛಾಯೆ ಇಲ್ಲದೆ. ಏಕ ಪ್ರಕಾರವಾದ ಅಂಕಿತವೂ ಇಲ್ಲ. ಈ ಹಾಡುಗಳ ಮೂಲ ಮಾತೃಕೆಯಾದ 'ಏಕೋತ್ತರ ಶತಸ್ಥಲ'ದ ಹಿನ್ನೆಲೆಯಲ್ಲಿ ಈ 'ಸ್ವರವಚನ' ಗಳನ್ನೂ ಅವುಗಳ ರಚನೆಯ ಉದ್ದೇಶವನ್ನೂ ಅರಿಯುವುದು ಸಾಧ್ಯ. ಪ್ರಭುದೇವನ ಪ್ರಸಿದ್ಧ ವಚನಗಳ ಶೈಲಿಗೂ, ಈ ಹಾಡುಗಳ ಕಾವ್ಯ ಶೈಲಿಗೂ ಇರುವ ಅಂತರಕ್ಕೆ ಕಾರಣ ಅಲ್ಲಿ ದೊರೆಯುತ್ತಿದೆ. ಶರಣರ ಮೂಲವಚನಗಳಲ್ಲಿ ಕೆಲವನ್ನಾದರೂ 'ತಾಳ–ಮಾನ–ಸರಿಸ' ಕ್ಕೆ ಹೊಂದಿಸಿ ಹಾಡುವ ಪರಿಪಾಠ ಬೆಳೆದು ಬಂದಂತಿದೆ.

---

3 ಶ್ರೀ ಡಿ. ಎಲ್. ನರಸಿಂಹಾಚಾರ್ಯರಿಗೆ ಅರ್ಪಿಸಿದ' ಉಪಾಯನ' ಗ್ರಂಥದಲ್ಲಿ ಶ್ರೀ ವೀ. ರು. ಕೊಪ್ಪಳ ಅವರು ಈ ಎಲ್ಲ 'ಮಂತ್ರಗೋಪ್ಯ'ಗಳ ಇತಿಹಾಸ ಹಾಗೂ ಅರ್ಥ ವಿವರಣೆ ಮಾಡುವ ಅಮೂಲ್ಯ ಪ್ರಯತ್ನ ಮಾಡಿದ್ದಾರೆ.

4 ಅಲ್ಲಮನ ವಚನ ಚಂದ್ರಿಕೆಯಲ್ಲಿ ಇವು 1295–1321ನೆಯ ವಚನಗಳಾಗಿ ಪ್ರಕಟವಾಗಿವೆ. ಈ ಸ್ವರವಚನಗಳ ಅಧಿಕೃತತೆ ಹಾಗೂ ಪ್ರಕ್ಷಿಪ್ತತೆಯ ಪ್ರಶ್ನೆ ಇನ್ನೂ ಬಗೆಹರಿಯಬೇಕಾಗಿದೆ. ಚಾರಿತ್ರಿಕವಾಗಿ ಹಾಗೂ ಸಾಹಿತ್ಯಿಕ ಶಿಲ್ಪವಾಗಿ ಈ ಹಾಡುಗಳ ಶಾಸ್ತ್ರೀಯ ಅಧ್ಯಯನ ಆಗಬೇಕಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಗದ್ಯ-ಪದ್ಯ ಗಂಧಿ'ಯಾದ ಅನುಭಾವವಚನ, ರಾಗಬದ್ಧವಾದ ಹಾಡಾಗಿ ಬೆಳೆದಾಗ, ಭಾವವಿಸ್ತರ. ಹಾಗೂ ಶೈಲಿಯು ಶೈಥಿಲ್ಯ ಮೂಡುವುದು ಸಹಜ. ಹಾಗೆಯೇ, ಏಕೋತ್ತರ ಶತಸ್ಥಲದಲ್ಲಿರುವಂತೆ, ಸ್ಥಲಕಟ್ಟಿಗೆ ಹೊಂದುವ ಶರಣರ 7–8 ವಚನಗಳ ಭಾವವನ್ನು ಸಂಕಲಿಸಿ, ಒಂದು ಹಾಡಿನ ಕಟ್ಟಿಗೆ ಅಳವಡಿಸಿದಾಗ, ಅಂಥ ರಚನೆಯಲ್ಲಿ—ವಚನಗಳಿಗಿಂತ ಭಿನ್ನವಾದ—ಮಾತಿನ ರೀತಿ, ಶೈಲಿ ಅಳವಡುವುದು ಅನಿವಾರ್ಯ. ಹೀಗಾಗಿ, ಸೂಕ್ಷ್ಮವಾದ ಅಭ್ಯಾಸಕ್ಕೆ ಈ ವಚನ ಹಾಗೂ 'ಸ್ಥಲ ನಿರ್ದೇಶನ ಪದ' ಗಳಿಗಿರುವ ಅಂತರ ಸ್ಪಷ್ಟವಾಗುತ್ತದೆ. ಆದರೆ...... "ಹಾಡುಗಳು ಆಯಾ ಬಸವಾದಿ ಪ್ರಮಥರಿಂದ ರಚಿತವಾದ ಗೇಯಕೃತಿಗಳು ಎಂಬುದರಲ್ಲಿ ಸಂಶಯದ ಲವಲೇಶವಾದರೂ ಅನುಚಿತ, ಅಸಮಂಜಸ, ಆಧಾರಹೀನ"[5] ಎಂಬ ಡಾ. ಎಲ್. ಬಸವರಾಜು ಅವರ ಸಂಶೋಧನಾತ್ಮಕ ನಿಲುಮೆಯನ್ನು 'ನಿಷ್ಪಕ್ಷಪಾತವಾಗಿ, ಆಧಾರಪೂರ್ವಕವಾಗಿ, ಪ್ರಾಮಾಣಿಕವಾಗಿ ವಿವೇಚನೆ' ಮಾಡಿದ. ಹಾಗೂ ಪ್ರೌಢದೇವರಾಯನ ಕಾಲದ ಸಾಹಿತ್ಯದ ವ್ಯಾಪಕ ಅಭ್ಯಾಸ ಕೈಕೊಂಡ ಡಾ. ಶಿವಾನಂದ ವಿರಕ್ತಮಠ ಅವರ "......ಅವು ಸ್ವತಂತ್ರವಾದ ಅನುಭವದ ಹಾಡುಗಳಲ್ಲಿ, ನೂರೊಂದು ಸ್ಥಲ ನಿರ್ದೇಶನಕ್ಕಾಗಿಯೇ ರಚಿತವಾದ ವಚನಾಂತರ್ಗತ ಸ್ವರವಚನಗಳು.[6] ......ಸೂಕ್ಷ್ಮವಾಗಿ ಪರಿಶೀಲಿಸಿದರೆ ನೂರೊಂದು ವಿರತ, ನೂರೊಂದು ಸ್ಥಲ. ನೂರೊಂದು ಸ್ಥಲಸೂತ್ರ, ನೂರೊಂದು ಸ್ಥಲ ವಚನ—ಇವುಗಳ ಉದಯ ಕಾಲದಲ್ಲಿಯೇ ಮಹಾಲಿಂಗದೇವ ಹಾಗೂ ಜಕ್ಕಣಾರ್ಯರಿಂದ ನೂರೊಂದು ಸ್ಥಲ ನಿರ್ದೇಶನ ಪದಗಳೂ ಬೆಳಕಿಗೆ ಬಂದು, ನಂತರದಲ್ಲಿ ಗಾಢ ಪ್ರಭಾವವನ್ನು ಪರಿಮೂಡಿಸಿದುವು"[7] ಎಂಬ ಅಭಿಪ್ರಾಯಗಳಲ್ಲಿ ಸತ್ಯಾಂಶವಿದೆ. ಗೀತಗಳಂತೆ ಹಾಡಬಲ್ಲ ಶಿವಶರಣರ ಅನುಭಾವ ವಚನಗಳಿಂದ ಸ್ಫೂರ್ತಿಪಡೆದು[8] ಆ ವಚನಗಳ ಭಾವವನ್ನೇ ಹಾಡಾಗಿ ಹಿಗ್ಗಿಸಿ, ಅಥವಾ ವಿವಿಧ ವಿಚಾರಗಳನ್ನು ಹಾಡಿನಲ್ಲಿ ಸಂಗ್ರಹಿಸಿ, ಹಾಡುಗಬ್ಬದ ನವ ವಸಂತವನ್ನು ತಂದವರು ವಚನ ಸಾಹಿತ್ಯದ ಪುನರುತ್ಥಾನಯುಗದ ಏಕೋತ್ತರ ಶತಸ್ಥಲ ಕಟ್ಟುಗಳನ್ನು ನಿಯೋಜಿಸಿದ ಅನುಭಾವಿ ಶರಣರು ಹಾಗೂ ಶೂನ್ಯಸಂಪಾದನಕಾರರು. ಸುಪ್ರಸಿದ್ಧ ಗೇಯಕೃತಿಕಾರರಾದ

---

5 ಶಿವದಾಸ ಗೀತಾಂಜಲಿ: ಪೀಠಿಕೆ. ಪು. 89.

6–7 ಪ್ರೌಢದೇವರಾಯನ ಕಾಲದ ಸಾಹಿತ್ಯ (ಪಿಎಚ್.ಡಿ. ಪ್ರಬಂಧ). ಡಾ. ಶಿವಾನಂದ ವಿರಕ್ತಮಠ. ಪು. 253–255.

8 ಪಚ್ಚೆಯ ನೆಲಗಟ್ಟು ಎಂಬ ಶೂನ್ಯಸಂಪಾದನೆಯ ಹಾಡು ಮೊದಲು ವಚನವಾಗಿದ್ದುದನ್ನು ಆಮೇಲಿನ ಸಂಪಾದನಕಾರರು ಹಾಡಿನ ರೂಪಕ್ಕೆ ಇಳಿಸಿಕೊಂಡಿರಬೇಕು. ವಚನಗಳು ಯಾವುವೇ ಆಗಲಿ ಗೀತಜಾತಿಗೆ ಸೇರಿದವುಗಳಲ್ಲ, ಅವು ಸೂಕ್ಷ್ಮ ಸ್ವಚ್ಛಂದ ಲಯದ ಗದ್ಯಕವನಗಳು. ಅವುಗಳಲ್ಲಿ ಭಾವ ಗೀತೆಯ ಮೂಲ ಪ್ರೇರಣೆಯಿದೆ, ಆದರೆ 'ನಿಯತ ಛಂದಸ್ಸಿನ ಇಲ್ಲವೆ ತಾಳಲಯದ ಯೋಜನೆಯಿಲ್ಲ.'—ಕ. ಸಾ. ಚ.—ಡಾ. ರಂ. ಶ್ರೀ. ಮುಗಳಿ (ಪು. 173). ಹರಿದಾಸರ ಹಾಡುಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿದಾಸರಿಗಿಂತ ಪೂರ್ವದಲ್ಲಿಯೇ ಈ ಹಾಡಿನ ಸರ್ವ ಸಾಮರ್ಥ್ಯವನ್ನು ಬಿಂಬಿಸಿರುವ ಅನುಭಾವಪದಗಳು, ಕರ್ನಾಟಕ ಸಂಗೀತಕ್ಕೆ, ಕನ್ನಡ ಛಂದಸ್ಸಿನ ಬೆಳವಣಿಗೆಗೆ, ಗೇಯಕೃತಿಗಳ ರಚನಾ ತಂತ್ರಕ್ಕೆ "ಆದ್ಯ" ವೆಂಬುದರಲ್ಲಿ ಸಂಶಯವೇ ಇಲ್ಲ,

ಶಿವಶರಣರ ಸ್ವಯ ವಚನಗಳ ಭಾವವಿಲಾಸವೇ, ಅವರವೆನ್ನುವ ಹಾಡುಗಳಲ್ಲಿ ಕಾಣುತ್ತಿದೆ. ಅಲ್ಲಮಪ್ರಭುದೇವನ ಉದಾತ್ತ ವ್ಯಕ್ತಿತ್ವ ಹಾಗೂ ಉದಾತ್ತ ತಾತ್ವಿಕ ನಿಲುಮೆ ಈ ಕೆಲವು ಹಾಡುಗಳಲ್ಲಿ ಭಾಸವಾಗುತ್ತಿದೆ. ಶರಣನ ಘನತೆಯನ್ನು 'ಕರ್ಮ ಕಾಯನುಮಲ್ಲ ಬ್ರಹ್ಮ ಮೂರುತಿಯಲ್ಲ! ಪರಬ್ರಹ್ಮವ ನುಡಿವಲ್ಲಿ ತಾನಿಲ್ಲ ನಿರ್ಮೋಹಿ...' 'ಸಾಜನಿತ್ಯನು ತಾನಭೇದ್ಯ ಶರಣ' 'ಭೃಂಗ ನುಂಗಿದ ರುಚಿಯನೊಂದು ಮಾಡಿ ಗುಹೇಶ್ವರಲಿಂಗದ ಹಂಗನಳಿದ ಶರಣ' ಎಂಬ ವರ್ಣನೆಯಲ್ಲಿ ಮೂಡಿಸಲಾಗಿದೆ.[9] ಪ್ರಾಣಲಿಂಗಸ್ಥಳದ ಗುಣ–ವಿಶೇಷಗಳನ್ನು ವಿವರಿಸುವ ಪದದಲ್ಲಿ 'ಅತೀತ ಭಾವವಿಲ್ಲದ ಬಯಲು' 'ಜ್ಞಾನ ಜ್ಯೋತಿ' 'ಎಳೆಯ ಮಾಣಿಕದಂತೆ' ಮುಂತಾದ ಮನೋಜ್ಞ ಅಭಿವ್ಯಕ್ತಿ ಇದೆ.

> ಆಕಾಶದಿಂದತ್ತತ್ತ ಮಾತ ಬಲ್ಲವರಿಲ್ಲ
> ಪಾತಾಳದ ಪ್ರಮಾಣ ಕಾಂಬರಾರೋ......
> ಧರೆಗೆ ನಿದ್ರೆಯು ಇಲ್ಲ, ಉದಕಕ್ಕೆ ಕನಸಿಲ್ಲ
> ಅಗ್ನಿ ಕಳವಳಕೆ ಒಳಗಾಗದೆಂತೊ ;
> ಸುಳಿವ ಪವನನು ತಾನು ತಾಮಸಕ್ಕೊಳಗಾಗ
> ಬಯಲಿಂಗೆ ಭ್ರಮೆಯುಂಟೆ ಗುಹೇಶ್ವರ [10]

ಇಲ್ಲಿ ಅನುಭಾವದ ನಿಲವು ಬಿಂಬಿತವಾಗಿದೆ.

ಇತಿಹಾಸ ಇನ್ನೂ ನಿರ್ದಿಷ್ಟವಾಗಿಲ್ಲ. ನರಹರಿ ತೀರ್ಥರಿಂದ ಈ ಹಾಡಿನ ವಾಙ್ಮಯ ಪ್ರಾರಂಭ ವಾಯಿತೇ, ಅಥವಾ ಈ ಮಾನ್ಯತೆ ಶ್ರೀಪಾದರಾಯರಿಗೆ ಸಲ್ಲಬೇಕೇ ಎನ್ನುವ ಬಗೆಗೆ '...ಸಂಶೋಧನೆ ನಡೆಯಬೇಕಾಗಿದೆ. ಸದ್ಯದಮಟ್ಟಿಗೆ ನರಹರಿ ತೀರ್ಥನೇ ಮೊದಲಿಗನೆಂದು ನಾವು ಗ್ರಹಿಸಿದ್ದೇವೆ' ಎಂದಿದ್ದಾರೆ ಡಾ. ರಂ. ಶ್ರೀ. ಮುಗಳಿ (ಕ. ಸಾ. ಚ., ಪು. 287).

'ರಘುಪತಿತಿಲಕ' ಎಂಬ ಅಂಕಿತವಿರುವ ಎರಡು ಹಾಡುಗಳಲ್ಲಿ 'ಗುಣವಿಶೇಷವೇನೂ ಇಲ್ಲ. ಭಾಷೆಯೂ ನಯರಹಿತವಾಗಿದೆ. ......'ಹಾಡು ಕಟ್ಟುವ ದಾಸಕೂಟದ ಪರಂಪರೆ ನರಹರಿ ತೀರ್ಥರಿಂದಲೇ ಮೊದಲಾಗಿರಬಹುದು (ಕ.ಸಾ.ಚ., ಪು. 222).

ದಾಸಕೂಟಕ್ಕೆ ಹಿರಿಯನೆಂದು ಕೀರ್ತನಕಾರರು ಮೊದಲು ಶ್ರೀಪಾದರಾಯನನ್ನು ನೆನೆದಿರುವುದನ್ನು ನೋಡಿದರೆ ನರಹರಿ ತೀರ್ಥನ ಬದಲು ಅವನೇ ಮೊದಲಿಗನಾಗಿರಬೇಕೆಂದು ತೋರುತ್ತದೆ (ಅದೇ, ಪು. 287). ಒಟ್ಟಿನಲ್ಲಿ, ಡಾ. ಎಲ್. ಬಸವರಾಜು ಅವರ ಶಿವದಾಸ ಗೀತಾಂಜಲಿಯ 'ಪೀಠಿಕೆಯ ಸಂಶೋಧನೆ' ಹಾಗೂ ದಾಸಗೀತಾಂಜಲಿಯ ಸಂಶೋಧನೆ ಸಮರ್ಪಕವಾಗಬೇಕಾಗಿದೆ. ಈ ಎರಡು ಪರಂಪರೆಗಳ ಕಾಲನಿರ್ಣಯ–ಸಂಬಂಧ. ಪ್ರಭಾವ ನಿರ್ಣಯ ಇನ್ನೂ ಆಗಬೇಕಾಗಿದೆ.

[9] ಶಿವದಾಸ ಗೀತಾಂಜಲಿ, 30, ಪು. 43.

[10] ಅದೇ, 32. ಪು. 47.

Sri Vidyabharathi Book Centre, Sringeri

CC-O. In Public Domain. Digitized by eGangotri

'ಪರಮಾನಂದ ಲೀಲೆಯಲಿ ಪರಮಗುರು ಪದವನೆಂದನು
ಪರಮ ಸುಖದೊಳಗೋಲಾಡುವ ಪರಂಜ್ಯೋತಿ ಪರಾಪರನು'

ಎಂಬ 'ಪಲ್ಲವಿ'ಯಲ್ಲಿ ನಿತ್ಯನಿರಂಜನನ ಗುಣ ಸ್ವಭಾವವನ್ನು 'ಅನಾಥನಾಥನು ಅಕಳಂಕಚರಿತನು......ಸಮ್ಯಜ್ಞಾನದಲ್ಲಿ ಸ್ವತಂತ್ರ ಮಹಿಮೆ.........ಬ್ರಹ್ಮಾಂಡ ಕೋಟಿಯ ಮೀರಿ ನಿಂದನು ಭಾವ ಗುಹೇಶ್ವರನಂತೆ ತಾನಾದ ಶರಣ'[11] ಮುಂತಾಗಿ ಶರಣಸ್ಥಿತಿಗೇರಿದ ಸ್ವಾನುಭವ ಬಿಂಬಿತವಾಗಿದೆ. 'ಸಿಕ್ಕಿದೆ ಬರಿದೆ ಭಾವಕಿ'[12] ಎಂಬ ತಲೆಬರಹದ ಸ್ವರವಚನದಲ್ಲಿ ವಾಙ್ಮನಾತೀತವಾದ ಅನುಭಾವವನ್ನು, ಬೆಡಗಿನ ರೂಪ ದಲ್ಲಿ ವರ್ಣಿಸಲಾಗಿದೆ,

ಬಯಲ ಕಂಭದ ಮೇಲೆ ಬಟ್ಟಮಾಳಿಗೆದಲೆ
ಹವಳಬಳ್ಳಿ ಹಬ್ಬಿತು ನಾಲ್ಕುದೆಸೆಯ,
ಒಳಪೊಕ್ಕು ತುಡುಕುತ ವನಿತೆಗಂಬವ ನೂಕೆ
ಬಳಿಯಲ್ಲಿ ಬಿತ್ತು ಮಾಳಿಗೆದಲೆ ಮುರಿದು

ಮುಂತಾದ ನುಡಿಗಳಲ್ಲಿ ತೋರುವ 'ಕಾಣದರಿವಿನ ಉಯ್ಯಾಲೆ'ಯನ್ನು ಪರಿಭಾವಿಸಿ ದಷ್ಟೂ ಮನೋಹರವಾಗಿದೆ. ಬೆಡಗಿನ ದಿಡಗಿನಲ್ಲಿ ಭೋರ್ಗರೆಯುವ ಭಾವ ಪ್ರವಾಹಕ್ಕೆ ತಲೆದೂಗದವರಾರು? ಪರಬ್ರಹ್ಮದ ಅನುಭವವನ್ನು ಬೆಡಗಿಲ್ಲದೆ ನೇರ ನುಡಿಯಲ್ಲೂ ಬಿಂಬಿಸಲಾಗಿದೆ. ಯೋಗದ ಪರಿಭಾಷೆಯಲ್ಲಿಯೇ ರೂಪಿತವಾದ 'ನೋಡ. ನೋಡ' ಎಂಬ ಅನುಭಾವ ಪದದಲ್ಲಿ[13]

'ಪ್ರಣಯ ಮಂತ್ರವನು ಶಿವಯೋಗಿ ಉಚ್ಚರಿಸುತಿರೆ
ಫಣಿಯೆದ್ದು ಹೆಡೆಯೆತ್ತಿಯಾಡಿತಲ್ಲಾ'

ಎಂದು ವರ್ಣಿಸಿ, ಅದು ಅಣಿಮಾದಿ ಅಷ್ಟಸಿದ್ಧಿಗಳನ್ನು ಮೀರಿದ ಸಿದ್ಧಿ ಎಂಬುದನ್ನು ಅದೇ ಯೋಗದ ನುಡಿಗಡಣದಲ್ಲಿ,

'ಫಣಿಯ ಹೆಡೆಯ ಮಣಿಯ ಮೇಲೊಂದು ಮಣಿಯ
ಎಣಿಸುವಡೆ ದಿನಮಣಿಯ ಕೋಟಿ ತೇಜ;
ಮಣಿಯ ವಿರಳದ ನಡುವೆ ತ್ರಿಣಯನವಯವ ಕಂಡು
ಪ್ರಣವ ಗೆಯ್ದಂಧಕನ ಬೆರಗು ನಿಬ್ಬೆರಗು'

---

[11] ಶಿವದಾಸ ಗೀತಾಂಜಲಿ. 37, ಪು. 52.

[12] ಅದೇ, 140, ಪು. 172.

[13] ಅದೇ, 165, ಪು. 195

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡೆದುದನ್ನೂ ಬಣ್ಣವಿಲ್ಲದ ನೂಲಿನಿಂದ ಪವಣಿಸಿದ 'ಮಣಿಹಾರ' ದಿಂದ 'ಸದ್ಭಾವ ಜಪ' ವನ್ನು, ಉದಯಾಸ್ತಮಾನವೆಂಬೆರಡನ್ನಳಿದು ಜಪಿಸುವವನಿಗೆ 'ನಖದ ಕೊನೆಯಲ್ಲಿ ಶಕ್ತಿ, ಶಿಖಿಯ ಕೊನೆಯಲಿ ಮುಕ್ತಿ' ಒದಗುವ 'ಸಮರಸ' ದ ಅನುಭವವನ್ನೂ ಅದೆಷ್ಟು ಮನಂಬುಗುವಂತೆ ವರ್ಣಿಸಲಾಗಿದೆ. * ಅತೀಂದ್ರಿಯವಾದ ಯೋಗಾನುಭವವನ್ನು ಇದಕ್ಕಿಂತಲೂ ಸರಳವಾಗಿ, ಭಾವಪೂರ್ಣವಾಗಿ ಬಿಂಬಿಸಲು ಸಾಧ್ಯವೇ ಎನಿಸುತ್ತದೆ. ಹೀಗೆ ಅನುಭಾವವೇ ಈ ಹಾಡುಗಳ ಹೂರಣ–ತೋರಣ. ಶಿವಯೋಗಸಿದ್ಧಿಯ ಶರಣ ಪ್ರಭುದೇವನ ಯೌಗಿಕಾನುಭವ ಹಾಗೂ ಸ್ವಯ ವಚನಗಳಲ್ಲಿರುವ 'ಭಾವ-ವಿಚಾರ' ಗಳೆಲ್ಲ ಈ ಹಾಡುಗಳಲ್ಲಿ ಪಡಿಮೂಡಿವೆ. ಇಲ್ಲಿಯೂ ಪ್ರಭುವ್ಯಕ್ತಿತ್ವದ ಅನನ್ಯಾದೃಶತೆ ವ್ಯಕ್ತವಾಗಿದೆ. ಸ್ವಯ ವಚನಗಳಲ್ಲಿ ವ್ಯಕ್ತವಾದ ಪ್ರತಿಭೆಯ ಅನುರಣನ ಇಂಥ ಕಿರುಕೃತಿಗಳಲ್ಲಿಯೂ ಮೂಡಿದೆ. ಆದರೂ ಈ ಹಾಡುಗಳನ್ನು ರಚಿಸಿದವರಾರು ಎಂಬ ಪ್ರಶ್ನೆ ಸಂಶೋಧಕರ ಎದುರಿಗಿದೆ. ಹೀಗೆ ಅಲ್ಲಮಪ್ರಭುದೇವನ ಕಿರುಕೃತಿಗಳ ಶಾಸ್ತ್ರೀಯ ಅಧ್ಯಯನ ಹಾಗೂ ನಿಷ್ಪಕ್ಷಪಾತ ಸಂಶೋಧನೆ ಆಗಬೇಕಾಗಿದೆ. ಉಳಿದ ಶರಣರ ಕೃತಿಗಳ ಬಗೆಗೂ ಈ ಅಧ್ಯಯನ ವಿಸ್ತರಿಸಬೇಕಾಗಿದೆ. ಶಿವಶರಣ ಸಾಹಿತ್ಯ ಹಾಗೂ ದಾಸಸಾಹಿತ್ಯಗಳ ತೌಲನಿಕ ಅಭ್ಯಾಸ ಇನ್ನೂ ಆಗಬೇಕಾಗಿರುವ ಕೆಲಸ. ತರುಣ ಸಂಶೋಧಕರಿಗೆ ಇಲ್ಲಿ ದಾರಿ ತೆರೆದಿದೆ.

---

* ನೋ: ಮಂತ್ರಗೋಪ. 1162, ಪು. 227 (ಶ್ರೀ.ದಾ.ಗ್ರಂ).

Sri Vidyabharathi Book Centre, Sringeri

CC-O. In Public Domain. Digitized by eGangotri

ಎಸ್. ಶಿವಣ್ಣ

ವೆಂಕಟಕವಿ—ಒಂದು ಟಿಪ್ಪಣಿ

ಡಾ॥ ಶ್ರೀನಿವಾಸ ಹಾವನೂರ ಅವರು "ಹೊಸಗನ್ನಡದ ಅರುಣೋದಯ" ಎಂಬ ತಮ್ಮ ಮಹಾಪ್ರಬಂಧದಲ್ಲಿ ರಂಗಭೂಮಿಯ ಹಾಡುಗಳನ್ನು ಪ್ರಸ್ತಾಪಿಸುವಲ್ಲಿ ಚುರಮರಿ ಶೇಷಗಿರಿರಾಯನ ಶಾಕುಂತಲದಲ್ಲಿನ ಹಾಡುಗಳ ಬಗೆಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ:

ಅವರು "………ಶೇಷಗಿರಿರಾಯನ ಶಾಕುಂತಲದಲ್ಲಿ ೮೦ ಹಾಡುಗಳಿವೆ. ಪ್ರತಿಯೊಂದು ಹಾಡಿನ ರಾಗ, ತಾಳಗಳನ್ನೂ ಅದೇ ರಾಗ, ತಾಳದ ಪೂರ್ವ ಪರಿಚಯದ ಇನ್ನೊಂದು ಹಾಡಿನ ಪ್ರಥಮ ಚರಣ ಪಲ್ಲವಿಯನ್ನೂ ಕೊಡಲಾಗಿದೆ. ಅದರ ಮೂಲಕ ಕನ್ನಡದ ಅನೇಕ ಅಜ್ಞಾತ ಹಾಡುಗಳ ಅಸ್ತಿತ್ವವು ನಮಗೆ ಗೋಚರವಾಗುತ್ತದೆ. ಒಂದೆರಡು ಕಡೆಗಳಲ್ಲಿ 'ಚಿಕ್ಕದೇವನ ಪದದಂತೆ' 'ಹೇಮಾದ್ರೀಶನ ಕನ್ನಡ ಅಷ್ಟಪದಿಯೊಳಗಿನ ಪದದಂತೆ' ಎಂಬುದಾಗಿ ವಿಶೇಷಿಸಲಾಗಿದೆ. ಈ ಕವಿದ್ವಯರು ಯಾರು ಮತ್ತು ಅವರು ಬರೆದ ಕೃತಿಗಳಾವುವೆಂಬುದು ಮುದ್ರಿತ ರೂಪದಲ್ಲಿ ಬೆಳಕಿಗೆ ಬಂದಿಲ್ಲ"ಎಂದಿದ್ದಾರೆ.[1]

ಡಾ॥ ಹಾವನೂರರು ಉಲ್ಲೇಖಿಸಿದ 'ಹೇಮಾದ್ರೀಶ' ಅಂಕಿತದ 'ಅಷ್ಟಪದಿ'ಯ ಕರ್ತೃ ವೆಂಕಟಕವಿ. ಈತನ ಬಗೆಗೆ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು 'ಕರ್ನಾಟಕ ಕವಿಚರಿತೆ' (ತೃತೀಯ ಸಂಪುಟ) ಪುಟ 86-87ರಲ್ಲಿ ಈ ಕೆಳಕಂಡಂತೆ ತಿಳಿಸಿದ್ದಾರೆ:

"ಇವನು ಕರ್ಣಾಟಕಾಷ್ಟಪದಿಯನ್ನು ಬರೆದಿದ್ದಾನೆ. ಈತನು ಬ್ರಾಹ್ಮಣ ಕವಿಯೆಂದು ತೋರುತ್ತದೆ." "ಹೇಮಾದ್ರಿವಾಸನ ಪದಪಯೋಜದಾಸ" ಎಂದು ಹೇಳಿಕೊಂಡಿದ್ದಾನೆ. "ಸುರಪುರದಲ್ಲಿ ಮೂಜಗದೊಡೆಯ ಗೋಪಾಲಗೊಪ್ಪಿಸಿದನು" ಎಂಬುದರಿಂದ "ಇವನ ಸ್ಥಳವು ಸುರಪುರವಾಗಿದ್ದರೂ ಇರಬಹುದು. ಇವನ ಕಾಲವು ಸುಮಾರು 1750 ಆಗಿರಬಹುದೆಂದು ಊಹಿಸುತ್ತೇವೆ." ಅಲ್ಲದೆ ಆತನ ಕೃತಿಯ ಬಗೆಗೆ ತಿಳಿಸುತ್ತ "ಇದು ಜಯದೇವನ ಗೀತ ಗೋವಿಂದದ ಭಾಷಾಂತರವು. ಮೂಲದ ವೃತ್ತಗಳು ಷಟ್ಪದಿಗಳಾಗಿಯೂ. ಪದಗಳು ಹಾಡುಗಳಾಗಿಯೂ ಪರಿವರ್ತಿಸಲ್ಪಟ್ಟಿವೆ" ಎಂದು ತಿಳಿಸಿ ಕೃತಿಯಿಂದ ಎರಡು ಷಟ್ಪದಿಗಳು ಹಾಗೂ ಒಂದು ಹಾಡನ್ನು ಉಲ್ಲೇಖಿಸಿದ್ದಾರೆ.[2]

---

1 ಶ್ರೀನಿವಾಸ ಹಾವನೂರ: ಹೊಸಗನ್ನಡದ ಅರುಣೋದಯ, ಪು. 369 (1974).

2 ನರಸಿಂಹಾಚಾರ್ಯ, ಆರ್.: ಕರ್ನಾಟಕ ಕವಿಚರಿತೆ (ತೃತೀಯ ಸಂಪುಟ). ಪು. 86-87 (1974).

Sri Vidyabharathi Book Centre, Sringeri

CC-O. In Public Domain. Digitized by eGangotri

ಇದರಿಂದ ಹೇಮಾದ್ರೀಶ ಅಂಕಿತದ ಹಾಡುಗಳ ಕರ್ತೃ ವೆಂಕಟಕವಿ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಈ ಕೃತಿ ಪ್ರಕಟವಾದಂತಿಲ್ಲ. ವೆಂಕಟಕವಿ ಅಷ್ಟಪದಿ ಯೊಡನೆ ಮತ್ತಾವುದಾದರೂ ಕೃತಿಗಳನ್ನು ರಚಿಸಿರಬಹುದೇ? ಎಂಬ ಸಂಗತಿಯನ್ನು ಪರಿಶೀಲಿಸಬಹುದಾಗಿದೆ.

'ಹೇಮಾದ್ರಿಪ' ಎಂಬ ಅಂಕಿತವನ್ನುಳ್ಳ ಪರಿವರ್ಧಿನಿ ಷಟ್ಪದಿಯ 'ಹೇಮಾದ್ರಿ ಶತಕ'ವೆಂಬ ಅಪೂರ್ಣ ಕೃತಿಯೊಂದು ಉಪಲಬ್ಧವಿದೆ.[3] ಕೃತಿ ಅಪೂರ್ಣವಾಗಿರು ವುದರಿಂದ ಕೃತಿಕಾರನ ಬಗೆಗೆ ಯಾವ ಸಂಗತಿಯೂ ತಿಳಿಯುವುದಿಲ್ಲ. ಅಂಕಿತದ ಆಧಾರದ ಮೇಲೆ 'ಹೇಮಾದ್ರಿ ಶತಕ'ವು ವೆಂಕಟಕವಿಯ ಮತ್ತೊಂದು ಕೃತಿಯಾಗಿರ ಬಹುದಾದ ಸಂಭವವಿದೆ. ಆದರೂ ಈ ಬಗೆಗೆ ಖಚಿತವಾಗಿ ತಿಳಿಯಲು ಇದರ ಸಮಗ್ರ ಪ್ರತಿಯೊಂದನ್ನು ಪರಿಶೋಧಿಸಬೇಕಾಗಿದೆ.

ಕೃಷ್ಣನ ಬಾಲಲೀಲೆಯ ಚಿತ್ರಣವನ್ನು ವಸ್ತುವಾಗುಳ್ಳ ಹಲವಾರು ಹಾಡುಗಳ ಸಮೂಹ ರೂಪದ 'ಬಾಲಲೀಲಾ' ಎಂಬ ಕೃತಿಯೊಂದು ಉಪಲಬ್ಧವಿದೆ.[4] ಇಲ್ಲಿನ ಪ್ರತಿ ಹಾಡಿನ ಅಂಕಿತವೂ 'ಹೇಮಗಿರಿವಾಸ ವೆಂಕಟರಮಣ' ಎಂದಿದೆ (ಕೆಲವೆಡೆ 'ಶ್ರೀಕೃಷ್ಣ' ಎಂಬ ಅಂಕಿತವೂ ಉಂಟು). ಈ ಕೃತಿಯ ಕರ್ತೃತ್ವ ವೆಂಕಟಕವಿಯದೇ? ಅಥವಾ ಬೇರೊಬ್ಬನದೇ? ಎಂಬ ಸಂಗತಿ ಸಂಶೋಧನಾರ್ಹ.

---

3 ಕನ್ನಡ ಅಧ್ಯಯನ ಪೀಠದ ಸಂಗ್ರಹ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

4 ರಾಮಚಂದ್ರರಾವ್, ಬಿ. ಮತ್ತು ವೆಂಕಟಾಚಲ ಶಾಸ್ತ್ರಿ, ಟಿ. ವಿ. (ಸಂ.) : A Descriptive Catalogue of the Kannada Manuscripts in the Osmania University Library, No. 241, ಪು. 287–288 (1966).

Sri Vidyabharathi Book Centre, Sringeri

CC-O. In Public Domain. Digitized by eGangotri

ಹಂಪ. ನಾಗರಾಜಯ್ಯ

ಭದ್ರಬಾಹು ಭಟಾರರ ಕಥೆ: ಪರಿಶೀಲನೆ

ಕನ್ನಡದ ಪ್ರಾಚೀನ ಗದ್ಯಗ್ರಂಥವಾದ ವಡ್ಡಾರಾಧನೆಯಲ್ಲಿರುವ ದೊಡ್ಡ ಕಥೆಗಳಲ್ಲಿ, ಇಪ್ಪತ್ತೆರಡು ಪುಟಗಳ ಭದ್ರಬಾಹು ಭಟಾರರ ಕಥೆಯೂ ಸೇರಿದೆ. ಈ ಕಥೆ ವಿಮರ್ಶಕರ ಮತ್ತು ಇತಿಹಾಸಕಾರರ ಗಮನ ಸೆಳೆಯುವ ಕಥೆಯೂ ಆಗಿದೆ. ಇದು ತನ್ನಲ್ಲಿ ಐತಿಹಾಸಿಕ ಭಿತ್ತಿಯನ್ನೂ ಅಡಗಿಸಿಕೊಂಡಿದೆ. ಧಾರ್ಮಿಕ ಉದ್ದೇಶಕ್ಕಾಗಿ ಚಾರಿತ್ರಿಕ ವಸ್ತುವನ್ನು ಬಳಸಿಕೊಂಡಾಗ ಮಹತ್ವ ಬರುವುದು ಚಾರಿತ್ರಿಕ ವಸ್ತುವಿಗೊ, ಅಥವಾ ಧಾರ್ಮಿಕ ದೃಷ್ಟಿಗೊ ಎಂಬ ಪ್ರಶ್ನೆ ಬರುವುದು ಸಹಜ. ವಾಸ್ತವವಾಗಿ ನೋಡಿದರೆ ಇಂಥ ಸಂದರ್ಭಗಳಲ್ಲಿ ಧಾರ್ಮಿಕತೆಯೇ ಪ್ರಧಾನವಾಗಿ, ಚರಿತ್ರೆ ಅದಕ್ಕೆ ಅಧೀನವಾಗುವ, ಒಮ್ಮೊಮ್ಮೆ ಮಸುಕಾಗುವ ಸಾಧ್ಯತೆ ಇದೆ. ಇದರಿಂದಾಗಿ ಭಾರತೇತಿಹಾಸದ ಕೆಲವು ಕೂಟಪ್ರಶ್ನೆಗಳನ್ನು ಲೀಲಾಜಾಲವಾಗಿ ಬಿಡಿಸಿ-ಬಿಚ್ಚಿ ಹೇಳಲು ಬರುವಂತಿಲ್ಲ. ಸ್ವಮತಾಭಿನಿವೇಶವನ್ನು ಬದಿಗಿರಿಸಿ, ಸಮಗ್ರ ಭಾರತದ ದೃಷ್ಟಿಯಿಂದ ಇತಿಹಾಸದ ಆಲೋಕವನ್ನು ನಿರ್ವಿಕಾರ ವಿಚಾರವಾದಿಯಾಗಿ ಮಾಡಬೇಕಾದುದು ಅಗತ್ಯ.

ವರ್ಧಮಾನ ಮಹಾವೀರ ಜೈನರ 24ನೆಯ ತೀರ್ಥಂಕರನೂ ಹೌದು, ಚಾರಿತ್ರಿಕವಾಗಿ ಆಗಿಹೋದ ಮಹಾಪುರುಷನೂ ಹೌದು. ಈ ಭದ್ರಬಾಹು ಭಟಾರರ (ಭ. ಬಾ.) ಕಥೆ ಆತನಿಗೂ ಸಂಬಂಧಿಸಿರುವುದಲ್ಲದೆ ಆತನ ಅನಂತರ ಜೈನಧರ್ಮದಲ್ಲಾದ ಮಹತ್ತರ ಪರಿವರ್ತನೆಯನ್ನೂ ತಿಳಿಸುತ್ತದೆ. ವರ್ಧಮಾನನು ನಿರ್ವಾಣ ಪಡೆದದ್ದು ಕ್ರಿ.ಪೂ. 527 ರಲ್ಲಿ. ಭ. ಬಾ. ಕಥೆಯಲ್ಲಿ ಬರುವ "ವರ್ಧಮಾನ ಭಟ್ಟಾರರ್ ಮೋಕ್ಷಕ್ಕೆ ಪೋದಿಂಬಟಿಕ್ಕೆ ಚತುರ್ದಶ ಪೂರ್ವಧಾರಿಗಳಪ್ಪ ಶ್ರುತ ಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭಟಾರರುಜ್ಜಯಂತಮಂ ವಂದಿಸಲೆಂದು ವಿಹಾರಿಸುತ್ತುಂ ಬರ್ಪೋರ್" (73) ಎಂಬ ವಾಕ್ಯ ಚಾರಿತ್ರಿಕ ಸಮೀಕ್ಷೆಗೆ ಅವಕಾಶ ಮಾಡಿಕೊಟ್ಟಿದೆ. ಅದರಂತೆ ಈ ಭ. ಬಾ. ಕಥೆಯಲ್ಲಿ ವರ್ಧಮಾನ, ಗೋವರ್ಧನ, ಭದ್ರಬಾಹು ನಂದ(ರು), ಚಾಣಕ್ಯ, ಚಂದ್ರಗುಪ್ತ, ಬಿಂದುಸಾರ, ಅಶೋಕ, ಕುಣಾಳ, ಸಂಪ್ರತಿ ಚಂದ್ರಗುಪ್ತ, ಸಮಾಧಿಗುಪ್ತ, ಸಿಂಹಸೇನ, ರಾಮಿಲಾಚಾರ್ಯ, ಸ್ಥೂಲಾಚಾರ್ಯ, ಸ್ಥೂಲಭದ್ರಾಚಾರ್ಯ— ಮೊದಲಾದ ಹಲವು ಚಾರಿತ್ರಿಕ ಪುರುಷರ ಸರಮಾಲೆಯೇ ಬರುತ್ತದೆ; ಕಟ್ವಪ್ಪು, ಉಜ್ಜಯಂತಗಿರಿ, ಪಾಟಲೀಪುತ್ರ, ಪುಂಡ್ರವರ್ಧನ, ವಲಭಿ, ದ್ರವಿಡದೇಶ, ಸಿಂಧುದೇಶ, ಮಗಧೆ— ಮೊದಲಾದ ಚಾರಿತ್ರಿಕವಾಗಿ ಗುರುತಿಸಲಾಗಿರುವ ಪ್ರಾಚೀನಸ್ಥಳ ಹಾಗೂ ದೇಶಗಳ ಪ್ರಸ್ತಾಪವೂ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜತೆಗೆ ನಂದವಂಶ ಹಾಗೂ ಮೌರ್ಯ್ಯವಸತನಗಳ ಉಲ್ಲೇಖವಿದೆ. ಚಂದ್ರಗುಪ್ತನಿಗೆ ಚಕ್ರವರ್ತಿತ್ವವನ್ನು ದೊರಕಿಸುವಲ್ಲಿ ಚಾಣಕ್ಯನು ಜೈನ ಶ್ರಮಣನೊಬ್ಬನ ನೆರವು ಪಡೆದನೆಂಬ ಸಂಗತಿ ಸುಮಾರು ಅಯ್ದನೆಯ ಶತಮಾನದ ವಿಶಾಖದತ್ತನ 'ಮುದ್ರಾರಾಕ್ಷಸ' ಕೃತಿಯಲ್ಲೂ ಬರುತ್ತದೆ; ಆ ಶ್ರಮಣ (ಕ್ಷಪಣಕ) ಯಾರು, ಭದ್ರಬಾಹುವೆ ಎಂಬ ಅನುಮಾನಗಳಿಗೂ ಅವಕಾಶವಿದೆ. ಹೀಗೆ ನಾನಾ ನಿಟ್ಟಿನಿಂದ ಭ. ಬಾ. ಕಥೆ ಸಂಶೋಧಕರಿಗೆ ಸಾಮಗ್ರಿಯಾಗಿದೆ. ಭ. ಬಾ. ಕಥೆಯನ್ನು ಪರಿಶೀಲಿಸುವುದಕ್ಕೂ ಮೊದಲು ಆದರ ಸಾರಾಂಶ ಕೊಟ್ಟಿದೆ.

ಭದ್ರಬಾಹು ಭಟಾರರ ಕಥೆಯ ಸಾರ

ಪುಂಡ್ರ (ಪುಂಡ್ರ) ವರ್ಧನ ನಾಡಿನ ಕೌಂಡಿನೀ ನಗರ (ಕೋಟಿಕಪುರ) ವನ್ನು ಪದ್ಮರಥ ಪದ್ಮಶ್ರೀ ಆಳುತ್ತಿದ್ದರು. ಪುರೋಹಿತ ಸೋಮಶರ್ಮ-ಸೋಮಶ್ರೀ ದಂಪತಿಗಳ ಮಗ ಭದ್ರಬಾಹು. ಆತ ಒಮ್ಮೆ ತನ್ನ ಓರಗೆಯವರೊಡನೆ ಒಂದು ಬಟ್ಟಿನ ಮೇಲೊಂದರಂತೆ 14 ಬಟ್ಟುಗಳನ್ನಿಟ್ಟು ಆಡುತ್ತಿದ್ದನು. ಆಗ (ವರ್ಧಮಾನ ಭಟಾರರು ಮೋಕ್ಷಕ್ಕೆ ಸಂದಮೇಲೆ, 14 ಪೂರ್ವಾಗಮ ಬಲ್ಲ ನಾಲ್ಕನೆಯವರಾದ) ಗೋವರ್ಧನರು ಉಜ್ಜಯಂತ ಪರ್ವತವನ್ನು ವಂದಿಸಲೆಂದು ಸಂಚರಿಸುತ್ತಾ ಅಲ್ಲಿಗೆ ಬಂದರು. ಅವರು ಭದ್ರಬಾಹುವನ್ನು ಕಂಡು ಈತ ತಮ್ಮ ತರುವಾಯ ಶ್ರುತ ಕೇವಲಿಯಾಗುವನೆಂದು ತಿಳಿದರು. ಅವನ ತಂದೆ ತಾಯಿಗೆ 'ಈತನನ್ನು ನಮಗೊಪ್ಪಿಸಿ; ಎಲ್ಲಾ ಶಾಸ್ತ್ರಗಳನ್ನು ಕಲಿಸಿ ಪಂಡಿತನನ್ನಾಗಿ ಮಾಡಿ ಹಿಂದಕ್ಕೆ ಕಳುಹಿಸುತ್ತೇವೆ' ಎಂದರು. ಪೋಷಕರು ಒಪ್ಪಿದರು. ಗೋವರ್ಧನರು ಭದ್ರಬಾಹುವನ್ನು ಬೋಧನೆಯಿಂದ ಅಧಿಗಮ ಸಮ್ಯಗ್‌ದೃಷ್ಟಿಯನ್ನಾಗಿಸಿದರು. ಆಗ ಭೋಗದಲ್ಲಿ ವೈರಾಗ್ಯ ತಾಳಿ ಭದ್ರಬಾಹು ತಪೋದೀಕ್ಷೆ ಬೇಡಿದ. ಗೋವರ್ಧನರು 'ನೀನು ಪಟ್ಟಣಕ್ಕೆ ಹೋಗಿ, ಕಲಿತ ವಿದ್ಯೆ ಪಾಂಡಿತ್ಯಗಳಿಂದ ಪಂಡಿತರನ್ನು ಗೆದ್ದು ಹತ್ತು ದಿಕ್ಕುಗಳಲ್ಲೂ ಕೀರ್ತಿ ಗಳಿಸಿ ತಂದೆ-ತಾಯಿಗೆ ಸಂತೋಷಿಸಿ ಬಾ, ದೀಕ್ಷೆ ಕೊಡಬಹುದು' ಎಂದರು. ಅದರಂತೆ ವಿಜಯಿಯಾಗಿ ಬಂದ ಭದ್ರಬಾಹುವಿಗೆ ಗೋವರ್ಧನರು ದೀಕ್ಷೆಯಿತ್ತರು. ಗೋವರ್ಧನರು ಸಮಾಧಿ ಮರಣದಿಂದ ಮುಡಿಪಿದ ಮೇಲೆ ಭದ್ರಬಾಹು ಋಷಿಸಮುದಾಯಕ್ಕೆ ಮುಖಂಡರಾದರು.

ಮಗಧ ನಾಡಿನ ಪಾಟಲೀಪುತ್ರವನ್ನಾಳುತ್ತಿದ್ದ ನಂದನೆಂಬರಸ ಒಮ್ಮೆ ಚಾಣಕ್ಯನನ್ನು ಅಪಮಾನ ಮಾಡಿದ. ಆತ ಪ್ರತಿಜ್ಞೆ ಮಾಡಿ ನಂದನನ್ನು ನಾಶಮಾಡಿ ಚಂದ್ರಗುಪ್ತನಿಗೆ ಪಟ್ಟ ಕಟ್ಟಿದ. ಚಂದ್ರಗುಪ್ತನ ಮಗ ಬಿಂದುಸಾರನಾದ ಮೇಲೆ ಅಶೋಕ ರಾಜ್ಯವಾಳಿದ. ಅಶೋಕನ ಮಗ ಕುಣಾಳ. ಅಶೋಕ ಹಗೆಗಳನ್ನು ಪತೋಟಿಯಲ್ಲಿಡಲು ಹೋಗಿದ್ದ. ಅಲ್ಲಿಂದ 'ಉಪಾಧ್ಯಾಯನಿಗೆ ಅಕ್ಕಿಯ ಅನ್ನ ತುಪ್ಪ ತೊವ್ವೆ ಉಣಲಿಟ್ಟು ಕುಮಾರನನ್ನು ಅವನ ಬಳಿ ಓದಿಸಲಿ' ಎಂದು ಪತ್ರ ಬರೆದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ಓದಿದಾತ 'ಕುಮಾರನನ್ನು ಅಂಧನನ್ನಾಗಿ ಮಾಡಲಿ' ಎಂದು ತಪ್ಪು ಅರ್ಥ ಬರುವಂತೆ ಓದಿದ. ಅಪ್ರತಿಹತವಾದ ರಾಜಾಜ್ಞೆಯನ್ನು ಪಾಲಿಸಿ ಕುಣಾಲನನ್ನು ಕುರುಡು ಮಾಡಿದರು. ಹಿಂತಿರುಗಿ ಬಂದ ಅಶೋಕ ಕುಮಾರನ ಸ್ಥಿತಿ ಕಂಡು ನೊಂದುಕೊಂಡ. ಕುಮಾರ ಕುಣಾಲನ ಮಡದಿ ಚಂದ್ರಾನನೆ. ಇವರಿಗೆ ಹುಟ್ಟಿದ ಮಗ ಸಂಪ್ರತಿ ಚಂದ್ರಗುಪ್ತ. ಅಶೋಕ ತನ್ನ ಮೊಮ್ಮಗ ಸಂಪ್ರತಿಗೆ ರಾಜ್ಯಾಭಿಷೇಕ ಮಾಡಿದ. ಮಗ ಕುಣಾಲನಿಗೆ 'ಏನನ್ನಾದರೂ ಕೇಳು' ಎಂದ. ಕುಣಾಲ ಕಾಕಿಣೀರತ್ನ ಕೇಳಿದ್ದಕ್ಕೆ 'ಅದು ಚಕ್ರವರ್ತಿಗಲ್ಲದೆ ಬೇರೆಯವರಿಗೆ ಸಲ್ಲದು' ಎಂದು ಹೇಳಿ ವೈರಾಗ್ಯ ತಾಳಿ, ಸುವ್ರತ ಭಟ್ಟಾರರ ಬಳಿ ಜಿನದೀಕ್ಷೆ ಹೊಂದಿದ.

ಸಂಪ್ರತಿ ಚಂದ್ರಗುಪ್ತ ರಾಜ್ಯವಾಳುತ್ತಿದ್ದಾಗ ಸಮಾಧಿಗುಪ್ತಾಚಾರ್ಯರು ಪಾಟಲೀಪುತ್ರದ ಹೊರವಲಯದಲ್ಲಿ ಬೀಡುಬಿಟ್ಟರು. ಸಂಪ್ರತಿ ಚಂದ್ರಗುಪ್ತ ಅವರನ್ನು ಕಂಡು ವಂದಿಸಿ ಕುಳಿತ. ಅವರು ಅವನ ಜನ್ಮಾಂತರಗಳ ಸಂಗತಿ ತಿಳಿಸಿದರು (ಇದು ಹತ್ತು ಪುಟಗಳಷ್ಟಿದೆ). ನಂದಿಮಿತ್ರನಾಗಿ, ಕನಕಧ್ವಜನಾಗಿ ಕಳೆದ ಭವಗಳ ಭವಾವಳಿ ಕೇಳಿ ಸಂತೋಷಿಸಿ ಅವನು ಅರಮನೆಗೆ ಹಿಂತಿರುಗಿದ. ಏಕಚ್ಛತ್ರಚ್ಛಾಯೆಯಿಂದ ಆಳುತ್ತಾ ಉಜ್ಜಯಿನಿಯಲ್ಲಿ (?) ಸುಖದಿಂದಿದ್ದ. ಆಗೊಮ್ಮೆ ಭದ್ರಬಾಹು ಭಟಾರರು ಋಷಿಸಮುದಾಯದಿಂದ ಆಗಮಿಸಿ ಉಜ್ಜಯಿನಿ ಹೊರಗಿನ ಉದ್ಯಾನವನದಲ್ಲಿ ತಂಗಿದರು. ದೊರೆ ಅವರಿಗೆ ವಂದಿಸಿ ಶ್ರಾವಕ ವ್ರತ ಸ್ವೀಕರಿಸಿದ.

ಭದ್ರಬಾಹು ಒಂದು ದಿನ ಚರಿಗೆಗೆಂದು ಒಂದು ಮನೆ ಹೊಕ್ಕಾಗ ತೊಟ್ಟಿಲ ಚಿಕ್ಕ ಕೂಸು 'ಹೋಗಿ ಹೋಗಿ ಭಟಾರರೆ' ಎಂದಿತು. ಅವಧಿ ಎಷ್ಟು ಎಂದು ಕೇಳಲು ಹನ್ನೆರಡು ವರ್ಷವೆಂದಿತು. ಕಾಲದೋಷದಿಂದ ಮುಂದೆ ಪ್ರಜಾಪೀಡೆಯಾಗುತ್ತದೆಂದು ತಿಳಿದು ಅಂದು ಅಲಾಭ ಮಾಡಿ ಬಸದಿಗೆ ಹಿಂತಿರುಗಿದರು. ಎಲ್ಲಾ ರಿಸಿಯರನ್ನೂ ಕರೆಸಿದರು. 'ಈ ನಾಡಿನಲ್ಲಿ 12 ವರ್ಷ ಮಳೆಯಿಲ್ಲದೆ ಕ್ಷಾಮವಿರುತ್ತದೆ. ಎಲ್ಲರೂ ದಕ್ಷಿಣಾಪಥಕ್ಕೆ ಹೋಗೋಣ' ಎಂದರು. ದೊರೆಯೂ ಅಂದು 16 ಕೆಟ್ಟ ಕನಸು ಕಂಡ. ಭದ್ರಬಾಹು ಭಟಾರರು ಅವುಗಳನ್ನು ವಿವರಿಸಿ ಫಲ ಹೇಳಿದರು— (ಎರಡು ಪುಟಗಳು). ಕಡೆಗೆ ಈ ಕಲಿಯುಗದಲ್ಲಿ ಕಾಡಿಗೆ ಹೋಗಿ ನಿಂತವರೇ ಧನ್ಯರೆಂದು ತಿಳಿಸಿದರು. ಚಂದ್ರಗುಪ್ತ ಕೂಡಲೇ ಕಾರ್ಯೋನ್ಮುಖನಾದನು. ತನ್ನ ಹಿರಿಯ ಮಗ ಸಿಂಹಸೇನನಿಗೆ ಪಟ್ಟ ಕಟ್ಟಿದ. ಭದ್ರಬಾಹುಗಳ ಬಳಿ ದೀಕ್ಷೆ ಪಡೆದ.

ಭದ್ರಬಾಹು ಮಧ್ಯದೇಶದಲ್ಲಿದ್ದ ರಿಸಿಯರನ್ನೆಲ್ಲ ಕರೆಸಿ, '12 ವರ್ಷ ಅನಾವೃಷ್ಟಿಯಾಗಿ ಮಹಾ ಭಯಂಕರಕ್ಷಾಮ ಬಂದು ಮಧ್ಯದೇಶ ಹಾಳಾಗುತ್ತೆ. ಈ ನಾಡಿನಲ್ಲಿರುವ ರಿಸಿಗಳಿಗೆ ವ್ರತಭಂಗವಾಗುತ್ತೆ. ದಕ್ಷಿಣಾಪಥಕ್ಕೆ ಹೊರಡೋಣ' ಎಂದರು. ಹೀಗೆ ಹೇಳಿ ಸಂಪ್ರತಿ ಚಂದ್ರಗುಪ್ತನನ್ನೂ, ಎರಡು ಸಾವಿರ ಋಷಿಗಳನ್ನೂ ಕರೆದುಕೊಂಡು ತೆಂಕಣಕ್ಕೆ ಬಂದರು. ಆದರೆ ರಾಮಿಲಾಚಾರ್ಯರು, ಸ್ಥೂಲಾಚಾರ್ಯರು. ಸ್ಥೂಲಭದ್ರಾಚಾರ್ಯರು ಮಾತ್ರ ಅವರೊಂದಿಗೆ ಹೋಗದೆ ಸಿಂಧು

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಶಕ್ಕೆ ಹೋದರು. ಭದ್ರಬಾಹು ಭಟಾರರು ಋಷಿಸಮುದಾಯದೊಂದಿಗೆ ಸಂಚರಿಸುತ್ತಾ ಕಟ್ವಪ್ಪು (ಶ್ರವಣಬೆಳ್ಗೊಳ) ಪ್ರದೇಶಕ್ಕೆ ಬಂದರು. ಅವಸಾನ ಕಾಲ ತಮಗೆ ಬಂತೆಂದು ತಿಳಿದು 'ನಾವು ಇಲ್ಲಿ ಸನ್ಯಸನ ಮಾಡುತ್ತೇವೆ, ನೀವೆಲ್ಲ ಹೋಗಿರಿ' ಎಂದರು. ದಶಪೂರ್ವಧಾರಿಗಳಾದ ವಿಶಾಖಾಚಾರ್ಯರನ್ನೂ ಸುಹಸ್ತಿ, ಅಮರಭದ್ರ, ಸುಭದ್ರಮಿತ್ರ, ಮಹಾಗಿರಿ, ಸುಮತಿ, ಮಹಾಮತಿ, ವಿಶಾಖನಂದಿ ಎಂಬುವರನ್ನು ಆಚಾರ್ಯರನ್ನಾಗಿ ಮಾಡಿ ಅನೇಕ ಮುನಿಗಳೊಡನೆ ಕಳಿಸಿದರು. ಚಂದ್ರಗುಪ್ತಮುನಿ ಭದ್ರಬಾಹುಗಳ ಬಳಿಯೇ ಉಳಿದರು.

ಭದ್ರಬಾಹು, ಕಟ್ವಪ್ಪು ನಾಡಿನ ಅಡವಿಯ ಬೆಟ್ಟದ ಮೇಲಿನೊಂದು ಕಲ್ಲಿನ ಮೇಲೆ ಆಹಾರ ಬಿಟ್ಟು ಕುಳಿತರು. ಚಂದ್ರಗುಪ್ತಮುನಿಗೆ ಭಿಕ್ಷೆಗೆ ಹೋಗಲು ಹೇಳಿದರು. ಊರಿಲ್ಲ, ಕೇರಿಯಿಲ್ಲ, ಕಾಡಿನಲ್ಲೆಲ್ಲಿ ಹೋಗುವುದೆಂಬ ಮಾತಿಗೆ ಕಾಂತಾರ ಭೈಕ್ಷಕ್ಕೆ ಹೋಗಿ ಬರಲು ತಿಳಿಸಿದರು. ಅದರಂತೆ ಹೋದಾಗ ಮರದ ಪೊಟರೆಯಿಂದ ಬಂದ ಮುತ್ತಿನ ಕಂಕಣಾಲಂಕೃತ ಕೈ ನೀಡಿದ ಭಿಕ್ಷೆಯನ್ನು ಬಿಟ್ಟು ಬಂದರು. ಮರುದಿನ ದಿವ್ಯ ಸ್ತ್ರೀಯೊಬ್ಬಳು ನೀಡಲು ಬಂದುದನ್ನೂ ನಿರಾಕರಿಸಿದರು. ಹೀಗೆ ಹತ್ತು ದಿನ ಅಲಾಭವಾಯಿತು. ಹನ್ನೊಂದನೆಯ ದಿನ ಅಡವಿಯ ನಡುವೆ ಪಟ್ಟಣ ಕಾಣಿಸಿಕೊಂಡಿತು. ದಿವ್ಯಸ್ತ್ರೀ ಪರಿವಾರದೊಡನೆ ಬಂದು ಕರೆದೊಯ್ದು ಆಹಾರ ನೀಡಿದಳು. ಹೀಗೇ ನಿತ್ಯ ನಡೆಯುತ್ತಿತ್ತು. ಭದ್ರಬಾಹುಗಳು ಹಸಿವು ನೀರಡಿಕೆ ಬಾಧೆ ಸಹಿಸಿ ದೇಹತ್ಯಾಗ ಮಾಡಿದರು. ಅಮಿತಕಾಂತಿ ಎಂಬ ದೇವನಾದರು.

ಚಂದ್ರಗುಪ್ತಮುನಿ ಕಟ್ವಪ್ಪಿನಲ್ಲೇ ಭದ್ರಬಾಹು ನಿಸದಿಗೆಯನ್ನು ವಂದಿಸುತ್ತಾ 12 ವರ್ಷ ಉಳಿದರು. ತಮಿಳು ನಾಡಿಗೆ ಹೋಗಿದ್ದ ವಿಶಾಖಾಚಾರ್ಯರೇ ಮೊದಲಾದವರ ಋಷಿಗುಂಪು ಬಂತು. ಚಂದ್ರಗುಪ್ತಾಚಾರ್ಯರು ಇದಿರುಗೊಂಡು ವಂದಿಸಿದರು. ಋಷಿಗಳು 'ಈ ಅಡವಿಯಲ್ಲಿ ಗೆಡ್ಡೆ ಗೆಣಸು ತಿಂದು ತೊರೆ ಹಳ್ಳದ ನೀರು ಕುಡಿದು 12 ವರ್ಷ ಹೇಗೆ ಬದುಕಿದ್ದಾರೆ' ಎಂದು ಅಂದುಕೊಂಡರು. ತಲೆಗೂದಲು ಬೆಳೆದಿತ್ತು. ಇದರಿಂದ ಚಂದ್ರಗುಪ್ತರಿಗೆ ಪ್ರತಿವಂದನೆ ಸಲ್ಲಿಸಲಿಲ್ಲ. ಭದ್ರಬಾಹುಗಳ ನಿಸದಿಗೆಯನ್ನು ವಂದಿಸಿ ಅಂದು ಉಪವಾಸ ಮಾಡಿ ಮರುದಿನ ಹೊರಟು ನಿಂತರು. ಚಂದ್ರಗುಪ್ತಮುನಿ 'ಬಹು ದೂರ ನಡೆದು ಆಯಾಸ ಪಟ್ಟಿದ್ದೀರಿ. ಈದಿನ ಇಲ್ಲೇ ಇದ್ದು ಆಹಾರ ಮಾಡಿ ಬಳಲಿಕೆ ಪರಿಹರಿಸಿಕೊಂಡು ಹೋಗಿ' ಎಂದರು. 'ಇಲ್ಲೇನು ಊರಿಲ್ಲ, ಕೇರಿಯಿಲ್ಲ, ಎಲ್ಲಿ ಚರಿಗೆವುಗುವುದು?' ಎಂದು ಕೇಳಿದ್ದಕ್ಕೆ 'ಹಿರಿದೊಂದು ನಗರವಿದೆ', ಎಂದು ಉತ್ತರಿಸಿದರು. ಮಧ್ಯಾಹ್ನ ಚಂದ್ರಗುಪ್ತರೊಂದಿಗೆ ಹೊರಟರು. ಎಲ್ಲರಿಗೂ ಆಹಾರ ದೊರೆಯಿತು. ಹಿಂತಿರುಗಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂತಿರುಗಿದ ಮೇಲೆ ವಿಶಾಖಾಚಾರ್ಯರು ತಮ್ಮ ಶಿಷ್ಯನಿಗೆ 'ಕಾಲು ತೊಳೆದು ಕೊಳ್ಳಬೇಕು. ಕಮಂಡಲು ತಂದುಕೊಡು' ಎಂದರು. ಅದನ್ನು ಅವರು ಊಟ ಮಾಡಿ ಬಂದ ಮನೆಯಲ್ಲೇ ಮರೆತು ಬಂದಿದ್ದರು. ಶಿಷ್ಯ ಹೋಗಿ ಅಡವಿಯಲ್ಲಿ ಎಲ್ಲೆಲ್ಲಿ ತಿರುಗಿದರೂ ಪಟ್ಟಣ ಮನೆ ಇರಲಿಲ್ಲ. ಅತ್ತ ಇತ್ತ ಸುತ್ತಾಡುವಾಗ ಕಮಂಡಲು ಮರದ ತುತ್ತ ತುದಿಯಲ್ಲಿ ನೇತಾಡುತ್ತಿರುವುದು ಕಂಡುಬಂತು. ಋಷಿಗಳಿಗೆ ಅಚ್ಚರಿ. ಚಂದ್ರಗುಪ್ತಮುನಿಗಳಿಗೆ ಅವರು 'ನೀವು ಇಷ್ಟು ಕಾಲ ಅಡವಿಯಲ್ಲಿ ಕಂದಮೂಲ ತಿಂದು ತೊರೆಯ ನೀರು ಕುಡಿದು ಬದುಕಿದ್ದೀರೆಂದು ತಿಳಿದ ನಾವು ನಮಸ್ಕರಿಸಲಿಲ್ಲ. ಮನ್ನಿಸಿ. ನೀವು ದೇವತಾಧಿಷ್ಠಿತರು. ದೇವತೆಗಳು ಮಾಡಿದ ಆಹಾರವನ್ನು ಇನ್ನು ತಿನ್ನಬೇಡಿ. ಋಷಿಗಳು ಅದನ್ನು ಚರಿಗೆ ಮಾಡಲಾಗ' ಎಂದು ನುಡಿದರು. ಲೋಚು ನಡೆಸಿ ವ್ರತ ಕೊಟ್ಟು ಪ್ರತ್ಯಾಖ್ಯಾನ ಹೇಳಿ ಅವರನ್ನು ಕರೆದುಕೊಂಡು ಎಲ್ಲ ಮಧ್ಯದೇಶಕ್ಕೆ ಹೋದರು.

ಸಿಂಧುದೇಶಕ್ಕೆ ಹೋಗಿದ್ದ ರಾಮಿಲಾಚಾರ್ಯ, ಸ್ಥೂಲಾಚಾರ್ಯ ಮತ್ತು ಸ್ಥೂಲಭದ್ರಾಚಾರ್ಯರಿಗೆ ತೊಂದರೆ ತಲೆದೋರಿತ್ತು. ಮನುಷ್ಯರನ್ನೇ ತಿನ್ನುವ ಕ್ಷಾಮ ಬಂದಿತ್ತು. ಹಗಲು ಅಡುಗೆ ನಿಂತು ರಾತ್ರಿ ಅಡುಗೆ ಪ್ರಾರಂಭವಾಗಿತ್ತು. ಆಗ ಶ್ರಾವಕರು ಋಷಿಗಳಿಗೆ 'ನೀವು ರಾತ್ರಿ ಭಿಕ್ಷೆ ಪಡೆದು ಹಗಲು ಉಣ್ಣಿ' ಎಂದು ಕೇಳಿಕೊಳ್ಳಲು ಅದರಂತೆ ಯತಿಗಳು ನಡೆಯತೊಡಗಿದರು. ಒಂದು ದಿನ ರಾತ್ರಿ ನಿರ್ಗ್ರಂಥಯತಿ ಇರುಳು ಭಿಕ್ಷಾಪಾತ್ರೆ ಹಿಡಿದು ಒಂದು ಮನೆ ಹೊಕ್ಕಾಗ ಅಲ್ಲಿದ್ದ ಬಸುರಿ ಹೆಂಗಸು ಭಯಪಟ್ಟು ಗರ್ಭಸ್ರಾವವಾಯಿತು. ಇದನ್ನು ನೋಡಿ ಮತ್ತೆ ಶ್ರಾವಕರು ಮುನಿಗಳಿಗೆ 'ಕಾಲ ಕೆಟ್ಟಿದೆ. ಒಳ್ಳೆಯ ಕಾಲ ಬಂದಾಗ ಪ್ರಾಯಶ್ಚಿತ್ತ ಮಾಡಿಕೊಂಡು ತಪಸ್ಸು ನಿಲ್ಲುವಿರಂತೆ. ಈಗ ಕ್ಷಾಮನಿವಾರಣೆಯಾಗುವತನಕ ಎಡಗೈ ಕೆಳಗೆ ಬಿಟ್ಟು ಅರೆವಸ್ತ್ರವನ್ನು ಎಡಭುಜದ ಮೇಲೆ ಹಾಕಿಕೊಂಡು, ಒಳಗೆ ದಿಗಂಬರರಾಗೇ ಇದ್ದುಕೊಂಡು ಬಲಗೈಯಲ್ಲಿ ಭಿಕ್ಷಾಪಾತ್ರೆ ಹಿಡಿದು, ಭಿಕ್ಷೆಗೆ ಬನ್ನಿ' ಎಂದರು. ಅದರಂತೆ ಕಾಲ ಕಳೆಯಿತು. ರಾಮಿಲಾಚಾರ್ಯ–ಸ್ಥೂಲಭದ್ರಾಚಾರ್ಯರು ತಮ್ಮ ಋಷಿಸಮುದಾಯದೊಡನೆ ಮಧ್ಯದೇಶಕ್ಕೆ ಹಿಂತಿರುಗಿದರು. ಅವರಿಗೆ ವಿಶಾಖಾಚಾರ್ಯರು ಮೊದಲಾದವರು 'ನೀವು ಅರ್ಧವಸ್ತ್ರ ಬಿಡಿ, ನಿರ್ಗ್ರಂಥರಾಗಿ, ಪ್ರಾಯಶ್ಚಿತ್ತ ಮಾಡಿಕೊಳ್ಳಿ' ಎಂದರು. ರಾಮಿಲಾಚಾರ್ಯ, ಸ್ಥೂಲಾಚಾರ್ಯರು ಒಪ್ಪಿದರು. ಅರ್ಧಗಪ್ಪಡ ಬಿಟ್ಟು ವ್ರತಧಾರಿಗಳಾಗಿ ತಪಕ್ಕೆ ತೊಡಗಿದರು. ಸ್ಥೂಲಭದ್ರಾಚಾರ್ಯರು ಮತ್ತು ಕೆಲವರು ಒಪ್ಪಲಿಲ್ಲ. ಜಿನಕಲ್ಪ ಮತ್ತು ಸ್ಥವಿರಕಲ್ಪ ಎಂದು ಇಬ್ಭಾಗವಾಯಿತು. ಅರ್ಧವಸ್ತ್ರಧಾರಣೆಯ ಸಂಪ್ರದಾಯವನ್ನು ಸ್ಥೂಲಭದ್ರರು ಹಾಕಿಕೊಟ್ಟರು.

ಅರೆವಸ್ತ್ರಧಾರಣೆಯ ಪಂಥ ಸುರಥವೆಂಬ ನಾಡಿನ ವಲಭಿ ಎಂಬ ಪಟ್ಟಣದ ವರೆಗೂ ಹಬ್ಬಿತು. ಆ ನಗರದ ದೊರೆ ವಪ್ರಪಾಳ ಮಿಥ್ಯಾದೃಷ್ಟಿ. ಪಟ್ಟದರಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾಮಿನಿ ಎನ್ನುವವಳು ಅರ್ಧವಸ್ತ್ರಧಾರಣೆಯ ಸಂಪ್ರದಾಯದ ಭಕ್ತೆ. ಒಂದು ದಿನ ದೊರೆ 'ದೇವಿ, ನಿನ್ನ ಈ ಅರ್ಧಗಪ್ಪಡದ ಯತಿಗಳ ಧರ್ಮ ಒಳ್ಳೆಯದಲ್ಲ. ಅವರು ಉಟ್ಟಂತೆಯೂ ಅಲ್ಲ ಉಡದಂತೆಯೂ ಅಲ್ಲ' ಎಂದನು. ಮತ್ತೊಂದು ದಿನ ಋಷಿಗಳನ್ನು ಕರೆಸಿ ಅರೆವಸ್ತ್ರ ಬಿಟ್ಟು ದಿಗಂಬರರಾಗಿ ಬರಲು ಹೇಳಿದ. ಋಷಿಗಳೊಪ್ಪಲಿಲ್ಲ. 'ಹಾಗಾದರೆ ಪೂರ್ತಿ ವಸ್ತ್ರವನ್ನಾದರೂ ಉಟ್ಟುಕೊಳ್ಳಿ' ಎಂದ. ಅದಕ್ಕೆ ಒಪ್ಪಿದರು. ಒಂದು ಬಟ್ಟೆಯನ್ನು ಕಚ್ಚೆಯಿಲ್ಲದೆ ಹಾಗೇ ಸುತ್ತಿ ಉಟ್ಟುಕೊಂಡರು. ಮತ್ತೊಂದು ಕಿರುವಸ್ತ್ರವನ್ನು ಹೊದೆದುಕೊಂಡರು. ಅವರಿಗೆ ಶ್ವೇತಪಟರೆಂದು ಹೆಸರಾಯಿತು. ದಕ್ಷಿಣಾಪಥದಲ್ಲಿ ಸಾಮಳಿಪುತ್ರನೆಂಬ ಅರಸನು ಅದೇ ಸಂತತಿಯವನು. ಇವನು ಶ್ವೇತಭಿಕ್ಷಜಾಪುಲಿ ಸಂಘಕ್ಕೆ ಮೊದಲಿಗನಾದನು. ಅತ್ತ ಚಂದ್ರಗುಪ್ತಮುನಿಯೂ ಸನ್ಯಸನ ವಿಧಾನದಿಂದ ದೇಹತ್ಯಾಗ ಮಾಡಿ ಬ್ರಹ್ಮಕಲ್ಪದಲ್ಲಿ ಶ್ರೀಧರದೇವನಾಗಿ ಹುಟ್ಟಿದ.

ಇದು ಭದ್ರಬಾಹು ಭಟಾರರ ಕಥೆ. ಇದರಲ್ಲಿ ಆಧುನಿಕ ಕಥೆಗಳಲ್ಲಿ ಕಾಣುವ ಹಿನ್ನೆಲೆ ಬೆಳಕುತಂತ್ರವನ್ನು ಬಳಸಿರುವುದು. ಕಥಾ ನಿರೂಪಣೆಗೆ ಕಲೆಯ ಕವಚ ತೊಡಿಸಿದಂತಾಗಿದೆ. ಮಹಾವೀರನು ಕೇವಲ ಜ್ಞಾನ ಪಡೆದ ಮೇಲೆ ಮೂವತ್ತು ವರ್ಷಗಳು ಅಖಂಡವಾಗಿ ಸರ್ವೋದಯ ಧರ್ಮವನ್ನು ಜನತೆಗೆ ಬೋಧಿಸಿದನು. ತನ್ನ ಧರ್ಮದಲ್ಲಿ ಸಮತೆಗೆ ವಿಶೇಷ ಪ್ರಾಧಾನ್ಯ ನೀಡಿದನು. ಅಲ್ಲಿ ಮೇಲು ಕೀಳು, ಬಡವ ಬಲ್ಲಿದ, ಬ್ರಾಹ್ಮಣ ಶೂದ್ರ, ಹೆಣ್ಣು ಗಂಡು ಭೇದವಿರಲಿಲ್ಲ. ಆತನ ಶ್ರಮಣ ಸಂಘದ ಬಾಗಿಲು ಮುಕ್ತವಾಗಿತ್ತು. ಗೌತಮನಂತಹ ಮಹಾಬ್ರಾಹ್ಮಣ ಆತನ ಸಂಘಾಧಿಪತಿಯಾಗಿದ್ದನು. ಹರಿಕೇಶಿಯಂಥ ಅಂತ್ಯಜ ಮುನಿದೀಕ್ಷೆ ಪಡೆದಿದ್ದನು. ಈ ರೀತಿ ಮಹಾವೀರ ಪ್ರಣೀತ ಸಮತಾಧರ್ಮಗಂಗೆ ಅಂಗ ವಂಗ ಕಾಶೀ ಕೋಶಳ ವೈಶಾಲಿ ಮಗಧಾದಿ ದೇಶಗಳಲ್ಲಿ ಹರಿಯಿತು. ಅಸಮತೆಯ ಕೊಳೆ ಕಿಲ್ಬಿಷಗಳನ್ನು ಹೃದಯದಿಂದ ತೊಳೆಯಿತು. ಮಗಧದೇಶ ಮಹಾವೀರನ ಕೇಂದ್ರವಾಗಿತ್ತು. ಶ್ರೇಣಿಕ–ಬಿಂಬಸಾರ, ಚೇಟಕ, ಅಜಾತಶತ್ರು, ಉದಾಯಿಭದ್ರ ಮೊದಲಾದವರ ಉದಾರಾಶ್ರಯದಿಂದ ಮಹಾವೀರ ಬೋಧಿಸಿದ ಧರ್ಮ ಹೆಮ್ಮರವಾಗಿ ಬೆಳೆಯಿತು. ಉದಾಯಿಭದ್ರನ ಜತೆಗೆ ಮಗಧ ರಾಜ್ಯವನ್ನು ಬೆಳಗಿದ ಶಿಶುನಾಗವಂಶವೂ ಅಸ್ತಂಗತವಾಯಿತು. ಅದರೊಡನೆ ನಂದವಂಶ ಉದಯವಾಯಿತು. ನಂದರು ಮಗಧದಲ್ಲಿ ಅಭಿಷಿಕ್ತರಾದುದು ಭಾರತೀಯ ಚರಿತ್ರೆಯಲ್ಲಿ ದೊಡ್ಡ ಘಟನೆ. ಅಲ್ಲಿಯ ತನಕ ಬ್ರಾಹ್ಮಣರು ಇಲ್ಲವೇ ಕ್ಷತ್ರಿಯರು ಮಾತ್ರ ರಾಜ್ಯಪಾಲನೆ ಮಾಡುತ್ತಿದ್ದರು. ಶೂದ್ರರನ್ನು ರಾಜಕೀಯದಿಂದ ಮತ್ತು ಧರ್ಮದಿಂದ ಬಹಳ ದೂರವಿಡುತ್ತಿದ್ದರು. ಅಂತ್ಯಜವರ್ಗ ಅತ್ಯಂತ ಉಪೇಕ್ಷಿತವಾಗಿತ್ತು. ಶೋಷಣೆಗೂ ಒಳಗಾಗಿತ್ತು. ಇಂಥ ಸಂಕುಚಿತ ಪ್ರತಿಕೂಲ ವಾತಾವರಣದಲ್ಲಿ ಬುದ್ಧ–ಮಹಾವೀರರಿಬ್ಬರೂ ಹಿಂದುಳಿದ ವರ್ಗಗಳನ್ನು ಮೇಲಕ್ಕೆತ್ತಿದರು. ಈ ಇಬ್ಬರು ಮಹಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷರ ಪುರಸ್ಕಾರ ಪ್ರೋತ್ಸಾಹಗಳಿಂದ ನಿಮ್ನವರ್ಗಗಳಿಗೂ ಉಚ್ಚಸ್ಥಾನವನ್ನಲಂಕರಿಸಲು ಅವಕಾಶ ದೊರಕಿದಂತಾಯಿತು. ಮಹಾವೀರನ ನಿರ್ವಾಣವಾದ 61 ವರ್ಷಗಳ ತರುವಾಯ ಮೊಟ್ಟಮೊದಲ ಸಲ ಭಾರತದಲ್ಲಿ ಶೂದ್ರರ ಆಡಳಿತ ಆರಂಭವಾಯಿತು. ಶೂದ್ರ ನಂದರಾಜನ ಆಡಳಿತಾವಧಿಯಲ್ಲಿ ಮಗಧ ರಾಜ್ಯ ಬಹು ಪ್ರಭಾವಶಾಲಿಯಾದ ವಿಶಾಲ ರಾಜ್ಯವಾಗಿ ಪ್ರಸಿದ್ಧವಾಯಿತು. ಈ ನಂದರಾಜನು ನೆರೆನಾಡಾದ ಕಳಿಂಗರಾಜ್ಯವನ್ನು ಗೆದ್ದು ಅಲ್ಲಿದ್ದ ಋಷಭದೇವರ ಕನಕ ಪ್ರತಿಮೆಯನ್ನು ತನ್ನ ರಾಜ್ಯಕ್ಕೆ ತಂದಿರಿಸಿಕೊಂಡನು. ಇವನಾದ ಮೇಲೆ ಮಹಾನಂದನು ತನಗೆ ಸಾಮಂತರಾಗಿರಲು ಒಪ್ಪದಿದ್ದ ಇನ್ನಿತರ ರಾಜರನ್ನು ಜಯಿಸಿ ಉತ್ತರ ಭಾರತದ ಭಾಗವನ್ನು ಏಕಚಕ್ರಾಧಿಪತ್ಯಕ್ಕೊಳಪಡಿಸಿದನು. ಇವನು ಶೂದ್ರಕುಲಕ್ಕೆ ಸೇರಿದವನೆಂಬ ಕಾರಣದಿಂದ ಕ್ಷತ್ರಿಯ ಮನೆತನಗಳು ವಿರೋಧಿಗಳಾದುವು. ಆದರೆ ಈತ ಮಾತ್ರ ಎದೆಗುಂದದೆ ಸಾಧ್ಯವಾದಷ್ಟೂ ವಿರೋಧವನ್ನು ಅಡಗಿಸಿದನು.

ವರ್ಧಮಾನ ಭಟಾರನು ಜೈನರ ವರ್ತಮಾನಕಾಲದ ತೀರ್ಥಂಕರರಲ್ಲಿ ಕಡೆಯವನು. ವೈಶಾಲಿಯ ಕುಂಡಪುರದಲ್ಲಿ ಸಿದ್ಧಾರ್ಥ ಪ್ರಿಯಕಾರಿಣಿ (ತ್ರಿಶಲೆ) ಯರಿಗೆ ಮಗನಾಗಿ ಕ್ರಿ.ಪೂ. 599 ರಲ್ಲಿ ಜನಿಸಿದ ವರ್ಧಮಾನನು ಕ್ರಿ.ಪೂ. 527 ರಲ್ಲಿ ಪಾವಾಪುರಿಯಲ್ಲಿ (ಬಿಹಾರ್) ನಿರ್ವಾಣ ಹೊಂದಿದನು. ಅರ್ಥಾತ್ ಮೋಕ್ಷಕ್ಕೆ ಹೋದನು. ಇನ್ನು 'ವರ್ಧಮಾನ ಭಟಾರರ್ ಮೋಕ್ಷಕ್ಕೆಪೋದಿಂಬಟಿಕ್ಕೆ ಚತುರ್ದಶ ಪೂರ್ವಧಾರಿಗಳಪ್ಪ ಶ್ರುತಕೇವಲಿಗಳ್' ಎಂಬುದರ ಉತ್ತರಾರ್ಧದ ವಿವರಣೆಗೆ ತೊಡಗಬಹುದು.

ವರ್ಧಮಾನ ಭಟಾರನ ಉಪದೇಶಸಾರ ತಿಳಿದವರು (ದಿಗಂಬರ ಆಮ್ನಾಯದ ಅಭಿಪ್ರಾಯದಂತೆ) ಮೂವರು (ಶ್ವೇತಾಂ. ಇಬ್ಬರು) ಕೇವಲಿಗಳು. ಅನಂತರ ಜೈನಾಗಮನದ ಹದಿನಾಲ್ಕು ಪೂರ್ವಗಳನ್ನು ಅರಿತವರು (ಚತುರ್ದಶ ಪೂರ್ವಧಾರಿಗಳು) ಅಯ್ದು ಜನ ಕೇವಲಿಗಳು.

ಚತುರ್ದಶ ಪೂರ್ವಗಳು: ಉತ್ಪಾದ ಪೂರ್ವ, ಅಗ್ರಾಯಣೀ ಪೂರ್ವ, ವೀರ್ಯಾನುವಾದ ಪೂರ್ವ. ಅಸ್ತಿನಾಸ್ತಿ ಪ್ರವಾದ ಪೂರ್ವ, ಜ್ಞಾನಪ್ರವಾದ ಪೂರ್ವ, ಸತ್ಯಪ್ರವಾದ ಪೂರ್ವ, ಆತ್ಮಪ್ರವಾದಪೂರ್ವ, ಕರ್ಮಪ್ರವಾದಪೂರ್ವ, ಪ್ರತ್ಯಾಖ್ಯಾನುವಾದಪೂರ್ವ, ವಿದ್ಯಾನುವಾದಪೂರ್ವ, ಕಲ್ಯಾಣವಾದ (ಅವಂಧ್ಯ) ಪೂರ್ವ, ಪ್ರಾಣವಾದ ಪೂರ್ವ, ಕ್ರಿಯಾವಿಶಾಲಪೂರ್ವ, (ತ್ರಿ) ಲೋಕ ಬಿಂದುಸಾರ ಪೂರ್ವ. ಈ ಹದಿನಾಲ್ಕು ಪೂರ್ವಗಳ ಜ್ಞಾನವನ್ನು ಗ್ರಹಿಸಿದ್ದವರು ಚತುರ್ದಶ ಪೂರ್ವಧಾರಿಗಳು. ಇಲ್ಲಿ 'ಪೂರ್ವ' ಶಬ್ದದ ಅರ್ಥ ಪ್ರಾಚೀನ ಎಂಬುದು. ಮಹಾವೀರನಿಗಿಂತಲೂ ಪೂರ್ವದ ಮತ್ತು ಆತನ ಕಾಲದ ಸಂಗತಿಗಳ ವರ್ಣನೆಯನ್ನೊಳಗೊಂಡಿರುವುದು "ಪೂರ್ವ".

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ಧಮಾನನು ಮೋಕ್ಷಕ್ಕೆ ಹೋದ ಬಳಿಕ ಚತುರ್ದಶ ಪೂರ್ವಧಾರಿಗಳಾದ ಶ್ರುತಕೇವಲಿಗಳು ಐಯ್ವರಿದ್ದಾರೆ. ಕೇವಲಿಗಳಾದ ಮೇಲೆ ಬಂದವರು ಶ್ರುತ ಕೇವಲಿಗಳು. ಅವರ ವಿವರ ಹೀಗಿದೆ:

	ದಿಗಂಬರ ಸಂಪ್ರದಾಯ	ಶ್ವೇತಾಂಬರ ಸಂಪ್ರದಾಯ
ಕೇವಲಿಗಳು :	ಕೇವಲಿ ಗೌತಮ	ಸುಧರ್ಮಾ
	ಸುಧರ್ಮಾಚಾರ್ಯ	ಜಂಬೂ
	ಜಂಬೂ ಸ್ವಾಮಿ	
ಶ್ರುತ ಕೇವಲಿಗಳು :	ವಿಷ್ಣು	ಪ್ರಭವ
	ನಂದಿಮಿತ್ರ	ಶಯ್ಯಂಭವ
	ಅಪರಾಜಿತ	ಯಶೋಭದ್ರ
	ಗೋವರ್ಧನ	ಸಂಭೂತಿ ವಿಜಯ
	ಭದ್ರಬಾಹು	ಭದ್ರಬಾಹು

ಇವರಲ್ಲಿ ಇಬ್ಬರ ಹೆಸರುಗಳನ್ನು ಭ. ಬಾ. ಕಥೆ ಹೆಸರಿಸಿದೆ. ಈ ಕಥೆಯಲ್ಲಿ ಬರುವ ಕೆಲವು ವಿಶಿಷ್ಟ ಶಬ್ದಗಳನ್ನು ಒಂದೊಂದಾಗಿ ಪರಿಶೀಲಿಸಬಹುದು. ಅವುಗಳಲ್ಲಿ ಕಟ್ವಪ್ಪು, ತಿಮುಟನಾಟಿಗ್ಗಿ, ದ್ರವಿಟ ವಿಷಯ.

ಜಾಪುಲಿ ಸಂಘ (ಯಾಪನೀಯ ಶಾಖೆ), ಜಿನಕಲ್ಪ, ಸ್ಥವಿರ ಕಲ್ಪ—ಇವುಗಳ ಪ್ರಸ್ತಾಪ ಗಮನಾರ್ಹವಾದುದು. ಯಾಪನೀಯದ ಪ್ರಾಚೀನತೆ ಬಗ್ಗೆ ಚರ್ಚೆಗಳಿವೆ. ವಡ್ಡಾರಾಧನೆಯಲ್ಲಿ ಉಲ್ಲೇಖವಾಗಿರುವಂತೆ, ಇದು ದಕ್ಷಿಣಾಪಥದೊಳಗೆ ಮೊದಲಾಯಿತೆಂಬುದು ಸತ್ಯ ಸಂಗತಿಯೆಂದೂ ತೋರುತ್ತದೆ.

ರಟ್ಟರ ದೊರೆ ಪ್ರಭೂತವರ್ಷನ (ಶಕಸಂವತ್ 735) ದಾನಪತ್ರವೊಂದರಲ್ಲಿ ಮಾನ್ಯಪುರದ ಶಿಲಾಗ್ರಾಮವೆಂಬ ಜಿನಮಂದಿರದ ಉಪಯೋಗಕ್ಕಾಗಿ ಜಾಲಮಂಗಲ ಗ್ರಾಮವನ್ನು ವಿಜಯಕೀರ್ತಿ, ಅರ್ಕಕೀರ್ತಿ ಎಂಬ ಮುನಿಗಳಿಗೆ ದಾನ ಕೊಟ್ಟ ವಿವರವಿದೆ. ಅದರಲ್ಲೇ "ಶ್ರೀ ಯಾಪನೀಯ ನಂದಿಸಂಘ ಪುನ್ನಾಗ ವರ್ಷ ಮೂಲಗಣೇ" ಎಂಬ ಮಾತು ಬರುತ್ತದೆ.

"ಪುನ್ನಾಗ" ಎಂಬ ಹೆಸರು ಶ್ರುತಾವತಾರದಲ್ಲಿ ಬರುವ 'ನಾಗಕೇಸರ ವೃಕ್ಷ' ವಿರಬೇಕೆಂದು ಊಹಿಸಬಹುದಾದರೂ ತೊಡಕುಗಳಿವೆ. ಕನ್ನಡ ವಡ್ಡಾರಾಧನೆ ರಚಿತವಾದ ಕಾಲದಲ್ಲಿ (?) ಯಾಪನೀಯ ಸಂಘ ಪ್ರಚಾರದಲ್ಲಿತ್ತೆಂದು ಸ್ಪಷ್ಟವಾಗಿ ತಿಳಿಯಬಹುದು ; ಅದಕ್ಕೂ ಪೂರ್ವದಲ್ಲೇ ಯಾಪನೀಯ ಸಂಘ ಪ್ರಾರಂಭವಾಗಿತ್ತೆಂಬುದನ್ನು ಬಾಹ್ಯ ಆಧಾರಗಳು ತಿಳಿಸುತ್ತವೆ. ಅಂತೂ ಸ್ಥೂಲವಾಗಿ ಕ್ರಿ.ಶ. ದ ಆರಂಭದಿಂದ 12ನೆಯ ಶತಮಾನದ ವರೆಗೆ ಈ ಜೈನ ಶಾಖೆ ಅಸ್ತಿತ್ವದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತೆಂದು ಹೇಳಬಹುದು. ಕನ್ನಡನಾಡಿನ ಈಗಿನ ಕಲ್ಬುರ್ಗಿ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯ ಭೂಪ್ರದೇಶ ಈ ಶಾಖೆಗೆ ಕಾರ್ಯಕ್ಷೇತ್ರವಾಗಿತ್ತು. ದಿಗಂಬರ–ಶ್ವೇತಾಂಬರ ಆಮ್ನಾಯಗಳನ್ನು ಜೈನ ಧರ್ಮದ ಎರಡು ತುದಿಗಳೆಂದೂ, ಯಾಪನೀಯ ಅವೆರಡರ ನಡುವಣ ಸುಧಾರಣಾಬಿಂದುವೆಂದೂ ಭಾವಿಸಬಹುದು. ದಿಗಂಬರ ನಗ್ನತ್ವವನ್ನೂ, ಶ್ವೇತಾಂಬರರ 'ಸ್ತ್ರೀಯರಿಗೂ ಅದೇ ಭವದಲ್ಲಿ ಮೋಕ್ಷವುಂಟೆ'ಂಬುದನ್ನೂ ಯಾಪನೀಯರು ಮಾನ್ಯ ಮಾಡಿದ್ದಾರೆ. ಧಾರವಾಡಕ್ಕೆ ವಾಯುವ್ಯ ದಿಕ್ಕಿನಲ್ಲಿ ಹದಿನಾರು ಕಿಲೋಮಿಟರ್ ದೂರದಲ್ಲಿರುವ ಗರಗ ಎಂಬ ಗ್ರಾಮದ ಎರಡು ಶಾಸನಗಳಲ್ಲಿ (ಕೆರೆಯ ದಂಡೆಯ ಮೇಲಿನ ಶಾಸನಗಳಲ್ಲಿ) ಯಾಪನೀಯ ಸಂಘದ 'ಕುಮ್ಮುಡಿಗಣದ ಆಚಾರ್ಯ ಶಾಂತವೀರ ದೇವರು' ಸಮಾಧಿಮರಣವನ್ನು 1290ರ ಜುಲೈ 27ರಂದು ಗುರುವಾರ ಪಡೆದರೆಂಬ ಸಂಗತಿಯ ಉಲ್ಲೇಖವಿದೆ. ಭದ್ರಬಾಹು ಕಥೆಯಲ್ಲಿ ಉಲ್ಲೇಖವಾಗಿರುವ ಜಿನಕಲ್ಪ ಎಂಬುದು ದಿಗಂಬರ ಪರಂಪರೆಯನ್ನೂ ಸ್ಥವಿರಕಲ್ಪ ಶ್ವೇತಾಂಬರ ಪರಂಪರೆಯನ್ನೂ ಸೂಚಿಸುತ್ತವೆಂದು ತಿಳಿಯಬಹುದು. ಶ್ವೇತಾಂಬರ ಗುರುಪರಂಪರೆಯನ್ನು ನಿರೂಪಿಸುವ ಪಟ್ಟಾವಲಿಗೆ 'ಸ್ಥವಿರ ಪಟ್ಟಾವಲಿ' ಎಂದು ಹೇಳಿದೆ ; ಆ ಸ್ಥವಿರ ಪಟ್ಟಾವಲಿಯಲ್ಲಿ ಸ್ಥವಿರ ಸಂಭೂತಿ ವಿಜಯನಿಂದ ಪಟ್ಟಿ ಮುಂದುವರಿಯುತ್ತದೆ. ಸಂಭೂತಿವಿಜಯ ಆಚಾರ್ಯನೂ ಭದ್ರಬಾಹುವಿನ ಸಮಕಾಲೀನ, ಶ್ವೇತಾಂಬರರೂ ಭದ್ರಬಾಹುವನ್ನು ತಮ್ಮ ಆಚಾರ್ಯನೆಂದು ಗೌರವಿಸುತ್ತಾರೆ.

ಈಗಿನ ಶ್ರವಣಬೆಳಗೊಳಪ್ರದೇಶ ಸಾವಿರ ವರ್ಷಗಳ ಹಿಂದೆ ಒಂದು ಅಡವಿಯಾಗಿತ್ತು. ಅದನ್ನು ಕಟ್ವಪ್ಪು ನಾಡು ಎಂದು ಕರೆಯುತ್ತಿದ್ದರು. ಆಗ ಚಿಕ್ಕ ಬೆಟ್ಟ ಮಾತ್ರ, (ಚಂದ್ರಗಿರಿ) ಪ್ರಸಿದ್ಧಿ ಪಡೆದಿತ್ತು. ಭ. ಬಾ. ಕಥೆಯಲ್ಲಿ ಒಂದೆಡೆ ಹೇಳಿರುವ 'ಅಡವಿಯ ಬೆಟ್ಟ'ವೆಂಬುದು ಈ ಚಂದ್ರಗಿರಿಯೇ. ದಾರಿಗರು ಈ ಅಡವಿಯಲ್ಲಿ ಬೀಡುಬಿಡುತ್ತಿದ್ದರು. ಈ ಕಥೆಯಲ್ಲಿ ಬರುವ ಕಾಂತಾರ ಭೈಕ್ಷವೆಂಬುದೂ ಈ ಪ್ರದೇಶ ಅರಣ್ಯವಾಗಿತ್ತೆಂಬುದನ್ನು ಪುಷ್ಟೀಕರಿಸುತ್ತದೆ. ಬಹುಶಃ ಈಗಿನ ದೊಡ್ಡ ಬೆಟ್ಟಕ್ಕೆ ಪ್ರಾಶಸ್ತ್ಯ ಬಂದಾಗಿನಿಂದ, ಗೊಮ್ಮಟ ವಿಗ್ರಹದ ಪ್ರತಿಷ್ಠಾಪನ ಕಾಲದ ವೇಳೆಗೆ ಅರಣ್ಯ ಕಡಮೆಯಾಗಿರಬೇಕೆಂದು ಊಹಿಸಲವಕಾಶವಿದೆ. ವಡ್ಡಾರಾಧನಕಾರ ಮೂಲದಲ್ಲಿ ಇಲ್ಲದುದನ್ನು ಹೊಸದಾಗಿ ಸೇರಿಸುವ ಸ್ವಾತಂತ್ರ್ಯ ಅಲ್ಲಲ್ಲಿ ವಹಿಸುತ್ತಾನೆ. ಉದಾ : ಕಾರ್ತಿಕ ಋಷಿಯ ಕಥೆಯಲ್ಲಿ ನೂತನವಾಗಿ 'ಕೋಗಳಿ' ಗ್ರಾಮವನ್ನು ಕಥೆಗೆ ಕೊಂಡಿ ಹಾಕಿರುವುದು. ಈ ರೀತಿ ನವೀನ ಕಲ್ಪನೆ ಕೂಡಿಸುವಲ್ಲಿ ಔಚಿತ್ಯ ಮೀರುವುದಿಲ್ಲ. ಕನ್ನಡ ನಾಡಿನ ಈ ಲೇಖಕ ಗೊಮ್ಮಟ ವಿಗ್ರಹ ಪ್ರತಿಷ್ಠಾಪನೆಯ ತರುವಾಯ ಈ ಕಥೆ ಬರೆದಿದ್ದರೆ ಸಹಜವಾಗಿಯೇ ಕಟ್ವಪ್ಪು ನಾಡಿನ ದೊಡ್ಡ ಬೆಟ್ಟವನ್ನೂ ಗೊಮ್ಮಟನನ್ನೂ ಪ್ರಸ್ತಾಪಿಸುತ್ತಿದ್ದನೆಂದು ಊಹಿಸಲು ಅವಕಾಶವಿದೆ. ಆದರೆ ಇದು ತೀರ ತೆಳುವಾದ ಊಹೆಯಾಗಿದೆ. ಏಕೆಂದರೆ ಕಥೆಯ ಘಟನೆ ನಡೆದಿರುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಿಸ್ತಪೂರ್ವದಲ್ಲಿ. ಆಗಿನ್ನೂ ಇದು ಕೇವಲ ಕಾಂತಾರ ಪ್ರದೇಶ. ಕಟ್ವಪ್ಪು ಎಂಬ ಹೆಸರಷ್ಟೇ ಇದ್ದ, ಬೆಳ್ಗೊಳ ಎಂಬ ಹೆಸರು ರೂಢಿಗೆ ಅಡಿಯಿಡದಿದ್ದ ಎರಡು ಸಾವಿರ ವರ್ಷಗಳ ಹಿಂದಿನ ಕಾಲ. ಈ ಕಾಲಪ್ರಜ್ಞೆಗೆ ಕಟ್ಟುಬಿದ್ದು ಕಥೆಗಾರ ಗೊಮ್ಮಟನನ್ನು ಇದರಲ್ಲಿ ಉಲ್ಲೇಖಿಸಲಿಲ್ಲವೆಂದು ತಿಳಿಯಬಹುದು.

ಕಟ್ವಪ್ಪಿಗೆ ಭದ್ರಬಾಹುವಿನೊಡನೆ ಬಂದ ದೊರೆ ಸಂಪ್ರತಿ ಚಂದ್ರಗುಪ್ತ ನೆಂಬುದು ಗಮನಾರ್ಹ. ಚರಿತ್ರಕಾರರಿಗೆ ಇದೊಂದು ಸುಳಿವು ಆಗಿರುವಂತೆ ಈ ಸೂಚನೆಯನ್ನು ಅನಾಮತ್ತಾಗಿ ಅಂಗೀಕರಿಸಲು ಸಾಧಕಬಾಧಕಗಳು ಇರಬಹು ದಾದ್ದರಿಂದ, ಇದೊಂದು ಸಮಸ್ಯೆಯೂ ಆಗಿದೆ. ಏನೇ ಇದ್ದರೂ ಇದಕ್ಕಿರುವ ಮಹತ್ವವನ್ನು ಅಲ್ಲಗಳೆಯುವಂತಿಲ್ಲ. ಮೌರ್ಯರಿಗೂ ಕರ್ನಾಟಕಕ್ಕೂ ಸಂಬಂಧ ಏರ್ಪಟ್ಟ ಸಂಗತಿಯನ್ನು ಇದು ಸ್ಪಷ್ಟವಾಗಿ ಸಾರುತ್ತದೆ. ಅಖಿಲ ಭಾರತ ವ್ಯಾಪ್ತಿಗೆ ಕರ್ನಾಟಕ ಸೇರಿದ ಚಾರಿತ್ರಿಕ ಹಿನ್ನೆಲೆಯನ್ನು ಇದು ಒದಗಿಸುತ್ತದೆ.

ತಿಮುಟನಾಟ್ಗೆ ಎಂಬ ಪ್ರಯೋಗವೂ ದ್ರಾವಿಡ ಭಾಷಾ ವಿಜ್ಞಾನದ ದೃಷ್ಟಿ ಯಿಂದ ಪರಿಶೀಲನಾರ್ಹವಾಗಿದೆ. ತಮಿೞ್—ದಮಿೞ್—ದ್ರಾ (ದ್ರ) ವಿಡ ಎಂಬ ಶಬ್ದರೂಪಗಳ ಆದಿಯಲ್ಲಿನ ಘೋಷ—ಅಘೋಷ ಧ್ವನಿಯ ಬಗ್ಗೆ ಚರ್ಚೆ ಇದೆ. ಹತ್ತನೆಯ ಶತಮಾನದ ಈ ಪ್ರಯೋಗ ಶಬ್ದಾದಿಯಲ್ಲಿ ಅಘೋಷ ಸ್ಪರ್ಶ ಧ್ವನಿ ಯನ್ನು ತೋರಿಸುತ್ತದೆ. ಇದೇ ಕೃತಿಯಲ್ಲಿ ಸಂಸ್ಕೃತ ಸಮಾಸ ರೂಪದಲ್ಲಿ 'ದ್ರವಿಟ ವಿಷಯಕ್ಕೆ' ಎಂಬ ಪ್ರಯೋಗವಿದೆ. ಈಗಿನ 'ತಮಿಳು ನಾಡು' ಎಂಬ ಅರ್ಥವನ್ನೇ ಇದು ಹೊಂದಿರುವುದು ಸ್ವಾರಸ್ಯವಾಗಿದೆ. ಇಲ್ಲಿನ 'ತಿಮುಟ್/ದ್ರವಿಡ' ಎಂಬುದು ಭಾಷಾವಾಚಕಕ್ಕಿಂತ ಪ್ರದೇಶ ಸೂಚಕವಾಗಿದೆಯೆಂದು ತೋರುತ್ತದೆ. ಇದರಂತೆ 'ಮಗಧ'ದ ಪ್ರಸ್ತಾಪವೂ ಪರಿಶೀಲನಾರ್ಹವಾಗಿದೆ. 'ಮಗಧ'ದ ಮಹತ್ವ ನಾಲ್ಕು ರಾಜವಂಶದವರ ಆಳ್ವಿಕೆಯುದ್ದಕ್ಕೂ ಕಾಣಬಹುದು. ಕ್ರಿ.ಪೂ. ಏಳನೆಯ ಶತಮಾನದಿಂದ ಇಂದಿನ ಪಾಟನಾ ಮತ್ತು ಗಯಾ ಜಿಲ್ಲೆಗಳ ಪ್ರದೇಶ. ಇದಕ್ಕೆ ರಾಜಗೃಹ (ಅಥವಾ ಗಿರಿವ್ರಜ) ರಾಜಧಾನಿಯಾಗಿತ್ತು; ಇದು ಇಂದಿನ ಪಾಟನಾದ ರಾಜಗಿರ್.

ಮಗಧವನ್ನು ಮೊದಲು ಆಳಿದವರು ಹರ್ಯಾಂಕವಂಶ. ಅದಕ್ಕೂ ಹಿಂದೆ ವಸು, ಆತನ ಮಗ ಬೃಹದ್ರಥ ಮತ್ತು ಆತನ ಮಗ ಜರಾಸಂಧ—ಇವರು ಇಲ್ಲಿ ಬಾಳಿದಂತೆ ಹೇಳಿಕೆಗಳಿವೆ. ಬಿಂಬಸಾರ (588–500). ಅವನ ಮಗ ಅಜಾತ ಶತ್ರು (500–475). ಅಜಾತಶತ್ರು ವೈಶಾಲಿ, ಅವಂತಿ ರಾಜರನ್ನು ಸೋಲಿಸಿದ. ಹರ್ಯಾಂಕವಂಶದವರಾದ ಮೇಲೆ ಶಿಶುನಾಗವಂಶದವರ ರಾಜ್ಯಭಾರ ಪ್ರಾರಂಭ ವಾಯಿತು. ಇವರು ಸುಮಾರು 350 ವರ್ಷ ಆಳಿದರು. ಪ್ರಥಮ ರಾಜನಾದ ಶಿಶುನಾಗನಿಗೆ ವೈಶಾಲಿ ರಾಜಧಾನಿ. ಅನಂತರದ ಕಲಾಕೋಸಲನಿಗೆ ಪಾಟಲೀ ಪುತ್ರ ರಾಜಧಾನಿ. ಇವನಿಗೆ ಹತ್ತು ಜನ ಮಕ್ಕಳಿದ್ದು ಅವರು ಚಿಕ್ಕವರೂ ಶಕ್ತಿಹೀನರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗಿ ರಾಜ್ಯಭ್ರಷ್ಟರಾದರು. ಶಿಶುನಾಗವಂಶ ಮುಗಿದು ನಂದರ ಆಳ್ವಿಕೆ ಪ್ರಾರಂಭವಾಯಿತು ಇವರಲ್ಲಿ ಮಹಾಪದ್ಮನಂದನು 28 ವರ್ಷ ರಾಜನಾಗಿದ್ದನು ಇವನಿಗೆ ಎಂಟು ಜನ ಮಕ್ಕಳು. ಅವರಲ್ಲಿ ಕಡೆಯವನು ಧನನಂದ. ಇವನು ಜನಪ್ರಿಯನಾಗಿರಲಿಲ್ಲ. ಇವನನ್ನು ಕೊಂದು ಚಂದ್ರಗುಪ್ತಮೌರ್ಯನು 322 ರಲ್ಲಿ ಪಟ್ಟ ಹತ್ತಿ ಮೌರ್ಯ ಸಾಮ್ರಾಜ್ಯ ಸ್ಥಾಪಕನಾದ. ಮೆಗಾಸ್ತನೀಸ್ (ಮೆಗಸ್ತನೀಸ) ನೆಂಬ ರಾಯಭಾರಿ ಇವನ ಕಾಲಕ್ಕೆ ಸಂಬಂಧಿಸಿದವನು. ಚಂದ್ರಗುಪ್ತನ (322–300) ತರುವಾಯ ಅವನ ಮಗ ಬಿಂದುಸಾರ (300–273) ಪಟ್ಟಾಭಿಷಿಕ್ತನಾದ. ಇವನಿಗೆ ಗಂಡುಮಕ್ಕಳೂ (ಸುಸೀಮ) ಹೆಣ್ಣುಮಕ್ಕಳೂ ಹಲವರಿದ್ದರು. ಚಾಣಕ್ಯನು ಚಂದ್ರಗುಪ್ತನ ಕಾಲದಲ್ಲೂ ಬಿಂದುಸಾರನ ಕಾಲದಲ್ಲೂ ಮಂತ್ರಿಯಾಗಿದ್ದನು. ಬಿಂದುಸಾರನ ಮಕ್ಕಳಲ್ಲಿ ಉಳಿದವರನ್ನು ಹತ್ತಿಕ್ಕಿ ಅಶೋಕನು (273–223) ಪಟ್ಟವೇರಿದ. ಮೌರ್ಯರಾದ ಮೇಲೆ ಸುಂಗ, ಕಣ್ವ, ಕುಶಾನ, ಶಾತವಾಹನ ಮೊದಲಾದ ರಾಜವಂಶದವರು ಕಾಣಿಸಿಕೊಂಡರು. ಈ ಎಲ್ಲ ದೊರೆಗಳ ಕಾಲದಲ್ಲೂ ಮಗಧದ ಔನ್ನತ್ಯ ಮಾಸಿರಲಿಲ್ಲವೆನ್ನಬಹುದು. ಇದಿಷ್ಟೂ ಕ್ರಿಸ್ತಪೂರ್ವದಿಂದ ಕ್ರಿಸ್ತಶಕದ ಆರಂಭದ ಶತಮಾನದ ವರೆಗಿನ ರಾಜಮನೆತನಗಳ ಸ್ಥೂಲ ಹಾಗೂ ಸಂಕ್ಷಿಪ್ತ ಚರಿತ್ರೆ. ಬೌದ್ಧ ಮತ್ತು ಜೈನ ಧಾರ್ಮಿಕ ಪರಂಪರೆಯೂ ಇದನ್ನು ಬಹುವಾಗಿ ಅನುಮೋದಿಸುತ್ತದೆ. ಆರೇಳು ಶತಮಾನಗಳ ಈ ಅವಧಿಯಲ್ಲಿ ವಿದೇಶ ಆಕ್ರಮಣಗಳೂ ಆಗಿವೆ. ಪಾರಸಿಯ ಮೊದಲನೆಯ ದೊರೆ ಡೇರಿಯಸ್ (522–468), ಗ್ರೀಕರ ಅಲೆಗ್ಸಾಂಡರ್ (326)—ಇವರನ್ನು ಇಲ್ಲಿ ಉಲ್ಲೇಖಿಸಬಹುದು ಅಂಭಿ (ತಕ್ಷಶಿಲೆ), ಪೌರಸ್ ಮೊದಲಾದ ಪರಾಕ್ರಮಿ ರಾಜರೂ ಉತ್ತರದಲ್ಲಿದ್ದರು. ಆದರೆ ಜೈನ–ಬೌದ್ಧ ಸಾಹಿತ್ಯ ಇವುಗಳ ಬಗ್ಗೆ ಮಾಹಿತಿಗಳನ್ನೊದಗಿಸುವುದಿಲ್ಲ. ವಡ್ಡಾರಾಧನೆಯ ಭ. ಬಾ. ಕಥೆಯಲ್ಲೇ ಅಲ್ಲದೆ ಇನ್ನಿತರ ಕೆಲವು ಕಥೆಗಳಲ್ಲಿಯೂ ಮಗಧೆ ಮತ್ತು ಅದರ ಸುತ್ತಮುತ್ತಲ ಪ್ರದೇಶವಾಗಿರುವುದು ಕಂಡುಬರುತ್ತದೆ.

ವಡ್ಡಾರಾಧನಕಾರ ಕೆಲವು ಕತೆಗಳಲ್ಲಿ ಒಂದೆಡೆ ಹೇಳದೆ ಬಿಟ್ಟುದನ್ನು ಅದೇ ಕಥೆಯಲ್ಲಿ ಇನ್ನೊಂದೆಡೆ ಹೇಳುವುದುಂಟು. ಇದಕ್ಕೆ ಭ. ಬಾ. ಕಥೆಯಲ್ಲಿಯೇ ಎರಡು ಉದಾಹರಣೆಗಳಿವೆ. (1) ಪಾಟಲೀಪುತ್ರದ ಬಹಿರುದ್ಯಾನವನಕ್ಕೆ ಸಮಾಧಿಗುಪ್ತ ಆಚಾರ್ಯರು ಬಂದಿಳಿದರೆಂದು ಹೇಳಿದೆ. (30) ಅವರು ಚಂದ್ರಗುಪ್ತನಿಗೆ ಅವನ ಹಿಂದಿನ ಎರಡು ಭವಗಳ ಕಥೆಯನ್ನು ವಿಸ್ತಾರವಾಗಿ ಹತ್ತು ಪುಟಗಳಲ್ಲಿ ತಿಳಿಸುತ್ತಾರೆ. ಆ ನಿರೂಪಣೆ ಮುಗಿದ ಕೂಡಲೆ (77) ಚಂದ್ರಗುಪ್ತನು ಉಜ್ಜಯಿನಿಯನ್ನು ಆಳುತ್ತಾ ಸುಖವಾಗಿದ್ದನು ಎಂದಿದೆ. ಅಂದರೆ ಚಂದ್ರಗುಪ್ತ ರಾಜಧಾನಿಯನ್ನು ಪಾಟಲೀಪುತ್ರದಿಂದ ಉಜ್ಜಯಿನಿಗೆ ಬದಲಾಯಿಸಿದನೆ? ಅಥವಾ ಅವೆರಡೂ ಒಂದೇ ಪಟ್ಟಣದ ಹೆಸರುಗಳೆ? ಎಂಬ ಸಂಶಯಕ್ಕೆಡೆಯಿದೆ. (2) ಭದ್ರಬಾಹು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟಾರರು ಉಜ್ಜಯಿನಿಗೆ ಬಂದು ಪಟ್ಟಣದ ಹೊರಗಿನ ಉದ್ಯಾನವನದಲ್ಲಿ ತಂಗಿದರು ಎಂದು ಹೇಳಿದೆ. (85) ಆದರೆ ಅವರು ಒಂದು ದಿನ ಚರಿಗೆಗೆ ಹೋಗಿ ಅಲಾಭವಾಗಿ ಬಸದಿಗೆ ಹಿಂತಿರುಗಿದರು ಎಂದು ಅದೇ ಪುಟದಲ್ಲಿ ತಿಳಿಸಿದೆ. ಅಂದರೆ ಬಹಿರುದ್ಯಾನ ದಲ್ಲಿ ಬಸದಿಯಿತ್ತೆಂದು ಊಹಿಸಿಕೊಳ್ಳಬೇಕಾಗುತ್ತದೆ. ಆದರೂ ಈ ಸಂಗತಿಗಳು ಕಥೆಯ ಸಾವಯುವ ಶಿಲ್ಪದಲ್ಲಿ ವಿಸಂಗತಿಗಳಾಗಿ ಸಿಡಿಯುವುದಿಲ್ಲ. ಕಥೆಗಳ ಒಟ್ಟಂದ ದಲ್ಲಿ ಎಲ್ಲೋ ಮರೆಗೆ ಸರಿದುಬಿಡುತ್ತವೆ.

ಭದ್ರಬಾಹು ಭಟಾರರ ಕಥೆಯಲ್ಲಿ ಬರುವ 12 ವರ್ಷಗಳ ದುರ್ಭಿಕ್ಷದ (ಪನ್ನೆರಡು ವರುಷಂಬರೆಗಮನಾವೃಷ್ಟಿಯಾಗಿ ದುರ್ಭಿಕ್ಷಮಾದಪ್ಪುದೀ ನಾಡೊಳ್) ಮಾತು ನಿಜವಾದರೆ ಚಾರಿತ್ರಿಕ ಸತ್ಯವಾದರೆ 2,500 ವರ್ಷಗಳ ಹಿಂದೆ ಉತ್ತರ ಭಾರತದ ಮಗಧ ರಾಜ್ಯದಲ್ಲಿ ಸಂಭವಿಸಿದ ಕ್ಷಾಮದ ಒಂದು ಐತಿಹಾಸಿಕ ದಾಖಲೆ ಇಲ್ಲಿ ದೊರೆತಂತೆ ಆಗುತ್ತದೆ. ಭ. ಬಾ. ಕಥೆಯ ಪರಿಸರದಲ್ಲಿ ಈ ಕ್ಷಾಮದ ಮಹತ್ವ ವೆಂದರೆ ಅದು ಜೈನಧರ್ಮದಲ್ಲಿ ಕವಲುಗಳುಂಟಾಗಲು ಒಂದು ಮುಖ್ಯ ಕಾರಣ ವಾಯಿತೆಂಬುದು. ಕ್ಷಾಮಡಾಮರಗಳು ಮನುಷ್ಯನ ನಿಷ್ಠೆ ನಂಬಿಕೆ ನಿಲುವುಗಳನ್ನು ಹೇಗೆ ಸಡಿಲಿಸಬಲ್ಲುವೆಂಬುದಕ್ಕೆ ಇದೊಂದು ಜ್ವಲಂತ ನಿದರ್ಶನವಾಗಿದೆ. ಇಲ್ಲಿ ಕ್ಷಾಮ ಕೇವಲ ಅಚೇತನೋಪಸರ್ಗವಾಗಿ ಪರ್ಯವಸಾನವಾಗದೆ ಒಂದು ಧರ್ಮದ ದಾರಿಯಲ್ಲಿ ಅಡ್ಡಲಾಗಿ ಧರ್ಮ ಎರಡು ಸೀಳಾಗಿ ಸಾಗುವಂತೆ ಮಾಡಿದೆ. ನಿಸರ್ಗದ ಮಡಿಲಲ್ಲಿ ಮಾನವ ಮಗುವಿದ್ದಂತೆ.

ಭದ್ರಬಾಹುಗಳು ಋಷಿಸಮುದಾಯದ ಮುಖಂಡರು. ಮುಖಂಡನ ಮಾತು ಪಾಲಿಸುವುದು ಲೋಕರೂಢಿಗಿಂತ ಹೆಚ್ಚು ಮುಖ್ಯ ನಿಯಮ ಮುನಿಧರ್ಮದಲ್ಲಿ. ಹೀಗಿದ್ದೂ ಭದ್ರಬಾಹುಗಳು 'ರಿಸಿ'ಗಳಿಗೆ ಕ್ಷಾಮನಿಮಿತ್ತವಾಗಿ ಮಧ್ಯದೇಶವನ್ನು ಬಿಟ್ಟು ತೆಂಕಣವೆಡೆಗೆ ತೆರಳಲು ಆಜ್ಞಾಪಿಸಿದರೂ, ಮೂವರು ಋಷಿಗಳು ಒಪ್ಪಲಿಲ್ಲ. ಅಂದರೆ ಭದ್ರಬಾಹುಗಳ ಕಾಲಕ್ಕೆ ಸ್ಪಷ್ಟವಾಗಿ, ಬಹಿರಂಗವಾಗಿ ಆಜ್ಞೋಲ್ಲಂಘನೆ ಕಂಡುಬರುತ್ತದೆ. ಯತಿಸಂಘದ ಶೈಥಿಲ್ಯಕ್ಕೆ, ಅದಕ್ಕೂ ಮೊದಲೇ, ವಿಶಾಖಾ ಚಾರ್ಯರ ಕಾಲಕ್ಕೇ ಇದರ ಅಂಕುರಾರ್ಪಣೆಯಾಗಿರಬೇಕು. ಏಕೆಂದರೆ ಆ ಮೂವರನ್ನು ಅನುಸರಿಸುವ ಹಿಂಬಾಲಕ ಮುನಿಗಳೂ ಇದ್ದರು ಮತ್ತು ಅವರೆಲ್ಲ ಸಿಂಧೂದೇಶಕ್ಕೆ ಹೋದರು. ವ್ಯಕ್ತಿಗಳಲ್ಲಿರುವಂತೆ ಯತಿಗಳಲ್ಲೂ ತಮಗೆ ತೋಚಿದ, ತಿಳಿದ, ಸರಿಕಂಡ ದಾರಿಯನ್ನು ತಾವು ಹಿಡಿಯುವ ಸ್ವಚ್ಛಂದಪ್ರವೃತ್ತಿ ಕಾಣುತ್ತದೆ. ಹಾಗಾದರೆ ಈ ಋಷಿಸಮುದಾಯದಲ್ಲಿ ಬಿರುಕು ತೋರಿದ್ದು ಯಾವಾಗ ಎಂಬ ಪ್ರಶ್ನೆ ಏಳುತ್ತದೆ. ಮಹಾವೀರರ ನಿರ್ವಾಣದ ಅನತಿಕಾಲದಲ್ಲೇ, ಜೈನ ಯತಿಸಂಘದಲ್ಲಿ ವಿರಸ ಹೊಗೆ ಯಾಡಿತೆಂದು ಅನ್ಯ ಆಧಾರಗಳಿಂದ ತಿಳಿದುಬರುತ್ತದೆ. ಬೌದ್ಧ ಧಾರ್ಮಿಕ ಸಾಹಿತ್ಯದಲ್ಲಿ ಇದಕ್ಕೊಂದು ನಿದರ್ಶನವಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭದ್ರಬಾಹುವಿನ ಹೆಸರು ಈ ಕಥೆಗೆ ಕೊಟ್ಟಿದ್ದರೂ ಅದು ಎಷ್ಟರಮಟ್ಟಿಗೆ ಒಪ್ಪುತ್ತದೆಂಬುದು ಪ್ರಶ್ನಾರ್ಹವಾಗಿ ನಿಲ್ಲುತ್ತದೆ. ಶ್ರುತಕೇವಲಿಗಳಲ್ಲೊಬ್ಬನೆಂಬ ಕಾರಣದಿಂದ ಕಥೆಗೆ ಆತನ ಹೆಸರಿಟ್ಟಿರಬಹುದು. ಕಥೆಯ ಆರಂಭ ಮತ್ತು ಮುಕ್ತಾಯ ಭದ್ರಬಾಹುವಿನ ಪ್ರಸ್ತಾಪದಿಂದ ಕೂಡಿದೆಯೆಂಬುದೂ ಸರಿಯೆ. ಆದರೆ ಭದ್ರಬಾಹು ಈ ಕಥೆಯ ಮೈಯಲ್ಲಿ ಉದ್ದಕ್ಕೂ ಸಮಪ್ರಮಾಣದಲ್ಲಿ ಚಾಚಿ ಕೊಳ್ಳುವುದಿಲ್ಲ. ಸುಕುಮಾರಸ್ವಾಮಿ ಕಥೆಯಲ್ಲಿ ಆ ಪಾತ್ರ ಆ ಹೆಸರಿನಿಂದ ನೇರವಾಗಿ ಪ್ರತ್ಯಕ್ಷವಾಗುವುದು ಕಥಾಂತ್ಯದ ಭಾಗದಲ್ಲಿಯಾದರೂ, ಕಥೆಗೆ ಆತನ ಹೆಸರು ಉಚಿತವಾಗಿ ನಿಲ್ಲುತ್ತದೆ. ಒಟ್ಟು ಕಥೆಯು ಆ ಜೀವದ ಹಿಂದಿನ ಭವಗಳ ಕಥಾನಕ ವನ್ನು ಅವಿಚ್ಛಿನ್ನವಾಗಿ ಒಳಗೊಂಡಿರುವುದರಿಂದ. ಭದ್ರಬಾಹು ಕಥೆಯಲ್ಲಿ ಭದ್ರ ಬಾಹುವಿನ ಈ ಭವದ ಬದುಕು ಬಿಟ್ಟರೆ ಭವಾವಳಿಗಳು (ಹಿಂದಿನವು) ಬರುವುದಿಲ್ಲ. (ಸಂಪ್ರತಿ) ಚಂದ್ರಗುಪ್ತ ಭಟಾರರ ಕಥೆ ಎಂಬ ಹೆಸರನ್ನು ಕಥೆಗೆ ಕೊಡಬಹುದಿತ್ತು. ಎರಡು ಪ್ರಮುಖ ಕಾರಣಗಳು ಈ ಸೂಚನೆಯನ್ನು ಬೆಂಬಲಿಸುತ್ತವೆ. 1. ಚಕ್ರವರ್ತಿ ಯಾಗಿದ್ದವನು, ಸಿಂಹಾಸನ ಬಿಟ್ಟು ಸನ್ಯಾಸ ಸ್ವೀಕರಿಸಿದನು. 2. ಅವನ ಸುದೀರ್ಘ ಭವಾವಳಿ ಕಥೆಯಿದೆ.

ಚಕ್ರವರ್ತಿಯಾಗಿದ್ದವನು ಸಿಂಹಾಸನ ಬಿಟ್ಟು ಸನ್ಯಾಸ ಸ್ವೀಕರಿಸಿ ಮುನಿಸಂಘ ದೊಡನೆ ಉತ್ತರದಿಂದ ದಕ್ಷಿಣಕ್ಕೆ ಬರುತ್ತಾನೆ, ಮತ್ತೆ ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತಾನೆ. ಕಟ್ವಪ್ಪಿನ ನಾಡಿನಲ್ಲಿ (ಕಾಡಿನಲ್ಲಿ) ಕಷ್ಟದ ಕಾಲ, ಅದೂ 12 ವರ್ಷ ಕಳೆಯುತ್ತಾನೆ. ಗುರುಸೇವೆ ಅನ್ಯಾದೃಶವೆಂಬಂತೆ ಮಾಡುತ್ತಾನೆ. ಹಲವಾರು ಜನರಿಂದ ಸೇವೆ ಸ್ವೀಕರಿಸುತ್ತಿದ್ದ ಸಾಮ್ರಾಟನೆಲ್ಲಿ? ಸಾಮಾನ್ಯನಂತೆ ಶ್ರದ್ಧೆ ನಿಷ್ಠೆ ಗಳಿಂದ ಋಷಿಸೇವೆಯಲ್ಲಿ ನಿಂತ ಚಂದ್ರಗುಪ್ತನೆಲ್ಲಿ? ಈ ಎರಡು ಧ್ರುವಗಳ ಅಂತರ ಅವನ ನಿಡುಬಾಳಿನಲ್ಲಿ ನಿಚ್ಚಳವಾಗಿ ಮಡುಗಟ್ಟಿದೆ. ಹೀಗೆ ಪರಿವರ್ತನೆಗಳ ಪರೀಕ್ಷೆಯಲ್ಲಿ ಹಾದು, ಕಾಳಿಕೆಗಳೆದ ಅಪರಂಜಿಯಾಗಿ ಬೆಳಗುತ್ತಾನೆ. ಅವನನ್ನು ಸರಿಯಾಗಿ ಅರಿಯದೆ ವಿಶಾಖಾಚಾರ್ಯರಾದಿಯಾಗಿ ಮುನಿಗಳು ಅಸಡ್ಡೆಯಿಂದ ಕಡೆಗಣಿಸಿದರು. ಉನ್ನತ ವ್ಯಕ್ತಿತ್ವವನ್ನು ಮನಗಂಡ ಮೇಲೆ ಮರುಗಿ ಎರಗಿದರು. ರಾಗ–ದ್ವೇಷಗಳನ್ನು ಗೆದ್ದು ನಿಂತಿದ್ದ ಚಂದ್ರಗುಪ್ತಮುನಿ ಅವರ ಅಸಡ್ಡೆಗೂ–ಸಡ್ಡೆಗೂ ಸಮನಾಗೇ ವರ್ತಿಸಿದ. ಲೋಕದ ಹೊರಗಿನ ಹಗೆಗಳನ್ನು ಹಿಂದೆ ಗೆದ್ದಿದ್ದ, ದೊರೆಯಾಗಿದ್ದಾಗ. ಅಂತರಂಗದ ಇಂದ್ರಿಯಗಳನ್ನು ಈಗ ನಿಗ್ರಹಿಸಿ ನಿಜವಾದ ತಪಸ್ವಿಯಾಗಿದ್ದ

ತನ್ನನ್ನು ತಾನು ಗೆಲ್ಲುವುದೇ ದೊಡ್ಡ ಗೆಲುವು ಎಂದು ಅವನಿಗೂ ಅನ್ನಿಸಿರ ಬೇಕು. ಆತನ ಕಳೆದ ಎರಡು ಭವಗಳು, ಈ ಭವ ಮತ್ತು ಮುಂದೆ ಶ್ರೀಧರ ದೇವನಾಗಿ ಹುಟ್ಟಿದ್ದು—ಹೀಗೆ ಒಟ್ಟು ನಾಲ್ಕು ಭವಗಳ ಉಲ್ಲೇಖವಿದೆ. ಇವುಗಳಲ್ಲಿ ಚಂದ್ರಗುಪ್ತನಾಗಿರುವ ಈ ಭವ ಬಿಟ್ಟರೆ ಅವನ ಮೊದಲನೆಯ ಭವ, ನಂದಿಮಿತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಗಿದ್ದಂದಿನದು, ಬಹು ಮೋಹಕವಾಗಿದೆ. ವಾಸ್ತವಿಕತೆಯಲ್ಲಿ ಅದ್ದಿ ತೆಗೆದ ಪಾತ್ರವದು. ಭ. ಬಾ. ಕಥೆಯಲ್ಲಿ ಬರುವ ನಂದಿಮಿತ್ರನ ಕಥಾಸಾರ ಹೀಗಿದೆ:

ಅವಂತಿ ನಾಡಿನ ವೈದಿಶ ಪಟ್ಟಣವನ್ನು ಜಯವರ್ಮ–ಧಾರಿಣಿ ಆಳುತ್ತಿದ್ದರು. ಸಮೀಪದ ಪರಾಳಕೂಟವೆಂಬ ಊರಿನಲ್ಲಿ ದೇವಿಲ–ಪೃಥ್ವಿಶ್ರೀ ಎಂಬ ವರ್ತಕ ದಂಪತಿಗಳಿದ್ದರು. ಪೃಥ್ವಿಶ್ರೀ ಗರ್ಭವತಿಯಾಗುತ್ತಿದ್ದಂತೆ ಧನಕನಕ ಹಾಳಾಯಿತು. ಬಂಡಿಗಳಲ್ಲಿ ಸರಕು ಹೇರಿಕೊಂಡು ಮಾರಾಟಕ್ಕೆ ಹೊರಟರು. ದಾರಿಯಲ್ಲಿ ಕಳ್ಳರು ಎದುರಾಗಿ ದೇವಿಲನನ್ನು ಕೊಂದು ಲೂಟಿ ಮಾಡಿದರು. ಪೃಥ್ವಿಶ್ರೀ ಬೆಸಲೆಯಾದಳು. ಮಗುವಿಗೆ ನಂದಿಮಿತ್ರನೆಂದು ಹೆಸರಿಟ್ಟರು. ಮೂರು ತಿಂಗಳಲ್ಲಿ ತಾಯಿ ಸತ್ತಳು. ಮಗುವನ್ನು ಸಾಕಿದ ನೆಂಟರಿಷ್ಟರನ್ನೂ ಸಾವು ಬೇಟೆಯಾಡಿತು. ಊರಿನವರು ಸೇರಿ ತಬ್ಬಲಿಯನ್ನು ಊರಾಚೆ ಅಟ್ಟಿದರು. ನಂದಿಮಿತ್ರ ಊರೂರು ತಿರಿದು ತಿರುಪೆಯಿಂದ ಬೆಳೆದು ದೊಡ್ಡವನಾಗಿ ವಿದಿಶ ಪಟ್ಟಣಕ್ಕೆ ಬಂದ. ಕಾಷ್ಠಕೂಟನೆಂಬ ಕಟ್ಟಿಗೆಯವನು ಹೊರೆ ಹೊತ್ತು ಬರುತ್ತಾ ನಂದಿಮಿತ್ರನನ್ನು ಕಂಡ. ಇಬ್ಬರೂ ಒಂದೆಡೆ ನಿಂತರು. ಕಾಷ್ಠಕೂಟ ವಿಶ್ರಮಿಸಲು ಕಟ್ಟಿಗೆ ಹೊರೆಯನ್ನು ತಲೆಗೆ ಇಂಬಾಗಿರಿಸಿಕೊಂಡ. ನಂದಿಮಿತ್ರ ದೊಡ್ಡ ಬಂಡೆಯನ್ನು ಎತ್ತಿ ತಂದು ತಲೆಯಡಿಯಲ್ಲಿರಿಸಿ ಮಲಗಿದ. ಅವನ ಅದ್ಭುತ ಶಕ್ತಿಯಿಂದ ಅಚ್ಚರಿಗೊಂಡು ಕಾಷ್ಠಕೂಟ ಅವನನ್ನು ವಿಶ್ವಾಸದಿಂದ ವಿಚಾರಿಸಿದ. ಅವನು ನಿರ್ಗತಿಕನೆಂದು ತಿಳಿಯಿತು. ತನ್ನ ಮನೆಯಲ್ಲೇ ಕೆಲಸಕ್ಕಿರಿಸಿದ. ಕಾಷ್ಠಕೂಟ ಹೆಂಡತಿಗೆ 'ಇವನಿಗೆ ಎಂದಿಗೂ ಹೊಟ್ಟೆತುಂಬ ಬಡಿಸಬೇಡ. ಎಣ್ಣೆ ಹಾಕಬೇಡ. ನೀರೆರೆಯಬೇಡ' ಎಂದು ಕಟ್ಟಪ್ಪಣೆ ಮಾಡಿದ. ಅದೇ ರೀತಿ ನಡೆಯಿತು. ನಿತ್ಯ ನಂದಿಮಿತ್ರ ಹತ್ತು ಜನರ ಹೊರೆ ಹೊತ್ತು ಬರುತ್ತಿದ್ದ. ಅದನ್ನು ಮಾರಿ ಕಾಷ್ಠಕೂಟ ಹಣವಂತನಾದ. ಒಮ್ಮೆ ಕಾಷ್ಠಕೂಟನ ಹೆಂಡತಿ ಕರುಣೆಯಿಂದ ನಂದಿಮಿತ್ರನಿಗೆ ಹೊಟ್ಟೆತುಂಬ ಊಟ ಬಡಿಸಿದಳು. ಮರುದಿನ ಆತ ಕಾಷ್ಠಕೂಟನಿಗೆ 'ಅಯ್ಯಾ ನನಗೆ ಉಟ್ಟು ಕೊಳ್ಳಲು ಬಟ್ಟೆ ತೆಗೆದುಕೊಡಿ' ಎಂದು ಕೇಳಿದ. ಕಾಷ್ಠಕೂಟ ಮನೆಗೆ ಬಂದು ಕೇಳಿದಾಗ ಹೊಟ್ಟೆ ತುಂಬ ಊಟ ಬಡಿಸಿದ್ದು ತಿಳಿಯಿತು. ಕೋಪಿಸಿ ಅವಳಿಗೆ ಸಾಯ ಬಡಿದು ಮನೆಯಿಂದ ಅಟ್ಟಿದ. ನಂದಿಮಿತ್ರ ಅವಳ ಬಳಿ ಹೋಗಿ ಹೊಡೆದದ್ದು ಏಕೆಂದು ಕೇಳಿದ. 'ನಿನ್ನೆ ನಿನಗೆ ಹೊಟ್ಟೆ ತುಂಬ ಬಡಿಸಿದ್ದಕ್ಕೆ' ಎಂದಳು. 'ಹಾಗಾದರೆ ಇಂತಹ ಪರಮ ನೀಚರ ಮನೆಯಲ್ಲಿ ಮಾರಿ ಇರಲಿ' ಎಂದು ಹೇಳಿ ನಂದಿಮಿತ್ರ ಹೊರಟುಹೋದ. ತಾನೇ ಕಟ್ಟಿಗೆ ತಂದು ಮಾರಲು ಹೊರಟರೆ ಒಂದು ಹಣವೂ ಬರಲಿಲ್ಲ. ಅಂಬಲಿಗೊ ಎಣ್ಣೆಗೊ ಹಿಟ್ಟಿಗೊ ಕಟ್ಟಿಗೆ ಹಾಕಿ ಕಾಲ ನೂಕುತ್ತಿದ್ದ. ಒಮ್ಮೆ ಹೊರೆ ತರುತ್ತಿದ್ದ. ದಾರಿಯಲ್ಲಿ ಶಿವಗುಪ್ತಾಚಾರ್ಯರು ಪಾರಣೆಗಾಗಿ ಹೊರಟಿದ್ದರು. ನಂದಿಮಿತ್ರನಿಗೆ ಕುತೂಹಲವಾಯಿತು. ಕಟ್ಟಿಗೆ ಹೊರೆ ಬಿಟ್ಟು ಅವರ ಹಿಂದೆ ಹೊರಟ. ರಾಜನು ಅರಮನೆಯಲ್ಲಿ ಆ ಜೈನ ಮುನಿಗೆ ಆಹಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡಲು ಪ್ರಾರ್ಥಿಸಿದ. ಅವರ ಹಿಂದೆ ಬಂದ ಈ ಬೋಳುದಲೆ ದೇಸಿಗನನ್ನೂ ಶಿಷ್ಯನಿರಬೇಕೆಂದು ಕರೆದೊಯ್ದರು; ರಾಣಿ ಕಾಲಿಗೆ ನೀರು ಹಾಕಿದಳು. ರಾಜನೇ ಇವನ ಕಾಲು ತೊಳೆದ. ಚಿನ್ನದ ತಟ್ಟೆಯಲ್ಲಿ ಭಕ್ಷ್ಯಭೋಜ್ಯ ಬಡಿಸಿದರು. ತಾಂಬೂಲ ಕೊಟ್ಟರು. ಭಟಾರರು ಪಾಣಿಪಾತ್ರೆಯಲ್ಲಿ ಉಂಡು ಹೊರಟರು. ಇವನೂ ಹೊರಟ. ಬಸದಿಗೆ ಬಂದರು. ನಂದಿಮಿತ್ರ 'ನಾನೂ ಇವರಂತೆ ಆದರೆ ನಿತ್ಯ ಊಟಕ್ಕೆ ಯೋಚನೆಯಿಲ್ಲ' ಎಂದು ಆಲೋಚಿಸಿದ. ಗುರುಗಳ ಬಳಿ ಬಂದು 'ನನ್ನನ್ನು ನಿಮ್ಮಂತೆ ಮಾಡಿ' ಎಂದು ಬೇಡಿದ. ಜೈನಗುರುಗಳು ದೀಕ್ಷೆ ಕೊಟ್ಟರು. ಈ ಸುದ್ದಿ ನಗರಕ್ಕೆ ತಲಪಿತು. ಹೊಸ ಬ್ರಹ್ಮಚಾರಿ ಸ್ವಾಮಿಗಳಿಗೆ ರಾಜನು ತಾನು ಮೊದಲನೆಯ ಆಹಾರ ಕೊಡಬೇಕೆಂದು ಹೋಗಿ ಬೇಡಿದ. ನಂದಿಮಿತ್ರನು 'ಸಾಮಂತ ಮಹಾ ಸಾಮಂತರಿಗೆ ಸ್ವಾಮಿಯಾದ ಈ ಮಹಾರಾಜನು ನನಗೆ ನಮಸ್ಕಾರ ಮಾಡುತ್ತಿದ್ದಾನೆ. ಇದೆಲ್ಲ ತಪಸ್ಸಿನ ಧರ್ಮದ ಫಲ. ಒಂದು ದಿನದ ತಪಕ್ಕೇ ಇಷ್ಟು ಫಲ ಪ್ರತ್ಯಕ್ಷವಾಗಿದೆ. ಇರಲಿ, ಇನ್ನೂ ಮುಂದೆ ನೋಡೋಣ ಎಂದು ಪರಿಭಾವಿಸಿ 'ನಾವು ಇಂದು ಉಪವಾಸ ಮಾಡಿದ್ದೇವೆ' ಎಂದು ರಾಜನಿಗೆ ತಿಳಿಸಿದ. ಮರುದಿನ ಮಹಾರಾಣಿ ಅಂತಃಪುರದ ಪರಿವಾರದೊಡನೆ ಬಂದು ಪ್ರಾರ್ಥಿಸಿದಳು. ನಂದಿಮಿತ್ರ ಅಂದೂ 'ಇದೆಲ್ಲಾ ತಪಸ್ಸಿನ ಫಲ. ಮುಂದೆ ಇನ್ನೂ ದೊಡ್ಡದಾಗಬಹುದು' ಎಂದು ಮನದಲ್ಲಿ ಅಂದುಕೊಂಡು 'ಅವ್ವಾ, ನಾವು ಇಂದೂ ಉಪವಾಸ ಮಾಡುತ್ತಿದ್ದೇವೆ' ಎಂಬುದಾಗಿ ಉತ್ತರವಿತ್ತು ರಾಣಿಯನ್ನು ಕಳಿಸಿಬಿಟ್ಟನು, ಮರುದಿನ ಬಂದ ಮಂತ್ರಿಗೂ, ಅದರ ಮಾರನೆಯ ದಿನ ಬಂದ ರಾಜಶ್ರೇಷ್ಠಿಗೂ ಅಯ್ದನೆಯ ದಿನ ಬಂದ ಯುವರಾಜನಿಗೂ ಇದೇ ಉತ್ತರ. ಹೀಗೆ ಆರು ದಿನ ಪಂಚನಮಸ್ಕಾರ ಧ್ಯಾನದಲ್ಲಿಯೇ ಕಳೆಯಿತು. ಏಳನೆಯ ದಿನ ನಂದಿಮಿತ್ರನು 'ಭಟಾರ, ಇಷ್ಟು ಕಾಲ ಉಂಡದ್ದು ಸಾಕು. ಇನ್ನು ನನಗೆ ಯಾವಜ್ಜೀವವೂ ಉಪವಾಸ ದೀಕ್ಷೆ ಕೊಡಿ' ಎಂದು ಬೇಡಿದನು. ಭಟಾರರು 'ನೀವು ನಿಜವಾಗಿಯೂ ಮಹಾಪುರುಷರು. ನಿಮ್ಮಂತಹ ಧೈರ್ಯವಂತರು, ಸತ್ವವಂತರು ಇಲ್ಲ, ಇಷ್ಟು ಕಾಲದವರೆಗೆ ತಪಸ್ಸು ಮಾಡಿರುವ ನಮಗೂ ಈ ಧೈರ್ಯ ಸತ್ವ ಇಲ್ಲ' ಎಂದರು, ಮುಂದುವರಿದು 'ನಿಮಗೆ ಇದೊಂದು ದಿನ ಆಯುಷ್ಯವಿದೆ' ಎಂದು ಹೇಳಿ ಆಹಾರ ಶರೀರ ನಿವೃತ್ತಿ ದೀಕ್ಷೆ ಕೊಟ್ಟರು. ಬಸದಿಯಲ್ಲೊಂದು ಕೋಣೆ ತೋರಿಸಿ 'ಇಲ್ಲಿ ಒಂದು ಪಕ್ಕಕ್ಕೆ ಮಲಗಿ ಅಲುಗಾಡದೆ ಕೈಕಾಲು ಚಲಿಸದೆ ಜೀವವಿರುವವರೆಗೆ ಪಂಚನಮಸ್ಕಾರವನ್ನು ಮನಸ್ಸಿನಲ್ಲಿ ಹೇಳುತ್ತಾ ಇರಿ' ಎಂದು ಉಪದೇಶಿಸಿದರು. ನಂದಿಮಿತ್ರನು ಹಾಗೇ ಮಲಗಿದ. ಭಟಾರರು ಆರಾಧನೆಯನ್ನು ವ್ಯಾಖ್ಯಾನಿಸತೊಡಗಿದರು. ಸುದ್ದಿ ತಿಳಿದು ರಾಜಧಾನಿ ಸಮಸ್ತರೂ ಬಂದು ಸೇರಿದರು, ಸಂಜೆ ನಂದಿಮಿತ್ರ ದೇಹತ್ಯಾಗ ಮಾಡಿದ. ಸೌಧರ್ಮಕಲ್ಪದಲ್ಲಿ ಕನಕಧ್ವಜದೇವನಾಗಿ ಹುಟ್ಟಿದ. ಇತ್ತ ಪೃಥ್ವಿಯಲ್ಲಿ ರಾಜ ರಾಣಿ ಮಂತ್ರಿಯರಾದಿಯಾಗಿ ಅವನ ಭೌತಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಶರೀರಕ್ಕೆ ಪೂಜೆ ಮಾಡುತ್ತಿದ್ದರು. ಕನಕಧ್ವಜದೇವನೂ ದೇವಲೋಕದ ಮಹಾ ವೈಭವ ಪರಿವಾರದೊಡನೆ ವಿಮಾನವೇರಿ ಅಲ್ಲಿಗೆ ಬಂದು ಅವರೊಡನೆ ತಾನೂ ತನ್ನ ದೇಹವನ್ನು ದೇವಪುಷ್ಪಗಳಿಂದ ಪೂಜಿಸಿದನು. ದೊರೆಗೆ ಅಚ್ಚರಿಯಾಗಿ 'ನೀವು ಯಾರು ?' ಎಂದು ಕೇಳಿದ. ಅದಕ್ಕೆ 'ನಾನೇ ನಂದಿಮಿತ್ರ. ಗುರುಗಳ ಪ್ರಸಾದದಿಂದ ಉಪವಾಸ ಮಹಿಮೆಯಿಂದ ಈ ದೇವತ್ವ ಪ್ರಾಪ್ತವಾಯಿತು, ಎಂದು ಹೇಳಿ ಭಟಾರರನ್ನೂ ಪೂಜಿಸಿ ಹೋದನು. ಆ ಕನಕಧ್ವಜದೇವನೇ ಮತ್ತೆ ಈಗ ಸಂಪ್ರತಿ ಚಂದ್ರಗುಪ್ತನಾಗಿ ಹುಟ್ಟಿದ್ದಾನೆ,

ಈ ಕಿರಿದಾದ ಕಥೆ ತುಂಬ ಸಂಕೀರ್ಣವಾಗಿದೆ. ಇದರಲ್ಲಿ ಪುರಾಣ ಚರಿತ್ರೆಗಳು ಗುರುತು ಸಿಗದಂತೆ ಹೆಣೆದುಕೊಂಡಿವೆ. ಸಂಪ್ರತಿ ಚಂದ್ರಗುಪ್ತನ ಭವದ ಕಥೆಯಷ್ಟೇ ಚರಿತ್ರೆ, ಉಳಿದುದಷ್ಟೂ ಭವಾವಳಿಯ ಪುರಾಣ ಪ್ರಪಂಚ. ಆದರೆ ಅದರಲ್ಲಿನ ತಿರುಳು ಮನಶ್ಶಾಸ್ತ್ರೀಯ ವೈಜ್ಞಾನಿಕವಾಗಿ ಪರಿಭಾವನಾರ್ಹವಾಗಿದೆ. ನಂದಿಮಿತ್ರನ ಪಾತ್ರವಂತೂ ವಾಸ್ತವ್ಯದ ಉಸಿರಿನಂತೆ ಜೀವಂತವಾಗಿದೆ. ನಂದಿಮಿತ್ರ ನಷ್ಟ ಜಾತಕಿ, ನತದೃಷ್ಟ. ಯಾರು ಅವನನ್ನು ಪ್ರೀತಿಯಿಂದ ಕಾಣುತ್ತಾರೋ ಅವರ ಪಾಲಿಗೆ ನಷ್ಟಕಷ್ಟಗಳು ಕಟ್ಟಿಟ್ಟ ಬುತ್ತಿ. ಯಾರು ಅವನನ್ನು ಕಾಠಿಣ್ಯದಿಂದ ಕ್ರೂರವಾಗಿ ಕಾಣುತ್ತಾರೋ ಅವರಿಗೆ ಅದೃಷ್ಟ ಕೂಡಿ ಬರುತ್ತದೆ. ನಂದಿಮಿತ್ರನ ಮೈದುಡಿತದಿಂದ ಕಾಷ್ಠಕೂಟನಿಗೆ ಕಷ್ಟದ ದಿನಗಳು ಕರಗಿದವು, ದಿನಗಳೆದಂತೆ ಹಣ ಕೂಡಿತು. ಇದ್ದುಳ್ಳವರಲ್ಲಿ ಒಬ್ಬನಾಗಿ ಗಣ್ಯಮನುಷ್ಯನಾದ. ಕಾಷ್ಠಕೂಟ ಉಪಜೀವಿ ಯಾದುದರಿಂದ ನಂದಿಮಿತ್ರನ ಕಾರ್ಪಣ್ಯದ ಬದುಕನ್ನು ತನ್ನ ಸ್ವಲಾಭಕ್ಕೆ ಬಳಸಿ ಕೊಂಡ. ಅದಕ್ಕೆ ಕೊಟ್ಟ ಪ್ರತಿಫಲ ಮಾತ್ರ ಕಿಂಚಿತ್, ಅದು ದುಡಿಮೆಗೆ ತಕ್ಕ ಫಲವಲ್ಲ. ಕಾಷ್ಠಕೂಟ ಲೆಕ್ಕಾಚಾರದ ಮನುಷ್ಯ. ಅತ ತನ್ನ ಹೆಸರಿಗೆ ಅನುಗುಣ ವಾಗಿದ್ದ: ಕಟ್ಟಿಗೆಯಂತೆ ಜಡ, ನಿರ್ಜೀವಿ, ನಿಷ್ಪಂದ, ನಿಷ್ಠುರ, ನಿರ್ದಯಿ. ತನ್ನ ಬದುಕಿನ ಬೇರಿಗೆ ನಿರ್ವಂಚನೆಯಿಂದ ನೀರೆರೆಯುತ್ತಿದ್ದ ನಂದಿಮಿತ್ರನಿಗೆ ತನ್ನ ಹೆಂಡತಿ ಒಂದು ದಿನ ಹೊಟ್ಟೆ ತುಂಬ ಊಟ ಹಾಕಿದ್ದಕ್ಕೆ ಸಿಕ್ಕಾಪಟ್ಟೆ ರೇಗಿ ಕೂಗಾಡಿ ಹೊಡೆದು ಬಡಿದು ಕಡೆಗೆ ಮನೆಯಿಂದಲೇ ಓಡಿಸಿದ. ಕೈಹಿಡಿದ ಹೆಂಡತಿಯನ್ನು ಗೃಹಲಕ್ಷ್ಮಿಯನ್ನು ಹೊಡೆದುದೂ ಸಾಲದೆ ಮನೆಯಿಂದ ಅಟ್ಟಿದ್ದನ್ನು ಕಂಡು ನಂದಿ ಮಿತ್ರ ಕೂಡ 'ನಿನ್ನ ಮನೆಯಲ್ಲಿ ಮಾರಿಯಿರಲಿ' ಎಂದು ಶಪಿಸಿ ಹೊರಟ. ಕಾಷ್ಠ ಕೂಟ ಕೊಂಚ ಕೊಟ್ಟರೂ ನಂದಿಮಿತ್ರ ಅಷ್ಟರಲ್ಲೇ ತೃಪ್ತನಾಗಿದ್ದ. ತನ್ನ ಬಾಳಿನಲ್ಲಿ ಅದುತನಕ ಕೇವಲ ಸಾವು ನೋವು ಕಷ್ಟನಷ್ಟಗಳೇ ಮೇಲಿಂದ ಮೇಲೆ ಅಪ್ರತಿಹತ ವಾಗಿ ಬೀಳುತ್ತಿದ್ದರೂ ಆತ ಅವನ್ನೆಲ್ಲ ಸಹಿಸಿ ನಿಂತಿದ್ದ. ಇನ್ನೇನು ಈ ಕಾರ್ಪಣ್ಯ ಕ್ಕೊಂದು ನಿಲುಗಡೆ ಬಂತೆಂದು ಭಾವಿಸಿ ನೆಮ್ಮದಿಯಾಗಿದ್ದ. ಅವನೂ ಸಹ ಈ ಪ್ರಸಂಗದಲ್ಲಿ ಸಿಡಿದೆದ್ದುದರಲ್ಲಿ ಸ್ವಾರಸ್ಯವಿದೆ. ಜಯಘಂಟೆಯಲ್ಲಿ ತನ್ನ ತಾಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಡು ಹಾಯಾಗಿದ್ದ. ನಿತ್ಯ ಮನೆಯಲ್ಲಿ ತಾಯಂತೆ ಊಟ ಬಡಿಸುತ್ತಿದ್ದಳು. ಇವಳಿ ಬಿದ್ದ ಬರೆ ತನಗೆಂದು ಆತ ತಿಳಿದು ಉರಿದುಬಿದ್ದ.

ಕಾಷ್ಠಕೂಟ ಸಣ್ಣ ಕಾರಣಕ್ಕಾಗಿ ಹೆಂಡತಿಯನ್ನು ಭಯಂಕರವಾಗಿ ಶಿಕ್ಷಿಸಿದ ರೀತಿ ಸರಿಯಲ್ಲವೆಂಬುದನ್ನು ಒಪ್ಪಬೇಕಾದುದೇ. ಆದರೂ ಆತನ ರೋಷಕ್ಕೆ ಇರುವ ಕಾರಣವನ್ನು ಮರೆಯಬಾರದು. ಹೆಂಡತಿ ನಂದಿಮಿತ್ರನಿಗೆ ಹೊಟ್ಟೆ ತುಂಬ ಬಡಿಸಿದ್ದರಿಂದ ಕೆಲಸ ಕೆಟ್ಟಿತು, ನಂದಿಮಿತ್ರನ ಹೊಟ್ಟೆ ಎಂದು ತುಂಬಿತೊ ಅಂದೇ ತನ್ನ ಹೊಟ್ಟೆಗೆ ಆದಾಯ ತಪ್ಪಿತು. ನಂದಿಮಿತ್ರ ಹೊಟ್ಟೆ ತುಂಬ ತುಂಬಿದ ದಿನವೇ ದಣಿಯ ವಿರುದ್ಧ ತಿರುಗಿಬಿದ್ದುದು ಅರ್ಥಪೂರ್ಣವಾಗಿದೆ. ಹೊಟ್ಟೆ ತುಂಬುವವರೆಗೂ ಮನುಷ್ಯ ದುಡಿತದಲ್ಲಿ ನಿರತ. ಒಮ್ಮೆ ಅದಕ್ಕೆ ತೃಪ್ತಿ ಪೂರ್ಣ ವಾಗಿ ದೊರೆಯಿತೆಂದರೆ ಸಾಕು ಮಾನವ. ಅದುವರೆಗೂ ಅಷ್ಟಕ್ಕೇ ಆಲೋಚನೆ ಗಳನ್ನು ಸೀಮಿತಗೊಳಿಸಿದ್ದವನು, ಈಗ ಅದರ ಆಚೆಗೂ ಬುದ್ಧಿ ಓಡಿಸುತ್ತಾನೆ. ಮನುಷ್ಯನ ವಿಕಾಸ ಚರಿತ್ರೆ ಇದನ್ನೇ ಸಾರುತ್ತದೆ. ಭೋಗ, ಕಲೆ, ನಾಗರಿಕತೆ— ಇವೆಲ್ಲಾ ಹೊಟ್ಟೆ ಬಟ್ಟೆ ಆದಮೇಲೆ ಬರುವಂತಹವು. ಮೊದಲು ಹೊಟ್ಟೆ, ಆಮೇಲೆ ಬಟ್ಟೆ. ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ. ಆಮೇಲೆ ಉಳಿದ ಭೋಗಸಾಮಗ್ರಿಗಳು. ಇಂದಿಗೂ ಹೊಟ್ಟೆಪಾಡಿಗಾಗಿ ದುಡಿಯುವುದರಲ್ಲೇ ಜೀವನವನ್ನೆಲ್ಲಾ ಕಳೆಯಬೇಕಾಗಿರುವ ಅಲೆಮಾರಿಗಳೂ ಆದಿವಾಸಿಗಳೂ ಕೂಲಿ ನಾಲಿಗಳೂ ಬಟ್ಟೆ ಹೆಚ್ಚು ಹಾಕಿಕೊಳ್ಳದಿರುವುದು ನಿತ್ಯ ಕಾಣುವ ದೃಶ್ಯ. ಇದ್ದುದನ್ನು ಬಿಟ್ಟು, ಮರೆತು, ಇಲ್ಲದುದಕ್ಕೆ ತುಡಿಯುವುದು ಮನುಷ್ಯಜೀವದ ರೀತಿಯೇ ಆಗಿದೆ. ನಂದಿಮಿತ್ರ ಆಹಾರ ಇಲ್ಲದಾಗ ಆಹಾರಕ್ಕಾಗಿ ಹಾತೊರೆದ. ಅದು ಒಂದು ಪ್ರಮಾಣದವರೆಗೆ ಕೈಗಟುಕುವ ಅನುಕೂಲದ ಕಾಲ ಬಂದಾಗ ಅದನ್ನು ಅವಜ್ಞೆಯಿಂದ ಉಪೇಕ್ಷಿಸಿದ. ಈ ಅಪೇಕ್ಷೆ ಉಪೇಕ್ಷೆಗಳ ಅಂತರದಲ್ಲಿಯೇ ನಂದಿ ಮಿತ್ರನ ವ್ಯಕ್ತಿತ್ವ ಬಿಚ್ಚಿಕೊಂಡಿರುವುದರ ಹಿರಿಮೆ ಅಡಗಿದೆ.

ಹಳಬನಿಗಿಂತ ಹೊಸಬನಲ್ಲಿ ಉತ್ಸಾಹ ಅಧಿಕ; ಎಲ್ಲದರಲ್ಲೂ ಅಷ್ಟೇ; ಗಾದೆ. ಅಗಸ (←ಅಸಗ) ಹೊಸದರಲ್ಲಿ ಗೋಣಿ ತಟ್ಟನ್ನೂ (—ಚೀಲವನ್ನು) ಸೆಣೆದ. ವಂಶಪಾರಂಪರ್ಯವಾಗಿ ಬಂದ ಒಂದು ಮತದಲ್ಲಿ ಹುಟ್ಟಿದವನಿಗಿಂತ ಆ ಮತಕ್ಕೆ ಹೊಸದಾಗಿ ಮತಾಂತರಗೊಂಡವನಲ್ಲಿ ನಿಷ್ಠೆ ನೇಮ (←ನಿಯಮ) ಹೆಚ್ಚು. ಕಿತ್ತಯ್ಯ (ನಂದಿಮಿತ್ರ) ನಲ್ಲೂ ಈ ನವೋತ್ಸಾಹವನ್ನು ನಾವು ನೋಡುತ್ತೇವೆ. ಕಸಿ ಮಾಡಿದ, ಬೇರೆ ಬೇರೆ ಜಾತಿ ಬೆರಸಿ ಮಿಶ್ರತಳಿ ಏರ್ಪಡಿಸಿದ ಪರಿಣಾಮವೆಂದರೆ ಬೆಳೆ, ಬೆಳವಣಿಗೆ ಹಲವುಪಟ್ಟು ಹೆಚ್ಚುವುದು. ಸೂರ್ಯಮಿತ್ರ ಜೈನತ್ವಕ್ಕೆ ಪರಿವರ್ತನಗೊಂಡಾಗ, ಭದ್ರಬಾಹು ಮತ್ತು ಗಣಧರರು ಮತಾಂತರಗೊಂಡಾಗ ಹೀಗೆ ಹಲವು ಹತ್ತು ಜನ ಪ್ರತಿಭಾವಂತರು ಧರ್ಮಾಂತರಗೊಂಡಾಗ ಅವರು ಅದುವರೆಗಿನ ಮಾಮೂಲೀ ಜೈನರಿಗಿಂತ ಎತ್ತರಬಿತ್ತರರಾಗಿ ,ಮೇರು ಮಂದರವಾಗಿ ಬೆಳೆದು ನಿಲ್ಲುವುದು ಕಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಬರುತ್ತದೆ. ಇದಕ್ಕೆ ಮನಸ್‌ಶಾಸ್ತ್ರ ಹಾಗೂ ವಿಜ್ಞಾನಗಳ ಬೆಂಬಲವೂ ಇದೆ. ಈ ಅಂಶದಿಂದ ಕೂಡ ನಂದಿಮಿತ್ರನ ಪಾತ್ರವನ್ನು ವಿಚಿಕಿತ್ಸೆಗೆ ಒಳಗುಮಾಡಬಹುದು.

ಭ. ಬಾ. ಕಥೆಯಲ್ಲಿ ವಡ್ಡಾರಾಧನೆಯ ಉಳಿದ ಕಥೆಗಳಲ್ಲಿ ಬರುವಂತೆ ಉಪಸರ್ಗದ ವಿವರ ದಟ್ಟವಾಗಿ ಮೈ ಚಾಚಿಕೊಳ್ಳುವುದಿಲ್ಲ. ಇಲ್ಲಿ ಉಪಸರ್ಗ ಗೌಣವಾಗಿದೆ. ಕೇವಲ ಪರೀಷಹ ಜಯದ ವಿವರವಿದೆ. ಈ ಕಥೆಯನ್ನು 'ಉಪಸರ್ಗ ಕೇವಲಿಗಳ ಕಥೆ' ಎಂಬುದಕ್ಕಿಂತ 'ಪಾತ್ರಪ್ರಧಾನ ಚಾರಿತ್ರಿಕ ಕಥೆ' ಎಂದು ಕರೆಯಬಹುದು. ಭದ್ರಬಾಹು ಚಂದ್ರಗುಪ್ತ, ನಂದಿಮಿತ್ರ, ಕಾಷ್ಠಕೂಟ—ಈ ಪಾತ್ರಗಳಂತೆ ಇಲ್ಲಿನ ಅಶೋಕ, ಕುಣಾಲ, ಸ್ಥೂಲಭದ್ರ ಪಾತ್ರಗಳನ್ನು ಜೈನ ಹಾಗೂ ಜೈನೇತರ ಕಥಾ ಸಾಹಿತ್ಯದಲ್ಲಿ ಸಿಗುವ ವಿವರಗಳ ಬೆಳಕಿನಲ್ಲಿ ಪರಿಶೀಲಿಸಬಹುದು.

ಅಶೋಕನ ಪಾತ್ರ ಅರ್ಥಪೂರ್ಣ ವ್ಯಕ್ತಿತ್ವದಿಂದ ಕೂಡಿದೆ. ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ತನ್ನ ಪತ್ರದ ಅಪವಾಚನದಿಂದ ಉಂಟಾದ ದುರ್ದಶೆಗೆ ಬಹುವಾಗಿ ಮರುಗುತ್ತಾನೆ. ಅಸಹಾಯಕ ಸ್ಥಿತಿ ಬೇರೆ, ಚಕ್ರವರ್ತಿಯಾಗಿದ್ದೂ ಮಗನಿಗೆ ಕಣ್ಣು ಬರಿಸುವಂತಿಲ್ಲ. ಆದರಿಂದ ತಂದೆಯಾದ ದೊರೆ ಕಣ್ಣಿದ್ದೂ ಕುರುಡನಾದಂತೆ ಭಾವಿಸುವ ನೋವಿಗೆ ಬೀಳುತ್ತಾನೆ. ಅವನ ಹಳವಂಡ ನುಡಿಗಳಿಗೆ ಎಟುಕದ್ದು. ಮಗನ ಬಾಳು ಕತ್ತಲೆಯಾಗಿದ್ದು ಅದರ ನೆರಳು ತನ್ನ ಬಳಿಗೇ ಚಾಚಿದೆ, ತನ್ನ ಮೇಲೇ ಬಿದ್ದಿದೆ. ಮಹಾರಾಜನ ಮೂಕವೇದನೆ ಎಲ್ಲ ಮನುಷ್ಯರಿಗೆ ಬರುವಂತಹುದು. ಮಗ ಬದುಕಿದ್ದರೂ ಆ ಬದುಕು ಮುರಿದ ಬಾಳು. ಅದಕ್ಕೆ ಪರ್ಯಾಯವಾಗಿ ತಾನೂ ಕಾರಣನೆಂಬ ಅಳುಕು ಇದೆ. ಅಂಗವಿಕಲ ಸಿಂಹಾಸನಕ್ಕೆ ಅನರ್ಹ. ಕಣ್ಣಿಲ್ಲದವನಿಗಂತೂ ನಿಶ್ಚಯವಾಗಿ ಸಿಂಹಾಸನದ ನಂಟಿಲ್ಲ. ಇನ್ನು ತನ್ನ ಮಗ ಕುಣಾಲನ ಜೀವನ ಧೃತರಾಷ್ಟ್ರ ಜೀವನ. ಅವನ ಅರಸಿ ಚಂದ್ರಾನನೆಯದು ಗಾಂಧಾರಿ ಬಾಳು. ಅಶೋಕ ಮಹಾ ಪುತ್ರವಾತ್ಸಲ್ಯಿ. ಕುಣಾಲನ ಕರುಣಾಜನಕ ಬದುಕಿಗೆ ಅವನ ಎದೆ ಬಿರಿದಿದೆ. ಕುಣಾಲನ ಕುಸಿದ ಮರೀಚಿಕೆ ಬದುಕನ್ನು ದಯಾದ್ರ್ರಗೊಳಿಸುತ್ತಾನೆ. ಮಗ–ಸೊಸೆಗೆ, ತನ್ನ ಮುದಿ ಬದುಕಿಗೆ ಕಣ್ಣಾಗಬೇಕಾದ ಮಗನಿಗೆ, ತಾನೇ ಕಣ್ಣಾಗಿ ನಿಲ್ಲುತ್ತಾನೆ. ಏನಾದರೂ ತಾನೆ ಏನು? ಕಣ್ಣಿಗೆ ಬದಲು ಏನು ಕೊಡಬಲ್ಲ? ಆದರೂ, ಅದಮ್ಯ, ಕರುಳ ಕರೆಗೆ ಓಗೊಟ್ಟು, ಮಗನಿಗೆ ಕೇಳಿದ 'ಮಗನೆ, ಬೇಡು ನೀನು' ಎಂದು. ಕುಣಾಲನಾದರೋ ತಂದೆಯಂತೆ ಚಕ್ರವರ್ತಿಯಾಗಬೇಕಾಗಿದ್ದವನು. ರಾಜಪುತ್ರ ಕೇಳಬೇಕಾದ್ದನ್ನೇ ಕೇಳಿದ, 'ಕಾಕಿಣೀ ರತ್ನ' ಬೇಕೆಂದು. ಈ ಬೇಡಿಕೆ ಕೇಳಿ ತಂದೆ ಜೀವಚ್ಛವವಾದ. ಮಗನಿಗೆ ತಾನಾಗಿ ಒತ್ತಾಯದಿಂದ ಒಲವರದಿಂದ ಏನಾದರೂ ಕೇಳಿಕೊ ಮಗೂ ಎಂದು ಕೇಳಿದ್ದಾಗಿದೆ. ಕೇಳಿದ್ದನ್ನು ಕೊಡುತ್ತೇನೆಂಬ ಭರವಸೆ ತುಂಬಿದ ಮಾತುಗಳವು. ಕುಣಾಲ ಕೇಳಿದ್ದನ್ನು ಕೊಡಬೇಕೆಂಬ ಅಪೇಕ್ಷೆ ಅಶೋಕನದು. ಅನಿರೀಕ್ಷಿತ ಯಾಚನೆ ಬಂದು ತಂದೆಗೆ ಯೋಚನೆಗಿಟ್ಟುಕೊಂಡಿತು. ಯಾತನೆಗೆ ಕಾರಣವಾಯಿತು. ಒಳಗೊಳಗೆ ಕರುಳು ನುಲಿದು ಹಿಪ್ಪೆಯಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಚೇಳು ಕುಟುಕಿದಂತಾಯಿತು. ಆಗ ಮಾತು ಕೊಟ್ಟು ಈಗ ಮರುಮಾತು ಕೊಡ ಬೇಕಾಗಿದೆ. ಕಾಕಿಣೀ ರತ್ನ ಕೊಡುವುದು ಸಾಧ್ಯವಿಲ್ಲ ಎಂದು ಈಗ ಯಾವ ಬಾಯಿಂದ ಹೇಗೆ ಹೇಳುವುದು? ಗಾಯದ ಮೇಲೆ ಬರೆ? ಈ ಮೂಕ ಹಿಂಸೆಗೆ ಬೇಗ ಮುಗಿ ತಾಯ ಹಾಡಬೇಕೆನ್ನಿಸಿತು. ಕೂಡಲೇ ಕುಣಾಲನಿಗೆ ನೋವು ನುಂಗಿದ ಸೋತ ದನಿಯಲ್ಲಿ ಹೇಗೊ ಹೇಳಿದ 'ಅದು ಚಕ್ರವರ್ತಿಗಲ್ಲದೆ ಬೇರೆಯವರಿಗೆ ಇಲ್ಲ' ಎಂದು. ಆನಂದಗಳೆಲ್ಲ ಬತ್ತಿದಾಗ ಸನ್ಯಾಸ ಸಹಜ. ಸಂಸಾರ ವೈರಾಗ್ಯಕ್ಕೆ ದಾರಿ ತೆರೆಯಿತು. ಯಾರೂ ವಿರಾಗಿಯಾಗುವುದು ಇಂಥ ಪ್ರಸಂಗಗಳಲ್ಲೇ. ಅನಿವಾರ್ಯವಾಗಿ, ವಾಸ್ತವ ಎಂಬಂತೆ, ಅಶೋಕ ಸುವ್ರತ ಭಟಾರರ ಬಳಿ ಜಿನದೀಕ್ಷೆ ಕೈಗೊಂಡು ಪರತ್ರೆ ಸಾಧಿಸಿದ.

ಕುಣಾಲನ ಪ್ರತಿಕ್ರಿಯೆ ಎಂತಹುದು? ಕುಣಾಲ ಚಂದ್ರಾನನೆ ಏನೆಂದರು? ಏನಾದರು? ನೊಂದ ದಂಪತಿಗಳೂ ಯತಿಪತಿಗಳಾದರೆ? ಆತ್ಮಹತ್ಯೆ ಮಾಡಿ ಕೊಂಡರೆ? (.........) ಈ ವಿಷಯಗಳ ಬಗ್ಗೆ ವಡ್ಡಾರಾಧನೆಯಲ್ಲಿ ಉತ್ತರ ಗಳಿಲ್ಲ. ಕೃತಿಕಾರನ ಈ ಅಸೀಮ ನಿರ್ಲಕ್ಷ್ಯ ಅಕ್ಷಮ್ಯವಾಗುತ್ತದೆ. ಪಾತ್ರರಚನೆ ಯಲ್ಲಿ ದೋಷ ಬಂದಿದೆಯೆನ್ನಿಸುತ್ತದೆ. ಕುಣಾಲನ ಬದುಕು ದುರಂತ ಮಡುವಿನ ನಟ್ಟನಡುವೆ ತತ್ತರಿಸುತ್ತಿರುವಾಗಲೇ ಕಥೆಗಾರ ಕೈತೊಳೆದುಕೊಂಡುಬಿಡುತ್ತಾನೆ. ಕುಣಾಲನನ್ನು ಮರೆತುಬಿಟ್ಟನೆ ಅಥವಾ ಅವನ ಕಾರುಣ್ಯ ಸಿಂಚಿತ ಜೀವನವನ್ನು ಓದುಗರೇ ಊಹಿಸುತ್ತಾರೆಂದು ಉದ್ದೇಶಪೂರ್ವಕವಾಗಿ ಪ್ರಸ್ತಾಪಿಸದೆ ಬಿಟ್ಟನೆ? ವಡ್ಡಾರಾಧನಕಾರ ಕುಣಾಲನ ಮಗನಾದ ಸಂಪ್ರತಿ ಚಂದ್ರಗುಪ್ತನ ಮೂಲಕ ಕೂಡ, ಅವನ ತಂದೆ ತಾಯಿಯರ ಬಗ್ಗೆ ಏನನ್ನೂ ಹೇಳಿಸುವುದಿಲ್ಲ. ಈ ಅನಾದರವೇಕೆ? ಕುಣಾಲನನ್ನು ಕುರುಡನನ್ನಾಗಿ ಮಾಡಿ ಅವನ ಜೀವಿತದ ಉತ್ತರಾರ್ಧಕ್ಕೆ ಲೇಖಕ ಕುರುಡಾಗಿದ್ದೇಕೆಂದು ನಿಶ್ಚಯವಾಗದು. ಕುಣಾಲನ ಪಾತ್ರ ಜೈನೇತರ ಸಾಹಿತ್ಯದಲ್ಲೂ ಪ್ರವೇಶ ಪಡೆದಿದೆ. ಬೌದ್ಧ ಕಥಾಸಾಹಿತ್ಯದಲ್ಲಂತೂ ಕುಣಾಲನ ಬಗ್ಗೆ ಬೇರೊಂದು ಕಥೆಯೇ ಇದೆ. ಅದು ಸ್ಥೂಲ ರೂಪದಲ್ಲಿ ಇಲ್ಲಿನ ಇನ್ನೊಂದು ಮುಖ. ಜೈನ ಬೌದ್ಧ ಸಾಹಿತ್ಯದಲ್ಲಿನ ಸದೃಶ ಕಥೆ, ವಸ್ತುಗಳ ಸಾಮ್ಯಭೇದಗಳನ್ನು ಸಮೀಕರಿಸಿ ನಡೆಸುವ ಅಭ್ಯಾಸದ ಅಗತ್ಯವಿದೆ. ಜೈನ ಸಾಹಿತ್ಯದಲ್ಲಿ ಶ್ರೇಣಿಕನ ಬಗ್ಗ ಅಪಾರ ವಾಙ್ಮಯವಿದೆ. ಬೌದ್ಧ ಸಾಹಿತ್ಯದಲ್ಲಿ ಅಶೋಕನ ಬಗ್ಗೆ ಹಾಗಿದೆ. ಇದು ಸಹಜವೇ. ಏಕೆಂದರೆ ಇವರಿಬ್ಬರೂ ಆ ಎರಡು ಧರ್ಮಗಳ ಪುರೋಭಿವೃದ್ಧಿಗೆ ಆಧಾರಸ್ತಂಭ ವಾಗಿ ನಿಂತವರು. ಬೌದ್ಧಸಾಹಿತ್ಯದಲ್ಲೂ ಕುಣಾಲನ ಸಂಬಂಧವಾಗಿ ಕಥೆಯಿದೆ. ಅಲ್ಲಿಯೂ ಕುಣಾಲನ ಕಣ್ಣುಗಳನ್ನು ಕೀಳಿಸಿದ ಸಂಗತಿಯಿದೆ. ಜೈನ–ಬೌದ್ಧ ಕಥೆ ಗಳೆರಡೂ ಈ ಅಂಶದಲ್ಲಿ ಹೊಂದಾಣಿಕೆಯನ್ನು ತೋರಿಸುವುದರಿಂದ ಇದೊಂದು ಚಾರಿತ್ರಿಕ ಘಟನೆಯೆಂದು ತಿಳಿಯಲು ಅವಕಾಶವಿದೆ. ಕುಣಾಲ ಸಂಬಂಧಿಯಾದ ಬೌದ್ಧಕಥೆಯನ್ನು ಇಲ್ಲಿ ಸಂಗ್ರಹವಾಗಿ ಕೊಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಶೋಕ ಬುದ್ಧನ ನೆನಪಿಗಾಗಿ 84 ಸಾವಿರ ಸ್ತೂಪಗಳನ್ನು ನಿರ್ಮಾಣ ಮಾಡಿಸಿದ. ಅಶೋಕನ ರಾಣಿ ಪದ್ಮಾವತಿ ಒಬ್ಬ ಮಗನನ್ನು ಹಡೆದಳು. ಮುದ್ದಾದ ಮಗುವಿನ ಕಣ್ಣುಗಳಂತೂ ಚೆಲುವಿನ ಬಟ್ಟಲಾಗಿದ್ದುವು. ಮಗುವಿಗೆ ಧರ್ಮ ವರ್ಧನನೆಂದು ಹೆಸರಿಟ್ಟರು. ಮಗುವಿನ ಮುಖ ಹುಣ್ಣಿಮೆಯ ತಿಂಗಳಿನಂತೆ. ಕಣ್ಣುಗಳು ಬಿರಿದ ನೀಲೋತ್ಪಲದಂತೆ ಕಂಗೊಳಿಸುತ್ತಿದ್ದುವು. ಅಶೋಕ ತನ್ನ ಆಪ್ತ ಪರಿವಾರಕ್ಕೆ ಕೇಳಿದ 'ಈ ಬಗೆಯ ಕಣ್ಣುಗಳನ್ನು ಯಾರಾದರೂ ಬೇರೆಲ್ಲಾದರೂ ನೋಡಿದ್ದೀರಾ?' ಎಂದು. ಸಚಿವರಿಂದ ಉತ್ತರ ಬಂತು: 'ಇಂಥ ಕಣ್ಣುಗಳನ್ನು ಮಕ್ಕಳಲ್ಲಿ ಕಂಡಿಲ್ಲ. ಹಿಮಾಲಯದಲ್ಲಿರುವ ಕುಣಾಲ ಹಕ್ಕಿಯ ಕಣ್ಣುಗಳನ್ನು ನೋಡಿದ್ದೇವೆ. ಅವು ಕುಮಾರನ ಕಣ್ಣುಗಳಂತೇ ಇವೆ.' ಅಶೋಕನ ಅಪ್ಪಣೆಯಂತೆ ಬೇಟೆಗಾರರು ಕುಣಾಲಪಕ್ಷಿ ಹಿಡಿದು ತಂದರು. ಹಕ್ಕಿಯ ಕಣ್ಣಿಗೂ ಕುಮಾರನ ಕಣ್ಣಿಗೂ ವ್ಯತ್ಯಾಸವಿರಲಿಲ್ಲ. ಸರಿ, ಅಂದಿನಿಂದ ಕುಮಾರನಿಗೂ ಕುಣಾಲ ಎಂಬ ಇನ್ನೊಂದು ಹೆಸರಾಯಿತು.

ಕುಮಾರ ಕುಣಾಲ ಕೌಮಾರ್ಯ ಕಳೆದು ಯೌವನಕ್ಕೆ ಬಂದ. ಚತುಷ್ಷಷ್ಟಿ ಕಲೆಗಳಲ್ಲಿ ನಿಪುಣನಾದ. ಸಂಗೀತವಿಶಾರದನಾದ. ಕಾಂಚನಮಾಲೆ ಎಂಬಾಕೆ ಮಡದಿಯಾದಳು. ಅಶೋಕ ಒಂದು ಸಲ ಕುಕ್ಕುಟಾರಾಮದ ಭಿಕ್ಷುಗಳ ಬಳಿ 'ಹೊರಟಾಗ ಕುಣಾಲನನ್ನೂ ಕರೆದೊಯ್ದ. ಕುಕ್ಕುಟಾರಾಮದ ಮಹಾಸ್ಥವಿರ ಯಶಸ್ಸು ಎಂಬಾತ. ಆತ ಕುಣಾಲನನ್ನು ಕಂಡು 'ಇವನು ಇಷ್ಟರಲ್ಲಿಯೇ ಕಣ್ಣು ಕಳೆದುಕೊಳ್ಳುವನು' ಎಂದು ಮುಂದಾಗುವುದನ್ನು ಹೇಳಿದ. ಕುಣಾಲ ಯಶಸ್ಸುವಿನ ಅಡಿ ಹಿಡಿದ. ಭಿಕ್ಷು ನುಡಿದ 'ಕುಮಾರನೇ, ದುಃಖಗಳಿಗೆ ಕಣ್ಣು ಮೂಲ. ಕಣ್ಣುಗಳು ಚಂಚಲ ಸ್ವಭಾವದವು, ಮಿತ್ರರೂಪಿ ಶತ್ರುಗಳು. ಈ ಸಂಗತಿ ತಿಳಿಯದೆ ಕಣ್ಣುಗಳ ವಶರಾಗಿ ಪಾಪಕೂಪಕ್ಕೆಳಿಯುವರು. ಕಣ್ಣುಗಳ ಜಾಗ್ರತೆ ಇರಲಿ.' ಕುಣಾಲನ ಎದೆಯಲ್ಲಿ ಉಪದೇಶ ಬೇರೂರಿತು.

ಒಮ್ಮೆ ಕುಣಾಲ ಏಕಾಂತದಲ್ಲಿದ್ದ. ಅಲ್ಲಿಗೆ ಅಶೋಕನ ರಾಣಿಯರಲ್ಲೊಬ್ಬಳಾದ ತಿಷ್ಯರಕ್ಷಿತೆ ಬಂದಳು. ಕಾಮಾಧಿಕ್ಯದಿಂದ ಕುಣಾಲನನ್ನು ಆಲಂಗಿಸಿದಳು. ಕುಣಾಲನ ಕಣ್ಣುಗಳನ್ನು ನೋಡುತ್ತಾ 'ಯುವರಾಜಾ, ಈ ಕಣ್ಣುಗಳ ಚೆಲುವಿಗೆ ನಾನು ಸೋತಿದ್ದೇನೆ' ಎಂದಳು. ಕುಣಾಲ 'ತಾಯಿ, ಇಂಥ ಪಾಪದ ನುಡಿಗಳನ್ನು ಆಡದಿರಿ. ನಾನೂ ನಿನ್ನ ಮಗನಂತಲ್ಲವೇ, ಎಚ್ಚೆತ್ತುಕೋ'. ತನ್ನನ್ನು ನಿರಾಕರಿಸಿದ್ದರಿಂದ ತಿಷ್ಯರಕ್ಷಿತೆ ನಾಗಿಣಿಯಾದಳು: 'ಕುಮಾರಾ, ನನಗೇ ಬುದ್ಧಿ ಹೇಳುವೆಯಾ? ನನ್ನನ್ನು ನಿನಗೆ ಒಪ್ಪಿಸಿದರೆ ಕಸಕ್ಕಿಂತ ಕೀಳಾಗಿ ಕಾಣುವೆಯಾ? ನನ್ನನ್ನು ಎದುರಿಸಿದವರಿಗೆ ಏನು ಗತಿ ಬರುವುದೆಂದು ಮುಂದೆ ತಿಳಿಯುವೆ.' 'ಅಮ್ಮಾ, ನನಗೆ ಮೃತ್ಯು ಬಂದರೂ ಸರಿ. ಅಧರ್ಮಕ್ಕೆ ತೊಡಗುವುದಿಲ್ಲ.' ತಿಷ್ಯರಕ್ಷಿತೆ ಕ್ರೋಧ ಕಾರಿದಳು. ಪ್ರತೀಕಾರಕ್ಕೆ ಅವಕಾಶ ಕಾಯುತ್ತಿದ್ದಳು. ಹೀಗಿರುವಾಗ ಒಮ್ಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಕ್ಷಶಿಲೆಯವರು ಸರಕಾರದ ಮೇಲೆ ತಿರುಗಿಬಿದ್ದರು. ದಂಗೆ ಅಡಗಿಸಲು ಅಶೋಕ ಅಣಿಯಾದ. ಸಚಿವರು ಯುವರಾಜ ಕುಣಾಲನಿರುವಾಗ ಅವನನ್ನೇ ಕಳಿಸಬಹುದೆಂದರು. ಕುಣಾಲನೂ ಒಪ್ಪಿ ಹೊರಟ. ತಕ್ಷಶಿಲೆಯಲ್ಲಿ ಪ್ರತಿಭಟನೆಯ ಬದಲು ಸ್ವಾಗತ ದೊರೆಯಿತು. ಪಟ್ಟಣವನ್ನು ಅಲಂಕರಿಸಿದ್ದ ಜನತೆ ಕುಣಾಲನನ್ನು ಬರಮಾಡಿಕೊಂಡರು. 'ರಾಜಾ, ಕೆಟ್ಟ ಅಧಿಕಾರಿಗಳಿಗೆ ಎದುರಾಗಿ ನಾವು ದಂಗೆ ಎದ್ದಿದ್ದೇವೆ. ಪ್ರಭುಗಳಿಗೆ ಅವಿಧೇಯರಾಗಿಲ್ಲ.' ತಕ್ಷಶಿಲೆ ಶರಣಾಯಿತು. ಸೆಣಸಾಟವಿಲ್ಲದೆ ಕುಣಾಲನಿಗೆ ಸುಲಭ ವಿಜಯ ದೊರೆಯಿತು.

ಕುಣಾಲ ತಕ್ಷಶಿಲೆಗೆ ಹೊರಟಮೇಲೆ ಅಶೋಕನಿಗೆ ಆರೋಗ್ಯ ಕೆಟ್ಟಿತು. ಮೈಯಿಂದ ಕೆಟ್ಟ ವಾಸನೆಯ ಕೀವು ಬಸಿಯುತ್ತಿತ್ತು. ವಾಂತಿ ಬೇರೆ. ರಾಜವೈದ್ಯರು ಗುಣಪಡಿಸಲಾಗಲಿಲ್ಲ. ಅಶೋಕನಿಗೆ ತನ್ನ ಮಗ ಕುಣಾಲನಿಗೆ ಪಟ್ಟ ಕಟ್ಟಿ ಸಾಯುವ ಆಸೆ. ತಿಷ್ಯರಕ್ಷಿತೆಗೆ ಗಾಬರಿ. ದೊರೆಗೆ ನಿರಾಶೆಯಾಗದಿರುವಂತೆ ಸಮಾಧಾನಿಸಿದಳು. ತನ್ನ ಸ್ವಬುದ್ಧಿಯನ್ನು ಚುರುಕುಗೊಳಿಸಿದಳು. ಅರಮನೆ ಪಂಡಿತರನ್ನೆಲ್ಲ ಕರೆಸಿದಳು. ದೊರೆಗೆ ಬಂದಿರುವಂತಹ ಕಾಯಿಲೆ ರಾಜ್ಯದಲ್ಲಿ ಯಾರಿಗಾದರೂ ಬಂದಿದ್ದರೆ ಕರೆದು ತರಲು ತಿಳಿಸಿದಳು. ಅಂಥವನನ್ನು ತರಲಾಯಿತು. ಅವನನ್ನು ಕೊಲ್ಲಿಸಿ ಹೊಟ್ಟೆ ಸೀಳಿಸಿದಳು. ಅಲ್ಲೊಂದು ಹುಳುವಿತ್ತು. ಅದರ ಮೇಲೆ ಮೆಣಸಿನ ಪುಡಿ ಉದುರಿಸಿದಳು. ಮೆಣಸು ಶುಂಠಿಪುಡಿ ಹಾಕಿದಳು. ಹುಳು ಸಾಯಲಿಲ್ಲ. ಈರುಳ್ಳಿ ರಸ ಹಿಂಡಿದಳು. ಹುಳು ಸತ್ತಿತು.

ತಿಷ್ಯರಕ್ಷಿತೆ ಅಶೋಕನಿಗೆ ಈರುಳ್ಳಿ ತಿನ್ನಿಸಿದಳು. ಸತ್ತ ಹುಳು ಮೈಯಿಂದ ಹೊರಗೆ ಬಿತ್ತು. ಗುಣಮುಖಿಯಾದ ಅಶೋಕ 'ಬೇಕಾದ ವರ ಕೇಳಿಕೋ' ಎಂದ. ಅವಳು 'ನನಗೆ ಒಂದು ವಾರದ ಮಟ್ಟಿಗೆ ರಾಜ್ಯವಾಳಲು ಅವಕಾಶ ಬೇಕು' ಎಂದಳು. ದೊರೆ ಒಪ್ಪಿದ. ರಾಜ್ಯಾಧಿಕಾರ ಬಂತು. ಕುಣಾಲನ ಮೇಲಿನ ಸೇಡು ಈಡೇರಿಸಿಕೊಳ್ಳಲು ಸಿದ್ಧವಾದಳು. ರಾಜನ ಹೆಸರಿನಲ್ಲಿ ಆಜ್ಞಾಪತ್ರ ತಕ್ಷಶಿಲೆಗೆ ಕಳಿಸಲು ಸಿದ್ಧಪಡಿಸಿದಳು. 'ಸಕಲ ಜಂಬೂದ್ವೀಪ ಸಾರ್ವಭೌಮ ಅಶೋಕನು ತಕ್ಷಶಿಲೆಯ ಮಹಾಜನಗಳಿಗೆ ಹೀಗೆ ಆಜ್ಞಾಪಿಸುತ್ತಾನೆ: ಈ ಆಜ್ಞೆಯನ್ನು ನೋಡಿದೊಡನೆ ನಮ್ಮ ವಂಶಕ್ಕೆ ಕಳಂಕವಾಗಿರುವ ಕುಮಾರ ಕುಣಾಲನ ಕಣ್ಣುಗಳೆರಡನ್ನೂ ಕೀಳಿಸತಕ್ಕದ್ದು ಮತ್ತು ತಕ್ಷಶಿಲೆಯ ಸರಹದ್ದಿನಿಂದ ಓಡಿಸತಕ್ಕದ್ದು.' ಆಜ್ಞಾಪತ್ರಕ್ಕೆ ರಾಜಮುದ್ರೆ ಬೇಕು. ಅದು ಅಶೋಕನ ತಲೆದಿಂಬಿನಡಿ ಇತ್ತು, ಅದನ್ನೆತ್ತಿಕೊಳ್ಳಲು ಹೋದಳು. ದೊರೆಗೆ ಎಚ್ಚರವಾಯಿತು. ರಾಣಿಯನ್ನು ಕಂಡು 'ತಿಷ್ಯಾ, ಹದ್ದುಗಳೆರಡು ಕುಮಾರನ ಕಣ್ಣುಗಳನ್ನು ಕಿತ್ತುಹಾಕಿದಂತೆ ನಾನೊಂದು ಕನಸು ಕಂಡೆ,' ಅವಳು ಕೆಟ್ಟದ್ದು ನಿವಾರಿತವಾಗಲೆಂದು ನಟಿಸಿದಳು. ಅಶೋಕ ಮತ್ತೆ ಮಲಗಿದ. ಮತ್ತೆ ಬೆಚ್ಚಿಬಿದ್ದು ಎದ್ದು ಕುಳಿತ. 'ಪ್ರಿಯೆ ಕುಮಾರನು ಕುರುಡನಾಗಿ ಪಾಟಲೀಪುತ್ರಕ್ಕೆ ಬಂದಂತೆಯೂ. ಅವನ ತಲೆಯೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಡ್ಡವೂ ಜಡೆಕಟ್ಟಿ ಬಟ್ಟೆಗಳು ಹರಿದು ಚಿಂದಿಯಾಗಿದ್ದಂತೆಯೂ ಕಂಡೆ.' ಅಮಂಗಳ ಪರಿಹಾರವಾಗಲೆಂದಳು. ಅಶೋಕ ಮಲಗಿದ. ಚೆನ್ನಾಗಿ ನಿದ್ರೆ ಬಂತು. ಅವನ ತಲೆಯ ದೆಸೆಯಲ್ಲಿದ್ದ ರಾಜಮುದ್ರೆಯಿಂದ ಪತ್ರಕ್ಕೆ ಅಂಕಿತ ಮಾಡಿ ಹೊರಟಳು. ಅಶೋಕನ ರಾಜಮುದ್ರೆ ಅವನ ದಂತಗಳ ಆಕಾರದಲ್ಲಿತ್ತು. ಆಮೇಲೆ ಅವನಿಗೆ ಮೂರನೆ ಸಲ ಕನಸು ಬಿತ್ತು. ಅದರಲ್ಲಿ ಅವನ ಹಲ್ಲುಗಳು ಮುರಿದು ಹೋದಂತೆ ಕಂಡಿತು. ದೈವಜ್ಞರನ್ನು ಬರಮಾಡಿಕೊಂಡ. ಕನಸುಗಳನ್ನು ತಿಳಿಸಿ ಅರ್ಥ ಕೇಳಿದ. 'ನಿನ್ನ ಮಗ ಕಣ್ಣು ಕಳೆದುಕೊಳ್ಳುತ್ತಾನೆಂದು ಇದರ ಸೂಚನೆ' ಎಂದರು.

ತಕ್ಷಶಿಲೆ ಅಶೋಕನ ಆಜ್ಞಾಪತ್ರದಿಂದ ಕಳವಳಿಸಿತು. ಅಧಿಕಾರಿಗಳು ಅನಿವಾರ್ಯವಾಗಿ ರಾಜಾಜ್ಞೆಯನ್ನು ಕುಣಾಲನಿಗೆ ತೋರಿಸಿದರು. ಕುಮಾರ ಪ್ರಶಾಂತ-ನಾಗಿ ಆಜ್ಞೆಗೆ ತಲೆ ಬಾಗಿದ. ಆಜ್ಞೆ ಕಾರ್ಯಗತಗೊಳಿಸಲು ಕಡೆಗೆ ಲೋಭಿಯೊಬ್ಬ ಮುಂದಾದ. ಆತ ಕುಮಾರನ ಸೂಚನೆಯಂತೆ ಎರಡು ಕಣ್ಣುಗಳನ್ನು ಒಂದಾದ ಮೇಲೊಂದರಂತೆ ಕಿತ್ತು ಕುಣಾಲನ ಕೈಗಳಿಗಿತ್ತ. ಆ ವೇಳೆಗೆ 'ಈ ರಾಜಾಜ್ಞೆ ಅಶೋಕರದಲ್ಲ, ರಾಣಿ ತಿಷ್ಯರಕ್ಷಿತೆಯ ಮೋಸ' ಎಂದು ರಾಜಧಾನಿಯಿಂದ ಧಾವಿಸಿದ ದೂತ ನಿವೇದಿಸಿದ. ಅನಾಹುತ ಆಗಿಹೋಗಿತ್ತು. ಸುದ್ದಿ ತಿಳಿದು ಕುಣಾಲನ ಮಡದಿ ಕಾಂಚನಮಾಲೆ ಓಡೋಡಿ ಬಂದಳು. ಕಣ್ಣು ರಕ್ತದ ದೊನ್ನೆಯಾಗಿದ್ದ ಗಂಡನನ್ನು ಕಂಡು ಮೂರ್ಛೆಹೋದಳು. ಕುಣಾಲ ಉಪಚರಿಸಿದ. ಸಮಾಧಾನಪಡಿಸಿದ. ಧೈರ್ಯ ಹೇಳಿದ.

ಗಂಡ ಹೆಂಡತಿ ತಕ್ಷಶಿಲೆ ಬಿಟ್ಟು ಹೊರಟರು. ಹಾಡುಗಳಿಂದ ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಂಡು ಪಾಟಲೀಪುತ್ರ ತಲಪಿದರು. ಅರಮನೆ ಬಾಗಿಲು ಕಾಯುವವರಿಗೆ ಪರಿಚಯ ತಿಳಿಯಲಿಲ್ಲ. ಒಳಗೆ ಬಿಡಲಿಲ್ಲ. ರಥಗಳನ್ನು ಬಿಡುತ್ತಿದ್ದ ಲಾಯದಲ್ಲಿ ನೆರಳಾಯಿತು. ಬೆಳಗಿನ ಜಾವದಲ್ಲಿ ಕುಮಾರ ಹಾಡಿದ. ಅಶೋಕನ ಕರುಳು ಗುರುತಿಸಿತು. ಕರೆಸಿದ. ಹರಕಲು ಬಟ್ಟೆ, ಮಾಯದ ಕೊಳಕು ಮೈ, ಕುರುಚಲು ಮುಖದ ಕುಣಾಲ ತಟ್ಟನೆ ಗುರುತು ಸಿಗಲಿಲ್ಲ. ಸೊಸೆಯೂ ಅಷ್ಟೆ. ಕುಮಾರನೆ? 'ಹೌದು'. ವಜ್ರಾಘಾತದಿಂದ ದೊರೆ ಕುಸಿದುಬಿದ್ದ. ಮಗನೇ ತಂದೆಗೆ ಶೈತ್ಯೋಪಚಾರ ಮಾಡಿದ. ತಂದೆ ಗೋಳಾಡಿದ. ಮಗ ಸಮಾಧಾನ ಹೇಳಿದ.

ಇದೆಲ್ಲ ರಾಣಿ ತಿಷ್ಯೆಯ ಮೋಸವೆಂದು ಅಶೋಕನಿಗೆ ತಿಳಿಯಿತು. ಶೋಕ ರೋಷಗಳು ಉಕ್ಕಿ ಹರಿದುವು. ಕುಣಾಲ ಅಶೋಕನ ಕಾಲು ಹಿಡಿದು ಬೇಡಿದ 'ತಾಯಿಯನ್ನು ಕ್ಷಮಿಸು ತಂದೆ. ಶಾಂತಿಯಿಂದಿರು. ವೈರದಿಂದ ವೈರ ಉಪಶಮನವಾಗದು. ಕ್ರೋಧವಿಲ್ಲದ ಪ್ರೇಮನಿರ್ಭರ ಹೃದಯದಲ್ಲಿ ಶಾಂತಿ ಆನಂದ ತುಂಬಿರುತ್ತವೆ. ಪ್ರಭು ಇದನ್ನು ನಂಬಿ ನಡೆದರೆ ಪ್ರಜೆಗಳೂ ಪಾಲಿಸುತ್ತಾರೆ' ಎಂದೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಂತವಾಗಿ ಹೇಳಿದ; 'ನನ್ನ ಹೃದಯದಲ್ಲಿನ ಕಲ್ಮಷಗಳೆಲ್ಲ ಕರುಣೆಯ ಕಣ್ಣೀರಿಂದ ಕಳೆದುಹೋಗಿದ್ದಲ್ಲಿ ನನ್ನ ಕಣ್ಣುಗಳು ಮೊದಲಿನಂತೆಯೇ ಆಗಲಿ' ಎಂದ. ಹಾಗೆ ಅವನು ಅನ್ನುತ್ತಿದ್ದಂತೆಯೇ ಕುಣಾಲನ ಕಣ್ಣುಗಳು ಮೊದಲಿನಂತೆಯೇ ಆದುವು.

ಬೌದ್ಧಕಥೆಯಲ್ಲಿ ತಿಷ್ಯೆಯ ಪಾತ್ರ ಹೊಸದಾಗಿ ಸೇರಿದೆ, ಜೈನಕಥೆಯಲ್ಲಿ ಆಕೆಯ ಪಾತ್ರ ಮರೆಯಾಗಿದೆ. ಬೌದ್ಧ ಪರಂಪರೆಯಂತೆ ಕುಣಾಲನಿಗೆ ಕಥೆಯಲ್ಲಿ ಕಣ್ಣು ಬಂದ ಪವಾಡವಿದೆ. ಇದು ಕಾರುಣ್ಯ ಸಿಂಚನದ ಪರಿಣಾಮವಿರಬಹುದು. ತಿಷ್ಯೆ–ಕುಣಾಲರ ಪ್ರಸಂಗ, ಕನ್ನಡ ಕಾವ್ಯ ಪರಂಪರೆಯಲ್ಲಿ ಕಾಣುವ ಕುಮಾರ ರಾಮ–ರತ್ನಾಜಿಯವರ ಪ್ರಸಂಗವನ್ನು ನೆನಪಿಸುತ್ತದೆ. ಅರ್ಜುನ–ಊರ್ವಶಿ ಪ್ರಸಂಗವೂ ಇಂತಹುದೇ ತಾನೆ? ಇಂಥ ಇನ್ನೂ ಕೆಲವು ಕಥೆಗಳು ಜಗತ್ತಿನ ಸಾಹಿತ್ಯದಲ್ಲಿ ಕೇಡುಬರುತ್ತವೆ. ಯುರಿಪಿಡೀಸನ ಹಿಪ್ಪೊಲೈಟಸ್ ನಾಟಕದಲ್ಲೂ ಇಂತಹುದೇ ಅಧಾರ್ಮಿಕ ಪ್ರಣಯದ ದುರಂತ ಕಥೆಯಿದೆ; ಅಲ್ಲಿಯೂ ಕುಮಾರ ರಾಮ, ಕುಣಾಲನಿಗೆ ಆದಂತೆ ಹಿಪ್ಪೊಲೈಟಸ್ ರಾಜಕುಮಾರನಿಗೆ ಮಾತೃಗಮನದ ಆರೋಪ ಹೊರಿಸಿ ತಂದೆ ಥೀಸಿಯಸ್ ಗಡೀಪಾರು ಆಜ್ಞೆ ಮಾಡುತ್ತಾನೆ. ಚಂಡ ಶಾಸನ–ಸುನಂದೆ, ಅಮೃತಮತಿ–ಅಷ್ಟಾವಂಕ, ಕೀಚಕ–ದ್ರೌಪದಿ, ಅರ್ಜುನ–ಊರ್ವಶಿ—ಇವು ಇನ್ನೊಂದು ಬಗೆಯ ವಿಷಮ ಪ್ರಣಯ ಪ್ರಸಂಗಗಳು. ವಡ್ಡಾರಾಧನೆಯಲ್ಲೇ ಬರುವ ಕಾರ್ತಿಕೇಯ ಸ್ವಾಮಿಯ ಕಥೆಯಲ್ಲಿನ ಅಗ್ನಿಮಿತ್ರ–ಕೃತ್ತಿಕೆಯರ ಪ್ರಸಂಗ ಕುಣಾಲ ಕಥೆಗೆ ತದ್ವಿರುದ್ಧವಾದ ಭೀಕರ ಸಂದರ್ಭವಾಗಿದೆ. ಮಾನವ ಸಂಬಂಧಗಳು ಹೇಗೆ ಜಟಿಲಕುಟಿಲ ಗತಿಯಲ್ಲಿ ಸಾಗುತ್ತವೆಂಬುದನ್ನು ಇವು ಧ್ವನಿಸುತ್ತವೆ.

ಭದ್ರಬಾಹು ಕಥೆಯಲ್ಲಿ ಬರುವ ಸ್ಥೂಲಭದ್ರನ ಬಗ್ಗೆ ಜೈನಕಥಾಸಾಹಿತ್ಯದಲ್ಲಿ ಸಿಗುವ ಕಥೆಯ ಸಾರಾಂಶ: ನಂದ ದೊರೆಗಳಲ್ಲಿ ಮಹಾಪ್ರತಾಪಿಯಾಗಿದ್ದ ಮಹಾನಂದನನ ಮಂತ್ರಿಯ ಹೆಸರು ಶಕಟಾಲ ಎಂದು. ಇವನು ಅತ್ಯಂತ ದಕ್ಷನಾದ ಮಂತ್ರಿಯಾಗಿದ್ದನು. ಶಕಟಾಲನಿಗೆ ಸ್ಥೂಲಭದ್ರ, ಶ್ರೀಯಕ ಎಂಬ ಗಂಡು ಮಕ್ಕಳಿದ್ದರು. ಹಿರಿಯವನು ಸ್ಥೂಲಭದ್ರ. ಆತ ತುಸು ತುಂಟ, ತುಂಬ ರಸಿಕ, ಮತ್ತು ಸ್ವಚ್ಛಂದ ಜೀವಿ. ಕಿರಿಯವನಾದ ಶ್ರೀಯಕನು ಧರ್ಮಿಷ್ಠ, ಸಂಯಮಿ ಮತ್ತು ಮೃದು ಸ್ವಭಾವದವನು. ಹಿರಿಯ ಮಗನ ಬಗ್ಗೆ ಶಕಟಾಲನಿಗೂ ಚಿಂತೆಯಾಯಿತು. ಸ್ಥೂಲಭದ್ರನಾದರೋ ತನ್ನ ಕಾಲವನ್ನೆಲ್ಲ ಕೋಶಳ ಮನೆಯಲ್ಲೇ ಕಳೆಯುತ್ತಿದ್ದ. ಕೋಶ ಪಾಟಲೀಪುತ್ರದ ಪ್ರಸಿದ್ಧ ವೇಶ್ಯೆ. ವೈಶಾಲಿಯಂತೆ ಪಾಟಲೀಪುತ್ರದ ಜನರೂ ಅತ್ಯಂತ ಸುಂದರಿಯಾದ ಹೆಣ್ಣನ್ನು ವೇಶ್ಯೆಯಾಗಿ ಇಡುವ ಪರಿಪಾಟವನ್ನು ಬೆಳಸಿಕೊಂಡಿದ್ದರು. ವೈಶಾಲಿಯ, ಅಂಬಾಪಾಲಿಯ ಸಹವಾಸಕ್ಕಾಗಿ ರಾಜಮಹಾರಾಜರು ಹಾತೊರೆಯುತ್ತಿದ್ದಂತೆ, ಪಾಟಲೀಪುತ್ರದ ಕೋಶಳ ಕೂಡ ಕಾಲ ಕಳೆಯಲಿಕ್ಕಾಗಿ ಹಣದ ಹೊಳೆ ಹರಿಸಲು ರಸಿಕ ಶ್ರೀಮಂತ ಮಂದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧವಾಗಿದ್ದರು. ಸ್ಥೂಲಭದ್ರ ಇಂಥ ವೇಶ್ಯೆಯ ಕೈವಶವಾಗಿದ್ದ. ಅವನಿಗೆ ವೇಶ್ಯಾ ಭವನವೇ ಸ್ವರ್ಗ. ಎಲ್ಲವೂ ಅಲ್ಲಿಯೇ ಆಗುತ್ತಿತ್ತು. ಕೋಶಳೂ ಸಹ ಅವನಲ್ಲಿ ಅಪಾರವಾದ ಅಕ್ಕರೆಯನ್ನು ತೋರುತ್ತಿದ್ದಳು. ಇತರರನ್ನು ಹಣಕ್ಕಾಗಿ, ಅಧಿಕಾರಕ್ಕಾಗಿ ಪ್ರೀತಿಸಿದರೆ ಸ್ಥೂಲಭದ್ರನನ್ನು ಮಾತ್ರ ಅಂತಃಕರಣಪೂರ್ವಕವಾಗಿ ಪ್ರೀತಿಸುತ್ತಿದ್ದಳು.

ಶಕಟಾಲನು ರಾಜನ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದನು. ಆದರೂ ಒಮ್ಮೆ ಅವನು ರಾಜನ ಕೋಪಕ್ಕೆ ತುತ್ತಾಗಬೇಕಾಯಿತು. ರಾಜರು ಎಂದು ಹೇಗೆ ಇರುತ್ತಾರೆಂಬುದನ್ನು ಹೇಳಲು ಕಷ್ಟವಾಗುತ್ತದೆ. ಇಂಥ ಚಂಚಲ ಸ್ವಭಾವದ ರಾಜನ ಸೇವೆ ಕಷ್ಟಕರವಾದುದೇ ಸರಿ.

ಮಹಾನಂದನನ ಕೋಪಕ್ಕೆ ಗುರಿಯಾದ ಶಕಟಾಲ ಆತ್ಮಹತ್ಯೆ ಮಾಡಿಕೊಂಡನು. ಪದ್ಧತಿಯಂತೆ ಶಕಟಾಲನ ಹಿರಿಯ ಮಗನಿಗೆ ಈ ಮಂತ್ರಿಪದವಿ ಹೋಗ ಬೇಕಾಗಿತ್ತು. ಆದರೆ ಸ್ಥೂಲಭದ್ರನ ನಡತೆ, ಶೀಲ ಮತ್ತು ಗುಣಗಳು ಚೆನ್ನಾಗಿರ ಲಿಲ್ಲವಾಗಿ ಅವನ ತಮ್ಮ ಶ್ರೀಯಕನನ್ನು ಕರೆಸಿ ತಂದೆಯ ಸ್ಥಾನವನ್ನು ಅಲಂಕರಿಸು ವಂತೆ ಕೇಳಿದರು. ಶ್ರೀಯಕ ಅತ್ಯಂತ ವಿಧೇಯನಾದುದರಿಂದ ತನ್ನ ಅಣ್ಣನಿರುವಾಗ ತಾನು ಆ ಪದವಿ ಸ್ವೀಕರಿಸುವುದಿಲ್ಲವೆಂದನು. ರಾಜನ ಸಲಹೆಗಾರರು ಅವನ ವಿವೇಕಕ್ಕೆ ಮೆಚ್ಚಿಕೊಂಡರು. ಅವನ ಸಲಹೆಯಂತೆ ಅವರು ಸ್ಥೂಲಭದ್ರನ ಸಮೀಪಕ್ಕೆ ಹೋಗಿ ಮಂತ್ರಿಪದವಿ ಸ್ವೀಕರಿಸುವಂತೆ ಕೇಳಿಕೊಂಡರು. ಇಲ್ಲಿಯವರೆಗೆ ಸ್ವಚ್ಛಂದ ಜೀವನ ನಡೆಸಿದ ಅವನಿಗೆ ಮಂತ್ರಿಪದವಿಯ ಪರತಂತ್ರ ಜೀವನ ಹಿಡಿಸಲಿಲ್ಲ. ಅವರ ಒತ್ತಾಯದ ಮೇಲೆ ಯೋಚಿಸಿ ಉತ್ತರ ನೀಡುವುದಾಗಿ ತಿಳಿಸಿ ಸ್ಥೂಲಭದ್ರ ನಗರವನ್ನು ಬಿಟ್ಟು ಪ್ರಶಾಂತವಾದ ಉದ್ಯಾನವನಕ್ಕೆ ಹೋದ. ಅಲ್ಲಿ ಅಶ್ವತ್ಥ ವೃಕ್ಷದ ಕೆಳಗೆ ಏಕಾಂಗಿಯಾಗಿ ಕುಳಿತು ಯೋಚಿಸತೊಡಗಿದ. ಮಂತ್ರಿ ಪದವಿಯ ಪ್ರಲೋಭನೆ ಅವನನ್ನು ಸದಾ ಕಾಡುತ್ತಿತ್ತು. ಆದರೆ ಆ ಪರತಂತ್ರ ಜೀವನದಿಂದ ತನ್ನ ಮಾನಸಿಕ ಶಾಂತಿ, ವಿವೇಕ ಮತ್ತು ಅನುಕಂಪಗಳು ನಷ್ಟ ವಾಗುತ್ತದೆ ಮತ್ತು ಆತ್ಮನಿಗೆ ಕಲ್ಯಾಣವಾಗುವುದಿಲ್ಲವೆಂದು ಚಿಂತಿಸತೊಡಗಿದ. ಅವನ ಆತ್ಮ ಒಮ್ಮೆಲೇ ಜಾಗೃತವಾಯಿತು. ಶಮ, ದಮ, ಮಾರ್ದವತೆ ಮತ್ತು ಶುಭ ವಿಚಾರಗಳು ಅವನ ಮನದಲ್ಲಿ ಮೂಡಿದವು. ತಾನು ನಿಜಕ್ಕೂ ಭಾಗ್ಯವಂತ ನೆಂದು ಭಾವಿಸಿದ. ಕೂಡಲೇ ಅವನಿಗೆ ವೈರಾಗ್ಯೋದಯವಾಯಿತು. ಸಾಧು ವೇಷ ಧರಿಸಿ ರಾಜಸಭೆಯಲ್ಲಿ ಉಪಸ್ಥಿತನಾದ. ಅಲ್ಲಿ ದೊಡ್ಡ ಧರ್ಮೋಪ ದೇಶವನ್ನೇ ನೀಡಿದ. ಜನರೆಲ್ಲ ಚಕಿತರಾದರು. ಯಾವಾಗಲೂ ವೇಶ್ಯೆ ಮನೆಯ ಭೋಗವಿಲಾಸದಲ್ಲಿ ಮಗ್ನನಾದ ರಸಿಕ ಸ್ಥೂಲಭದ್ರನೆಲ್ಲಿ, ಮಹಾವೇದಾಂತಿ ಯಂತೆ ಶಾಸ್ತ್ರಾರ್ಥ ಮಾಡುವ ಈ ಸಾಧು ಸ್ಥೂಲಭದ್ರನೆಲ್ಲಿ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಆಗ ಅವರು ಸ್ಥೂಲಭದ್ರನಿಗೆ ಮುನಿಯಾಗಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಕಾಶ ನೀಡಿ ಶ್ರೀಯಕನಿಗೆ ಮಂತ್ರಿಪದವಿ ಕೊಟ್ಟರು. ಸ್ಥೂಲಭದ್ರ ಶ್ರುತ ಕೇವಲಿ ಸಂಭೂತವಿಜಯರಲ್ಲಿ ದೀಕ್ಷಿತನಾದ.

ಸ್ಥೂಲಭದ್ರ ದೀಕ್ಷಿತನಾದ ಹೊಸ ವರ್ಷ ಒಂದು ಸ್ಥಳದಲ್ಲಿ ತಂಗಿ ಚಾತುರ್ಮಾಸ ಮಾಡಬೇಕಾಗಿ ಬಂತು. ಮಳೆಗಾಲದಲ್ಲಿ ಸಂಚಾರಮಾರ್ಗಗಳೆಲ್ಲ ಮುಚ್ಚಿ. ನದಿಗಳಲ್ಲಿ ನೀರು ತುಂಬಿ ಹರಿಯುತ್ತಿರುತ್ತದೆ. ಗಿಡ ಮರ ಬಳ್ಳಿಗಳೆಲ್ಲ ಹಸಿರಾಗಿರುತ್ತವೆ. ಹಸಿರು ಹುಲ್ಲು ಯಥೇಚ್ಛವಾಗಿ ಬೆಳೆದಿರುತ್ತದೆ. ಭೂಮಿ ತನುವಿನಿಂದ ಕೂಡಿರುವುದರಿಂದ ಜೀವಜಂತುಗಳು ಉತ್ಪತ್ತಿಯಾಗುತ್ತಿರುತ್ತವೆ. ಆದ್ದರಿಂದ ಜೀವರಕ್ಷಣೆಗೆ ಆದ್ಯಗಮನ ಕೊಡುವ ಮಹಾವ್ರತಿಯಾದ ಮುನಿ ತನ್ನ ಸಂಚಾರವನ್ನು ನಿಲ್ಲಿಸಿ ಒಂದೇ ಜಾಗದಲ್ಲಿ ನಾಲ್ಕು ತಿಂಗಳು ಕಳೆಯುತ್ತಾನೆ. ಅದರಂತೆ ಚಾತುರ್ಮಾಸ ಸ್ಥಳಗಳನ್ನು ನಿಗದಿ ಮಾಡಲು ಸಂಭೂತವಿಜಯರು ಎಲ್ಲ ಶಿಷ್ಯರನ್ನೂ ಕರೆದು ಅವರ ಸಲಹೆ ಕೇಳಿದರು. ಸಿಂಹಕೀರ್ತಿ ಎಂಬ ಮುನಿ ತಾನು ಸಿಂಹದ ಗುಹೆಯಲ್ಲಿ ಉಪವಾಸವಿದ್ದು ಕಾಯೋತ್ಸರ್ಗದ ನಿಲುವಿನಲ್ಲಿ ನಿಂತು ಚಾತುರ್ಮಾಸ ಮಾಡುತ್ತೇನೆಂದರೆ ರತ್ನಶೇಖರ ತಾನು ಸರ್ಪದ ನೆರಳಿನಲ್ಲಿ ನಿಂತು ನಾಲ್ಕು ತಿಂಗಳು ಉಪವಾಸವಿರುತ್ತೇನೆಂದ. ಹಾಗೆಯೇ ವಜ್ರಸೇನನೆಂಬ ಸಾಧು ತಾನು ಬಾವಿಯ ಮೇಲ್ಭಾವಣಿಯ ಮೇಲೆ ನಿಂತು ವರ್ಷಾಯೋಗವನ್ನು ಕಳೆಯುತ್ತೇನೆಂದ. ಅವರವರ ಇಷ್ಟದಂತೆ ಚಾತುರ್ಮಾಸ ಕಳೆಯಲು ಸಂಭೂತಿವಿಜಯರು ಅನುಮತಿ ನೀಡಿದರು. ಸ್ಥೂಲಭದ್ರನ ಸರದಿ ಬಂತು. ತಾನು ಮಾತ್ರ ಕೋಶಳ ಚಿತ್ರಶಾಲೆಯಲ್ಲಿ ಚಾತುರ್ಮಾಸ ಮಾಡುತ್ತೇನೆಂದು ಗುರುಗಳಲ್ಲಿ ಬಿನ್ನವಿಸಿಕೊಂಡ. ವಿಕಾರದಿಂದ ದೂರವಿದ್ದು ವಿಕಾರಗಳನ್ನು ಜಯಿಸುವುದು ದೊಡ್ಡದಲ್ಲ. ಆದರೆ ಅವುಗಳ ಮಧ್ಯೆ ಇದ್ದು ಅವುಗಳನ್ನು ಜಯಿಸುವುದು ದೊಡ್ಡದು. ಸಂಸಾರದಲ್ಲಿ ಮದೋನ್ಮತ್ತ ಆನೆಗಳ ಕುಂಭಸ್ಥಳಗಳನ್ನು ಭೇದಿಸುವ ವೀರಪುರುಷರು ಸಿಗುತ್ತಾರೆ. ಸಿಂಹಗಳನ್ನು ವಧಿಸುವ ನಿಪುಣರು ಸಿಗುತ್ತಾರೆ, ಆದರೆ ಮನ್ಮಥನ ದರ್ಪಣವನ್ನು ಮುರಿಯುವ ಮನುಷ್ಯರು ಸಿಗುವುದು ಕಷ್ಟ ಎಂದು ಸಂಭೂತವಿಜಯರು ತಿಳಿಸಿ ಸ್ಥೂಲಭದ್ರನನ್ನು ಹರಸಿ ಕೋಶಾ ವೇಶ್ಯೆಯ ಮನೆಯಲ್ಲಿ ಚಾತುರ್ಮಾಸ ಮಾಡಲು ಕಳುಹಿಸಿದರು.

ಸ್ಥೂಲಭದ್ರ ಕೋಶಳ ಮನೆಗೆ ಬಂದನು. ಕೋಶಳಿಗೆ ಆಶ್ಚರ್ಯವಾಯಿತು. ಬಹಳ ಕಾಲ ತನ್ನನ್ನು ಬಿಟ್ಟು ಅವನು ಇರುವುದಿಲ್ಲವೆಂದು ತಿಳಿದಿದ್ದಳು. ಅವನು ಬಂದ ಕೂಡಲೇ ಹಾರ್ದಿಕ ಸ್ವಾಗತ ಕೋರಿದಳು. ಆರತಿ ಎತ್ತಿದಳು. ಉನ್ನತಾಸನ ನೀಡಿದಳು. ತಾನು ಚಾತುರ್ಮಾಸ ಕಳೆಯಲು ಇಲ್ಲಿಗೆ ಬಂದಿರುವುದಾಗಿಯೂ ಅದಕ್ಕಾಗಿ ಎಲ್ಲ ವ್ಯವಸ್ಥೆಯನ್ನೂ ತನ್ನ ಚಿತ್ರಶಾಲೆಯಲ್ಲಿ ಮಾಡಬೇಕೆಂದೂ ಸ್ಥೂಲಭದ್ರ ಕೇಳಿಕೊಂಡ. ಕೋಶಳ ಚಿತ್ರಶಾಲೆ ಮದನನ ಮಂದಿರವಾಗಿತ್ತು. ಕಾಮೋದ್ದೀಪಕ ಚಿತ್ರಗಳು ಅಲ್ಲಿ ಕಂಗೊಳಿಸುತ್ತಿದ್ದ”ವು. ಇಂಥ ವಾತಾವರಣದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಾತುರ್ಮಾಸ ಕಳೆಯಲು ಬಂದಿರುವ ಸ್ಥೂಲಭದ್ರ ಮುನಿಯನ್ನು ನೋಡಿ ಕೋಶಳಿಗೆ ನಗು ಬಂತು. ಮುನಿಯಾದರೂ ವಿಲಾಸೀ ಜೀವನವನ್ನು ಬಿಡಲಾರದೆ ಸ್ಥೂಲಭದ್ರ ಇಲ್ಲಿಗೆ ಬಂದಿದ್ದಾನೆಂದು ಅವಳು ಕಲ್ಪಿಸಿಕೊಂಡಳು. ನೃತ್ಯ, ಸಂಗೀತ, ಮದ್ಯ, ಹೂವು, ಹಣ್ಣು, ಹೆಣ್ಣುಗಳ ಮಧ್ಯೆ ಇರುವ ಯಾವನಾದರೂ ಭೋಗದಿಂದ ವಿಮುಕ್ತನಾಗಲು ಸಾಧ್ಯವೇ ಎಂದು ಆಲೋಚಿಸಿ ವಸ್ತ್ರಾಲಂಕಾರ ಮಾಡಿಕೊಂಡು ಗೆಜ್ಜೆಯ ನಾದ ಮಾಡುತ್ತಾ ಅವನ ಹತ್ತಿರ ಬಂದಳು.

ಕೋಶ: ಈ ಯೌವನವನ್ನು ಏಕೆ ವೃಥಾ ನಷ್ಟಮಾಡಿಕೊಳ್ಳುತ್ತೀರಾ, ನನ್ನ ಕೂಡ ಆನಂದದಿಂದ ವಿಲಾಸದಿಂದ ಬಾಳಿರಿ. ಯೌವನದ ಮಕರಂದವನ್ನು ಕುಡಿಯಿರಿ. ಭೋಗವೇ ಯೌವನ. ತಪಸ್ಸಿನ ಜೀವನವೇ ಮುಪ್ಪು.

ಸ್ಥೂಲಭದ್ರ ಕೋಶಾ! ಯೌವನದಲ್ಲಿ ಭೋಗಜೀವನವನ್ನು ಬಿಟ್ಟು ಬೇರೆ ಇನ್ನೇನೂ ಇಲ್ಲವೆನ್ನುವ ನಿನ್ನ ಭ್ರಮೆಯನ್ನು ಬಿಡು. ಧರ್ಮಾಚರಣೆಗೆ ಅದೇ ಒಳ್ಳೆಯ ಕಾಲ. ನಾನು ಆತ್ಮಕಲ್ಯಾಣದ ಸುವರ್ಣ ಮಾರ್ಗವನ್ನು ಹಿಡಿದಿದ್ದೇನೆ. ಯೌವನ ಅಪಾರಶಕ್ತಿಯಿಂದ ಕೂಡಿದುದಾಗಿದೆ. ಈ ಶಕ್ತಿಯ ಸದುಪಯೋಗಪಡಿಸಿಕೊಳ್ಳ ಬೇಕು ಕೋಶಾ, ಅದನ್ನು ವ್ಯರ್ಥ ಮಾಡಬಾರದು.

ಕೋಶ: ನಿಮ್ಮ ಒಣವೇದಾಂತವನ್ನೆಲ್ಲಾ ಬಿಟ್ಟು ಕೆಲವು ಕಾಲ ಮುನಿ ವ್ರತವನ್ನು ತ್ಯಜಿಸಿ ನನ್ನ ಕೂಡ ಸಂತೋಷದಿಂದಿರಿ.

ಸ್ಥೂಲಭದ್ರ: ಕೋಶಾ! ನಿನ್ನ ಮನಸ್ಸು ಇನ್ನೂ ಭೋಗದ ಚಕ್ರದಲ್ಲಿಯೇ ಸುತ್ತುತ್ತಿದೆ. 'ಭೋಗೇ ರೋಗ ಭಯಮ್', ಭೋಗದಲ್ಲಿ ರೋಗದ ಭಯ ಅಡಗಿದೆ. ಆದ್ದರಿಂದ ಯೌವನದಲ್ಲಿ ಧರ್ಮವನ್ನು ಆಚರಿಸದೆ ವೃದ್ಧಾಪ್ಯದಲ್ಲಿ ಆಚರಿಸಲು ಸಾಧ್ಯವಿಲ್ಲ. ಮುಪ್ಪಿ ನಲ್ಲಿ ದೇಹ ಕಟ್ಟಿಗೆಯಂತಾಗುತ್ತದೆ. ಸದಾ ರೋಗದಿಂದ ಕೂಡಿರುತ್ತದೆ. ಅಂಥ ದೇಹದಿಂದ ಧರ್ಮವನ್ನು ಆಚರಿಸಲು ಸಾಧ್ಯವೇ? ಕೋಶಾ, ಯೋಚಿಸಿ ನೋಡು.

ಕೋಶ: ನೀವು ಹಟವಾದಿಯಾಗುತ್ತಿದ್ದೀರಿ.

ಸ್ಥೂಲಭದ್ರ: ಸನ್ಮಾರ್ಗದಲ್ಲಿ ಹೋಗುವುದು ಹಟವಾದವಲ್ಲ ಕೋಶಾ. ವಿಚಾರ ಮಾಡಿ ಈ ಮಾರ್ಗವನ್ನು ಆರಿಸಿಕೊಂಡಿದ್ದೇನೆ. ರೋಗಿಗೆ ಕಹಿ ಔಷಧಿ ಮೊದಲು ಬೇಸರ ತರಬಹುದು. ಆದರೆ ಅದು ದೇಹಕ್ಕೆ ಒಳ್ಳೆಯದು ಕೋಶಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಶಳ ವಿವಿಧ ಹಾವಭಾವ ವಿಲಾಸ ವಿಭ್ರಮಗಳು ಸ್ಥೂಲಭದ್ರನ ಮೇಲೆ ಏನೂ ಪ್ರಯೋಜನ ಬೀರಲಿಲ್ಲ. ಅವಳ ಸಾವಿರ ಚೇಷ್ಟೆಗಳು ನಿಷ್ಫಲವಾದವು. ಅವಳಲ್ಲಿ ವಿಕಾರ ಹೆಚ್ಚಿದಂತೆ ಸ್ಥೂಲಭದ್ರರಲ್ಲಿ ಅನಂತವೀರ್ಯ ಹೆಚ್ಚಾಗತೊಡಗಿತು. ದೇಹದಲ್ಲಿ ಬ್ರಹ್ಮಚರ್ಯದ ದೀಪ್ತಿ ಬೆಳಗತೊಡಗಿತು. ಸ್ಥೂಲಭದ್ರರ ತಪೋನಿಷ್ಠವಾದ ತೇಜಸ್ಸಿನಿಂದ ಕೋಶಳ ಮನಸ್ಸು ಪರಿವರ್ತಿತವಾಯಿತು. ತನಗೂ ಸನ್ಮಾರ್ಗ ತೋರಿಸಿಕೊಡುವಂತೆ ಅವರನ್ನು ಬೇಡಿಕೊಂಡಳು. ಆಗ ಅವರು ಅವಳಿಗೆ ಈ ರೀತಿ ದೀರ್ಘವಾದ ಧರ್ಮೋಪದೇಶವಿತ್ತರು.

ಎಲ್ಲ ಉತ್ತಮ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಧರ್ಮವಾಗಿದೆಯೆಂದು ಕೋಶಳಿಗೆ ತಿಳಿಸಿದರು. ಸ್ಥೂಲಭದ್ರರ ಈ ಧರ್ಮತೀರ್ಥದಲ್ಲಿ ಮಿಂದು ಕೋಶ ಪರಿಶುದ್ಧಳಾದಳು. ತಾನೂ ಸಂಸಾರವನ್ನು ತೊರೆಯಬೇಕೆಂದು ನಿಶ್ಚಯಿಸಿದಳು. ಸ್ಥೂಲಭದ್ರರು ಮಹಾವ್ರತಗಳನ್ನು ಒಮ್ಮೆಲೇ ಗ್ರಹಿಸುವುದು ಕಷ್ಟವೆಂದು ತಿಳಿಸಿ ಅವಳಿಗೆ ಶ್ರಾವಕ ವ್ರತಗಳನ್ನು ಕೊಟ್ಟರು. ಅವಳು ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳನ್ನು ಗ್ರಹಿಸಿ ಮಧು ಮದ್ಯ ಮಾಂಸಗಳನ್ನು ತ್ಯಜಿಸಿ ಮುಂದಿನ ಮುನಿಜೀವನಕ್ಕೆ ಬೇರುಗಳಂತಿರುವ ಈ ಅಷ್ಟಮೂಲಗಳನ್ನು ಹೊಂದಿದಳು.

ಚಾತುರ್ಮಾಸ ಕಳೆದಮೇಲೆ ಎಲ್ಲರೂ ಸಂಭೂತವಿಜಯರಲ್ಲಿಗೆ ಬಂದರು. ಆಚಾರ್ಯರು ಎಲ್ಲರ ಕುಶಲಸಮಾಚಾರವನ್ನು ಕೇಳಿ ತಿಳಿದುಕೊಂಡರು. ಎಲ್ಲರನ್ನೂ ಸಾಮಾನ್ಯ ರೀತಿಯಲ್ಲಿ ಪ್ರಶಂಸಿದರು. ಆದರೆ ಸಿಂಹಕೀರ್ತಿ, ರತ್ನಶೇಖರ ಮತ್ತು ವಜ್ರಸೇನರಿಗೆ ಈ ಸಾಮಾನ್ಯ ಹೊಗಳಿಕೆ ಹಿಡಿಸಲಿಲ್ಲ. ಇದೇ ಸಮಯಕ್ಕೆ ಸ್ಥೂಲಭದ್ರರೂ ಆಗಮಿಸಿದರು. ಅವರಿಗೆ ವೀರೋಚಿತವಾದ ಸ್ವಾಗತವನ್ನು ಗುರುಗಳು ನೀಡಿದರು. ಮುಕ್ತಕಂಠದಿಂದ ಅವನ ಮೇಲೆ ಪ್ರಶಸ್ತಿಯ ಹೂವಿನ ಮಳೆಗರೆದರು. ಇದು ಇತರೆ ಮೂವರು ಮುನಿಗಳಿಗೆ ಹಿಡಿಸಲಿಲ್ಲ. ಅವರಿಗೆ ಸಂಭೂತವಿಜಯರ ಮೇಲೆ ಕೋಪ ಬಂತು; ಸ್ಥೂಲಭದ್ರರ ಮೇಲೆ ದ್ವೇಷ ಕಾರಿದರು.

ಎರಡನೆಯ ಚಾತುರ್ಮಾಸ ಬಂತು. ಮೊದಲನೆಯ ವರ್ಷಾಯೋಗದಲ್ಲಿ ಸಿಂಹಗುಹೆಯಲ್ಲಿ ತಪಸ್ಸು ಮಾಡಿದ ಸಿಂಹಕೀರ್ತಿ ಸ್ಥೂಲಭದ್ರರನ್ನು ಮೀರಿಸಬೇಕೆಂದು ಈ ಸಾರಿ ತಾನೂ ಕೋಶಳ ಚಿತ್ರಶಾಲೆಯಲ್ಲಿ ಚಾತುರ್ಮಾಸ ಮಾಡುವುದಾಗಿ ಗುರುಗಳಿಗೆ ತಿಳಿಸಿದ; ಅವರ ಅಪ್ಪಣೆ ಕೇಳಿದ. ಆದಕ್ಕೆ ಸಂಭೂತವಿಜಯರು ಈ ರೀತಿಯ ಮತ್ಸರ ಬಿಡಬೇಕೆಂದೂ, ಈರ್ಷೆಯಿಂದ ಮಾಡುವ ಯಾವ ಕೆಲಸವೂ ಸುಖದಾಯಕವಾಗುವುದಿಲ್ಲವೆಂದೂ ಮತ್ತು ಈ ವ್ರತ ಅವನಿಂದ ಸಾಧ್ಯವಿಲ್ಲವೆಂದೂ ಸಿಂಹಕೀರ್ತಿಗೆ ತಿಳಿಸಿದರು. ಆದರೂ ಹಠದಿಂದ ಪ್ರೇರಿತನಾದ ಸಿಂಹಕೀರ್ತಿ ವೇಶ್ಯೆಯ ಮನೆಯಲ್ಲಿಯೇ ಚಾತುರ್ಮಾಸ ಮಾಡಬೇಕೆಂದು ನಿರ್ಣಯಿಸಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಂಹಕೀರ್ತಿ ವ್ಯಾಗರಾಜನ ದರ್ಪವನ್ನು ಧರಿಸಿ ಕೋಶಳ ಮನೆಗೆ ಬಂದನು. ಕೋಶ ಅವನನ್ನು ಸ್ವಾಗತಿಸಿದಳು. ಗಂಭೀರ ಪ್ರವೃತ್ತಿಯ ಸಿಂಹಕೀರ್ತಿ ನಾಲ್ಕಾರು ದಿನಗಳು ಸಂಯಮದಿಂದಲೇ ಕಾಲ ಕಳೆದ. ಆದರೆ ಕಾಮೋದ್ದೀಪನದ ವಾತಾವರಣ ಅವನ ಸಂಯಮದ ಕಟ್ಟೆಯನ್ನು ಸಡಿಲಗೊಳಿಸಿತು. ಕೋಶ ಇದನ್ನು ಅರಿತಳು. ಮುನಿಗಳಿಗೆ ಪಾಠ ಕಲಿಸಬೇಕೆಂದು ಆಲೋಚಿಸಿ ಹಣ ಕೊಟ್ಟರೆ ಮಾತ್ರ ತಾನು ವಶವಾಗುವುದೆಂದು ತಿಳಿಸಿದಳು. ಮುನಿಯಾದ ತನ್ನಲ್ಲಿ ಹಣ ಎಲ್ಲಿಂದ ಬರಬೇಕೆಂದು ಸಿಂಹಕೀರ್ತಿ ವಾದಿಸಿದ. ನೇಪಾಳದಲ್ಲಿ ರಾಜ ಮುನಿಗಳಿಗೆ ರತ್ನಕಂಬಳಿಯನ್ನು ದಾನ ಮಾಡುತ್ತಾನೆ. ಆದ್ದರಿಂದ ಅಲ್ಲಿಗೆ ಹೋಗಿ ಅದನ್ನು ತನ್ನಿ. ಅನಂತರ ನಾನು ನಿಮ್ಮ ವಶನಾಗುತ್ತೇನೆಂದಳು ಕೋಶ. ಅದರಂತೆ ಸಿಂಹಕೀರ್ತಿ ಕಾಡುಮೇಡು ಗಳನ್ನು ದಾಟಿ, ಮುಳ್ಳುಕಲ್ಲುಗಳನ್ನು ತುಳಿದು ಧಾರಾಳವಾಗಿ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ನೇಪಾಳಕ್ಕೆ ಬಂದನು. ಇಂದ್ರಿಯಗಳಿಗೆ ವಶನಾದ ಮನುಷ್ಯ ಅಭಕ್ಷ್ಯ ಭಕ್ಷಣ, ಅಪೇಯಪಾನ ಮತ್ತು ಅಗಮ್ಯ ಪ್ರದೇಶಗಳ ಗಮನ ಈ ರೀತಿ ಏನುಬೇಕಾದರೂ ಮಾಡುತ್ತಾನೆ. ಅದರಂತೆ ಸಿಂಹಕೀರ್ತಿ ಕೋಶಳನ್ನು ವಶ ಪಡಿಸಿಕೊಳ್ಳಲು ಇಷ್ಟುದೂರ ಕಷ್ಟಪಟ್ಟು ನಡೆದು ಬಂದ. ರತ್ನಗಂಬಳಿ ರಾಜನಿಂದ ಬಹುಮಾನವಾಗಿ ದೊರಕಿತು. ಅದನ್ನು ತೆಗೆದುಕೊಂಡು ಕೋಶ ಇನ್ನೇನು ತನ್ನ ವಶಳಾದಳೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಾ ಬರುತ್ತಿದ್ದಾಗ ರಸ್ತೆಯಲ್ಲಿ ಕಳ್ಳರ ಗುಂಪೊಂದಕ್ಕೆ ಸಿಕ್ಕಿಬಿದ್ದ. ಅವರು ಇವನಿಗೆ ಹೊಡೆದು ಬಡಿದು ರತ್ನಗಂಬಳಿ ಯನ್ನು ಕಿತ್ತುಕೊಂಡರು. ಅಷ್ಟರಲ್ಲಿ ಆ ಕಳ್ಳರ ಗುಂಪಿನ ನಾಯಕ ಬಂದ. ಅವನು ಇವನ ಮೇಲೆ ಕರುಣೆ ತೋರಿಸಿ ಆ ರತ್ನಗಂಬಳಿಯನ್ನು ಅವನಿಗೇ ಹಿಂತಿರುಗಿಸಿ ಕೊಡಿಸಿದ. ಅದನ್ನು ಈಗ ಯಾರಿಗೂ ತೋರಿಸದಂತೆ ಮುಚ್ಚಿಕೊಂಡು ಕೋಶಳ ಮನೆಗೆ ಬಂದ. ಕೋಶಳ ಪಾದಮೂಲದಲ್ಲಿ ಅದನ್ನು ಇಟ್ಟು ತನ್ನ ಮೇಲೆ ಕರುಣೆ ತೋರಿಸಬೇಕೆಂದು ದೀನತೆಯಿಂದ ಕೇಳಿಕೊಂಡ. ಆದರೆ ಕೋಶ ಅದನ್ನು ಉಪೇಕ್ಷೆ ಯಿಂದ ಹೊರಗೆ ಬಿಸಾಡಿದಳು. ಅದು ಕೊಚ್ಚೆಯ ಗುಂಡಿಗೆ ಹೋಗಿ ಬಿತ್ತು. ಮುನಿಮಹಾರಾಜ ಹೌಹಾರಿದ. ತಾನು ಎಷ್ಟು ಕಷ್ಟಪಟ್ಟು ಇದನ್ನು ತಂದಿದ್ದೇನೆ. ಮಳೆ ಗಾಳಿಯೆನ್ನದೆ, ಕಳ್ಳಕಾಕರ ಭೀತಿಯಿಂದ ಪಾರಾಗಿ ತಂದಿರುವ ಈ ಅಪೂರ್ವ ಅನರ್ಘ್ಯ ರತ್ನಗಂಬಳಿಯನ್ನು ಈ ಮೂರ್ಖಸ್ತ್ರೀ ಇಷ್ಟು ಹಗುರವಾಗಿ ಕೊಚ್ಚೆಯ ಗುಂಡಿಗೆ ಬಿಸಾಡಿದಳಲ್ಲ ಎಂದು ವ್ಯಥೆಪಟ್ಟನು. ಅದಕ್ಕೆ ಕೋಶ, "ಹೇ ಸಾಧು ಮಹಾರಾಜರೇ! ನಾನಲ್ಲ ಮೂರ್ಖೆ. ಕೊಚ್ಚೆಯ ಗುಂಡಿಗಿಂತ ನೂರಾರು ಪಾಲು ಅಧಿಕ ದುರ್ಗಂಧದಿಂದ ಕೂಡಿದ ನನ್ನ ದೇಹಕ್ಕೆ ಮೋಹಿತನಾಗಿ ನಿನ್ನ ಪವಿತ್ರ ಚಾರಿತ್ರ್ಯವನ್ನು ಕಳೆದುಕೊಳ್ಳಲು ಸಿದ್ಧನಾದ ನೀನು ಶತಮೂರ್ಖ" ಎಂದಳು. ಸಿಂಹಕೀರ್ತಿ ಎಚ್ಚೆತ್ತ. "ಪಾಪಕೂಪಕ್ಕೆ ಬಿದ್ದು ಸರ್ವನಾಶವಾಗುತ್ತಿದ್ದ ತನ್ನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಉದ್ಧರಿಸಿದ ಮಹಾತಾಯಿ ನೀನು" ಎಂದು ಕೋಶಳ ಉಪಕಾರವನ್ನು ಸ್ಮರಿಸಿಕೊಂಡ. ಅವಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ.

ಚಾತುರ್ಮಾಸ ಮುಗಿಯುವ ಮುಂಚೆಯೇ ಅವನು ಸಂಭೂತವಿಜಯರ ಹತ್ತಿರ ಬಂದ. ಕೋಶಳ ಮನೆಯಲ್ಲಿ ನಡೆದದ್ದನ್ನೆಲ್ಲಾ ಹೇಳಿದ. ತನ್ನ ತಪ್ಪನ್ನು ಒಪ್ಪಿಕೊಂಡ. ಸ್ಥೂಲಭದ್ರರನ್ನು ಮನಸಾರೆ ಹೊಗಳಿದ.

ಸ್ಥೂಲಭದ್ರರು ಸಂಭೂತವಿಜಯರ ಹತ್ತಿರ ದೀಕ್ಷಿತರಾದರೂ ತಮ್ಮ ದಶ ಪೂರ್ವಗಳ ಅಧ್ಯಯನವನ್ನು ಶ್ರುತಕೇವಲಿ ಭದ್ರಬಾಹುಗಳಲ್ಲಿ ಮಾಡಿದರು. ಭದ್ರಬಾಹುಗಳು ದ್ವಾದಶಾಂಗ ಚತುರ್ದಶ ಪಾರಾಗಾಮಿಗಳಾಗಿದ್ದರು. ಒಮ್ಮೆ ಅವರು ಸ್ಥೂಲಭದ್ರರ ಸಂಗಡ ಪಾಟಲೀಪುತ್ರಕ್ಕೆ ಆಗಮಿಸಿ ಊರಿನ ಬಹಿರುದ್ಯಾನದಲ್ಲಿ ತಂಗಿದ್ದರು. ಅಲ್ಲಿಗೆ ಭಗವತೀದೀಕ್ಷೆಯನ್ನು ತೆಗೆದುಕೊಂಡಿದ್ದ ಸ್ಥೂಲಭದ್ರರ ಏಳು ಜನ ಸಹೋದರಿಯರು ಬಂದರು. ಭದ್ರಬಾಹು ಸ್ವಾಮಿಗಳಿಗೆ ವಂದಿಸಿ, ಸ್ಥೂಲಭದ್ರರು ಎಲ್ಲಿ ಎಂದು ವಿಚಾರಿಸಿದರು. ಅವರು ನೆರೆಯ ಗುಹೆಯಲ್ಲಿ ಸೂಪ್ತ ಪಠಣ ಮಾಡುತ್ತಿದ್ದರೆಂದು ತಿಳಿಸಿದರು. ಆ ಸಹೋದರಿಯರು ಅಲ್ಲಿಗೆ ಹೋದರು. ಸ್ಥೂಲಭದ್ರರಿಗೆ ತಮ್ಮ ತಂಗಿಯರು ಅಲ್ಲಿಗೆ ಬರುತ್ತಿರುವುದು ತಿಳಿಯಿತು. ತಮ್ಮ ಜ್ಞಾನದ ಚಮತ್ಕಾರವನ್ನು ತೋರಿಸಲು ಅವರು ಸಿಂಹದ ರೂಪಧಾರಣೆ ಮಾಡಿಕೊಂಡರು. ಆ ಸಹೋದರಿಯರು ತಮ್ಮ ಅಣ್ಣ ಸ್ಥೂಲಭದ್ರರನ್ನು ಕಾಣುವ ಬದಲು ಭಯಂಕರವಾದ ಸಿಂಹವನ್ನು ಕಂಡರು. ಆ ಸಿಂಹ ಸ್ಥೂಲಭದ್ರರನ್ನು ನುಂಗಿರಬೇಕೆಂದು ತಿಳಿದರು. ಅವರು ಹೆದರಿ ಭದ್ರಬಾಹುಗಳ ಹತ್ತಿರ ಓಡಿಬಂದು ನಡೆದುದೆಲ್ಲವನ್ನೂ ತಿಳಿಸಿದರು. ಗುರುದೇವರು ಇದು ಸ್ಥೂಲಭದ್ರರ ಶಕ್ತಿಯಿಂದಾದುದೆಂದು ಅರಿತರು. ಈಗ ಹೋಗಿ ನೋಡಿ ಸ್ಥೂಲಭದ್ರರನ್ನು ಕಾಣಬಹುದೆಂದರು. ಅದರಂತೆ ಆ ಸಹೋದರಿಯರು ಹೋಗಿ ಸ್ಥೂಲಭದ್ರರನ್ನು ನೋಡಿ ಆನಂದಿಸಿದರು. ಅವರಿಗೆ ನಮಸ್ಕರಿಸಿದರು. ಅವರು ಅತ್ತ ಹೋದಮೇಲೆ ಸ್ಥೂಲಭದ್ರರು ಇತ್ತ ಭದ್ರಬಾಹುಗಳ ಹತ್ತಿರ ವಾಚನ ತೆಗೆದುಕೊಳ್ಳಲು ಬಂದರು. ಆದರೆ ಗುರುಗಳು ಅವರು ಕಲಿತ ವಿದ್ಯಾಬಲದಿಂದ ಅತಿಮಾನುಷ ಶಕ್ತಿಯನ್ನು ಪಡೆದು ಅದನ್ನು ದುರುಪಯೋಗಪಡಿಸಿಕೊಂಡರೆಂದು ತಿಳಿದು, ಉಳಿದ ನಾಲ್ಕು ಪೂರ್ವಗಳ ಜ್ಞಾನ ಅವರಿಗೆ ಬೋಧಿಸಲ್ಲ. ಸಂಘ ಸ್ಥೂಲಭದ್ರರಿಗೆ ಪೂರ್ಣ ಪಾಠ ಹೇಳಿಕೊಡುವಂತೆ ಭದ್ರಬಾಹುಗಳನ್ನು ಒತ್ತಾಯಿಸಿತು. ಅದರಂತೆ ಉಳಿದ ನಾಲ್ಕು ಪೂರ್ವಗಳ ಮೂಲಪಾಠವನ್ನು ಹೇಳಿದರೇ ಹೊರತು ಅರ್ಥವನ್ನು ಅವರಿಗೆ ಹೇಳಲಿಲ್ಲ.

ಇದೇ ಸಮಯದಲ್ಲಿ ಪಾಟಲೀಪುತ್ರದಲ್ಲಿ 12 ವರ್ಷಗಳ ಕಾಲ ಭೀಕರ ಬರಗಾಲ ಪ್ರಾಪ್ತವಾಯಿತು. ಶ್ರುತಕೇವಲಿ ಭದ್ರಬಾಹುಗಳು 12,000 ಶಿಷ್ಯ ಸಮುದಾಯ ಸಮೇತವಾಗಿ ದಕ್ಷಿಣದ ಕಟ್ವಪ್ಪು ನಾಡಿಗೆ (ಇಂದಿನ ಶ್ರವಣಬೆಳ್ಗೊಳ) ಆಗಮಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿ ಸಲ್ಲೇಖನ ವಿಧಿಯಿಂದ ವೀರಸಂವತ್ 162 ರಲ್ಲಿ ಸ್ವರ್ಗಸ್ಥರಾದರು. ಆಗ ಉತ್ತರದಲ್ಲಿ ಸ್ಥೂಲಭದ್ರರು ಆಚಾರ್ಯಪದವಿಪ್ರಾಪ್ತ ಮಾಡಿಕೊಂಡರು. ಅವರ ಅಧ್ಯಕ್ಷತೆಯಲ್ಲಿ ಪಾಟಲೀಪುತ್ರದಲ್ಲಿ ದೊಡ್ಡ ಜೈನ ಸಭೆ ಸೇರಿ ಅಳಿದುಳಿದ ಅಂಗಸೂತ್ರಗಳನ್ನೆಲ್ಲ ಸಂಗ್ರಹಿಸಿದರು. ಮೊದಲ ಬಾರಿಗೆ ಜೈನ ಸೂತ್ರಗಳನ್ನೆಲ್ಲ ಒಂದೆಡೆ ಕ್ರೋಡೀಕರಿಸಿದ ಶ್ರೇಯಸ್ಸು ಸ್ಥೂಲಭದ್ರರಿಗೆ ಸಲ್ಲುತ್ತದೆ. ಆದ್ದರಿಂದಲೇ ಅವರನ್ನು ಸ್ತುತಿಸುವ "ಮಂಗಲಂ ಭಗವಾನ್ ವೀರೋ ಮಂಗಲಂ ಗೌತಮೋ ಗಣೀ, ಮಂಗಲಂ ಸ್ಥೂಲಭದ್ರಾದ್ಯೋ ಜೈನಧರ್ಮೋಸ್ತು ಮಂಗಲಂ" ಎಂಬ ಮಂಗಲ ಪಾಠ ಹುಟ್ಟಿಕೊಂಡಿತು.

ಈ ಕಥೆ ಶ್ವೇತಾಂಬರ ವಾಙ್ಮಯದಲ್ಲಿ ಸಿಗುತ್ತದೆಂಬ ಕಾರಣದಿಂದಲೋ ಪ್ರಕೃತ ಕಥೆಗೆ ಅಪ್ರಸ್ತುತವೆಂದೋ ಅಥವಾ ಮುಖ್ಯವಾಗಿ ತಾನು ಆಧರಿಸಿದ ಮೂಲ ಪ್ರಾಕೃತ ಕಥೆಯಲ್ಲಿ ಬಂದಿಲ್ಲವೆಂದೋ—ಅಂತೂ ಕನ್ನಡ ವಡ್ಡಾರಾಧನಕಾರ ಭ. ಬಾ. ಕಥೆಯಲ್ಲಿ ಇದನ್ನು ಕೈಬಿಟ್ಟಿದ್ದಾನೆ. ಹಾಗಾದರೆ ಕನ್ನಡ ವಡ್ಡಾರಾಧನೆಗೆ ಮೂಲ ಆಕರ, ಯಾವುದು ಎಂಬ ಪ್ರಶ್ನೆ ಬರುತ್ತದೆ. ಸಂಸ್ಕೃತದಲ್ಲಿರುವ ಹರಿಷೇಣ (931) ವಿರಚಿತ ಬೃಹತ್ ಕಥಾಕೋಶ (ಬೃ.ಕ.) ವಡ್ಡಾರಾಧನೆಗೆ ಆಕರವಾಗಿರಬೇಕೆಂಬ ಸೂಚನೆಯೊಂದಿದೆ. ಆದರೆ ಈ ಸೂಚನೆಯನ್ನು ಒಪ್ಪುವುದಕ್ಕೆ ಆತಂಕಗಳು ಹಲವಾರಿವೆ.

ವಡ್ಡಾರಾಧನಕಾರ ಹರಿಷೇಣನ ಸಂಸ್ಕೃತ ಬೃಹತ್ ಕಥಾಕೋಶವನ್ನು ಅನುಸರಿಸಿಲ್ಲ ವೆಂಬುದಕ್ಕೆ ಭ. ಬಾ. ಕಥೆ ಉತ್ತಮ ಉದಾಹರಣೆಯಾಗಿದೆ. ಬೃಹತ್ ಕಥಾಕೋಶದಲ್ಲಿ

(i) ಚಂದ್ರಗುಪ್ತನೇ, ದೀಕ್ಷಾನಂತರ ವಿಶಾಖಾಚಾರ್ಯನಾಗುತ್ತಾನೆ.
(ii) ಭದ್ರಬಾಹುಮುನಿ ದಕ್ಷಿಣಾಪಥಕ್ಕೆ ಬರುವುದಿಲ್ಲ.
(iii) ಚಂದ್ರಗುಪ್ತನು (ವಿಶಾಖಾಚಾರ್ಯ) ದಕ್ಷಿಣಾಪಥದ 'ಪುನ್ನಾಟ' ವಿಷಯಕ್ಕೆ ಪ್ರಯಾಣ ಮಾಡಿದನು.
(iv) ಚಂದ್ರಗುಪ್ತನ ರಾಣಿ ಸುಪ್ರಭೆ.

—ಮುಂತಾದ ವಿಷಯಗಳಿವೆ. ಇವು ವಡ್ಡಾರಾಧನೆಯಲ್ಲಿ ವ್ಯತ್ಯಾಸ ಪಡೆದಿವೆ:

(i) ಚಂದ್ರಗುಪ್ತನೇ ಬೇರೆ, ವಿಶಾಖಾಚಾರ್ಯನೇ ಬೇರೆ.
(ii) ಭದ್ರಬಾಹುಮುನಿ ದಕ್ಷಿಣಾಪಥಕ್ಕೆ, ಕಟ್ವಪ್ಪಿಗೆ ಬಂದು ಇಲ್ಲಿಯೇ ಮುಡಿಪಿದನು.
(iii) ಚಂದ್ರಗುಪ್ತನು ದಕ್ಷಿಣಾಪಥಕ್ಕೆ ಬಂದ ವಿಷಯವಿದ್ದರೂ 'ಪುನ್ನಾಟ'ದ ಪ್ರಸ್ತಾಪವೇ ಇಲ್ಲ.
(iv) ಚಂದ್ರಗುಪ್ತನ ರಾಣಿಯ ಹೆಸರು ಹೇಳಿಲ್ಲ.

ಇವುಗಳಲ್ಲಿ ಮೊದಲಿನ ಮೂರು ಅಂಶಗಳು ಧಾರ್ಮಿಕ–ಚಾರಿತ್ರಿಕ ದೃಷ್ಟಿ ಗಳಿಂದ ಮಹತ್ತರವಾದುವು. ಇವನ್ನು ಒಬ್ಬ ಲೇಖಕ ತಾನು ನೋಡಿದ ಮೂಲ ಗ್ರಂಥದಲ್ಲಿರುವುದಕ್ಕಿಂತ ಬೇರೆ ರೀತಿಯಲ್ಲಿ ಹೇಳುವುದು ಬಹುವಾಗಿ ಅಸಂಭವ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೃಹತ್ ಕಥಾಕೋಶದಲ್ಲಿನ ಪುನ್ನಾಟದ ಬದಲು ವಡ್ಡಾರಾಧನೆಯಲ್ಲಿ ಕಟ್ಟುಪ್ಪ ಪ್ರಧಾನವಾಗಿದೆ. ಕ್ರಿ.ಶ. ಅಯ್ದನೆಯ ಶತಮಾನದವರೆಗೂ ಪುನ್ನಾಟ ಜೈನರ ಕೇಂದ್ರವಾಗಿತ್ತಲ್ಲದೆ ಕನ್ನಡ ನಾಡಿನ ಪ್ರಮುಖ ಪ್ರದೇಶವೂ ಆಗಿತ್ತು. ಈಗಿನ ಕಪಿನಿ ನದಿಯ ದಂಡೆಯಲ್ಲಿರುವ ಹೆಗ್ಗಡದೇವನಕೋಟೆಯ ಪ್ರದೇಶವೇ 'ಪುನ್ನಾಟ 6000' ಎಂಬುದು. ಇದಕ್ಕೆ ಕೀರ್ತಿಪುರ (ಈಗಿನ ಕಿತ್ತೂರು, ಹೆಗ್ಗಡದೇವನಕೋಟೆ ತಾ॥) ರಾಜಧಾನಿಯಾಗಿತ್ತು. ಈ ಪುನ್ನಾಟ ಪುಷ್ಯರಾಗ ದೊರೆಯುವ ಪ್ರದೇಶವೆಂದು ಪಾಶ್ಚಾತ್ಯ ಪ್ರವಾಸಿಯೂ, ಭೂಗೋಳ ಶಾಸ್ತ್ರಜ್ಞನೂ ಆದ ಟಾಲೆಮಿ (150) ಹೇಳಿದ್ದಾನೆ. ಈ ಪುನ್ನಾಟ ಕನ್ನಡ ಶಬ್ದವಿರಬಹುದು. ಪುನಲನಾಟ್ (= ನದಿಗಳ ನಾಡು) ಎಂಬುದು ಪುನ್ನಾಟ ಆಗಿರಬಹುದು. ಅಯ್ದನೆಯ ಶತಮಾನದ ಮೇಲೆ ಪುನ್ನಾಡು ಗಂಗ ರಾಜ್ಯದಲ್ಲಿ ಸಂಗಮವಾಯಿತು.

ಹೀಗೆ ಭದ್ರಬಾಹು ಭಟಾರರ ಕಥೆ ವಡ್ಡಾರಾಧನೆಯ ಸಂಕಲನದಲ್ಲಿ ವಿಶಿಷ್ಟವಾದ ಕಥೆಯಾಗಿರುವಂತೆ ಜೈನ ಧರ್ಮದ ಸಂಕ್ಷಿಪ್ತ ಇತಿಹಾಸ ಕೈಗನ್ನಡಿಯೂ ಆಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಿ. ವಿ. ನಾರಾಯಣ

ವಚನಗಳಲ್ಲಿ ಶೀಲವಂತರ ವಿಚಾರ

'ಶೀಲವಂತರು' ಎನ್ನುವ ಒಂದು ಪಂಗಡವು ಈಗಲೂ ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ವಾಸಿಸುವ ಜನಾಂಗವಾಗಿದೆ. ಇವರು ಲಿಂಗಾಯತರಲ್ಲಿ ಒಂದು ಉಪಪಂಗಡದವರು; ಆದರೆ ಇವರನ್ನು ಲಿಂಗಾಯತ ನಾಯಿಂದರೆಂದು 1901ರ ಮೈಸೂರಿನ ಜನಗಣತಿಯಲ್ಲಿ ಸೂಚಿಸಲಾಗಿದೆ.[1] ಆದರೆ ಈಗಲೂ ರೇಷ್ಮೆ ನೇಕಾರರಾಗಿರುವ ಇವರು ಪಟ್ಟುಸಾಲೆಗಳಿಂದ ಮೂಡಿ ಬಂದಿರ ಬಹುದೆಂಬ ಶ್ರೀ ಸಿ. ಹಯವದನರಾಯರ ಊಹೆ ಸರಿಯಾದುದೆನ್ನಿಸುತ್ತದೆ.[2] ಆದರೆ ಶೀಲವಂತರು ಈಚೆಗೆ ವೀರಶೈವಕ್ಕೆ ಪರಿವರ್ತಿತರಾದವರೆಂಬ ಇವರ ಅಭಿಪ್ರಾಯವು ಅಷ್ಟು ಸಮರ್ಪಕವಾದುದಲ್ಲ: ಏಕೆಂದರೆ ಬಸವಾದಿಗಳ ಕಾಲದಲ್ಲಾಗಲೇ ಶೀಲವಂತರು ತಮ್ಮ ಅತ್ಯಂತ ನಿಷ್ಠುರ ವ್ರತಾನುಷ್ಠಾನಗಳಿಗೆ ಪ್ರಸಿದ್ಧರಾಗಿದ್ದ ವಿಷಯವು ವಚನಗಳಲ್ಲಿ ಉಕ್ತವಾಗಿದೆ. ಆದ್ದರಿಂದ ಹನ್ನೆರಡನೆಯ ಶತಮಾನದ ಹೊತ್ತಿಗಾಗಲೇ ಇವರು ವೀರಶೈವಕ್ಕೆ ಮತಾಂತರಗೊಂಡಿದ್ದರೆನ್ನುವುದು ವಚನಗಳಿಂದ ವಿದಿತವಾಗುವ ವಿಷಯ. (ವೀರಶೈವವು ಬಸವಾದಿಗಳಿಗಿಂತ ಹಿಂದೆಯೂ, ಕೊನೆಯುಪಕ್ಷ ಜೇಡರ ದಾಸಿಮಯ್ಯನ ಕಾಲದಿಂದಲಾದರೂ ಪ್ರಚಲಿತವಾಗಿದ್ದಿತೆಂಬುದು ನಮ್ಮ ಅಭಿಪ್ರಾಯ); ಇವರು ವೀರಶೈವದ ವಲಯದಲ್ಲಿಯೇ ಇದ್ದರೂ ಇತರ ವೀರಶೈವರಿಗಿಂತ ಭಿನ್ನವೆನ್ನಿಸಿದ್ದುದಕ್ಕೆ ಕಾರಣ ಅವರು ಆಚರಿಸುತ್ತಿದ್ದ ಶೀಲಗಳು, ನೇಮಗಳು ಇತ್ಯಾದಿ.

ಶೀಲವಂತರ ಬಗ್ಗೆ ತಮ್ಮ ವಚನಗಳಲ್ಲಿ ಮಾತನಾಡುವ ಅನೇಕ ವಚನಕಾರರು ಇವರ ಬಗ್ಗೆ ತುಂಬ ಕಟುವಾಗಿಯೂ, ತಿರಸ್ಕಾರಪೂರ್ವಕವಾಗಿಯೂ ಟೀಕೆಮಾಡುತ್ತಾರೆ. ಇವರೆಲ್ಲರ ಮಾತುಗಳು ಶೀಲವಂತರ ಅತಿನಿಷ್ಠುರ ನಿಯಮಗಳ ಬಗ್ಗೆ ಮಾಡಿದ ವಿಡಂಬನೆಯಾಗಿದೆ. "ಸುಖವನಱಿಯದ ಹೆಣ್ಣು ಸೂಳೆಯಾದಳು: ಲಿಂಗವನಱಿಯದಾತ ಶೀಲವಂತನಾದ"[3] ಎಂದು ಅಲ್ಲಮನು ವಿಡಂಬಿಸುವ ಹಿಂದಿನ ಮನೋಭಾವವು ಶೀಲವಂತನು ತನ್ನ ವ್ರತಾಚರಣೆಗಳ ನೈಷ್ಠುರ್ಯದ ಗೊಂದಲದಲ್ಲಿ ಶಿವನನ್ನು ತಿಳಿಯುವ ಅಸಲಿಪ್ರಯತ್ನವನ್ನೇ ಮರೆತು ಕೊನೆಯವರೆಗೂ ಆ

---

[1] Edgar Thurston: Castes and Tribes in South India.

[2] Ibid., Vol. VI: p. 387.

[3] ಅಲ್ಲಮನ ವಚನಚಂದ್ರಿಕೆ, ವ. 358: ಪು. 80.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯದಲ್ಲಿ ಅಜ್ಞಾನಿಯಾಗಿ ಉಳಿಯುವ ಬಗ್ಗೆ ಹೊಂದಿದ ಕಾಳಜಿಯಾಗಿದೆ. "ಜಲನಿಧಿ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು ಮಜ್ಜನಕ್ಕೆಱೆವರೆಲ್ಲ ಶೀಲವಂತರೇ ? ಭವಿಪಾಕವನೊಲ್ಲೆವೆಂದು ಭುಂಜಿಸುವ ಉದರಪೋಷಕರೆಲ್ಲ ಶೀಲವಂತರೇ ?"[4] ಎಂಬ ಮಾತುಗಳ ಮೂಲಕ ಚನ್ನಬಸವಣ್ಣನು ಶೀಲವಂತರು ವ್ರತಗಳ ಬಾಹ್ಯ ಆಚರಣೆಗೆ ಕೊಡುವಷ್ಟು ಪ್ರಾಮುಖ್ಯವನ್ನು ಅವುಗಳ ಹಿನ್ನಲೆಗಿರಬೇಕಾದ ಭಾವನೆಗಳಿಗೆ ಕೊಡುವುದಿಲ್ಲವೆಂಬ ಬಗ್ಗೆ ಸಿಟ್ಟಾಗಿದ್ದಾನೆ. ಮತ್ತೊಂದೆಡೆ ಅವನೇ "ಶೀಲವಂತರೆಲ್ಲ ಅವರಂತಿರಲಿ ... ತಮ್ಮಲ್ಲಿರುವ ಅಷ್ಟಮದಂಗಳು, ಸಪ್ತವ್ಯಸನಂಗಳು, ಅರಿಷಡ್ವರ್ಗಂಗಳು, ಪಂಚಭೂತಂಗಳು, ಚತುಷ್ಕರಣಂಗಳು, ತ್ರಿಕರಣಂಗಳು, ತ್ರಿಗುಣಗಳು, ಶಿವಸಂಸ್ಕಾರದಿಂದ ಲಿಂಗಕರಣಂಗಳೆಂದೆನಿಸಿ, ನಿತ್ಯಲಿಂಗಾರ್ಚನೆಯ ಮಾಡ ಬಲ್ಲಾತನೇ ಶೀಲವಂತನಯ್ಯ"[5] ಎಂದು ನಿಜವಾದ ಶೀಲ ಅಥವಾ ನೇಮವೆಂದರೇನೆಂಬುದನ್ನು ವಿವರಿಸುತ್ತಾನೆ. ಅಂತೆಯೇ ಹಡಪದಪ್ಪಣ್ಣನೂ ಒಂದೆಡೆ "ಶೀಲವಂತರು ಶೀಲವಂತರು ಎಂದೇನೋ? ಶೀಲವಂತಿಕೆಯನಾರು ಬಲ್ಲರು ? ಶೀಲವಾದರೆ ಶಿವನೊಳು ಬೆರೆವುದೆ ಶೀಲ"[6] ಎಂದು ಅತ್ಯಂತ ಉಚ್ಚಶೀಲದ ಬಗ್ಗೆ ಹೇಳಿ ಬಾಹ್ಯಾಚರಣೆಗಳ ಡಾಂಭಿಕತೆಯ ಬಗ್ಗೆ ವಿಡಂಬಿಸುತ್ತಾನೆ. ಆದರೆ ಶೀಲವಂತರು ತಮ್ಮ ಈ ನಿಯಮನೈಷ್ಠ್ಯದಿಂದಾಗಿ ಒಂದು ಭಿನ್ನ ಪಂಗಡದಂತೆಯೇ ಆಗಿ ಆ ಸಮತಾವಾದದ ಕಾಲದಲ್ಲೂ ತಮ್ಮ ಶ್ರೇಷ್ಠತೆಯ ಬಗ್ಗೆ ತುಂಬ ಅಭಿಮಾನಪೂರಿತವಾಗಿ ನಡೆದುಕೊಳ್ಳುತ್ತಿದ್ದರೆಂದು ಕಾಣುತ್ತದೆ. ವಚನಕಾರ್ತಿಯೊಬ್ಬಳು "ಶೀಲವಂತನಾದಡೆ ಜಾತಿಯ ಬಿಡಬೇಕು"[7] ಎಂದು ಹೇಳುತ್ತಾಳೆ. ಇಲ್ಲಿ 'ಜಾತಿಯ ಬಿಡಬೇಕು', ಎಂದರೆ ತಾವೇ ಬೇರೆ ಜಾತಿಯವರಂತೆ ನಡೆದುಕೊಳ್ಳುವ ಹೆಮ್ಮೆಯನ್ನು ಬಿಡಬೇಕೆಂಬ ಅರ್ಥವುಂಟಾಗುವಂತಿದೆಯಾದರೂ, ಶೀಲವಂತರೆಂಬ ಒಂದು ವಿಶಿಷ್ಟ ಜಾತಿಯು ಮೊದಲೇ ಇದ್ದು, ಅನಂತರ ವೀರಶೈವಕ್ಕೆ ಮತಾಂತರಗೊಂಡರೂ ತಾವು ಶ್ರೇಷ್ಠರು ಎಂದು ಭಾವಿಸಿ ಇತರ ವೀರಶೈವರ ಪಂಗಡಗಳೊಡನೆ ಬೆರೆಯದೆ ಇದ್ದ ಸ್ಥಿತಿಯನ್ನೂ ಸೂಚಿಸುವ ಸಾಧ್ಯತೆಯಿದೆ. ಹಲವಾರು ಜನರು ವೀರಶೈವಕ್ಕೆ ಮತಾಂತರಗೊಂಡರೂ ತಮ್ಮ ಪೂರ್ವಜಾತಿಯ ಆಚರಣೆಗಳನ್ನೂ ವೈಶಿಷ್ಟ್ಯಗಳನ್ನೂ ಉಳಿಸಿಕೊಂಡುಬರುವ ಬಗ್ಗೆ ವಚನಕಾರರು ಮಾಡುವ ಟೀಕೆಗಳನ್ನು ಗಮನಿಸಿದರೆ ಈ ಮೇಲಿನ ಊಹೆ ಸರಿಯೆನಿಸುತ್ತದೆ. ಹೀಗೆ ಶೀಲವಂತರು ಇತರರೊಡನೆ ನಡೆದುಕೊಳ್ಳುವ ಸಂದರ್ಭ

---

4 ಚನ್ನಬಸವಣ್ಣನವರ ವಚನಗಳು, ವ. 792: ಪು. 377.

5 ಅದೇ ವ. 593: ಪು. 283.
(ಇದೇ ಗ್ರಂಥದ 223ನೇ ಪುಟದಲ್ಲಿನ 496ನೇ ವಚನವನ್ನೂ ನೋಡಿ.)

6 ಹಡಪದಪ್ಪಣ್ಣನ ವಚನಗಳು, ವ. 6: ಪು. 25.

7 ಶಿವಶರಣೆಯರ ವಚನಗಳು, ಪು. 455 (ಅಕ್ಕಮ್ಮ ವ 511).

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ತುಂಬ ಜಾಗರೂಕರಾಗಿದ್ದು, ಇತರರ ಬಗ್ಗೆ ಸಂಶಯದಿಂದ ನೋಡುತ್ತಿದ್ದರೆಂದು ಕಾಣುತ್ತದೆ. ಈ ಮನಃಪ್ರವೃತ್ತಿಯನ್ನೇ ಚನ್ನಬಸವಣ್ಣನು "ಶೀಲವಂತನ ಭಕ್ತಿ ಶಂಕೆಯಲ್ಲಿ ಹೋಯಿತ್ತು"[8] ಎಂದು ಒಂದೆಡೆ ಹಾಸ್ಯಮಾಡಿರುವುದು.

ಶೀಲವಂತರು ವಿಶಿಷ್ಟಪಂಗಡದವರೆನ್ನಿಸಿದ್ದು ಅವರ ವ್ರತಾಚರಣೆಗಳ ಮೂಲಕ ಎಂಬುದನ್ನಾಗಲೇ ಗಮನಿಸಿದ್ದೇವೆ. ಅಕ್ಕಮ್ಮನೆಂಬ ಒಬ್ಬ ವಚನಕಾರ್ತಿಯು ಅನೇಕ ವಚನಗಳಲ್ಲಿ ಶೀಲವಂತರ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಪ್ರಸ್ತಾಪವಿದೆ; ಮತ್ತು ಬಹು ಹೆಚ್ಚಿನ ವಚನಗಳಲ್ಲಿ ಶೀಲ, ವ್ರತ ಇವುಗಳ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ಹೀಗಾಗಿ ಅವಳು ಶೀಲವಂತಪಂಗಡಕ್ಕೇ ಸೇರಿದವಳಾಗಿದ್ದಿರ ಬೇಕು ಎಂದು ನಮಗನ್ನಿಸುತ್ತದೆ : ಶೀಲವಂತ ಮತ್ತು ಶೀಲಗಳ ಬಗ್ಗೆ ಆಕೆಯು ಮಾಡುವ ಪ್ರಸ್ತಾಪಗಳಲ್ಲದೆ, ಅವುಗಳ ಬಗ್ಗೆ ಅವಳು ಮಾತನಾಡುವ ಅಧಿಕೃತ ಧಾಟಿಯು ಈ ಊಹೆಗೆ ಆಧಾರ. ನಾವು ಶೀಲವಂತರ ವಿಷಯಗಳನ್ನು ವಚನಗಳಿಂದ ಸಂಗ್ರಹಿಸುವಾಗ ಬಹುಪಾಲು ಈಕೆಯ ವಚನಗಳನ್ನೇ ಅವಲಂಬಿಸಬೇಕಾಗುವುದು ಅನಿವಾರ್ಯ.

ಇನ್ನು ಶೀಲವಂತರು ಪಡೆದಿರುತ್ತಿದ್ದ ಅನೇಕ ಶೀಲಗಳ ಬಗ್ಗೆ ಪರಿಶೀಲಿಸ ಬಹುದು. 'ಚಿಲುಮೆಯ ನೇಮ' ಎಂಬುದು ಅಂತಹ ಒಂದು ವ್ರತ. "ನದಿಕೂಪ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು ಮಜ್ಜನಕ್ಕೆರೆವರೆಲ್ಲ ಶೀಲವಂತರೇ?[9] "ನದಿಕೂಪತಟಾಕಜಲಾಶಯದಲ್ಲಿ ಅಗ್ಗಣಿಯ ತಂದು ಮಜ್ಜನಕ್ಕೆ ನೀಡುವರೆಲ್ಲ ಶೀಲವಂತರೇ"[10] ಎಂಬ ಚನ್ನಬಸವಣ್ಣನ ಮಾತುಗಳಲ್ಲಿಯೂ ; "ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಮಜ್ಜನಕ್ಕೆರೆವ ಹಗಲುಗಳ್ಳರಿಗೆ ಮೆಚ್ಚುವನೆ ಚನ್ನಮಲ್ಲಿ ಕಾರ್ಜುನಾ"[11] ಎಂಬ ಮಹಾದೇವಿಯಕ್ಕನ ಮಾತಿನಲ್ಲಿಯೂ ಶೀಲವಂತರು ಪ್ರಾಯಶಃ ಲಿಂಗಮಜ್ಜನಕ್ಕೆರೆಯಲು ತರುತ್ತಿದ್ದ ಮಡಿನೀರಿನ ಆವುಟವನ್ನು ಕುರಿತು ಮಾಡಿದ ವಿಡಂಬನೆಯು ಮೊನಚಾಗಿದೆ. ಈ ನೀರನ್ನು ತರುತ್ತಿದ್ದ ರೀತಿಯು ಎಂತಹ ಬಗೆಯ ದೆಂಬುದನ್ನು ಸ್ಪಷ್ಟಪಡಿಸಿಕೊಂಡರೆ ಮೇಲಿನ ಮಾತುಗಳ ವಿಡಂಬನೆಯು ಅರ್ಥ ವಾಗುತ್ತದೆ. "ನಿತ್ಯಚಲುಮೆಯ ಕೃತ್ಯವೆಂದು ಮಾಡುವಲ್ಲಿ, ಮಳಲಿನ ಮರೆಯ ನೀರ ಬಳಸದೆ, ಸಲೆ ಪೃಥ್ವಿಯಲ್ಲಿ ನೆಲೆ ಚಲಮೆಯಂ ಕಂಡು ದಿನಕೃತ್ಯ ತಪ್ಪದೆ ನೇಮ ಸಲುವಂತೆ..."[12] ಮಾಡಬೇಕೆಂದು ಅಕ್ಕಮ್ಮ ಹೇಳುತ್ತಾಳೆ. ಇಲ್ಲಿ "ನಿತ್ಯ ಚಲುಮೆಯ

---

[8] ಚನ್ನಬಸವಣ್ಣನವರ ವಚನಗಳು, ವ. 73: ಪು. 33.

[9] ಅದೇ. ವ. 1116: ಪು. 522.

[10] ಅದೇ, ವ. 518: ಪು. 238.

[11] ಅಕ್ಕನ ವಚನಗಳು, ವ. 110: ಪು. 47.

[12] ಶಿವಶರಣೆಯರ ವಚನಗಳು, ಪು. 495-6 (ಅಕ್ಕಮ್ಮ, ವ. 80).

Sri Vidyabharathi Book Centre, Sringeri

CC-O. In Public Domain. Digitized by eGangotri

ನೇಮ " ಎಂದರೆ ಪ್ರತಿದಿನವೂ ಲಿಂಗಮಜ್ಜನಕ್ಕಾಗಿ ಸಹಜವಾದ ಊಟೆಯ ನೀರನ್ನೇ ಬಳಸುವುದನ್ನು ಒಳಗೊಳ್ಳುವ ವಿಷಯವು ಸ್ಪಷ್ಟವಾಗಿದೆ. ಈ ವ್ರತವನ್ನು ಪಡೆದ ಕೆಲವರು ನೀರಿನಾಸರೆಯಿರುವ ಎಂದರೆ ಸರೋವರ, ನದಿ ಮುಂತಾದೆಡೆಗಳಲ್ಲಿನ ಮರಳನ್ನು ತೆಗೆದು ಬರುವ ನೀರನ್ನೇ ಚಿಲುಮೆಯ ನೀರೆಂದು ಬಳಸುತ್ತಿದ್ದರು. ಈ ವಿಷಯವು ಅಕ್ಕಮ್ಮನಲ್ಲಿ ಸ್ಪಷ್ಟವಾಗಿದೆ. ಇದನ್ನೇ ಚನ್ನಬಸವಣ್ಣ ಮತ್ತು ಮಹಾದೇವಿಯರು ನೀರಿಗಾಗಿ "ಕನ್ನವಿಡುವುದು" ಎಂಬ ಮಾತಿನಿಂದ ಸೂಚಿಸಿದ್ದಾರೆ. "ಆಚೆಯ ನೀರ ಈಚೆಯಲ್ಲಿ ತೆಗೆವುದು ಚಿಲುಮೆಯಲ್ಲಿ"[13] ಎಂದು ತಾನಾಗಿ ಪುಟಿಯುವ ನೀರನ್ನು ಬಳಸುವುದರಿಂದ ಮಾತ್ರವೇ ಚಿಲುಮೆಯ ನೇಮವು ಪೂರ್ಣವಾಗುವುದೇ ಹೊರತು ನೆಲವನ್ನಗೆದು ತೆಗೆದ ನೀರಿನಿಂದ ಲಿಂಗಮಜ್ಜನಕ್ಕೆರೆಯುವುದರಿಂದಲ್ಲ ಎಂಬುದಾಗಿ ಅಕ್ಕಮ್ಮನೇ ಸ್ಪಷ್ಟಪಡಿಸುತ್ತಾಳೆ. ಹೀಗೆ ತರಬೇಕಾದ ನೀರಿನ ಊಟೆಯು ಕೂಡ ಶಿವಭಕ್ತರಿಗೆ ಸೇರಿದ ಪ್ರದೇಶದಲ್ಲಿ ಇರಬೇಕೆಂಬುದೂ ಈ ವ್ರತಹಿಡಿದವರ ಆದರ್ಶವಾಗಿತ್ತು.[14]

ಶೀಲವಂತರು ಶಿವಭಕ್ತರು ಮುಟ್ಟಿದ ವಸ್ತುಗಳನ್ನು ಮಾತ್ರವೇ ಸ್ವೀಕರಿಸುತ್ತಿದ್ದರು. ಆಹಾರವನ್ನು ತಯಾರಿಸುವಾಗಲಂತೂ ಕೆಲವರು ತಾವೇ ತೆಗೆದುಕೊಂಡು ಬಂದ ನೀರನ್ನು ಮಾತ್ರ ಬಳಸುತ್ತಿದ್ದುದು, ಲಿಂಗಮುದ್ರೆಯಿರುವ ಪ್ರದೇಶದಲ್ಲಿರುವ ಕಲ್ಲು ಮತ್ತು ಮರಗಳನ್ನೇ ಅಡಿಗೆ ಮಾಡಲು ಬಳಸುತ್ತಿದ್ದುದು ; ಆಹಾರಧಾನ್ಯಗಳನ್ನು ಕುಟ್ಟುವಾಗ ಉಂಟಾಗುವ ಶಬ್ದವನ್ನು ಭವಿಗಳು ಕೇಳಬಾರದೆಂಬುದು ಇವರ ನಂಬಿಕೆಯಾಗಿತ್ತು; ಹೀಗೆ ಇವರು ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು: ಹಾಗೆ ತಯಾರಿಸಿದುದನ್ನು ಮೊದಲು ಜಂಗಮಕ್ಕೆ ಅರ್ಪಿಸಿ ಅನಂತರ ತಾವು ಭುಂಜಿಸಬೇಕೆಂಬ ನಿಯಮವನ್ನನುಸರಿಸುತ್ತಿದ್ದರು.[15] ಆದರೆ ಈ

---

13 ಅದೇ, ಪು. 466 (ಅಕ್ಕಮ್ಮ ವ. 15).

14 ಅದೇ, ಪು. 496 (ಅಕ್ಕಮ್ಮ ವ. 81).

15. "ಶಿವಭಕ್ತರು ಮುಟ್ಟಿತಂದ ದ್ರವ್ಯವನಲ್ಲದೆ ಒಪ್ಪಲಿಲ್ಲ.
ಭೋಜನಕ್ಕೆ ತವ್ಯಾಯತದ ಜಲ ಲಿಂಗಮುದ್ರೆಯ ಸೀಮೆಯ ಮೃತ್ತಿಕೆ ಮರ ಕಲ್ಲು..
ಮುಂತಾದ ಮತ್ತಾವಾವ ಗುಣಂಗಳೆಲ್ಲವು ಲಿಂಗಧಾರಣ ಸೀಮೆಯಾಗಿ
ಮತ್ತೆ ಆವಾವ ಗುಣಂಗಳಿಂದ ಮನವೆಟ್ಟುವನ್ನಬರ ಚಿತ್ತಸುಯಿಧಾನಿಯಾಗಿ
ತನ್ನಾಯತದ ಕೈಯಧಾನ (ನ್ಯ ?) ವ ಕುಟ್ಟುವಲ್ಲಿ
ಒರಳು ಒನಕೆಯ ಶಬ್ದವಂ ಭವಿಗಳು ಕೇಳದಂತೆ
ಸ್ವಯಂಪಾಕವ ಮಾಡುವಲ್ಲಿ ಅಗ್ನಿಯಲ್ಲಿ ಕಾಷ್ಠವಲ್ಲಿ ಭೂಮಿಯಲ್ಲಿ ಸುಜಲದಲ್ಲಿ
ಇಂಬಿಡುವಲ್ಲಿ ತೆಗೆವಲ್ಲಿ ಲಿಂಗಸುಯಿಧಾನಿಯಾಗಿ
ಮಜ್ಜನದಂತಾವಳಿಗಳಲ್ಲಿ ಶುಚಿರ್ಭೂತನಾಗಿ
ಜಂಗಮಲಿಂಗದ ಮುಂದಿಟ್ಟು ಅವರು ಸ್ವೀಕರಿಸುವನ್ನಕ್ಕ ನೇತ್ರ ತುಂಬಿನೋಡಿ.
ಅವರ ಕಾರುಣ್ಯವ ಪಡೆದು ಇಪ್ಪುದು ಸದ್ಭಕ್ತನ ವ್ರತ."
ಶಿವಶರಣೆಯರ ವಚನಗಳು. ಪು. 496 (ಅಕ್ಕಮ್ಮ ವ 81).

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ರತವನ್ನು ಹಿಡಿದವರೆಲ್ಲರೂ ಈ ಕ್ರಮವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರೆಂದು ಹೇಳಲಾಗುವುದಿಲ್ಲ. ಇಂತಹವರನ್ನು ಕುರಿತೇ ಚೆನ್ನಬಸವಣ್ಣನು "ಪಾಕದಲ್ಲಿ ಭವಿಪಾಕ ಪರಪಾಕವೆಂದು ವಿವರಿಸಿ ಕಳೆದು ಭುಂಜಿಸುವ ಉದರ ಪೋಷಕರೆಲ್ಲ ಶೀಲವಂತರಪ್ಪರೇ?"[16] ಎಂದು ವಿಡಂಬಿಸಿರುವುದು. ಶೀಲವಂತರು ತಮ್ಮ ತಟ್ಟೆ ಬಟ್ಟಲು ಮುಂತಾದುವನ್ನು ಇತರರು ಮುಟ್ಟಿದರೆ ಅವುಗಳನ್ನು ತೊಳೆದುಕೊಂಡು ತೆಗೆದುಕೊಳ್ಳುತ್ತಿದ್ದರೆಂದು ಕಾಣುತ್ತದೆ.[17] ಸೊಪ್ಪು ಹಣ್ಣುಗಳನ್ನು ಕೂಡ ಹಲವು ಬಾರಿ ತೊಳೆದು ತೆಗೆದುಕೊಳ್ಳಬೇಕು. ಬಾವಿಯ ನೀರನ್ನುಪಯೋಗಿಸುವಾಗ ಮೂರು ಮಡಿಕೆಯ ಬಟ್ಟೆಯಲ್ಲಿ (ತ್ರಿಪಾವಡೆ) ಶೋಧಿಸಬೇಕು ಎಂಬುದು ಇವರ ನಿಯಮವಾಗಿತ್ತು.[18]

ಶೀಲವಂತರು ಧೂಳಪಾವಡ, ಕಂಠಪಾವಡ ಸರ್ವಾಂಗಪಾವಡವೆಂಬ "ತ್ರಿವಿಧಶೀಲ" ವನ್ನು ಪಡೆದಿರುತ್ತಿದ್ದರು. "ಧೂಳುಪಾವಡವಾದಲ್ಲಿ ಆವನೀರನು ಹಾಯಬಹುದು. ಕಂಠಪಾವಡವಾದಲ್ಲಿ ಉರದಿಂದ ಮೀಱಿ ಹಾಯಲಾಗದು. ಸರ್ವಾಂಗಪಾವಡದಲ್ಲಿ ಹೊಳೆ ತಟಾಕ ಮಿಕ್ಕಾದ ಬಹುಜಲಂಗಳ ಮೆಟ್ಟಲಾಗದು. ಅದೆಂತೆಂದಡೆ: ಆ ಲಿಂಗವೆಲ್ಲವು ವ್ರತಾಚಾರಲಿಂಗವಾದ ಕಾರಣ ತಮ್ಮ ಲಿಂಗದ ಮಜ್ಜನದ ಅಗ್ಗಣಿಯಲ್ಲದೆ ತಮ್ಮಂಗವ ಮುಟ್ಟಲಾಗದು. ಇಂತೀ ಇವು ತಾ ಕೊಂಡ ವ್ರತದಂಗದ ಭೇದವಲ್ಲದೆ ನಾನೊಂದು ನುಡಿದುದಿಲ್ಲ?[19] ಎಂದು ಅಕ್ಕಮ್ಮನು ಈ ಶೀಲವನ್ನು ವಿವರಿಸುತ್ತಾಳೆ. ಆದರೆ ಈ ವ್ರತದ ಸ್ವರೂಪವಾವುದೆಂಬುದು ಇಲ್ಲಿ ಸ್ಪಷ್ಟವಾಗುವುದಿಲ್ಲ.

"ತನುಶೀಲವಂತರುಂಟು, ಧನಶೀಲವಂತರುಂಟು, ಧರೆಶೀಲವಂತರುಂಟು, ಕನಕವನಿತೆ ಶೀಲವಂತರುಂಟು. ಕೆಯಿ ತೋಟ ಹಿಂದೆಸೆ ಮುಂದೆಸ ನಿಳಯ ಶೀಲವಂತರುಂಟು. ಫಲ ಕುಸುಮ ವಿದಳ ಬಹುಧಾನ್ಯ ಮುಂತಾದ ರಸದ್ರವ ಪಶು ಪಾಷಾಣ ವಸ್ತ್ರ ಪರಿಮಳ ಛತ್ರಚಾಮರ ಅಗದಳ ಕರಿತುರಂಗಗಳು ಮುಂತಾದವೆಲ್ಲಕ್ಕೂ ಶೀಲವಂತರುಂಟು"[20] ಎನ್ನುವ ಅಕ್ಕಮ್ಮನ ಮಾತಿನಲ್ಲಿ ಈ ಮೇಲಿನ ಒಂದೊಂದು ವಸ್ತುವಿಗೂ ಸಂಬಂಧಪಟ್ಟಿರುವ ಶೀಲವನ್ನು ಜನರು ಹೊಂದಿರುತ್ತಿದ್ದ ವಿಷಯವು ಸೂಚಿತವಾಗಿದೆ. ಕೆಲವರು "ಸಪ್ಪೆಯ ವ್ರತ" ವನ್ನು ಪಡೆದಿರುತ್ತಿದ್ದರು. ಎಂದರೆ ಉಪ್ಪುಕಾರಗಳನ್ನು ಆಹಾರದಲ್ಲಿ ಸೇರಿಸದ ವ್ರತ ಅದು. ಅದಕ್ಕೆ ಸಂಬಂಧಿಸಿದ ಈ ಕೆಳಗಿನ ವಚನ ಭಾಗವನ್ನು ನೋಡಿ.

---

16 ಚೆನ್ನಬಸವಣ್ಣನವರ ವಚನಗಳು. ವ. 1116: ಪು. 522.

17 ಅದೇ. ವ. 518: ಪು. 238.

18 ಶಿವಶರಣೆಯರ ವಚನಗಳು. ಪು. 476 (ಅಕ್ಕಮ್ಮ ವ 37).

19 ಅದೇ, ಪು. 493 (ಅಕ್ಕಮ್ಮ ವ, 74).

20 ಅದೇ. ಪು. 485 (ಅಕ್ಕಮ್ಮ ವ. 56).

Sri Vidyabharathi Book Centre, Sringeri

CC-O. In Public Domain. Digitized by eGangotri

"ಲವಣ ನಿರಶನದ ಆಯುತದ ಭೇಧವೆಂತೆಂದಡೆ :
ಕಾರ ಲವಣ ನಿಷೇಧವೆಂದು ಬಿಟ್ಟು, ಮತ್ತೆ ಬಿಳಿಯ ಲವಣ ಬಳಸುವುದು ;
ಬಿಳಿಯ ಲವಣ ನಿಷೇಧವೆಂದು ಬಿಟ್ಟು. ಮತ್ತೆ ಸೈಂಧಲವಣ ಬಳಸುವುದು ;
ಸೈಂಧಲವಣ ನಿಷೇಧವೆಂದು ಬಿಟ್ಟು, ಮತ್ತೆ ಮೃತ್ತಿಕೆಲವಣ ಬಳಸುವುದು ;
ಮೃತ್ತಿಕೆ ಲವಣದಲ್ಲಿ ತಟ್ಟುಮುಟ್ಟು ಕಂಡ ಮತ್ತೆ
ಉಪ್ಪೆಂಬ ನಾಮ ಬಿಟ್ಟಿಹುದೇ ಲೇಸು "[21]

ಇಲ್ಲಿ, ಉಪ್ಪಿಲ್ಲದ ಆಹಾರವನ್ನು ಸೇವಿಸುವ ವ್ರತವನ್ನು ತೊಟ್ಟು ಒಂದು ಬಗೆಯ ಲವಣವನ್ನು ಮತ್ತೊಂದು ಬಗೆಯ ಲವಣವನ್ನು ಬಳಸುವುದನ್ನು ವಿಡಂಬಿಸಲಾಗಿದೆ. ಅಥವಾ ಸಪ್ಪೆಯ ಆಹಾರವನ್ನು ಸೇವಿಸುವಲ್ಲಿ ಕ್ರಮವಾಗಿ ಈ ಬಗೆಯ ಲವಣಗಳನ್ನು ಬಳಸುತ್ತ ಕೊನೆಯಲ್ಲಿ ಸಂಪೂರ್ಣವಾಗಿ ಉಪ್ಪನ್ನು ನಿಷೇಧಿಸುವ ಬಗೆಯನ್ನು ಸೂಚಿಸಲಾಗಿದೆಯೋ ಪೂರ್ತಿ ಸ್ಪಷ್ಟವಾಗುವುದಿಲ್ಲ : ಪ್ರಾಯಶಃ ಎರಡನೆಯದೇ ಸರಿಯೆಂದು ತೋರುತ್ತದೆ. ಅಕ್ಕಮ್ಮನು ಮತ್ತೊಂದೆಡೆಯಲ್ಲಿ, "ಅಕ್ಕಿ ಬೇಳೆ ಉಪ್ಪು ಮೆಣಸು ಅಡಕೆ ಫಲ ರಸದ್ರವ್ಯ ಮುಂತಾದ ದ್ರವ್ಯಕ್ಕೆ ವ್ರತವೊ, ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೊ? ಇವು ಬಾಹ್ಯದಲ್ಲಿ ಮಾಡುವ ಸೌಕರಿಯ ವಲ್ಲದೆ ವ್ರತಕ್ಕೆ ಸಲ್ಲ "[22] ಎಂದು ಹೇಳುವುದನ್ನು ನೋಡಿದರೆ ಈ ಮೇಲೆ ಉಕ್ತವಾದ ವಸ್ತುಗಳನ್ನು ಸೇವಿಸುವುದಿಲ್ಲವೆಂಬ ವ್ರತವನ್ನು ಕೆಲವರು ಪಡೆದಿದ್ದುದು ತಿಳಿಯುತ್ತದೆ. ಹಾಗೆಯೇ ಬೆಳ್ಳಿ (ಬೆಳ್ಳುಳ್ಳಿ), ಭಂಗಿ, ನುಗ್ಗಿ (ನುಗ್ಗೆಯ ಕಾಯಿ) ಮತ್ತು ಉಳ್ಳಿ ಗಳನ್ನು ಸೇವಿಸಬಾರದೆಂಬ ನಿಯಮವನ್ನು ಕೆಲವರು ಪಡೆದಿದ್ದರು: ಇದಕ್ಕೆ ಕಾರಣ ವೆಂದರೆ "ಬೆಳ್ಳಿಯಲ್ಲಿ ದೋಷ, ಭಂಗಿ ನುಗ್ಗಿಯಲ್ಲಿ ಲಹರಿ, ಉಳ್ಳಿಯಲ್ಲಿ ದುರ್ಗುಣ " ಎಂದು ಅಕ್ಕಮ್ಮ ವಿವರಿಸುತ್ತಾಳೆ.[23] ಮತ್ತೊಂದೆಡೆ ಉಳ್ಳಿ, ಹೇರಂಡ, ಮಹಿಷಿ (ಎಮ್ಮೆಯ ಹಾಲು ?) ಇವುಗಳನ್ನು ಬಳಕೆಯಿಂದ ನಿಷೇಧಿಸುವ ವ್ರತವನ್ನು ತೊಡುತ್ತಿದ್ದ ಉಲ್ಲೇಖವಿದೆ.[24]

ಬೆಕ್ಕು ಕೋಳಿ ಕೋತಿ ನಾಯಿ ಹಂದಿ ಪಕ್ಷಿಗಳು ಮುಂತಾದ ಅನ್ಯಜೀವಿ ಗಳನ್ನು ಸಾಕಬಾರದು, ಹಾಗೆ ಸಾಕುವವರೊಂದಿಗೆ ಸಂಬಂಧವನ್ನೂ ಬೆಳೆಸ ಬಾರದು ಎಂದು ಅಕ್ಕಮ್ಮನು ಒಂದೆಡೆ ವಿಧಿಸುತ್ತಾಳೆ.[25] "ಎಲ್ಲವ ಮೀಱಿ ಶೀಲ

---

[21] ಅದೇ, ಪು. 500 ಮತ್ತು 520 (ಅಕ್ಕಮ್ಮ ವ. 88 ಮತ್ತು 135).

[22] ಅದೇ, ಪು. 549 (ಅಕ್ಕಮ್ಮ ವ. 1).

[23] ಅದೇ, ಪು. 502 (ಅಕ್ಕಮ್ಮ ವ. 93).

[24] ಅದೇ, ಪು. 467 (ಅಕ್ಕಮ್ಮ ವ. 19).

[25] ಅದೇ, ಪು. 508 (ಅಕ್ಕಮ್ಮ ವ. 106).

Sri Vidyabharathi Book Centre, Sringeri

CC-O. In Public Domain. Digitized by eGangotri

ವಂತನಾದಲ್ಲಿ ರೋಗವೆಲ್ಲಿಂದ ಬಂದಿತು ? " ಎಂದು ಪ್ರಶ್ನಿಸುವ ಈಕೆಯು, ರೋಗವು ಬಂದಾಗ ದೇಹದ ನೋವನ್ನು ತಡೆಯಲಾರದೆ ಔಷಧಿಯನ್ನು ತಂದು ಲಿಂಗಕ್ಕೆ ತೋರಿಸಿ ಜಂಗಮಕ್ಕೆ ಅರ್ಪಿಸಿ ತೆಗೆದುಕೊಳ್ಳುವುದನ್ನು ಖಂಡಿಸುತ್ತಾಳೆ.[26] ಇದರಿಂದ ಔಷಧಿಯನ್ನು ಲಿಂಗ ಜಂಗಮರಿಗೆ ನಿವೇದಿಸಿ ಸ್ವೀಕರಿಸುತ್ತಿದ್ದ ಸ್ವಾರಸ್ಯಕರ ಅಂಶವು ತಿಳಿಯುತ್ತದೆ. ಅಂತೆಯೇ ಕೆರೆಬಾವಿಗಳನ್ನು ತೋಡಿಸುವುದು, ಹೂವಿನ ತೋಟವನ್ನು ಮಾಡಿಸುವುದು, ವಿವಾಹಗಳನ್ನೇರ್ಪಡಿಸುವುದು ಇತ್ಯಾದಿ ಧಾರ್ಮಿಕಕಾರ್ಯಗಳನ್ನು ಮಾಡುವ ವ್ರತವನ್ನು ತೊಡುವುದು " ಸರಿಹುದುಗಿನ ಸೂಳೆ ಸೀರೆಯನ್ನುಟ್ಟಂತೆ "[27] ಎಂದು ಅಕ್ಕಮ್ಮನು ಆಡಂಬರದ ಧರ್ಮಕಾರ್ಯಗಳನ್ನು ಮಾಡುವುದರ ಹಿಂದಿನ ಪ್ರದರ್ಶನಾ ಮನೋಭಾವವನ್ನು ಖಂಡಿಸುತ್ತಾಳೆ.

ಶೀಲವಂತನು ವಿಶೇಷವಾದ ವ್ರತವನ್ನು ತಳೆಯಬೇಕಾದಲ್ಲಿ ಅದನ್ನು ವಿಧಿ ಪೂರ್ವಕವಾಗಿ ಪಡೆದುಕೊಳ್ಳಬೇಕಾಗಿತ್ತು. ಅಕ್ಕಮ್ಮನ ಒಂದು ವಚನವು ವ್ರತವನ್ನು ಹಿಡಿಯಬೇಕಾದ ರೀತಿ ಮತ್ತು ಗುರುವು ಅದನ್ನು ಉಪದೇಶಿಸಬೇಕಾದ ಬಗೆ ಇವುಗಳನ್ನು ಕುರಿತು ವಿವರಗಳನ್ನು ನೀಡುತ್ತದೆ. ಇದು ತುಂಬ ಮುಖ್ಯವಾದ ವಚನವಾದ್ದರಿಂದ ಪೂರ್ಣವಾಗಿ ಅದನ್ನಿಲ್ಲಿ ಉದ್ಧರಿಸಲಾಗಿದೆ:

"ವ್ರತವ ಹಿಡಿವಲ್ಲಿ, ವ್ರತವ ಉಪದೇಶವ ಮಾಡುವಲ್ಲಿ,
ಹಿಡಿವಾತನ ಯುಕ್ತಿ ಎಂತೆಂದಡ
ಮನವಚನ ಕಾಯ ತ್ರಿಕರಣ ಶುದ್ಧಾತ್ಮನಾಗಿ,
ಸತಿಸುತ ಬಂಧುವರ್ಗಂಗಳೆಲ್ಲವು ಏಕತ್ರವಾಗಿ
ನಡೆವುದು ನಡೆಯದಿಹುದೆಂಬುದ ಸ್ಥಿರಕರಿಸಿ,
ಶ್ರುತ ದೃಷ್ಟ ಅನುಮಾನ ಮಾಜನೊಂದು ಮಾಡಿ
ಮತ್ತೆ ಏನುವ ತೋಜದೆ ವ್ರತವನ್ನುವನಾದರಿಸಬೇಕು.
ವ್ರತದೀಕ್ಷೆಯ ಮಾಡುವಲ್ಲಿ ಗುರುವಿನ ಇರವೆಂತೆಂದಡೆ :
ಅವನ ಆಗುಚೇಗೆಯನಜಿದು ಅರ್ತಿಕಾಜರಿಗೆ ಇದಿರು ಮೆಚ್ಚುವ ಭೇದ,
ಹಿರಣ್ಯದ ಬದಗಿನಲಾಗು, ಕೊಲೆ ಹಗೆಯುಪ್ಪನ
ರಾಗವಿರಾಗಗಳೆಂಬ ಭಾವವ ವಿಚಾರಿಸಿ,
ಈ ವ್ರತನೇಮ ನಿನಗೆ ಲಾಗಲ್ಲ ಎಂದು ಅರೆಬಿರಿದಿನ ನೇಮ.
ತೊಡಕಿನಂಬಿನ ಘಾಯ ತಪ್ಪಿದಡೆ
ಇಹಪರದಲ್ಲಿ ಉಭಯ ದೋಷ

---

[26] ಅದೇ, ಪು. 470 (ಅಕ್ಕಮ್ಮ ವ. 24).
[27] ಅದೇ, ಪು. 477 (ಅಕ್ಕಮ್ಮ ವ. 39).

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆಂದು ಉಪದೇಶವಂ ಕೊಟ್ಟು ಸಂತೈಸುವದು ಗುರುಸ್ಥಲ.
ಆ ಗುಣಕ್ಕೆ ಮುಯ್ಯಾಂತು, ಪರಮ ಹರುಷಿತನಾಗಿ,
ಗಣ ಸಮೂಹವಂ ಕೂಡಿ, ಪರಮ ವಿರಕ್ತರಂ ಕರೆದು
ಮಹತ್ತು ನೆರಹಿ, ಗುರುಲಿಂಗಜಂಗಮ ಸಾಕ್ಷಿಯಾಗಿ ಮಾಡುವುದೆ ವ್ರತ
ಹೀಗಲ್ಲದೆ ಮನಕ್ಕೆ ಬಂದಂತೆ ತನು ಹರಿದಾಡುವಂತೆ
ಊರೂರ ದಾರಿಗರಲ್ಲಿ ವ್ರತವ ಮಾಡಿಕೊಳ್ಳಿಯೆಂದು ಸಾಱಲಿಲ್ಲ.
ಇಂತೀ ಉಭಯವನಱಿತು ವ್ರತಕ್ಕೆ ಅರ್ಹನಾಗಬೇಕು.
ಇಂತೀ ಸರ್ವಗುಣಸಂಪನ್ನ ಮಾಡಿಸಿಕೊಂಬವನೂ ತಾನೆ,
ಮಾಡುವಾತನೂ ತಾನೆ,
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗವು ತಾನೆ."[28]

ಈ ವಚನದ ಆಶಯುವನ್ನು ಹೀಗೆ ಸಂಗ್ರಹಿಸಬಹುದು: ವ್ರತವನ್ನು ಹಿಡಿಯುವ ವ್ಯಕ್ತಿಯು ತಾನೊಬ್ಬನೇ ಈ ವ್ರತವನ್ನು ಆಚರಿಸುವುದೇ ಅಥವಾ ತನ್ನ ಮಡದಿ ಮಕ್ಕಳು ಬಂಧುಗಳೊಡನೆ ಆಚರಿಸುವುದೇ ಎಂಬುದನ್ನು ನಿರ್ಧರಿಸಿ ತ್ರಿಕರಣಪೂರ್ವಕ ವಾಗಿ ವ್ರತಧಾರಣೆ ಮಾಡಬೇಕು ; ವ್ರತೋಪದೇಶವನ್ನು ಮಾಡುವುದಕ್ಕೆ ಮುಂಚೆ ಗುರುವಾದವನು ಶಿಷ್ಯನ ಯೋಗ್ಯತೆಯನ್ನು ಪರೀಕ್ಷಿಸಿ, ಕೊನೆಯವರೆಗೂ ಆತನಿಗೆ ವ್ರತಾಚಾರವು ಸಾಧ್ಯವಿಲ್ಲವೆನಿಸಿದರೆ ಹಾಗೆಯೇ ತಿಳಿಸಬೇಕು, ಅರ್ಹನಾದವನಿಗೆ ಕೊನೆ ತನಕ ವ್ರತವನ್ನು ಬಿಡಬಾರದೆಂದು ತಿಳಿಸಿ ವ್ರತದೀಕ್ಷೆಯನ್ನು ನೀಡಬೇಕು. ಹೀಗೆ ವ್ರತವನ್ನು ಹಿಡಿಯುವುದು ಭಕ್ತವಿರಕ್ತರ ನಡುವೆ ಅವರ ಸಾಕ್ಷಿಯಾಗಿ ನಡೆಯಬೇಕು. ಎಲ್ಲೆಂದರಲ್ಲಿ, ಯಾರಿಂದಲೆಂದರೆ ಅವರಿಂದ ವ್ರತವನ್ನು ಸ್ವೀಕರಿಸಬಾರದು.

ಶೀಲವಂತರ ಈ ನಿಯಮನಿಷ್ಠುರತೆಯು ಮಗುವಿಗೆ ಅವರು ಲಿಂಗಧಾರಣೆ ಮಾಡುವ ಕಾಲದಿಂದರೇ ಪ್ರಾರಂಭವಾಗುತ್ತದೆ. ಮಗುವು ಹುಟ್ಟಿದ ತಕ್ಷಣವೇ ಅದಕ್ಕೆ ವಿಭೂತಿ ಪಟ್ಟವನ್ನು ಕಟ್ಟಿ, ಕೊರಳಲ್ಲಿ ಲಿಂಗಧಾರಣೆ ಮಾಡಿಸಿ, ಮಗುವಿಗೆ ಪಾದೋದಕದಿಂದ ಜಳಕ ಮಾಡಿಸಬೇಕೆಂದು ಚನ್ನಬಸವಣ್ಣನು ವಿಧಿಸುತ್ತಾನೆ.[29] "ನಾ ಹುಟ್ಟಲೊಡನೆ ವಿಭೂತಿಯ ಪಟ್ಟವ ಕಟ್ಟಿ ಸದ್ಗುರುಸ್ವಾಮಿ ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು"[30] ಎಂಬ ಮಹಾದೇವಿಯಕ್ಕನ ಮಾತುಗಳು ಕೂಡ ಮೇಲಿನ ಚನ್ನಬಸವಣ್ಣನ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಹೀಗೆ ವೀರಶೈವರಲ್ಲಿ ಲಿಂಗಧಾರಣೆಯು ಸಾಮಾನ್ಯವಾಗಿ ಶಿಶುವಿನ ಜನನವಾದ ನಂತರ ನಡೆದರೆ ಶೀಲವಂತರು ಜನನ ಪೂರ್ವದಲ್ಲಿಯೇ ಲಿಂಗಧಾರಣೆಯಾಗಬೇಕೆಂಬ

---

28 ಅದೇ. ಪು. 516 (ಅಕ್ಕಮ್ಮ ವ. 125).
29 ಚನ್ನಬಸವಣ್ಣನವರ ವಚನಗಳು, ವ. 399: ಪು. 182.
30 ಅಕ್ಕನ ವಚನಗಳು, ವ. 38: ಪು. 21.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಭಿಪ್ರಾಯವನ್ನು ತಳೆದವರು. ನಾವು ಆಗಲೇ ಊಹಿಸಿರುವಂತೆ ಶೀಲವಂತ ಪಂಗಡಕ್ಕೆ ಸೇರಿದ್ದಿರಬಹುದಾದ ಅಕ್ಕಮ್ಮನು ಲಿಂಗಧಾರಣೆಯ ಬಗ್ಗೆ ಹೇಳುವ ವಚನ ವೊಂದು ಹೀಗಿದೆ,

"ಎನ್ನ ಲಿಂಗವಂತಳಿಗೆ ಸೂತಕ ಮಾಸ ತಡೆದಲ್ಲಿ,
ಗರ್ಭವೆಂಬುದು ತಲೆದೋಱಿದಲ್ಲಿಯೇ ಆತ್ಮ ಚೇತನಿಸುವನಕ್ಕ
ಆಕೆಯ ಉದರದ ಮೇಲೆ ನಿಹಿತಲಿಂಗವಿರಬೇಕು.
ನವಮಾಸ ತುಂಬಿ ಆಕೆಯ ಗರ್ಭದಿಂದ ಉಭಯ ಜಾತತ್ಯವಾಗಲಾಗಿ
ಚೇತನ ಬೇಱಾದಲ್ಲಿ ಗುರುಕರಜಾತನ ಮಾಡಬೇಕು.
ಇಂತೀ ಇಷ್ಟಾಱ ಕ್ರೀಯಲ್ಲಿ ಸಂತತ ವ್ರತ ಇರಬೇಕು.
ಕಂಥೆಯ ಬಿಡುವನ್ನಕ್ಕ ಶರಣರ ಕೈಯಲ್ಲಿ ಅಂತಿಂತೆಂಬ ಶಂಕೆಯ ಹೊಱಲಿಲ್ಲ
ಇಂತೀ ವ್ರತದಲ್ಲಿ ನಿಶ್ಶಂಕನಾಗದೆ ಬಲ್ಲಡೆ,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ಸಮಶೀಲವಂತನೆಂಬೆ ".[31]

ಸ್ತ್ರೀಯು ಗರ್ಭವತಿಯಾದಾಗಲೇ ಗರ್ಭದ ಶಿಶುವಿಗೆ ಲಿಂಗಧಾರಣೆ ಮಾಡಿ ತಾಯಿಗೆ ಕಟ್ಟಬೇಕು, ಶಿಶು ಜನನಾಂತರ ಆ ಮಗುವಿಗೆ ಗುರುವಿನಿಂದ ಲಿಂಗಧಾರಣೆ ಮಾಡಿಸ ಬೇಕು ಎಂಬುದೇ ಈ ವಚನದ ಒಟ್ಟು ಅಭಿಪ್ರಾಯ. ಈಗಿನ ಶೀಲವಂತರು ಕೂಡ ಲಿಂಗಧಾರಣೆಯ ವಿಚಾರದಲ್ಲಿ ಸುಮಾರು ಇದೇ ಮುಖ್ಯ ಅಬಿಪ್ರಾಯವನ್ನು ಪಡೆ ದಿದ್ದಾರೆಂಬುದು ಗಮನಾರ್ಹ; ಶೀಲವಂತರು ಈಗ ಪಡೆದ ಆಚರಣೆಯು ಈ ರೀತಿಯದಾಗಿರುತ್ತದೆ: ಗರ್ಭಕ್ಕೆ ಏಳು ತಿಂಗಳಾಗಿ ಹೊಟ್ಟೆಯಲ್ಲಿ ಮಗುವು ಚಲಿಸು ವುದಕ್ಕೆ ಪ್ರಾರಂಭಿಸಿದಾಗ ಸಣ್ಣ ಕಲ್ಲಿನ ಲಿಂಗವೊಂದನ್ನು ಮೇಣದಲ್ಲಿಟ್ಟು ಅದನ್ನು ರೇಷ್ಮೆಯ ಬಟ್ಟೆಯ ತುಂಡೊಂದರಲ್ಲಿ ಕಟ್ಟಿ ಗರ್ಭಿಣಿಯ ಕೊರಳಿನ ಶಿವದಾರಕ್ಕೆ ಕಟ್ಟಲಾಗುತ್ತದೆ. ಮಗುವು ಜನಿಸಿ ಅದಕ್ಕೆ ಒಂದು ವರ್ಷ ವಯಸ್ಸಾಗಿ ತಾಯ ಹಾಲನ್ನು ಬಿಟ್ಟಮೇಲೆ ತಾಯಿಯ ಕೊರಳಿನಲ್ಲಿ ಕಟ್ಟಿದ್ದ ಲಿಂಗವನ್ನು ತೆಗೆದು ಬೆಳ್ಳಿಯ ಕರಡಿಗೆಯಲ್ಲಿಟ್ಟು ಮಗುವಿಗೆ ಕಟ್ಟಲಾಗುತ್ತದೆ; ಗಂಡುಮಗುವಾದರೆ ಸುಮಾರು ಹನ್ನೆರಡನೆಯ ವಯಸ್ಸಿನಲ್ಲಿ, ಹೆಣ್ಣುಮಗುವಾದರೆ ವಿವಾಹಕ್ಕೆ ಸ್ವಲ್ಪಕಾಲ ಮಾತ್ರ ಮುಂಚೆ ಈ ಲಿಂಗವನ್ನು ತೆಗೆದು ಗುರುವಿನಿಂದ ಲಿಂಗಧಾರಣೆಯನ್ನು ಮಾಡಿಸ ಲಾಗುತ್ತದೆ.[32] ಎಂದರೆ ಗರ್ಭದಲ್ಲಿರುವಾಗಲೇ ಮಗುವಿಗೆ ಲಿಂಗವನ್ನು ಕಟ್ಟುತ್ತಿದ್ದ

31 ಶಿವಶರಣೆಯರ ವಚನಗಳು. ಪು. 469 (ಅಕ್ಕಮ್ಮ ವ. 21).
(ಇದೇ ಗ್ರಂಥದ 479ನೇ ಪುಟದ ಅಕ್ಕಮ್ಮನ 43ನೇ ವಚನವನ್ನೂ ನೋಡಿ).

32 Edgar Thurston: *Castes and Tribes of South India*, Vol. vi: p. 387.

Sri Vidyabharathi Book Centre, Sringeri

CC-O. In Public Domain. Digitized by eGangotri

ರೂಢಿಯು ಈಗಲೂ ಮುಂದುವರೆದಿದೆ ಎನ್ನುವುದು ಇದರಿಂದ ವಿದಿತವಾಗುತ್ತದೆ. ಆದರೆ ಗರ್ಭಸ್ಥಶಿಶುವಿಗೆ ಲಿಂಗಧಾರಣೆ ಮಾಡುವಾಗ ವಚನಕಾಲದಲ್ಲಿ ಶೀಲವಂತರು ಅನುಸರಿಸುತ್ತಿದ್ದ ರೀತಿಯಾಗಲೀ, ಮುಂದೆ ಶಿಶು ಜನನಾಂತರ ಮಾಡುತ್ತಿದ್ದ ವಿಧಿಗಳಾಗಲೀ ನಮಗೆ ವಚನಗಳಿಂದ ತಿಳಿಯಬರುವುದಿಲ್ಲ. ವಿವರಗಳಲ್ಲಿ ಭಿನ್ನತೆಯಿರಬಹುದಾದರೂ ಮುಖ್ಯಾಂಶದಲ್ಲಿ ಆಗಿನ ಮತ್ತು ಈಗಿನ ಪದ್ಧತಿಗಳಲ್ಲಿ ವ್ಯತ್ಯಾಸವಿಲ್ಲ. ಆ ಕಾಲದ ಶೀಲವಂತರ ಬಗ್ಗೆ ಇದಕ್ಕಿಂತ ಹೆಚ್ಚಿನ ವಿವರಗಳು ನಮಗೆ ತಿಳಿಯುವುದಿಲ್ಲ.

ಇಲ್ಲಿ ಬಳಸಿಕೊಂಡಿರುವ ಆಕರಗಳು

1. ಶಿವಶರಣೆಯರ ವಚನಗಳು (ಸಂ: ಆರ್. ಸಿ. ಹಿರೇಮಠ), 1968.
2. ಹಡಪದಪ್ಪಣ್ಣನ ವಚನಗಳು (ಸಂ: ಪಿ. ಜಿ. ಹಳಕಟ್ಟಿ), 1929.
3. ಚನ್ನಬಸವಣ್ಣನವರ ವಚನಗಳು (ಸಂ: ಆರ್. ಸಿ. ಹಿರೇಮಠ), 1965.
4. ಅಕ್ಕನ ವಚನಗಳು (ಸಂ: ಎಲ್. ಬಸವರಾಜು), 1966.
5. ಅಲ್ಲಮ್ಮನ ವಚನಚಂದ್ರಿಕೆ (ಸಂ: ಎಲ್. ಬಸವರಾಜು), 1960.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ್ರಶೇಖರ ಕಂಬಾರ

ಬಸವಣ್ಣನವರ ಕ್ರಾಂತಿಕಲ್ಪನೆ ವಿವರಿಸುವ ಒಂದು ವಚನ

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ
ದೇಹವೇ ದೇಗುಲ
ಶಿರವೇ ಹೊನ್ನ ಕಳಸವಯ್ಯಾ
ಕೂಡಲ ಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ಈ ವಚನ ಬಸವಣ್ಣನವರ ಅತ್ಯಂತ ಮಹತ್ವದ ವಚನಗಳಲ್ಲಿ ಒಂದೆಂದು ನನ್ನ ತರ್ಕ. ಏಕೆಂದರೆ ಇದು ಅವರ ಬಗೆಗೆ, ಅವರ ಸಂಪೂರ್ಣ ಕ್ರಾಂತಿಯ ಕಲ್ಪನೆಯ ಬಗೆಗೆ ಅನೇಕ ಮಹತ್ವದ ಮಾತುಗಳನ್ನು ಹೇಳುತ್ತದೆ. ವ್ಯವಸ್ಥೆಗೆ ವಿರುದ್ಧವಾಗಿ ಅವರು ಮಾಡಬಯಸಿದ ಕ್ರಾಂತಿಯನ್ನು, ಅದರ ಆಯಾಮಗಳ ಸ್ವರೂಪವನ್ನು ಸಮರ್ಥವಾಗಿ ಅಭಿನಯಿಸುತ್ತದೆ.

ಸಾಮಾನ್ಯವಾಗಿ ಮಾನವ ದೇಹದ ಮಾದರಿಯಲ್ಲಿಯೇ ದೇವಾಲಯಗಳಿರುವುದು ಗಮನಾರ್ಹವಾದದ್ದು. ದೇವಾಲಯ ನಿರ್ಮಾಣದ ಆರಾಧನೆ ಆ ನೆಲವನ್ನು ಉತ್ತಿ ಬೀಜ ಬಿತ್ತುವುದರಿಂದಲೇ ಪ್ರಾರಂಭವಾಗುತ್ತದೆ. ಬೀಜವೇ ಬೆಳೆದು ಮನುಷ್ಯನಾಗುವಂತೆ ದೇವಾಲಯವೂ ಬೆಳೆದು ನಿಲ್ಲುತ್ತದೆ ಎಂಬ ಕಲ್ಪನೆಯಿದೆ. ದೇವಾಲಯದ ಬೇರೆ ಬೇರೆ ಭಾಗಗಳಿಗೆ ದೇಹದ ಬೇರೆ ಬೇರೆ ಅವಯವಗಳ ಹೆಸರನ್ನೇ ಇಡಲಾಗಿದೆ. ಅದರ ಎರಡೂ ಪಕ್ಕಗಳನ್ನು ಹಸ್ತಗಳೆಂದೂ, ಕಂಬಗಳನ್ನು ಪಾದ ಗಳೆಂದೂ, ತಲೆಯನ್ನು ಶಿಖರವೆಂದೂ, ಗುಡಿಯ ಒಳಭಾಗವನ್ನು ಗರ್ಭಗೃಹವೆಂದೂ ಕರೆಯಲಾಗುತ್ತದೆ. ಆದರೆ ಇಟ್ಟ ಕಾಯಿಯ ತಿರುಳು ತೀರಿ ಬರೀ ಚಿಪ್ಪು ಉಳಿಯುವಂತೆ ಈ ಪದಗಳ ನಿಜ ಅರ್ಥ ಮರೆಯಾಗಿ ಭಾಷೆಯ ಅಸ್ಥಿಪಂಜರ ಮಾತ್ರ ಈಗ ಕಾಣಿಸುತ್ತಿದೆ. ದೇವಾಲಯ ಮಾನವನೊಂದಿಗಿನ ಜೀವಂತವಾದ ಅರ್ಥಸಂಬಂಧ ಕಳಚಿಕೊಂಡು ಬರೀ ತೋರಿಕೆಯಾಗಿ ಜಡವಸ್ತುವಾಗಿ ಉಳಿದಿದೆ. ಕಳೆದುಹೋದ ಅರ್ಥವಂತಿಕೆಯನ್ನು ದೇಹ ದೇವಾಲಯಗಳ ಸಾಮರಸ್ಯದಿಂದ ಪುನರ್ಜೀವಿಸುವಂತೆ ಕರೆಕೊಡುವುದೇ ಮೇಲಿನ ವಚನದ ಉದ್ದೇಶ.

ದೇವಾಲಯ ಕಟ್ಟುವುದು ಅಥವಾ 'ಮಾಡುವುದು' ಬೇರೆ, ದೇವಾಲಯವೇ 'ಆಗುವುದು' ಬೇರೆ. 'ಉಳ್ಳವರು,' ಶ್ರೀಮಂತರು ದೇವಾಲಯಗಳನ್ನು ಮಾಡ ಬಲ್ಲರು ಮಾತ್ರ. ತಮ್ಮ ಬಾಹ್ಯಕ್ರಿಯೆಯಿಂದ ಸ್ವಯಂ ದೇವಾಲಯವಾಗುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರಿಗೆ ಅಸಾಧ್ಯ. 'ಮಾಡಿದ್ದಕ್ಕೆ' ಮಿತಿ ಇದೆ. ಅಳಿವಿದೆ. 'ಆದದ್ದು' ಅಮರ್ತ್ಯ, ಅವಿನಾಶಿ. ಮಿತಿಗೆ ಮೀರಿದ್ದು. ಈ ಸ್ಥಾವರ ಜಂಗಮ ವಿರೋಧವೇ ವೀರಶೈವರ ಅಂತಸ್ಥಲವಾಗಿದೆ. ಸ್ಥಾವರ ಎಂದರೆ ಜಡವಾದದ್ದು. ನಿಂತಿರುವಂಥಾದ್ದು. ಜಂಗಮ ವೆಂದರೆ ಚಲಿಸುವಂಥಾದ್ದು. ಜಂಗಮ ಮನೆಮಾರು ಬಿಟ್ಟು, ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತ ಭಕ್ತರಿಗೆ ದೇವರನ್ನು ಕರುಣಿಸುವವನು. ಸ್ಥಾವರವೆಂದರೆ ದೇವರ ಜಡವಾದ ಸಂಕೇತ. ದೇವರ ಮೂರ್ತಿಯಾಗಬಹುದು. ದೇವಾಲಯವಾಗಬಹುದು, ದೇವಾಲಯದಲ್ಲಿ ಪೂಜಿಸಲ್ಪಡುವ ಲಿಂಗವೂ ಆಗಬಹುದು. ಹೀಗೆ ಸ್ಥಾವರ ಮತ್ತು ಜಂಗಮಗಳು ಪರಸ್ಪರ ವಿರೋಧಿಯಾದ ಕಲ್ಪನೆಗಳಾಗಿವೆ. ದೇವಾಲಯದ ಸಂಕೇತಿ ಕತೆಯನ್ನು ಕಳೆದು ಜೀವಂತಗೊಳಿಸುವುದೇ, ರೂಪಕದಲ್ಲಿ ಅದರ ಒಳ ಅರ್ಥವನ್ನು ಭರ್ತಿಮಾಡುವುದೇ ಇಲ್ಲಿ ಬಸವಣ್ಣನವರ ಉದ್ದೇಶವಾಗಿದೆ.

ದೊಡ್ಡ ದೊಡ್ಡ ದೇವಾಲಯಗಳನ್ನು ನೋಡಿದರೆ ಈ ಮಾತಿನ ಸಾಮಾಜಿಕ ಅರ್ಥ ಹೊಳೆದೀತು. ಅವುಗಳ ಭಾರೀ ರಚನೆ, ಪೂಜೆಯ ಅದ್ದೂರಿ, ಶೃಂಗಾರ, ಅಂಗರಂಗಭೋಗ ಇವೆಲ್ಲ ಬಡವರಿಗಂತೂ ಎಟುಕದ ಕನಸು. ಬಡವರು–ಶ್ರೀಮಂತರು, ಉಚ್ಚರು–ನೀಚರು ಮುಂತಾದ ಸಾಮಾಜಿಕ ವಿಷಮತೆಯನ್ನು ಪ್ರತಿ ಭಟಿಸುವುದು ಬಸವಣ್ಣನವರ ಕ್ರಾಂತಿಯ ಉದ್ದೇಶವಾಗಿತ್ತು. ವ್ಯವಸ್ಥೆಯ ಸೆರಗಿನಲ್ಲಿ ರಕ್ಷಿತರಾಗಿ ಆ ಮೂಲಕ ಬಡವರನ್ನು ಸುಲಿಯುತ್ತಿದ್ದ ಉಳ್ಳವರನ್ನು ವಿರೋಧಿಸಿ ಸಾಮಾಜಿಕನ್ಯಾಯವನ್ನು ಒದಗಿಸಬೇಕಾಗಿತ್ತು. ಜಡವಾದ ಕಲ್ಲಿನಲ್ಲಿ ಮತ್ತೆ ಜೀವ ತುಂಬಬೇಕಾಗಿತ್ತು. ಬಸವಣ್ಣನವರು ಈ ವಚನದಲ್ಲಿ ಇದನ್ನು ಸೂಕ್ಷ್ಮವಾಗಿ ಸೂಚಿಸಿದ್ದಾರೆ. ಉಳ್ಳವರು ಬಹುಮಂದಿ, ನಾನು ಒಬ್ಬ ಬಡವ. ಏನೂ ಮಾಡ ಲಾಗದವ. ಹಾಗೆಂದು ಆತ್ಮವಿಶ್ವಾಸ ಕಳೆದುಕೊಂಡವನಲ್ಲ. 'ನನ್ನ ಕಾಲೇ ಕಂಬ, ದೇಹವೇ ದೇಗುಲ. ಶಿರವೇ ಹೊನ್ನ ಕಳಸ'... ಎಂದು ಹೇಳುತ್ತ ಉಳ್ಳವರು ದೇವಾಲಯ ಮಾಡಬಲ್ಲವರಾದರೆ ನಾನು ಸ್ವಯಂ ದೇವಾಲಯವಾಗುತ್ತೇನೆ. ಎನ್ನುತ್ತಾರೆ. ವಚನ ಮಾಡುವುದರಿಂದ ಆಗುವುದರತ್ತ ಒಲಿಯುತ್ತದೆ. ಮಾಡಿದ್ದು ಮುರಿಯುತ್ತದೆ. ನಿಂತಿದ್ದು ಬೀಳುತ್ತದೆ: ನಾಶವಾಗುತ್ತದೆ. ಆದರೆ ಆದದ್ದು ಚಲಿಸುತ್ತದೆ; ಅದರಿಂದ ಅವಿನಾಶಿಯಾಗುತ್ತದೆ.

ಸಂಪೂರ್ಣಕ್ರಾಂತಿಯ ಮಾತಾಡುವ ನಮಗೆ ಬಸವಣ್ಣನವರ ವಿಚಾರದ ರೀತಿ ಆಶ್ಚರ್ಯವುಂಟುಮಾಡುತ್ತದೆ. ಅಂದಿನ ವ್ಯವಸ್ಥೆ ಸಾಮಾಜಿಕವಾಗಿ, ಅಷ್ಟೇ ಅಲ್ಲ ಭಾಷೆಯ ನೆಲೆಯಲ್ಲಿ ಸಹ ಜಡಗಟ್ಟಿ ಹೋದ ಸ್ಥಾವರವಾಗಿತ್ತು. ಮಹಾ ಪರಂಪರೆ (Great Tradition) ಹೇಗೋ ಹಾಗೆ ಸಣ್ಣ ಪರಂಪರೆ (Little Tradition) ಸಹ ಕನ್ನಡ ಜೀವಂತಿಕೆಗೆ ಎರವಾಗಿತ್ತು, ಅವೆರಡೂ ಆಗಲೇ ವ್ಯವಸ್ಥೆಯಾಗಿ ಹುಸಿ ರಕ್ಷಣೆಯ ನೆಪದಲ್ಲಿ ಮನುಷ್ಯನನ್ನು ನಿಷ್ಕ್ರಿಯ ಗೊಳಿಸುತ್ತಿದ್ದವು. ವೇದೋಪನಿಷತ್ತಿನ ಮಹಾಪರಂಪರೆಯ ಆಚಾರ ಸಂಸ್ಕೃತ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಆಶ್ರಯಿಸಿ ಜೀವಂತಿಕೆಯ ಸ್ಪರ್ಶ ಕಳೆದುಕೊಂಡಿತ್ತು. ಯಾವುದೋ ಕಾಲದ ಆ ನಿರ್ಜೀವ ಅನುಭವ ಇಂದಿನ ಈಗಿನ ಅನುಭವಕ್ಕೆ ಪ್ರಮಾಣವಾಗಲಾರದೆಂದೇ ಬಸವಣ್ಣನವರು ಭಾವಿಸಿದರು. ಆದ್ದರಿಂದ ಅದನ್ನು ಬಿಟ್ಟು ತಮ್ಮ ಅನುಭವಕ್ಕೆ ಸಮಕಾಲೀನ ಶರಣರ ಅನುಭವಗಳನ್ನು ಪ್ರಮಾಣವಾಗಿ ಇಟ್ಟುಕೊಂಡರು ಮತ್ತು ವ್ಯವಸ್ಥೆಯ ಭಾಷೆಯಾದ ಸಂಸ್ಕೃತವನ್ನು ಬಿಟ್ಟು ತಮ್ಮ ಅಭಿವ್ಯಕ್ತಿಗೆ ಕನ್ನಡವನ್ನು ಬಳಸಿದರು.

ದೇಸೀಭಾಷೆಯ ಮಾರಿಮಸಣಿಯ ಆರಾಧನೆಯನ್ನೂ ಅವರು ಹೀಗೆಯೇ ನಿರಾಕರಿಸಿದರು. ಸಣ್ಣ ಪರಂಪರೆಯ ಮೂಢನಂಬಿಕೆ, ಆಚಾರ, ವಾಮಾಚಾರ— ಈ ಎಲ್ಲ ಮಾಡುವ ಕರ್ಮಗಳು ಉದ್ದೇಶಪ್ರಾಪ್ತಿಗಾಗಿ ಇರುವಂಥವು. ಇಂಥ ವ್ಯವಹಾರದ ಬಗ್ಗೆ ಬಸವಣ್ಣನವರಿಗೆ ಯಾವಾಗಲೂ ಅನುಮಾನವಿತ್ತು. ದೇವರ ಜಗತ್ತು ಸ್ವಚ್ಛಂದವಾದದ್ದು, ನಿರಂತರವಾದದ್ದು, ನಿರಾತಂಕವಾದದ್ದು—ಎಂದು ಅವರ ನಂಬಿಕೆ. ಫಲಪ್ರಾಪ್ತಿಗಾಗಿ ಮಾಡುವ ಕರ್ಮವನ್ನು ಈ ಕಾರಣಕ್ಕಾಗಿಯೇ ಪ್ರಶ್ನಿಸಿದರು.

ಹೀಗೆಯೇ ವ್ಯವಸ್ಥೆಯನ್ನು ಅಲ್ಲಗಳೆಯುತ್ತ ಹೊಸ ಮೌಲ್ಯಗಳನ್ನು ಬೆಳಕಿಗೆ ತಂದರು : ಜಾತಿ ಮತ ಕಾಯಕ ಗುರುಹಿರಿಯರು ಮೊದಲಾದ ಕಲ್ಪನೆಗಳಿಗೆ ಹೊಸ ಅರ್ಥದಾನ ಮಾಡಿದರು : ಶರಣಜೀವಕ್ಕೆ ಜಾತಿಮತಕುಲ ಗೋತ್ರ ಮಾತ್ರವಲ್ಲ ಲಿಂಗಭೇದವೂ ಇಲ್ಲವೆಂದರು. ಗುರುಹಿರಿಯರ ಅಂತಸ್ತುಗಳನ್ನು ಹೊಸಕ್ರಮದಲ್ಲಿ ನಿಲ್ಲಿಸಿದರು. 'ಕಾಯಕವೇ ಕೈಲಾಸ'ದಂಥ ಹೊಸ ಮೌಲ್ಯಗಳನ್ನು ಸ್ಥಾಪಿಸಿದರು.

ಭಾಷೆಯ ಮಟ್ಟದಲ್ಲಿ ಕೂಡ ಅವರ ಕ್ರಾಂತಿಯನ್ನು ನಾವು ಗುರುತಿಸಬಹುದು. ಅದಕ್ಕಾಗಿ ಕಾವ್ಯದ ಅಭಿವ್ಯಕ್ತಿರೂಪವನ್ನು ಕೂಡ ಬದಲಿಸಿಕೊಂಡರು. ಅವರೆಗಿನ ಸಾಹಿತ್ಯ ಸಾಂಪ್ರದಾಯಿಕ ತಾಳಲಯ ಛಂದಸ್ಸುಗಳನ್ನು ಹೊಂದಿ, ವ್ಯವಸ್ಥೆಯ ಭಾಗವಾಗಿ ಕಾವ್ಯದ ಸ್ವಚ್ಛಂದತೆ ಜೀವಂತಿಕೆಗಳನ್ನು ಕಳೆದುಕೊಂಡಿತ್ತು. ವಚನ ರೂಪ ವೇದೋಪನಿಷತ್ತುಗಳಂತೆ ಶ್ರುತಿ (ಕೇಳಿದ್ದು) ಅಲ್ಲ; ಸ್ಮೃತಿ (ನೆನಪಿಸಿ ಕೊಂಡದ್ದು) ಅಲ್ಲ ; ಆಯಾ ಸ್ಫೂರ್ತಿಮುಹೂರ್ತದಲ್ಲಿ ಹೇಳಿದ್ದು. ಒಬ್ಬ ಶರಣ ಇನ್ನೊಬ್ಬ ಶರಣನಿಗೆ ತನ್ನ ಅನುಭವವನ್ನು ಹೇಳುತ್ತ ತನ್ನ ಒಳಗಿನ ನಿಜವನ್ನು ಕಂಡುಕೊಂಡದ್ದು. ಹಾಗೆ ಕಾಣುತ್ತ ಕೇಳುತ್ತ ಇನ್ನೊಬ್ಬ ಶರಣನ ಅನುಭವಕ್ಕೆ ಪ್ರಮಾಣ ಒದಗಿಸಿದ್ದು.

ಹೀಗೆ ವೀರಶೈವವೂ ವ್ಯವಸ್ಥೆಯನ್ನು ನಿರಾಕರಿಸುತ್ತ ಮತ್ತೆ ತಾನೂ ಒಂದು ವ್ಯವಸ್ಥೆಯಾದದ್ದು ಅದರ ದುರಂತ. ಬಸವಣ್ಣನವರ ಯತ್ನಗಳು ಮಾತ್ರ ಈಗಲೂ ಅರ್ಥಪೂರ್ಣವಾಗಿ ಕಾಣಿಸುತ್ತಿವೆ.

(ಆಧಾರ : ಶ್ರೀ ಎ. ಕೆ. ರಾಮಾನುಜನ್ ಅವರ Speaking of Siva ಗ್ರಂಥದ ಪ್ರಸ್ತಾವನೆ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆ. ಕೃಷ್ಣಮೂರ್ತಿ

ಕುಮಾರವ್ಯಾಸನಲ್ಲಿ 'ವಿದ್ಯಾಪರಿಣತರ ಅಲಂಕಾರ'

ಕೇವಲ ವಿನೂತನ ಮಾನದಂಡಗಳಿಂದ ಅಳೆದಾಗ ಪ್ರಾಚೀನ ಕಾವ್ಯಗಳ ಪೂರ್ಣ ರಸಾಸ್ವಾದನೆಯಾಗದು: ಸಾಂಪ್ರದಾಯಿಕ ಶಾಸ್ತ್ರಪ್ರಕ್ರಿಯೆಗಳನ್ನೂ ಅನುಸರಿಸಬೇಕಾಗುತ್ತದೆ. ಕುಮಾರವ್ಯಾಸ ಮಹಾಕವಿ ಮತ್ತು ಸ್ಫೂರ್ತಿಸ್ಪಂದನೆಯಿರುವ ವರಕವಿ. ಅವನ ಕಾವ್ಯದ ಓಘದಲ್ಲಿ ಕೊಚ್ಚಿ ಹೋಗುವ ಕಾವ್ಯರಸಿಕರು ಕಾವ್ಯದ ಅಲಂಕಾರಚಿಂತನೆಯನ್ನು ಕಡೆಗಣಿಸಲಾಗದು. ಆ ವಿಚಾರವಾಗಿ ಒಂದೆರಡು ನಿದರ್ಶನಗಳ ಮೂಲಕ ಮಾರ್ಗದರ್ಶನವಾಗುವಂತೆ ದಿಗ್ದರ್ಶನವಷ್ಟೇ ಈ ಲೇಖನದ ಗುರಿ.

ಕುಮಾರವ್ಯಾಸನು ತನ್ನ ಕವಿಸ್ಫೂರ್ತಿಯ ಬಗೆಗೆ ಹೇಳಿಕೊಳ್ಳುತ್ತ ಅದು

ಚಾರುಕವಿತೆಯು ಬಳಕೆಯಲ್ಲ ವಿ
ಚಾರಿಸುವಡಳವಲ್ಲ ಚಿತ್ತವ
ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ" (1. 1. 7)

ಎಂದು ಎಚ್ಚರಿಕೆ ನೀಡಲು ಮರೆತಿಲ್ಲ.

ಇದು ಕೇವಲ ಚಾರುಕವಿತಾವಿಲಾಸಕ್ಕೆ ಸೀಮಿತವಾದ, ಆಸ್ಥಾನಕವಿರಚನಾಸದೃಶವಾದ ಕಾವ್ಯವೆಂದು ಭ್ರಮಿಸುವಂತಿಲ್ಲ. ಇದು ಮುಖ್ಯವಾಗಿ ಶ್ರೀಕೃಷ್ಣನ ಚರಿತಾಮೃತ; ಆದ್ದರಿಂದಲೇ ಪುಣ್ಯದಾಯಕ ಮತ್ತು ಪಾವನವಾದ ಧಾರ್ಮಿಕ ಕಾವ್ಯ.

ತಿಳಿಯ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ।...(13)

ಹೀಗೆ ಈ ಕಾವ್ಯಸ್ಫೂರ್ತಿಯ ಘಟಕಗಳಲ್ಲಿ ಪ್ರಧಾನಸ್ಥಾನ ಕೃಷ್ಣಭಕ್ತಿಗೆ ಸಲ್ಲಬೇಕೆಂಬುದೇ ಕವಿವಿವಕ್ಷೆ; ಆದರೂ ಕಾವ್ಯದ ಮೂರ್ತೀಭವನಕ್ರಿಯೆಯಲ್ಲಿ ಅಲಂಕಾರ ಶಾಸ್ತ್ರದ ಸಕಲಪ್ರಕ್ರಿಯೆಗಳಿಗೂ ಕವಿಯ ಪುರಸ್ಕಾರವಿದೆ:—

ಪದದ ಪ್ರೌಢಿಯ ನವರಸಂಗಳ
ವುದಿತವನುವಭಿಧಾನ ಭಾವವ
ಬೆದಕಲಾಗದು ಬಲ್ಲ ಪ್ರೌಢರುಮೀ ಕಥಾಂತರಕೆ।
ಇದು ವಿಚಾರಿಸೆ ಬರಿಯ ತುಳಸಿಯ
ಉದಕದಂತಿರೆಯಿಲ್ಲಿ ನೋಳ್ಪುದು
ಪದುಮನಾಭನ ಮಹಿಮೆ ಧರ್ಮವಿಚಾರ ಸೂತ್ರವನು ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಮಾತು ಅವನ ವಿನಯಾವಿಷ್ಕಾರ ಮಾತ್ರ: ಏಕೆಂದರೆ ಮುಂದಿನ ಪದ್ಯದಲ್ಲಿಯೇ 'ಹಲಗೆ ಬಳಪವ ಪಿಡಿಯದ' ಮುಂತಾದ ತನ್ನ ಅಗ್ಗಳಿಕೆಯ ವಿವರಗಳನೆಲ್ಲ ಕೊಡುವುದು ಮಾತ್ರವಲ್ಲದೆ, ತನ್ನ ಕಾವ್ಯಫಲವನ್ನು ಭಿನ್ನರುಚಿಯ ಜನರಿಗೆಲ್ಲ ಹಂಚಿ ಹೇಳುವಾಗ ಸ್ಪಷ್ಟವಾಗಿ "ವಿದ್ಯಾಪರಿಣತರಲಂಕಾರ ಕಾವ್ಯಕೆ ಗುರುವೆನಲು" ಎಂಬ ನುಡಿಯನ್ನಾಡಿದ್ದಾನೆ ಕುಮಾರವ್ಯಾಸ. ಕೃಷ್ಣ ಮಹಿಮಾವರ್ಣನೆಯಿಂದ ಈ ಭಾರತಕ್ಕೆ ಪಾವನತ್ವ ಬಂದಂತೆ ವಿದ್ಯಾಪರಿಣತರು ರಸೋಚಿತವೆಂದು ತಲೆದೂಗುವಂತಹ ಅಲಂಕಾರಗಳಿಂದಲೇ ಅದಕ್ಕೆ ಭಾರವತ್ತ್ವ ಅಥವಾ ಚಮತ್ಕಾರವೂ ಬಂದಿದೆಯೆಂಬ ಕವಿವಿವಕ್ಷೆ ಮನನೀಯವಿದೆ.

ಕಥನಕಾವ್ಯದಲ್ಲಿ ಕಥಾಭಾಗವೊಂದಿರುವಂತೆ ವರ್ಣನಾಭಾಗವೂ ಒಂದಿರುವುದು ವಾಡಿಕೆ. ಸಾಮಾನ್ಯವಾಗಿ ಕಥಾಂಶದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿರುವ ವರ್ಣನಾಂಶವು ರಸಪುಷ್ಟಿಗೆ ಕಾರಕವಾಗಿರುತ್ತದೆ. ವಿದ್ಯಾಪರಿಣತರಲ್ಲದವರು ಕೇವಲ ಕಥೆಯಿಂದಲೇ ಚಮತ್ಕಾರವುಂಟಾಯಿತೆಂದುಕೊಳ್ಳಬಹುದು. ಆದರೆ ಪರಿಣತರು ಚಮತ್ಕಾರಾಂಶವನ್ನು ಕವಿಯ ಭಾವದಲ್ಲಿಯೂ ಭಾಷೆಗಳಲ್ಲಿಯೂ ವಿವರವಾಗಿ ನೋಡಿ ಮೆಚ್ಚಿಯೇ ಕವಿಶಕ್ತಿಗೆ ತಲೆದೂಗುತ್ತಾರೆ.

ಕವಿಯ ಅಭಿಪ್ರಾಯವೇ ಭಾವ: ಇದು ಬಿಂಬ. ಅದರ ವಾಹಕವೇ ಭಾಷೆ: ಇದು ಪ್ರತಿಬಿಂಬ. ಪ್ರತಿಬಿಂಬದ ಮೂಲಕ ಬಿಂಬಗ್ರಹಣೆಯೇ ಭಾವನೆ. ಈ ಭಾವನಾಶಕ್ತಿಯುಳ್ಳವನೇ ಭಾವಕ ಅಥವಾ ವಿಮರ್ಶಕ. ಭಾವೋಚಿತವಾದ ಭಾಷೆಯ ಸೃಷ್ಟಿಯೇ ಕವಿಕರ್ಮ. ಭೂತ-ಭವಿಷ್ಯದ್-ವರ್ತಮಾನಗಳೆಲ್ಲವನ್ನೂ ಪ್ರತ್ಯಕ್ಷವಾಗಿರುವಂತೆ ಅಂತಶ್ಚಕ್ಷುವಿನಿಂದ ಕಾಣಬಲ್ಲ ಕವಿಶಕ್ತಿಯೇ 'ದರ್ಶನ' ಅಥವಾ 'ಭಾವಕತ್ವ' ಅಥವಾ 'ಸಂಭಾವನೆ' ಅಥವಾ 'ಉತ್-ಪ್ರೇಕ್ಷೆ'. ಇಂತಹ ಮಹತ್ತಾದ ದರ್ಶನವನ್ನುಳ್ಳವನೇ 'ಮಹಾಕವಿ'. ಅವನ ಮಹತ್ವವನ್ನಳೆಯಲು ವಿಮರ್ಶಕನಿಗೆ ಇರುವ ಏಕೈಕ ನಿದರ್ಶನವೇ ಭಾಷಾಮಯವಾದ ಮಹಾಕಾವ್ಯ.

ಕವಿಭಾಷೆಯ ಚಮತ್ಕಾರವನ್ನು ವಿವೇಚಿಸುವವರು ತಮ್ಮ ಭಾವನಾಶಕ್ತಿಯನ್ನು ಅವಲಂಬಿಸಿದಾಗ ವಿಮರ್ಶೆ ವೈಯಕ್ತಿಕವಾಗುವ ಸಂಭವವುಂಟು. ಸಕಲ ಸಹೃದಯರೂ ನಿರ್ವಿವಾದವಾಗಿ ಒಪ್ಪುವ ಒಂದು ವಿಮರ್ಶೆಯಾಗಬೇಕಾದರೆ ವಿಮರ್ಶಕನ ಬುದ್ಧಿಶಕ್ತಿಯೇ ಮುಂದಾಗಬೇಕಾಗುತ್ತದೆ. ತರ್ಕಶುದ್ಧಿ ಅಗತ್ಯವಾಗುತ್ತದೆ. ಈ ಬೌದ್ಧಿಕ ವಿವೇಚನೆಯೇ ಅಲಂಕಾರಶಾಸ್ತ್ರ.

ಸರ್ವರೂ ಒಮ್ಮತದಿಂದ ಒಪ್ಪಬಹುದಾದ ಅಲಂಕಾರ ವಿವೇಚನೆಯ ಬೆಂಬಳಿಯಲ್ಲಿ ಸಕಲಕಾವ್ಯವ್ಯಾಪ್ತಿಯಾದ ರೀತಿ-ರಸಾದಿಗಳ ದಿಕ್ಸೂಚನೆ ಸಾಧ್ಯವಾಗುತ್ತದೆ. ಕಾವ್ಯದ ಅಂಗಾಂಗ ಸೌಂದರ್ಯದ ಪರಿಶೀಲನೆಗೆ ಅಲಂಕಾರತತ್ತ್ವವೂ ಸಮಗ್ರಕಾವ್ಯದ ಸಾರ್ಥಕ್ಯದ ಅನುಸಂಧಾನಕ್ಕೆ ರಸತತ್ತ್ವವೂ ಪ್ರಯೋಜನವೆಂದು ಸ್ಥೂಲವಾಗಿ ಹೇಳಬಹುದೆಂದರೂ, ಅವೆರಡರ ಪರಸ್ಪರ ಸಂಶ್ಲೇಷವೇ ಕಾವ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೃಷ್ಟಿಯ ಮರ್ಮ. ಕವಿಯ ರಸಾವೇಶದಿಂದಲೇ ಉಚಿತಾಲಂಕಾರಗಳ ನಿರ್ಮಾಣ ಪ್ರಯತ್ನಾಂತರವಿಲ್ಲದೆ ಸಂಪನ್ನವಾಗುತ್ತದೆ. ಇದೇ ಕವಿವ್ಯಾಪಾರ.

ವಿಷಯಗಳ ಯಥಾರ್ಥ ನಿರೂಪಣೆಯೇ ಶಾಸ್ತ್ರ; ಧರ್ಮಾದಿಗಳ ಪ್ರಚಾರಕ್ಕೆ ಕಥಾನಿರೂಪಣೆ ಪುರಾಣ. ಸ್ವಯಂಕೃತವಾದ ಸ್ವಾನುಭವೈಕವೇದ್ಯವಾದ ಅಂಶಗಳ ಉಚಿತಾಭಿವ್ಯಕ್ತಿಯೇ ಕಾವ್ಯ. ಕಾವ್ಯಭಾಷೆ ಶಾಸ್ತ್ರಭಾಷೆಗಿಂತ ಭಿನ್ನವೂ ಪುರಾಣ ಭಾಷೆಗಿಂತ ಅನ್ಯವೂ ಆದ ಒಂದು ಸ್ವಯಂಪೂರ್ಣ ಔಪಚಾರಿಕ ಭಾಷೆ. ಅದು ಸೌಂದರ್ಯಸಾರವಾದ ಸಾಲಂಕಾರ–ಭಾಷೆ; ವಿಸ್ಮಯಕಾರಿಯಾಗಿ 'ಚಿತ್ರ'ವೆನಿಸುವ ಭಾಷೆ; ಭಾವರಸಾದಿ ವಾಹಕವಾದ ಲೋಕೋತ್ತರ ಸಾಮರ್ಥ್ಯವನ್ನುಳ್ಳ ಭಾಷೆ. ಬಳಕೆಯ ನುಡಿಯಲ್ಲಿಲ್ಲದ ಚೆಲುವನ್ನು ಕವಿಯು ಬಳಕೆಯ ನುಡಿಯಲ್ಲೇ ತಂದು ತೋರಿಸುವ ಅದ್ಭುತ ಸಾಧನವೇ 'ಅಲಂಕಾರ'. ಪೂರ್ವಕವಿಗಳ ಪ್ರಸಿದ್ಧಿಯ ನ್ನಾಶ್ರಯಿಸಿ ವಿನೂತನತ್ವವನ್ನು ಸಾಧಿಸುವುದೇ 'ಕವಿಸಮಯ'. ಇದು ಅಲಂಕಾರ ಮಾರ್ಗದ ಒಂದು ಪ್ರಕಾರವಾದರೆ ಸ್ವಪ್ರತಿಭೆಯ ಸಾಮರ್ಥ್ಯದಿಂದಲೇ ನೂತನತ್ವ ವನ್ನು ಸಾಧಿಸುವುದು ಅಲಂಕಾರ ಮಾರ್ಗದ ಎರಡನೆಯ ಪ್ರಕಾರ. ನಮ್ಮ ಪೂರ್ವ ಕವಿಗಳಿಗೆಲ್ಲ ಈ ಎರಡು ಬಗೆಯ ಅಲಂಕಾರ ಮಾರ್ಗವೂ ಆಶ್ರಯಸ್ಥಾನವೇ. ವರ್ಣನೀಯಾಂಶದ ಮೋಹಕತೆಗೆ ಉಪಮಾದ್ಯಲಂಕಾರಗಳ ಪ್ರಯೋಗವೇ ಪ್ರಬಲ ಸಾಧನವೆಂಬ ಭಾವನೆ ಕುಮಾರವ್ಯಾಸನಿಗೆ ಇದ್ದಂತೆ ಭಾಸವಾಗುತ್ತದೆ. ಅವನು ವರ್ಣಿಸುವ ಕುರುರಾಜ ಸಭೆಯಲ್ಲಿ ವಿರಾಜಮಾನರಾಗಿದ್ದ ಕವಿಗಳು ಎಂತಹವರೆಂದರೆ

ಸಲೆ ಸಮಸ್ಯದನಂತ ಪದ್ಯವ
ಘಳಿಲನನ್ವೈಸುವ ಸುಕಾಂತಿಯ
ಲಲಿತ–ಮಧುರ–ಸಮಾಧಿ–ಸುಕುಮಾರಾದಿ ರಚನೆಯಲಿ।
ಹಲವುಪಮೆ ಉತ್ಪ್ರೇಕ್ಷೆ ರೂಪಕ
ಸುಲಲಿತಾಲಂಕೃತಿ ಚಮತ್ಕೃತಿ
ಗಳ ಚತುರ್ಭಾಷಾವಿಶಾರದ ಕವಿಗಳೊಪ್ಪಿದರು (ಉದ್ಯೋಗಪರ್ವ. 37)

ಸಮಸ್ಯಾಪೂರಣ ಮಾಡಿ ಆಪಾತತಃ ಅನನ್ವಿತಾರ್ಥಗಳಾದ ಆ ಸಮಸ್ಯಾಶ್ಲೋಕ ಗಳನ್ನು ಅರ್ಥಕ್ಕನುಸಾರವಾಗಿ ಅನ್ವಯ ಮಾಡುವ ಸಾಮರ್ಥ್ಯ ಮಾಧುರ್ಯ ಲಾಲಿತ್ಯಾದಿ ಕಾವ್ಯಗುಣಭರಿತ ರಚನೆಯಲ್ಲಿ ಉಪಮೆ ಉತ್ಪ್ರೇಕ್ಷೆ ರೂಪಕ ಮುಂತಾದ ವಿವಿಧಾಲಂಕಾರಗಳ ಚೆಲುವಿನ ಚಮತ್ಕಾರ ಸಂಪಾದನೆ—ಇವೇ ರಾಜಸಭಾಕವಿಗಳ ಮುಖ್ಯಕರ್ಮವಾಗಿರುತ್ತಿತ್ತು. ಇದನ್ನು ಅರಿತು ಮೆಚ್ಚಲಾರದವರಿಗೆ ಸಾಹಿತ್ಯ ವಿದ್ದೂ ಇಲ್ಲದಂತೆ ನಿರರ್ಥಕ, ಅವರು ಕುರುಡ ಕಿವುಡರಿಗೆ ಸಮರಾದ ಮೂರ್ಖ ರೆಂದು ಕುಮಾರವ್ಯಾಸನೇ ನುಡಿಯುತ್ತಾನೆ:—

ಏಕೆ ಕನ್ನಡಿ ಕುರುಡರಿಗೆ ತಾ
ನೇಕೆ ಸಾಳಗ ಶುದ್ಧಬಧಿರರಿ
ಗೇಕೆ ಮೂರ್ಖ ಸಮಾಜದಲಿ ಸಾಹಿತ್ಯಸನ್ನಾಹ? (ಸಭಾಪರ್ವ. ix. 36).

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಕಾವ್ಯಕ್ಕೆ ಮುಖ್ಯವಸ್ತು ಯಾವದೆಂದರೆ ದೇವಸ್ತುತಿಯೇ ಎಂಬುದು ಕವಿಯ ನಿರ್ಣಯ. ಇದು ಭಕ್ತಿಯುಗದ ಕವಿಗಳಿಗೆಲ್ಲ ಸಮ್ಮತವಾದ ಮಾತು:—

ಪತಿಯುಳಿದ ಸತಿಯಿರವು, ಕಾಯಕ
ರತುನವಿಲ್ಲದ ಪದಕ, ದೈವ
ಸ್ತುತಿಗಳಿಲ್ಲದ ಕಾವ್ಯರಚನಾಭಾವದಂದವಲಿ...(ದ್ರೋಣಪರ್ವ, viii, 18)

ಆದರೆ ಅದರ ಪರಮಪ್ರಯೋಜನವೆಂದರೆ ಸಹೃದಯನ ರಸಾನುಭೂತಿಯೇ—

ಸಾಳಗದ ಸಮ್ಮೋಹನದ ಮಳೆ
ಗಾಲವೋ? ಗೀತವೊ? ರಸಾಳಿಯ
ಕಾಲುವೆಯೊ? ನವಕಾವ್ಯಬಂಧದ ಸಾರಸಂಗತಿಯೋ...(ಆದಿಪರ್ವ, xii, 20)

ಹೀಗೆ ಕವಿಯ ಪ್ರಾಸಂಗಿಕ ಉಕ್ತಿಗಳಿಂದಲೇ ಕಾವ್ಯದ ಬಗೆಗಿನ ಅವನ ಅಭಿಪ್ರಾಯಗಳನ್ನು ತಿಳಿಯಬಹುದಾಗಿದೆ. ಈ ಮೇಲೆ ಉದಾಹರಿಸಲಾದ ಉಕ್ತಿಗಳೇ ಕ್ರಮವಾಗಿ "ಪ್ರತಿವಸ್ತೂಪಮೆ", "ವಿನೋಕ್ತಿ", "ಸಸಂದೇಹ" ಎಂಬ ಮೂರು ಅಲಂಕಾರಗಳಿಗೆ ಸುಂದರ ನಿದರ್ಶನಗಳೂ ಆಗಿರುವುದನ್ನು ರಸಿಕರು ಗಮನಿಸಿರಬೇಕು.

ಈಗ ಕವಿಸಮಯಗಳನ್ನು ಕುಮಾರವ್ಯಾಸನು ಬಳಸುವ ಪರಿಯನ್ನು ನೋಡೋಣ. ದುರ್ಯೋಧನನ ಪಾಳೆಯದ ವಾರನಾರಿಯರು ದ್ವೈತವನದ ತಪಸ್ವಿಗಳನ್ನು ಕೆಣಕುತ್ತಾರೆ. ಅವರ ಮಾತಿನ ಮಾಲೆಯನ್ನು ಕವಿಸಮಯಗಳ ಮೂಲಕ ಕುಮಾರವ್ಯಾಸ ಚಿತ್ರಿಸುವ ಪರಿಯಿದು:—

ಒದೆದು ಪದದಲಿ ಕೆಂದಳಿರ ತೋ
ರಿದೆವಶೋಕೆಗೆ, ಮದ್ಯಗಂಡೂ-
ಷದಲಿ ಬಕುಳದ ಮರನ ಬುಲ್ಲವಿಸಿದೆವು, ಕುರವಕಕೆ ।
ತುದಿಮೊಲೆಯ ಸೋಂಕಿನಲಿಹೂದೋ
ರಿದೆವು, ಕಣ್ಣೋರೆಯಲಿ ತಿಲಕವ
ಕದುಕಿದೆವು, ನೀವಾವ ಘನ ಪದವೆಂದರಬಲೆಯರು (ಅರಣ್ಯಪರ್ವ, xviii, 13)

ಇಲ್ಲಿ ಎಡಗಾಲಿಂದ ಒದ್ದು ಅಶೋಕವನ್ನು ಚಿಗುರಿಸುವದು, ಮದ್ಯವನ್ನು ಮುಕ್ಕಳಿಸಿ ಬಕುಳವನ್ನರಳಿಸುವುದು, ತುದಿಮೊಲೆಯ ಆಲಿಂಗನದಿಂದ ಕುರವಕವನ್ನು ಹೂಬಿಡಿಸುವುದು, ಕಣ್ಸನ್ನೆಯಿಂದ ತಿಲಕವನ್ನು ಹೂವಿಂದ ತುಂಬಿಸುವುದು — ಇವೇ ಮುಂತಾದ ಅಬಲೆಯರ ಸಾಹಸಕ್ರೀಡೆಗಳೆಲ್ಲ ಪೂರ್ವಕವಿಗಳ ಸಮಯದಿಂದ ಮಾತ್ರ ಆಯ್ದು ತಂದವು. "ಪಾದಾಘಾತಾದಶೋಕಃ ವಿಕಸತಿ ಬಕುಳಃ ಸೀಧುಗಂಡೂಷಸೇಕಾತ್" ಇತ್ಯಾದಿ ಪ್ರಾಚೀನ ಪದ್ಯದ ಮಾರ್ದನಿಯೇ ಇಲ್ಲಿದೆ. ಆದರೆ ಅದನ್ನು ಕುಮಾರವ್ಯಾಸ ಮಹಾಭಾರತದ ಉದಾತ್ತಸ್ತ್ರೀಯರಾರಿಗೂ ಅನ್ವಯಿಸದೆ, ಪಾಳೆಯದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂಳೆಯರ ಹಾವಭಾವಗಳಿಗೆ ಅನ್ವಯಿಸಿ ಹೇಳುವಾಗ ಎಷ್ಟೊಂದು ಔಚಿತ್ಯವನ್ನು ತೋರಿಸಿದ್ದಾನೆ ! ಇವರು ಕಾಮವಿಲಾಸದಲ್ಲಿ ಚದುರೆಯರೆಂದು ಸೂಚಿಸಲು ಈ ಕವಿಸಮಯವೂ ತುಂಬಾ ಪ್ರಯೋಜನಕವಾಗುತ್ತದೆ. ಅಲ್ಲದೆ ಈ ಸನ್ನಿವೇಶದಿಂದ ಇಲ್ಲಿ ಸುಳಿಯುವ ಹಾಸ್ಯರಸವೂ ಕವಿಸಮಯದಿಂದ ಮತ್ತಷ್ಟು ಪುಷ್ಟಿಗೊಳ್ಳುತ್ತದೆ ; ಕಾವ್ಯಕ್ಕೆ ಒಂದು ವಿನೂತನವಾದ ಕಳೆಯೇರುತ್ತದೆ.

ಪ್ರಕೃತಿವರ್ಣನೆಗೆ ಕವಿ ಹೊರಡುವದೇ ತಡ, ಅಚೇತನಗಳಲ್ಲಿಯೂ ಚೈತನ್ಯ ಸಂಚಾರ ಮಾಡಿಸುವ ಔಪಚಾರಿಕ ಪ್ರಯೋಗಗಳೂ ಪರಿಪರಿಯ ಅಲಂಕಾರಗಳೂ ಅಹಮಹಮಿಕೆಯಿಂದ ಮುನ್ನುಗ್ಗಿ ಬರುವುದನ್ನು ನೋಡುತ್ತೇವೆ. ವಸಂತವರ್ಣನೆಯಲ್ಲಿ ಬರುವ ಒಂದು "ಸ್ವಭಾವೋಕ್ತಿ" ಯಿದು :—

ತೆಗೆದುದಗ್ಗದ ತಂಪು ನದಿಸರ
ಸಿಗಳ ತಡಿಯಲಿ, ಹೆಜ್ಜೆಯಾದುದು
ಹಗಲು, ಹಾವಸೆ ಹರಿದು ಹೊಕ್ಕರಿಸಿದುದು ಹಿಮಜಲವ ।
ಸೊಗಸಿದವು ನೆಳಲುಗಳು, ದೂರಕೆ
ಸೆಗಳಿಕೆಗಳೇರಿದವು ತಂಗಾ
ಳಿಗೆ ವಿಹಾರಿಸಿ ಮೈಯ ತೆತ್ತುದು ಕೂಡೆ ಜನನಿಕರ ॥

(ಆದಿಪರ್ವ, V, 5)

ಇಲ್ಲಿ ಚಳಿ, ಹಗಲು, ಹಾವಸೆ, ನೆಳಲು, ತಂಗಾಳಿ—ಎಲ್ಲಕ್ಕೂ ಕವಿ ಜೀವದಾನ ಮಾಡಿ ಅವು ಬುದ್ಧಿಪೂರ್ವಕವಾಗಿ ಒಂದೊಂದು ಕಾರ್ಯಮಾಡಿದಂತೆ ವರ್ಣಿಸಿದ್ದಾನೆ. ಚಳಿ ಹೋಗಿ, ಹಗಲು ಹೆಚ್ಚಿ, ಹಿಮವಡಗಿ, -ತಂಗಾಳಿ ಬೀಸಿದ ಸ್ವಭಾವೋಕ್ತಿಯೊ ಅಪೂರ್ವರಮಣೀಯತೆಯಿಂದ ತುಂಬುವಂತೆ ತನ್ನ ಕಲ್ಪನಾವೈಭವವನ್ನು ಮೆರೆದಿದ್ದಾನೆ. ಇಂಗ್ಲೀಷಿನಲ್ಲಿ Personification ಎಂಬ ಅಲಂಕಾರವೇ ಇದು. ನಮ್ಮ ಅಲಂಕಾರಿಕರು ಇದನ್ನು ಲಾಕ್ಷಣಿಕ ಪ್ರಯೋಗವೆನ್ನುತ್ತಾರೆ.

ಒಂದು ರೂಪಕದ ಮೆರುಗಿಗಿಂತ ಒಂದು ಮೂಲರೂಪಕ ಅಥವಾ ರೂಪಕ ಪರಂಪರೆಯ ಚಮತ್ಕಾರ ತುಂಬಾ ಪ್ರಭಾವಶಾಲಿಯಾಗುತ್ತದೆ. ಉದಾಹರಣೆಯಾಗಿ ವಸಂತ ಸಮಯದ ಉದಯವು ಪಾಂಡುಮಹಾರಾಜನ ಅವಸಾನಕ್ಕೆ ಸಂಕೇತದಂತಿದ್ದುದನ್ನು ಸೂಚಿಸಲೋ ಎಂಬಂತೆ ಕವಿ ಕೊಡುವ ಈ ರೂಪಕಮಾಲೆಯನ್ನು ನೋಡಿ:—

ಯೋಗಿಗೆತ್ತಿದ ಖಡುಗಧಾರೆ ವಿ
ಯೋಗಿಗೆತ್ತಿದ ಸಬಳವಖಿಳ ವಿ
ರಾಗಿಗಳ ಹೆಡತಲೆಯ ದಡಿ ನೈಷ್ಠಿಕರಿಗಲಗಣಸು ।
ಆಗಮಿಕರೆದೆಶೂಲ ಗರ್ವಿತ
ಗೂಗೆಗಳ ನಖಿಸಾಳವಗ್ಗದ
ಭೋಗಿಗಳ ಕುಲದೈವವೆಸೆದುದು ಕುಸುಮಮಯ ಸಮಯ ॥ (ಆದಿಪರ್ವ, V, 6)

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊರೆವ ತುಂಬಿಯ ಗಾಯಕರ ನಯ
ಸರದ ಕೋಕಿಲ ಪಾಠಕರ ಬಂ
ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ।
ಅರಳಿದಂಬುಜಸತ್ತಿಗೆಯ ಮಂ
ಜರಿಯ ಕುಸುಮದ ಚಾಮರದ ಚಾ
ತುರ ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ॥ (ಅದೇ. 7)

ಈ ದಾಳಿಯ ಮುಂದೆ ವಿಯೋಗಿ ನಿಂತಾನೆ? ಅದರ ಹೊಡೆತಕ್ಕೆ ಸಿಕ್ಕಿ ಸಿಗ್ಗಾಗಿ ಸಗ್ಗವನ್ನೈದುವನು.

ಇಡಿಯ ಮಹಾಭಾರತದ ವೃತ್ತಾಂತವನ್ನು ಸತ್ಯವತಿಗೆ ಒಂದೇ ಮಾತಿನಲ್ಲಿ ಹೇಳಿಯೂ ಹೇಳದಂತೆ ಸೂಚಿಸಿ ತಪೋವನಕ್ಕೆ ಅವಳನ್ನು ಕಳುಹುವ ಕೆಳಗಿನ ವ್ಯಾಸೋಕ್ತಿಯಲ್ಲಿ ಆಕ್ಷೇಪಾಲಂಕಾರವನ್ನು ಗಮನಿಸಬಹುದು:—

ಹೇಳತೀರದು ಮುಂದಣದು ದು
ಷ್ಕಾಲವಿಂದಿಗೆ ನಾಳೆ ನಾಳೆಗೆ
ನಾಳೆ ಬೆಟ್ಟಿತು ವರ್ಣಧರ್ಮಾಶ್ರಮದ ನೆಲೆಹೋಯ್ತು। (ಆದಿಪರ್ವ. 31)

ವಿಷಮಾಲಂಕಾರದ ಸೊಗಸಿಗೆ ದ್ರೋಣ–ದ್ರುಪದರ ಸಂವಾದದಲ್ಲಿ ಬರುವ ಕೆಳಗಿನ ಪದ್ಯವನ್ನು ನೋಡಿ. ಮದೋನ್ಮತ್ತನಾದ ದ್ರುಪದನು ದ್ರೋಣನನ್ನು ಅಪಹಾಸ್ಯ ಮಾಡುತ್ತಿರುವ ಸನ್ನಿವೇಶ:—

ಸೂರಿಗಳಿಗತಿ ಮೂರ್ಖರಿಗೆ ಗಂ
ಭೀರರಿಗೆ ಭಂಡರಿಗೆ ವೇದಾ
ಚಾರ ಸಂಯುಕ್ತರಿಗನಾಚಾರ ಪ್ರಸಕ್ತರಿಗೆ।
ಧೀರರಿಗೆ ಹಂದೆಗಳಿಗತ್ತಣ
ಸೇರುವೆಗಳ್ಳೆ ಭೂಪರಿಗೆ ಬಡ
ಹಾರುವರಿಗೆತ್ತಣದು ಸಖತನವೆಂದನಾ ದ್ರುಪದ॥ (ಆದಿಪರ್ವ. 34)

ಈ ಮಹಾಕಾವ್ಯಕ್ಕೆ ನಾಯಿಕೆಯಾದ ದ್ರೌಪದಿಯ ವರ್ಣನೆಗೆ ಮೀಸಲಾಗಿರುವ ಹದಿಮೂರನೆಯ ಸಂಧಿಯಲ್ಲಿ ವಿವಿಧಾಲಂಕಾರಗಳೂ ತಳತಳಿಸುತ್ತವೆ. ಕವಿಯ ಕಲ್ಪನೆ ಗರಿಗೆದರಿ ಉತ್ಪ್ರೇಕ್ಷೆ ಅತಿಶಯೋಕ್ತಿಗಳ ಮೂಲೆಮೂಲೆಗಳನ್ನು ನೇಯುವ ವೇಗದಲ್ಲಿಯೇ ಅನುಪ್ರಾಸಾದಿ ಶಬ್ದಾಲಂಕಾರಗಳೂ ಸಾಲ್ಗೊಂಡು ಸ್ಪರ್ಧಿಸುತ್ತ ಬರುತ್ತವೆ:

ನಾರಿಯನು ಸಂಸಾರ ಸುಖ ಸಾ
ಕಾರಿಯನು ಜನನಯನಕಾರಾ
ಗಾರಿಯನು ಮುನಿಧೈರ್ಯಸರ್ವಸ್ವಾಪಹಾರಿಯನು।
ಧೀರರಿಗೆ ಮೂರಂಕವನು ವರ
ಪಾರಿಕಾಂಕ್ಷೆಯ ಚಿತ್ತ ಚೌರ್ಯ ವಿ
ಹಾರಿಯನು ದ್ರೌಪದಿಯನಭಿವರ್ಣಿಸುವಪಾರೆಂದ॥ (ಅದೇ. 22)

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ರೌಪದಿಯ ಪ್ರೌಢವರ್ಣನೆಯಲ್ಲಿ ಕುಮಾರವ್ಯಾಸನು ಅಷ್ಟಾಗಿ ಬಳಸದ ಶ್ಲಿಷ್ಟೋಪಮೆಯೂ ಮಿಂಚಿ ಮಾಯವಾಗುತ್ತದೆ :—

ರಾಜಸೂಯದ ಕರ್ತೃವೊರ್ ಜಿತ
ರಾಜಮಂಡಲವಾಯ್ತು ಮುಖವಿದು
ರಾಜರಾಜನ ಪೋಲ್ತುದಳಕಾವೇಷ್ಟಿತತ್ವದಲಿ।

ಇದಕ್ಕಿಂತಲೂ ಸುಲಭವಾದ 'ಶ್ಲೇಷೆ' ಗಳೂ ಹೇರಳವಾಗಿ ಕಾಣಸಿಗುತ್ತವೆ. ಒಂದು ಉದಾಹರಣೆ :—

...ಅವನೀಶ ದೂತರ
ಹರಿಯಬಿಟ್ಟನು ಹರಿಯ ನಿಳಯಕೆ ಹರಿಯ ವೇಗದಲಿ (ಉದ್ಯೋಗಪರ್ವ, viii, 47)

ಉಚಿತ ವಿಶ್ಲೇಷಣೆಗಳ ಮಹಿಮೆಯಿಂದ ಮೂಡುವ 'ಪರಿಕರಾಲಂಕಾರಕ್ಕೆ' ಕೀಚಕನ ಈ ಅನುನಯೋಕ್ತಿಯನ್ನು ನೋಡಿ :—

ಎಳೆನಗೆಯ ಬೆಳದಿಂಗಳನು ನೀ
ತಳಿತು ತಾಪವ ಕಿಡಿಸು ಮಧುರದ
ಮೆಲುನುಡಿಯ ಸುಧೆಯಿಂದ ತೃಷ್ಣೆಯನಕಟ ಪರಿಹರಿಸು।
ಅಳಿಮನದ ಬಡತನದ ನಿನ್ನಯ
ಕಳಶ ಕುಚಲಕ್ಷ್ಮಿಯಲಿ ಕಳೆ ಮನ
ದೊಲವನಿತ್ತಲು ತಿದ್ದಬೇಹುದು ಕಾಂತೆ ಕೇಳೆಂದ॥ (ವಿರಾಟಪರ್ವ, ii, 23)

'ಉತ್ಪ್ರೇಕ್ಷೆ'ಯ ಮಾಲೆಯಿಂದ ಬರುವ ಲೋಕೋತ್ತರ ಸೊಬಗನ್ನು ಈ ಕೆಳಗಿನ ಚಂದ್ರೋದಯವರ್ಣನೆಯಲ್ಲಿ ಕಾಣಬಹುದು :—

ವರದಿಗಂಗನೆಯಿಟ್ಟ ಚಂದನ
ತಿಲಕವೋ ಮನುಮಥನ ರಾಣಿಯ
ಕರದಲಿಹ ಕನ್ನಡಿಯೊ ಮದನದ ಬಿರುದಿನೊಡ್ಡಣವೋ ?
ಸುರತ ವಿರಹಿಯ ಸುಡುವ ಕೆಂಡದ
ಹೊರಳಿಯೋ ಹೇಳೆನಲು ಮಿಗೆ ಹಿಮ
ಕರನು ಜನಿಸಿದ ರಜನಿಮಧ್ಯದೊಳವನಿ ತಳತಳಿಸೆ॥ (ಅದೇ, 50)

'ಸಮಾಸೋಕ್ತಿ'ಯ ರಮಣೀಯತೆಯಿಂದ ಕಂಗೊಳಿಸುವ ಒಂದು ಮಂದಾನಿಲನ ವರ್ಣನೆ ಕೆಳಗಿದೆ. ತಂಗಾಳಿ ಮಾಡುವದೆಲ್ಲವೂ ರಾಜಕಾರ್ಯವೇ.

ಎಳಲತೆಯನೆರಗಿಸುತ ಮಲೆತರೆ
ತಳಿರುಗಳನಲ್ಲಾಡಿ ವರ ಪರಿ
ಮಳದ ಕಪ್ಪವ ಕೊಂಡು ಮರಿದುಂಬಿಗಳ ಗೀತವನು।
ಸಲೆ ಸೊಗಸಿ ಮಕರಂದ ನದಿಯಲಿ
ತಳಿತು ಬೀಡನು ಬಿಡುತ ಜನದಲಿ
ಸುಳಿದುದೈ ತಂಗಾಳಿ ಭೂಮೀಪಾಲನಂದದಲಿ॥ (ಉದ್ಯೋಗಪರ್ವ, 25)

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನನನ್ನು ಸೆರೆಹಿಡಿದು ವಿಮಾನದಲ್ಲಿ ಗಂಧರ್ವನು ಹೋಗುತ್ತಿದ್ದರೆ ಅವನನ್ನು ಬಿಡಿಸಿಕೊಂಡು ಬರಲೆಂದು ಪಾರ್ಥನು ಧಾವಿಸುತ್ತಾನೆ. ಆಗ ಗಂಧರ್ವ ನಾಡುವ ಮಾತುಗಳು ಪಾರ್ಥನ ಅವಿವೇಕವನ್ನು ಬಯಲಿಗೆಳೆಯುತ್ತವೆ. ಮಾತುಗಳಿಗೆ ಮೊನೆಯನ್ನು ತಂದಿತ್ತಿರುವದು 'ದೃಷ್ಟಾಂತಾಲಂಕಾರ'ದ ಛಾಯೆ :—

ಹೋದಮಾರಿಯ ಕರೆದು ಮನೆಯೊಳ
ಗಾದರಿಸಿದವರುಂಟೆ? ನೀರಲಿ
ನಾದ ಕೆಂಡವನುರುಹಿ ಮುಡಿದವರುಂಟೆ ಮಂಡೆಯಲಿ?
ಕೈದು ಮುರಿದೊಡೆ ಹಗೆಗೆ ತನ್ನಯ
ಕೈದು ಕೊಟ್ಟವರುಂಟೆ? ಕುರುಪತಿ
ತೀದಡೀತನ ಬಿಡಿಸಿಕೊಂಬರೆ ಲೇಸು ಲೇಸೆಂದ ॥ (ಅರಣ್ಯಪರ್ವ, xx, 32)

ಆದರೆ ಕುಮಾರವ್ಯಾಸನಿಗೆ ಎಲ್ಲಕ್ಕಿಂತ ಮೆಚ್ಚಿನ ಅಲಂಕಾರವಾವುದೆಂದು ಹೇಳಬೇಕಾದರೆ 'ಅತಿಶಯೋಕ್ತಿ'ಯೇ ಸರಿ. ಅವನ ಯುದ್ಧವರ್ಣನೆಯಲ್ಲೆಲ್ಲ ಇದು ತಾನೇ ತಾನಾಗಿ ವಿಜೃಂಭಿಸುತ್ತದೆ. ರಣರಂಗ ಒಂದು 'ನೂತನ ಸೃಷ್ಟಿ'ಯೇ ಆಯಿತೆಂದು ಕವಿ ವರ್ಣಿಸುವ ಪರಿಯಿದು :—

ಸುರಿವ ಗಜಮದಧಾರೆಯಲಿ ಹೊಸ
ಶರಧಿಗಳು ಸಂಭವಿಸಿದವು ನೃಪ
ವರರ ಮಕುಟದ ಮಣಿಯೊಳಾದರು ಚಂದ್ರಸೂರಿಯರು।
ಗಿರಿಗಳಾದವು ದಂತಿಯಲಿ ಪಡಿ
ಧರಣಿಯಾದವು ಛತ್ರಚಮರದ
ಲರರೆ ನೂತನ ಸೃಷ್ಟಿಯಾಯ್ತು ವಿರಿಂಚಿಸೃಷ್ಟಿಯಲಿ ॥ (ಭೀಷ್ಮಪರ್ವ, i, 49)

ವೀರ ಅಭಿಮನ್ಯುವನ್ನು ಮರಿದುಂಬಿಯೆಂದು ವರ್ಣಿಸಲು ಹೊರಟ ಕವಿ ನೇಯುವ 'ಪರಂಪರಿತ ರೂಪಕ'ವನ್ನಿಲ್ಲಿ ನೋಡಿ :—

ದಳವು ದಳವುಳವಾಯ್ತು ಕೇಸರ
ದೊಳಗೆ ವಿಸಟಂಬರಿದು ಕರ್ಣಿಕೆ
ಯೊಳಗೆ ರಿಂಗಣಗುಣಿದು ಸಂಗರಜಯದ ಮಡುವಿನಲಿ।
ಸಲೆ ಸೊಗಸಿ ತನಿ ಸೊಕ್ಕಿ ದೆಸೆ ಪಟ
ಮಳಿದು ಸೌಭದ್ರೇಯಭೃಂಗನ
ಬಿಲುದನಿಯ ಭರವಂಜಿಸಿತು ಜಯಯುವತಿವಿರಹಿಗಳ ॥ (ದ್ರೋಣಪರ್ವ, vi, 31)

ಆತನು ಅಸಮಸಾಹಸದಿಂದ ವೈರಿ ಸಮೂಹವನ್ನು ಮುರಿದು ಕಡೆಗೆ ಮೃತ್ಯುವಶನಾಗುವುದಕ್ಕೆ ಕವಿಯು ಕೊಡುವ ಸುಂದರ 'ಉಪಮೆ'ಗಳನ್ನು ಇಲ್ಲಿ ನೋಡಿ :—

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಳುಕಿಚ್ಚಿದ್ದವಿಯನು ಕುಡಿ
ನಾಲಗೆಯೊಳಳವಡಿಸಿ ದಳ್ಳುರಿ
ಜ್ವಾಲೆ ತಗ್ಗಿದವೋಲು ಗಗನದ ಮುಗಿಲ ಮೋಹರವ ।
ದಾಳಿಯುಲಿಯುರೆಯಟ್ಟಿ ಸುಂಟರು
ಗಾಳಿಯುರವಣೆ ನಿಂದವೊಲು ಸುರ
ಪಾಲತನಯನ ತನಯನಸ್ತ್ರಮಿಸಿದನು ರಣದೊಳಗೆ (ಅದೇ. 60)

ಏಕಾಕಿಯಾಗಿ ವೈಶಂಪಾಯನ ಸರೋವರದ ಕಾಡುದಾರಿಯಲ್ಲಿ ತಲೆಮರೆಸಿಕೊಂಡು ಹೋಗುತ್ತಿರುವ ಕುರುಕುಲಾರ್ಕನ ಶೋಚನೀಯ ಸ್ಥಿತಿಯನ್ನು 'ವಿಷಮಾಲಂಕಾರ'ದಿಂದಲೇ ಸಂಜಯನು ಸೂಚಿಸುತ್ತಾನೆ:—

ಶಶಿರುಚಿಗೆ ಸೈರಿಸದ ಸಿರಿಮುಡಿ
ಬಿಸಿಲ ಸೆಕೆಗಾಂತುದೆ? ಸುಗಾಢ
ಪ್ರಸರ ಪೂರ್ಣ ಘ್ರಾಣವೀ ಹಳಿವೆಣನ ಪೊಲಸಿನಲಿ ।
ಉಸುರುದೆಗಪಾದುದೆ? ಸುಗೀತದ
ರಸದ ಮಧುವಿಂಗಾಂತ ಕವಿ ವಾ
ಯಸ ಸೃಗಾಲಧ್ವನಿಗೆ ಸೊಗಸಿತೆ ತಂದೆ ಕುರುರಾಯ? (ಗದಾಪರ್ವ, xv. 20)

ಮನಸ್ಸಿನೊಳಗೆ ಏಕಕಾಲದಲ್ಲಿ ಮೂಡಿ ಗಜಿಬಿಜಿಯೆಬ್ಬಿಸುವ ಅನೇಕ ಭಾವಗಳ ಹಾವಳಿಯನ್ನು ಆಲಂಕಾರಿಕ ಶೈಲಿಯಿಂದಲೇ ಕವಿ ಸಮರ್ಥವಾಗಿ ಬಣ್ಣಿಸುವುದನ್ನು ಕೆಳಗಿನ ಪದ್ಯಗಳಲ್ಲಿ ನೋಡಬಹುದು:—

ಚೆರಗು ಬೆಳೆದುದು ಮನದ ಮಿಡುಕಿನ
ಮರುಕ ಮುಂದಲೆಗೊಟ್ಟುದರಿವಿನ
ಸೆರಗು ಹಾರಿತು ಲಜ್ಜೆ ಬೆಳಗಿತು ಬಿಟ್ಟ ಬೀದಿಯಲಿ ।
ಉರುಬಿತಪಪದೆಸೆ ರಾಜ್ಯಲಕ್ಷ್ಮಿಯ
ತುರುಬು ಕೈದೊಳಸಾಯ್ತು ಹಗೆಗಾ
ನರಿಯೆನರಸನ ವಿರಸ ಚೇತೋಭಾವಭಂಗಿಗಳ ॥ (ಸಭಾಪರ್ವ, xi, 28)

ನೀತಿನಿರೂಪಣೆಯ ಪ್ರಸಂಗಗಳಲ್ಲೂ ಅಲಂಕಾರಗಳಿಂದ ಪ್ರಯೋಜನವಿಲ್ಲದಿಲ್ಲ. ಬಾಹುಬಲಕ್ಕಿಂತ ಧರ್ಮಬಲವೇ ಹೆಚ್ಚೆಂದು ನಿರ್ಣಯಿಸುವಾಗ ಕವಿ ಬಳಸುವ 'ಅಪಹ್ನುತಿ' ಅಲಂಕಾರವನ್ನು ನೋಡಿ:—

ಬಾಹುಬಲ ಬಲವಲ್ಲ ದೈವ
ದ್ರೋಹಿಗಳಿಗೆ ಸುಧರ್ಮ ನಿಷ್ಠುರ
ಸಾಹಸವು ಕಿರಿದಾದೊಡೆಯು ಕೊಯ್ವುರು ವಿರೋಧಿಗಳ ॥...
(ಅರಣ್ಯಪರ್ವ, xv. 19)

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವ್ಯದ ಕಡೆಗೆ ನಿಲ್ಲುವ ಜೀವನಸಂದೇಶವೆಂದರೆ:—

ಧರ್ಮವೆಲ್ಲಿಹುದಲ್ಲಿ ಜಯ, ಸ
ತ್ಕರ್ಮವೆಲ್ಲಿಹುದೆಲ್ಲಿ ಸಿರಿ ಸ
ದ್ಧರ್ಮ ಸಂರಕ್ಷಕರು ಹರಿ ಧೂರ್ಜಟಿ ಪಿತಾಮಹರು । (ಗದಾಪರ್ವ, 7)

ಈ 'ಸಮುಚ್ಚಯ' ವಾದರೂ ಒಂದು ಅಲಂಕಾರವೇ ಸರಿ.

ಭಕ್ತಿಭರದಿಂದ ಕುಮಾರವ್ಯಾಸನು ದೇವತಾಸ್ತೋತ್ರದಲ್ಲಿ ಮೈಮರೆಯುವಾಗ ಕೂಡ ಪ್ರಾಸಮಯ ಶಬ್ದವಿನ್ಯಾಸವೇ ಅಲಂಕಾರವಾಗಿ ಬೆಳಗುತ್ತದೆ; ಪರಮೇಶ್ವರನ ಪಾರಮ್ಯಭಾವಕ್ಕೆ ಪ್ರತೀಕವಾಗುವ ಭಾವಸ್ಪಂದಿಯಾದ ಭಾಷೆಯಾಗುತ್ತದೆ; 'ವಿರೋಧಾಭಾಸ'ವೂ ಸಹಜವಾಗಿ ಮೈಗೂಡುತ್ತದೆ:—

ರೂಪರಹಿತ ಸರೂಪ ನಿರ್ಮಲ
ರೂಪ ವಿಶ್ವಾಧಾರ ಸದಸ-
ದ್ರೂಪರೂಪ ವ್ಯೋಮರೂಪಕ ಸರ್ವತೋರೂಪ ।
ರೂಪರಸಗಂಧಾದಿ ವಿಜಯವಿ
ರೂಪ ರೂಪಾತೀತ ಸಂವಿ
ದ್ರೂಪ ವಿಮಲ ವಿರೂಪ ಲೋಚನ ಕರುಣಿಸುವುದೆಂದ ॥

(ಅರಣ್ಯಪರ್ವ, vi. 85)

ಹೀಗೆ ಕುಮಾರವ್ಯಾಸನ ಕಥನಕಲೆಗೆ ಅಲಂಕಾರಕೌಶಲವು ಕಳಸವಿಟ್ಟಿರುವುದಷ್ಟೇ ಅಲ್ಲ, ಅವನ ಕವಿತಾವಿಲಾಸದ ಮೂರ್ತ ಮಾಧ್ಯಮವೂ ಆಗಿದೆ. ಅವನ ಭಾವಾಭಿವ್ಯಕ್ತಿಗೆ ಅದು ಪೋಷಕವಾಗಿರುವಂತೆಯೇ ಅವನ ಸೌಂದರ್ಯದೃಷ್ಟಿಗೆ ದ್ಯೋತಕವೂ ಆಗಿದೆ. ಧರ್ಮನಿರೂಪಣೆಯಿರಲಿ, ಭಕ್ತಿಪ್ರಕಟನೆಯಿರಲಿ, ಶೃಂಗಾರಾದಿರಸಗಳ ವಿಭಾವಾದಿ ಸಂಯೋಜನೆಯಿರಲಿ,—ಎಲ್ಲೆಡೆಗಳಲ್ಲಿಯೂ ತನ್ನದೇ ಆದ ಹೊಂಬೆಳಗನ್ನು ಬೀರುತ್ತಿರುವ ಅಲಂಕಾರಪ್ರಭೆ ಕುಮಾರವ್ಯಾಸನ ಕಾವ್ಯದುದ್ದಕ್ಕೂ ಮೋಹಕವಾಗಿ ಪಸರಿಸುತ್ತದೆ. ಸುಪ್ರಸಿದ್ಧ ಪೂರ್ವದ ಕವಿಸಮಯವಿರಲಿ, ಸುಪರಿಚಿತ ರೂಪಕಾದಿಗಳೇ ಇರಲಿ, ಎಲ್ಲ ಪ್ರಕಾರಗಳಿಗೂ ಹೊಸತನವನ್ನು ತುಂಬಿಸುವ ನವೋಲ್ಲೇಖಿನ ಶಕ್ತಿ ಕುಮಾರವ್ಯಾಸನ ಸಹಜಪ್ರತಿಭೆಯಲ್ಲಿ ಅಪಾರವಾಗಿದೆ. ಪೂರ್ವಾಕವಿಗಳ ಅನುಸರಣೆಯಿದ್ದಾಗಲೂ ಅದು ಕೇವಲ ಅನುಕರಣೆಯೆಂದು ತೋರದಂತಿದೆ. ಅಲ್ಲೊಂದು ಇಲ್ಲೊಂದು ಪದ್ಯಗಳನ್ನು ಆಯ್ದು ಬರೆದ ಈ ಲೇಖನದಲ್ಲಿ ಕುಮಾರವ್ಯಾಸನ ಅಲಂಕಾರ ಪ್ರೌಢಿಮೆಯ ಪೂರ್ಣಪರಿಚಯ ಅಶಕ್ಯ, ಆದರೂ ದಿಗ್ದರ್ಶನವಾದೀತೆಂದು ನಂಬಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾ. ಗೋ.

ಓ ನನ್ನ ಜನವೇ! ಒಂದು ಪರಿಶೀಲನೆ

ನಾವು ಅನೇಕ ಸಲ ನಮ್ಮ ಕವಿಗಳಿಗೆ—ಅದರಲ್ಲೂ ನಮ್ಮ ಮುಖ್ಯ ಕವಿಗಳಿಗೆ ಯಾವುದೋ ಒಂದು ಲೇಬಲ್ ಹಚ್ಚಿ ಅವರನ್ನು ನಮ್ಮ ಆ ಲೇಬಲ್ಲಿನ ಮಾದರಿಯನ್ನಾಗಿ ಮಾಡಿಬಿಡುತ್ತೇವೆ ಮತ್ತು ಬೇರೆ ಯಾವುದೇ ರೀತಿಯ ವಿಚಾರಗಳನ್ನಾಗಲಿ, ಭಾವನೆಗಳನ್ನಾಗಲಿ, ಕಾವ್ಯರೀತಿ ಅಥವಾ ಧೋರಣೆಗಳನ್ನಾಗಲಿ ಆ ಕವಿಗಳಲ್ಲಿ —ಅವುಗಳು ಅವರಲ್ಲಿ ಧಾರಾಳವಾಗಿದ್ದರೂ—ನಾವು ಕಾಣಲಾರದವರಾಗುತ್ತೇವೆ. ಹೀಗಾಗುವುದು ಆ ಕವಿಗಳ ತಪ್ಪಾಗಿರದೆ ಅವರ ಏಕಪಕ್ಷೀಯ ಅಥವಾ ಸಂಕುಚಿತ ದೃಷ್ಟಿಯ ವಾಚಕವೃಂದದ ಮತ್ತು ಅದಕ್ಕಿಂತ ಹೆಚ್ಚಾಗಿ ಅದೇ ದೃಷ್ಟಿಯ ವಿಮರ್ಶಕವೃಂದದ ತಪ್ಪಾಗಿರುತ್ತದೆ. ಈ ರೀತಿಯ ಸಂಕುಚಿತ ದೃಷ್ಟಿಯ ಏಕಪಕ್ಷೀಯ ಅರ್ಥೈಸುವಿಕೆಗೆ ಅಥವಾ ಪರಿಭಾವಿಸುವಿಕೆಗೆ ನಮ್ಮ ಎಲ್ಲ ಮುಖ್ಯ ಕವಿಗಳೂ ಹೆಚ್ಚು ಕಡಿಮೆ ತುತ್ತಾಗಿರುತ್ತಾರೆ. ನಾವು "ಕುವೆಂಪು" ಅಂದ ಕೂಡಲೇ ನಮ್ಮ ಕಣ್ಣೆದುರು ಕೇವಲ ಭಾವುಕನೂ, ಕನಸುಗಾರನೂ, ಆದರ್ಶದ ಆಕಾಶ–ಲೋಕದಲ್ಲಿಯೇ ಯಾವಾಗಲೂ ವಿಹರಿಸುವಂಥವನೂ ಆದ ಕವಿಯೊಬ್ಬನ ಚಿತ್ರ ಬರುವುದು, "ಬೇಂದ್ರೆ" ಅಂದಕೂಡಲೇ ಕೇವಲ ಜಾನಪದ ಪ್ರಜ್ಞೆಯ, ಜಾನಪದ ಭಾಷೆಯ ಮತ್ತು ಲಯದ ಜಾಣ ಭಾವಗೀತಕಾರನೊಬ್ಬನ ಚಿತ್ರ ನಮ್ಮ ಕಣ್ಮುಂದೆ ಬರುವುದು, ಅಥವಾ "ಗೋಪಾಲಕೃಷ್ಣ ಅಡಿಗ" ಅಂದ ಕೂಡಲೇ ಕೇವಲ ಆಡುಮಾತಿನ ಲಯದ, ವಿಡಂಬನ ಧೋರಣೆಯ, ನವ್ಯ ವಿಚಾರ ಸರಣಿಯ, ಭಾಷೆಯ ಮತ್ತು ತಂತ್ರದ, ವಿಧ್ವಂಸಕ ಕ್ರಿಯಾತತ್ಪರನಾದ ಮೂರ್ತಿಭಂಜಕ ಕವಿಯೋರ್ವನ ಚಿತ್ರವು ನಮ್ಮ ಕಣ್ಮುಂದೆ ಬರುವುದು ನಾನು ಮೇಲೆ ವಿವರಿಸಿದ ಸಂಕುಚಿತ ಅಥವಾ ಏಕಪಕ್ಷೀಯ ವಿಮರ್ಶ–ದೃಷ್ಟಿಯ ಪರಿಣಾಮವಾಗಿದೆ. ನಿಷ್ಪಕ್ಷಪಾತವಾದ ಮತ್ತು ವಿಶಾಲವಾದ ದೃಷ್ಟಿಯಿಂದ ನೋಡಿದಲ್ಲಿ ನಮ್ಮ ಎಲ್ಲ ಮುಖ್ಯ ಕವಿಗಳ ಕೃತಿಗಳಲ್ಲೂ ನಾವು ಅವರಿಗೆ ಹಚ್ಚಿದ ಲೇಬಲ್ಲುಗಳ ದೃಷ್ಟಿಕೋನಗಳಲ್ಲದೇ ಇನ್ನೂ ಅನೇಕ ವಿಭಿನ್ನವಾದ ದೃಷ್ಟಿಕೋನಗಳು ಮತ್ತು ಧೋರಣೆಗಳು ನಮಗೆ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಕಾಣಸಿಗುತ್ತವೆ. ಆದರೆ, ದುರ್ದೈವದ ಸಂಗತಿ ಎಂದರೆ, ನಮ್ಮ ಮುಖ್ಯ ಕವಿಗಳಲ್ಲಿ ಕಂಡುಬರುವ ಇಂಥ ವಿಭಿನ್ನ–ದೃಷ್ಟಿಕೋನಗಳ ಮತ್ತು ಧೋರಣೆಗಳ ಕೃತಿಗಳು—ಅವು ಎಷ್ಟೇ ಒಳ್ಳೆಯ ಕೃತಿಗಳಾಗಿದ್ದರೂ ನಮ್ಮ ಲೇಬಲ್–ನಿಷ್ಠರಾದ ಮತ್ತು ಲೇಬಲ್–ನಿಷ್ಠರಲ್ಲದ ವಿಮರ್ಶಕರ ಗಮನಕ್ಕೆ ಬಾರದೇ ಹೋಗುತ್ತವೆ. ಶ್ರೀ ಗೋಪಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣ ಅಡಿಗರ "ಓ ನನ್ನ ಜನವೇ !" ಎಂಬ ಪದ್ಯ ಈ ರೀತಿ ವಿಮರ್ಶಕರ ಗಮನಕ್ಕೆ ಬಾರದೇ ಉಳಿದಂಥ ಒಳ್ಳೆಯ ಕೃತಿಗಳಲ್ಲಿ ಒಂದಾಗಿದೆ.

ತಮ್ಮ ಕಾವ್ಯಧೋರಣೆಯಲ್ಲಿ, ಭಾಷೆಯಲ್ಲಿ ಮತ್ತು ಕಾವ್ಯ ತಂತ್ರದಲ್ಲಿ ಬಹು ಮಟ್ಟಿಗೆ ಪಶ್ಚಿಮದಿಂದ ಪ್ರಭಾವಿತರಾದ ಕವಿ ಅಡಿಗರು ಕನ್ನಡನಾಡು ಮತ್ತು ನುಡಿಗಳನ್ನು ಮತ್ತು ಕನ್ನಡ ಜನರನ್ನು ಕುರಿತ ಅಭಿಮಾನ ಮತ್ತು ಪ್ರೇಮಗಳ ವಿಷಯದಲ್ಲಿ ಇನ್ನಿತರ ಯಾವುದೇ ಕನ್ನಡಾಭಿಮಾನಿಗಿಂತ ಕಡಿಮೆಯಿಲ್ಲ ಅನ್ನುವುದನ್ನು ಹಾಗೂ ಕವಿ ಅಡಿಗರ ಕನ್ನಡಾಭಿಮಾನವು ಅತ್ಯಂತ ಉದಾರವಾದದ್ದು, ಮತ್ತು ಅಬ್ಬರ ರಹಿತವಾದದ್ದು ಅನ್ನುವುದನ್ನು ಈ "ಓ ನನ್ನ ಜನವೇ" ಎಂಬ ಕವನವು ಎತ್ತಿ ತೋರಿಸುತ್ತದೆ. ಇಲ್ಲಿ ಇನ್ನೊಂದು ಮುಖ್ಯವಾದ ಮಾತೆಂದರೆ ಈ ಕವನವು ಉಜ್ವಲವಾದ ದೇಶಾಭಿಮಾನದಿಂದ ಕೂಡಿದ್ದರೂ ತನ್ನ ಸೂಕ್ಷ್ಮವಾದ ಕಾವ್ಯಗುಣಗಳಿಗೆ ಎರವಾಗದೆ ಇದ್ದದ್ದು. ನಮ್ಮಲ್ಲಿನ ಬಹುತೇಕ ದೇಶಭಕ್ತಿಯ ಕವಿತೆಗಳು ಸಾಮಾನ್ಯವಾಗಿ ತಮ್ಮ ದೇಶಭಕ್ತಿಯ ತದೇಕ ಲಕ್ಷದಲ್ಲಿ ಮತ್ತು ಅದರ ಆವೇಗದಲ್ಲಿ ಸೂಕ್ಷ್ಮವಾದ ಕಲಾಗುಣಗಳಿಗೆ ಹೆಚ್ಚು-ಕಡಿಮೆ ಎರವಾಗಿ ಬಿಡುತ್ತವೆ. ಮತ್ತು ನಾವಾದರೂ ಅಂಥ ಕವಿತೆಗಳಿಗೆ ಮುಖ್ಯವಾಗಿ ಅವು ಪ್ರೇರಿಸುವ ದೇಶಭಕ್ತಿಯ ಭಾವನೆಗಳಿಗೋಸ್ಕರವಾಗಿ ಮಹತ್ವ ಕೊಡು ತ್ತೇವೆಯೋ ವಿನಾ ಅವುಗಳ ಸೂಕ್ಷ್ಮವಾದ ಕಾವ್ಯಗುಣಗಳಿಗೋಸ್ಕರ ಅಲ್ಲ (ಉದಾ.: 'ವಂದೇ ಮಾತರಂ', 'ಕನ್ನಡ ಬಾವುಟ' ಇತ್ಯಾದಿ). ಆದರೆ ಅಡಿಗರ 'ಓ ನನ್ನ ಜನವೇ !' ಮೇಲಿನ ಮಾತಿಗೆ ಅಪವಾದವಾಗಿದ್ದು ಅನೇಕ ಸೂಕ್ಷ್ಮವಾದ ಕಾವ್ಯಗುಣಗಳಿಂದ ಕೂಡಿದ ಕವನವಾಗಿದೆ.

ಕವನದ ಮೊದಲನೆಯ ನುಡಿಯಲ್ಲಿಯೇ ಕವಿ "ಓ ಬನ್ನಿ ಜನವೆ", "ಓ ನನ್ನ ಜನವೆ" ಎಂಬ ಆತ್ಮೀಯ ಸಂಬೋಧನಾತ್ಮಕ ಪದ ಪ್ರಯೋಗಗಳಿಂದ ಒಮ್ಮೆಲೇ ಆತ್ಮೀಯತೆಯ ವಾತಾವರಣವನ್ನು ನಿರ್ಮಿಸುತ್ತಾರಷ್ಟೇ ಅಲ್ಲದೆ ಒಂದು ಗೂಡುತ್ತಿರುವ ಕನ್ನಡ ನಾಡಿನ ವಿವಿಧ ಪ್ರದೇಶಗಳ ಜನರನ್ನು "ಕನ್ನಡದ ಹೊಲದ ತೆನೆ ತೆನೆಯೆ", 'ಕೂಡುತಿಹ ಕನ್ನಡದ ಹಾಲ ಕೆನೆಯೇ' ಮತ್ತು 'ಬಿರುಗಾಳಿ ಗೊಗ್ಗೂಡಿ ಬಹ ವೇಷ ಕಣಕಣವೆ' ಎಂಬ ಅತ್ಯಂತ ಸುಂದರವಾದ ಮತ್ತು ಸಮರ್ಪಕ ವಾದ ರೂಪಕಗಳ ಮೂಲಕ ಸಂಬೋಧಿಸುತ್ತಾರೆ. ಇಲ್ಲಿ ಕವಿ ಬಳಸಿರುವ ರೂಪಕಗಳು ಅತ್ಯಂತ ಸೂಕ್ಷ್ಮ(subtle)ವೂ ಸಂಕೀರ್ಣ (complex)ವೂ ಸಮರ್ಪಕವೂ (adequate) ಆಗಿವೆ. ಶ್ರೀ ಅಡಿಗರ ಕಾವ್ಯದಲ್ಲಿ ನಾವು ಸರ್ವೇಸಾಮಾನ್ಯವಾಗಿಯೇ ಅತ್ಯಂತ ಸೂಕ್ಷ್ಮವೂ. ಸಂಕೀರ್ಣವೂ, ಶಕ್ತಿಯುತವೂ ಆದ ರೂಪಕಗಳನ್ನು ಮತ್ತು ಪ್ರತಿಮೆಗಳನ್ನು ಕಾಣುತ್ತೇವೆ. ಆದರೆ ಈ ನುಡಿಯಲ್ಲಿ ಅಡಿಗರು ರಚಿಸಿದ ರೂಪಕಗಳು ಅವರು ತಮ್ಮ ಇತರ ಕವಿತೆಗಳಲ್ಲಿ ರಚಿಸಿದ ರೂಪಕಗಳನ್ನು ಸಂಕೀರ್ಣತೆಯುಳ್ಳದಿದ್ದರೂ (ಅಡಿಗರ "ಕೃಷ್ಣನ ಕೊಳಲು",

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾರ್ಥನೆ", "ಭೂತ" "ಹದ್ದು", "ವರ್ಧಮಾನ" ಇತ್ಯಾದಿ ಕವನಗಳಲ್ಲಿ ಕಂಡು ಬರುವ ರೂಪಕಗಳು ಮತ್ತು ಪ್ರತಿಮೆಗಳು ಇಲ್ಲಿಯವಕ್ಕಿಂತ ಹೆಚ್ಚು ಸಂಕೀರ್ಣವಾಗಿವೆ), ಸೂಕ್ಷ್ಮತೆ (subtlety) ಯಲ್ಲಿ ಕೋಮಲತೆ (delicacy) ಯಲ್ಲಿ ಮತ್ತು ಸಮರ್ಪಕತೆ (adequacy) ಯಲ್ಲಿ ಮೀರಿಸಿವೆ ಎಂದೇ ಹೇಳಬೇಕು. ಕನ್ನಡ ನಾಡಿನ ಮೂಲೆ-ಮೂಲೆಗಳಿಂದ ಬಂದು ಒಂದುಗೂಡುತ್ತಿರುವ ಜನರನ್ನು "ಕನ್ನಡದ ಹೊಲದ ತೆನೆತೆನೆಯೋ" ಎಂದು ಕರೆಯುವುದಾಗಲಿ ಅಥವಾ "ಕೂಡುತಿಹ ಕನ್ನಡದ ಹಾಲ ಕೆನೆಯೋ" ಎಂದು ಕರೆಯುವುದಾಗಲಿ ಎಷ್ಟೊಂದು ಅರ್ಥಪೂರ್ಣವಾಗಿದೆ ಮತ್ತು ಸೂಕ್ಷ್ಮಗ್ರಾಹಿಯಾಗಿದೆ ಅನ್ನುವುದನ್ನು ನಾವಿಲ್ಲಿ ಗಮನಿಸಬೇಕು. ಇವುಗಳಲ್ಲಿ ಮೊದಲನೆಯ ರೂಪಕ ಇಡೀ ಕನ್ನಡ ನಾಡನ್ನು ಒಂದು ಫಲವತ್ತಾದ ಹೊಲಕ್ಕೆ ಹೋಲಿಸಿ ನಾಡಿನ ಜೀವಾಳ ಅಥವಾ ಸತ್ವವೆನಿಸುವ ನಾಡ ಜನರನ್ನು ಆ ಹೊಲದ ಬೆಳೆಯ ತೆನೆ–ತೆನೆಗಳಿಗೆ ಹೋಲಿಸುತ್ತದೆ. ಎರಡನೆಯ ರೂಪಕವು ಒಂದುಗೂಡುತ್ತಿರುವ ಕನ್ನಡನಾಡಿನ ಬೇರೆ ಬೇರೆ ಕಡೆಯ ಜನರನ್ನು ಕೂಡುತ್ತಿರುವ ಹಾಲ ಕೆನೆಗೆ ಹೋಲಿಸುತ್ತದೆ. ಕೂಡುತ್ತಿರುವ ಜನರು 'Cream of the land of milk and honey' ಆಗಿದ್ದಾರೆ ಎಂದು ರೂಪಕಾತ್ಮಕವಾಗಿ ಹೇಳುವಂತೆ ಈ ರೂಪಗಳಲ್ಲಿ ವ್ಯಕ್ತವಾಗುವ ಸೂಕ್ಷ್ಮವಾದ ಸೌಂದರ್ಯಪ್ರಜ್ಞೆಯಂತೆಯೇ ಅವುಗಳಿಂದ ವ್ಯಕ್ತವಾಗುವ ಕನ್ನಡ ನಾಡಿನ ಬೇರೆ ಬೇರೆ ಪ್ರಾಂತಗಳ ಜನಗಳ ಬಗ್ಗೆ ಕವಿಗಿರುವ ಸದ್ಭಾವನೆಯೂ (ಕರ್ನಾಟಕ ರಾಜ್ಯ ರಚನೆಯಾಗಿ ಹತ್ತೊಂಬತ್ತು ವರುಷಗಳು ಕಳೆದ ಮೇಲೆ ಕೂಡ ಕನ್ನಡ ನಾಡಿನ ವಿಭಿನ್ನ ಪ್ರದೇಶಗಳ ಜನರ ನಡುವೆ ಇನ್ನೂ ಪರಸ್ಪರ ಸಂಶಯ ಭಾವನೆ, ತಪ್ಪು ತಿಳವಳಿಕೆಗಳು ಸಾಕಷ್ಟು ಉಳಿದುಕೊಂಡಿರುವ ಸದ್ಯದ ಪರಿಸ್ಥಿತಿಯಲ್ಲಿ) ಮಹತ್ವದ್ದಾಗಿದೆ. ಈ ನುಡಿಯಲ್ಲಿ ಬರುವ ಮೂರನೆಯ ರೂಪಕವೂ ಸುಂದರ ಮತ್ತು ಸಮರ್ಪಕವಾದುದೇ ಆಗಿದೆ. "ಬಿರುಗಾಳಿಗೊಗ್ಗೂಡಿಬಹ ಮೇಘ ಕಣ ಕಣವೆ" ಎಂದು ಒಂದುಗೂಡುತ್ತಿರುವ ಕನ್ನಡ ಜನರನ್ನು ಕವಿ ಸಂಬೋಧಿಸುವುದು ಔಚಿತ್ಯಪೂರ್ಣವಾಗಿದೆ. 'ಬಿರುಗಾಳಿ'ಯು ಭಾಷಾ ಪ್ರಜ್ಞೆಯ ಮತ್ತು ಭಾಷಾವಾರು ರಾಜ್ಯಪ್ರಜ್ಞೆಯ ಜಾಗೃತಿ ಮತ್ತು ಚಳವಳಿ ಇತ್ಯಾದಿಗಳನ್ನು ಸೂಚಿಸುತ್ತದೆ. ಕನ್ನಡ ನಾಡಿನ ವಿಭಿನ್ನ ಪ್ರದೇಶಗಳ ಜನರು ಈ ಬಿರುಗಾಳಿಯಿಂದಾಗಿ ಒಂದುಗೂಡಿದ ಮೇಘನಿಕರದ ಕಣ-ಕಣಗಳಂತಿದ್ದಾರೆ ಎಂದು ಈ ರೂಪಕವು ಸುಂದರವಾಗಿ ಸೂಚಿಸುತ್ತದೆ. ಇಲ್ಲಿ 'ಕಣ ಕಣ' ಅನ್ನುವುದು ಮೋಡಗಳಲ್ಲಿನ ನೀರಿನ ಕಣಕಣಗಳನ್ನು ಸೂಚಿಸುವುದರ ಜೊತೆಗೆ ಒಂದುಗೂಡುತ್ತಿರುವ ಕನ್ನಡ ನಾಡಿನ ವಿಭಿನ್ನ ಪ್ರದೇಶಗಳ ಜನರು ಕನ್ನಡದ ದೇಹದ ಅಥವಾ ರಕ್ತದ ಕಣಕಣಗಳಂತಿದ್ದಾರೆ ಎನ್ನುವ ಇನ್ನೊಂದು ಅರ್ಥವನ್ನೂ ಧ್ವನಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕವನದ 2 ನೆಯ ನುಡಿಯಲ್ಲಿ ಕವಿ 'ಕನ್ನಡ ನಾಡ ಗಡಿ ಮೂಲೆ-ಮೂಲೆಯಿಂದ ಹಳ್ಳಿ–ಪಟ್ಟಣಗಳಿಂದ' 'ಬನ್ನಿರೋ ಬನ್ನಿ' ಎಂದು ಕನ್ನಡದ ಜನಗಳನ್ನು ಆತ್ಮೀಯತೆಯಿಂದ ಕರೆಯುತ್ತಾರೆ. ಮತ್ತು ಕನ್ನಡ ನಾಡ ಮೂಲೆ ಮೂಲೆಗಳಿಂದ ನುಗ್ಗಿ ಬರುವ ಜನರನ್ನು ಕವಿ 'ಸುಗ್ಗಿಗಾಳಿಗೆ ಹಿಗ್ಗಿ ಬೆಳ್ಳೊಡೆಗಳನು ನೆಗ್ಗಿ ನುಗ್ಗಿ' ಬರುವ ಬೂರಲದ ಮಾಲೆಗಳಿಗೂ. 'ಅಗೆದ ಬಾವಿಗೆ ದಿಕ್ಕು–ದಿಕ್ಕುಗಳಿಂದ ಚಿಮ್ಮಿ ನೆಗೆದು' ಬರುವ 'ಚಿಲುಮೆಗಳ ಚಳುಕಿ'ಗೂ ಹೋಲಿಸುತ್ತಾರೆ. ಇಲ್ಲಿ 'ಸುಗ್ಗಿಗಾಳಿ' ಅನ್ನುವುದು ಫಲಪ್ರದತೆಯ ಮತ್ತು ಕೃತಾರ್ಥತೆಯ ವಾತಾವರಣವನ್ನು ಸೂಚಿಸಿದರೆ 'ಅಗೆದ ಬಾವಿ' ಅನ್ನುವುದು ಕನ್ನಡ ನಾಡಏಕೀಕರಣಕ್ಕಾಗಿ ಜನರು ಮತ್ತು ಮುಂದಾಳುಗಳು ಪಟ್ಟ ಶ್ರಮವನ್ನು ಸೂಚಿಸುತ್ತದೆ. 'ಚಿಮ್ಮಿ ಬಹ ಚಿಲುಮೆಗಳು' ಅನ್ನುವುದು ಸ್ಫೂರ್ತಿಯ ಸೆಲೆಗಳನ್ನು ಸಂಕೇತಿಸುತ್ತದೆ.

ಮುಂದಿನ ಮೂರು—ಅಂದರೆ ಕವನದ 3, 4 ಮತ್ತು 5 ನೆಯ—ನುಡಿಗಳಲ್ಲಿ ಕವಿ ಕನ್ನಡ ನಾಡಿನ ಕರಾವಳಿ–ಪ್ರದೇಶ, ಮಲೆನಾಡು ಮತ್ತು ಬಯಲುಸೀಮೆಗಳ ಹೃದಯಂಗಮವಾದ ವರ್ಣನೆಯನ್ನು ನಮಗೆ ಕೊಡುತ್ತಾರೆ. ಕವನದ 3 ನೆಯ ನುಡಿಯಲ್ಲಿ ಕವಿಯ ಹುಟ್ಟುಪ್ರಾಂತವಾದ ಕನ್ನಡನಾಡಿನ ಪಶ್ಚಿಮದ ಕರಾವಳಿ ಪ್ರದೇಶದ ಸುಂದರವಾದ ಮತ್ತು ಕಸುವಿನಿಂದ ಕೂಡಿದ ವರ್ಣನೆ ಬರುತ್ತದೆ. 'ತೆಂಗು ಕೈಯೆತ್ತಿ ಕರೆಕರೆವ ಪಡುಗಡಲ ಕರೆ ಮುರಿವ ತೆರೆ ತೆರೆ ರುಬ್ಬು ಮೊರೆಗಳಿಂದ' ಎಂಬ ಸಾಲುಗಳು ಕಡಲ ತೀರದ ಗಾಳಿಯಲ್ಲಿ ಒಂದೇ ಸಮನೆ ಅಲ್ಲಾಡುತ್ತ ಕೈಮಾಡಿ ಕರೆಯುವಂತೆ ತಮ್ಮ ಗರಿಬೀಸುವ ತೆಂಗಿನ ಮರಗಳ ಸಾಲುಗಳನ್ನೂ ಒಂದರ ಮೇಲೊಂದು ಉರುಳಿ ಬರುವ ತೆರೆಗಳಿಂದ ರುಬ್ಬಲ್ಪಟ್ಟು ಭೋರ್ಗರೆಯುವ ಸಮುದ್ರವನ್ನೂ ನಮ್ಮ ಕಣ್ಣೆದುರು ಚಿತ್ರಿಸುತ್ತವೆ ಹಾಗೂ ಕಿವಿಯೊಳಗೆ ಮೊಳಗಿಸುತ್ತವೆ.

'ಮುಂಗಾರು ಕೊಪ್ಪರಿಗೆ ಘುಮುಕಿ ಮಳೆಹನಿ ಒನಕೆ
ಬಡಿದು ಪಳಗದ ಮೊಂಡಮಣ್ಣಿನಿಂದ,
ಪರಶುರಾಮನ ಕೃಪಾಭೂಮಿಯಿಂದ'

ಎಂಬ ಮುಂದಿನ ಸಾಲುಗಳು ಮತ್ತೆ ಕೆಲವು ಶಕ್ತಿಯುತವಾದ ರೂಪಕಗಳನ್ನು ನಮಗೆ ಕೊಡುತ್ತವೆ. 'ಮುಂಗಾರು ಕೊಪ್ಪರಿಗೆ ಘುಮುಕಿ' ಅನ್ನುವುದು ಒಂದು ಅಪರೂಪವಾದ—ಅಡಿಗರಲ್ಲಿ ಕೂಡ ಅಪರೂಪವಾದ ರೂಪಕವಾಗಿದೆ. ಇಲ್ಲಿ ಬೇಸಿಗೆಯ ಕುದಿಯುವ ಬಿಸಿಲಿನ ಆಕಾಶವನ್ನು—ಕ್ಷಿತಿಜದ ಅಂಚಿಗೆ ಒಂದು ಅಗಾಧವಾದ ಕೊಪರಿಗೆಯನ್ನು ಡಬ್ಬು ಹಾಕಿದಂತೆ ಕಾಣಿಸುವ ಆಕಾಶವನ್ನು—

Sri Vidyabharathi Book Centre, Sringeri

CC-O. In Public Domain. Digitized by eGangotri

ಕವಿಯು ಕೊಪ್ಪರಿಗೆಗೆ ಹೋಲಿಸಿ, ಮುಂಗಾರು ಮಳೆಯು ಆ ಕಾದ ಕೊಪ್ಪರಿಗೆಯಿಂದ ಕೆಳಕ್ಕೆ ಧುಮ್ಮಿಕ್ಕುವುದು ಎಂದು ವರ್ಣಿಸಿರುವುದು ನಿಜವಾಗಿಯೂ ಒಂದು ಅಪರೂಪವಾದ ರೂಪಕವೇ ಸೈ. ಕರಾವಳಿಯಲ್ಲಿ ಬೀಳುವ ಮಳೆಯು ದೊಡ್ಡ ದೊಡ್ಡ ಹನಿಗಳಿಂದ ಕೂಡಿರುವಂಥದಾಗಿದ್ದು ಅದರ ರಪ ರಪ ಎಂಬ ರಭಸದ ಬಡಿತವು ಒನಕೆಯ ಬಡಿದಂತೆಯೇ ಇರುತ್ತದೆನ್ನುವುದನ್ನು ಕರಾವಳಿಯ ಮಳೆಯ ಪೆಟ್ಟು ತಿಂದವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಇಂಥ ಒನಕೆ ಬಡಿತದ ಮಳೆಯು ವರ್ಷಂಪ್ರತಿ ಬೀಳುತ್ತಿದ್ದರೂ ನಮ್ಮ ಪಶ್ಚಿಮ ಕರಾವಳಿ ಪ್ರದೇಶದ ('ಪರಶು ರಾಮನ ಕೃಪಣಭೂಮಿಯ') ಕೆಮ್ಮಣ್ಣು ಪಳಗಿ ಮೆದುವಾಗದೆ ಗಟ್ಟಿಯಾದ 'ಮೊಂಡು ಮಣ್ಣಾಗಿ'ಯೇ ಉಳಿದಿರುವುದು ಭೌಗೋಲಿಕ ಸತ್ಯವಾಗಿದೆ. ಈ ಭೌಗೋಲಿಕ ಸತ್ಯವನ್ನು ಆ ಪ್ರದೇಶಕ್ಕೆ ಸಂಬಂಧಪಟ್ಟ ಇನ್ನಿತರ ಕೆಲವು ಭೌಗೋಲಿಕ ಸತ್ಯಗಳೊಂದಿಗೆ (ಉದಾ.: ಹೊಗೆ ಹಬೆ ಉಸುರು ಮಡವುಗಟ್ಟಿದ ಬೆವರು ಜವುಗಿನಿಂದ) ಈ ನುಡಿಯಲ್ಲಿ ಕವಿ ಚೆನ್ನಾಗಿ ಬಳಸಿಕೊಂಡಿದ್ದಾರೆ. ಈ ಮೇಲಿನವು ನಮ್ಮ ಕರಾವಳಿ ಪ್ರದೇಶದ ಭೌಗೋಲಿಕ ಸತ್ಯಗಳಾಗಿದ್ದರೆ 'ದುಡಿತದೈತ್ಯದ ಬೂಟ ಕಾಲಿನ ಅಡಿ ಹುಡಿ,' 'ಬಾಡಿದಾಸೆಯ ಬಳ್ಳಿಮಾಡ'ಗಳು ಹಾಗೂ 'ಕೈ ಕೆಸರು, ಬಾಯಿಯೂ ಕೆಸರು' ಇವುಗಳೆಲ್ಲ ಆ ಪ್ರದೇಶದ ಆರ್ಥಿಕ ನಗ್ನಸತ್ಯಗಳಾಗಿವೆ ಎಂದು ಕವಿ ಸಾಲು-ಸಾಲಾಗಿ ಬರುವ ತಮ್ಮ ವ್ಯಂಗ್ಯ-ರೂಪಕಗಳ ಮತ್ತು ಪಡೆನುಡಿಗಳ ಪರಿಭಾಷೆಯಲ್ಲಿ ಹೇಳುತ್ತಾರೆ. ಮತ್ತು ಇಂಥ ಅಧಃಸ್ಥಿತಿ (ಭೌಗೋಲಿಕ ವಾಗಿ, ಅರ್ಥಾತ್ ಪಶ್ಚಿಮ ಘಟ್ಟಗಳ ಕೆಳಗೆ ಮತ್ತು ಆರ್ಥಿಕವಾಗಿ) ಯಲ್ಲಿರುವ ಕರಾವಳಿ ಪ್ರದೇಶದ ತಮ್ಮ ಕನ್ನಡ ಬಂಧುಗಳನ್ನು ಕುರಿತು 'ಮೇಲು ಬಾಳಿನ ಆಸೆ'ಯನ್ನು 'ಹೊತ್ತು ತನ್ನಿರಿ ಅಣ್ಣ' ಎಂದು ಕವಿ ಅಂತಃಕರಣಪೂರ್ವಕವಾಗಿ ಆಹ್ವಾನಿಸುತ್ತಾರೆ.

ಮುಂದಿನ, ಅಂದರೆ ಕವನದ ನಾಲ್ಕನೆಯ ನುಡಿಯಲ್ಲಿ ಮಲೆನಾಡಿನ ಕೂಲಂಕಷವಾದ ಚಿತ್ರವತ್ತಾದ ವರ್ಣನೆ ಬರುತ್ತದೆ. ಮಲೆನಾಡಿನ ಅಡಿಕೆ ಸೋಗೆ, ಮಾವು, ಹಲಸು, ನೇರಿಳೆ ಪೇರಳೆ ಮತ್ತು ಕಿತ್ತಳೆಗಳು, ಸುತ್ತಲೂ ಕಂಗೊಳಿಸುವ ಭತ್ತದ ಗದ್ದೆಗಳು ಗುಡ್ಡದ ಪರಿಯಲ್ಲಿನ ಮನೆಗಳು, ಕಾಫಿ-ಮೆಣಸು-ಯಾಲಕ್ಕಿಗಳ 'ಉತ್ತು ಬೆಳೆಗಳು', ಆನೆ, ಹುಲಿ, ಚಿರತೆ, ಕಾಡೆಮ್ಮೆ ಮುಂತಾದ ಕಾಡುಮೃಗಗಳು, ಜಡಿ-ಮಳೆ, ಚಳಿ, ಮಲೇರಿಯ ಇವೆಲ್ಲವನ್ನೂ ಕವಿಯು ಸೂಕ್ಷ್ಮದರ್ಶಿಯಾದ ಕಣ್ಣು ಗಳು ಸೆರೆ ಹಿಡಿದು ಅವುಗಳನ್ನು ಕಾವ್ಯದ ಭಟ್ಟಿಗೆ ಇಳಿಸುತ್ತವೆ. ಮಲೆನಾಡಿನ ನೆಲವೆಲ್ಲ 'ಕಬ್ಬುನೆಲ'ವಾಗಿದೆ ಮತ್ತು ಅಲ್ಲಿನ ಸಮೃದ್ಧವಾದ ಬೆಳೆಗಳೆಲ್ಲ ಆ ಕಬ್ಬುನೆಲದ ಎದೆ ಹಾಲಿನ ಉಕ್ಕಿಂದದ ಫಲವಾಗಿವೆ ಎಂದನ್ನುತ್ತಾರೆ ಕವಿ

ಮುಂದಿನದು (5 ನೆಯದು ಮಳೆ ಹೆಚ್ಚಾಗಿ ಬೀಳದ ಆದರೆ ಅತ್ಯಂತ ಫಲ ವತ್ತಾದ 'ಕಬ್ಬಿಣದ ಕರಿ ಮಣ್ಣ' ಬಯಲು ಸೀಮೆಯನ್ನು ಕೆಸುವಿನ ಬಿಗಿಯಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಷೆಯಲ್ಲಿ ಮತ್ತು ಪ್ರತಿಮೆಗಳಲ್ಲಿ ವರ್ಣಿಸುವ ನುಡಿ ಬಯಲು ಸೀಮೆಯಲ್ಲಿ ಜನರು 'ಪಾತಾಳದಲಿ ಪುಟಿವ ನೀರ ಮೊಗೆದು' ಬರಗಾಲ–ಸಾವುಗಳೊಂದಿಗೆ ಸೆಣಸುತ್ತ ಕೆಚ್ಚೆದೆಯಿಂದ ಬದುಕಬೇಕಾಗುತ್ತದೆ, ಈ ಬಾಳು–ಸಾವಿನ ಸೆಣಸಾಟಕ್ಕೆ ಅಲ್ಲಿನ 'ಕಬ್ಬಿಣದ ಮೈಯ' ಜನ ಸಿದ್ಧರಿದ್ದಾರೆ: ಅಲ್ಲಿ ದುಡಿತದ ಉರಿದಾರಿಯಲ್ಲಿ ಏದುತ್ತಿರುವ ಜೀವವು ಹಸುರು ತೆಪ್ಪದಲ್ಲಿ ಜೀಕುತ್ತದೆ, ಆದರೆ ಅಲ್ಲಿನ 'ಬೆವರ ಹೊಳೆ ತಣಿವು ಕೆರೆ'ಯನ್ನು ಮುಟ್ಟದಂತಿದೆ ಎಂದು ಕವಿ ಬಯಲು ಸೀಮೆಯ ಜನರ ಬಾಳಿನ ಬವಣೆಯನ್ನೂ ನಿಸರ್ಗದ ಅಡೆತಡೆಗಳನ್ನು ಧೈರ್ಯದಿಂದ ಎದುರಿಸುತ್ತಿರುವ ಅವರ ಕೆಚ್ಚೆದೆಯನ್ನೂ ವರ್ಣಿಸುತ್ತಾರೆ. ಕವಿ ಅಡಿಗರಿಗೆ ಕನ್ನಡ ನಾಡಿನ ಉತ್ತರ ಭಾಗದ ಬಯಲುಸೀಮೆಯ ಜನರ ಜೀವನದ ಪ್ರತ್ಯಕ್ಷ ಪರಿಚಯವಿದೆ ಅನ್ನುವುದು ಈ ನುಡಿಯಲ್ಲಿ ಬರುವ ಬಯಲು ಸೀಮೆಯ ಜನರು ಮತ್ತು ಅವರ ಜೀವನದ ವಿವಿಧ ವಾಸ್ತವ ವಿವರಗಳಿಂದ (ಉದಾ.: ('ಸೇಂಗಾ ಉಳ್ಳಾಗಡ್ಡಿ ಜೋಳಗಳ ಬಣಬೆಗಳ' 'ಹತ್ತಿ ಮೆದೆ ಮೆದೆ ಹೊದೆದ ಬೀಡಿನಿಂದ', 'ಕಬ್ಬಿಣದ ಮೈಯ' 'ಬಂಗಾರದದುರೆದೆಯಿಂದ' ಇತ್ಯಾದಿಗಳಿಂದ ನಮಗೆ ಗೊತ್ತಾಗುತ್ತದೆ. ಇಲ್ಲಿ ಕವಿಗೆ ಪರಿಚಯವಿರುವುದು ಬಯಲು ಸೀಮೆಯ ಜನರ ಜೀವನದ ಕೇವಲ ಭೌಗೋಲಿಕ ವಿವರಗಳದಷ್ಟೇ ಅಲ್ಲ, ಅವರ ಆರ್ಥಿಕ ಪರಿಸ್ಥಿತಿಯ ಮತ್ತು ಅವರ ಕೆಚ್ಚೆದೆಯ ಮಾನಸಿಕ ನಿಲುವಿನ ಪರಿಚಯ ಕೂಡ ಕವಿಗೆ ಚೆನ್ನಾಗಿದೆ ಅನ್ನುವುದು 'ದುಡಿತ ಉರಿದಾರಿಯಲಿ ಏದುತಿರುವ' 'ಬಾಳು–ಸಾವಿನ ಮೇಲೆ ಕೋಟೆ ಕೆರಳಿದ ಹಾಗೆ' 'ಕಬ್ಬಿಣದ ಮೈಯ', 'ಬಂಗಾರದದುರೆದೆಯಿಂದ' ಇತ್ಯಾದಿ ವರ್ಣನೆಗಳಿಂದ ನಮಗೆ ಗೊತ್ತಾಗುತ್ತದೆ.

ಇಲ್ಲಿಯವರೆಗೆ ಮುಖ್ಯವಾಗಿ ಕನ್ನಡ ನಾಡಿನ ವಿವಿಧ ಪ್ರದೇಶಗಳ ಭೌಗೋಲಿಕ ವಿವರಗಳಲ್ಲಿ ಮುಂದುವರಿದ ಕವನವು ಇದರ (ಐದನೆಯುದರ) ಮುಂದಿನ ನುಡಿಗಳಲ್ಲಿ ಮಾನವಿಕ (humanistic), ಸಾಮಾಜಿಕ ಮತ್ತು ಐತಿಹಾಸಿಕ ಆಯಾಮ (dimensions)ಗಳನ್ನು ಪಡೆದುಕೊಳ್ಳುತ್ತದೆ ಮತ್ತು ಕವನದ ವಸ್ತು (theme) ವು ಹೆಚ್ಚಿನ ಮನೋವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಆಳಗಳನ್ನು (depths) ಪಡೆದುಕೊಳ್ಳುತ್ತದೆ. ಕವನಕ್ಕೆ ಈ ತಿರುವನ್ನು ಕವಿ ಆರನೆಯ ನುಡಿಯ ಪ್ರಾರಂಭದಲ್ಲಿ 'ಬೆಟ್ಟದೆರೆ ತೊರೆ ನಾನು' ಎಂದು ಒಮ್ಮೆಲೇ ಆತ್ಮಮುಖಿಯಾಗುವುದರ ಮೂಲಕ ಕೊಡುತ್ತಾರೆ. ಆಳವಾದ ವೈಯಕ್ತಿಕ ದನಿಯುಳ್ಳ ಈ ನುಡಿಯಲ್ಲಿ ಕವಿ ತಮ್ಮನ್ನು ಬೆಟ್ಟವನ್ನು ಎರೆಯುವ ಒಂದು ತೊರೆಗೆ ಹೋಲಿಸಿಕೊಂಡು, ಆ ತೊರೆಯು ಬೆಟ್ಟದ 'ತರಿವ ಕಗ್ಗಲ್ಲ ಬಂಡೆ'ಗಳಿಗೆ ಅಪಳಿಸಿ, ಸಿಗಿದು, ಕುಪ್ಪಳಿಸಿ, ಮುಂದೆ ಕಗ್ಗವಿಯ ಕತ್ತಲಲ್ಲಿ ಕಂಗೆಟ್ಟು, ಮರುಗಿ ಹರಿದು, ಕೆಳಗಿಳಿದು ಕೊಳ್ಳಗಳಿಂದ ಕಚಗುಳಿ ಪಡೆದು ನಗುತ್ತ, ನೆಗೆಯುತ್ತ ಮುನ್ನಡೆದು ಕೆಸರಲ್ಲಿ ಕುಂಟುವ, ಮತ್ತು ಕೊಳೆವ ತರೆಗೆಲೆಗಳಲ್ಲಿ ಉಸಿರುಕಟ್ಟಿ ಹೊಟ್ಟೆ ಹೊಸೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಸವಳಿದು ಕೊನೆಗೆ ಕಡಲ ಬಳಿಯ ಅಳಿವೆಯ ಹತ್ತಿರ ಮರಳಿನಲ್ಲಿ ಇಂಗಿ ಹೋಗುವ ಜೀವನ–ನದಿಯ ಪ್ರವಾಹದ ಗತಿಯ ದೃಶ್ಯವನ್ನು ಅತ್ಯಂತ ಚಿತ್ರವತ್ತಾಗಿ ಮತ್ತು ಅರ್ಥವತ್ತಾಗಿ ಚಿತ್ರಿಸುತ್ತಾರೆ. ಇಲ್ಲಿ ಬೆಟ್ಟ, ಬಂಡೆಗಳು. ಗವಿ. ಕೊಳ್ಳ ಮುಂತಾದವುಗಳನ್ನು ಹಾಯ್ದು ಮುನ್ನಡೆಯುವ ತೊರೆಯ ಗತಿಯನ್ನು ಚಿತ್ರಿಸು ವುದರ ಮೂಲಕ ಕವಿ ತಮ್ಮ ಸ್ವಂತಜೀವನದ ಗತಿಯನ್ನು, ಅದರಲ್ಲಿನ ಆಘಾತ ಗಳನ್ನು ಮತ್ತು ಏರಿಳಿತಗಳನ್ನು ಚಿತ್ರಮಯವಾಗಿ ನಿರೂಪಿಸುತ್ತಾರೆ : ತಮ್ಮ ಜೀವನಪಥದಲ್ಲಿ ತಾವು ಕೆಲವೊಂದು ಸಲ ಕೆಸರಲ್ಲಿ ಕುಸಿದು ಕುಂಟಿದುದನ್ನು ಕೊಳೆವ ತರಗೆಲೆ (human and institutional) ಗಳ ಆವರಣದಲ್ಲಿ ಸಿಕ್ಕು ಉಸಿರು ಗಟ್ಟಿಸಿಕೊಂಡುದನ್ನು ಮತ್ತು ಕೆಲವೊಂದು ಸಲ ಬಸವಳಿದು ಹೊಟ್ಟೆ ಹೊಸೆ ಯುತ್ತ ಹೇಗೋ ಮುನ್ನಡೆದುದನ್ನು ಹೃದಯಂಗಮವಾಗಿ ರೂಪಕಗಳ ಮೂಲಕ ಹೇಳುತ್ತಾರೆ. ಇಲ್ಲಿ ಕವಿ ಸಮಾಜವನ್ನು ಜನಪದವನ್ನು—ವಿಶಾಲವಾದ ಸಮುದ್ರಕ್ಕೆ ಹೋಲಿಸುತ್ತಾರೆ. ('ಓ ಅಲ್ಲಿ ಕಾಣುತಿದೆ ಜನದ ಜೀವಸಮುದ್ರ') ಮತ್ತು ಬೆಟ್ಟದ ತೊರೆಯಾಗಿ ಹುಟ್ಟಿ. ಬಹಳ ಕಷ್ಟಪಟ್ಟು ಹರಿದುಕೊಂಡು, ಉಳಿದುಕೊಂಡು ಬಂದು. ಕೊನೆಗೆ ಸಮುದ್ರದ ಬಳಿಯ ಅಳಿವೆಯ ಹತ್ತಿರ ಮರಳಿನಲ್ಲಿ ಇಂಗುತ್ತಿರುವ ತಮ್ಮನ್ನು ಕನ್ನಡ ಜನಪದವೆಂಬ ಸಮುದ್ರದ ತೆರೆಗಳು ಹರ್ಷದಿಂದ ಉಕ್ಕಿ ಭೋರ್ಗರೆಯುತ್ತ ಬಂದು ತಬ್ಬಿಕೊಂಡು ಒಳಸೇರಿಸಿಕೊಳ್ಳಲಿ ಎಂದು ಆಶಿಸುತ್ತಾರೆ. ಅರ್ಥಾತ್ ಇಲ್ಲಿ ಕವಿ ತಮ್ಮನ್ನು ತಾವು ಕೊನೆಗೆ ಕನ್ನಡ-ಸಮಾಜಕ್ಕೆ ಅರ್ಪಿಸಿಕೊಳ್ಳುತ್ತಿರುವ ಆತ್ಮಸಮರ್ಪಣದ ಭಾವವು ವ್ಯಕ್ತವಾಗುತ್ತದೆ ('ಬನ್ನಿರೋ ಬನ್ನಿ, ತೆರೆ-ತೆರೆಯಾಗಿ ಭೋರ್ಗರೆದು ನುಗ್ಗಿ ಕೊಚ್ಚಿರಿ ಹೊಯಿಗೆ ಕೊತ್ತಳಗಳ; ತಬ್ಬಿಕೊಳ್ಳಿರಿ ನಿಮ್ಮ ಕೂಸ ಹಾಡುವೆನಾಗ'). ಅಡಿಗರಂಥ ವೈಯಕ್ತಿಕವಾದಿ (individualist) ಕವಿಯು ತೋರುವ ಈ ಸಮಾಜದ ಸಮರ್ಪಣಾಭಾವಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ನಮ್ಮ ಇತರ ಸಂಪ್ರದಾಯ ವಾದಿ ಕವಿಗಳಿಗಿಂತ ಅಡಿಗರು ಹೆಚ್ಚು ವೈಯಕ್ತಿಕತಾವಾದಿಗಳು ಮತ್ತು ಹೆಚ್ಚು ಸ್ವೋಪಜ್ಞತಾವಾದಿಗಳು ಅನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ತಮ್ಮ ಕಾವ್ಯದ ಅಭಿವ್ಯಕ್ತಿಯ ರೀತಿಯಿಂದ ಹಿಡಿದು ತಮ್ಮ ಸಾಮಾಜಿಕ, ಔದ್ಯೋಗಿಕ (occupational) ಮತ್ತು ರಾಜಕೀಯ ವ್ಯವಹಾರ–ಸಂಬಂಧಗಳ ವರೆಗೆ ಎಲ್ಲದರಲ್ಲೂ ಕವಿ ಅಡಿಗರು ಸ್ವಂತಿಕೆ ಮತ್ತು ವೈಯಕ್ತಿಕಗಳನ್ನು ಇಚ್ಛಿಸುತ್ತ ಅವುಗಳನ್ನು ಸಮರ್ಥಿಸುತ್ತ ಮತ್ತು ಅವುಗಳಿಗಾಗಿ ಹೋರಾಡುತ್ತ ಬಂದಿದ್ದಾರೆ. ಅವರ ಕಾವ್ಯದ ಮಟ್ಟಿಗೆ ಹೇಳಬೇಕೆಂದರೆ (ನನಗಿಲ್ಲಿ ಹೇಳಬೇಕಾಗಿರು ವುದು ಅವರ ಕಾವ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ) ಅವರ "ನನ್ನ ನುಡಿ," "ನಿನಗೆ ನೀನೇ!" "ಒಡಲೆಳಸುತಿಹುದು ಜೀವ" "ಬಿಡುಗಡೆಯ ಹಾಡು" "ಸಮಾಜ ಭೈರವ" ಮುಂತಾದ ಕವನಗಳಲ್ಲಿ ಅವರ ಈ ಸ್ವಂತಿಕತೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಪ್ರತ್ಯೇಕತೆಯ ಭಾವ ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆದರೆ ಕವಿಯ ಈ ವೈಯಕ್ತಿಕತೆಯ ಭಾವವೇ ಅವರ ಅಂತಿಮಭಾವ ಮತ್ತು ಗುರಿ ಎಂದು ಮಾತ್ರ ನಾವು ಭಾವಿಸಬಾರದು. ಯಾಕೆಂದರೆ ತಮ್ಮ ಇನ್ನಿತರ ಕೆಲವು ಕವನಗಳಲ್ಲಿ ಅಷ್ಟೇ ಜರೂರಿನಿಂದ ಮತ್ತು ಕಳಕಳಿಯಿಂದ ಅವರು ವ್ಯಕ್ತಿಯ ಸಾಮಾಜಿಕ ಜವಾಬ್ದಾರಿ ಹಾಗೂ ಕಾಳಜಿಗಳನ್ನು ಕುರಿತು ಮತ್ತು ಅವನ ಸಾಮಾಜಿಕ ಸಾಮರಸ್ಯವನ್ನು ಕುರಿತು ಚಿಂತಿಸಿದ್ದಾರೆ (ಉದಾ.: "ಮಂದರದಿ ಮಿಡಿಯುತಿದೆ!", "ಕಟ್ಟುವೆವು ನಾವು". "ನಾವೆಲ್ಲರು ಒಂದೆ ಜಾತಿ", "ಸುಲಿಗೆಯೆಂಬ ಯಾಗ." "ನಾಗರಿಕತೆ". "ಇಂದು ನಮ್ಮೀ ನಾಡು", "ಸ್ವಾತಂತ್ರ್ಯ 1958ರ ಪಾಠ", "ನೆಹರೂ ನಿವೃತ್ತರಾಗುವದಿಲ್ಲ" ಇತ್ಯಾದಿ ಕವನಗಳು). "ಓ ನನ್ನ ಜನವೇ!" ಇದು ಅಡಿಗರ ಅಂಥ ಸಾಮಾಜಿಕ ಕವನಗಳಲ್ಲೊಂದಾಗಿದೆ. ವೈಯಕ್ತಿಕತೆಯನ್ನು ಮತ್ತು ಸ್ವಂತಿಕೆಯನ್ನು (ಅರ್ಥಾತ್ ಪ್ರತ್ಯೇಕತೆಯನ್ನು) ಉಳಿಸಿಕೊಂಡೇ ಮತ್ತು ಬೆಳೆಸಿಕೊಂಡೇ ನಾವು ಸಾಮಾಜಿಕ ಸಾಮರಸ್ಯವನ್ನು ಸಾಧಿಸಬೇಕೇ ವಿನಾ ಅದನ್ನು ಅಳಿಸಿಕೊಂಡಲ್ಲ ಎಂದೆನ್ನುವುದು ಅಡಿಗರ ಕಾವ್ಯದ (ಅರ್ಥಾತ್ ಅದನ್ನು ನಾವು ಅದರ ಸಮಗ್ರ ಸ್ವರೂಪದಲ್ಲಿ ಪರಿಶೀಲಿಸಿ ನೋಡಿದಾಗ ನಮಗೆ ಕಂಡುಬರುವ ಸಾಮಾಜಿಕ ಸಿದ್ಧಾಂತ (social philosophy) ವಾಗಿದೆ. ವ್ಯಕ್ತಿ ಮತ್ತು ಸಮಾಜ ಇವುಗಳ ನಡುವಿನ ಸಾಮರಸ್ಯವು 'ಅದ್ರಿಭಾವಕ್ಕೆ ಸಮುದ್ರದ ತಾಳ' ವಿದ್ದಂತೆ, 'ಮಲೆಯ ಬಯಲಿನ ಸಾನುಕೂಲ ಮೇಳ' ವಿದ್ದಂತೆ ಅಥವಾ ಬೆಟ್ಟದ ತೊರೆಯ ಮತ್ತು ಸಮುದ್ರದ ಸಂಗಮವಿದ್ದಂತೆ ಇರಬೇಕು ಅನ್ನುವುದು ಈ ಕವನದಲ್ಲಿ ಕವಿಯ ಅಭಿಪ್ರಾಯವಾಗಿದೆ.

ಕವನದ ಇದರ ಮುಂದಿನ (ಏಳನೆಯ) ಮತ್ತೊಂದು ಸುಂದರವಾದ ನುಡಿಯಲ್ಲಿ ಕವಿ ಕನ್ನಡಜನರನ್ನು–ತಮ್ಮ ಹೃದಯಕ್ಕೆ ಪ್ರಿಯರಾದ ಕನ್ನಡಜನರನ್ನು–ಅವರಲ್ಲಿರುವ ಅತ್ಯಂತ ಅಮೂಲ್ಯವಾದ ಹಾಗೂ ಕವಿಗೆ ಅತ್ಯಂತ ಪ್ರಿಯವಾದ ಮುಗ್ಧಭಾವನೆಯ ಶ್ರದ್ಧಾಕಮಲಗಳನ್ನು ('ಅಬೋಧಭಾವ ಅಂಬೋಜಗಳ') ವಿದ್ಯುತ್ತಿನಂತೆ ಅಂತರ್ವಾಹಿಯಾಗಿ ಮೈಜುಮ್ಮೆನಿಸುವ ಆಸೆಗಳ ಮುಗ್ಧ ನುಡಿಗಳನ್ನು ಮತ್ತು ಅಂತಃಕರಣದ ಒಳತಳದಲ್ಲಿ ಸುಪ್ತವಾಗಿದ್ದುಕೊಂಡು ಹೊರಬರಲು ದಾರಿಕಾಯುತ್ತಿರುವ ಮತ್ತು (ಆದ್ದರಿಂದ) ಒಳಗೆ ನೋವನ್ನುಂಟು ಮಾಡುತ್ತಿರುವ ಆಸೆಗಳ ಮಂದಾರಬೀಜಗಳನ್ನು ಕೊಳಗಕೊಳಗಗಳಲ್ಲಿ ನನ್ನ ಅಂತಃಕರಣಕ್ಕೆ ತನ್ನಿರಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ. ಹಾಗೆಯೇ ಅನೇಕ ಶತಮಾನಗಳು ಕೆತ್ತಿ, ಕಡೆದು, ಗುಡಿ ಕಟ್ಟಿರುವ ಶಿಲಾಬಾಲಿಕೆಯರ ಮತ್ತು 'ಋಷಿಮುನಿಗಳ ಹೃದಯ ಸುಧೆ' (ಅರ್ಥಾತ್ ಅನೇಕ ಶತಮಾನಗಳಿಂದ ಸಂಚಿತವಾಗಿರುವ ಕಲೆಯ ಸೌಂದರ್ಯದ ಮತ್ತು ತಪಸ್ಸಿನ ಅಮೃತ) ಯಿಂದ ತುಂಬಿ ಗುಳುಗುಳಿಸುತ್ತಿರುವ ಕನಸುಗಳ ಅಂತರ್ಗಂಗೆ (ಒಳತೊರೆ) ಯ ಮರ್ಮರಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ವನಿಸುವ ಮತ್ತು ಪ್ರತಿಧ್ವನಿಸುವ ಕನ್ನಡನುಡಿಯ ಗುಮ್ಮಟವನ್ನು, ಕಲ್ಲುಮಣ್ಣಲ್ಲಿ ಹೂತ ಹಾಳುಹಂಪೆಯ ಮರೆತ ನವರತ್ನ ಭಾಂಡಾರವನ್ನು ಮತ್ತು ಹೊನ್ನ ಗಣಿಯನ್ನು (ಅರ್ಥಾತ್ ನಾವು ಮರೆತುಬಿಟ್ಟಿರುವ ಕನ್ನಡದ ರತ್ನಸಿಂಹಾಸನವಾದ ವಿಜಯನಗರ ಸಾಮ್ರಾಜ್ಯದ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು) ಕಾಲದ ನಾಟ್ಯಗತಿಯಲ್ಲಿ ಪ್ರತಿ ಹೆಜ್ಜೆಗೂ ಕುಣಿಯುತ್ತ, ಮಣಿಯುತ್ತ, ಮತ್ತು ಬದಲಾಗುತ್ತ ಹೋಗುವ ಭಂಗಿಯನ್ನು, ಧ್ವನಿಯ ಪರಿಳಿತಗಳನ್ನು ಹಾಗೂ ನಗೆಯ ಬಗೆಗಳನ್ನು ತನ್ನಿರಿ ಎಂದು ಕವಿ ಕನ್ನಡಿಗರಿಗೆ ಅತ್ಯಮೌಲ್ಯವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕರೆಯನ್ನು ನೀಡುತ್ತಾರೆ.

ಕವನದ ಕೊನೆಯ (ಎಂಟನೆಯ) ನುಡಿಯಲ್ಲಿ ಕವಿ ಮೈಸೂರು, ಮಂಗಳೂರು, ಧಾರವಾಡ, ರಾಯಚೂರು ಮುಂತಾದ ಕನ್ನಡ ನಾಡಿನ ಮೂಲೆ–ಮೂಲೆಗಳ ಜನರಿಗೆ ಕಾಲದ ಪ್ರವಾಹದಲ್ಲಿ ಮುಳುಗಿರುವ ಕನ್ನಡವನ್ನು ಒಮ್ಮನಸ್ಸೆಂಬ ಮಿಣಿಯಿಂದ ಕಟ್ಟಿ ಮೇಲಕ್ಕೆಳೆಯುವುದಕ್ಕೋಸ್ಕರ "ಗೆಲ್ಲುವೆವು" ಎಂಬ ಆತ್ಮ ವಿಶ್ವಾಸದಿಂದ ಮತ್ತು ಉತ್ಸಾಹದಿಂದ ಮುಂದೆ ಬರಲು ತಮ್ಮ ಅಂತಃಕರಣದ ಕರೆ ನೀಡುತ್ತಾರೆ. ಕವಿ ಗೋಪಾಲಕೃಷ್ಣ ಅಡಿಗರು ಏಕೀಕೃತ ಕರ್ನಾಟಕದ ಕನ್ನಡಿಗರನ್ನೆಲ್ಲ ಉದ್ದೇಶಿಸಿ ಮತ್ತು ಅವರನ್ನೆಲ್ಲ ಸಂಬೋಧಿಸಿ ಬರೆದಿರುವ ಈ ಅತ್ಯಂತ ಸುಂದರವಾದ ಕವಿತೆಯಿಂದ ನಮಗೆ ಈ ಕವಿಗೆ ಕನ್ನಡ ಭಾಷೆ, ದೇಶ ಮತ್ತು ಜನರ ಬಗ್ಗೆ ಹಾಗೂ ಅವರ ಅಭ್ಯುದಯದ ಬಗ್ಗೆ ಇರುವ ಪ್ರೇಮ, ಅಭಿಮಾನ ಮತ್ತು ಕಳಕಳಿ ಇವು ಸುಸ್ಪಷ್ಟವಾಗಿ ಗೊತ್ತಾಗುತ್ತವೆ. ಇವುಗಳ ಜೊತೆಗೆ ಭಾಷಾಭಿಮಾನ ಮತ್ತು ದೇಶಾಭಿಮಾನಗಳ ಬಗ್ಗೆ ನಮಗೆ ಬೇಸರ ತರಿಸದಂತೆ, 'ಚರ್ವಿತ-ಚರ್ವಣ' ಎಂದು ನಮಗನ್ನಿಸದಂತೆ ಸುಂದರವಾದ, ಕಲಾತ್ಮಕವಾದ, ಅಂತಃಕರಣಪೂರ್ವಕವಾದ ಮತ್ತು ಗಟ್ಟಿಮುಟ್ಟಾದ (ಆದರೆ ಅಬ್ಬರ-ರಹಿತವಾದ) ಕವಿತೆಯನ್ನು ರಚಿಸುವುದು ಸಾಧ್ಯ ಅನ್ನುವುದೂ ನಮಗೆ ಸುಸ್ಪಷ್ಟವಾಗಿ ಗೊತ್ತಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆ. ನರಸಿಂಹಮೂರ್ತಿ

ವಿರಾಗಿ ವರ್ಧಮಾನ

ಶ್ರೀ ಗೋಪಾಲಕೃಷ್ಣ ಅಡಿಗರ 'ಮೋಹನ ಮುರಳಿ'ಯನ್ನು ಕೇಳಿರದ ಕನ್ನಡಿಗರು ವಿರಳ. ಅವರ ಕಾವ್ಯಾಭ್ಯಾಸದಲ್ಲಿ ಪರಿಣತಿಯನ್ನೂ ಮಹತ್ವವನ್ನೂ ಸಾಧಿಸಿಕೊಂಡ ಮೊದಲ ಕವನ ಇದೆಂದು ನನ್ನ ಭಾವನೆ. 'ಮೋಹನ ಮುರಳಿ' ಎಂದೊಡನೆ ಒಂದು ಶೃಂಗಾರಲೋಕವೇ ಕಣ್ಣಿಗೆ ಕಟ್ಟುತ್ತದೆ. ಯಮುನೆಯ ಸೈಕತದಲ್ಲಿ ವಸಂತಯಾಮಿನಿಯಲ್ಲಿ ಚಂದ್ರಿಕೆಯಲ್ಲಿ ಗೋಪಾಲಕೃಷ್ಣನ ಮುರಳೀ ನಾದವನ್ನಾಲಿಸಿ ಅವನನ್ನರಸುವ ರಾಧಿಕೆಯ ಮನೋಜ್ಞಚಿತ್ರ ಮನಸ್ಸಿನಲ್ಲಿ ಮೂಡು ತ್ತದೆ. ಆದರೆ ಈ ಕವನ ಪರಂಪರಾಗತವಾದ ಈ ಪ್ರತೀಕವನ್ನು ತಿರುಗುಮುರುಗು ಮಾಡಿ ಧ್ವನಿತಾರ್ಥವನ್ನು ನೇರವಾಗಿ ತಾಗುತ್ತದೆ. 'ಹೂವು-ಹಾಸಿಗೆ, ಚಂದ್ರ ಚಂದನ ಬಾಹುಬಂಧನ ಚುಂಬನ'ಗಳು ಅತೀಂದ್ರಿಯಕ್ಕೆ ಆಕರ್ಷಿತವಾದ ಆತ್ಮಕ್ಕೆ ಅತೃಪ್ತಿಯನ್ನು ಮಾತ್ರ ತರುತ್ತವೆ. ಅವತಾರಿಯ ಅಪ್ಪುಗೆಯನ್ನರಸುವ ಗೋಪ ವಧುವಿನ ಬದಲು ಯುವರಾಜತ್ವ ಪತ್ನೀಪುತ್ರಸಂಗಗಳನ್ನು ತ್ಯಜಿಸಲು ನಿರ್ಧರಿಸಿದ ನಿಷ್ಕ್ರಮಣೋನ್ಮುಖಿ ಬುದ್ಧನ ಚಿತ್ರ ಕಣ್ಣಮುಂದೆ ನಿಲ್ಲುತ್ತದೆ.

ಏನಿದೇನಿದು ಹೊರಳುಗಣ್ಣಿನ ತೇಲುನೋಟದ ಸೂಚನೆ ?
ಯಾವ ಸುಮಧುರ ಯಾತನೆ ? ಯಾವ ದಿವ್ಯದ ಯಾಚನೆ ?'

ಶಮೀಗರ್ಭದಲ್ಲಿ ಸುಪ್ತವಾಗಿರುವ ಬೆಂಕಿಯಂತೆ ಪ್ರತಿಯೊಂದು ಆತ್ಮದ ಅಧಿ ಪ್ರಜ್ಞೆಯಲ್ಲಿ ಅಡಗಿರುವ ಈ ದಿವ್ಯತೆಯ ತೃಷೆ ಎಚ್ಚೆತ್ತು ಕಾಡುವುದು ಅಕಸ್ಮಾತ್ತಾಗಿ. ಕೂಡಲೇ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ' ತುಡಿಯತೊಡಗುತ್ತದೆ.

ಮುರಳಿಯ ಪ್ರತೀಕದಂತೆ ಕವಿ ಬೇರೆ ಪ್ರತೀಕಗಳನ್ನು ಬಳಸುತ್ತಾನೆ. ಮೇಲಿನ ಕವನದಷ್ಟೇ ಸುಂದರವಾದ ಕವಿಯ ಮುಂದಿನ ಒಂದು ಕವನ 'ಅತಿಥಿಗಳು'. ಪ್ರಕೃತಿಯ ಪರಮರಮಣೀಯ ದೃಶ್ಯಗಳು ಆತ್ಮವನ್ನು ಎಚ್ಚರಿಸಿ ಸತ್ಯ ಶಿವ ಸುಂದರ ಭಾವಗಳನ್ನು ಮೂಡಿಸುತ್ತವೆ. ಆದರೆ ಇಂಥ ಲೋಕೋತ್ತರ ಅನುಭವಗಳು ಅಸ್ಥಿರ, ಕ್ಷಣಿಕ. ಅವು ಮೂಡಿದಾಗ ಆನಂದತುಂದಿಲವಾಗುವ ಆತ್ಮಕ್ಕೆ ಅವು ಮಾಯವಾದೊಡನೆ ಬೇಸರ, ಕಾತರ, ಕಾದಿರುತ್ತವೆ.—ಅನಂತತೆಯ ಯಾತ್ರಿಕ ರಂತೆ ಬಂದು ಆತ್ಮದಲ್ಲಿ ಅತಿಥಿಗಳಂತೆ ಕ್ಷಣಕಾಲ ಇದ್ದು ಹಾರಿಹೋಗುವ ಈ ಉದ್ಬೋಧಕ ಅನುಭವಗಳನ್ನು ಜೀವನದಲ್ಲಿ ಸ್ಥಿರಗೊಳಿಸಿಕೊಳ್ಳುವ ಕವಿಯ ಆಶಯ ಹೀಗೆ ಚಿತ್ರಿತವಾಗಿದೆ:

Sri Vidyabharathi Book Centre, Sringeri

CC-O. In Public Domain. Digitized by eGangotri

'ವಿಜನ ವನದ ಕಾಸಾರ ತೀರಕೆ
ಬರುವ ಜಿಂಕೆಯಂತೆ
ಬಣಗು ನೆಲದ ಬಿಣ ಬಾಯ್ದೆರೆಗಿಳಿಯುವ
ಜೇನ ಹನಿಗಳಂತೆ
ನಲವಿನಲ್ಲಿ ಮೈಗರೆವ ಮನವು ಮೈ
ಅರಿತು "ಬಂದಿರಾ?" ಎನ್ನುವ ಮುನ್ನವೆ
ಒಲವಿನೊಂದು ಹನಿ ಜಿನುಗುವ ಮುನ್ನವೆ
ಹಾರಿ ನಗೆಯಬೇಡಿ
ಎದೆಯನು ಸೇರಿ ಮನೆಯ ಮಾಡಿ'

ವ್ಯಕ್ತಿ ಜೀವನದಲ್ಲಿ ಇಂಥ ಅನುಭವಗಳನ್ನು ಮಿಂಚಿ ಮಾಯವಾಗುವಂತೆ ಲೋಕಚರಿತ್ರೆಯಲ್ಲಿ ಮಹಾತ್ಮರು ಹುಟ್ಟಿ ಅಳಿದು ಹೋಗುತ್ತಾರೆ:

'ಆಗ ಈಗ ಹೇಗೊ ತಾಗಿ ಬರಲು ನಭದ ವಾಣಿ
ಅದನು ಮುಟ್ಟಲೆಂದು ಮೊಳೆವ ನಿನ್ನ ಒಲವಿನೇಣಿ
ಏರುವಂತೆ ಏರಿಬಹರು ಬುದ್ಧ ಕ್ರಿಸ್ತ ಗಾಂಧಿ
ಮತ್ತೆ ಬರಿದು, ಮತ್ತೆ ಬಂಜೆ, ನಿನ್ನ ಬಾಳ ಹಾದಿ'

ಮರ್ತ್ಯಜೀವನದ ಅತೃಪ್ತಿಯ ಬೇಗೆಗೆ ಸಿಕ್ಕಿರುವ ಆತ್ಮಕ್ಕೆ ತಂಪೂಡುವ ಆಶ್ವಾಸನೆಯಿಂದ ಕರೆಯುತ್ತವೆ ಹಿಮಗಿರಿಯ ಧವಳ ಶೀತಲ ಸಾನುಗಳು:

'ಕರೆಯುತಿದೆ ಹಿಮಗಿರಿಯ ಕಂದರ
"ಬಂದೆಯಾ, ಮಗು, ಬಂದೆಯಾ"'

ಆದರೆ ಇಂಥ ಆಪ್ಯಾಯಮಾನವಾದ ಲೋಕಕ್ಕೆ ಒಯ್ಯುವ ಸೇತುವೆ ಆಸುರೀ ಶಕ್ತಿಗಳ ಆಘಾತಕ್ಕೆ ಮುರಿದುಬಿದ್ದಿದೆ.

'ಹಿಮಗಿರಿಯ ಕಂದರ'ದಲ್ಲಿ ಮೂಡುವ ಚಿತ್ರಗಳಿಗಿಂತ ಹೆಚ್ಚು ಸಂಕೀರ್ಣವಾಗಿ ಅರ್ಥವತ್ತಾಗಿ ಮೂಡುತ್ತವೆ ಶ್ರೀ ಅಡಿಗರ ಅತ್ಯಂತ ಮಹತ್ವದ ಕವನಗಳಲ್ಲೊಂದಾದ 'ಭೂಮಿಗೀತ'ದ ವೈರಾಗ್ಯ ಮತ್ತು ಆತ್ಮೋದ್ಧಾರ ಸಾಧನೆಯ ಚಿತ್ರಗಳು. ಮರ್ತ್ಯಜೀವನದ ಬಗೆಗೆ ಅತೃಪ್ತಿ ಅಲ್ಲಿ ಅದ್ಭುತವಾಗಿ ಮೂಡುತ್ತದೆ:

'ಇವಳ ಹೊಟ್ಟೆ ಚರಂಡಿಗಾರು ಕುಕ್ಕಿದರಯ್ಯ. ಕಳ್ಳಬಸುರಿನ ಯಾವ ಜಾಣ ರಂಭೆ
ಗಂಗೆಯಲಿ ತೇಲಿ ಬಂದನು ಕರ್ಣ, ರಾಧೇಯ: ಸಾಯಿಸಲಿಕಲ್ಲದೇ ಬರಳು ಕುಂತಿ
ಮೈಯಲ್ಲಿ ಹೆರಿಗೆ ಮನೆ ಮಸಣ ಇವಳಿಗೆ, ಸ್ವರತಿ ಸಂಪ್ರೀತೆ:
ಹುಲಿ, ಚಿರತೆ, ಆನೆ, ಹಸು, ಆಡು, ಕೋಡಗ, ಕತ್ತೆ:
ಮಾವು, ನೇರಿಳೆ, ಹಲಸು, ಜಾಲಿ, ಜಾಜಿ—
ಇವು ಇವಳ ಸಹಜ ಸಂತಾನ;
ಈ ಪೆಡಂಭೂತ ನಾ ಬರುವ ಗಳಿಗೆಯೊಳಿಕೆಗೇಕೆ ಹುಟ್ಟಿತೊ ವಿಷಮರತಿದುರಾತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಟ್ಟಿರೋ ಕಾಡಲ್ಲಿ ಕಣ್ಣುಕಟ್ಟಿ:
ಸುತ್ತಲೂ ಬಿಗಿದಿಟ್ಟು ಮುಳ್ಳುತಂತಿ.
ಕುಡಿಯುಂಲುಪ್ಪಿನ ನೀರು; ತಿನಲು ಬೆಂಕಿಯ ಚೂರು;
ಕುಣಿಯಲೆಂದೇ ಬೇಡಿ ಕಾಲ ತೊಡವು.
ಆಗುಂತಕನು ನಾನು ಅತಿಥಿ ಸತ್ಕಾರಕ್ಕೆ ಸಾಗಿ ಬಂದರು ಆರುಮಂದಿ ಸಖರು:
ಉರಿವ ಮೇಣದ ಬತ್ತಿ; ಸುತ್ತ ಮೇಣದ ಗಡ್ಡೆ ಹೊಳೆ:
ಬತ್ತಿಯೂ ಕೊನೆಕೊನೆಗೆ ಕರಕು, ಕರಕು.

ಅಂತೆಯೇ ಉದ್ಧಾರ ಪಥವನ್ನು ಮುಟ್ಟುವ ದೃಢನಿರ್ಧಾರ ಸಾಹಸವೂ:

'ನೆಲತಾಯಿ. ಮಲತಾಯಿ.
ಉತ್ತಾನಪಾದನಿಗೆ ಸುರುಚಿ: ಧ್ರುವ ನಕ್ಷತ್ರಕ್ಕೆ
ಕಾಡ ಮೂಲಕವೆ ಪಥ ಆಗಸಕ್ಕೆ
ಆರಣ್ಯಕರ ಮೌನಮಂತ್ರ ಬಿಚ್ಚಿದ ಬಟ್ಟೆ.
ತೆಗೆದುಕೋ ನೀ ಕೊಟ್ಟ ಎಲ್ಲ ವಸ್ತ್ರ ವಿಲಾಸ:
ಈ ಕೋಟು. ಈ ಶರಟು. ಈ ಶರಾಯಿ:
ಈ ಭಗ್ನ ಜೋಪಡಿಯೂ ನಿನ್ನದೇ; ತೆಗೆದುಕೋ:
ಬತ್ತಲಾಗದೆ ಬಯಲು ಸಿಕ್ಕದಿಲ್ಲಿ.'

ಈ ಸಾಧನೆಯ ದುಸ್ಸಾಧ್ಯತೆಯೂ ಇಲ್ಲಿ ಮನಮುಟ್ಟುವಂತೆ ಮೂಡುತ್ತದೆ.

'ಕತ್ತಲಲ್ಲಿ, ಕಣ್ಣು ಕಾಣದ ಬೀದಿಯಿಕ್ಕಟ್ಟಿನಲ್ಲಿ
ಗೋಡೆ ತಡಕುತ ಇನ್ನು ತೆವಳಬೇಕು.
ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ;
ದಾರಿ ಸಾಗುವುದೆಂತೊ ನೋಡಬೇಕು'

ಕುರುಡನ ಹೆಗಲ ಮೇಲಾದರೂ ಹೆಳವ ಕೂತಿದ್ದರೆ ದಾರಿ ಬೇಗ ಸವೆಯುತ್ತಿತ್ತು.

ಇಷ್ಟೇ ಮಹತ್ವದ ಇನ್ನೊಂದು ಕವನ 'ಕೂಪ ಮಂಡೂಕ'. ಆತ್ಮಸಾಧನೆಯ ಅಂಗವಾದ ಅಹಂಕಾರದ ಅಳಿವು ಈ ಪ್ರತೀಕದಲ್ಲಿ ಪೂರ್ಣ ಅಭಿವ್ಯಕ್ತಿ ಪಡೆಯುತ್ತದೆ.

'ಊದೂದಿ ಏದೇದಿ ನೆಲದೊಳೊದ್ದಾಡಿದೆನು
ಇನ್ನಾದರೂ ಕೂಪ ತಿಳಿವುದೆ ಸರಿ.
ನುಣ್ಣನೆಯ ಕೆಸರ ಬಸಿರಲ್ಲಿ ಹೂತಡಗುವೆನು
ಊದಿಳಿದು ಮೈ ತಿಳಿವುದೊಂದೇ ಗುರಿ'

ನರ ನಾರಾಯಣರ ಅನನ್ಯಸ್ನೇಹದ ಚಿತ್ರದೊಡನೆ ಆರಂಭಿಸುವ ಈ ಕವನ ಸಿದ್ಧಿಯ ಸಾಧ್ಯತೆಯನ್ನು ಸೂಚಿಸುತ್ತದೆ.

ಆದರೆ ಹೀಗೆ ಸಾಧನೆ ಸಫಲವಾಗುವುದು ಎಲ್ಲೋ ಕೆಲವು ಮಹಾತ್ಮರ ವಿಷಯದಲ್ಲಿ ಮಾತ್ರ:

Sri Vidyabharathi Book Centre, Sringeri

CC-O. In Public Domain. Digitized by eGangotri

'ಗೋಳಗಾಜು ಝಗ್ಗನೊಡೆದು ನಗ್ನದೀಪ ಸಂಭ್ರಮ
ಕೃಷ್ಣ, ಬುದ್ಧ, ಅಲ್ಲಮ'

'ಭೂಮಿಗೀತ' ಭೂಮಿಯನ್ನು ಹಾಡಿ ಹೊಗಳುವ ಗೀತವಲ್ಲ. ಭೂಮಿಯನ್ನು ಕಟುವಾಗಿ ಟೀಕಿಸಿ ಭೂಮಿಯ ತ್ಯಾಜ್ಯತೆಯನ್ನು ಪ್ರಕಟಿಸುವ ಗೀತ. ಇಲ್ಲಿ ಸಾಧನೆಯ ಗುರಿ ಮರ್ತ್ಯ ಜೀವನದಿಂದ ಮುಕ್ತಿ. ಆದರೆ 'ಕೂಪ ಮಂಡೂಕ' ಸಮನ್ವಯಿ ದೃಷ್ಟಿಯ ಸುಂದರ ಚಿತ್ರ. ಮರ್ತ್ಯ ಅಮರ್ತ್ಯ, ಕಾಲ ಅನಂತತೆ, ಎರಡನ್ನೂ ಅಪ್ಪಿಕೊಂಡ ಸಹಬಾಳ್ವೆಯ ಸಮತೋಲದ ಚಿತ್ರ ಕಪ್ಪೆಯ ಪ್ರತೀಕದಲ್ಲಿ ಮಾರ್ಮಿಕ ವಾಗಿ ಮೂಡುತ್ತದೆ:

ನೆಲದಿಂದ ಕೆಳಕೊಳಕ್ಕೆ ಮತ್ತೆ ಮೇಲೆ ನೆಲಕ್ಕೆ
ಎರಡಕ್ಕು ತೂಗುವುದು ನನ್ನ ಕೆಲಸ'

'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ' ತುಡಿಯುವುದು ಒಂದು ಹಂತ. ಲೋಕೋತ್ತರದ ಅರಿವಾಗಿ ಅನುಭವವಾಗಿ ಮತ್ತೆ ಲೋಕ ಜೀವನಕ್ಕೆ ಮರಳಿ ಲೋಕೋದ್ಧಾರಕ್ಕೆ ಶ್ರಮಿಸುವುದು ಮುಂದಿನ ಹಂತ. ಇಂಥ ಲೋಕೋದ್ಧಾರಕರ ಆತ್ಮೋನ್ನತಿಯ ಆಶ್ಚರ್ಯಕರ ಸಾಧನೆ ಈ ಪಂಕ್ತಿಗಳಲ್ಲಿ ಮನಮುಟ್ಟುವಂತೆ ಪಡಿ ಮೂಡಿದೆ:

ರಾಮ : 'ದೇವತ್ವದ ತರಿಸಲೀಟಿ ತುದಿಯನೇರಿ ಅವನ ಮನ
ಮುಗಿಲ ಚುಚ್ಚಿ ಮುಂದುವರಿದ ಆ ಮಹಾ ಪ್ರತೀತಿಯ'

ಕೃಷ್ಣ : ' ದೊಂಬ ಸುರಿದ ನೀರಿನಿಂದ
ಮಾವಿನೋಟೆ ಚಿಗಿಯುವಂತೆ ಚಿಗಿತ'

ಗಾಂಧಿ : 'ನಾನು ಅವನು ಒಂದೆ ಲೋಹ
ಕಬ್ಬಿಣ–ಕರಿ ಕಬ್ಬಿಣ
ಯಾವ ರಸವು ಸೋಂಕಿತವನ
ಯಾವ ಬೆಂಕಿ ತಾಕಿತವನ?
ಸಾಯುವಾಗ ಎಂಥ ಗಟ್ಟಿ ಚಿನ್ನವಾಗಿ ಸಾಗಿದ!'

ಸಾಮಾನ್ಯರ ಜೀವನ ಇಂದ್ರಿಯ ವ್ಯಾಮೋಹಗಳಿಗೆ ಸಿಲುಕಿ ಯಥಾಸ್ಥಿತಿಯಲ್ಲಿಯೇ ನಿಲ್ಲುತ್ತದೆ:

'ಕೆಂಡದ ಬಳಿ ಇದ್ದು ಕೂಡ ಈ ಇದ್ದಿಲು ಇತ್ತು ಹಾಗೆ'

ಆಗಾಗ್ಗೆ ಅನಂತತೆಯ ಯಾತ್ರಿಕರು ಅತಿಥಿಗಳಾಗಿ ಬಂದಾಗ ಮಾತ್ರ ಲೋಕೋತ್ತರ ಕಾಂತಿಯಿಂದ ಪ್ರದೀಪ್ತವಾಗಿ ಸಾಮಾನ್ಯರ ಜೀವನ ಮತ್ತೆ ತಮಸ್ಸಿನಲ್ಲಾಳುತ್ತದೆ.

ಇಷ್ಟಾದರೂ ಆತ್ಮೋನ್ನತಿಯ ಸಾಧನೆಯ ಅವಕಾಶ ಎಲ್ಲ ಜೀವಿಗಳಿಗೂ ಇದೆ. ಮಾರ್ಗ ಮಾತ್ರ ಕಠಿನ. ಶ್ರೀ ಅಡಿಗರ ಇತ್ತೀಚಿನ ಕವನ 'ವರ್ಧಮಾನ' ಈ ಸತ್ಯವನ್ನು ಸುಂದರವಾಗಿ ಪ್ರತಿಪಾದಿಸುತ್ತದೆ. ಹರಯದ ಕಪಿ ಚೇಷ್ಟೆಗಳನ್ನು ನೋಡಿ :

Sri Vidyabharathi Book Centre, Sringeri

CC-O. In Public Domain. Digitized by eGangotri

'ಹಿಪ್ಪಿ ಗೆಳೆಯರು ದೂರದೂರ ಗೆಲ್ಲಿನ ಮೇಲೆ
ಹುಚ್ಚೇರಿಸುವರು, ಹಲ್ಕಿರಿಯುವರು. ತಮ್ಮೇಕತಾರಿ ಜೋಗುಳ ಹೀರಿ,
ತೂಕಡಿಸುವರು'

ಜೀವನದ ಧ್ಯೇಯವನ್ನು ಮರೆತ ಅವರು ಸೀಮಿತಗೊಳಿಸಿಕೊಂಡ ತಮ್ಮ ಜೀವನದಲ್ಲಿ ತಮ್ಮನ್ನೇ ಬಂದಿಗಳನ್ನಾಗಿಸಿಕೊಂಡಿರುತ್ತಾರೆ:

'ತನ್ನ ತನ್ನ ಕಿಷ್ಕಿಂಧಕ್ಕೆ,
ತನ್ನ ಶಾಪಗ್ರಸ್ತ ಸೆರೆಗೆ ತಾನೇ ಪಹರೆ'

ಉದ್ಧಾರ ಪಥದ ದುರ್ಗಮತೆಯನ್ನು ಕವಿ ಕಾವ್ಯಸೃಷ್ಟಿಯ ಪ್ರತೀಕದಲ್ಲಿ ಹೀಗೆ ವರ್ಣಿಸುತ್ತಾರೆ:

'ಗಹ್ವರದ ಒಳಗತ್ತಲಲ್ಲಿ ಸುತ್ತಲು ತಡಕಿ ತಡೆದು ನಡೆಯುವ
ನಡೆದು ಮುಗ್ಗರಿಸಿ ಬಿದ್ದೆದ್ದು ಪರೆವ, ಹರಿಯುವ ಜಾಡು
ಹಿಡಿವ, ಗುರುತಿಸುವ, ಬೇರ ಬಗೆವ, ಕಳೆದದ್ದನ್ನು ಪಡೆವ,
ಪಡೆದದ್ದಕ್ಕೆ ಪಡಿಹತ್ತು ಹಡೆವ ಕವನದ ಕರಡು
ತಿದ್ದುಪಡಿಸುವ ಕವ್ಯ ವರ್ಧಮಾನಗೆ'

ಕಡೆಗೆ ಸಿದ್ಧಿ:

'ಸ್ವಯಂಪ್ರಭೆ ಸ್ಫುರಿಸುವುದೆ ಆದ್ಯ
ಸ್ವರಿತ–ಉದಾತ್ತ–ಅನುದಾತ್ತ ಶತಪಥದಲ್ಲಿ'

ಇದರಿಂದ ನಾವು ಕಂಡುಕೊಳ್ಳಬಹುದಾದ ಸತ್ಯ:

'ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ.'

ಮೋಹನ ಮುರಳೀನಾದಕ್ಕೆ ಕಿವಿಗೊಟ್ಟು ವಿಷಯಾಸಕ್ತಿಯಿಂದ ವಿರಕ್ತರಾಗಿ ವಿವಿಧ ವ್ಯಾಮೋಹಗಳಿಂದ ವಿಮುಕ್ತರಾಗಿ ಮಹಾತ್ಮರು ಕ್ರಮಿಸಿದ ಆರಣ್ಯಕ ಮಾರ್ಗವನ್ನನುಸರಿಸಿ ಆತ್ಮೋದ್ಧಾರವನ್ನೂ, ಲೋಕೋದ್ಧಾರವನ್ನೂ ಎಲ್ಲ ಜೀವಿಗಳೂ ಸಾಧಿಸಿಕೊಳ್ಳಬೇಕೆಂಬ ಆಶಯ ಮನೋಜ್ಞವಾಗಿ ಶ್ರೀ ಅಡಿಗರ ಕಾವ್ಯದಲ್ಲಿ ಮೂಡಿ ಬಂದಿದೆ.

ಶ್ರೀ ಅಡಿಗರ ಅಧ್ಯಾತ್ಮಿಕದೃಷ್ಟಿ ಭಾರತೀಯ ಸಂಸ್ಕೃತಿಯ ಪರಂಪರಾನುಗತವಾದ ದೃಷ್ಟಿ. ಆದರೆ ಅದರ ಅಭಿವ್ಯಕ್ತಿಗೆ ಅವರ ಸಮಕಾಲೀನ ಪ್ರಜ್ಞೆ, ಪ್ರಾಮಾಣಿಕತೆಯನ್ನೂ, ಗಾಢತೆಯನ್ನೂ, ಸಂಕೀರ್ಣತೆಯನ್ನೂ ತರುತ್ತದೆ. ಇದರಿಂದಾಗಿ ಅವರ ಆರ್ಷೇಯ ದೃಷ್ಟಿ ನವ್ಯೋನವವಾಗಿ ಆಧುನಿಕ ಮಾನವನಿಗೆ ಅವನ ವಿಶಿಷ್ಟ ಸನ್ನಿವೇಶದಲ್ಲಿ ಅರ್ಥವತ್ತಾಗುವಂತೆ, ಪೂರ್ಣವಾಗಿ ಮನವರಿಕೆಯಾಗುವಂತೆ ಪುನಃ ಸೃಷ್ಟಿಯಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಚ್. ಎಸ್. ವೆಂಕಟೇಶಮೂರ್ತಿ

ನೆನಪುಗಳೆ ಹಾಗೆ

ಅಡಿಗರು ಒಂದೇ ವಸ್ತುವನ್ನು ಮತ್ತೆ ಮತ್ತೆ ಪ್ರಯತ್ನಿಸುತ್ತಾರೆ ಎಂದು ಹೇಳುವುದುಂಟು. ಅಷ್ಟೇ ಅಲ್ಲ—ಒಂದು ನಿರ್ದಿಷ್ಟ ಬಗೆಯ ಪದಪುಂಜ, ಲಯ, ಚಿತ್ರ, ಪ್ರತಿಮಾವಿಧಾನವನ್ನು ಅವರು ಮತ್ತೆ ಮತ್ತೆ ಬಳಸುತ್ತಾ, ಹೊಸ ಅರ್ಥಕ್ಕೆ ಆಶ್ಚರ್ಯಕರವಾಗಿ ಹೊಂದಿಸುತ್ತಾ ಹೋಗುತ್ತಾರೆ.

ನೀರು –ಮೋಡ– ಮಳೆ ಈ ಪ್ರಾಕೃತ ಚಕ್ರವನ್ನು ಭೂತಕವನದಲ್ಲಿ ಅಡಿಗರು ಬಳಸಿದಾಗ ಭೂತ ಅರ್ಥಪೂರ್ಣವಾಗಿ ವರ್ತಮಾನಕ್ಕೆ ಆಗಮಿಸುವ ಸಾರ್ಥಕ ಪ್ರತಿಮೆಯಾಗಿ ಅದರ ಸೃಷ್ಟಿಯಾಗಿತ್ತು. 'ಭೂತರೂಪಕ್ಕೆ ಮಳೆ ವರ್ತಮಾನ' ಎಂಬಂಥ ಅಖಂಡ ಚಲನಚಿತ್ರವಾಗಿ ನಿರ್ಮಿತವಾಗಿದ್ದ ಅದೇ ಪ್ರತಿಮೆ 'ನೆನಪುಗಳ ಹಾಗೆ' ಕವನದಲ್ಲಿ ಮತ್ತೊಮ್ಮೆ ಅನ್ಯೋದ್ದೇಶಕ್ಕೆ ಬಳಕೆಯಾಗಿದೆ.

> ನೆನಪುಗಳ ಹಾಗೆ:
> ಮಳೆಗಾಲದಲ್ಲಿ ನೆಲದೊಳಕ್ಕಿಳಿದ ನೀರಿನ ತುಳುಕು.
> ಬೇಸಗೆಗೆ ಬಾನೆಲ್ಲ ನೀರ ನೆಳಲು.

—ವರ್ತಮಾನಕ್ಕೆ ಕಳೆದುಹೋದ ದಿನಗಳ ನೋವುನಲಿವುಗಳು ಆಗಮಿಸುವ ರೀತಿಯನ್ನು ಸೂಚಿಸುವುದು. 'ನೀರ ನೆಳಲು' ಎಂಬ ಮಾತು ಹಳೆಯ ಅನುಭವಗಳು ಕೇವಲ ನೆನಪುಗಳಾದುದರಿಂದ ತಮ್ಮ ಆಘಾತದ ಸಾಮರ್ಥ್ಯವಿಲ್ಲದೆ ಕೇವಲ ಆವರಿಸುವ ನೆರಳಾಗುವ ರೀತಿ ಗಮನೀಯವಾಗಿದೆ.

'ಕಾಯುವ ನೆಲಕ್ಕಿಳಿವ ಸರಿಯ ಬಿಳಲು' ಎಂಬ ಸಾಲಿನ 'ಬಿಳಲು' ಪದದ ಬಳಕೆಯಿಂದ ಆಲದಮರದ ಅರ್ಥಹೊಮ್ಮಿ. ಆಲದಮರ ಮತ್ತು ಸನಾತನ ವೃಕ್ಷಗಳ ಸಂಬಂಧದಿಂದ ಇಲ್ಲಿನ ಮರ ಹಳೆಯದಕ್ಕೆ ಪ್ರತೀಕವಾಗಿ ನಿಲ್ಲುವುದು. ಒಂದು ಪದದ ಸೂಚನೆಯಿಂದ ಕವನದ ಬಂಧದ ಹೊರಗೆ ಒಂದು ಪ್ರತಿಮೆ ತನ್ನಷ್ಟಕ್ಕೇ ಸೃಷ್ಟಿಯಾಗಿ ಕವನದ ಅರ್ಥವರ್ತುಲವನ್ನು ಹಿಗ್ಗಿಸುವ ರೀತಿ ವಿಶೇಷವಾದ್ದು.

'ಕಾಯುವ ನೆಲಕ್ಕಿಳಿವ ಸರಿಯ ಬಿಳಲು' ಎಂಬ ಸಾಲನ್ನು ಒಟ್ಟಾಗಿ ಗಮನಿಸಿದಾಗ ಮಳೆಗಾಲದ ಒಂದು ದಿನದ ಚಿತ್ರ ನಮ್ಮ ಕಣ್ಣಿಗೆ ಕಟ್ಟುವುದು. ಬೇಸಗೆಗೆ ಬಾನೆಲ್ಲ ನೀರ ನೆಳಲು ಎಂಬ ಚಿತ್ರದ ಚಾಚಿನ ಹಾಗೆ ಈ ಚಿತ್ರ ಇದೆ. ಮೋಡಗಳು ಆ ಮರದ ಮೇಲ್ಭಾಗವನ್ನು ಚಿತ್ರಿಸಿ, ಮಣ್ಣಿಂದ ಮೇಲೆದ್ದು ಬೆಳೆದು. ಪುನಃ ಬಿಳಲುಗಳ ರೂಪದಲ್ಲಿ ನೆಲಕ್ಕಿಳಿವ ವಿಚಿತ್ರ ಚಿತ್ರ ಇದು. ಸನಾತನ ವೃಕ್ಷ ಈ ಒಂದು ಪ್ರಾಕೃತಿಕ ನಿರಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಿಯೆಗೆ ಪ್ರತಿಯಾಗಿ ನಿಲ್ಲುತ್ತದೆ. (ಅಜ್ಜ ನೆಟ್ಟಾಲ ಕವನದಲ್ಲಿ ಅಡಿಗರು ಈ ಪ್ರತಿಮೆಯನ್ನ ಮತ್ತೆ ವಿಶೇಷ ಅರ್ಥಗಳಿಗೆ ರೂಢಿಸುತ್ತಾರೆ).

ಸುಟ್ಟು ಹಿಡಿ ಬೂದಿಯಾದಪ್ಪ ಮರಳುತ್ತಾನೆ
ನಾಳನಾಳಗಳಲ್ಲಿ ತೀರ್ಥರೂಪ.

ಎನ್ನುವುದು ಹೇಳಿಕೆಯ ಮಟ್ಟದಲ್ಲಿ ನಿಲ್ಲುತ್ತದೆ. ಇಲ್ಲಿನ ಅಪ್ಪ 'ಭೂತ'ದ ಪಿತೃಪಿತಾಮಹರಿಗೆ ಸಮಾನ. ಅವನು ಈ ಕವನದಲ್ಲಿ ಆಗಿಹೋದ ಅನುಭವಗಳಿಗೆ ಸಂಕೇತವಾಗಿ ನಿಲ್ಲುತ್ತಾನೆ. 'ತೀರ್ಥರೂಪ'ದ ತೀರ್ಥ ಮತ್ತು ರೂಪಗಳು ಒಟ್ಟಾಗಿ ಮತ್ತು ಭಿನ್ನವಾಗಿ ಹಿಂದಿನ ಚಿತ್ರಕ್ಕೆ ಹೊಂದುವಂತೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತವೆ.

ಮುಂದೆ ಬರುವ ಚಕ್ರ್ಯವನ. ಯಾತ್ರೆಅಲೆಮಾರಿ ಮುಂತಾದ ಮಾತುಗಳು ಭೂತವರ್ತಮಾನಕ್ಕೆ ನೆನಪಾಗಿ ಆಗಮಿಸುವ ರೀತಿಯನ್ನೂ ಅದರ ನಿರಂತತೆಯನ್ನೂ ಹೇಳುತ್ತವೆ.

ನಿದ್ದೆಯೆಳೆಯನ್ನು ಛೇದಿಸುವ ವಾಸ್ತವದರಚು
ಹೊದಿಕೆಯೆಲ್ಲಾ ಬೆವರು ಕುನ್ನಿ ಕಿರಚು
ಕನಸಲ್ಲಿ ಕಿಟಕಿ ಕದ ತೆರೆದು ತೋಳೆಯುವ ಎಂದು
ಅಲ್ಲಿ ಗಾಳಿಗೆ ಮನವ ಚಾಚು—
ಮರವೆ ಎಂಬುದೆ ಇಲ್ಲ. ಮರವೆ ಎಲ್ಲ

ಈ ವರೆಗೆ ನೆನಪುಗಳ ಬಗ್ಗೆ, ಅಂದರೆ ವರ್ತಮಾನಕ್ಕೆ ಸಲ್ಲದ ಕಾರಣ ಅವಾಸ್ತವ ಎನಿಸುವ ವಾಸ್ತವದ ಬಗ್ಗೆ. ಅಂದರೆ ಒಂದು ಬಗೆಯ ಕನಸುಗಳ ಬಗ್ಗೆ. ಅವುಗಳ ನಿರಂತತೆಯ ಬಗ್ಗೆ ವಿಚಾರಿಸಿದ್ದಾಗಿ ಇಲ್ಲಿ ವಾಸ್ತವ ಮತ್ತು ಕನಸುಗಳ ಅರ್ಥಹೀನ ಸಂಬಂಧ ಕುರಿತು ವಿವೇಚಿಸಲಾಗಿದೆ. 'ನಿದ್ದೆಯೆಳೆ' ಎಂಬ ಪದಪುಂಜ ನೆನಪುಗಳ ನವುರುತನ. ಎಳೆತ ಮತ್ತು ಸೂಕ್ಷ್ಮಸೂತ್ರವನ್ನು ಸೂಚಿಸಿದರೆ ವಾಸ್ತವದರಚು ಎಂಬ ಪದಪುಂಜ ವಾಸ್ತವ ಜಗತ್ತಿನ ನಿಷ್ಠುರತೆ ಕರ್ಕಶತೆಗಳನ್ನು ಹೇಳುವುದು. 'ಛೇದನ' ಹಿಂಸೆಯನ್ನು ಸೂಚಿಸುವುದು.

ಕನಸಿನಲ್ಲಿ ಮಂಪರು ಸುಖದಲ್ಲಿ ಇದ್ದವನಿಗೆ ವಾಸ್ತವದ ಝಳ ತಾಗಿದಾಗ ಆಗುವ ಪರಿಣಾಮದ ಚಿತ್ರ ಮುಂದಿನ ಸಾಲುಗಳಲ್ಲಿ ಇದೆ.

'ಹೊದಿಕೆಯೆಲ್ಲಾ ಬೆವರು ಕುನ್ನಿ ಕಿರಚು'

ಹೊದಿಕೆಯೆಲ್ಲಾ ಬೆವರು ಎಂಬುದು ಅನುಭವ ಭೌತಿಕ ಒತ್ತಾಗಿ ಪರಿಣಮಿಸುವುದರ ಕುರುಹಾಗಿದೆ. ಅಂದರೆ ಇಲ್ಲಿ ನೆನಪುಗಳ ಹಾಗೆ ಕೇವಲ ಮೋಡದ ನೆರಳಾಗಿ ಅಭೌತಿಕವಾಗಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಕನಸಲ್ಲಿ' ಎಂದು ಪ್ರಾರಂಭವಾಗುವ, ಕನಸಿನಲ್ಲಿ, ಅಂತರಂಗದಾಳದಲ್ಲಿ ಆಗುವ ಅನುಭವಗಳ ಪರಿಣಾಮವನ್ನು ಹೇಳುವ ಮುಂದಿನ ಮೂರು ಸಾಲುಗಳನ್ನು ಈ ಪಂಕ್ತಿಗೆ ಹೋಲಿಸುವುದುಚಿತ.

ಕನಸಲ್ಲಿ ಕಿಟಕಿ ಕದ ತೆರೆದು ತೊಳೆಯುವ ಎರಚು
ಅಲ್ಲಿ ಗಾಳಿಗೆ ಮನವ ಚಾಚು–
ಮರವೆ ಎಂಬುದೆ ಇಲ್ಲ, ಮರವೆ ಎಲ್ಲ.

ಕಿಟಕಿ ಕದ ಹೊಳೆಯುವ ಕ್ರಿಯೆ ಸದೂರವನ್ನೂ ನೇರಸ್ಪರ್ಶ ಇರದಿರುವುದನ್ನೂ ಸೂಚಿಸುವುದು. ಸುಪ್ತ ಪ್ರಜ್ಞೆಯಿಂದ ಚಿಮ್ಮುವ ಬೆಳಕಿನ ಸಿಂಪಡೆ ಕಣ್ಣಿಗೆ ಕಟ್ಟುವುದು. 'ಅಲ್ಲಿ' ಎಂಬುದು ಕನಸಿನ ಸ್ಥಿತಿಯನ್ನೂ, 'ಮನವ ಚಾಚು' ಎಂಬುದು ಆ ಅನುಭವಗಳು ಅಭೌತಿಕ ಎಂಬುದನ್ನೂ ಸೂಚಿಸಬಹುದು. 'ಚಾಚುಮರ, ಎಂಬ ಒಟ್ಟು ಪ್ರಯೋಗದ ಅರ್ಥಸೂರೆಗೂ ಪ್ರಯುಕ್ತಿಸಿದಂತೆ ಇದೆ. ನೆನಪುಗಳು ಅಳಿಯಲಾರದವು ಎನ್ನುವದನ್ನು 'ಮರವೆ ಎಂಬುದೆ ಇಲ್ಲ' ಎಂಬ ಸಾಲು ಹೇಳುವುದು. ಮುಂದೆ 'ಮರವೆ ಎಲ್ಲ' ಎಂಬಲ್ಲಿ ಬರುವ ಮರ ಪದ್ಯದ ಪ್ರಾರಂಭದಲ್ಲಿ ಚಿತ್ರಿತವಾದ ಆಲದಮರದ ನೆನಪಾಗಿದೆ. ವಾಸ್ತವವಾಗಿ ಮರೆವು ಎಂಬುದಕ್ಕೆ ಅಸ್ತಿತ್ವವೇ ಇಲ್ಲ. ಮರೆವು ನೆನಪಾದಾಗಲೇ ನೆನಪಿನ ಪರಿವರ್ತಿತ ರೂಪದಲ್ಲಿ ತನ್ನ ಇರುವಿಕೆಯನ್ನು ಸಿದ್ಧಿಸಿಕೊಳುತ್ತದೆ.

ಕರುಳು ಕಿವುಚಿದ ಹಾಗೆ ಒಂದೊಂದು ಸಲ
ಅಮ್ಮನೆದೆಯಿಂದೆತ್ತಿ ಗುಮ್ಮ ಪಾತಾಳಕ್ಕೆ
ಎತ್ತಿ ಕುಕ್ಕಿದ ಹಾಗೆ.

ಈ ಸಾಲುಗಳಲ್ಲಿ 'ಒಂದೊಂದು ಸಲ' ಎಂಬ ಮಾತು ಗಮನೀಯ. ಇದು ನೆನಪುಗಳ ಎಳೆ ಹಿಡಿದು ಹೊರಟ ಯೋಚನೆಯ ರೀತಿಯನ್ನು ತೋರಿಸುವುದು 'ಅಮ್ಮನೆದೆಯಿಂದೆ...ಎತ್ತಿ ಕುಕ್ಕಿದ ಹಾಗೆ' ಎಂಬ ಸಾಲುಗಳು "ಎಲ್ಲೊ ಬೇರು" ಬಿಟ್ಟು ಮತ್ತೆಲ್ಲೆಲ್ಲೋ ಸಾಗುವ ಬದುಕಿನ ಅನಂತ ಚಲನೆಯ ಲೀಲಾ ಸ್ವರೂಪವನ್ನು ಒಂದು ಕ್ರಿಯೋಪಮೆಯ ಮೂಲಕ ಸೂಚಿಸುವುವು. ಅಮ್ಮನೆದೆ ಮತ್ತು ಗುಮ್ಮ ಬಾಲ್ಯವನ್ನು ನೆನಪಿಸುವುವು, ಪಾತಾಳಕ್ಕೆ ಎಂಬುದು ಕಂಡರಿಯದ ಸ್ಥಳ-ಸನ್ನಿವೇಶ ಮತ್ತು ಆ ಕಾರಣದ ಒತ್ತಡಗಳನ್ನು ಹೇಳಿ, ಮುಂದೆ, ಎತ್ತಿ ಕುಕ್ಕಿದ ಹಾಗೆ ಎಂಬುದು ಬದುಕಿನ ಅನಿರೀಕ್ಷಿತ ತಿರುವು ಮತ್ತು ಘಾತಗಳನ್ನು ಪದಸಂಯೋಜನೆಯ ಒತ್ತಡ ಮತ್ತು ವೇಷದಿಂದ ಸೂಚಿಸುವುದು.

ಮುಂದೆ ಹೊಸ ಸನ್ನಿವೇಶದ ಕಷ್ಟಪರಂಪರೆಗಳ ಆಕ್ರಮಣದ ರೀತಿಯನ್ನು ಅದನ್ನು ವ್ಯಕ್ತಿ ಎದುರಿಸುವ ಬಗೆಯನ್ನು ಎರಡು ಚಿತ್ರಗಳ ಮೂಲಕ ಹಿಡಿದಿಡಲಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

'ಸರಭರದ ಮಳೆ ಹೊರಗೆ' ಎಂಬುದು ಒಂದು ಸ್ಥಾಯಿಯಾದ ಸನ್ನಿವೇಶದ ಹಿನ್ನೆಲೆಯನ್ನು 'ತಿರುಗಣೆ ಮಡುವಿನಲ್ಲಿ ಗಿರಕಿ ಪರಿಭ್ರಮಣೆಯನ್ನು' ತನ್ಮೂಲಕ ದಿಕ್ಕೆಡಿತನವನ್ನೂ ಸೂಚಿಸಿದರೆ, ಈ ಎಲ್ಲ ಸಂದರ್ಭದ ಆಘಾತಗಳನ್ನೂ ವ್ಯಕ್ತಿ ಒಂಟಿಯಾಗಿ ತನಗೆತಾನೇ ಎದುರಿಸಬೇಕಾದ ಬದುಕಿನ ನಿಷ್ಠುರತೆಯನ್ನು 'ಚಳಿಯ ನೆನಪಿನ ಮೇಲೆ ಪಾತಿ ನನ್ನದು ಪುಟ್ಟ ಹಾಸು' ಎಂಬ ಚಿತ್ರ ಕೊಡುವುದು. ಅದರ ಪರಿಣಾಮ 'ಕುಗ್ಗುತ್ತಿರಲು ಚಕ್ರಪರಿಧಿ' ಎಂಬ ಸಂಕೀರ್ಣ ಚಿತ್ರದಿಂದ ವ್ಯಕ್ತವಾಗುತ್ತದೆ. ಏಕಾಕಿತನದ ನಿಜವಾದ ಅರಿವು ಇಂಥ ಸಂದರ್ಭಗಳಲ್ಲಿ ಆಗುವುದು. ಚಕ್ರಪರಿಧಿ ಕುಗ್ಗುತ್ತಾ ಕುಗ್ಗುತ್ತಾ ವ್ಯಕ್ತಿಯನ್ನು ಒಂಟಿಯಾಗಿ, ಉರುಲಾಗಿ ಅಮರತೊಡಗುತ್ತದೆ, ಸಂಬಂಧಗಳು ಕ್ಷಣಿಕವಾಗುವುದು. ಕಳಚುವುದು. ನೆನಪಾಗಿ ಕಾಡುವುದನ್ನು 'ಕಣ್ಣಿಗೆ ಕಣ್ಣು ತಾಗಿ ತಾಗದೆ' ಎಂಬ ನಿರೀಕ್ಷಣೆ ಸೂಚಿಸುತ್ತದೆ.

ಒಳಗೆ ತಣ್ಣನೆಯ ಕೈ
ಅಮುಕುವೆದೆ: ಹೊರಗಡೆಗೆ
ತಣ್ಣ ತಣ್ಣನೆ ಗಾಳಿ

—ಇದು ವ್ಯಕ್ತಿಯ ಒಳ ಹೊರಗನ್ನೂ ಒಂದೇ ಆಗಿ ಆಕ್ರಮಿಸುವ ಶೀತಲತೆಯ ಚಿತ್ರ; ವ್ಯಕ್ತಿ ಪೂರ್ತಿಯಾಗಿ ಭಯಾನಕ ಮರಣ ಶೀತಲದಲ್ಲಿ ಇಲ್ಲದಾಗುವ ಚಿತ್ರ.

...ಕುಣಿಕೆಯೆಸೆವ ಕರಾಳ
ಕತ್ತುಬಿಗಿಯುತ್ತಲಿರೆ, ನಾಲಗೆಯುಸಿಬ್ಬಸದ
ತಡಕೊಳ್ಳಲಾರದೊಳ ಕಿರಿಚು—ನಿಶ್ಶಬ್ದ

ಮೇಲಿನ ಮೊದಲ ಸಾಲು. ಕುಣಿಕೆ ಮತ್ತು ಕರಾಳ ಶಬ್ದಗಳಿಂದ ಯಮ ಪಾಶವನ್ನು (ಕಾಲದ ಸೆಳೆತ) ಸೂಚಿಸುವುದು. ಕತ್ತುಬಿಗಿಯುತ್ತಲಿರೆ ಎಂಬಲ್ಲಿನ ಒತ್ತುಗಳು ಹಿಸುಕುವಿಕೆಯನ್ನು ಉಸುರುಕಟ್ಟನ್ನು ಅಭಿನಯಿಸುವುವು.

ನಾಲಗೆಯುಸಿಬ್ಬಸದ
ತಡಕೊಳ್ಳಲಾರದೊಳ ಕಿರಚು—ನಿಶ್ಶಬ್ದ

—ಎಂಬುದು ಗಮನೀಯವೇಕೆಂದರೆ ಬದುಕಿನಲ್ಲೂ ವಿಷಮತೆಯನ್ನು ಹಲ್ಲುಕಚ್ಚಿ ಸಹಿಸುವ ವ್ಯಕ್ತಿಚಿತ್ರವನ್ನಿದು ಕೊಡುತ್ತದೆ.

ಬಹಳ ವರ್ಷದ ಹಿಂದೆ ಮೋಗೇರಿಯಲ್ಲಿ
ಬೇರ ನೆಟ್ಟಿರುವ ನನ್ನೂರಿನಲ್ಲಿ:

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಸಾಲುಗಳು ಕವನದ ನಡೆಯನ್ನು ಪುನಃ ಹಿಮ್ಮುಖಿಯಾಗಿಸುತ್ತವೆ. "ಬಹಳ ವರ್ಷ' ಮತ್ತು 'ಪೋಗೇರಿ' ಗಳು ಕಾಲ–ದೇಶಾಂತರಗಳನ್ನು ಸೂಚಿಸುತ್ತವೆ. ಮುಂದೆಡೆ 'ಆ' ಚಿತ್ರಗಳು ಗಟ್ಟಿಯಾಗಿ ಗರಿಗಟ್ಟುತ್ತವೆ.

ಹೊದಿಕೆಯೊಳಗಡೆ ಕುಗ್ಗಿ ಕುಗ್ಗಿ ಬೊಟ್ಟಾಗಿ ಮಿರುಗುವ ಹರಳು:
ಪರದೆ ಮೇಲಕ್ಕೆ ಸುರುಳಿ ಸುರುಳಿ ಬಿಚ್ಚಿ ಸಾಗುತ್ತಿರುವ
ಅನಂತ ಚಲನೆಯು ನಿರಂತರ ವಿಚಿತ್ರ.

ಇಲ್ಲಿ 'ಬೀಜ'. 'ಬೇರು ನೆಟ್ಟಿರುವುದು' ಇವುಗಳ ಮುಂದರಿಕೆಯಾದ ಬಳ್ಳಿಯ ಚಿತ್ರವನ್ನು ನಿಲ್ಲಿಸಲಾಗದೆ. ವಿಚಿತ್ರ ಎಂಬ ಪದದಲ್ಲಿ ಹುದುಗಿದ 'ಚಿತ್ರ'ದ ಅರ್ಥವೂ ಸೂರೆಯಾಗಿದೆ.

'ಶ್ರೀರಾಮನವಮಿಯ ದಿವಸ' ದಲ್ಲಿ ಇದೇ ಕವಿ ರಾಮನ ಬದುಕನ್ನು ಹೇಳುವಾಗ 'ಅಂತರಂಗದ ಸುರುಳಿ ಬಿಚ್ಚಿ ಸರ್ಚ್‌ಲೈಟಲ್ಲಿ ಹೆದ್ದಾರಿ ಹಾಸಿದ್ದ ರಾಮಚರಿತ' ಎಂಬ ಚಿತ್ರವನ್ನು ಕೊಟ್ಟಿರುವುದು ನೆನಪಾಗುವುದು. ಸುರುಳಿ ಬಿಚ್ಚಿದ ಸರಳ ರೇಖೆಯ ಬೆಳಕು ತುಂಬಿದ ಸರ್ಚ್‌ಲೈಟ್ ಅಲ್ಲಿನ ಬದುಕಾದರೆ ಇಲ್ಲಿ ಸುರುಳಿ ಸುರುಳಿ ಬಿಚ್ಚಿ ಸಾಗುತ್ತಿರುವ ವಿಚಿತ್ರ. (ಡೊಂಕು ಬಾಲಕ್ಕೆ ಚಿನ್ನದ ನಳಿಗೆ ಎಂಬ ಪದ್ಯದಲ್ಲಿ 'ಬದುಕು ತಿರಿಮುರಿ ಅಂಕುಡೊಂಕಿನ ಶತ' ಎಂದಿರುವುದನ್ನು ನೋಡಿ), ಸುರುಳಿ ಸುರುಳಿ ಬಿಚ್ಚುವುದು ಬೇರೆ. ಮೊದಲನೆಯದು ರಾಮನ ಬದುಕು; ಎರಡನೆಯದು ರಾಮನ ಬಳಿ ಇದ್ದೂ ಸಾಮಾನ್ಯವಾಗಿಯೇ ಉಳಿದ ಶ್ರೀಸಾಮಾನ್ಯನ ಬದುಕು. ಧೂಮಲೀಲೆಯಲ್ಲಿ ಕವಿ ಕೊಡುವ ಈ ಚಿತ್ರವನ್ನು ಗಮನಿಸಿ.

ಗಾಳಿಗು ನಸು ಹಗುರ ಹೊಗೆ
ಅಂತೆ ಅನಾಯಾಸ ಏರುತಿದೆ ಹೊಗೆಯು ಹಾಗೆ ಹೀಗೆ
ಸುರುಳಿ ಸುರುಳಿ ಹೊರಹೊರಳಿಯುರುಳಿ ಎಳೆ ಎಳೆಗಳಾಗಿ ಬಿಡಿಬಿಡಿಸಿ ಬೆಳ್ಳಿ ಗೆರೆ
ಎರದು ಕೊರೆದ ಹಾಗೆ
ಕೊರೆದು ಬಿಟ್ಟ ಹಾಗೆ

ಇದಕ್ಕೆ 'ನೆನಪುಗಳೆ ಹಾಗೆ'ಯ ವಿಚಿತ್ರ ಹೆಚ್ಚು ಸಮೀಪದ್ದು.

ಮಳೆ ಕಳೆದು ಬಿಸಲಾದ ಮೇಲೆ ಮತ್ತೂ ನೆನಪು
ಸಹಸ್ರ ತೂತುಗಳಿಂದ ಸೂಕ್ಷ್ಮ ರೂಪ
ಹಬ್ಬಿ ಮಂದಯಿಸುವ ಮಹಾ ಬಿಲಕ್ಕೆ ಬೆಳ್ಳಿಯ ಪರದೆ
ಏಳು ಬಣ್ಣಗಳ ನೂರೇಳು ಕ್ಷೇಪ

ಪದ್ಯದ ಮೊದಲ ಮೂರು ಸಾಲುಗಳ ಚಿತ್ರವನ್ನು ಇದು ಪುನರ್ಸೃಷ್ಟಿಸುತ್ತದೆ. 'ಮಳೆ' ವರ್ತಮಾನ–ಅನುಭವಗಳನ್ನೂ, 'ನೆನಪು' ಭೂತಕಾಲ–ಅನುಭವ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆನಪುಗಳನ್ನೂ ಹೇಳುವುದು. ನೀರನೆಳಲು ಇಲ್ಲಿ ಬೆಳ್ಳಿಯ ಪರದೆ ಆಗಿದೆ. ಬಾನು ಮಹಾಬಿಲವಾಗಿದೆ. ಏಳು ಬಣ್ಣಗಳ ನೂರೇಳು ಕ್ಷೇಪ ಆ ಮಹಾಬಿಲದ ಬಾಗಿಲ ವಾಡವಾಗಿ ಕಾಣುವುದು.

ಆಸಾಡಿ ಗಾಳಿ ಕಾಯುತ್ತಾ ಕೂರುವ ಕೆಲಸ
ಕಾದು ಕೆಂಪಾಗಿರುವ ರಂಧ್ರಗಳಿಗೆ

—ಎಂಬುದು 'ಕಾಯುವ ನೆಲ' ಎಂಬುದರ ವಿಸ್ತೃತ ಪ್ರತಿಮೆ. ವ್ಯಕ್ತಿಯ ನಿರೀಕ್ಷೆಯನ್ನೂ ಆ ನಿರೀಕ್ಷೆಯ ತೀವ್ರತೆಯನ್ನೂ ಸೂಚಿಸುವ ಪ್ರತಿಮೆ.

ಬಿರುಗಾಳಿ ಮಳೆ ಗುಡುಗು ಸಿಡಿಲು ಕೋಲಾಹಲ
ಧಾತುಧಾರೆಗೆ ಜಿಗಿವ ಜೀವಜಾಲ

'ಭೂತ' ಕವನದ 'ಅಂತರ ಪಿಶಾಚಿ ಗುಡುಗಾಟ. ಸಿಡಿಲಿನ ಕಾಟ' ರೂಪ ಪರಿವರ್ತನೆಯೊಂದಿಗೆ ಇಲ್ಲಿ ಬಂದಿದೆ. 'ಧಾತುಧಾರೆಗೆ ಜಿಗಿವ ಜೀವ ಜಾಲ' ಭೂತದ 'ಅಗೆದುತ್ತ ಗದ್ದೆಗಳ ಕರ್ಮಭೂಮಿಯ ವರಣ'ದ ಪರಿವರ್ತಿತ ರೂಪ. ಇಲ್ಲಿ ಧಾತು ಎಂಬ ಪದಕ್ಕೆ ಇರುವ ವೀರ್ಯದ ಅರ್ಥವನ್ನೂ ಜಿಗಿವ ಎಂಬಾಗ ಚಿಗುರುವ ಮತ್ತು ಸೀಳಿಕೊಂಡು ಬರುವ ಎಂಬ ಎರಡರ್ಥವನ್ನು ಗಮನಿಸಬೇಕು.

ಒಳಗಿಂದ ಹೊರಗೆ. ಹೊರಗಿಂದೊಳಗೆ ಮೇಲಿಂದ
ಕೆಳಕ್ಕೆ ಮೇಲಕ್ಕೆ ರಾಟಿಚಲನೆ:

ಇದು ಬದುಕಿನ ವಿಚಿತ್ರಗತಿಯನ್ನು ಹಿಡಿದಿಡುವ ಚಿತ್ರ. ಕೊಡುತ್ತಾ, ಪಡೆಯುತ್ತಾ, ಬೀಳುತ್ತಾ, ಏಳುತ್ತಾ ಗೊತ್ತಿಲ್ಲದ ಗುರಿಯ ಕಡೆಗೆ ಬದುಕು ಸುರುಳಿ ಬಿಚ್ಚುತ್ತಾ ಹೋಗುತ್ತದೆ.

'ಒಳಗಿಂದ ಹೊರಗೆ' ಎಂಬಾಗ ದೂರನಿಲ್ಲುವ ಪದಗಳು ಹೊರಗಾಗುವಿಕೆಯನ್ನೂ, 'ಹೊರಗಿಂದೊಳಗೆ' ಎಂಬಾಗ ಪದಗಳು ಕೂಡಿ ಒಳಗೊಳ್ಳುವಿಕೆಯನ್ನೂ ಸೂಚಿಸುತ್ತವೆ. 'ಕೆಳಕ್ಕೆ' ಎಂಬ ದುಡುಕು ಪತನದ ತ್ವರಿತತೆ ಮತ್ತು ಆಳವನ್ನು ಹೇಳಿದರೆ ಮೇಲಕ್ಕೆ ಎಂಬಲ್ಲಿನ ದೀರ್ಘ ಒತ್ತಿನ ಹಗುರತೆ ಎತ್ತರವನ್ನೂ ಅನೂಹ್ಯವನ್ನೂ ಧ್ವನಿಸುವುದು.

ಚುಕ್ಕಾಣಿ ಹಿಡಿದಷ್ಟೆ ತೃಪ್ತಿ ಬುದ್ಧಿಗೆ ದಿಕ್ಕು
ದಾರಿ ನಡೆ ನಿರ್ಧಾರ ಆದರಾಚೆಗೆ

ಮೊದಲು ಬರುವ 'ಬುದ್ಧಿ' ಎರಡನೆ ಸಾಲಿನ 'ಅದರಾಚೆಗೆ' ಎಂಬಲ್ಲಿನ 'ಅದು'. ಚುಕ್ಕಾಣಿ ಹಿಡಿದ ತೃಪ್ತಿ ಮಾತ್ರ ಬುದ್ಧಿಯದು. ದಿಕ್ಕು, ದಾರಿ, ನಡೆ• ನಿರ್ಧಾರ ಬುದ್ಧಿಗೆ ಮೀರಿದ್ದು. ಬದುಕಿನ ಅಗಮ್ಯತೆ. ಅನೂಹ್ಯತೆ, ಬದುಕನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬುದ್ಧಿಗೆ ಮೀರಿ ಯಾವುದೋ ನಿಯಂತ್ರಿಸುವುದು. ನಡೆಸುವುದು. ನಿರ್ಣಯಿಸುವುದು ಎಂಬ ವಿಧಿವಾದದ ನಂಬಿಕೆ ಕೊನೆಯ ಸಾಲಿನಲ್ಲಿ ಇಣುಕಿದರೆ. ಸ್ವಪ್ರಯತ್ನದಿಂದ ಹೋರಾಟ ನಡೆಸುವ ಪೌರುಷವಾದದ ನಚ್ಚು. 'ಚುಕ್ಕಾಣಿ ಹಿಡಿದಷ್ಟು ತೃಪ್ತಿ' ಎಂಬಲ್ಲಿ ಸೂಕ್ಷ್ಮವಾಗಿ ಪ್ರಕಟವಾಗುವುದು.

ಬಹಳ ಹಿಂದೆ 'ಅಳಿಯಲಾರದ ನೆನಪು' ಎಂಬ ಒಂದು ಪದ್ಯವನ್ನು ಅಡಿಗರು ಬರೆದಿದ್ದರು. 'ನೆನಪುಗಳೆ ಹಾಗೆ'ಯಲ್ಲಿ ಅದೇ ವಸ್ತುವನ್ನು ಸಂಕೀರ್ಣ ಮನಸ್ಸಿನ ಬೆಳೆದ ಕವಿ ನಿರ್ವಹಿಸುತ್ತಿರುವುದು. ಇಲ್ಲಿ ನೆನಪೆಂದರೆ ಬದುಕಿಗೆ ಹೊಂದಿದ್ದು : ಅನುಭವಕ್ಕೆ ಹೊರತಾಗದ್ದು : ಕಾಲಕ್ಕೆ ಸಂವೇದಿಯಾದದ್ದು. ಹೀಗಾಗಿ ನೆನಪುಗಳೆಂದರೆ ಇಲ್ಲಿ ಒಂದು ಬದುಕಿನ ಚಿತ್ರ. ನೆನಪಿನ ನೆವದಲ್ಲಿ ತನ್ನ ಭೂತವನ್ನು ನಿರೀಕ್ಷಿಸಿ. ವರ್ತಮಾನದಲ್ಲಿ ನಿಂತು. ಭವಿಷ್ಯದ ಅನೂಹ್ಯತೆಯ ಬಗ್ಗೆ ಬೆರಗಾದ ವ್ಯಕ್ತಿಯ 'ಇಲ್ಲಿವರೆಗಿನ' ಜೀವನಕ್ರಮದ ವಿಚಿತ್ರವೇ ಇಲ್ಲಿ ಕಾವ್ಯದ ವಸ್ತುವಾಗುವುದು. ನನ್ನ, ಮೊಗೇರಿ ಮೊದಲಾದ ಪದಗಳಿಂದ ವೈಯಕ್ತಿಕ ಕಾವು ಪಡೆಯುತ್ತಾ, ಭೌತಿಕವಾಗಿ ಆವರಿಸಿ ನಿಲ್ಲುವ ಪ್ರತಿಮೆಗಳ ಸಹಾಯದಿಂದ ಸಾರ್ವತ್ರಿಕವಾಗಿ ಹರಡಿಕೊಳ್ಳುವ ಅನುಭವ ಇದು.

ಬೆಳೆದ ವ್ಯಕ್ತಿ ತನ್ನ ಹಿಂದಿನದನ್ನು ನೆನಪಿಸಿಕೊಳ್ಳುತ್ತಾ ಹೋಗುವಾಗ, ಸದ್ಯತನದ ಅನುಭವದ ಶಾಖ ತಪ್ಪಿ ಒಂದು ಭ್ರಾಮಕ ಕನಸಿನ ವಾತಾವರಣ ಕವನದ ಮೊದಲಲ್ಲಿ ಸೃಷ್ಟಿಯಾಗುವುದು. 'ಬೇಸಗೆಗೆ ಬಾನೆಲ್ಲ ನೀರ ನೆಳಲು' ಎಂಬಂಥ. ಅಡಿಗರದೆಂದು ಅನುಮಾನಿಸಬಹುದಾದ ಮೋಹಕ ಸಾಲುಗಳು ಕಾಣಿಸಿಕೊಳ್ಳುವುವು. ಕವನದುದ್ದಕ್ಕೂ ಸ್ಥಾಯಿಯಾಗಿ ಮಳೆಯ ಪ್ರತಿಮೆಗಳು ಕಾಣಿಸಿಕೊಂಡು ಒಂದು ಅಸ್ಪಷ್ಟ ಮಾಯಕತೆಯನ್ನೂ ಶೈತ್ಯ. ಮಡು. ತಣ್ಣನೆ ಗಾಳಿ. ನಿಶ್ಶಬ್ದಗಳು ಕಳೆದ ಕಾಲದ ಶೀತಲ ಭಯಾನಕತೆಯನ್ನೂ ಸೃಷ್ಟಿಸುವುವು. ಈ ಎಲ್ಲ ಚಿತ್ರಗಳ ಹಿಂದೆ ಇದನ್ನು ಅನುಭವಿಸುವ ಒಂದು ಮನಃಸ್ಥಿತಿ ಕವನದ ಒಳಗೇ ಬಿಡಿಸಿಕೊಳ್ಳುವುದು. ಅದು 'ಈಸಬೇಕು ಇದ್ದು ಜೈಸಬೇಕು' ಎಂಬ. ಬದುಕನ್ನು ಸಹಿಸಿ ಸಾಗುವ ಆದರೆ ಬದುಕಿನ ವಿಚಿತ್ರದ ಬಗ್ಗೆ, ಭವಿಷ್ಯದ ಅಸ್ಪಷ್ಟತೆಯ ಬಗ್ಗೆ ತನ್ನ ಬುದ್ಧಿಯ ಸೋಲೊಪ್ಪಿ ಆಶ್ಚರ್ಯಪಡುವ ಸೂಕ್ಷ್ಮ ಮನಃಸ್ಥಿತಿ.

'ನೆನಪುಗಳೆ ಹಾಗೆ' ಅಂತರಂಗದ ಅಭ್ಯಾಸದ ಫಲ ಎನ್ನಬಹುದು. ಅಡಿಗರೆ ಹೇಳುವಂತೆ 'ತಾನು ಎಲ್ಲಿಂದ ಬಂದೆ. ಎತ್ತ ಸಾಗುತ್ತಿದ್ದೇನೆ, ಈ ಅದ್ಭುತವಾದ ಬದುಕು ಸಾರ್ಥಕವಾಗುವುದು ಹೇಗೆ ಎಂದು ಗಂಭೀರವಾಗಿ ಚಿಂತಿಸಬೇಕು ಅಂತರಂಗದ ಅಭ್ಯಾಸದಲ್ಲಿ. ನೆನಪುಗಳೆ ಹಾಗೆ ಇಂಥವೇ ಪ್ರಶ್ನೆಗಳನ್ನು ಕೇಳಿಕೊಳ್ಳುವುದಾದರೂ ಕೊನೆಯ ಪ್ರಶ್ನೆಗೆ ಉತ್ತರವಿಲ್ಲದೆ ಮುದುಡಿದಂತೆ ತೋರುವುದು. ಅಡಿಗರ ಕಾವ್ಯ ನಡೆದುಬಂದ ಹಾದಿಯಲ್ಲಿ ಹೊಸನೆಲೆಗಳನ್ನು ಸ್ಥಾಪಿಸದೆ ಹಳೆಯದನ್ನೇ ಹಿಡಿಯುವ ಈ ಕವನ ಆ ಕಾರಣಕ್ಕಾಗಿ ಪೂರ್ಣಾವತಾರಿಯಾಗಿ ಹೊರೆದದ್ದೆನಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದಿಲ್ಲ. ಅಡಿಗರ ಚಿಂತನಪ್ರಧಾನ ಕವನಗಳ ಹರಹು ಭೂತ, ವರ್ತಮಾನ, ಅರಿವು, ಮರೆವು, ಸುಪ್ತಪ್ರಜ್ಞೆ ಮತ್ತು ಯೌಗಿಕ ಪರಿಭಾಷೆಯಲ್ಲಿ ಸಿದ್ಧವಾಗುವಂತೆ ಇಲ್ಲಿಯೂ ಆಗತೊಡಗಿದಾಗ ಕವನ ಹೊಸತನದ ಪ್ರಖರತೆಗೆ ಎರವಾಗಬೇಕಾಗುವದು. ಹಾಗಾಗಿ ವಿಶಿಷ್ಟವಾದುದನ್ನು ವಿಶಿಷ್ಟವಾಗಿ ಹೇಳದ ಈ ಕವನ ಅಡಿಗರ ಉತ್ಕೃಷ್ಟ ಸೃಷ್ಟಿ ಎನ್ನಿಸುವುದಿಲ್ಲ.

ಆದರೆ ಅಡಿಗರ ಯಾವುದೇ ಪದ್ಯದಲ್ಲಿಯೂ ನಾವು ಗಮನಿಸಬಹುದಾದ ಕಟ್ಟುವ ಕ್ರಿಯೆಯ ಗಂಭೀರ ಕಾಳಜಿಯನ್ನು ಈ ಪದ್ಯದಲ್ಲಿಯೂ ಗಮನಿಸಬಹುದು. 'ಹುತ್ತ ಕಟ್ಟದೆ ಚಿತ್ತ ಮತ್ತೆ ಕೆತ್ತೀತೇನು ?' ಎನ್ನುವ ಅಡಿಗರಿಗೆ ಕವನಿಸುವ ಕ್ರಿಯೆ ಕನವರಿಕೆಯಾಗದೆ, ಕಾವುಮಾಡುವ ಒಂದು ಗಂಭೀರ ಏಕಾಗ್ರಸ್ಥಿತಿಯಾಗಿರುವುದರಿಂದ ಅವರ ಕವನಗಳಲ್ಲಿ ಬುದ್ಧಿ ನಿಯಂತ್ರಿತವಾದ, ಸೌಂದ್ರಿಶ್ಯ ಪೂರ್ಣ ಬಿಗಿಯಾದ ಬಂಧ ಮತ್ತು ನಮ್ಮ ಭಾಷೆಯ ಆಶ್ಚರ್ಯಪೂರ್ಣ ಅರ್ಥಸೂರೆಗಳನ್ನು ಗುರುತಿಸಬಹುದು. ಈ ಪ್ರಬಂಧದ ಮೊದಲ ಭಾಗ ಅದನ್ನು ಸ್ಪಷ್ಟಪಡಿಸುವುದು.

ಅಡಿಗರ ಕಾವ್ಯದಲ್ಲಿ ಅವರ ಕಾವ್ಯಶಿಲ್ಪದ ಅಂಗ ಪ್ರತ್ಯಂಗಗಳು ಕವನದಿಂದ ಕವನಕ್ಕೆ ಬೆಳೆದು ಸಾಗುವ ಸರಪಳಿ ಕ್ರಿಯೆಯನ್ನು ಗುರುತಿಸಲಿಕ್ಕೂ 'ನೆನಪುಗಳೆ ಹಾಗೆ' ಕವನವನ್ನು ಅಭ್ಯಾಸ ಮಾಡಬಹುದು.

ಬದುಕಿನ ಹಾಗೇ ಅಡಿಗರ ಒಳ್ಳೆಯ ಕವನವೂ ಯಾವುದೋ ಪದ್ಯದಲ್ಲಿ ಅಸ್ಪಷ್ಟ ನಾಟಿಗೊಂಡು. ಮುಂದೆಲ್ಲೋ ಒಂದು ಪದ್ಯದಲ್ಲಿ ಎಲೆ ಬಿಚ್ಚಿ, ಕೊನೆಗೊಮ್ಮೆ ಒಂದು ಕಡೆ ಫಲಿಸುವುದಾಗುತ್ತದೆ.

'ನೆನಪುಗಳೆ ಹಾಗೆ' 'ಭವಾವಳಿ' ಇನ್ನೂ ಮುಗಿದಂತಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಪ್ರತಿಮಾತ್ಮಕ ಕವನವಾಗಿ 'ಹೇಳತೇನ ಕೇಳ'

ಚಂದ್ರಶೇಖರ ಕಂಬಾರರ 'ಹೇಳತೇನ ಕೇಳ' ರಚಿತವಾದದ್ದು ಕನ್ನಡ ಕಾವ್ಯದಲ್ಲಿ ನವ್ಯಮಾರ್ಗ ಆರಂಭಗೊಂಡು ಆಳವಾಗಿ ನೆಲೆಯೂರುತ್ತಿದ್ದ ದಿನಗಳಲ್ಲಿ. ಆಗ ಗಮನಾರ್ಹವಾದ ಕಾವ್ಯ ರಚಿಸುತ್ತಿದ್ದವರೆಲ್ಲ ತಮ್ಮ ಕಾವ್ಯದ ಭಾಷೆ, ಧಾಟಿ, ನಿಲುವುಗಳಲ್ಲಿ ಒಂದಿಲ್ಲೊಂದು ಪ್ರಮಾಣದಲ್ಲಿ ಅಡಿಗರ ಪ್ರಭಾವಕ್ಕೆ ಒಳಗಾದವರೇ. ಆ ಪ್ರಭಾವ ಅಪ್ರತಿಹತವಾದದ್ದು ಎನ್ನುವಂತೆ ತೋರುತ್ತಿದ್ದ ದಿನಗಳಲ್ಲಿ, ಅದರ ಗುರುತು ಸಹ ಇಲ್ಲವೆಂಬಂಥ ಸ್ವೋಪಜ್ಞತೆಯಲ್ಲಿ ಸೃಷ್ಟಿಯಾದ ಕವನ 'ಹೇಳತೇನ ಕೇಳ'. ಗ್ರಾಮಭಾಷೆಯ ಮೇಲಿನ ಅಸಾಧಾರಣ ಪ್ರಭುತ್ವ. ವಸ್ತುನಿರ್ವಹಣೆಯಲ್ಲಿನ ದೃಶ್ಯವಂತಿಕೆ, ಲಾವಣಿಕಾವ್ಯಶಿಲ್ಪದ ಪ್ರಜ್ಞಾಪೂರ್ಣ ಬಳಕೆ, ಕಥಾನಕ್ದೆಯ ಮೂಲಕ ಮತ್ತೆ ಮತ್ತೆ ಸೂಚಿತವಾಗುವ ಅನ್ಯಾರ್ಥ ಪ್ರತಿಪತ್ತಿ—ಇವೆಲ್ಲ ಒಟ್ಟುಗೂಡಿದ, ಇಷ್ಟು ಸಮರ್ಥವಾದ ಇನ್ನೊಂದು ನೀಳ್ಗವನ ಹೊಸಗನ್ನಡ ಕಾವ್ಯದಲ್ಲಿ ಈವರೆಗೆ ಬರಲಿಲ್ಲವೆನ್ನುವುದು ಆ ಕವನದ ಅನನ್ಯತೆಗೆ ಗುರುತಾಗಿದೆ.

'ಹೇಳತೇನ ಕೇಳ'ದ ಬಗ್ಗೆ ಚರ್ಚಿಸುತ್ತ ಅದನ್ನು 'ರಸಭರಿತವಾದ' 'ಜಾನಪದ ಕಥನಕಾವ್ಯ' ಎಂದಷ್ಟೇ ಹೇಳಿ ಕೈ ತೊಳಕೊಂಡವರಿದ್ದಾರೆ. ಆದರೆ ವಿಮರ್ಶೆಯ ಕನಿಷ್ಠ. ಅರ್ಹತೆಗೆ ಸಹ ಇದಕ್ಕೂ ಉಳಿದ ಜಾನಪದ ಕಥನಕಾವ್ಯಗಳಿಗೂ ನಡುವಿನ ವ್ಯತ್ಯಾಸದ ಅರಿವು ಇರಬೇಕಾಗುತ್ತದೆ. ಇತರ ಜಾನಪದ ಕಥನಕಾರರಲ್ಲಿ ಕಾಣುವ ಶಕ್ತಿ ಕೇವಲ ಸಂಸ್ಕಾರಪ್ರಾಪ್ತವಾದದ್ದು ಮತ್ತು ಕಥೆಯ ಪ್ರತ್ಯಂಗದ ವಿಷಯದಲ್ಲಿಯೂ ಅವರಿಗಿರುವ ನಂಬಿಕೆ ಜೀವನಮೂಲವಾದದ್ದು. ಸಂಸ್ಕಾರದತ್ತವಾದ ಈ ಶಕ್ತಿ ಸೃಜನ ಸಾಮರ್ಥ್ಯವನ್ನು ಪಡೆದಿದ್ದೂ ಸುತ್ತ ಇರುವ ಬದುಕಿನಿಂದ ತನ್ನನ್ನು ಬಿಡಿಸಿಕೊಳ್ಳಲಾಗದ. ಕೇವಲ ಕಲಾಪ್ರಜ್ಞೆಯಿಂದ ಅದರೊಡನೆ ವ್ಯವಹರಿಸಲಾಗದ ಸಂದರ್ಭಗಳೇ ಹೆಚ್ಚು. ಇಂಥ ಶಕ್ತಿ ಒಂದು ಕಥೆಯನ್ನು ಪ್ರಾಣಪೂರ್ಣವಾದ ಭಾಷೆಯಲ್ಲಿ ರಸವಾಹಿಯಾದ ವಿನ್ಯಾಸದಲ್ಲಿ ಸೃಷ್ಟಿಸಿಕೊಡಬಲ್ಲದು ; ಅದರಲ್ಲಿ ತಲ್ಲೀನವಾಗಬಲ್ಲದು : ಆದರೆ ತಾನು ಬಳಸುತ್ತಿರುವ ಪ್ರಕಾರವನ್ನು, ವರ್ಣಿಸುತ್ತಿರುವ ಜೀವನಕ್ರಮವನ್ನು ಕಲಾಮೂಲವಾದ ಉದ್ದೇಶದಿಂದ ಬಳಸಬಲ್ಲ ಶಕ್ತಿ ಅದಕ್ಕೆ ಇರಲೇಬೇಕೆಂದಿಲ್ಲ. ಆದ್ದರಿಂದಲೇ ಹಿಂದಿನ ಎಲ್ಲ ಜಾನಪದ ಕವನಗಳಲ್ಲಿಯೂ ಅಪೇಕ್ಷಿತ ಅರ್ಥದ ಆಚೆಗೂ ಜಗ್ಗುವ ಮಾತು ಚಿತ್ರ ಶಿಲ್ಪ ಲಯಗಳು ಕಾಣುತ್ತವೆ. ಇಂಥಲ್ಲಿ ಸಮೃದ್ಧಿಯಿದೆ, ನಿಯಂತ್ರಣವಿಲ್ಲ ; ತಲ್ಲೀನತೆಯಿದೆ, ವಿಮರ್ಶೆಯಿಲ್ಲ; ವಿಶೇಷವಾದ ಸೃಜನಶಕ್ತಿ ಇದೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ನಿರ್ದೇಶಿಸುವ ಕಲಾಪ್ರಜ್ಞೆಯಿಲ್ಲ. ಉಂಡದ್ದೆಲ್ಲ ಊಟದ ಲೆಕ್ಕಕ್ಕೆ ಸೇರಿದರೂ ದಕ್ಕುವುದು ಜೀರ್ಣವಾದದ್ದು ಮಾತ್ರ. ತನ್ನ ಉದ್ದೇಶದ ಪೂರ್ಣ ಅರಿವು ಇದ್ದು, ಬಳಸುತ್ತಿರುವ ಸಾಮಗ್ರಿಯೊಡನೆ ಕೇವಲ ಕಲಾತ್ಮಕವಾದ ಸಂಬಂಧವಷ್ಟನ್ನೇ ಉಳಿಸಿ ಕೊಂಡು, ಉಳಿದದ್ದನ್ನು ತತ್ಕಾಲದಲ್ಲಿಯಾದರೂ ಚೆಲ್ಲಿಕೊಡಬಲ್ಲ ಕವಿ ಮಾತ್ರ ತನ್ನ ಕೃತಿಯನ್ನು ಅಂಥ ದೋಷಗಳಿಂದ ಪಾರುಮಾಡಬಲ್ಲ. ಕಂಬಾರರಲ್ಲಿ ಈ ಪ್ರಜ್ಞೆ ವಿಶೇಷವಾಗಿ ಇದೆ. ಕವನದ ಆರಂಭದಲ್ಲಿ ಬರುವ ದೇವತಾಸ್ತುತಿ, ಎರಡು ಬಾರಿ ಹಣುಕುವ ಗುರುಸ್ತುತಿ, ಹಳಗನ್ನಡ ನಡುಗನ್ನಡ ಕಾವ್ಯಗಳಲ್ಲಿ ಕಾಣಬಹುದಾದ ರೀತಿಯ ಪುರವರ್ಣನೆ, ಪ್ರತಿ ಚೌಕುವಿನ ಕಡೆಗೆ ಪುನರಾವೃತ್ತವಾಗುವ ಎರಡು ಸಾಲುಗಳು—ಇವನ್ನೆಲ್ಲ ಅವರು ತಂದಿರುವುದು ಒಂದು ಪ್ರಕಾರದ ಸ್ವರೂಪವನ್ನು ಉಳಿಸಿಕೊಂಡು ಆ ಮೂಲಕ ತಮ್ಮ ಕಾವ್ಯಕ್ಕೆ ಹೆಚ್ಚಿನ ಅರ್ಥವಂತಿಕೆಯನ್ನು ದೊರಕಿಸಿ ಕೊಳ್ಳುವ ಸಲುವಾಗಿಯೇ ಹೊರತು ಕಾವ್ಯೇತರವಾದ ಯಾವ ನಂಬಿಕೆ ಉದ್ದೇಶ ಗಳಿಗಾಗಿಯೂ ಅಲ್ಲ. ಕಥೆಯಲ್ಲಿ ವ್ಯಕ್ತವಾಗುವ ಹಳ್ಳಿಜೀವನದ ನಡವಳಿಕೆ, ನಂಬಿಕೆ, ಘಟನೆಗಳ 'ಅಲೌಕಿಕತೆ'ಗಳನ್ನೂ ಕವಿ ಒಂದು ಕಲಾಪ್ರಯೋಜನದ ದೃಷ್ಟಿಯಿಂದ ಬಳಸುತ್ತಾರೆಯೇ ಹೊರತು ತಮಗೆ ಅವುಗಳ ಸಾಧುತ್ವ, ಸತ್ಯತೆಗಳಲ್ಲಿ ನಂಬಿಕೆ ಇದೆಯೆಂದಲ್ಲ. ಈ ಕವಿ ತಾವು ಬಣ್ಣಿಸುವ ಬದುಕನ್ನು ಆಳವಾಗಿ ಬಾಳಿದವ ರಾದರೂ ಶಿಕ್ಷಣ, ವಿಚಾರವಂತಿಕೆಗಳ ಬಲದಿಂದಾಗಿ ಒಂದು ಮಟ್ಟದಲ್ಲಿ ಅದರಿಂದ ಬಿಡುಗಡೆಯನ್ನು ಪಡೆದವರು; ಆದ್ದರಿಂದಲೇ ತಮ್ಮ ಅನುಭವವನ್ನು ಕಲಾಮಾಧ್ಯಮ ದಲ್ಲಿ ಸೃಷ್ಟಿಸುವುದಕ್ಕೆ ಮಾತ್ರವಲ್ಲದೆ ಬೆಲೆಗಟ್ಟುವುದಕ್ಕೆ ಬೇಕಾದ ಯೋಗ್ಯತೆಯೂ ಉಳ್ಳವರು. ಇಂಥ ಅಧಿಕಾರದಲ್ಲಿ ಸೃಷ್ಟಿಯಾದ 'ಹೇಳತೇನ ಕೇಳ' ಉಳಿದ ಜಾನಪದ ಕಥನಕವನಗಳಿಗಿಂತ ಸ್ಪಷ್ಟವಾಗಿ ಭಿನ್ನ.

ಒಂದು ಜಾನಪದ ಕಥನಕವನ ಮಾತ್ರವೇ ಆಗಿ ನೋಡಿದಾಗಲೂ 'ಹೇಳತೇನ ಕೇಳ' ನಮ್ಮ ಕಾಲದ ಶ್ರೇಷ್ಠ ಕಲಾಕೃತಿಗಳಲ್ಲಿ ಒಂದಾಗಿದೆ. ಇದಕ್ಕೆ ಕಾರಣ "ಆ ಕವಿತೆಯಲ್ಲಿಯ ಆಡುನುಡಿಯ ಸೌಭಾಗ್ಯ. ಲಾವಣಿಯ ಗತ್ತು ಮತ್ತು ಅಪೂರ್ವ ವಾದ ಚಿತ್ರಕ ಶಕ್ತಿ......ಬೇಂದ್ರೆಯವರೊಬ್ಬರನ್ನು ಬಿಟ್ಟರೆ ಲಾವಣಿಯ ಶಿಲ್ಪವನ್ನು ಕಾವ್ಯದಲ್ಲಿ ಅಷ್ಟು ಸಮರ್ಥವಾಗಿ ಬೇರೆ ಯಾರೂ ಬಳಸಿಕೊಂಡಿಲ್ಲ. ಲಾವಣಿಯ ಭಾಷೆ, ಲಯ ಮತ್ತು ಕಥನರೀತಿಗಳಿಂದ ಕವಿತೆಯ ವಸ್ತುವಿನ ಬೆಳವಣಿಗೆ ಕುಂಠಿತ ವಾಗದಂತೆ ನಡೆಸಿಕೊಂಡುಹೋಗಿರುವ ಸಂಗತಿಯೇ ಮೊದಲು ಆಶ್ಚರ್ಯಕರ ವಾಗಿದೆ. ಕಂಬಾರರ ದನಿಯಲ್ಲಿ ಪ್ರಾಚೀನತೆಯ ಮಣ್ಣಿನಲ್ಲಿ ಹುದುಗಿಹೋದಂತಿರುವ ಬೇರುಗಳನ್ನು ಅಲುಗಾಡಿಸುವ ಶಕ್ತಿ ಇದೆ. ಇಂಥ ಶಕ್ತಿ ಅವರ ಕಾವ್ಯಕ್ಕೆ ಆಡು ನುಡಿಯ ಉಪಯೋಗದಿಂದ ಬಂದಿದೆ."[1]

---

[1] ಕೀರ್ತಿನಾಥ ಕುರ್ತಕೋಟಿ: 'ಋಷ್ಯಶೃಂಗ' ನಾಟಕದ ಮುನ್ನುಡಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಕವನದ ರಚನೆಯ ಕಾಲಕ್ಕೆ ಉಳಿದ ತರುಣ ಕವಿಗಳಿಗೆ ಎದುರಾದ ಭಾಷಾ ಸಂಬಂಧವಾದ ಪೇಚು ಕಂಬಾರರಿಗೆ ಬರಲಿಲ್ಲ. ನವೋದಯ ಸಾಹಿತ್ಯ ಅಂದಿನ ಕಾವ್ಯಭಾಷೆಯ ಸತ್ವವನ್ನು ಪೂರ್ಣವಾಗಿ ಉಪಯೋಗಿಸಿಕೊಂಡದ್ದರಿಂದ ಹೊಸ ಕವಿಗಳ ಪಾಲಿಗೆ ಅದು ಬರಡಾಗಿ ಕಂಡು. ಅವರೆಲ್ಲ ಅಡಿಗರ ಪ್ರಭಾವವಲಯದಲ್ಲಿ ನಿಂತು ಹೊಸ ಕಾವ್ಯಭಾಷೆಯ ನಿರ್ಮಾಣಕ್ಕೆ ಯತ್ನಿಸಿದ್ದ ದಿನಗಳವು. ಈ ಸಮಸ್ಯೆ ಎದುರಾದದ್ದು ನಗರಭಾಷೆಯಲ್ಲಿ ಕಾವ್ಯರಚನೆ ಮಾಡಹೊರಟಿದ್ದ ಕವಿಗಳಿಗೆ. ಇಂಥ ಹೊತ್ತಿನಲ್ಲಿ ರಸಸಮೃದ್ಧವಾದ ಗ್ರಾಮಭಾಷೆ ಮತ್ತು ಆ ಭಾಷೆಯ ಬುಡಕ್ಕಿದ್ದ ಗ್ರಾಮ ಜೀವನದ ಒಳನೋಟ ನೆಲದಡಿಯ ಗುಪ್ತನಿಧಿಯಂತೆ ಕಂಬಾರರ ಕೈಗೆ ಒದಗಿತು. ಶಿಷ್ಟ ಭಾಷೆಯ ಕ್ಷೇತ್ರದಲ್ಲಿ ಮಾತೆನ್ನುವುದು ಬರಿಯ ಅರ್ಥಕ್ಕೆ ಸಂಕೇತವಾಗಿ, ಭಾಷೆ ನಿಸ್ತೇಜವಾಗಿ ಮುರಪಳಿಸಿಹೋಗಿದ್ದ ಹೊತ್ತಿನಲ್ಲಿ ಮಾತುಗಾರನ ಹಾವ ಭಾವ ಲೀವಿ ಗತ್ತು ಧ್ವನಿ ಕಾಕುಗಳನ್ನೆಲ್ಲ ಹೊಳೆಯಿಸಬಲ್ಲ ಪಕ್ವವಾದ ಗ್ರಾಮಭಾಷೆಯನ್ನು ಈ ಕವಿ ಮರ್ಮ ವರಿತು ಬಳಸಿದರು. ಇದಕ್ಕೆ ಹೊಯ್‌ಕೈಯಾಗಿ ಅಸಾಧಾರಣವೆನ್ನಿಸುವ ಚಿತ್ರಕ ಶಕ್ತಿಯೂ ಈ ಕವನದಲ್ಲಿ ವ್ಯಕ್ತವಾಗಿದೆ. ಗಿಡಕ್ಕೆ ಎಲೆ ಮೂಡುವಷ್ಟು ಸಹಜವಾಗಿ ಕವನದ ಲಯಕ್ಕೆ ಅರಳುವ ಅಪೂರ್ವ ಚಿತ್ರಗಳು ಇಲ್ಲಿ ಕಾಣಸಿಗುತ್ತವೆ. ಕಾವ್ಯದ ಸ್ವರೂಪ ವರ್ಣನಾತ್ಮಕವಾಗಿದ್ದೂ, ವರ್ಣಿಸುತ್ತಿರುವ ಕವಿಯ ದನಿ ಕವನದ ಆದ್ಯಂತ ನಿಚ್ಚಳವಾಗಿ ಕೇಳುತ್ತಿದ್ದೂ ಆ ವರ್ಣನೆಯ ಗೇಣುಗೇಣಿಗೂ ಚಿತ್ರಗಳು ಚಿಸಿಲೊಡೆ ಯುವ ಪರಿ ಇಲ್ಲಿದೆ. ರಾಮುಗೊಂಡನ ಯೌವನದ ಚಿತ್ರಣ, ಭರತೇಶ ಹಾಳು ಭಾವಿಯಿಂದ ಮೇಲೇರಿ ಮಗನಿಗೆ ಕಾಣಿಸಿಕೊಳ್ಳುವ ಪ್ರಸಂಗ—ತಕ್ಷಣ ನೆನಪಿಗೆ ಬರುವ ಇಂಥ ದೃಶ್ಯಗಳನ್ನೇ ಇದಕ್ಕೆ ನಿದರ್ಶನವಾಗಿ ನೆನೆಯಬಹುದು. ಇಲ್ಲಿನ ಉಪಮೆಗಳಂತೂ ಎಲೆ ಮೇಲಿನ ಮಂಜಿನ ಮಣಿಯಷ್ಟು ಶುಭ್ರವೂ ಸ್ವಚ್ಛವೂ ಆಗಿದ್ದು ಓದುಗನನ್ನು ಫಕ್ಕನೆ ಹಿಡಿಯುತ್ತವೆ. ಶಿವಾಪುರದ ಓಣಿಗಳ ದಿಕ್ಕುತಪ್ಪಿಸುವ ಅನಿರೀಕ್ಷಿತ ತಿರುವು 'ಹುಡಿಗೇರ ಹುಸಿಸಿಟ್ಟಿನ್ಹಾಂಗ' ಇದ್ದರೆ ಮನೆಬಾಗಿಲುಗಳು 'ತೆರೆದ ಕಣ್ಣು'ಗಳಂತೆ ಇದ್ದುವಂತೆ. ರಾಮಗೊಂಡನಿಗೆ 'ಹೋರೀಯ ಕೊಂಬಿನಾಂಗ ಮಕ ಮಿಸಿ ಒಡೆದು' ಪಾರಿಗೆಯ ಹುಡುಗರ ಜೊತೆಯಲ್ಲಿದ್ದಾಗ 'ದ್ಯಾಮವ್ವನ ಕ್ವಾಣಧಾಂಗ' ಕಾಣುತ್ತಿದ್ದನಂತೆ. ಅವನಿಗೆ ಕರಿಯಜ್ಜನ ಭೂತ ಹಿಡಿದಿದೆ ಯೆಂಬ ಸುದ್ದಿ ಕೇಳಿ 'ಉಗುರು ತಾಗಿದ ಹೇನಿನಂತೆ ಆಡಗುವ ಹೆಣ್ಣು' ಮನಸ್ಸಿನಲ್ಲೇ ಮರುಗಿದವು. ರಾಮಗೊಂಡ ಬೇಟೆಗೆ ಹೋದ ದಿನ 'ಮಾಡಿದ ಚಿಮಣಿ ಮ್ಯಾಗ ಕಾಡೀಗಿ ಕಡಕೊಂಡು ಬಿದ್ಹಾಂಗ ಹೊತ್ತಾರಿ ಕತ್ತಲಿಸಿತು'. ಜಕ್ಕಲ ಜಲದೇವಿಯರ ಮಿಂಚುವ ಮೈತುಂಬ 'ನೀರ ಹನಿ ಹೆಣೆಧಾಂಗ' ಆಭರಣ ಇತ್ತಂತೆ. ಇವೆಲ್ಲಕ್ಕೂ ಮೀರಿದ್ದೆಂದರೆ ಗೌಡಿತಿಯ ಲಜ್ಜೆಗೇಡಿತನದ ಚಿತ್ರಣ. ರಾಕ್ಷಸಗೌಡನ ವಂಶವನ್ನು ಬಸಿರಲ್ಲಿ ಹೊತ್ತು ನಡತೆಯ ರೀತಿ ರಿವಾಜು ಮರೆತಿದ್ದ ಗೌಡಿತಿ 'ಹಸರ ಕುಪ್ಪಸ ತೊಟ್ಟು ಬಿಸಲೀಗ ತಲೆಬಿಟ್ಟು ಹೊಳೆಸಾಲ ದನಧಾಂಗ' ನಿಂತಿದ್ದಳಂತೆ! ಈ ಉಪಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಓದುಗನನ್ನು ದಂಗುಬಡಿಸುವಷ್ಟು ಧ್ವನಿದೀಪಕವಾಗಿದ್ದು ಕಂಬಾರರ ಚಿತ್ರಕಶಕ್ತಿಗೆ ಸಮನಿಲ್ಲದ ಸಾಕ್ಷಿಯಾಗಿದೆ. ಇಲ್ಲಿನ ಯಾವುದೇ ಉಪಮೆಯ ಸಾಮಗ್ರಿ ಗ್ರಾಮ ಜೀವನದ ಗಡಿಯೊಳಗೇ ಇದ್ದದ್ದು ಗಮನಿಸಬೇಕಾದ ಅಂಶ. ಹಾಗೆಂದೇ ಅದಕ್ಕೂ ಕಾವ್ಯಕ್ಕೂ ಇರುವ ಸಂಬಂಧ ಶರೀರಕ್ಕೆ ಕೈಕಾಲು ಕಣ್ಣುಗಳೊಡನಿರುವ ಸಂಬಂಧದಷ್ಟು ಸಹಜ, ಸಾವಯುವ ಸಂಬಂಧವಾಗಿದೆ. ಇದರ ಜೊತೆಗೆ ಬೇಕಾದಷ್ಟು ನಾಟಕೀಯ ಗುಣವಿದ್ದು ಅಲ್ಲಲ್ಲಿ ಅಭಿನಯಕ್ಕೆ ಹವಣಿಸುವ ಈ ಕವನ ತತ್ಕಾಲಕ್ಕೆ ನಿಂತಂತೆ ತೋರಿ ಮುಂದೆ ಒಂದು ನಾಟಕವಾಗಿಯೇ ಅರಳಿಬಿಟ್ಟಿದೆ. ಇಲ್ಲಿ ವರ್ಣನೆಯಿಂದ ಪೋಷಿತವಾದ ಪಾತ್ರಗಳು ಅಲ್ಲಿ ಸ್ವತಂತ್ರಗೊಂಡು, ಕವಿಯ ಹಂಗು ಹರಿದುಕೊಂಡು ತಮ್ಮ ಸನ್ನಿವೇಶಗಳನ್ನು ತಾವೇ ಅಭಿನಯಿಸಿ ತೋರಿಸಿವೆ. ವಸ್ತುವೊಂದು ತನ್ನ ಬೆಳವಣಿಗೆಗೆ ತಕ್ಕ ಗತಿಯನ್ನು ಹುಡುಕಿಕೊಳ್ಳುತ್ತ ಪ್ರಕಾರದಿಂದ ಪ್ರಕಾರಕ್ಕೆ ದಾಟಿರುವ ಈ ಪರಿಯಂತೂ ಒಂದು ವಿಸ್ಮಯಕರ ನಿದರ್ಶನ. ಬಹುಶಃ ಕನ್ನಡದಲ್ಲಿ ಇಂಥ ನಿದರ್ಶನ ಇದೊಂದೇ.

ಈ ಕವನವನ್ನು ವಿಮರ್ಶಿಸುತ್ತ ಲೇಖಕರೊಬ್ಬರು ಹೇಳಿರುವ ಮಾತನ್ನು ಇಲ್ಲಿ ಚರ್ಚಿಸಬಹುದಾಗಿದೆ. "ಹೇಳತೇನ ಕೇಳ" ಕವನದ ವಾತಾವರಣ ವಾಸ್ತವಿಕ ಜಗತ್ತಿನದ್ದೇ ಆಗಿರಬಹುದಾಗಿದ್ದರೂ ಇಲ್ಲಿ ಚಿತ್ರಿತವಾಗಿರುವ ಜನತೆಯ ಶ್ರದ್ಧೆ ನಂಬಿಕೆ ನಡವಳಿಕೆಗಳ ಮೇಲೆ ಆಧುನಿಕ ಜೀವನದ ಪರಿಣಾಮ ಯಾವ ವಿಧದಲ್ಲೂ ಆದಂತೆ ಕಾಣುವುದಿಲ್ಲ. ಆಧುನಿಕ ಪ್ರಜ್ಞೆಯ ಪ್ರವೇಶಕ್ಕೆ ಎಡೆಯಿಲ್ಲದ, ಅಜ್ಜಿ ಹೇಳುವ ರಾಜಕುಮಾರನ ಸಾಹಸದ ಜಾನಪದ ಕಥೆಯಂಥ ವಸ್ತು ತನ್ನ ಒಡಲಲ್ಲಿಟ್ಟುಕೊಂಡ ರಹಸ್ಯ ವಿಸ್ಮಯದಿಂದಷ್ಟೇ ಆಕರ್ಷಿಸುತ್ತದೆ."[2]

ಮೇಲಿನ ಮಾತುಗಳು ಒಂದು ಕಥೆ ಹೇಗೆ ರೂಪಕವಾಗಿ ಕೆಲಸ ಮಾಡಬಲ್ಲುದು ಎನ್ನುವುದನ್ನು ಗಮನಿಸದೆ ಹೇಳಿರುವ ಮಾತು ಎನ್ನಿಸುತ್ತದೆ. ಆಧುನಿಕ ಜೀವನದ ಸಂಗತಿಗಳನ್ನು ಧ್ವನಿಸುವ ಕೃತಿಯ ಮೈ ಆಧುನಿಕವೇ ಆಗಿರಬೇಕೆಂದಿಲ್ಲ. ಒಂದು ಪೌರಾಣಿಕವಸ್ತುವನ್ನು ತೆಗೆದುಕೊಂಡು ಆ ಮೂಲಕ ವರ್ತಮಾನಕ್ಕೆ ಧ್ವನಿ ಕೊಡುವುದು ಸಾಧ್ಯವಿದೆ. ಗಿರೀಶರ ಯಯಾತಿ ನಾಟಕ ಇಂಥದು. ಅಷ್ಟೇ ಅಲ್ಲ, ಕಲೆಯ ಸಹಾಯ ಪಡೆದಾಗ ಅತ್ಯಂತ ಅವಾಸ್ತವವಾದ ನೆಲೆಯಿಂದ ಕೂಡ ಸತ್ಯದ ಪ್ರಕಟನೆ ಸಾಧ್ಯವಿದೆ. ಕಾಫ್ಕಾನ 'ಮೆಟಮಾರ್ಫಸಿಸ್' ಕಾದಂಬರಿಯಲ್ಲಿ ನಾಯಕ ರೂಪಾಂತರಗೊಳ್ಳುವುದು, 'ಹಯವದನ'ದಲ್ಲಿ ತಲೆಗಳು ಬದಲಾಗುವುದು, ಸತ್ತವರು ಬದುಕುವುದು, ಕಾಳಿ ಪ್ರತ್ಯಕ್ಷವಾಗುವುದು ಇವೆಲ್ಲ ಇದ್ದರೂ ಅವು ಇಂದಿನ ಬದುಕಿನಲ್ಲಿಯೂ ಇರುವ ನಿಜವೊಂದಕ್ಕೆ ನುಡಿಕೊಡುವ ಉಪಕರಣಗಳಾಗಿ ಬಳಕೆಯಾಗಿವೆ. ಇಲ್ಲೆಲ್ಲ ಕವಿ ತನ್ನ ಕೃತಿಯಲ್ಲಿ ಬರುವ ಪಾತ್ರಗಳ ಶ್ರದ್ಧೆನಂಬಿಕೆಗಳನ್ನೇ ತಾನೂ ಇಟ್ಟುಕೊಂಡಿದ್ದಾನೆಂದೋ

---

[2] ರಾಮದಾಸ್: ಅಭಿವ್ಯಕ್ತಿ; ಪುಟ 21.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಥವಾ ವಸ್ತುವಿಗೆ ಸಂಬಂಧಿಸಿದ ವಾತಾವರಣದಲ್ಲಿಯೇ ಬಾಳುತ್ತಿದ್ದಾನೆಂದೋ ಭಾವಿಸುವುದು ತಪ್ಪಾಗುತ್ತದೆ. ತಾನು ಉದ್ದೇಶಿಸಿರುವ ವರ್ತಮಾನದ ಸತ್ಯವೊಂದನ್ನು ವ್ಯಕ್ತಮಾಡಲು ಯಾವ ರೀತಿಯಲ್ಲಿಯೇ ಆದರೂ ಆ ಕೃತಿಯನ್ನು ಒಂದು ಸಾಧನವಾಗಿ ಬಳಸಿ ಅದಕ್ಕೆ ಹೊಸ ಅರ್ಥದ ನೆಲೆಯೊಂದನ್ನು ಕವಿ ಕೊಡಬಹುದು. ಈ ನೆಲೆಯಲ್ಲಿ ನಿಂತು ನೋಡಿದಾಗ ಇಡೀ ಕೃತಿ ವರ್ತಮಾನದ ಸತ್ಯವೊಂದನ್ನು ಪ್ರಕಟಿಸುವ ತಂತ್ರ ವಾಗುತ್ತದೆ. 'ಹೇಳತೇನ ಕೇಳ' ದಲ್ಲಿ ಕವಿ ಒಂದು ಜಾನಪದ ಕಥೆ ಹೇಳುತ್ತಿರುವುದು ಸುಳ್ಳೇನಲ್ಲ. ಆ ಕಥೆಗೆ ಸಹಜವಾದ ಶ್ರದ್ಧೆ ನಂಬಿಕೆಗಳನ್ನು ಅವರು ಬಳಸಿರುವುದೂ ನಿಜ. ಅದರಿಂದ ಆ ಕಥೆ ಒಂದು ಬಗೆಯ ಅಮಾನುಷ ವಾತಾವರಣವನ್ನು ಹೊದ್ದು ಭಯವಿಸ್ಮಯಕಾರಿಯಾಗಿದ್ದು, ಅಷ್ಟಕ್ಕೇ ಒಂದು ಉತ್ತಮ ಕೃತಿಯಾಗಿರುವುದೂ ನಿಜ. ಆದರೆ ಇಷ್ಟು ಗ್ರಹಿಸಿದರೆ ಈ ಕಥೆ ಕೆಲಸಮಾಡುವ ಒಂದು ಮಟ್ಟವನ್ನು ಮಾತ್ರ ಗುರುತಿಸಿದಂತಾಯಿತು. ಈ ಕವನ ರೂಪಕದ ಮಟ್ಟದಲ್ಲಿ ಸಾಧಿಸುವ ಅರ್ಥವನ್ನು ಗ್ರಹಿಸದೆ ಹೋಗುವುದು "ನಿಧಿಯನೆಡವಿ ಮುಂದೆ ನಡೆವ ಕುರುಡರ" ಪರಿಯಾಗುತ್ತದೆ. ತನ್ನ ರೂಪಕಾರ್ಥಕ್ಕೆ ಇಡೀ ದೇಶದ ಬದುಕನ್ನೇ ಕುರಿಯುವ ಈ ಕೃತಿಗೆ ಒಂದು ಜಾನಪದ ಕಥೆಯನ್ನೇ ಆರಿಸಿಕೊಂಡಿರುವುದು ಒಂದು ಅರ್ಥದಲ್ಲಿ ಸೂಕ್ತವೂ ಆಗಿದೆ. ಶತಶತಮಾನದ ಶ್ರದ್ಧೆ ನಂಬಿಕೆಗಳನ್ನೇ ಕಣ್ಣಾಗಿ ಮಾಡಿಕೊಂಡು ಲೌಕಿಕದಲ್ಲಿ ಪಾರಲೌಕಿಕ ಬೆರೆಸಿಕೊಂಡುಬಂದಿರುವ, ಸ್ವರೂಪದಲ್ಲಿ ರಾಷ್ಟ್ರವಾದರೂ ಸತ್ವದಲ್ಲಿ ಹಳ್ಳಿಯೇ ಆದ ಈ ದೇಶದ ಸದ್ಯಸ್ಥಿತಿಯನ್ನು ಸೂಚಿಸಲು ಒಂದು ಗ್ರಾಮಕಥೆಯೇ ಉಚಿತ ಎನ್ನಿಸುತ್ತದೆ.

'ಹೇಳತೇನ ಕೇಳ' ನಮ್ಮ ಆಧುನಿಕ ಬದುಕಿಗೆ ಸಂಬಂಧಿಸಿದ ಏನನ್ನಾದರೂ ಹೇಳಬಹುದೇ ಎಂದು ಹುಡುಕಹೊರಟು ಅಂಥದೇನನ್ನೂ ಕಾಣದೆ "ಈ ದೃಷ್ಟಿ ಯಿಂದ ಕಂಬಾರರ ಪ್ರಯತ್ನ ಒಂದು ವ್ಯರ್ಥ ಪ್ರಯತ್ನ ಅಥವಾ ಒಂದು ವ್ಯರ್ಥ ಪ್ರಯೋಗ" ಎಂದವರಿದ್ದಾರೆ.[3] ಅದಕ್ಕೆ ಪ್ರತಿಯಾಗಿ "ಕವನದ ಉದ್ದಕ್ಕೂ ಕವಿ ಒಂದು ಜಾನಪದ ಕಥೆಯ ಮೂಲಕ ಆಧುನಿಕ ಜೀವನಕ್ಕೊಂದು ಪ್ರತಿಮೆಯನ್ನು ಹುಡುಕುತ್ತಿದ್ದಾರೆ"[4] ಎಂದು ಅದಕ್ಕೆ ಮುನ್ನುಡಿ ಬರೆದ ಅಡಿಗರೇ ಒಪ್ಪಿದ್ದಾರೆ. ಅಡಿಗರು ಮುಂದುವರೆದು "ಇಷ್ಟಾದರೂ ಕವನದ ಇಡೀ ವಾತಾವರಣವೇ ಕವಿಯ ಆಧುನಿಕ ಅನುಭವಕ್ಕೆ ಪ್ರತಿಗಾಮಿಯಾಗಿ ನಿಲ್ಲುವುದರಿಂದ ಸಾರ್ಥಕ ಪ್ರತಿಮೆ ಮೂಡು ವುದಿಲ್ಲ. ಕವನ ಒಂದು ಹೃದ್ಯವಾದ ಜಾನಪದ ಕಥೆಯಾಗಿ ಮಾತ್ರ ನಮ್ಮ ಮನಸ್ಸಿನಲ್ಲಿ ನಿಲ್ಲುತ್ತದೆ[5] ಎಂದು ಹೇಳಿಬಿಡುತ್ತಾರೆ. ಇದು ಹೇಗೆ ಎನ್ನುವುದನ್ನು ಅವರು ತಿಳಿಸುವುದಿಲ್ಲ.

---

[3] ಅದೇ, ಪುಟ 26.

[4] ಗೋಪಾಲಕೃಷ್ಣ ಅಡಿಗ; 'ಹೇಳತೇನ ಕೇಳ' ಸಂಗ್ರಹದ ಮುನ್ನುಡಿ.

[5] ಅದೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಥೆಯಲ್ಲಿನ ಪ್ರತಿಯೊಂದು ಸಾಲೂ ಪ್ರತಿಮಾತ್ಮಕವಾದ ಅರ್ಥಕ್ಕೆ ದುಡಿಯುವುದಿಲ್ಲ ಎನ್ನುವುದನ್ನು ಬಿಟ್ಟರೆ ಕಥೆಯ ಒಟ್ಟು ನಕ್ಷೆ ಒಂದು ರೂಪಕವಾಗಿ ಪ್ರಯೋಗವಾಗಿರುವುದು ಸುಳ್ಳಲ್ಲ. ಮೊದಲನೆಯದಾಗಿ ಕಂಬಾರರಂಥ ಕಲಾಪ್ರಜ್ಞೆಯುಳ್ಳ ವ್ಯಕ್ತಿ ಒಂದು ಜಾನಪದ ಕಥೆಯನ್ನು ಕೇವಲ ಕಥೆಗಾಗಿ ಮಾತ್ರವೇ ಹೇಳಿದರೆಂದು ವಿಚಾರ ಮಾಡುವುದೇ ಸ್ವಲ್ಪ ವಿಚಿತ್ರವೆನಿಸುತ್ತದೆ. ಹಾಗೆಂದು ಅಷ್ಟಕ್ಕಾಗಿಯೇ ಇದನ್ನು ಒಂದು ರೂಪಕ ಕವನವಾಗಿ ಭಾವಿಸಬೇಕೆಂದು ನನ್ನ ಅರ್ಥವಲ್ಲ. ಆರಂಭದಿಂದಲೇ ಕವಿತೆ ವಾಚ್ಯಕ್ಕೆ ಹೊರತಾದ ಅರ್ಥವೊಂದಕ್ಕೆ ಹವಣಿಸುವುದು ಸ್ಪಷ್ಟವಾಗಿದೆ. ಕಥೆ ಹೇಳುವುದರ ಜೊತೆಗೆ ರೂಪಕದ ನೆಲೆಯಲ್ಲಿ ಎರಡು ಸಂಸ್ಕೃತಿಗಳ ಸಂಘರ್ಷಣವನ್ನೂ ಅದು ಹೇಳುತ್ತದೆ. ಒಂದೆರಡು ಕಡೆಯಂತೂ ಕೇವಲ ಅನ್ಯಾರ್ಥದ ನೆಲೆಯಲ್ಲಿ ಮಾತ್ರವೇ ಅರ್ಥಪ್ರದವಾಗುವ ಸಾಲುಗಳಿಂದ ಇದು ಇನ್ನೂ ಖಚಿತವಾಗುತ್ತದೆ.

ಕವನದ ಕಥಾನಕ್ಕ ಇದು : ಹೊರಗಿನ ದುಷ್ಟಶಕ್ತಿಯೊಂದು ಗ್ರಾಮದ ಸುಖ ಸಮೃದ್ಧಿಗಳನ್ನು ಕಾಪಾಡಿಕೊಂಡಿದ್ದ ಗೌಡನನ್ನು ಮೋಸದಿಂದ ಎಳೆದು ಕೊಲ್ಲುತ್ತದೆ : ಗೌಡನಂತೆಯೇ ವೇಷ ಧರಿಸಿ ಅವನ ಅಧಿಕಾರಕ್ಷೇತ್ರಗಳನ್ನು ಆಕ್ರಮಿಸುತ್ತದೆ; ತನ್ನ ಸ್ವಭಾವವನ್ನು ಹಳ್ಳಿಯ ನೆಲ ಗಾಳಿ ಬದುಕಿಗೆಲ್ಲ ಬೆರೆಸತೊಡಗುತ್ತದೆ ; ಹಳ್ಳಿಯ ಸತ್ವ ಸಮೃದ್ಧಿ ಸ್ವಭಾವಗಳಿಗೆ ಕಾರಣವಾದ ಶಕ್ತಿಮೂಲಗಳನ್ನೆಲ್ಲ ಸುಧಾರಣೆಯ ನೆವದಲ್ಲಿ ಉಪಾಯವಾಗಿ ನಾಶಮಾಡಲು ತೊಡಗುತ್ತದೆ. ಈ ಕೆಲಸವನ್ನೆಲ್ಲ ಅದು ಹಳ್ಳಿಯ ಜನಗಳಿಂದಲೇ ಮಾಡಿಸುತ್ತದೆ. ನಿಜವಾದ ಗೌಡನ ಮಗನಾಗಿದ್ದು. ಹಳ್ಳಿಯ ಉತ್ತರಾಧಿಕಾರಿಯಾಗುವ ಯೋಗ್ಯತೆ ಇರುವ ರಾಮ ಗೋಂಡನಿಗೆ ಮಾತ್ರ ಇದು ಸೂಕ್ಷ್ಮವಾಗಿ ತಿಳಿದಿದೆ. ಸದ್ಯಕ್ಕೆ ಅವನು ವಿಷಣ್ಣನಾಗಿದ್ದಾನೆ. ಆದರೂ ಮುಂದೆ ತಾಯಿಯನ್ನು ಮತ್ತು ಹಳ್ಳಿಯನ್ನು ಈ ಅಪಾಯದಿಂದ ಪಾರು ಮಾಡುವ ಕಾಲ ಬರುವುದೆಂಬ ಭರವಸೆ ಅವನಿಗಿದೆ. ಋಷಿಯಿಂದ ತಾನು ಪಡೆದು ತರುವ ಮಂತ್ರಜಲದ ಬಲದಿಂದ ಮಾಯಾವಿಗೌಡನ ವೇಷ ಬಯಲಾಗಿ ಹಳ್ಳಿ ತನ್ನ ಮುಂಚಿನ ಸುಖಸ್ಥಿತಿಗೆ ಮತ್ತೆ ಮರಳುವುದೆಂಬ ನಂಬಿಕೆ ಹೊತ್ತು ಅದಕ್ಕಾಗಿ ಅವನು ಕಾಯುತ್ತಿದ್ದಾನೆ. ಇಲ್ಲಿಗೆ ಈ ಕವನ ಹಠಾತ್ತಾಗಿ ನಿಲ್ಲುತ್ತದೆ—ತನ್ನ ನಿಲುವಿನ ಭಂಗಿಯಿಂದಲೇ ಇದು ಅಪೂರ್ಣ ಎನ್ನುವುದನ್ನು ಸೂಚಿಸುವಂತೆ ಮುಂದೆ ಇದೇ ವಸ್ತು 'ಋಷ್ಯಶೃಂಗ'ದಲ್ಲಿ ನಾಟಕವಾಗಿ ಮುಂದುವರಿದಿದೆ.

ಮೇಲಿನ ಕಥೆ ಒಂದು ನಿರ್ದಿಷ್ಟ ಜನಪದ ಎರಡು ಸಂಸ್ಕೃತಿಗಳ ಸಂಘರ್ಷದಲ್ಲಿರುವುದನ್ನು ಮಾರ್ಮಿಕವಾಗಿ ಸೂಚಿಸುತ್ತದೆ. ತನ್ನ ಸ್ವಭಾವಕ್ಕೆ ಸ್ವರೂಪಕ್ಕೆ ಹೊರತಾದ ಹೊರಗಿನ ಶಕ್ತಿಯೊಂದರ ಆಕ್ರಮಣಕ್ಕೆ ಸಿಕ್ಕು ನಿಸ್ಸತ್ವವಾಗುತ್ತಿರುವ ಜನಪದ ಅದನ್ನು ತೊಡೆದು ಮತ್ತೆ ತನ್ನ ಸ್ವಭಾವಕ್ಕೆ, ಸ್ವಧರ್ಮಕ್ಕೆ ಮರಳಬೇಕೆನ್ನುವ ನಿರೀಕ್ಷೆಯಿಂದ ಮುಗಿಯುವ ಚಿತ್ರ ಇಲ್ಲಿದೆ. ಕಥೆ ಇಂಥ ಅನ್ಯಾರ್ಥಕ್ಕೆ ಚಾಚಿಕೊಳ್ಳಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುವಾಗುವುದನ್ನು ಆರಂಭದಲ್ಲಿ ಬರುವ ಶಿವಾಪುರ ಗ್ರಾಮದ ಆಲದಮರದ ವರ್ಣನೆಯಲ್ಲಿಯೇ ಕಾಣಬಹುದು.

ಮಾಡಿದನು ಹರಿಯಿಲ್ಲಿ ಬೋಧಾ
ಬೆಳೆದಾರು ಇಲ್ಲೆ ವೇದಾ
ಈ ನೆರಳ ತಂಪಿನ ಹಸಾದಾ
ಕೊನೆಕೊನೆಗೆ ಬುದ್ಧ ಏಸಾದ

ಈ ವರ್ಣನೆ ಕೇವಲ ಒಂದು ಮರಕ್ಕೆ ಅಥವಾ ಅದು ಇರುವ ಗ್ರಾಮಕ್ಕೆ ಮಾತ್ರ ಅನ್ವಯವಾಗುವಂಥದಲ್ಲ ಎನ್ನುವುದು ಯಾರಿಗೂ ತಿಳಿದೀತು. ಕೃಷ್ಣ ಇಲ್ಲಿಯೇ ಗೀತೋಪದೇಶ ಮಾಡಿದನೆಂಬ ಮಾತು. ವೇದಗಳ ರಚನೆ ಇಲ್ಲಿಯೇ ಆಯಿತೆಂಬ ಹೇಳಿಕೆ. ಬುದ್ಧನ ಪ್ರಸ್ತಾಪ—ಇವೆಲ್ಲ ಆಲದಮರವನ್ನು ಭಾರತೀಯ ಪರಂಪರೆಗೆ ಸಂಕೇತವಾಗಿಸುತ್ತ ಶಿವಾಪುರ ಗ್ರಾಮವನ್ನು ಅಂಥ ಪರಂಪರೆಗೆ ನೆಲೆಯಾದ ದೇಶದೊಡನೆ ಸಮೀಕರಿಸಿಬಿಡುತ್ತದೆ. ಶತಮಾನಗಳಿಂದ ಬಂದ ಧಾರ್ಮಿಕ ಶ್ರದ್ಧೆ, ಆಸ್ತಿಕತೆ ಮೊದಲಾದುವು 'ಈ ನೆರಳ ತಂಪು' ಆಗಿ ಧ್ವನಿತವಾಗಿದೆ.

ನದಿಯ ತೆರೆಗಳ ಮ್ಯಾಲೆ ಬಿಸಲಿಂದ ಬರಬರದ
ಈ ತಂಪ ಕಳಿಸ್ಯಾರ ದಿಗ್ದೇಶಕ

ಎನ್ನುವ ಮಾತು ಸಹ ಭಾರತದ ಜೀವನದರ್ಶನ ಸಾಗರಗಳನ್ನು ದಾಟಿ ಹೊರದೇಶಗಳಿಗೂ ಕಾಲಿಟ್ಟದ್ದನ್ನು ಹೇಳುತ್ತದೆ. ಇಲ್ಲಿಂದ ಮುಂದೆ ಈ ಅನ್ಯಾರ್ಥದ ನೆಲೆಯನ್ನು ಗಮನದಲ್ಲಿಟ್ಟು ಕಥೆಯನ್ನು ಪರಿಶೀಲಿಸಿದರೆ (ಪ್ರತಿ ಪದ, ವಾಕ್ಯಗಳಿಂದ ಅಲ್ಲದಿದ್ದರೂ ಒಟ್ಟು ವಿನ್ಯಾಸದಲ್ಲಿ) ಅದು ಒಂದು ರೂಪಕವಾಗಿ ಕೆಲಸಮಾಡುವುದನ್ನು ಕಾಣಬಹುದು.

ಕರಿಯಜ್ಜ ಗ್ರಾಮದಲ್ಲಿ ಎಲ್ಲರಿಗಿಂತ ಹಿರಿಯ. ಅವನ ಮಾತಿಗೆ ಅಲ್ಲಿ ಎದುರಿಲ್ಲ. ಅಷ್ಟೇ ಅಲ್ಲ, "ಕರಿಯಜ್ಜ ಹಾಕಿದ ಗೆರೆಗಳ ಯಾರ್ಯಾರು ದಾಟಿಲ್ಲ ಹದಿನಾಲ್ಕು ಹಳ್ಳಿಯೊಳಗ" ಅವನು ಆ ಗ್ರಾಮದ ಪರಂಪರಾಗತ ಸತ್ವದ ಮನುಷ್ಯಸಂಕೇತವೆಂಬಂತೆ ಇರುವ ಗ್ರಾಮವೃದ್ಧ. ಗೌಡನನ್ನು ಕೊಂದು ಅವನ ವೇಷ ಧರಿಸಿ ಊರಿನೊಳಗೆ ಹೊಕ್ಕ ರಾಕ್ಷಸಶಕ್ತಿಗೂ ಅವನಿಗೂ ಒಳಗೇ ವಿರೋಧವಿದೆ. ಈ ವಿರೋಧ ಮತ್ತು ಮುಂಚಿನ ಗೌಡನ ಮಗನಾದ ರಾಮಗೊಂಡನೊಡನೆ ಕರಿಯಜ್ಜನಿಗಿರುವ ಆಪ್ತತೆ ಎರಡೂ ಅರ್ಥವತ್ತಾದ ಅಂಶಗಳು. ಹಾಗೆಯೇ ಈ ಆಪ್ತತೆ ಕಂಡಾಗಿನ ರಾಕ್ಷಸಗೌಡನ ಕ್ರೋಧವನ್ನು ಗಮನಿಸಬೇಕು. ಅವರಿಬ್ಬರನ್ನೂ ಒಟ್ಟಿಗೆ ಕಂಡಾಗ ಮಾಯಾವಿಗೌಡ 'ಹಾವಿನ ಹುತ್ತಿನ್ಹಾಂಗ ಮೂಗು ಮುರಿದುಕೊಂಡು' ಹೋಗುತ್ತಾನೆ. ಮಾಯಾವಿಗೌಡನ ಆಗಮನಾನಂತರ ಊರಿನ ಹುಡುಗರ ಸ್ವಭಾವ ಹೇಗೆ ಬದಲಾಯಿತು ಎನ್ನುವುದನ್ನೂ ಕವನ ಅನ್ಯಾರ್ಥದ ಸೆರಗು ಹಿಡಿದೇ ಬಣ್ಣಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಊರೀನ ಹುಡುಗೋರು ದೊಡ್ಡಾಟ ಬಿಟಕೊಟ್ಟು
ನಾಟಕವಾಡ್ಯಾರು ಪಟ್ಟಪೈಲೇಕ
ಹೇಸಿ ಹೆಣ್ಣಿನ್ಹಾಂಗ ಪುಗ್ಗ ತೆಗೆದು ಕುಣೇತಾವ
ನೋಡಲಿಲ್ಲ ರಾಮಗೊಂಡ ಕರಿಮುದುಕ

ದೊಡ್ಡಾಟ ಹಳ್ಳಿಯಲ್ಲೇ ಬಂದ ಒಂದು ಪ್ರಾಚೀನ ಕಲೆ. ಈವರೆಗೆ ಅದನ್ನು ಆಡುತ್ತಿದ್ದ ಹುಡುಗರು ಈಗ ಮೊದಲಬಾರಿಗೆ ನಾಟಕಕ್ಕೆ ತೊಡಗಿದ್ದಾರೆ: 'ನಾಗರಿಕ' ರಾಗುತ್ತಿದ್ದಾರೆ. ತೋಳು ಬೆಳೆದ ಬಲಿಷ್ಠ ಹುಡುಗರು 'ಹೇಸಿ ಹೆಣ್ಣಿನ್ಹಾಂಗ ಪುಗ್ಗ ತೆಗದು ಕುಣಿದರೆ' ಆ ಲಜ್ಜೆಗೇಡಿತನಕ್ಕೆ ಕರಿಯಜ್ಜ ರಾಮಗೊಂಡ ನಾಚುತ್ತಾರೆ. ಹೊರಶಕ್ತಿಯ ಪ್ರಭಾವಕ್ಕೆ ಸಿಕ್ಕು ಕಳಂಕಿತರಾಗದೆ ಸ್ವಧರ್ಮದಲ್ಲಿ ಉಳಿದಿರುವವರು ಅವರಿಬ್ಬರೇ. ಅವರಿಬ್ಬರೂ ಕವನದಲ್ಲಿ ಒಟ್ಟಿಗೇ ಕಾಣಿಸಿಕೊಳ್ಳುವುದು ಪರಂಪರೆಗೆ ಸಂಕೇತವಾದ ಆಲದಮರದ ಕೆಳಗೇ !

ದೊಡ್ಡಾಟ ಬಿಟ್ಟುಕೊಟ್ಟ ಹಳ್ಳಿಯ ಹುಡುಗರು ಕೆಟ್ಟ ಚಾಳಿಗೆ ಬಿದ್ದಿದ್ದಾರೆ; ನಿರ್ವೀರ್ಯರೂ ನಿಸ್ತೇಜರೂ ಆಗಿ 'ಹುಳು ಮೇದ ಬಣಧಾಂಗ' ಒಣಗುತ್ತಿದ್ದಾರೆ. ನೆರೆ ಬಂದ ನದಿಯಲ್ಲಿ ಈಜುತ್ತಿದ್ದವರು 'ಲುಟುಲುಟು ಕಾಲು ಬಡದು ದಂಡ್ಯಾಗ' ಈಜುತ್ತಿದ್ದಾರೆ. ಬಲಿಷ್ಠರಾಗಿ ಒಡ್ಡಾಗಿ ಇದ್ದವರು ಅಲಂಕಾರ ಪೋಷಾಕು ಷೋಕಿಗಳಿಗೆ ಬಲಿಯಾಗಿದ್ದಾರೆ; ಬೈತಲೆ ತೆಗೆದು ಕೂದಲು ಬಾಚಿದ್ದಾರೆ; ಬಿಳಿಚಾಯಿ ತೊಟ್ಟು ಹಲ್ಲು ಕಿಸಿಯುತ್ತ, ಸಿಳ್ಳು ಹಾಕುತ್ತ, ಸಂತೆಬೀದಿಯಲ್ಲಿ ಬಿದ್ದ ತಿಂಡಿ ತಿನ್ನಲು ಅಲೆಯುವ ಘರಿಸೀ ನಾಯಿಗಳ ಹಾಗೆ ಹೆಣ್ಣುಗಳು ನೀರು ತರುವ ದಾರಿಯಲ್ಲಿ, ಬಿಳಿ ಹುಡುಗಿಯರಿರುವ ಹಾರುವರ ಕೇರಿಯಲ್ಲಿ ಅಲೆಯಲು ಶುರುಮಾಡಿದ್ದಾರೆ. ಗ್ರಾಮದ ಜೀವನರೀತಿಗೆ ಹೊರತಾದ ವಿಕಾರಗಳನ್ನು ಬೆರೆಸುತ್ತ ನಗರ ಹಳ್ಳಿಯಲ್ಲಿ ಹೆಜ್ಜೆಯಿಟ್ಟಿದೆ.

ಹಿಂದಿನ ಗೌಡನಿಗೂ ಈಗಿನ ಮಾಯಾವಿಗೌಡನಿಗೂ ಇರುವ ವ್ಯತ್ಯಾಸ ಸೂಕ್ಷ್ಮವಾಗಿ ಆದರೂ ರೂಪಕ ಚಿತ್ರದ ಒಂದು ಪರಿಣಾಮಕಾರಿ ರೇಖೆಯಾಗಿ ವ್ಯಕ್ತವಾಗಿದೆ.

ಹೊತ್ತೇರಿ ಎದ್ದ ಗೌಡ ಬಡ್ಡೀಗಿ ಹಣ ಕೊಟ್ಟು
ಕೂಡ್ಯಾನ ಚಾವಡ್ಯಾಗ ದೊಡ್ಡ ಸಭಾ
ಹಸಿಮಕ್ಕಳ ಸಲುವಾಗಿ ಗರಡೀಯ ಮನೆ ಕೆಡವಿ
ಹೊಸಸಾಲೆ ಕಟ್ಟಿಸೋಣ—ಬಲೆ ಶೋಭಾ

ಎನ್ನುತ್ತಾನೆ. ಗೌಡ ಹೊತ್ತೇರಿ ಏಳುತ್ತಿರುವುದು, ಊರನ್ನು ಕಾಪಾಡಬೇಕಾದವನು ಬಡ್ಡಿಗೆ ಹಣ ಸಾಲ ಕೊಡುತ್ತಿರುವುದು ಎರಡೂ ಅವನು ಹಳ್ಳಿಯನ್ನು ನಿರ್ಲಕ್ಷಿಸಿ ತನ್ನ ಸ್ವಂತಸುಖಕ್ಕೆ ಅದನ್ನು ಬಳಸುತ್ತಿರುವುದನ್ನು ಹೇಳುತ್ತವೆ. ಇಷ್ಟೇ ಅಲ್ಲ. ಗರಡಿಯ ಮನೆ ಕೆಡವಿಸಿ ಶಾಲೆ ಕಟ್ಟಿಸುತ್ತಿದ್ದಾನೆ: ಅದಕ್ಕೆ ಹಳ್ಳಿಯ ಜನಗಳನ್ನೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಳಸುತ್ತಿದ್ದಾನೆ. ಗ್ರಾಮವನ್ನು ಬದಲಿಸಿಬಿಡುವ ಕಾರ್ಯ ಎಷ್ಟು ಅಬ್ಬರದಿಂದ ನಡೆದಿದೆಯೆಂದರೆ ಶುಕ್ರವಾರ ಶುರುವಾದ ಕಟ್ಟಡ ಭಾನುವಾರಕ್ಕೆ ಮುಗಿದುಹೋಗಿದೆ. ಆದರೆ ಸೋಮವಾರವೇ ಅದರ ಬುಡ ಬಿರುಕು ಬಿಟ್ಟಿದೆ. ಆಲದ ಮರದ ಬೇರುಗಳು ಅಲ್ಲಿಗೆ ಬಂದು ತೊಡರಿಕೊಂಡಿವೆ. ಅದರಿಂದ ಶಾಲೆಯ ಕಟ್ಟಡಕ್ಕೆ ತೊಂದರೆಯೆಂದು ತಿಳಿಸಿ ಅದರ ನೆರಳಿನಲ್ಲಿ ಬೆಳೆದ ಜನರಿಂದಲೇ ಅದನ್ನು ಕಡಿಸಲು ಹೊರಟಿದ್ದಾನೆ, ಗೌಡ. ಕರಿಯಜ್ಜ ಅಡ್ಡನಿಂತು ಕೈ ಮುಗಿದು ಬೇಡಿದರೂ ಜನ ಅವನನ್ನು ಸರಿಸಿ ಮರವನ್ನು ಕಡಿದೆಸೆದು ಸ್ಕೂಲಿನ ಪೂಜೆ ನಡೆಸಿದ್ದಾರೆ.

ಆಲದ ಬೇರುಗಳು ಗರಡಿಮನೆಯ ಪಾಯಕ್ಕೆ ಬಂದು ತಲಪಿರುವುದು ಊರಿನ ನೆಮ್ಮದಿ ನಂಬಿಕೆಗಳಿಗೂ, ಆ ಜೀವನದ ಶಿಸ್ತು ಶಕ್ತಿಗಳ ಪ್ರತಿನಿಧಿಯಂತೆ ಇರುತ್ತ ಹಳ್ಳಿಗೆ ಕೋಟೆಯಂತಿರುವ ಗರಡಿ ಮನೆಗೂ ಇರುವ ಸಂಬಂಧವನ್ನು ಹೊಳೆಯಿಸುತ್ತದೆ. ಶುಕ್ರವಾರದ ದಿನ ಗರಡಿಮನೆ ಕೆಡವಿಸುವುದು. ಸೋಮವಾರ ಆಲದಮರ ಕಡಿಸುವುದು ಅಪಕೃತ್ಯಗಳೆನ್ನುವುದನ್ನು ಅವು ಘಟಿಸಿದ ದಿನಗಳೂ ತಿಳಿಸುತ್ತವೆ. ಅಲ್ಲದೆ ಹದಿನಾಲ್ಕು ಹಳ್ಳಿಗೂ ಮಾತುಭಾರನಾಗಿದ್ದ ಹಿರಿಯ ಕರಿಯಜ್ಜನನ್ನು ಅವನ ಹಳ್ಳಿಯವರೇ ಪಕ್ಕಕ್ಕೆ ತಳ್ಳಿ ಮರ ಕಡಿಯುವುದು, ಆ ದಿನವೇ ಕರಿಯಜ್ಜ ತೀರಿಕೊಳ್ಳುವುದು ಪರಿಣಾಮಕಾರಿಯಾದ ಪ್ರತಿಮಾತ್ಮಕ ಘಟನೆಗಳು. ಪರಂಪರಾಗತ ಮೌಲ್ಯಗಳಿಗೆ ಜನ ತೋರಿದ ಧಿಕ್ಕಾರಭಾವಕ್ಕೆ ಇವು ನಿದರ್ಶನ. ಜೊತೆಗೆ ಊರನ್ನಾಳುವ ಕರಿಯಮ್ಮ ಆಲದಮರದ ಕೆಳಗೇ ಪೂಜೆಗೊಳ್ಳುತ್ತಿದ್ದದ್ದು. ಅವಳ ತಲೆಮೇಲಿನ ತಂಪು ರಕ್ಷೆಯನ್ನು ತೆಗೆದು ಹಳ್ಳಿಯ ಜನ ದೈವವನ್ನೇ ತಿರಸ್ಕರಿಸಿದ್ದಾರೆ ! ಹಳ್ಳಿಗೆ ಚಾಚಿಕೊಳ್ಳುತ್ತಿರುವ ನಾಗರಿಕತೆ ಈ ಹಳ್ಳಿಯ ಸ್ವಧರ್ಮವನ್ನು, ಆ ಧರ್ಮದ ಪಾಲನೆಯ ಮೂಲಕ ಅದು ಗಳಿಸಿಕೊಂಡಿದ್ದ ಸುಖಶಾಂತಿಗಳನ್ನು ಹೇಗೆ ಕೊಲ್ಲುತ್ತಿದೆ ಎನ್ನುವುದು ಮೇಲಿನ ಸಂಗತಿಗಳಲ್ಲಿ ಸಮರ್ಥವಾಗಿ ಸೂಚಿತವಾಗಿದೆ.

ಈ ಪ್ರಸಂಗವನ್ನು ವ್ಯಾಖ್ಯಾನಿಸುತ್ತ ವಿಮರ್ಶಕರೊಬ್ಬರು "ಗೌಡ ಮರ ಕಡಿಸಿ ಗರಡಿ ಕೆಡವಿ ಶಾಲೆ ಕಟ್ಟಿಸಿದ್ದು ರಚನಾತ್ಮಕವಾದ ಸುಧಾರಣೆ"[6] ಎನ್ನುತ್ತಾರೆ. ಇದು ಆ ಪ್ರಸಂಗದ ಧ್ವನ್ಯರ್ಥವನ್ನು ಗ್ರಹಿಸದೆ ಹೇಳಿದ ಮಾತಾಗಿ ಕಾಣುತ್ತದೆ. ಕವಿ ಗೌಡ ಸ್ಕೂಲು ಕಟ್ಟಿಸಿದ ಎಂದಷ್ಟೇ ಹೇಳುವುದಿಲ್ಲ : ಗರಡಿಯನ್ನು ಕೆಡವಿಸಿ ಅದರ ಜಾಗದಲ್ಲಿ ಸ್ಕೂಲು ಕಟ್ಟಿಸಿದ್ದನ್ನು ಹೇಳುತ್ತಾರೆ. ಗರಡಿಗೆ ತೊಂದರೆಯಾಗದಿದ್ದ ಮರ ಸ್ಕೂಲಿನ ಕಟ್ಟಡಕ್ಕೆ ತೊಡಕಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಆರಂಭದಲ್ಲಿಯೇ ಕವಿ ಈ ಮರವನ್ನು ಎಷ್ಟೆಲ್ಲ ಅರ್ಥಕ್ಕೆ ಸಂಕೇತವಾಗಿ ಒಡ್ಡಿದ್ದಾರೆ ಎನ್ನುವುದನ್ನು ನೋಡಿದಾಗ ಇದನ್ನು ಕಡಿಸುವುದು ಗ್ರಾಮದ ಬೇರಿಗೆ ಬಿಸಿನೀರು

---

6 ರಾಮದಾಸ್: ಅಭಿವ್ಯಕ್ತಿ; ಪುಟ 23.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಯ್ದು ಘಟನೆಯಾಗಿ ತೋರುತ್ತದೆ. ಕರಿಯಜ್ಜ, ಕರಿಯಮ್ಮಗಳಿಗೆ ಜನ ತೋರಿದ ತಿರಸ್ಕಾರ ಕೂಡ ಅರ್ಥವತ್ತಾದದ್ದು. ಇಷ್ಟೆಲ್ಲ ಸ್ಕೂಲಿನ ಸಲುವಾಗಿ ನಡೆಯುತ್ತದೆ ಎನ್ನುವಾಗ ಕವನದಲ್ಲಿ 'ಸ್ಕೂಲು' ಪಡೆದುಕೊಳ್ಳುವ ಅರ್ಥ ಬೇರೆಯೇ ಆಗುತ್ತದೆ.

ಮುಂದೆ ಗೌಡಿತಿ ರಾಕ್ಷಸಶಕ್ತಿಯ ಸಹವಾಸದಿಂದ ಗರ್ಭಿಣಿಯಾದಾಗ ಅವಳಲ್ಲಿ ಕಾಣಿಸಿಕೊಳ್ಳುವ ಬಯಕೆಗಳು ಸಹ ಅನ್ಯಾರ್ಥಕ್ಕೇ ಹೆಚ್ಚು ಪೋಷಕವಾಗಿವೆ. ಹುಲಿ ಹಾಲು, ಹೃದಯ, ಕಣ್ಣಗುಡ್ಡೆ, ನಾಲಗೆ, ಮೈತೊಗಲುಗಳನ್ನು ತಿಂಗಳಿಗೊಂದೊಂದರಂತೆ ತಿನ್ನಲು ಬೇಡುವ ಗೌಡಿತಿಯ ಬಯಕೆಯಲ್ಲಿ ಹುಟ್ಟಲಿರುವ ಸಂತಾನದ ಪಶುಬುದ್ಧಿ, ಕ್ರೌರ್ಯ, ಪೈಶಾಚಿಕತೆಗಳು ಧ್ವನಿತವಾಗುತ್ತವೆ. ಲಜ್ಜೆಗೆಟ್ಟು ಮಗನನ್ನೇ ಸರಸಕ್ಕೆ ಕರೆಯುವ ಗೌಡಿತಿಯ ನಡವಳಿಕೆ ಮುಂದೆ ಮನುಷ್ಯಸಂಬಂಧಗಳ ಪಾವಿತ್ರ್ಯಕ್ಕೆ ಒದಗಲಿರುವ ದುರ್ಗತಿಯನ್ನು ತಿಳಿಸುತ್ತದೆ.

ಹೊರಗಿನ ಶಕ್ತಿಯ ಆಡಳಿತದಲ್ಲಿ ಗ್ರಾಮಕ್ಕೆ ಸುಖನೆಮ್ಮದಿಗಳಿಲ್ಲ. ಪೂರ್ವ ಜೀವನ ಪುನರುಜ್ಜೀವಗೊಂಡರೆ ಮಾತ್ರ ಊರು ಸುಖದಿಂದ ಬಾಳೀತು ಎನ್ನುವ ಅರ್ಥ ಕವನದ ಕಡೆಯಲ್ಲಿ ಎರಡನೆಯ ಬಾರಿ ಬರುವ

> ದಿಕ್ಕಿನಾಗ ದಿಕ್ಕ ಮೂಡಣ
> ಅಲ್ಲಿ। ಒಬ್ಬ ಸಾಧು ಶರಣಾ
> ಕೊಡ। ತಾನ ಮಂತ್ರಿಸಿದ ನೀರಾ
> ಸಿಂ। ಪಡಿಸ ರಾಕ್ಷಸಗ ಪೂರಾ

ಎನ್ನುವ ಸಾಲುಗಳಲ್ಲಿ ಮತ್ತೆ ಅನುರಣಿತವಾಗುತ್ತದೆ. ಇಲ್ಲಿ ಬಳಕೆಯಾಗಿರುವ 'ಮೂಡಣ' 'ಸಾಧುಶರಣ' 'ಮಂತ್ರ' ಮೊದಲಾದ ಮಾತುಗಳು ವಿಚ್ಛಿದ್ರಕಾರಿಯಾದ ನಾಗರಿಕತೆಗೆ ಪ್ರತಿಯಾಗಿ ಸಂಯೋಜಕ ಸತ್ವವುಳ್ಳ ಭಾರತದ ಪ್ರಾಚೀನ ಜೀವನದರ್ಶನವನ್ನು ಸೂಚಿಸುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಿ. ಎನ್. ರಂಗನಾಥರಾವ್

'ಸಂಕ್ರಾಂತಿ'ಯ ದ್ವಂದ್ವಗಳು

ಸಾಹಿತ್ಯ ಮುಖೇನ ಕ್ರಾಂತಿ ಎಂಬ ಮಾತು ಕೇಳಿಬರುತ್ತಿರುವ ಈ ದಿನಗಳಲ್ಲಿ ಒಬ್ಬ ಸೃಜನಶೀಲ ಬರಹಗಾರನ ಸಾಮಾಜಿಕನಿಷ್ಠೆ commitment ಗಳ ಬಗ್ಗೆ ವಿವಿಧ ರೀತಿಯ ವ್ಯಾಖ್ಯಾನಗಳು ಕೇಳಿಬರುತ್ತಿವೆ. ಈ ಹಿನ್ನೆಲೆಯಲ್ಲಿ ಲಂಕೇಶರ ವಿಫಲ ಕ್ರಾಂತಿಯ ನಾಟಕ "ಸಂಕ್ರಾಂತಿ"ಯ ವಿಶ್ಲೇಷಣೆ ಕುತೂಹಲಕಾರಿಯಾದದ್ದು.

ಜಡ್ಡುಗಟ್ಟಿಹೋಗಿದ್ದ ಕನ್ನಡರಂಗಭೂಮಿಗೆ ತಮ್ಮ ವಿಶಿಷ್ಟ ತಂತ್ರದಿಂದ 'ಷಾಕ್ ಟ್ರೀಟ್‌ಮೆಂಟ್' ಕೊಟ್ಟ ಲಂಕೇಶರ "ಸಂಕ್ರಾಂತಿ" ಅವರ ಸಾಹಿತ್ಯ ಮಾರ್ಗವೂ ಪಥ ಬದಲಿಸುತ್ತಿರುವುದರ ಅನ್ವರ್ಥವಾಗಿದೆ. ವಸ್ತು ಮತ್ತು ತಂತ್ರ ಎರಡರಿಂದಲೂ ತಮ್ಮ ಉಳಿದ ಕೃತಿಗಳಿಗಿಂತ ಭಿನ್ನವಾಗಿರುವ ಲಂಕೇಶರು "ಸಂಕ್ರಾಂತಿ" ಯಲ್ಲಿ ವ್ಯಕ್ತಿಶಃ ನಿಷ್ಠೆಯಿಂದ ಅಥವಾ from the view point of an individual ಅನುಭವವನ್ನು ಶೋಧಿಸುತ್ತಾ ಹೋಗುವ ಬದಲು ಸಮುದಾಯನಿಷ್ಠೆಗೆ ಧುಮುಕಿದ್ದಾರೆ. ಇಲ್ಲಿ ಇಡೀ ಸಮಾಜವೇ ನಾಟಕವಸ್ತುವಾಗಿದೆ. ಹೀಗೆ ಐತಿಹಾಸಿಕ ಸಾಮಗ್ರಿಯ ಜೊತೆ ಅನುಭವದ್ರವ್ಯವೂ ಸೇರಿ ನಾಟಕವನ್ನು ಮುಂದೆ ನಡೆಸುತ್ತದೆ. ಜಿ. ಎಚ್, ನಾಯಕರು ಹೇಳುವಂತೆ (ಸಮಕಾಲೀನ–ಪುಟ76) ತಂತ್ರ ವಿಧಾನವೂ ಆಗಿ ಅನುಭವ ಶೋಧನೆಯ ನಿರಸವಾಗಿದ್ದ ಹಿಂಸೆ ಇಲ್ಲಿ ನಾಟಕದ ಒಂದು ಅಂಗವಾಗಿ, ಘರ್ಷಣೆಯ ಅನಿವಾರ್ಯ ಬೆಳವಣಿಗೆಯಾಗಿ ಬರುತ್ತದೆ. ಹೀಗೆ ವಸ್ತು ಮತ್ತು ತಂತ್ರದಲ್ಲಿ ತಮ್ಮ ಹಿಂದಿನ ಕೃತಿಗಳಿಗಿಂತ ಬೇರೆಯಾಗಿ ಒಟ್ಟು ಮಾನವ ಸಮುದಾಯವನ್ನೇ ಒಳಗೊಳ್ಳುವ "ಸಂಕ್ರಾಂತಿ"ಯಲ್ಲಿ ಲಂಕೇಶರ ಸೋಲು-ಗೆಲುವುಗಳು ನಮ್ಮ ಇಂದಿನ ಸಾಹಿತ್ಯಸಂದರ್ಭದಲ್ಲಿ ಮುಖ್ಯವಾಗುತ್ತವೆ.

"ಸಂಕ್ರಾತಿ"ಯನ್ನು ಓದಿದ ಕೂಡಲೇ ಯಾವ ಓದುಗನಿಗೂ ಮೊದಲಿಗೆ ಮೂರು ಪ್ರಶ್ನೆಗಳು ಉದ್ಭವಿಸುತ್ತವೆ.

1. ರುದ್ರನನ್ನು ಬಯಸಿ, ಬಯಸಿ ಕೂಡಿದ ಉಷಾ ಬಿಜ್ಜಳನ ಮುಂದೆ "ಬಲಾತ್ಕಾರ" ಎಂದು ಅಸತ್ಯವನ್ನೇಕೆ ಆಡುತ್ತಾಳೆ ?
2. ನಿರ್ಣಾಯಕ ಘಟ್ಟದಲ್ಲಿ ರುದ್ರ ಸತ್ಯ ತಿಳಿಸದೆ ಏಕೆ ಮೂಕನಾಗುತ್ತಾನೆ ? ಅಸಹಾಯಕನಾಗುತ್ತಾನೆ ?
3. ಬಸವಣ್ಣನವರ ಕ್ರಾಂತಿ ಸಫಲವಾಗುವುದಿಲ್ಲ ಏಕೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

—ಈ ಪ್ರಶ್ನೆಗಳಿಗೆ ಕೃತಿಯಲ್ಲಿ ಉತ್ತರ ಶೋಧಿಸುವುದರಿಂದ "ಸಂಕ್ರಾಂತಿ"ಯ ವಿಫಲಕ್ರಾಂತಿಯ ಮಹತ್ವ ಹಾಗೂ ಒಂದು ಸಮಾಜದಲ್ಲಿ ಜಾತಿ, ರಾಜ್ಯವ್ಯವಸ್ಥೆ, ಅರ್ಥವ್ಯವಸ್ಥೆ ಮೊದಲಾದ ಮೌಲ್ಯಗಳು ಮುಖಾಮುಖಿ ಸಡ್ಡುಹೊಡೆದು ನಿಂತಾಗ ಸೃಜನಶೀಲ ಬರಹಗಾರ ಪ್ರತಿಕ್ರಿಯಿಸುವರೀತಿ, ಅವನ ಹೊಣೆ, ಸಾಹಿತ್ಯದ ಸೋಲು—ಗೆಲುವುಗಳು—ಇವೆಲ್ಲ ಸ್ಪಷ್ಟವಾಗುತ್ತವೆ.

ಲೇಖಕರು ರುದ್ರ–ಉಷೆಯರ ಮದುವೆ ಮಾಡಿಸಿಬಿಟ್ಟು ಕ್ರಾಂತಿಯ ಧ್ವಜ ಹಾರಿಸಬಹುದಿತ್ತೆಂದು ಬಯಸುವ ಕ್ರಾಂತಿಕಾರಿ ಆಲೋಚನೆಯಷ್ಟು ಸುಲಭವಾಗಿಲ್ಲ ಇಲ್ಲಿನ ಸಾಮಾಜಿಕ ಹಾಗೂ ಧಾರ್ಮಿಕ ಪರಿಸರ ಮತ್ತು ಸಂದರ್ಭ. ಅದರಿಂದಾಗಿ ಸೃಜನಶೀಲ ಲೇಖಕರಾದ ಲಂಕೇಶರ ಜವಾಬ್ದಾರಿ ಅವರ ಮನಸ್ಸಿನ ಆಸೆಗಳನ್ನು ಮೀರಿ ನಿಲ್ಲುತ್ತದೆ ಹಾಗೂ ಅವರ ಆಸೆ–ಆಕಾಂಕ್ಷೆಗಳನ್ನು ದುಡಿಸಿಕೊಂಡು ಇಲ್ಲಿನ ವಸ್ತು ತನ್ನ ನೈಜ ಅಭಿವ್ಯಕ್ತಿಯನ್ನು ಬಯಸುತ್ತದೆ. ಹನ್ನೆರಡನೆಯ ಶತಮಾನದ ಸಾಮಾಜಿಕ ಚೌಕಟ್ಟನ್ನು ಹೊಂದಿರುವ "ಸಂಕ್ರಾಂತಿ" ಬಹುಮಟ್ಟಿಗೆ ಲಂಕೇಶರ ಬೌದ್ಧಿಕ ಶಿಶು. ಹಲವು ಸ್ತರಗಳಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಆಯಾಮಗಳನ್ನು ಪಡೆದುಕೊಳ್ಳುತ್ತಾ ಒಂದು ಇನ್ನೊಂದಕ್ಕೆ ಕೊಂಡಿಯಾಗಿ ಪರಸ್ಪರ ಹೆಣೆದುಕೊಳ್ಳುತ್ತಾ, ಹೊಸ ವ್ಯವಸ್ಥೆಗಾಗಿ ತುಯ್ಯುತ್ತಾ ಸಂಕೀರ್ಣವಾಗುತ್ತಾ ಹೋಗುತ್ತದೆ ನಾಟಕ. ನಾಟಕದಲ್ಲಿನ ಈ ದ್ವಂದ್ವದಲ್ಲೇ ನಮ್ಮ ಪ್ರಶ್ನೆಗಳಿಗೆ ಉತ್ತರವಿದೆ.

ರುದ್ರ–ಉಷೆಯರ ಪ್ರೇಮ ಪ್ರಕರಣವನ್ನು ಕೇಂದ್ರವಾಗಿರಿಸಿಕೊಂಡು ಸಾಮಾಜಿಕ ಜೀವನದ ಮೌಲ್ಯಗಳನ್ನು ಪರೀಕ್ಷೆಗೆ ಒಡ್ಡುತ್ತದೆ ಈ ನಾಟಕ. ನಾಟಕದ ಈ ಕ್ರಿಯೆಯಲ್ಲಿ ರಾಜ್ಯವ್ಯವಸ್ಥೆ, ಜಾತಿ, ಮತ, ಸಾಮಾಜಿಕಪ್ರತಿಷ್ಠೆ, ಸ್ಥಾನಮಾನಗಳು ಹೀಗೆ—ವಿವಿಧ ಮುಖಗಳು ಅನಾವರಣಗೊಳ್ಳುತ್ತಾ "ಸಂಕ್ರಾಂತಿ" ಸ್ಫೋಟಕ ಹಂತ ತಲುಪುತ್ತದೆ. ನಾಟಕೀಕರಣದ ಈ ಪ್ರತಿಕ್ರಿಯೆಯಲ್ಲಿ ಕಂಡುಬರುವ ದ್ವಂದ್ವಗಳು "ಸಂಕ್ರಾಂತಿ"ಯ ಒಳಮರ್ಮಗಳನ್ನು, ದೌರ್ಬಲ್ಯಗಳನ್ನು ಎತ್ತಿತೋರಿಸಿ ಕೃತಿಯನ್ನು ಅರ್ಥಮಾಡಿಸುತ್ತವೆ. ಆದ್ದರಿಂದ ಇಲ್ಲಿನ ದ್ವಂದ್ವಗಳನ್ನು ಅರ್ಥಮಾಡಿಕೊಳ್ಳದೇ ಕೃತಿಯನ್ನು ಪೂರ್ತಿಯಾಗಿ ತಿಳಿದು ಬೆಲೆಕಟ್ಟುವುದು ಅಸಾಧ್ಯವಾಗುತ್ತದೆ. ಇಡೀ ನಾಟಕದಲ್ಲಿ ಉಜ್ಜ ಒಬ್ಬನನ್ನು ಬಿಟ್ಟರೆ ಉಳಿದೆಲ್ಲ ಪಾತ್ರಗಳೂ ದ್ವಂದ್ವದಲ್ಲಿ ತೊಳಲಾಡುತ್ತಿರುವ ವ್ಯಕ್ತಿಗಳೇ. ತನ್ನ ಗುರಿ ಸ್ಪಷ್ಟವಿರುವ ಬಸವಣ್ಣನಿಗೂ ಅದರ ಫಲ ಮತ್ತು ಪ್ರತಿಕ್ರಿಯೆಯಾಗಿ ಬರುವ ವಿದ್ಯಮಾನಗಳ ಬಗ್ಗೆ ದ್ವಂದ್ವವಿದೆ. ಕೊನೆಯಲ್ಲಿ ರುದ್ರ ನಿರಪರಾಧಿ ಎಂದು ತಿಳಿದೂ ಆತನನ್ನು ಪಾರುಮಾಡಲಾಗದ ಸ್ಥಿತಿಯನ್ನು ಬಸವಣ್ಣನ ಉಭಯ ಸಂಕಟಕ್ಕೆ ನಿದರ್ಶನವಾಗಿ ನೋಡಬಹುದು. ಬದಲಾವಣೆಯನ್ನು ಯಾವತ್ತೂ ಮನಃಪೂರ್ವಕವಾಗಿ ಒಪ್ಪಿಕೊಳ್ಳದ ಉಜ್ಜ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಂದ್ವಾತೀತನಾಗಿ ಸ್ಪಷ್ಟನಾಗುತ್ತಾನೆ. ಇದರಿಂದಾಗಿಯೇ ಇವನು ಬೆಳವಣಿಗೆಗಳಿಗೆ ಸ್ಪಂದಿಸುವ, ಸಂವೇದಿಸುವ ರೀತಿಗಳೂ ಗೊಂದಲವಿಮುಕ್ತವಾಗಿರುತ್ತವೆ.

ಮೊದಲನೆಯ ದೃಶ್ಯ ಶೂದ್ರತ್ವದಿಂದ ಶರಣತ್ವಕ್ಕೆ ಪರಿವರ್ತನೆಗೊಳ್ಳುವುದರ ಪೂರ್ವಭಾವಿಸ್ಥಿತಿಯನ್ನೂ ಪರಿವರ್ತನೆಗೆ ನಡೆದಿರುವ ಒಂದು ಬಗೆಯ ಮಾನಸಿಕ ಸಿದ್ಧತೆಯನ್ನೂ ಸೂಚಿಸುತ್ತದೆ. ಇದೇ ದೃಶ್ಯದಲ್ಲೇ ಉಷಾ-ರುದ್ರರ ಸಂಬಂಧದ ಪ್ರಸ್ತಾಪವೂ ಬರುವುದರಿಂದ ಘರ್ಷಣೆಯ ಬೀಜಾಂಕುರ ಆರಂಭದಲ್ಲೇ ಆಗಿದೆ. ಹೀಗೆ, ಸಾಮಾಜಿಕಸ್ತರದಲ್ಲಿ ಆರಂಭವಾಗುವ ನಾಟಕ ಎರಡನೆಯ ದೃಶ್ಯದಲ್ಲಿ ರುದ್ರ-ಉಷೆಯರ ಸಮಾಗಮದೊಂದಿಗೆ ಜಾತಿ, ಧರ್ಮ, ಸಂಸ್ಕೃತಿ ಅಭಿರುಚಿಗಳ ದ್ವಂದ್ವಗಳನ್ನು ಪಡೆದುಕೊಂಡು ಹುರಿಗಟ್ಟಿಕೊಳ್ಳುತ್ತದೆ; ಜಿಕ್ಕಟ್ಟಿಗೆ ಚಾಚಿಕೊಳ್ಳುತ್ತದೆ. ರುದ್ರ–ಉಷೆಯರ ನಡುವಣ ಸಂಭಾಷಣೆ ಈ ದ್ವಂದ್ವಗಳಿಗೆ ಹಿಡಿದ ಕನ್ನಡಿ. ಮೂರನೆಯ ದೃಶ್ಯದಲ್ಲಿ ಶೂದ್ರ–ಬ್ರಾಹ್ಮಣರ ನಡುವಣ ಆರೋಪ–ಪ್ರತ್ಯಾರೋಪಗಳಲ್ಲಿ ಜಾತಿವೈಷಮ್ಯ, ಉಚ್ಚ-ನೀಚಗಳ ಪೈಪೋಟಿ ಮತ್ತು ಅನಂತರ ಸಂಭವಿಸುವ ಕೊಲೆ ಇವುಗಳಿಂದಾಗಿ ಜಿಕ್ಕಟ್ಟು ಮತ್ತಷ್ಟು ಉಲ್ಬಣಿಸಿ ನಾಟಕ ಬಿಜ್ಜಳನ ದ್ವಂದ್ವಕ್ಕೆ ತೆರೆದುಕೊಳ್ಳುತ್ತದೆ. ಈ ಹಂತದಲ್ಲಿ ದ್ವಂದ್ವಗಳಿಂದ ಕೂಡಿದ ಬಿಜ್ಜಳ ಮತ್ತು ಬಸವಣ್ಣನ ಮುಖಾಮುಖಿ ಆರಂಭವಾಗುತ್ತದೆ.

ಬಿಜ್ಜಳನ ದ್ವಂದ್ವಗಳು "ಗಂಡು-ಹೆಣ್ಣು"–"ಬ್ರಾಹ್ಮಣ ಶೂದ್ರ". "ಅರಸ–ಪ್ರಜೆ". "ರಾಜ–ಮಂತ್ರಿ". "ಶಾಂತಿ-ಹಿಂಸೆ–ವ್ಯವಸ್ಥೆ"—ಹೀಗೆ ಹಲವು ರೀತಿಯವು.

ಬಿಜ್ಜಳ : "ಪ್ರೇಮ, ಕಾಮ, ಅತ್ಯಾಚಾರ, ವ್ಯಕ್ತಿಪ್ರೇಮ. ಜಾತಿಪ್ರೇಮ. ನಿಷ್ಕಾಮಪ್ರೇಮ—ಯಾವುದನ್ನ ಮಾಡಲು ಹೋಗಿ ಯಾವುದನ್ನ ಮಾಡುತ್ತೇವೋ ದೇವರೇ ಬಲ್ಲ..." (ಪುಟ 59)

ಬಿಜ್ಜಳ : "ನನ್ನ ವ್ಯವಸ್ಥೆ ನಿಮ್ಮ ಕ್ರಾಂತಿ—ಎರಡನ್ನೂ ಮೀರಿದ್ದು–ಇದ್ದೀತು ಅಲ್ಲವೆ?" (ಪುಟ 60)

ಬಿಜ್ಜಳ : 'ನೀನು ಬ್ರಾಹ್ಮಣ ! ಸಂಸ್ಕೃತದಿಂದ ರಾಜಮಹಾರಾಜರನ್ನು ಹತೋಟಿಯಲ್ಲಿಡುತ್ತಿದ್ದ ನೀನು ಈಗ ಕನ್ನಡದಿಂದ ಶೂದ್ರರನ್ನ ಶರಣರನ್ನಾಗಿಸಿ ಹತೋಟಿಯಲ್ಲಿಡುತ್ತಿ !'" (ಪುಟ 56)

ರಾಜ್ಯದ ಆಡಳಿತಸೂತ್ರ ಹಿಡಿದಿರುವ ಬಿಜ್ಜಳನಿಗೆ ಪ್ರಜಾಪಾಲನೆಯಷ್ಟೇ ಶಾಂತಿಪಾಲನೆ, ಜಾತಿಸಹಿಷ್ಣುತೆಗಳು ಮುಖ್ಯವಾಗಿವೆ. ಪ್ರಸ್ತುತ ಸಂದರ್ಭದಲ್ಲಿ ಅವನಿಗೆ ಕೋಮುದ್ವೇಷ–ಗಲಭೆಗಳಷ್ಟೇ ಅಲ್ಲದೆ ಬಸವಣ್ಣನವರ ಶರಣತ್ವ ಕ್ರಾಂತಿಯಲ್ಲಿ ಆಳುವ ವರ್ಗದ ವಿರುದ್ಧ ಪೂರ್ಣಬಂಡಾಯದ ಸೂಚನೆಗಳೂ ಕಾಣುತ್ತಿವೆ;

"ಒಟ್ಟಿನಲ್ಲಿ ಎಲ್ಲರೂ (ವಿಷಯ ಬದಲಿಸಿ) ಶಾಸ್ತ್ರಿಗಳೇ ! ಸುತ್ತಿ ಬಳಸಿ ಮಾತನಾಡಬೇಡಿ. ನಿಮಗೆ ಬೇಕಾದ್ದು ರುದ್ರನ ತಲೆದಂಡ ತಾನೆ ? ಆ ಜವಾಬ್ದಾರಿ ನನಗಿರಲಿ. ಈ ನಡುವೆ ಕೆಲವು ಆತಂಕ ಇವೆ: ಬಸವಣ್ಣನವರ ಶರಣಸೈನ್ಯ ಕೈಕಟ್ಟಿ ಕೂರುವುದಿಲ್ಲ. ಆದರೆ ನಾನು ಸಂಕ್ರಾಂತಿಯ ಬಲಿಯ ಬಗ್ಗೆ ನಿರ್ಧರಿಸಿದ್ದೇನೆ." (ಪುಟ 41)

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಜ್ಜಳನ ಈ ಮಾತುಗಳು ಅಧಿಕ ಸಂಖ್ಯಾತರಾದ ಉಚ್ಚವರ್ಗದ ಮನಸ್ಸನ್ನು ತೃಪ್ತಿಗೊಳಿಸಿ ರಾಜಶಾಹಿ ಉಳಿಸುವ ಇಂಗಿತ ನೀಡುತ್ತದೆ. ಮರುಕ್ಷಣದಲ್ಲೇ ಮಾನವ ನಿರ್ಮಿತ ಉಚ್ಚ-ನೀಚಗಳ ಅಂತರದ ಬಗ್ಗೆ, ಒಬ್ಬರು–ಇನ್ನೊಬ್ಬರನ್ನು ದೂರ ಇಡುವುದರ ಬಗ್ಗೆ, ಈ ಕಟ್ಟಳೆಗಳನ್ನು ಮೀರಿನಿಲ್ಲುವ ಪ್ರಕೃತಿಸಹಜಕಾಮನೆಗಳ ಬಗ್ಗೆ, ಕಂದಾಚಾರಗಳ ಬಗ್ಗೆ ಕೆರಳುತ್ತದೆ:

ಬಿಜ್ಜಳ: ಹೌದು ನಾನು ದುರ್ಬಲ. ಈ ಗೋಳು ಒಂದು ದಿನದ್ದಲ್ಲ. ನೀವೇ ಯಾಕೆ ಕಚ್ಚಾಡಿಕೊಂಡು ಒಂದು ನಿರ್ಧಾರಕ್ಕೆ ಬರಬಾರದು ? ಅದೂ ನಿಮ್ಮಿಂದ ಆಗುವುದಿಲ್ಲ. ಈ ದೇಶದಲ್ಲಿ ಯಾರು ನಿಜವಾದ ಶರಣ, ಯಾರು ಅಲ್ಲ ಅಂತ ಒಂದು ಪಟ್ಟಿ ಯಾಕೆ ಸಿದ್ಧಪಡಿಸಬಾರದು ? ಅದೂ ಆಗುವುದಿಲ್ಲ. ತರುಣಿಯರೇ ಏಳಿ, ಕೊಂಚ ಹೀಗೆ ಬನ್ನಿ... ನೀವು ಕೂತಾಗ ಇಷ್ಟು ಚೆನ್ನಾಗಿ ಅನ್ನಿಸಿರಲಿಲ್ಲ ! ವೇದ ಪುರಾಣದ ಸಂತೋಷದಲ್ಲಿ ಬೆಳೆದವರು ತಾನೆ ? ಕಾಳಿದಾಸನ ವರ್ಣನೆಗೆ ಅನುಸಾರ ರೂಪಗೊಂಡವರು ತಾನೆ ?"

(ಪುಟ 42–43)

ಬಿಜ್ಜಳ: "ಮಡಿ–ಮಡಿ ! ನಿಮ್ಮ ಮಡಿಯಿಲ್ಲದಿದ್ದರೆ ಯಾವ ವಿಧವೆಯಾದರೂ ನೀರು ತರಬಹುದಿತ್ತು, ಶೂದ್ರನಾದರೂ ತರಬಹುದಿತ್ತು, ಈ ಎಲ್ಲ ಗೋಳು ತಪ್ಪುತ್ತಿತ್ತು......"

—ಈ ಮಾತುಗಳ ಹಿಂದಿನ ಧ್ವನಿ ಗಮನಿಸಿ. ತನ್ನ ಹತೋಟಿ ಮೀರಿ ಬೆಳೆಯುತ್ತಿರುವ ಬ್ರಾಹ್ಮಣ-ಶೂದ್ರ ಸಮಸ್ಯೆ ಬಗ್ಗೆ ಮೈಪರಚಿಕೊಳ್ಳುವ ದೊರೆ ಇವನು. ರೂಪವತಿಯರಾದ ಹೆಣ್ಣುಮಕ್ಕಳನ್ನು ಕಂಡಾಗ ಇಂಥ ರೂಪವತಿಯರಿಗೆ ಶೂದ್ರ ರುದ್ರ ಮೈಮರೆತಿದ್ದಲ್ಲಿ ಆಶ್ಚರ್ಯವೇನು ಎಂಬ ಧ್ವನಿ ಹೊರಟು ಪ್ರೇಮ–ಕಾಮಗಳ ದ್ವಂದ್ವದಲ್ಲಿ ನಿಲ್ಲುತ್ತಾನೆ. ಹೀಗೆ, ಒಟ್ಟಿನಲ್ಲಿ ಬಿಜ್ಜಳನ ಮನಸ್ಸು "ವ್ಯವಸ್ಥೆ, ಗಂಡು–ಹೆಣ್ಣು, ಸಂಪತ್ತು ಭೋಗ" ಈ ದ್ವಂದ್ವಗಳ ಸುತ್ತ ತಿರುಗುತ್ತದೆ. ಈ ಹಿನ್ನೆಲೆಯಲ್ಲಿ ಅವನಿಗೆ ಜಾತಿಮೌಲ್ಯಗಳು ಹೆಚ್ಚೆಂದರೆ ಶಾಂತಿಯುತ ಪ್ರಜಾಪಾಲನೆದೃಷ್ಟಿಯಿಂದ ಮುಖ್ಯವಾಗುತ್ತವೆ. ಶರಣರು ಮತ್ತು ಬ್ರಾಹ್ಮಣರು ಈ ಎರಡು ಸಮುದಾಯವನ್ನೂ ಅವನು ನೋಡುವ ದೃಷ್ಟಿ ಮತ್ತು ಅವರ ಬಗ್ಗೆ ಆಡುವ ಗೇಲಿಮಾತುಗಳಿಂದ, ವ್ಯಂಗ್ಯದಿಂದ ಈ ಅಂಶವನ್ನು ಗುರುತಿಸಬಹುದು.

ಬಿಜ್ಜಳ: "...ಮಾತೆತ್ತಿದರೆ ಧರ್ಮದ ವಿಚಾರ. ಈ ದೇಶದ ಪ್ರತಿಯೊಬ್ಬನೂ ಸ್ವರ್ಗ. ಧರ್ಮ ಅಧ್ಯಾತ್ಮ ಬಿಟ್ಟು ಬೇರೆ ನಾಲಿಗೆ ಹೊರಳಿಸೋಲ್ಲ. ನಿಮಗೇನನ್ನಿಸುತ್ತೆ ಶಾಸ್ತ್ರಿಗಳೆ, ಜನ ಈ ದಿನಗಳಲ್ಲಿ ಕೂಡ ಉಪ್ಪು, ಮೆಣಸಿನಕಾಯಿ, ಈರುಳ್ಳಿ ವಿಚಾರ ಮಾತಾಡುತ್ತಾರೆ ಅಂತೀರ ?"

ಶಾಸ್ತ್ರಿ: ಈರುಳ್ಳಿ ಮಾತು ಈಚೆಗೆ ಹೆಚ್ಚಾಗುತ್ತಿದೆ.

ಬಿಜ್ಜಳ: ಇದು ಎದ್ದುಕಾಣುವ ಇನ್ನೊಂದು ಗುಣ. ಬಾಯಿಬಿಟ್ಟರೆ ವ್ಯಂಗ್ಯ. ನಿಮ್ಮ ದುಃಖದ ಗಳಿಗೆಯಲ್ಲೂ ಹೇಗೆ ತಮಾಷೆ ಮಾಡಬಲ್ಲಿರಿ ? ಮನುಷ್ಯ ಅಂದರೆ ಹೀಗಿರಬೇಕು. ತಮ್ಮ ಭಗವದ್ಗೀತೆ ಇದನ್ನೇ ತಾನೇ ಹೇಳೋದು ?

(ಪುಟ 40–41)

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಜ್ಜಳ: ನಿಮ್ಮ ಕಾವಿ ಧರಿಸಿದ ಶರಣಜನ ಸಾಲುಸಾಲಾಗಿ ಊಟದ ಮನೆಗೆ ಹೋಗುತ್ತಿರುವುದನ್ನು ನೋಡಿ ನಕ್ಕಿದ್ದೇನೆ ಬಸವಣ್ಣಾ. ಭಕ್ತರಿಗೆ ಹೊಟ್ಟೆ ಕೂಡ ಇದೆಯೆಂಬುದನ್ನು ಕಂಡು ವಿಸ್ಮಯಗೊಂಡಿದ್ದೇನೆ. ಅವರ ಭಜನೆಯ ಗದ್ದಲ ನನಗೆ ತಮಾಷೆ ಅನ್ನಿಸಿದೆ. ಈ ಊಟ, ಈ ಭಜನೆಯ ಅವಸರದಲ್ಲಿ ಪಾಳುಬಿದ್ದ ಗದ್ದೆಗಳನ್ನು ನೋಡಿಲ್ಲ. ಬ್ರಾಹ್ಮಣರ ಮಂತ್ರಗಳಂತೆಯೇ ಶರಣರ ವಚನಗಳು ಕೂಡ ಉತ್ತು ಬೆಳೆ ಕೊಡಲಾರವು—

(ಪುಟ 56)

ಈ ಮಾತುಗಳಲ್ಲಿನ ವ್ಯಂಗ್ಯ ಉಭಯಜಾತಿ ವ್ಯವಸ್ಥೆಗಳಲ್ಲಿನ ಭೋಳೆತನ ಟೊಳ್ಳುತನವನ್ನು ಎತ್ತಿ ಆಡುತ್ತದೆ. ಜಾತಿಮೌಲ್ಯಗಳಿಗಿಂತ ಮನುಷ್ಯನ ಮೂಲಪ್ರವೃತ್ತಿಗಳಾದ ಹಸಿವು. ನಿದ್ದೆ. ಕಾಮಗಳಿಗೆ ಹೆಚ್ಚು ಒತ್ತುಕೊಡುವ ಬಿಜ್ಜಳ ರಾಜ್ಯವ್ಯವಸ್ಥೆಯ ಹಿತದೃಷ್ಟಿಯಿಂದ ಈ ಎರಡೂ ಜಾತಿಗಳೊಡನೆ ಒಂದು ತಪ್ಪು ಮಾಡಿದಾಗ ಇನ್ನೊಂದಕ್ಕೆ ಶಿಕ್ಷೆ ವಿಧಿಸುತ್ತಾ, ಮತ್ತೊಂದನ್ನು ರಮಿಸುತ್ತಾ—

ಬಿಜ್ಜಳ: ತಿಂಗಳ ಕೆಳಗೆ ನಾನು ಒಬ್ಬ ಬ್ರಾಹ್ಮಣನಿಗೆ ತಲೆದಂಡ ವಿಧಿಸಿದೆ. ಬ್ರಾಹ್ಮಣ ತಪ್ಪಿತಸ್ಥ ಅಲ್ಲ ಅಂತ ಗೊತ್ತಿದ್ದರೂ ಕೂಡ—ತಲೆದಂಡ ಹಾಕಿದೆ. ಆದರೆ ನನ್ನ ಸಂತೋಷಕ್ಕಾಗಿ ಅಲ್ಲ. ಪ್ರಜೆಗಳ ನೆಮ್ಮದಿಗಾಗಿ.

(ಪುಟ 50)

ರಾಜಿಮಾಡಿಕೊಳ್ಳುತ್ತಾ. ದ್ವಂದ್ವದಲ್ಲೇ ನಡೆಯಬೇಕಾಗಿದೆ. ಬಿಜ್ಜಳನ ಭೋಗದ ಕಲ್ಪನೆಯಲ್ಲೂ ಇಂಥದೇ ದ್ವಂದ್ವವಿದೆ. ನಾಟಕದಲ್ಲಿ ಬರುವ ಅಗ್ನಿರಾಜನ ಕತೆ ಬಿಜ್ಜಳನ ಭೋಗದ ದ್ವಂದ್ವವನ್ನು ಹೇಳುವುದರ ಜೊತೆಗೆ ನಾಟಕಕ್ಕೆ ಆರ್ಥಿಕ ಆಯಾಮವನ್ನೂ ತಂದುಕೊಡುತ್ತದೆ.

ಅಗ್ನಿರಾಜನ ಮಗಳ ವಿವಾಹದ ತೊಡಕಿನಲ್ಲಿ ಅರ್ಜಿಸಿದ ಸಂಪತ್ತು ಮತ್ತು ಅದನ್ನು ಭೋಗಿಸುವ ಹಕ್ಕಿನ ಪ್ರಶ್ನೆ ಇದೆ. ಡಂಗುರ ಸಾರಿಸಿದ ಅಗ್ನಿರಾಜ ಪ್ರಜೆಗಳ ಅಭಿಲಾಷೆಯಂತೆ ತನ್ನ ಮಗಳನ್ನು ತಾನೇ ವಿವಾಹವಾಗುತ್ತಾನೆ. ರಾಜಶಾಹಿಯ ಪ್ರಜಾಭಿಪ್ರಾಯ ಧೋರಣೆಯ ಒಂದು ವ್ಯಂಗ್ಯವಾದ ಈ ಘಟನೆ ರಾಜಾಸ್ತಿಯ ಭೋಗದ ಹಕ್ಕನ್ನೂ ರಾಜಕುಟುಂಬಕ್ಕಷ್ಟೇ ಸೀಮಿತಗೊಳಿಸುವ ಸ್ವಾರ್ಥದ ಕುಟಿಲೋಪಾಯವಾಗಿದೆ. ಅಗ್ನಿರಾಜನ ಕತೆಯನ್ನು ಭಟ್ಟನ ಕೈಯಲ್ಲಿ ಹೇಳಿಸಿ ದೇಶದ ಸಿರಿಸಂಪದಗಳ ಅನುಭೋಗದ ಹಕ್ಕಿನ ಪ್ರಶ್ನೆ ಎತ್ತಿ ಅರ್ಥವ್ಯವಸ್ಥೆಯ ಮೂಲಗಳನ್ನು ಕೆದಕುವ ಲೇಖಕರು ಇಷ್ಟಕ್ಕೇ ಬಿಡದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಗ್ನಿರಾಜನ ಕತೆಯನ್ನು ಬಿಜ್ಜಳನಿಗೆ ಸಮೀಕರಿಸಿಬಿಡುತ್ತಾರೆ. ಇದರಿಂದಾಗಿ, ಇಲ್ಲಿಯವರೆಗೆ ಪ್ರೇಮ ಮತ್ತು ಜಾತಿಸಮಸ್ಯೆಗಳ ರಿಂಗಣದಲ್ಲಿ ಕುಣಿಯುತ್ತಿದ್ದ ನಾಟಕಕ್ಕೆ ಈಗ ಆರ್ಥಿಕ ಆಯಾಮ ಮೂಡುತ್ತದೆ. ಇಲ್ಲಿ, ಉಚ್ಚವರ್ಗದ ದಬ್ಬಾಳಿಕೆಯಿಂದ ನರಳುತ್ತಿರುವ ಶೂದ್ರರನ್ನು ಶರಣರನ್ನಾಗಿಸಿ ಮುಕ್ತಗೊಳಿಸುವ ಯತ್ನದ ಜೊತೆಗೆ ಅರಸೊತ್ತಿಗೆಯ ನಿರಂಕುಶ ಪ್ರಭುತ್ವದಿಂದ ಪಾರಾಗಿಸಿ ಅವರ ಹಕ್ಕುಗಳನ್ನು ಕೊಡಿಸುವ ಸುಳಿವಿನೊಂದಿಗೆ ಬಸವಣ್ಣನವರ ಉದ್ದೇಶಿತ ಕ್ರಾಂತಿಯ ವ್ಯಾಪ್ತಿ ವಿಸ್ತಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊಳ್ಳುತ್ತದೆ. ತಾನು ಆರ್ಜಿಸಿದ್ದನ್ನು ತಾನೇ ಭೋಗಿಸಬಹುದೋ ಎಂಬ ದ್ವಂದ್ವದಲ್ಲಿ ಬೀಳುವ ಬಿಜ್ಜಳನಿಗೆ ಅಗ್ನಿರಾಜ ತನ್ನ ಮಗಳನ್ನು ತಾನೇ ವರಿಸಿದ್ದಕ್ಕೆ ಜನ ಒಳಗೊಳಗೇ ಕೋಪದಿಂದ ಕುದಿಯುತ್ತಿದ್ದರೆಂಬ ಮಾತು ಹೆಚ್ಚು ಪ್ರಖರವಾಗಿ ತಟ್ಟುತ್ತದೆ. ಇದರ ಹಿನ್ನೆಲೆಯಲ್ಲಿ ಅವನು ತನ್ನನ್ನು ಸ್ವಪರೀಕ್ಷೆಗೆ ಗುರಿಪಡಿಸಿಕೊಳ್ಳುತ್ತಾನೆ. ಅವನು ಕಾಣುವ ಕನಸು ಆತ್ಮಪರಿವೀಕ್ಷಣೆಯೇ ಆಗಿದೆ. ಈ ಕನಸು ಜನ ತನ್ನನ್ನು ಅಲಕ್ಷಿಸಿ ಸ್ವೇಚ್ಛಾನುವರ್ತಿಗಳಾಗಿ ಕುಣಿಯುವುದನ್ನು, ಕುಣಿಯುತ್ತಾ - ಕುಣಿಯುತ್ತಾ ಅವರು ನೇಯುವ ಅಗ್ನಿಜಾಲದಲ್ಲಿ ತಾನು ಬಂದಿಯಾಗುವುದನ್ನೂ ತೋರಿಸಿ ಕ್ರಾಂತಿಯ ಮುನ್ಸೂಚನೆ, ಅದರಿಂದಾಗಿ ತನಗೆ ಒದಗುವ ಆಪತ್ತನ್ನು ಸಾರಿಹೇಳುತ್ತದೆ. ಇಂಥ ಅರಾಜಕತೆ ಸಂದರ್ಭದಲ್ಲಿ ತಾವು ಸಂಗಮನನ್ನು ನೆನೆಯುವುದಾಗಿ ಬಸವಣ್ಣ ಹೇಳಿದರೆ–

"ಆದರೆ ನಾನು ನಿಮ್ಮ ಸಂಗಮನನ್ನು ನೆನೆದರೆ ಬ್ರಾಹ್ಮಣರ ಗುಂಪು ಬೊಬ್ಬೆ ಹಾಕುತ್ತದೆ; ಅವರ ಶ್ರೀಹರಿಯನ್ನು ನೆನೆದರೆ ನಿಮ್ಮ ಶರಣರು ಬೊಬ್ಬೆಹಾಕುತ್ತಾರೆ. ಏನು ಮಾಡುವುದೆಂದು ಗೊತ್ತಿಲ್ಲದೆ ನಾನು ನನ್ನನ್ನು ನೆನೆದುಕೊಳ್ಳುತ್ತೇನೆ"

(ಪುಟ 46)

ಎಂದು ಹೇಳುವ ಬಿಜ್ಜಳನ ಮಾತು ನಾಟಕದ ಒಟ್ಟು ಸಂದರ್ಭದಲ್ಲಿ ಅರ್ಥಪೂರ್ಣವಾಗುತ್ತದೆ. ಒಂದು ಕಡೆ ಬಂಡೆದ್ದ ಶರಣರು, ಇನ್ನೊಂದು ಕಡೆ ನ್ಯಾಯ ಕೇಳಿ ನಿಂತ ಬ್ರಾಹ್ಮಣರು—ಈ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಲೌಕಿಕವಾಗಿ ಪ್ರಬುದ್ಧನಾದ, ರಾಜರಕ್ತದ ಬಿಜ್ಜಳ ತನ್ನನ್ನು ತನ್ನ ಸಿಂಹಾಸನವನ್ನು ಅಲ್ಲದೆ ಬೇರೇನನ್ನು ನೆನೆದಾನು ? ಇದು ಅವನ ಎಲ್ಲ ದ್ವಂದ್ವಗಳ ಮಧ್ಯೆಯೂ ಎದ್ದುಕಾಣುವ ರಾಜತಾಂತ್ರಿಕ ಪ್ರಾವೀಣ್ಯದ ಕುರುಹು.

ಅಗ್ನಿರಾಜನ ಕತೆಯ ಮಧ್ಯೆಯೇ ರಾಜನ ವೈಭವ, ಭೋಗ, ಸಂಪತ್ತುಗಳ ಬಗ್ಗೆ ಜನಾಭಿಪ್ರಾಯವನ್ನೂ ಅವರ ಮೂಢ ಗೌರವ, ಶ್ರದ್ಧೆಗಳನ್ನೂ ಬಸವಣ್ಣನ ಮುಖೇನ ಹೇಳಿಸಿ ಉದ್ದೇಶಿತ ಕ್ರಾಂತಿಯ ಆರ್ಥಿಕ ಮಹತ್ವವನ್ನು ಬಲಗೊಳಿಸುವ ಲೇಖಕರು ಇಲ್ಲಿ ತುಂಬ ಜಾಣತನದಿಂದ ವರ್ತಿಸಿದ್ದಾರೆ. ಲೇಖಕರ ಬುದ್ಧಿಜನ್ಯವಾದ ಅಗ್ನಿರಾಜ ಪ್ರಕರಣದ ನಿರೂಪಣೆ. ಅನಂತರದ ಮಾತುಗಳು ಉದ್ದೇಶಪೂರ್ವಕವಾಗಿ ತಂದು ತುರುಕಿದಂತೆ ಭಾಸವಾಗುತ್ತದೆ. ಅಗ್ನಿರಾಜನ ಕತೆ ಪೂರ್ತಿ ಆಯಿತೆಂದೆನಿಸಿ ರುದ್ರ–ಉಷೆಯರ ಪ್ರಕರಣವನ್ನು ಚರ್ಚೆಗೆ ತಂದು ಬಿಜ್ಜಳನ ಕೈಯಲ್ಲಿ ಈ ಮಾತುಗಳನ್ನು ಆಡಿಸುವುದು ಲಂಕೇಶರ ಚಾಣಾಕ್ಷತನಕ್ಕೆ ಸಾಕ್ಷಿ :

ಬಿಜ್ಜಳ: "ಈ ರಾಜ್ಯಕ್ಕೆ ನಾನೋ ದೊರೆ ಅಥವಾ ನೀವೋ ಎಂಬ ಪ್ರಶ್ನೆ ಮತ್ತೆ ಮತ್ತೆ ಏಳುತ್ತದೆ. ಈ ವಿಷಯ ನಿರ್ಧಾರವಾಗಬೇಕು. ಹೇಳಿ ಈ ರುದ್ರ ಯಾರು ?"

(ಪುಟ 53)

ಬಸವಣ್ಣ: ನಿಮ್ಮ ದೃಷ್ಟಿಯಲ್ಲಿ ಹೊಲೆಯ. ನನ್ನ ದೃಷ್ಟಿಯಲ್ಲಿ ಶರಣ

ಬಿಜ್ಜಳ: ಶರಣ ! ಶರಣ ! ಆತ ಹೇಗೆ ಶರಣ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಬಸವಣ್ಣ: ತಮ್ಮ ಪ್ರಜೆಗಳ ಬಗ್ಗೆ ತಮಗೆ ಭಟ್ಟ ಮಾಹಿತಿ ಕೊಡುವನೆಂದಿದ್ದೆ.

ಬಿಜ್ಜಳ: ಶರಣನಾಗಲು ಏನು ಯೋಗ್ಯತೆ ಬೇಕು ?

ಬಸವಣ್ಣ: ಭಟ್ಟ ಹಾಗಾದರೆ ಮಾಹಿತಿ ಕೊಟ್ಟಿಲ್ಲ ?

ಬಿಜ್ಜಳ: ನನ್ನ ಪ್ರಶ್ನೆಗೆ ಉತ್ತರ ಹೇಳಿ.

ಬಸವಣ್ಣ: ನನ್ನ ಮಾತು ಮೊದಲು ಕೇಳಿ. ಅಗ್ನಿರಾಜನ ಕತೆಯಲ್ಲಿ ಮುಖ್ಯವಾದದನ್ನು ಭಟ್ಟ ಹೇಳಲಿಲ್ಲ.

ಬಿಜ್ಜಳ: ಯಾವುದನ್ನ ?

ಬಸವಣ್ಣ: ತನ್ನ ಮಗಳಲ್ಲಿ ಅನುರಕ್ತನಾದ ಅಗ್ನಿರಾಜ ಮೊದಲು ಅಭಿಪ್ರಾಯ ಕೇಳಿದ್ದು ರಾಜ್ಯದ ಸುಶಿಕ್ಷಿತರನ್ನ. ಅವರು ಆ ಮದುವೆ ಸಲ್ಲದು ಅಂದರು. ಅದಕ್ಕೆ ರಾಜ ಆ ವಿದ್ಯಾವಂತ ರನ್ನೆಲ್ಲ ರಾಜ್ಯದಿಂದ ಅಟ್ಟಿದ. ಆಮೇಲೆ—

ಬಿಜ್ಜಳ: ಆಮೇಲೇನು ?

ಬಸವಣ್ಣ: ಮಗಳನ್ನು ಮದುವೆಯಾಗಿ ಅಟ್ಟಹಾಸದಿಂದ ಮೆರೆದ.

ಬಿಜ್ಜಳ: ನೀವಿನ್ನೂ ರುದ್ರ ಯಾರೆಂದು ಹೇಳಿಲ್ಲ ?

ಬಸವಣ್ಣ: ನೀವೇ ಕೇಳಿಕೊಳ್ಳಬಹುದು ಇನ್ನು.

(ಪುಟ 53–54)

—ಇಲ್ಲಿ ಬಿಜ್ಜಳ ಕಾಳಜಿಪೂರ್ಣವಾಗಿ ಕೇಳುವ ಪ್ರಶ್ನೆಗಳು ಬಸವಣ್ಣ ತೋರುವ ಅಸಡ್ಡೆ (indifference) ನಾಟಕದ ವಸ್ತುವಿಗೆ ಎಷ್ಟು ಸಹಕಾರಿಯಾಗಿ ಹೊಂದಿ ಕೊಳ್ಳುತ್ತದೆ ಎಂಬುದು ಗಮನಾರ್ಹವಾದದ್ದು. ಬಿಜ್ಜಳನ ಪ್ರಶ್ನೆಗಳಿಗೆಲ್ಲ ಬಸವಣ್ಣ ಕೊಡುವ ಉತ್ತರ ನಾಟಕದ ಮುಂದಿನ ಆಗುಹೋಗುಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಅಷ್ಟೇ ಅಲ್ಲ, ಬಸವಣ್ಣನ ಜಾಣತನ ಬಿಜ್ಜಳನನ್ನು ಮತ್ತಷ್ಟು ದ್ವಂದ್ವದಲ್ಲಿ ಸಿಗಿಸುತ್ತದೆ. ಶರಣನಾಗಲು ಏನು ಯೋಗ್ಯತೆ ಬೇಕು ಎಂಬ ಪ್ರಶ್ನೆಗೆ ಅಗ್ನಿರಾಜನ ಮಗಳನ್ನು ಮದುವೆಯಾಗಲು, ರಾಜನಾಗಲು ಏನು ಯೋಗ್ಯತೆ ಬೇಕಿತ್ತು ಎಂದು ತಿರುಗ ಬಾಣ ಮಾಡಿ ಬಿಜ್ಜಳನ ಅಸ್ತಿಭೋಗದ—ಪ್ರಭುತ್ವದ ಹಕ್ಕಿನ ಯೋಗ್ಯತೆಯನ್ನೇ ಲೇಖಕರು ಲೇವಡಿಮಾಡಿ ತನ್ನದೆಲ್ಲವನ್ನೂ ತಾನೇ ಉಪಭೋಗಿಸುವ ರಾಜನಿಗೆ ಅಂಥ ಪ್ರಶ್ನೆ ಕೇಳುವ ನೈತಿಕ ಬಲವಿಲ್ಲ ಎಂಬ ಧ್ವನಿಕೊಟ್ಟಿದ್ದಾರೆ. ಆದರೆ right of enjoyment ಪ್ರಶ್ನೆಯ ಚರ್ಚೆಗೆ ಅಗ್ನಿರಾಜನ ಕತೆ ಸೂಕ್ತ ಉಪಮೆಯಲ್ಲ ಅನಿಸುತ್ತದೆ.

ಬಿಜ್ಜಳ ಪ್ರೌಢ, ಲೌಕಿಕ ಸತ್ಯಗಳನ್ನು ಯಥಾರ್ಥಗಳನ್ನು ಚೆನ್ನಾಗಿ ಬಲ್ಲವನು. ಅದರಿಂದಾಗಿಯೇ ಈ ದ್ವಂದ್ವಗಳಲ್ಲೂ ತಾನು ಗಟ್ಟಿಯಾಗಿ ನಿಲ್ಲುವ ಗುಟ್ಟು ಅವನಿಗೆ ಗೊತ್ತಿದೆ. ಇಲ್ಲಿಯವರೆಗೆ ಒಂದು ಘಟ್ಟ. ಮುಂದಿನದು—

ಇಲ್ಲಿಯವರೆಗೆ ನಾಟಕದ ಪಾತ್ರಗಳ ಮಾತು, ವರ್ತನೆ ಮೇಲೆ ಹಿಡಿತವಿಟ್ಟು ಕೊಂಡಿದ್ದ ಲೇಖಕರು ಮುಂದೆ ನಾಟಕದ ಶಿಖರ ಸನ್ನಿವೇಶ (climax) ದಲ್ಲಿ ನಿರುಪಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗುತ್ತಾರೆ. ಲಂಕೇಶರ ಬುದ್ಧಿಮತ್ತೆಗೆ ಸಿದ್ಧಸನ್ನಿವೇಶದ ಸಿದ್ಧಪಾತ್ರಗಳು ಬಾಯಲ್ಲಿ ಪ್ರಾಜ್ಞಮಾತುಗಳನ್ನು ಆಡಿಸುವುದು ಸಾಧ್ಯವಿತ್ತು. ಇಲ್ಲಿಂದ ಮುಂದೆ ಕಾಣಿಸಿಕೊಳ್ಳುವುದು ಹೊಸ ಸನ್ನಿವೇಶ. ಈ ಹೊಸ ಸನ್ನಿವೇಶದಲ್ಲಿ ಲಂಕೇಶರೂ ದ್ವಂದ್ವಕ್ಕೆ ಬೀಳುತ್ತಾರೆ. ಮುಂದೆ ಕಾಣಬರುವ ಲೇಖಕರ dilemma ನಾಟಕದ ನಿಜವಾದ dilemma ಆಗುತ್ತದೆ. ರುದ್ರ–ಉಷೆಯರ ದ್ವಂದ್ವ ನನ್ನ ಈ ಮಾತಿಗೆ ಸ್ಪಷ್ಟ ನಿದರ್ಶನ. ಇವರಿಬ್ಬರ ದ್ವಂದ್ವ ಲಂಕೇಶರ ದ್ವಂದ್ವವೂ ಹೌದೆಂದು ಪ್ರತ್ಯೇಕ ಹೇಳಬೇಕಾದ್ದಿಲ್ಲ.

ಬಿಜ್ಜಳ: ಉಷಾ, ಕೊಂಚ ಮುಂದೆ ಬಾ. ನನ್ನ ಭಾರ ನಿನಗೆ ಗೊತ್ತಿದೆ. ನನ್ನ ವಿಶ್ವಾಸವೂ ನಿನಗೆ ಗೊತ್ತಿದೆ. ನಿನ್ನನ್ನು ಬರಹೇಳಿದಾಗ ನೀನು ಬರಲಿಲ್ಲ. ಅದು ಸಾಮಾನ್ಯವಾಗಿ ರಾಜಾಜ್ಞೆಯ ಉಲ್ಲಂಘನೆ. ಆದರೆ ನಾನು ನಿನ್ನನ್ನು ಕ್ಷಮಿಸಿದ್ದೇನೆ. ನಿನ್ನ ಪ್ರೇಮಕ್ಕೆ—ಅದು ಪ್ರೇಮವಾಗಿದ್ದರೆ—ನನ್ನ ಸಂಪೂರ್ಣ ಬೆಂಬಲವಿದೆ.
ಹೇಳು. ರುದ್ರನದು ಪ್ರೇಮವೋ ಬಲಾತ್ಕಾರವೋ
(ಮೌನ—ಎಲ್ಲರೂ ಉಷಾ ಕಡೆ ನೋಡುತ್ತಿದ್ದಾರೆ)
ಹೇಳು. ಮಾತಾಡು. ನನ್ನ ಪೂರ್ಣರಕ್ಷಣೆ ಇದೆ.

ಉಷಾ: (ಸ್ಪಷ್ಟವಾಗಿ, ಗಂಭೀರವಾಗಿ) ಬಲಾತ್ಕಾರ

ಬಿಜ್ಜಳ: ಇದು ಬಲಾತ್ಕಾರದ ಪ್ರಕರಣವೆಂದು ಉಷಾದೇವಿ ಹೇಳಿದ್ದಾಳೆ; ರುದ್ರ ಮರಣದಂಡನೆಗೆ ಗುರಿಯಾಗಿದ್ದಾನೆ. (ಪುಟ 77)

* * *

ಬಸವಣ್ಣ: ರುದ್ರ, ಇತ್ತ ಬಾ...ಯಾಕೆ ಹೀಗಾಯಿತು?
(ಮೌನ)
ಆಕೆ ಹೇಳಿದ್ದು ಸುಳ್ಳಲ್ಲವೆ?
(ಮೌನ)
ನಿನಗೆ ಗೊತ್ತಿದೆ, ಆಕೆಗೆ ಗೊತ್ತಿದೆ. ನಿನ್ನನ್ನು ಬಲ್ಲ ಎಲ್ಲರಿಗೂ ಗೊತ್ತಿದೆ. (ಮುನಿಸಿನಿಂದ) ಬಲಾತ್ಕಾರಮಾಡಿದ್ದು ಆಕೆ ನೀನಲ್ಲ.

ಬಿಜ್ಜಳ: ಈಗ ಹೇಳಿಕೊಟ್ಟು ಪ್ರಯೋಜನವಿಲ್ಲ
ಆದರೂ ಮಾತನಾಡು ರುದ್ರ
(ಮೌನ)

ಬಸವಣ್ಣ: ಮಾತಾಡು. ಮಾತಾಡುವುದಕ್ಕೆ ನಿನಗೇನಾಗಿದೆ?

ರುದ್ರ: ನನಗೆ ಏನೂ ಗೊತ್ತಾಗ್ತಿಲ್ಲ ಸ್ವಾಮಿ (ಧ್ವನಿಯೆತ್ತರಿಸಿ, ಸ್ಪಷ್ಟವಾಗಿ) ಏನೂ ತಿಳೀತಿಲ್ಲ.

ಬಸವಣ್ಣ: ಅಲ್ಲ, ಗೊತ್ತಾಗಿದೆ. ಹೇಳಲು ಹೆದರಿಕೆ. ಹೆಣ್ಣು ಬಲಾತ್ಕಾರ ಮಾಡಿದಳು ಅಂತ ಒಪ್ಪಿಕೊಳ್ಳೋದಕ್ಕೆ ಹೆದರಿಕೆ. ನಿನ್ನ ಗಂಡಸುತನದ ಬಗ್ಗೆ ಹೆಮ್ಮೆ ನಿನಗೆ; ಜನ ನಕ್ಕಾರೆಂಬ ಭಯ ನಿನಗೆ. ನಿನ್ನ ಶೂದ್ರತ್ವದ ಬಗ್ಗೆ ಅಹಂಕಾರ. ಅದಕ್ಕೆ ನಿನ್ನ ಧ್ವನಿ ಹೊರಡುತ್ತಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ರುದ್ರ : ನನ್ನ ಮನಸ್ಸಿನಲ್ಲೂ ಯಾಕೆ ಗೊತ್ತಾಗ್ತಿಲ್ಲ ? ನನಗೆ ಏನೂ ತಿಳೀತಿಲ್ಲ ಅಂತ ಯಾಕೆ ಗೊತ್ತಾಗ್ತಿಲ್ಲ?
(ಮೌನ. ಉಷಾ ಹತ್ತಿರ ಹೋಗಿ)
ಯಾಕೆ, ಏನಾಗಿತ್ತು ನಿಂಗೆ ?
(ಮೌನ)
ನನ್ನ ತಲೆದಂಡ ಯಾಕೆ ಬೇಕಾಗಿತ್ತು ? ಯಾಕೆ ಹಾಗೆ ನಗ್ತಾ ನಗ್ತಾ ಮಾತಾಡ್ತಿದ್ದೆ ? ಯಾಕೆ ನನ್ನ ಮೆಚ್ಚಿ ಪದ ಹೇಳ್ತಿದ್ದೆ ?

ಬಿಜ್ಜಳ : ಹೌದಾ ಉಷಾ ? ನಿಜವೆ ?

ಉಷಾ : ಹೌದು.

ಬಿಜ್ಜಳ : ಹಾಗಾದರೆ ಪ್ಯಾಗೆ ಬಲಾತ್ಕಾರ.

ಉಷಾ : (ಮೌನ) ನನ್ನ ಬಳಿ ಮಾತಾಡುತ್ತಿದ್ದವ ಬೇರೆ. ಆತ ಬಂದು ಮೈಮೇಲೆ ಬಿದ್ದ. ಆತ ನನಗೆ ಬೇಕಾದವನಿದ್ದ. ಆದರೆ ನಾನು ಎದ್ದು ನೋಡಿದಾಗ ಆತ ಇರಲಿಲ್ಲ. ಅಲ್ಲಿದ್ದವನು ಶರಣ ರುದ್ರ. ಇದು ಅತ್ಯಾಚಾರವಲ್ಲದೆ ಮತ್ತೇನು ?

ಬಿಜ್ಜಳ : ನೀನು ಬದಲಾವಣೆ ಬಗ್ಗೆ ಹೇಳುತ್ತಿದ್ದೀ.

ಉಷಾ : ಹೌದು, ಪ್ರಭು.

ಬಿಜ್ಜಳ : ಆ ರುದ್ರ ಬೇರೆ, ಈ ರುದ್ರ ಬೇರೆ.

ಉಷಾ : ಹೌದು, ಪ್ರಭು.

(ಪುಟ 78–79)

ಬಿಜ್ಜಳನ ದ್ವಂದ್ವಗಳನ್ನು ಸಮರ್ಥವಾಗಿ ಸೃಷ್ಟಿಸುತ್ತಾ ಹೋಗುವ ಲಂಕೇಶರು ಈ ನಿರ್ಣಾಯಕ ಘಟ್ಟದಲ್ಲಿ ತಾವೇ ದ್ವಂದ್ವದಲ್ಲಿ ಬೀಳುತ್ತಾರೆ. ಇಲ್ಲಿಯವರೆಗಿನದು ಅವರ ಬುದ್ಧಿ ಸುಲಭವಾಗಿ ಗ್ರಹಿಸುವಂಥ ಪರಿಸ್ಥಿತಿಯಾಗಿತ್ತು. ರಾಜನಾಗಿ, ಲೌಕಿಕಬಲ್ಲ ಪ್ರೌಢನಾಗಿ ಬಿಜ್ಜಳನ ಮನಸ್ಸಿನ ಮಿಡಿತ, ಅದಕ್ಕೆ ಪ್ರತಿಕ್ರಿಯೆಯಾಗಿ ಆದರ್ಶವಾದಿಯಾಗಿ, ಕ್ರಾಂತಿಕಾರಿಯಾಗಿ ಬಸವಣ್ಣನ ಸ್ಪಂದನ ಒಂದು ರೀತಿಯಲ್ಲಿ ಯಥಾಸ್ಥಿತಿವಾದಕ್ಕೆ ಬಂದ Stock response ಇದ್ದಂತೆ. ಲಂಕೇಶರ ಚಾಣಾಕ್ಷತನ ಲೀಲಾಜಾಲವಾಗಿ ಈ ಕಾರ್ಯವನ್ನು ನಿರ್ವಹಿಸುತ್ತದೆ. ಆದರೆ ನಿಜವಾಗಿ ಲೇಖಕರ ಕ್ರಿಯಾಶೀಲತೆ ಪರೀಕ್ಷೆಗೊಳಗಾಗುವುದು ಉಷಾ ರುದ್ರನನ್ನು ತಿರಸ್ಕರಿಸುವುದರಲ್ಲಿ ಹಾಗೂ ರುದ್ರನ ಅಸಹಾಯಕತೆಯಲ್ಲಿ. ಇಲ್ಲಿ ರಾಜಷಾಹಿ ಮತ್ತು ಉಚ್ಚ–ನೀಚಗಳನ್ನು ಪ್ರತಿಪಾದಿಸುವ ಮತ್ತು ಜಾತಿವ್ಯವಸ್ಥೆಯನ್ನು ಒಪ್ಪಿಕೊಂಡ ಸಮಾಜ ಮತ್ತು ಅದಕ್ಕೆ ತಕ್ಕಂಥ Stock responseಗಳ ಪ್ರಯೋಜನ ಆಗದು. ಏಕೆಂದರೆ ಇಂಥ ಸಮಾಜದ ವಿರುದ್ಧ ಬಂಡಾಯ ಹಾಗೂ ತಿರಸ್ಕರಣೀಯವಾದ ಈ ಮೌಲ್ಯಗಳಿಗೆ ಪ್ರತಿಯಾದ ಜೀವನಮೌಲ್ಯಗಳು ಕಣ್ಣಳತೆಯಲ್ಲಿ ಕಾಣಸಿಗದಂಥ ಗೊಂದಲ ಸ್ಥಿತಿ ಉಂಟಾಗಿದೆ. ಅದರಿಂದಾಗಿಯೇ ಈ ಸನ್ನಿವೇಶದಲ್ಲಿ ಲಂಕೇಶರು Stock response ಮಾದರಿಯ ಬೌದ್ಧಿಕಚರ್ಚೆ ನಡೆಸಿ ಪರಿಸ್ಥಿತಿಯನ್ನು ನಿಭಾಯಿಸಲಾರರು. ಇದು ನಿಜಕ್ಕೂ ಸೃಜನಶೀಲ ಬರಹಗಾರನಿಗೆ ಒಡ್ಡಿದ ನಿಜವಾದ ಸವಾಲು. ನಾಟಕದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಇದುವರೆಗೆ ಕಂಡುಬಂದಿರುವ ಸಾಮಾಜಿಕ ಹಿನ್ನೆಲೆ. ರಾಜಕೀಯ ವಿದ್ಯಮಾನ, ಇವೆಲ್ಲ ರುದ್ರ–ಉಷೆಯರ ಸಂಬಂಧವನ್ನು ಮದುವೆಯ ವಿಧ್ಯುಕ್ತಕ್ರಿಯೆಯಲ್ಲಿ ಪರ್ಯವಸಾನಗೊಳ್ಳುವ ಪ್ರೇಮಪ್ರಕರಣವೆಂದು ಸರಳಗೊಳಿಸುವಷ್ಟು ಸುಲಭವಲ್ಲ. ಪ್ರೇಮವೆಂದು ಪರಿಗಣಿಸಲ್ಪಟ್ಟು ಅದಕ್ಕೆ ದೊರೆಯ ಮನ್ನಣೆ ಸಿಕ್ಕರೆ "ಸಂಕ್ರಾಂತಿ"ಗೆ ಏನೂ ಮಹತ್ವವಿಲ್ಲದಂತಾಗುತ್ತದೆ. ಹಾಗೂ ಇಲ್ಲಿಯವರೆಗೆ ಲೇಖಕರು ನಡೆಸಿದ ಬೌದ್ಧಿಕ ಕಸರತ್ತೆಲ್ಲ ಹೊಳೆಯಲ್ಲಿ ಹುಣಿಸೇಹಣ್ಣು ತೊಳೆದಂತಾಗುತ್ತದೆ. ಹಾಗೆಂದು ಲೇಖಕರು ತಮ್ಮಿಷ್ಟಬಂದಂತೆ ಪಾತ್ರಗಳ ಮನಸ್ಸನ್ನು ನಿರ್ದೇಶಿಸುವಂತಿಲ್ಲ. ಬಿಕ್ಕಟ್ಟಿಗೆ ಸಿಕ್ಕಿಕೊಂಡ ಸಮಾಜ ಇಲ್ಲಿ ತಾನೇ ಸ್ವತಃ ಬಾಯ್ದೆರದು ಮಾತಾಡಬೇಕಾಗಿದೆ. ಇದು ಲಂಕೇಶರ dilemma. ನಾಟಕದ dilemma ವೂ ಹೌದು. ಇಂಥ ಸ್ಥಿತಿಯಲ್ಲಿ ಲಂಕೇಶ್ ಹೇಗೆ ವರ್ತಿಸುತ್ತಾರೆ ? ಸಮೂಲಬದಲಾವಣೆ ಅಪೇಕ್ಷಿಸುವ ಕ್ರಾಂತಿಯ ಗುರಿ ಇಲ್ಲಿ ರುದ್ರ–ಉಷೆಯ ವಿವಾಹದಲ್ಲಿ ಮುಗಿಯುವಷ್ಟು ಸೀಮಿತವಾದುದಲ್ಲ. ಪ್ರೇಮ ಗೆಲ್ಲಬೇಕೆ ? ಕ್ರಾಂತಿ ಗೆಲ್ಲಬೇಕೆ ? ಇಂಥ ಸ್ಥಿತಿಯಲ್ಲಿ ಲಂಕೇಶ್ ತಮ್ಮ ದ್ವಂದ್ವವನ್ನು ಗುರುತಿಸಿಕೊಂಡು ಕೇವಲ ಪ್ರಚೋದಕನ ಪಾತ್ರವಹಿಸಿ ಸಮಸ್ಯೆ ತನ್ನ ಮಾರ್ಗದಲ್ಲಿ ನಡೆಯಲು ಬಿಡುತ್ತಾರೆ. ಇದರಿಂದಾಗಿ ಲಂಕೇಶರೊಳಗಿನ ತನ್ನ ಸೃಜನಶೀಲ ಬರಹಗಾರ ನಾಟಕದ ಸಾರಥ್ಯವನ್ನು ವಹಿಸಿಕೊಳ್ಳುತ್ತಾನೆ.

ಈ ರೀತಿಯಾಗಿ ಲೇಖಕರ ಹಿಡಿತದಿಂದ ಮುಕ್ತಗೊಂಡ ರುದ್ರ–ಉಷೆಯರ ಪಾತ್ರಗಳು ನೊಟ್ಟಮೊದಲಿಗೆ ತಮ್ಮ ನಿಜಸ್ವರೂಪಗಳನ್ನು ಕಂಡುಕೊಳ್ಳುತ್ತವೆ. ತನ್ನ ನಿಜಸ್ವರೂಪ ಅರಿವಾದಾಗಲೇ ರುದ್ರನ ಬಾಯಿ ಕಟ್ಟುತ್ತದೆ. ಇಲ್ಲಿಯವರೆಗೆ ಶರಣತ್ವದ ಆದರ್ಶ–ಕನಸುಗಾರಿಕೆಗಳಲ್ಲಿ ತೇಲಿಮುಳುಗುತ್ತಿದ್ದ ಅವನಿಗೆ ಕಟುವಾಸ್ತವದ ಪರಿಚಯ ಆಗುತ್ತಿರುವುದು ಇದೇ ಮೊದಲು. ಅಣ್ಣನವರ ಧ್ಯೇಯ ಆದರ್ಶ ಗಳನ್ನು ತನ್ನವರ ಮುಂದೆ ಮಂಡಿಸಿ ಶರಣತ್ವದ ಶ್ರೇಯಸ್ಸನ್ನು ಹೇಳುತ್ತಿದ್ದ ಅವನಿಗೆ ಇದುವರೆಗೆ ಅಣ್ಣ ಬೋಧಿಸಿದ ಹೊಸ ಜೀವನಮಾರ್ಗ ಕೇವಲ ಕಾಮನಬಿಲ್ಲಿನಂತೆ ಮನಸ್ಸನ್ನು ಸೂರೆಗೊಂಡಿತ್ತೇ ವಿನಃ ಎಂದೂ ಅದು ಅವನ ಕಣ್ಣೆದುರಿನಲ್ಲಿ ಒಟ್ಟು ಸಮಾಜದ ಹಾಗೂ ರಾಜ್ಯವ್ಯವಸ್ಥೆಯ ಕಠಿಣ ಪರೀಕ್ಷೆಗೆ ಗುರಿಯಾಗಿರಲಿಲ್ಲ. ಆದರೆ ಈಗ ರಾಜ್ಯವ್ಯವಸ್ಥೆಯ (Establishment) ಶಕ್ತಿಯೆದುರು ಅಣ್ಣ ಬೋಧಿಸುವ ಶರಣತ್ವ ಸ್ತೋತ್ರ ಹೊಸ ಜೀವನಮೌಲ್ಯ ಈ ಶಕ್ತಿ ಎದುರು ದುರ್ಬಲ ಎನಿಸಿದಾಗ ರುದ್ರ ಅನಾಥನಾಗಿ ನಿಲ್ಲುತ್ತಾನೆ. ರಾಜಶಕ್ತಿಯ ಎದುರು ರುದ್ರನನ್ನು ಉಳಿಸಿ ಕೊಳ್ಳುವಂಥ ಬಲ ಅಣ್ಣನವರ ಹೊಸ ಜೀವನಮೌಲ್ಯವಾದ ಶರಣತ್ವಕ್ಕಿಲ್ಲ. ಪ್ರಮಾಣವಚನ ಸ್ವೀಕರಿಸಲು ಉಷ್ಣ ನಿರಾಕರಿಸಿರುವುದರೊಂದಿಗೆ ಶರಣತ್ವಕ್ಕೆ ದೊರೆಯ ಎದುರೇ ಶೂದ್ರರ ವಿರೋಧ ಪ್ರಕಟವಾದಂತಾಗಿದೆ. ಇದುವರೆಗೆ ರುದ್ರನಿಗೆ ತನ್ನ ಜನರೆದುರು ಶರಣತ್ವದ ಪ್ರತಾಪ ಕೊಚ್ಚುವುದು ಸುಲಭವಾಗಿತ್ತು. ಏಕೆಂದರೆ ಅದು ಪುಟಕ್ಕೆ ಬಿದ್ದು ಅಗ್ನಿಪರೀಕ್ಷೆಗೊಳಗಾಗದ ಬರೀ ಮಾತುಗಾರಿಕೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರ್ಶವಾಗಿತ್ತು. ಈಗ ಶರಣತ್ವ ರಾಜಪಾಹಿಯ ಎದುರು ನಿಲ್ಲುವ ಸಮಬಲವಿಲ್ಲದ ದುರ್ಬಲ ವಿಧಾನವಾಗಿದೆ. ಈ ಶೂದ್ರತ್ವ ಮತ್ತು ಶರಣತ್ವವೇ ರುದ್ರನ ದ್ವಂದ್ವ. ಶೂದ್ರತ್ವದ ಪೀಡೆಗಳಿಂದ ಬಿಡುಗಡೆಹೊಂದಿ ಶರಣತ್ವದಿಂದ ಜೀವನ ಹಸನುಗೊಳಿಸಿಕೊಳ್ಳುವ ಸುಸಂಸ್ಕೃತಿಯತ್ತ ಕನಸು ಕಾಣುತ್ತಿರುವ ರುದ್ರನಿಗೆ ಹೆಣ್ಣು ಹೆಂಡ, ಮೊದಲಾದ ಜೀವನಸಹಜ ಲೌಕಿಕಭೋಗಗಳನ್ನು ಬಿಟ್ಟುಕೊಟ್ಟಾಗ ಪ್ರತಿಯಾಗಿ ಶರಣತ್ವದ ಮೌಲ್ಯಗಳೇನೆಂಬುದು ಖಚಿತವಾಗಿಲ್ಲ. ಅಂತೆಯೇ ತಲೆಮಾರು ಗಳಿಂದ ತುಳಿಯುತ್ತಾ ಬಂದ ರಾಜಪಾಹಿ ಮತ್ತು ಬ್ರಾಹ್ಮಣತ್ವದ ವಿರುದ್ಧ ದಂಗೆ ಯೆದ್ದ ಶರಣತ್ವದ ಗುರಿಗಳೇನು, ಅದರ ಶಕ್ತಿ ಸಾಮರ್ಥ್ಯಗಳೇನೆಂಬುದು ರುದ್ರನಿಗೆ ಗೊತ್ತಿಲ್ಲ. ಶರಣತ್ವದ ಮೌಲ್ಯಗಳೇನಿದ್ದರೂ ಅವನಪಾಲಿಗೆ ಇನ್ನೂ ಅನುಭವಕ್ಕೆ ಬರದ ಕನಸಿನ ಗಂಟು. ಈ ಕನಸಿನ ಗಂಟನ್ನು ನಂಬಿಕೊಂಡು ಆದರ್ಶವಾದಿಯಾಗಿ ಓಡಾಡುವ ರುದ್ರ-ಉಷೆಯ ಸೆಳೆತಕ್ಕೆ ಬಿದ್ದಾಗಲೇ ದ್ವಂದ್ವದ ಪಾತಳಿಯಲ್ಲಿ ಸಿಕ್ಕಿ ಬೀಳುತ್ತಾನೆ. ರುದ್ರನ ಈ ದ್ವಂದ್ವ ಉಷೆ ಜೊತೆ ಭೇಟಿಯಿಂದಲೇ ಆರಂಭವಾಗಿದೆ. ಲಂಕೇಶರು ಭಾಷೆಯಮಟ್ಟದಲ್ಲಿ ರುದ್ರನ ಈ ದ್ವಂದ್ವವನ್ನು ಒಡೆದುಕಾಣುವಂತೆ ರೂಪಿಸಿದ್ದಾರೆ :

ರುದ್ರ : ಉಷಾ...ನಾಳ್ಕಲ್ಲ ನಾಳಿದ್ದು ಸಂಕ್ರಾಂತಿ

ಉಷಾ : ಏನದು ಉಸಾ...ಉಸ್...ಉಸ್...

ರುದ್ರ : (ಅವಮಾನದಿಂದಲೇ) ನಿನ್ನ ಹೆಸರು ಉಷಾ

ಉಷಾ : ನನ್ನ ತಂದೆ ಹೇಳ್ತಿದ್ದರು ಶೂದ್ರ-ಮುಂಡೇದಕ್ಕೆ ಮಾತುಬರಲ್ಲ ಅಂತ

ರುದ್ರ : ಈಗ ಮಗಳೂ ಅದನ್ನೇ ಹೇಳ್ತಿದಾಳೆ

(ಪುಟ 25)

(ಹಾಗೂ ಇದೇ ಸಂದರ್ಭದಲ್ಲಿ ಉಷಾ ಸಂಸ್ಕೃತ ಶ್ಲೋಕವೊಂದನ್ನು ಹೇಳುವುದನ್ನು ಗಮನಿಸಬೇಕು.)

ತನ್ನ ಜನರ ಮಧ್ಯೆ ಥೇಟ್ ಬ್ರಾಹ್ಮಣನಂತೆ ಶುದ್ಧ ಕನ್ನಡದಲ್ಲಿ ಮಾತನಾಡುವ ರುದ್ರನಿಗೆ ಗ್ರಾಮ್ಯದ ಅಲ್ಪಪ್ರಾಣ ಅವನ ಹಾದಿಯಲ್ಲಿ ಮುಳ್ಳಾಗುವುದು ಶೂದ್ರತ್ವ ದಿಂದ ಶರಣತ್ವದ ಮೇಲಂತಸ್ತಿಗೆ ಹಾರುವ ಅಭಿಲಾಷೆಯಂತೆ ಉಚ್ಚವರ್ಗದ ಹೆಣ್ಣೊಂದನ್ನು ಬಯಸುವಾಗಿನ ಮನಃಸ್ಥಿತಿಯನ್ನೂ ಸುಪ್ತಮನಸ್ಸಿನಲ್ಲಿನ ಮೂಲದ ಹೀನಸ್ಥಿತಿಯನ್ನೂ (Inferiority complex) ಎತ್ತಿತೋರುವ ವಿಷಾದ ಸಂಗತಿಯಾಗಿದೆ. ಅತ್ತ ಶೂದ್ರರನ್ನು ಪೂರ್ತಿಯಾಗಿ ಒಲಿಸಿಕೊಂಡು ಅವರನ್ನು ಈ ಹೀನಸ್ಥಿತಿಯಿಂದ ಮೇಲಕ್ಕೆತ್ತಲಾಗದ, ಇತ್ತ ಉಚ್ಚಕುಲವನ್ನು ತನ್ನ ಶರಣತ್ವದ ಬಲದಿಂದ ಒಲಿಸಿಕೊಳ್ಳಲೂ ಆಗದೆ ಅವರ ಮುಂದೆ ಸಣ್ಣವನಾಗುತ್ತಾ ಶೂದ್ರತ್ವ ದಲ್ಲೇ ಪ್ರಕಟಗೊಳ್ಳುವ ಅವನ ಈ ಸ್ಥಿತಿ ಮೌಲ್ಯಗಳ ಪೂರ್ಣಅರಿವು ಸಿಗದ ಇಬ್ಬಂದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತನದಿಂದ ಬಂದದ್ದು. ನಿರ್ಣಾಯಕಘಟ್ಟದಲ್ಲಿ ಒಂದು ಕಡೆ ರಾಜ. ಇನ್ನೊಂದು ಕಡೆ ತನ್ನ ಮೂಲವಾದ ಶೂದ್ರತ್ವ. ಮತ್ತೊಂದು ಕಡೆ ಶರಣತ್ವ (ಕ್ರಾಂತಿ), ಮಗದೊಂದು ಕಡೆ ಸವಾಲಾಗಿ ನಿಂತ ಮೂಲ ಪ್ರವೃತ್ತಿ ಕಾಮ (ಉಷೆ) ಇವೆಲ್ಲ ಎದುರಾದಾಗ ಇವುಗಳಲ್ಲಿ ಯಾವುದು ತನ್ನ ಜೀವನ ರೂಪಿಸುವ ಮೌಲ್ಯವಾದೀತು. ಕಾಪಾಡುವ ಆಯುಃಶಕ್ತಿಯಾದೀತು ಎಂಬುದು ಅವನಿಗೆ ಅರ್ಥವಾಗುವುದಿಲ್ಲ. ಒಂದೊಂದೂ ಎದುರಾಗಿ ಅವನಿಗೆ ಡಿಕ್ಕಿ ಹೊಡೆದಾಗ ಅವನು ಮಂಕುಕವಿದಂತಾಗುತ್ತಾನೆ. ಅಲ್ಲಿಂದ ಓಡಲೆಳಸುತ್ತಾನೆ. ಕ್ರಾಂತಿಪೂರ್ವದ ಗೊಂದಲಸ್ಥಿತಿಯಿದು. ಇಂಥ ಸ್ಥಿತಿ–ಸನ್ನಿವೇಶಗಳ ಪ್ರಯೋಜನ ಪಡೆದು ಲಂಕೇಶರು ಶೂದ್ರತ್ವದ ಅಹಂಕಾರವೇ ? ಗಂಡಸುತನದ ಹೆಮ್ಮೆಯೇ ? ಭಯವೇ ಎಂದು ರುದ್ರನನ್ನು ಪ್ರಚೋದಿಸುತ್ತಾರೆ. (ಇಲ್ಲಿ ಲಂಕೇಶರು ಬಿಜ್ಜಳ. ಬಸವಣ್ಣರ ಬಾಯಲ್ಲಿ ಗಿಡಿದಂತೆ ಬೌದ್ಧಿಕ ಮಾತುಗಳನ್ನು ಆಡಿಸುವುದಿಲ್ಲ ಎಂಬುದನ್ನು ನೆನಪಿಡಬೇಕು.) ಶೂದ್ರತ್ವದ ಅಹಂಕಾರವೆಂದರೆ ಶರಣತ್ವವನ್ನು ತಿರಸ್ಕರಿಸಿದಂತಾಗುತ್ತದೆ. ಗಂಡಸುತನದ ಹೆಮ್ಮೆಯೆಂದರೆ ಸತ್ಯ ಮರೆಮಾಚುವ ಹೇಡಿತನವಾಗುತ್ತದೆ. ಹೀಗೆ ಒಂದು ಇನ್ನೊಂದಾಗುತ್ತಾ ಸತ್ಯ ಮರೆಮಾಚುವುದಾಗುತ್ತದೆಯೇ ವಿನಃ ಇವು ಯಾವುದೂ ಉಷೆಯ ಸುಳ್ಳಿಗೆ ಉತ್ತರವಾಗುವುದಿಲ್ಲ. ಲೇಖಕರಿಗೂ ಈ ದ್ವಂದ್ವದಿಂದ ಪಾರಾಗುವ ಮಾರ್ಗ ಗೊತ್ತಾಗುವದಿಲ್ಲ. ಪರಕಾಯಪ್ರವೇಶದಂತೆ ಪಾತ್ರಗಳ ದೇಹ ಪ್ರವೇಶಿಸಿ ಅವುಗಳ ಅಂತರಂಗವನ್ನು ಅರಿತು ಅವುಗಳ ನೈಜಮನಸ್ಸನ್ನು ನುಡಿಸುವ ಯತ್ನಮಾಡಿದ್ದಾರೆ. ಇದುವರೆಗೆ ತಾನು ನಂಬಿದ್ದು ಯಾವುದೂ ಸತ್ವಪರೀಕ್ಷೆಯ ಈ ಕಾಲದಲ್ಲಿ ತನ್ನ ನೆರವಿಗೆ ಬಾರದಿರವುದನ್ನು ಕಂಡು ಕಂಗೆಟ್ಟ ರುದ್ರನಿಗೆ ಉಷೆಯ ಸುಳ್ಳಿನಿಂದಾಗಿ ಹೆಣ್ಣು ನಿಗೂಢಳಾಗಿ "ಏನಾಗಿತ್ತು ನಿನಗೆ ? ಯಾಕೆ ನನ್ನ ಮೆಚ್ಚಿ ಪದ ಹಾಡಿದೆ ?" (ಪುಟ 79) ಎಂಬ ಅಸಹಾಯಕಸ್ಥಿತಿಯಲ್ಲಿ ಅವನು ನಿಲ್ಲುತ್ತಾನೆ.

ಈಗ ಲೇಖಕರ ಗಮನ ರುದ್ರನಿಂದ ಉಷೆಯತ್ತ ಹರಿಯುತ್ತದೆ. ರುದ್ರನನ್ನು ಮನಸಾರ ಬಯಸುವ ಉಷಾ "ಬಲಾತ್ಕಾರ" ಎಂದು ಸುಳ್ಳು ಹೇಳುತ್ತಾಳೆ ಏಕೆ ? ಇದು ಶೂದ್ರನನ್ನು ತನ್ನ ಭೋಗಕ್ಕೆ ಬಳಸಿಕೊಂಡು ಅನಂತರ ಸಾಮಾಜಿಕ ವ್ಯವಹಾರದ ಮಟ್ಟದಲ್ಲಿ ತಿರಸ್ಕರಿಸುವ ಉಚ್ಚವರ್ಗದ ಕಪಟ ರೀತಿಯೇ ? ಉಷೆಯ ಸ್ಥಿತಿ ಇಂಥ ನಿರ್ಧಾರಕ್ಕೆ ಬರುವಷ್ಟು ಸುಲಭ ಗುಣಾಕಾರವಲ್ಲ. ಉಷೆ ಸಹ ರುದ್ರನಷ್ಟೇ ಸಮವಾಗಿ ದ್ವಂದ್ವಗಳಲ್ಲಿ ಸಿಕ್ಕಿಬಿದ್ದ ಮನಸ್ಸು. ಆದರೆ ಉಷೆಗೆ ಇಲ್ಲಿ ಶರಣತ್ವದ-ಶೂದ್ರತ್ವದಂಥ ತಾತ್ವಿಕ ಅಡಿಪಾಯ ಇಲ್ಲವೆನಿಸುತ್ತದೆ. ತಲೆತಲಾಂತರಗಳಿಂದ ಜಡ್ಡುಗಟ್ಟಿನಿಂತಿರುವ ರುದ್ರನ ಬದುಕಿಗೆ ಅಣ್ಣನವರಿಂದಾಗಿ ಒಂದು movement ಸಿಕ್ಕಿದೆಯಾದರೂ ಅದರ ಫಲ ಮತ್ತು ಪೂರ್ಣಸಾಧ್ಯತೆಗಳ ಅರಿವು ಗೊತ್ತಾಗಿಲ್ಲ. ಆದರೆ ಉಷೆಯದು ಇದಕ್ಕೂ ಹೀನವಾದ ಬದುಕು. ಅವಳು ಜಡ್ಡುಗಟ್ಟಿದ ಸಂಪ್ರದಾಯದ ಬಿರುಜಿನಲ್ಲಿ ಸಿಕ್ಕಿ ಬಿದ್ದವಳು. ತಾತ್ವಿಕ ಆಧಾರವಿದ್ದೂ ಹೊಸಮೌಲ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಗಾಗಿ ಒಂದು Movement ಇದ್ದೂ ರಾಜ್ಯವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗುವ ರುದ್ರ. ಇದಾವುದರ ಬಲವೂ ಇಲ್ಲದೆ ಮನಸ್ಸಿನ ಕಾಮನೆಗಳಲ್ಲಿ ಬಯಸಿ ಪಡೆದದ್ದನ್ನು ದಕ್ಕಿಸಿಕೊಳ್ಳುವ ಆತ್ಮಶಕ್ತಿ ಇಲ್ಲದೇ ಹುಟ್ಟಿದ ವಿಷವೃತ್ತದಲ್ಲೇ ಉಳಿಯುವ ಉಷಾ-ಇವರಿಬ್ಬರೂ ಹೊಸತನಕ್ಕೆ ಹೊರಳುವ ಮುಂಚಿನ ಸಮಾಜದ ಸಂಕ್ರಮಣಾವಸ್ಥೆಯ ಮೂರ್ತರೂಪಗಳಾಗಿದ್ದಾರೆ. ಉಷೆಯ ದ್ವಂದ್ವಕ್ಕೆ ಜಾತಿ ಸಂಪ್ರದಾಯಗಳ ಕಾರಣಗಳ ಜೊತೆ biological ಹಾಗೂ psychological ಕಾರಣಗಳೂ ಇವೆ ಅನ್ನಿಸುತ್ತದೆ. ಜೈವಿಕವಾಗಿ ಪ್ರಾಯದ ಸೊಕ್ಕಿನ ಅವಳ ಮೈ ಶೂದ್ರ ರುದ್ರನನ್ನು ಒಪ್ಪಿಕೊಳ್ಳುತ್ತದೆ. ದೇಹದ ಬಯಕೆ ಬಾಯ್ದೆರೆದಾಗ ರುದ್ರ ಅವಳ ಕಣ್ಣಿಗೆ ಶೂದ್ರನಾಗಿ ಕಂಡು (ಇಲ್ಲಿ ಲಂಕೇಶರು ಶೂದ್ರ ಶಕ್ತಿಯ ಸಂಕೇತವಾಗಿ ಹುಲಿಯನ್ನು ತಂದಿರುವುದನ್ನು ಗಮನಿಸಬೇಕು.) ಅಂಗೀಕಾರಾರ್ಹನಾಗುತ್ತಾನೆ. ದೇಹದ ಬಯಕೆ ತೀರಿದಾಗ ಅವಳ ಪ್ರಜ್ಞೆ ಅವನಲ್ಲಿ ಶರಣತ್ವವನ್ನು ಕಾಣುತ್ತದೆ. ಅವಳ ಮನಸ್ಸು ಶರಣ ರುದ್ರನನ್ನು ಪರಿಗ್ರಹಿಸುವುದಿಲ್ಲ. ಇದು ಉಚ್ಚವರ್ಗದ ಕಪಟತನ ಆಗಿದ್ದಿದ್ದರೆ ಪ್ರಜ್ಞೆಯ ಹಂತದಲ್ಲಿ ಉಷೆ ಶೂದ್ರರುದ್ರನನ್ನು ತಿರಸ್ಕರಿಸಬೇಕಾಗಿತ್ತೇ ವಿನಾ ಶರಣರುದ್ರನನ್ನಲ್ಲ. ಶೂದ್ರರುದ್ರನನ್ನು ಒಪ್ಪಿಕೊಂಡು ಅವಳು ಅವನ ಹಟ್ಟಿಯನ್ನು ಪ್ರವೇಶಿಸಿದ್ದಾಗಿದೆ ಹಾಗೂ ಬಿಜ್ಜಳನ ವಿಚಾರಣೆಯ ಸಂದರ್ಭದಲ್ಲಿ ಅವಳು ಪ್ರಜ್ಞೆಯ ದ್ವಂದ್ವದಲ್ಲಿ ಬಿದ್ದಿದ್ದಾಳೆ ಎಂಬುದನ್ನು ಮರೆಯಲಾಗದು. ಉಷೆಯ ಮನಸ್ಸಿನಲ್ಲಿ ಶರಣತ್ವದ ಕಲ್ಪನೆ ಬ್ರಾಹ್ಮಣ್ಯಕ್ಕಿಂತ ಮಿಗಿಲಾದ ಕಲ್ಪವೃಕ್ಷ–ಕಾಮಧೇನು ಆಗಿ ಕಂಡಿರಲಿಕ್ಕಿಲ್ಲ. ಅಂದರೆ 'ಸಬ್ ಕಾನ್ಷಸ್' ಹಂತದಲ್ಲಿ ಉಷೆ ಬ್ರಾಹ್ಮಣ್ಯ-ಶರಣತ್ವದ ಜಾತಿಯ Concept ಗಳಿಗೆ ವಿರುದ್ಧವಾದ ಮನಸ್ಸು. ಅವಳ ಈ ಸುಪ್ತಭಾವನೆಗೆ ಬಂಡಾಯದ ನಿಶ್ಚಿತರೂಪ ಸಿಕ್ಕಿಲ್ಲವಷ್ಟೇ ? ಅವಳು ಬೆಳೆದುಬಂದ ಪರಿಸ್ಥಿತಿಯಲ್ಲಿ ಅವಳ ಈ ಸುಪ್ತಗುಣ ಬಾಹ್ಯರೂಪ ಪಡೆದು ಪ್ರಕಟಗೊಳ್ಳಲು ಅನುಕೂಲವಾದ ವಾತಾವರಣ ಇಲ್ಲ. ದೈಹಿಕವಾಗಿ ಅವಳು ಶೂದ್ರರುದ್ರನನ್ನು ಒಪ್ಪಿಕೊಳ್ಳುವುದಕ್ಕೆ biological ಕಾರಣಗಳ ಜೊತೆ ಅವಳ ಸುಪ್ತಪ್ರಜ್ಞೆಯಲ್ಲಿ ಗಾಢವಾಗಿ ಬೆಳೆದ ಜೀವಹಿಂಡುವ ಬರಡು ಸಂಪ್ರದಾಯವಾಗಿ ಉಳಿದ ಬ್ರಾಹ್ಮಣ್ಯದ ಬಗ್ಗೆ ತಿರಸ್ಕಾರ ಭಾವವೂ ಕಾರಣವಾಗಿದೆ. ಮಡಿವಂತಿಕೆ. ಆಧ್ಯಾತ್ಮ. ಆಚಾರಗಳಲ್ಲಿ ಶರಣತ್ವವೂ ಬ್ರಾಹ್ಮಣ್ಯದಂತೆ ಗೊಡ್ಡುಸಂಪ್ರದಾಯವಾಗಿ ಮೂಲ ಬದುಕನ್ನು ವಂಚಿಸುವ ಅಪಾಯವಿರುವುದರಿಂದ ಬ್ರಾಹ್ಮಣ್ಯದಂತೆ ಶರಣತ್ವವೂ ಅವಳಿಗೆ ತಿರಸ್ಕಾರಾರ್ಹವಾಗುತ್ತದೆ. ಆದರಿಂದಲೇ ಜೈವಿಕವಾಗಿ ರುದ್ರ ಏನೇ ಇದ್ದರೂ ಶರಣತ್ವ ಧರಿಸಿದ ಕಾರಣದಿಂದಾಗಿ ಉಷೆಯ ಪ್ರಜ್ಞೆ ಅವನನ್ನು ಒಪ್ಪಿಕೊಳ್ಳುವುದಿಲ್ಲ. ಸುಪ್ತಪ್ರಜ್ಞೆಯ ಪ್ರೇರಣೆ ಅವಳ ಬಾಯಲ್ಲಿ "ಬಲಾತ್ಕಾರದ" ಮಾತನ್ನಾಡಿಸುತ್ತದೆ. ಒಂದುರೀತಿಯಲ್ಲಿ ಉಷೆಯೂ ಶೂದ್ರನಂತೆ ಅಸಹಾಯಕಳೇ. ಇವರಿಬ್ಬರಿಗೂ ಬಯಸಿದ್ದು ಸಿಗುವುದಿಲ್ಲ. ಅವಳೂ ಕೊನೆಯಲ್ಲಿ ಕಣ್ಣೀರು ಸುರಿಸುತ್ತಾ ನಿಲ್ಲುತ್ತಾಳೆ. ಲಂಕೇಶರು ಹುಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಟೆಗಳ ಮೂಲಕ ಅವಳ ಮನಸ್ಸನ್ನು ಸ್ಪಷ್ಟವಾಗಿ ಅನಾವರಣಗೊಳಿಸಿರುವುದರ ಜೊತೆಗೆ ಒಂದು ಸಮಾಜದ ಸಾಂಕೇತಿಕ ಚಿತ್ರವನ್ನೂ ಕಡೆದಿರಿಸಿದ್ದಾರೆ. ಸಾಮಾಜಿಕ ಸ್ತರದಲ್ಲಿ ಶೋಷಣೆಯ ಪ್ರತೀಕವಾಗುವ ಈ "ಹುಲಿ ಬೇಟೆ" ಚಿತ್ರ ವೈಯಕ್ತಿಕ ಮಟ್ಟದಲ್ಲಿ ಗಟ್ಟಿಯಾದದ್ದನ್ನು ಪಡೆಯುವ ಮನಸ್ಸಿನ ಕಾಮನೆಯ ಅಭಿವ್ಯಕ್ತಿಯಾಗಿದೆ. ಬಯಸಿದ್ದನ್ನು ಪಡೆದ ಖುಷಿಯಲ್ಲಿ "ಹುಲಿ" ಆಡಿಸುತ್ತಾ ಕುಣಿಯುವ ಉಷೆಗೆ ಮರುಕ್ಷಣಗಳಲ್ಲೇ ತನಗೆ ಸಿಕ್ಕಿದ್ದು ಶರಣತ್ವದ ಅಹಿಂಸಾಮಯ ವ್ಯಕ್ತಿ ಎಂದು ಅರಿವಾಗುತ್ತದೆ. ಶೂದ್ರಶಕ್ತಿಯ ಸಂಕೇತವಾದ "ಹುಲಿ" ಶರಣರ ಯಃಕಶ್ಚಿತ್ ಪ್ರಾಣಿಯಂತೆ ಕಂಡಾಗ ಅವಳ 'ಬಲಾತ್ಕಾರ' ಸೇಡುತೀರಿಸಿಕೊಳ್ಳುತ್ತದೆ. ಅಲ್ಲದೆ ಇದು ಅವಳ ದುರಂತವೂ ಆಗುತ್ತದೆ.

—ಹೀಗೆ, "ಸಂಕ್ರಾಂತಿ"ಯ ದ್ವಂದ್ವಗಳು ಬದಲಾವಣೆಗೆ ನಿಂತ ಸಮಾಜದ ಮೌಲಿಕ ದ್ವಂದ್ವಗಳೂ ಆಗುವುದರಿಂದ ಇಲ್ಲಿನ ಪಾತ್ರಗಳು ಸಂಕೇತಗಳಾಗುತ್ತಾರೆ. ಇದರಿಂದಾಗಿ ಇವರ ದ್ವಂದ್ವಗಳು ವೈಯಕ್ತಿಕತೆ ಕಳೆದುಕೊಂಡು ಸಮಷ್ಟಿತನ ಪಡೆದುಕೊಳ್ಳುತ್ತವೆ. ಇಂಥ ಸಮಷ್ಟಿತನದಿಂದಾಗಿಯೇ ಇಲ್ಲಿನ ಸಮಸ್ಯೆಗಳಿಗೆ ವ್ಯಕ್ತಿ ಮಟ್ಟದಲ್ಲಿ ಪರಿಹಾರ ಕಾಣುವುದು ಅಸಾಧ್ಯವಾಗುತ್ತದೆ. ಸುಲಭಪರಿಹಾರ ಹೇರುವುದು ಲೇಖಕರಿಗೆ ಅಸಂಭವನೀಯವಾಗುತ್ತದೆ. ಅಂದರೆ ಸಾಮಾಜಿಕ ಸ್ಥಿತಿಯೇ ಒಂದು ನಿರ್ಧಾರದತ್ತ ನಾಟಕವನ್ನು ಒಯ್ಯುತ್ತದೆ. ತನ್ನೆಲ್ಲ ದ್ವಂದ್ವಗಳನ್ನೂ ಮೀರಿ ಅಧಿಕಾರದಲ್ಲಿ ಉಳಿಯುವ ಸಲುವಾಗಿ ರುದ್ರನನ್ನು ಬಲಿಕೊಟ್ಟು ಅಧಿಕ ಸಂಖ್ಯಾತರನ್ನು ಸುಪ್ರೀತಗೊಳಿಸುವ ಬಿಜ್ಜಳನ ನಿರ್ಧಾರದಿಂದಾಗಿ ಹಾಗೂ ದ್ವಂದ್ವಗಳಿಂದ ಮುಕ್ತಗೊಂಡು ನಿಚ್ಚಳಗುರಿ ಕಾಣದ ಶೂದ್ರರ ಸಂದಿಗ್ಧಪರಿಸ್ಥಿತಿಯಿಂದಾಗಿ ಕ್ರಾಂತಿಗೆ ಕಾಲ ಮಾಗಿಲ್ಲ. ಇದರಿಂದ ಬಸವಣ್ಣ ಸೋಲುತ್ತಾನೆ. ಆದರೆ ಈ ಸೋಲೂ ಮಹತ್ವದ ಸೋಲಾಗಿದೆ. ಸಂಕ್ರಾಂತಿಯ ದಿನ ಭೂಮಿಗೆ ರುದ್ರನ ರಕ್ತ ಎರೆಯುವ ದೊರೆಯ ನಿರ್ಧಾರ ಬಿಜ್ಜಳ ಮತ್ತು ಬಸವಣ್ಣನನ್ನು ಅಖೈರಾಗಿ ಹೋರಾಟದ ಹಂತದಲ್ಲಿ ಮುಖಾ-ಮುಖಿ ತಂದು ನಿಲ್ಲಿಸಿದೆ. ರುದ್ರನದು ತಲೆದಂಡವಲ್ಲ ಕೊಲೆ ಎಂದು ಪ್ರತಿಭಟಿಸುತ್ತಾನೆ ಬಸವಣ್ಣ. ನಿಜವಾಗಿ ಇದು ನಾಟಕದ ಅಂತ್ಯವಲ್ಲ, ಆರಂಭಕ್ರಾಂತಿಯ ವಾಂಛೆಯನ್ನು ಮೀರಿ ಬೆಳೆಯುವ ನಾಟಕ ! ಹೀಗೆ ಕೊನೆಯಲ್ಲಿ ಸಮಾಜ ಮತ್ತು ಅದನ್ನು ಶೋಷಿಸುತ್ತಿರುವ ವ್ಯವಸ್ಥೆಯ ನಡುವಣ ಹೋರಾಟ ತೆರೆದುಕೊಳ್ಳುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾ. ಶಿ. ಮರುಳಯ್ಯ

ವೀರಚರಿತಕಾವ್ಯದ ಕೆಲವು ಮೂಲಗಳು

(Some Sources of Epic Poetry)

ವೀರಕ್ಕೆ ಸ್ಥಾಯಿ ಉತ್ಸಾಹವಷ್ಟೆ. ಇದು ಬಹು ರೂಪವುಳ್ಳದ್ದು : ಬೇಡಿ ಬಂದವನಿಗೆ ದಾನ ಕೊಡುವಲ್ಲಿ, ಪ್ರಾಣಭಯದಿಂದ ಮರೆಬಿದ್ದವನಿಗೆ ರಕ್ಷಣೆ ನೀಡುವಲ್ಲಿ, ರಣಭೂಮಿಯಲ್ಲಿ ಪ್ರತಿಭಟಿಸಿದ ಎದುರಾಳಿಯನ್ನು ತುಂಡರಿಸುವಲ್ಲಿ, ಮಡಿದ ಪತಿಯೊಡನೆ ಪರಲೋಕ ಯಾತ್ರೆಗೆ ಸಿದ್ಧಳಾದ ಮಹಾಸತಿಯ 'ಸತೀಧರ್ಮ'ದ ವೇಳೆಯಲ್ಲಿ, ಪಾಂಡಿತ್ಯ ಪ್ರತಿಭೆಗಳನ್ನು ಪ್ರದರ್ಶಿಸುವಲ್ಲಿ, ಸ್ವಾಭಿಮಾನ ರಾಷ್ಟ್ರಾಭಿಮಾನಗಳನ್ನು ಮೆರೆಯುವಲ್ಲಿ, ಉಗ್ರದೇವತೆಗೆ ರುದ್ರಭಕ್ತಿಯನ್ನು ಸಲ್ಲಿಸುವಲ್ಲಿ— ಹೀಗೆ ಹಲವೆಡೆಗಳಲ್ಲಿ ವೀರೋತ್ಸಾಹ ಪ್ರದರ್ಶಿತವಾಗುತ್ತದೆ. ಇದನ್ನು ಪರಿಣಾಮಕಾರಿಯಾಗಿ ಕಂಡರಿಸಬಲ್ಲ ಕವಿವಾಣಿಯೇ ವೀರಚರಿತಕಾವ್ಯವೆನಿಸುತ್ತದೆ.

ವೀರಚರಿತಕಾವ್ಯ ಪ್ರಪಂಚದ ಎಲ್ಲಾ ಭಾಷಾಸಾಹಿತ್ಯಗಳಲ್ಲೂ ಅನಿವಾರ್ಯ ಅಂಶವೂ ಎನ್ನುವಂತೆ ಬಿತ್ತರಗೊಂಡಿದೆ. ಗ್ರೀಸ್ ಇದಕ್ಕೆ ಎತ್ತಿದ ಕೈ.* ವಿಶ್ವ ಸಾಹಿತ್ಯದ ಯಾವುದೇ ಸಂಪುಟವನ್ನೆತ್ತಿಕೊಂಡರೂ ವೀರಕಾವ್ಯದ ಹೊಗರು ಗೋಚರಿಸದಿಲ್ಲ. ಅದನ್ನು ಪ್ರಜ್ವಲಿಸುವಂತೆ ಮಾಡಿದ ಕವಿಗಳೂ ಸಾಧಾರಣರಲ್ಲ. ಖಡ್ಗಕ್ಕಿಂತ ಮಿಗಿಲು ಅವನ ಕೈಲೇಖಣಿ ! ವೀರಗೀತೆ ಉಸಿರು ತುಂಬಿ, ಕಸುವು ತುಂಬಿ, ಉತ್ಸಾಹ ತುಂಬಿ, ಉಬ್ಬಿಸಿ ಮೆರೆಸಬಲ್ಲ ಶಕ್ತಿ ಸಾಹಿತ್ಯ ! ಅದೊಂದು ಚಿನ್ನದ ಚಾಟಿ ! ಕೋಟಿ ಕೋಟಿ ಹೃದಯಗಳನ್ನು ಬಡಿದೆಬ್ಬಿಸಿ ಕಾರ್ಯೋದ್ಯುಕ್ತವಾಗುವಂತೆ ಹುರಿದುಂಬಿಸುವ ದಿವ್ಯ ಸಂಜೀವಿನಿ ! ಇಂತಹ ವೀರಚರಿತಕಾವ್ಯದ ರೂಪ–ಸ್ವರೂಪಗಳ ವ್ಯಾಪ್ತಿ ಬಹು ದೊಡ್ಡದು. ಇದಕ್ಕೂ ಮಹಾಕಾವ್ಯಕ್ಕೂ ಇರುವ ಬೆಸುಗೆ–ಬಾಂಧವ್ಯಗಳು ತುಂಬಾ ಸೂಕ್ಷ್ಮ : ಆದರೂ ಸ್ನಿಗ್ಧ. ಎಲ್ಲ ಮಹಾಕಾವ್ಯಗಳಲ್ಲೂ ವೀರಚರಿತೆ ಬಿತ್ತರಗೊಂಡಿರುತ್ತದೆ. ಆದರೆ ಎಲ್ಲ ವೀರಚರಿತಕಾವ್ಯಗಳೂ ಮಹಾಕಾವ್ಯಗಳಲ್ಲ. ಇವುಗಳ ಸಮಗ್ರಾಧ್ಯಯನಕ್ಕೆ ಮುನ್ನ ಇವುಗಳಿಗೆ ಸಂಬಂಧಿಸಿದ ಹಲಕೆಲವು ಅನ್ಯಮೂಲಗಳನ್ನು ಅರಿಯುವ ಅಗತ್ಯವಿದೆ. ಆದ್ದರಿಂದ ನಮ್ಮ ಪ್ರಾಚೀನ ಭಾರತೀಯ ಭಾಷಾ ಸಾಹಿತ್ಯದಲ್ಲಿ ಅವುಗಳ ಹೆಜ್ಜೆ ಗುರುತುಗಳನ್ನು ಹುಡುಕಿ ನೋಡುವ ಯತ್ನ ಇಲ್ಲಿ ಸಾಗಿದೆ—

---

* ನೋಡಿ. *Heroic Poetry*—by C. N. Bowra.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ವೀರಚರಿತಕಾವ್ಯಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಇದರ ಆರಂಭ ಬ್ರಾಹ್ಮಣಗಳಿಗೂ ಹಿಂದೆ ಹೋಗುತ್ತದೆ. ಋಗ್ವೇದದ ಸಂವಾದ ಮಂತ್ರಗಳಲ್ಲಿ, ಆಖ್ಯಾನಗಳಲ್ಲಿ ಬ್ರಾಹ್ಮಣಗಳಲ್ಲಿನ ಇತಿಹಾಸ ಪುರಾಣಗಳಲ್ಲಿ—ವೀರಚರಿತಕಾವ್ಯದ ಕುರುಹುಗಳನ್ನು ತೋರಿಸಿಕೊಟ್ಟಿದ್ದಾರೆ ವಿಂಟರ್‌ನಿಟ್ .[1] ಋಗ್ವೇದದಲ್ಲಿ ಬರುವ ಸಂವಾದಗಳೇ[2] ಮುಂದೆ ಮಹಾಕಾವ್ಯಕ್ಕೂ ಆಧಾರವಾದುವೆಂದೂ ಅಭಿಪ್ರಾಯಪಡುತ್ತಾರೆ. ಅದೇ ರೀತಿ ಐತ್ತರೀಯ ಬ್ರಾಹ್ಮಣದ ಶುನಶ್ಶೇಪನ ಕಥೆಯಲ್ಲಿ ಗದ್ಯದ ಮಧ್ಯೆ ಅಲ್ಲಲ್ಲಿ ಕಾಣಸಿಗುವ ಗೀತೆಗಳು[3] ಭಾಷೆ ಮತ್ತು ಬಂಧ ಎರಡು ದೃಷ್ಟಿಯಿಂದಲೂ ವೀರಚರಿತಕಾವ್ಯಕ್ಕೆ ತುಂಬಾ ಹತ್ತಿರವಾಗಿವೆ. ಇದೇ ರೀತಿ ಋಗ್ವೇದದಲ್ಲಿ ಮತ್ತೆ ಕೆಲವೆಡೆಗಳಲ್ಲೂ ವೀರಚರಿತಕಾವ್ಯದ ಸುಳಿವು ಕಾಣಸಿಗುತ್ತದೆ. ಇದರ ಸ್ಥೂಲ ಅವಲೋಕನ ಈ ಪ್ರಬಂಧದ ಮೂಲ ಉದ್ದೇಶವಾಗಿದೆ.

(i) ದಾನಸ್ತುತಿಗಳು :

ಇವು ಯಜ್ಞಪೋಷಕರುಗಳನ್ನು ಅಥವಾ ರಾಜರುಗಳನ್ನು ಕುರಿತು ಕಟ್ಟಿದ ಕವಿತೆಗಳು.[4] "ಬಹುದಾನದ ಕಾರಣದಿಂದ. ಪ್ರತ್ಯುಪಕಾರದ ಭವ್ಯ ಭಾವನೆಯಿಂದ ಪ್ರೇರಿತವಾದ ಮಂತ್ರಗಳಿಗೆ[5] 'ದಾನಸ್ತುತಿ'ಗಳೆಂದು ಹೆಸರು ಕೊಟ್ಟಿದ್ದಾರೆ.[6] ಋಗ್ವೇದದಲ್ಲಿ ಶ್ಯಾವಾಶ್ವ ಋಷಿಯು ತನ್ನ ಆಶ್ರಯದಾತನಾದ ರಾಜಾತರಂತ

---

[1] M. Winternits, *Indian Lit.* Vol. I, pp. 101 ff; 208 ff; 226.

[2] ಋಗ್. I 179—ಅಗಸ್ತ್ಯ–ಲೋಪಾಮುದ್ರ ಸಂವಾದ;
ಋಗ್. III 33—ವಿಶ್ವಾಮಿತ್ರ–ನದಿಗಳ ಸಂವಾದ:
ಋಗ್. VIII 33—ವಸಿಷ್ಠ, ವಾಸಿಷ್ಠರ ಮತ್ತು ಇಂದ್ರರ ಸಂವಾದ;
ಋಗ್. X 10—ಯಮ–ಯಮಿ ಸಂವಾದ:
ಋಗ್. X 51—ಅಗ್ನಿ ಮತ್ತು ದೇವತೆಗಳ ಸಂವಾದ:
ಋಗ್. X 95—ಪುರೂರವ ಮತ್ತು ಊರ್ವಶಿಯರ ಸಂವಾದ.
ಋಗ್. X 108—ಸರಮಾ ಮತ್ತು ಪಣಿಗಳ ಸಂವಾದ.

[3] ಐತ್ತರೇಯ ಬ್ರಾಹ್ಮಣ VII. 13-18.

[4] A. B. Keith, *Sanskrit Lit.*, p. 41.

[5] ಋಗ್. VI 47-23 ; ಋಗ್. VIII 4-20 : 5-37 ; 13-2 : 46-31 ; ಋಗ್. 107-2 ; 117-2 ರಿಂದ 117-7 ರವರೆಗೆ.

[6] "ಸಂಹಿತೆಯಲ್ಲಿ ಅನೇಕ ಕಡೆಗಳಲ್ಲಿ ರಾಜರುಗಳ ಹೆಸರುಗಳು. ವಂಶಾವಳಿಗಳು. ಅವರು ಮಾಡಿದ ದಾನದ ವಿವರಗಳು. ಅವರಿಂದ ದಾನ ಪಡೆದ ಋಷಿಗಳ ಹೆಸರು, ಕುಲ, ಗೋತ್ರಗಳು ಇವುಗಳನ್ನೂ ಒಳಗೊಂಡ ಮಂತ್ರಗಳಿವೆ. ಇಂಥ ಮಂತ್ರಗಳನ್ನು ದಾನಸ್ತುತಿಗಳೆಂದು ಕರೆಯುತ್ತಾರೆ."

—ಶ್ರೀ ಎನ್. ಎಸ್. ಅನಂತರಂಗಾಚಾರ್, ವೈದಿಕ ಸಾಹಿತ್ಯ ಚರಿತ್ರೆ, ಪುಟ 222–225.

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಅವನ ವಿದುಷಿರಾಣಿಯಾದ ಶಶೀಯಸೀಯರನ್ನು ಅವರ ದಾನಕ್ಕಾಗಿ ಬಹಳವಾಗಿ ಪ್ರಶಂಸೆ ಮಾಡಿರುತ್ತಾನೆ. ಅಥರ್ವ ವೇದದಲ್ಲಿ ಪರೀಕ್ಷಿತರಾಜನ ರಾಜ್ಯಕಾಲದಲ್ಲಿದ್ದ ಸೌಖ್ಯದ ಪ್ರಶಂಸೆಯನ್ನು ಮಾಡುವ ಅನೇಕ ಮಂತ್ರಗಳಿವೆ."[7] ಋಗ್ವೇದದಲ್ಲಿ ಸುಮಾರು ನಲವತ್ತು ಋಕ್ಕುಗಳು ಈ ರೂಪದವು ಸಿಗುತ್ತವೆ. (ಅದರ ಒಂದು ಋಕ್ ಮಾತ್ರ ಸಂಪೂರ್ಣವಾಗಿ ದಾನಸ್ತುತಿ).[8] ಅವುಗಳಲ್ಲಿ ಕೆಲವು ವಿಜಯಗೀತೆಗಳು. ಶತ್ರುಗಳನ್ನು ಜಯಿಸಲು ನೆರವಾದ ಇಂದ್ರನ ಪ್ರಶಂಸೆ ಹಲವರಲ್ಲಿ ಬಂದಿದೆ. ದೇವಸ್ತುತಿಯ ಜೊತೆಯಲ್ಲೇ ವಿಜಯಶಾಲಿ ರಾಜನ ಹೊಗಳಿಕೆಯೂ ಸೇರಿದೆ.[9]

ಇವುಗಳಲ್ಲಿ ಕಾವ್ಯಾಂಶ ಕಡಿಮೆ. "ಎಲ್ಲವೂ ಕಸುಬುದಾರ ಕವಿಗಳ ರಚನೆಗಳೇ" ಎನ್ನುತ್ತಾರೆ ಶ್ರೀ ವಿಂಟರ್‌ನಿಟ್ಸ್. ಅಂತೆಯೇ ಹೆಚ್. ಓಲ್ಡೆನ್‌ಬರ್ಗ್‌ರವರ "ಈ ರಚನೆ ಕಾವ್ಯಸೌಂದರ್ಯವನ್ನೇನೂ ಹೆಚ್ಚಿಸುವುದಿಲ್ಲ. ಆತ್ಮೋನ್ನತಿ ಅಥವಾ ಆತ್ಮಪ್ರಕಾಶವೂ ಇದರಿಂದಾಗುವುದಿಲ್ಲ. ಆದರೆ ಸ್ವಂತಕ್ಕೆ ಮಾತ್ರ ಆರ್ಥಿಕ ಸಂಪಾದನೆ ಆಗುತ್ತದೆ" ಎಂಬ ಅಭಿಪ್ರಾಯವನ್ನು ಉದ್ಧರಿಸಿದ್ದಾರೆ.[10]

(ii) ಕುಂತಾಪ ಮಂತ್ರಗಳು:

'ಕುಂತಾಪ' ಎಂಬ ಪದದ ಅರ್ಥ ಏನೆಂದು ತಿಳಿದಿಲ್ಲ. ಅಥರ್ವ ವೇದದ XX 127–136ರಲ್ಲಿ ಬರುವ ಕುಂತಾಪ ಮಂತ್ರಗಳು ಕುತೂಹಲ ಹುಟ್ಟಿಸುವ ಹೊಸ ಗೀತೆಗಳು.[11] ಇವು ಯಜ್ಞಕ್ರಿಯೆಯನ್ನು ಸ್ವಲ್ಪಮಟ್ಟಿಗೆ ಹೇಳಿದರೂ ವಾಸ್ತವಿಕವಾಗಿ ಇವು ಹಲವು ರಾಜರ ಔದಾರ್ಯವನ್ನು ಕುರಿತು ಹೊಗಳುವ ಋಗ್ವೇದದ 'ದಾನಸ್ತುತಿ'ಗಳನ್ನು ಹೋಲುತ್ತವೆ. ಭಾಗಶಃ ಇವು ಒಗಟೆ ಮತ್ತು

---

[7] ಶ್ರೀ ಬಲದೇವ್ ಉಪಾಧ್ಯಾಯ, ಸಂಸ್ಕೃತ ಸಾಹಿತ್ಯ ಇತಿಹಾಸ. ಪು. 145.

[8] ಋಗ್. I. 126.

[9] M. Winternitz. *Indian Lit*. Vol. I. p. 114.

[10] ಅದೇ. ಪು. 115 n. H. Oldenberg. *Die Literatur deselten Indian*. p. 20.

[11] "ಐತ್ತರೀಯ VI 32, 33 ಮತ್ತು ಕೌಶಿತಕೀ XXX 5 ಗಳ ಹೇಳಿಕೆಯಂತೆ ಈ ಮಂತ್ರಗಳು ಯಜ್ಞೋಪಯೋಗಕ್ಕೆ ಬೇಕು. ಐತ್ತರೀಯವು ಕುಂತಾಪ ಎಂಬ ಪದವನ್ನು ಬಳಸುವುದಿಲ್ಲವಾದರೂ ಕೌಶಿತಕಿಯಲ್ಲಿ ಆ ಪದದ ಪ್ರಯೋಗ ಇದೆ. ಮೊದಲನೆಯದು ನಾರಾಶಂಸ, ಕಾರವ್ಯಾಪರಿಕ್ಷಿತ್ಯಾ ಎಂದು ಮೊದಲಾಗಿ ವಿಭಾಗಗಳ ನಿರ್ದಿಷ್ಟವಾದ ಹೆಸರುಗಳನ್ನು ಹೇಳುತ್ತದೆ. ಗೋಪಥ ಬ್ರಾಹ್ಮಣವು ಕೌಶಿತಕಿಯನ್ನೇ ಪದಶಃ ಅನುಸರಿಸುತ್ತದೆ."

—C. V. Vaidya, *Hist. Sans. Lit.* (Vedic period) Section I, pp. 173-174.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವುಗಳ ಪರಿಹಾರಗಳೂ, ಭಾಗಶಃ ಅಸಪ್ಷ್ಟ ಹಾಗೂ ಅಶ್ಲೀಲ ಕುಚೋದ್ಯಗಳ ಸರಣಿಯೂ ಆಗಿವೆ.[12] ಅನೇಕ ದಿವಸಗಳವರೆಗೆ ನಡೆಯುತ್ತಿದ್ದ ಕೆಲವು ಯಜ್ಞಗಳಲ್ಲಿ ಪುರೋಹಿತರ ಗೊತ್ತಾದ ಸಂಭಾಷಣೆಯ ರೂಪದಲ್ಲೂ ಇರುತ್ತಿದ್ದವು.

(iii) ಗಾಥಾ ನಾರಾಶಂಸೀ:

ನೆರವು ಬಯಸಿ ವೇದಋಷಿ ಇಂದ್ರನನ್ನೋ ಅಗ್ನಿಯನ್ನೋ ಕುರಿತು ವಿಶೇಷ ರೀತಿಯ ಹೊಗಳಿಕೆಯನ್ನು ಸಲ್ಲಿಸುತ್ತಾನೆ. ಋಗ್ವೇದದಲ್ಲಿ ಸಾಧಾರಣವಾಗಿ, ಪ್ರತಿಯೊಬ್ಬ ದೇವತೆಯೂ ಒಂದಲ್ಲ ಒಂದು ಸಮಯದಲ್ಲಿ ಸರ್ವೋತ್ಕೃಷ್ಟ ದೇವತೆಯೆಂಬ ಹೊಗಳಿಕೆಗೆ ಪಾತ್ರನಾಗುತ್ತಾನೆ. ಇಂತಹ "ದೇವಸ್ತುತಿಗಳಲ್ಲದೆ ತತ್ಕಾಲದಲ್ಲಿದ್ದ ದಾನಶೀಲರಾದ ರಾಜರ ಶ್ಲಾಘನೀಯ ಸ್ತುತಿಗಳೂ ಇವೆ. ಅವುಗಳನ್ನು 'ನಾರಾಶಂಸೀ' ಎಂದು ಕರೆಯುತ್ತಾರೆ".[13] ವರ್ಷಾದ್ಯಂತವೂ ನಡೆಯುತ್ತಿದ್ದ 'ಅಶ್ವಮೇಧ' ಯಾಗದ ವೇಳೆಯಲ್ಲಿ ಹತ್ತು ದಿನಕ್ಕೊಮ್ಮೆ ದೇವತೆ ಅಥವಾ ವೀರನೊಬ್ಬನಿಗೆ ಸಂಬಂಧಿಸಿದಂತೆ ಕಥೆಗಳು ಬರುತ್ತಿದ್ದವು. ತಂತೀವಾದ್ಯಗಳನ್ನು ಹಿಡಿದ ಓರ್ವ ಬ್ರಾಹ್ಮಣನೂ, ಮತ್ತೋರ್ವ ಯೋಧನೂ ಅಲ್ಲಿದ್ದು ರಾಜನು ಯಜ್ಞಕ್ಕೆ ನೆರವಾದ ರೀತಿಯನ್ನೂ ಅವನ ಔದಾರ್ಯವನ್ನೂ, ಯುದ್ಧಪರಾಕ್ರಮವನ್ನೂ ಕುರಿತು ತಾವೇ ಕಟ್ಟಿದ ರಚನೆ (ಗಾಥಾ) ಗಳನ್ನು ಹಾಡುತ್ತಿದ್ದರು. ಇವುಗಳನ್ನು 'ಗಾಥಾ ನಾರಾಶಂಸೀ'ಗಳೆಂದೇ ಕರೆಯುವುದು ವಾಡಿಕೆ.[14] ಇವು ಬ್ರಾಹ್ಮಣಗಳಲ್ಲಿ ದೊರೆಯುತ್ತವೆಂದು ಅಥರ್ವಣ ತಿಳಿಸುತ್ತದೆ.[15] "ಇವು ಒಂದು ರೀತಿಯಲ್ಲಿ ಋಗ್ವೇದದ ದಾನಸ್ತುತಿಗಳಿಗೂ, ಅಥರ್ವವೇದದ ಕುಂತಾಪ ಗೀತೆಗಳಿಗೂ ಸಂಬಂಧಿಸಿದ್ದರೂ ಮತ್ತೊಂದು ರೀತಿಯಲ್ಲಿ ಅವುಗಳೇ ನೈಜವಾದ ವೀರಚರಿತಕಾವ್ಯಗಳ ಪೂರ್ವಸೂಚಕ ಕಾವ್ಯಗಳು, ಏಕೆಂದರೆ ವೀರರ ಹಾಗೂ ರಾಜರ ವೈಭವೋಪೇತ ಕಾರ್ಯಗಳೇ ಇವುಗಳ ವಸ್ತು. ಈ ಗಾಥಾ ನಾರಾಶಂಸಿಗಳು ಬಹು ಬೇಗ ಬೆಳೆದು ಸಾಕಷ್ಟು ಪ್ರಮಾಣದ ವೀರಚರಿತಕಾವ್ಯಗಳೆನಿಸಿಕೊಂಡಿರಬಹುದು."[16]

---

[12] M. Winternitz. *Indian Lit.*, Vol. I, p. 149.

[13] ಶ್ರೀ ಬಲದೇವ್ ಉಪಾಧ್ಯಾಯ, ಸಂಸ್ಕೃತ ಸಾಹಿತ್ಯ ಇತಿಹಾಸ, ಪು. 145.

[14] ಶತಪಥ ಬ್ರಾಹ್ಮಣ 5, 6, 8: 7,9–ಇವರನ್ನು 'ಆಖ್ಯಾನವಿದರು' ಎಂದೂ, ಐತ್ತರೇಯ ಬ್ರಾಹ್ಮಣ III–25 ಇವರನ್ನು 'ಪ್ರತ್ಯೇಕ ಕಾವ್ಯರಚಕರು' ಎಂದೂ ಕರೆದಿವೆ; Max Muller—*Hist. of Ancient Lit.*, II Edn., London, 1860. p. 344.

[15] "ತಮಿತಿಹಾಸಶ್ಚ ಪುರಾಣಂ ಚ ಗಾಥಾಶ್ಚ ನಾರಾಶಂಸೀಶ್ಚಾನುವ್ಯ ಚಲನ್" ಅಥರ್ವ. 15–6–11.

[16] M. Winternitz, *Indian Lit.*, Vol. I, p. 314.

Sri Vidyabharathi Book Centre, Sringeri

CC-O. In Public Domain. Digitized by eGangotri

(iv) ಪ್ರಶಸ್ತಿಗಳು: (Verse Panegyrics)

ಪ್ರಶಸ್ತಿಕವಿತೆ ಶಾಸನಗಳಲ್ಲಿ ಕಂಡುಬರುತ್ತದೆ : ಚಾರಿತ್ರಿಕ ದಾಖಲೆಯಾಗಿ ಅಲ್ಲ; ಹೆಚ್ಚು ಕಡಿಮೆ ಅಲಂಕಾರ ಕಾವ್ಯವಾಗಿ. ಸಾಧಾರಣಮಟ್ಟದ ಸಾಹಿತ್ಯ ಸತ್ವವುಳ್ಳ ಈ 'ಪ್ರಶಸ್ತಿ'ಗಳೆಂದು ಪ್ರಸಿದ್ಧವಾದ ಶಾಸನಗಳು ಭಾರತದಲ್ಲಿ ಕಾಲಕಾಲಕ್ಕೆ ಸಿಗುತ್ತವೆ.[17] ಇವು ರಚನೆಯಲ್ಲೂ ತುಂಬಾ ಸರಳ. ಪ್ರಾರ್ಥನೆಯ ನಂತರ ಪೋಷಕನ ಹೊಗಳಿಕೆ ಬರುತ್ತದೆ. ಪ್ರಾಸಂಗಿಕವಾಗಿ ರಾಜನ ವಂಶವೃಕ್ಷ, ದಾನದ ವಿಚಾರ, 'ಕರ' ಅಥವಾ ಕಂದಾಯವನ್ನು ಬಿಟ್ಟದ್ದು, ಆ ರೀತಿ ದಾನ ಕೊಟ್ಟ ಭಾಗಗಳನ್ನು ಸಂರಕ್ಷಿಸುವಂತೆ ದೇವರನ್ನು ಕುರಿತ ಪ್ರಾರ್ಥನೆ. ಅದನ್ನು ಹಾಳುಮಾಡಿದವರಿಗೆ ಸಂಭವಿಸುವ ನರಕ, ದೇಗುಲವನ್ನು ನಿರ್ಮಿಸಿದ ಶಿಲ್ಪಿಯ ಹೆಸರು, ಪ್ರತಿಷ್ಠೆ ಮಾಡಿಸಿದ ಪುರೋಹಿತನ ಹೆಸರು ಹಾಗೂ, (ಹಲವು ಶಾಸನಗಳಲ್ಲಿ) ಸ್ಥಾಪಿಸಿದ ತಾರೀಖು ಇವಿಷ್ಟೂ ಪ್ರಶಸ್ತಿಗಳಲ್ಲಿ ಬರುತ್ತವೆ.[18] ಈ ಪ್ರಶಸ್ತಿಗಳು ಎಂಟು ಹತ್ತು ಸಾಲಿನ ಅತಿ ಚಿಕ್ಕವೂ ಆಗಿರಬಹುದು, ಅಥವಾ ನೂರು ಸಾಲುಗಳಿಗೂ ಮಿಕ್ಕು ಇರಬಹುದು. ಆದರೆ ಅವುಗಳಲ್ಲಿನ ಐತಿಹಾಸಿಕ ಅಂಶಗಳೂ, ಕಾವ್ಯಗುಣಗಳೂ ತುಂಬಾ ವ್ಯತ್ಯಾಸಗಳನ್ನು ಹೊಂದಿರುತ್ತವೆ. ಇವೂ ಕೂಡ ರಾಜಾಜ್ಞೆಯಂತೆ ಅಥವಾ ಐಶ್ವರ್ಯವಂತರ ಅಪ್ಪಣೆಯ ಮೇರೆಗೆ ಕಸಬುದಾರ ಕವಿಗಳು ಕೊರೆದ ಅಥವಾ ಕಟ್ಟಿದ ಕವನಗಳು, ಹಲವು ದೇವಾಲಯದ ಉದ್ಘಾಟನೆ ಅಥವಾ ಇತರ ಧಾರ್ಮಿಕ ಕಾರ್ಯಗಳನ್ನು ಕುರಿತ ವರದಿಗಳಾಗಿವೆ.

(v) ಪರಣಿ ಮತ್ತು ಉಲಾ ಪದಗಳು :

ತಮಿಳುನಾಡಿನ ಪೊರುನರ್ ಎಂಬ ಸೂತರು (Bards) ಗಳು ಹಾಡುತ್ತಿದ್ದ ಎರಡು ಬಗೆಯ ಹಾಡುಗಳು: ಪರಣಿ ಮತ್ತು ಉಲಾ.[19] ಇವುಗಳು ವೀರಗೀತೆಗಳು.

---

[17] "ರುದ್ರದಾಮನ ಶಿಲಾಲೇಖ (ಕ್ರಿ.ಶ. 2 ಶತ). ಹರಿಷೇಣನ ಸಮುದ್ರಗುಪ್ತ ಪ್ರಶಸ್ತಿ (ಕ್ರಿ.ಶ. 4 ಶತ). ಸ್ಕಂದಗುಪ್ತನ ಜುನಾಗಢ ಶಾಸನ (ಕ್ರಿ.ಶ. 5 ಶತ), ವತ್ಸಭಟ್ಟಿಯ ಸೂರ್ಯ ಮಂದಿರವನ್ನು ಕುರಿತ ಪ್ರಶಸ್ತಿ (ಕ್ರಿ.ಶ. 5 ಶತ), ಮಂದಸೋರಿನಲ್ಲಿ ಸಿಕ್ಕಿದ ಯಶೋಧರ್ಮನ ಸ್ತಂಭ ಪ್ರಶಸ್ತಿ (ಕ್ರಿ.ಶ. 6 ಶತ), ಐಹೊಳೆಯಲ್ಲಿ ಸಿಕ್ಕಿದ ರವಿಕೀರ್ತಿ ಕೃತ ಇಮ್ಮಡಿ ಪುಲಿಕೇಶಿಯ ಪ್ರಶಸ್ತಿ (ಕ್ರಿ.ಶ. 7 ಶತ) ಮುಂತಾದುವೆಲ್ಲ 'ಪ್ರಶಸ್ತಿಕಾವ್ಯ'ವೆಂಬ ಒಂದು ಹೊಸ ಕಾವ್ಯಜಾತಿಯಲ್ಲಿ ಸೇರಿಸುವ ಮಟ್ಟಿಗೆ ಕಾವ್ಯಧರ್ಮ ಬಂಧುರವಾಗಿದೆ. ಸುಂದರವಾದ, ಗದ್ಯಪದ್ಯಗಳಲ್ಲಿ ನಿರ್ದಿಷ್ಟ ರಾಜರ ವರ್ಣನೆಗಳು ಅಲ್ಲಿ ಬರುತ್ತವೆ. ಆದರೆ ಅವುಗಳ ಪರಿಮಿತಿ ಚಿಕ್ಕದು: ಮಹಾಕಾವ್ಯವೆನಿಸಿಕೊಳ್ಳುವ ಯೋಗ್ಯತೆಯಿಲ್ಲ".

ಡಾ॥ ಕೆ. ಕೃಷ್ಣಮೂರ್ತಿ, ಸಂಸ್ಕೃತ ಕಾವ್ಯ, ಪು. 3 18.

[18] ಸಾಧಾರಣವಾಗಿ ಶಾಸನಗಳ ರಚನೆಗೆ ಬೇಕಾದ ಕ್ರಮ ಯಾಜ್ಞವಲ್ಕ್ಯ ಸಂಹಿತೆ 1.318 20ರಲ್ಲಿ ದೊರೆಯುತ್ತದೆ.

[19] V. R. R. Dikshitar, *Studies*, p. 244.

Sri Vidyabharathi Book Centre, Sringeri

CC-O. In Public Domain. Digitized by eGangotri

ವೀರರಲ್ಲಿ ಉತ್ಸಾಹವನ್ನು ಹುಟ್ಟಿಸಿ. ಕೆಚ್ಚು ತುಂಬುವ ಗಂಡುಗೀತೆಗಳು: ಯುದ್ಧವೊಂದರಲ್ಲಿ ಕನಿಷ್ಠಪಕ್ಷ ಸಾವಿರ ಆನೆಗಳನ್ನು ಕೊಂದ ವೀರನೊಬ್ಬನ ಪರಾಕ್ರಮದ ಬಣ್ಣನೆ ಇರುತ್ತದೆ. 'ಪರಣಿ' ಯಲ್ಲಿ. ಕಳಿಂಗತ್ತು ಪರಣಿಯು ಈ ರೀತಿಯ ರಚನೆಗೆ ಉತ್ತಮ ಉದಾಹರಣೆಯಾಗಿದೆ.[20]

ಉಲಾ ಬಾವುಟಗಳಿಂದಲೂ, ಅನೇಕ ವಾದ್ಯ ಪರಿಕರಗಳಿಂದಲೂ ಇನ್ನೂ ಇತರ ಬಿರುದಾವಳಿಗಳಿಂದಲೂ ಕೂಡಿದ ರಾಜನ ವೈಭವದ ಮೆರವಣಿಗೆಯ ಬಣ್ಣನೆಯನ್ನುಳ್ಳ ಕಾವ್ಯ. ವಿಕ್ರಮಚೋಳ, ಕುಲೋತ್ತುಂಗ II ಮತ್ತು ರಾಜರಾಜ II ಇವರನ್ನು ಕುರಿತು ಒಟ್ಟ ಕೂತ್ತಕೌ ಬರೆದ ಪದಗಳು ಈ ಜಾತಿಯವು.[21]

(vi) ರಾಸೋ:

ಇದು ಹಿಂದೀ ಸಾಹಿತ್ಯದ ವೀರಗಾಥಾಕಾಲದ ಒಂದು ಜಾತಿಯ ಕಾವ್ಯಸ್ವರೂಪ.[22] ವೀರಗಾಥೆಗಳು ಎರಡು ರೂಪದಲ್ಲಿ ಸಿಗುತ್ತವೆ. ಮೊದಲನೆಯದು ಪ್ರಬಂಧ ಕಾವ್ಯದ ಸಾಹಿತ್ಯಕ ರೂಪ. ಎರಡನೆಯದು ವೀರಗೀತೆಗಳ ರೂಪ (Ballads).[23] "ರಾಸೋ ಅಂದರೆ ಯಾವನಾದರೂ ಒಬ್ಬ ರಾಜನ ಜೀವನ ಚರಿತ್ರೆಯನ್ನು ಪದ್ಯರೂಪದಲ್ಲಿ ವರ್ಣಿಸುವುದಾಗಿದೆ. ಅದರಲ್ಲಿಯೂ ಯುದ್ಧ ಮತ್ತು ಪರಾಕ್ರಮದ ಪ್ರಸಂಗಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದೆ.[24]

"ರಾಸೋ" ಪದದ ಅರ್ಥ ಇನ್ನೂ ಚಿದಂಬರರಹಸ್ಯವಾಗಿಯೇ ಉಳಿದಿದೆ. ಈ ಪದಕ್ಕೆ ಅನೇಕರು ಅನೇಕ ರೀತಿಯಲ್ಲಿ ವ್ಯುತ್ಪತ್ತಿ ಹೇಳಿದ್ದಾರೆ. ಸಂಸ್ಕೃತದ 'ರಹಸ್ಯ'

---

[20] ಕುಲೋತ್ತುಂಗ ಚೋಳ (ಕ್ರಿ.ಶ. 1070–1118)ನ ಆಸ್ಥಾನ ಕವಿ 'ಜಯಂಕೊಂಡತಿನ್' ಎಂಬುವನು ಈ ಕೃತಿ ರಚಿಸಿದ್ದಾನೆ. ಇದರಲ್ಲಿ ರಾಜನು ಕಳಿಂಗ ನಾಡಿನ ಮೇಲೆ ದಂಡೆತ್ತಿ ಹೋಗಿ ವಿಜಯಿಯಾದ ವರ್ಣನೆ ಇದೆ. ಆದುದರಿಂದಲೇ ಈ ಪರಣಿಗೆ "ಕಳಿಂಗತ್ತುಪರಣಿ" ಎಂಬ ಹೆಸರಿರುವುದು.

ಈ ಕೃತಿಯ ಬಗ್ಗೆ ವಿವರಗಳಿಗೆ—

Sri. M. S. Purnalingam Pillai, *Tamil Lit.*, p. 259 ನೋಡಿ.

[21] Op. Cit., pp. 244–245.

[22] (1) ವೀರಗಾಥಾ ಕಾಲ (ಆದಿಕಾಲ) 1050–1375

(2) ಭಕ್ತಿಕಾಲ–1375–1700

(3) ರೀತಿಕಾಲ–1700–1900

(4) ಆಧುನಿಕ ಕಾಲ–(ಗದ್ಯಕಾಲ) 1900...........

[23] ವೀರಗಾಥಾ ಕಾಲದ ಕಾವ್ಯಗಳಲ್ಲಿ ಅನೇಕ ಚರಿತ್ರಕಾವ್ಯಗಳು ಬರೆಯಲ್ಪಟ್ಟವು. ಇವಕ್ಕೆ ರೂಪಕ, ವಿಲಾಸ, ಪ್ರಕಾಶ, ರಾಸೋ–ಎಂದು ಬಗೆ ಬಗೆಯಾಗಿ ಕರೆದಿದ್ದಾರೆ.

—ಡಾ॥ ಹರಿಹರನಾಥ ತಂಡನ್ ಸಂಪಾದಿತ ಪೃಥ್ವೀರಾಜರಾಸೋ (ಪದ್ಮಾವತಿಯ ಸಮಯ), p. 21.

[24] ಅದೇ. ಪು. 22.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಬ್ದದಿಂದ 'ರಾಸೋ' ಬಂದಿದೆ ಎಂದು ಕವಿರಾಜ ಶ್ಯಾಮಲದಾಸ್ ಅವರೂ ; ಡಾ॥ ಕಾಶೀಪ್ರಸಾದ ಜಯಸ್ವಾಲ್ ಹಾಗೂ ಹಿಂದೀ ಶಬ್ದಸಾಗರದ ಸಂಪಾದಕರೂ : ಬೀಸಲ್ ದೇವ್ ರಾಸೋದಲ್ಲಿ ಬಹಳ ಬಾರಿ 'ರಸಾಯಣ' ಎಂಬ ಶಬ್ದ ಬಂದಿರುವುದ ರಿಂದ ಅದೇ 'ರಾಸೋ'ಗೆ ಮೂಲವೆಂದು ಆಚಾರ್ಯ ಶುಕ್ಲ ಅವರೂ : ಸಂಸ್ಕೃತದ 'ರಾಸ್' ಪದದ ಅರ್ಥ ಶಬ್ದ, ಧ್ವನಿ, ಕ್ರೀಡೆ, ಶೃಂಖಲಾವಿಲಾಸ, ಗರ್ಜನ, ನೃತ್ಯ, ಕೋಲಾಹಲ ಎಂದು ಮೊದಲಾಗಿದೆಯಾದ್ದರಿಂದ 'ರಾಸ್' 'ರಾಸೋ' ಆಗಿದೆ ಎಂದು ನಾಗರೀ ಪ್ರಚಾರಿಣೆ ಸ್ವಭಾವದವರಿಂದ ಪ್ರಕಾಶಿತವಾದ 'ರಾಸೋ'ವಿನ ಸಂಪಾದಕರೂ: ಬ್ರಜಭಾಷೆಯ ರಾಸಲೀಲೆಯಲ್ಲಿ ಗೀತ ಮತ್ತು ನೃತ್ಯಗಳು ಸೇರಿರುವುದ ರಿಂದ ರಾಸೋ 'ರಾಸಲೀಲೆ'ಯಿಂದ ಬಂದುದೆಂದು ಡಾ॥ ದಶರಥಶರ್ಮರೂ ; 'ರಾಸಕ್' ಅಂದರೆ ಸಂಸ್ಕೃತದಲ್ಲಿ 'ದೃಶ್ಯಕಾವ್ಯ' ಈ ಶೈಲಿಯನ್ನೇ ಪ್ರಧಾನ ವಾಗಿಟ್ಟುಕೊಂಡು 'ರಾಸೋ' ಎಂದಿದ್ದಾರೆಂದು ಡಾ॥ ಚಂದ್ರಬಲಿ ಪಾಂಡೆ, ಪಂಡಿತ್ ವಿಶ್ವನಾಥ್ ಪ್ರಸಾದ್ ಮಿಶ್ರ, ಆಚಾರ್ಯ ಹಜಾರಿ ಪ್ರಸಾದ್ ದ್ವಿವೇದಿಯವರೂ : ರಾಜಸೂರ್ಯ > ರಾಜಸೂ > ರಾಸೋ ಆಗಿದೆಯೆಂದು ಗರ್ಸಾದತಾಸಿ ಎಂಬ ಫ್ರೆಂಚ್ ವಿದ್ವಾಂಸನೂ : 'ರಾಜಯಶ್' ರಾಸೋ ಆಗಿದೆಯೆಂದು ಹರಿಪ್ರಸಾದ ಶಾಸ್ತ್ರಿ ಮತ್ತು ವಿಂದೇಶ್ವರೀಪ್ರಸಾದ್ ಮೊದಲಾದವರೂ ಅಭಿಪ್ರಾಯಪಡುತ್ತಾರೆ.[25]

ಕವಿ ದಲಪತಿ ವಿಜಯನ ಅಪೂರ್ಣ ಕೃತಿ ಖುಮಾನ್ ರಾಸೋ[26] ಹಾಗೂ ನರಪತಿ ನಾಲ್ಹ ಎಂಬವನ 'ಬೀಸಲ್ ದೇವ್ ರಾಸೋ',[27] ಮೊದಲ ಅಪಭ್ರಂಶದ ರಾಸೋ ಕೃತಿಗಳು. ಆದರೆ ಚಂದಬರದಾಯಿಯ 'ಪೃಥ್ವೀರಾಜ ರಾಸೋ' ಮೊಟ್ಟಮೊದಲ ಹಿಂದೀ 'ರಾಸೋ' ಕೃತಿ.[28] ಅನಂತರ ಭಟ್ಟ ಕೇದಾರನ 'ಜಯಚಂದ ಪ್ರಕಾಶ್', ಮಧುರಕವಿಯ 'ಜಯಮಯಂಕ್ ಜಸ ಚಂದ್ರಿಕಾ', ಜಗನಿಕ್ ಕವಿಯ 'ಆಲ್ಹಾ'—ಮೊದಲಾದವು ಅತ್ಯಂತ ಪ್ರಸಿದ್ಧ 'ರಾಸೋ'ಗಳಾಗಿವೆ.[29]

---

[25] ಅದೇ, ಪು. 22–25.

[26] 810–1000 ದವರೆಗೆ ಬಂದಿರುವ ಖುಮಾನ್, I, II ಮತ್ತು III—ಇವರ ಇತಿಹಾಸ ಇದರ ವಸ್ತು.

[27] ಈ ಕವಿ ವಿಗ್ರಹರಾಜ ಚತುರ್ಥನ ಆಸ್ಥಾನದಲ್ಲಿದ್ದ. ಗ್ರಂಥ ನಾಲ್ಕು ಭಾಗಗಳಿಂದ ಕೂಡಿ ಸುಮಾರು 100 ಪುಟಗಳಷ್ಟಿದೆ. ವೀರಗೀತೆ ರೂಪದಲ್ಲಿದೆ.

[28] ಇದು 69 ಸರ್ಗಗಳಿಂದ ಕೂಡಿದ ಮಹಾಕಾವ್ಯ. ಚಂದ ಬರದಾಯಿ ಪೃಥ್ವೀರಾಜನ ಸಾಮಂತ ಹಾಗೂ ರಾಜಕವಿ. ಷಹಬುದ್ದೀನ್ ಘೋರಿ ಎಂಬುವನು ಪೃಥ್ವೀರಾಜನನ್ನು ಸೆರೆಹಿಡಿದು ತೆಗೆದುಕೊಂಡು ಹೋಗುವತನಕ ಬರದಾಯಿ ಕಾವ್ಯ ರಚಿಸಿ, ಅವನೊಡನೆಯೇ ಹೋಗಿ ಘಜ್ನಿಯಲ್ಲಿ ಮಡಿಯುತ್ತಾನೆ. ಹೋಗುವಾಗ ಕಾವ್ಯವನ್ನು ತನ್ನ ಮಗ ಜಲ್ಹಣನಿಗೆ ಕೊಟ್ಟು ಹೋಗುತ್ತಾನೆ.

[29] ಮೇಲಿನ ರಾಸೋ ಕವಿಗಳ ಹಾಗೂ ಕೃತಿಗಳ ಬಗ್ಗೆ ವಿವರ ನೋಡಿ—

ಪಂ. ರಾಮಚಂದ್ರ ಶುಕ್ಲ ಅವರ 'ಹಿಂದಿ ಸಾಹಿತ್ಯಕಾ ಇತಿಹಾಸ್', ನಾಗರೀ ಪ್ರಚಾರಿಣಿ ಸಭಾ, ಕಾಶಿ, ಪು. 36–44.

Sri Vidyabharathi Book Centre, Sringeri

CC-O. In Public Domain. Digitized by eGangotri

(vii) ಚಾರಣ ಗೀತೆಗಳು :

ಇದು ರಜಪುತಾನದಲ್ಲಿ ತುಂಬಾ ಪ್ರಚಲಿತವಿರುವ ವೀರ-ಸಾಹಿತ್ಯ ಸ್ವರೂಪ. ಪೌರುಷ ಪ್ರಚೋದನೆ, ವೀರರಸ ಪ್ರತಿಪಾದನೆಯೇ ಈ ಕಾವ್ಯದ ಪ್ರಮುಖ ಗುರಿ. ಇದರ ರಚಕರು 'ಚಾರಣರು'. "ರಜಪೂತಸ್ಥಾನದ ಪ್ರಾಚೀನ ಇತಿಹಾಸವೆಲ್ಲ ಈ ಕವಿಗಳ 'ಚಾರಣಗೀತ' ಚಾರಣ ಕಾವ್ಯಗಳಲ್ಲಿ ಹುದುಗಿಕೊಂಡಿದ್ದು, ಈಗಲೂ ಆ ಜಾನಪದ ವಾಙ್ಮಯವು, ತನ್ನ ವೀರವಾಣಿಯಿಂದ ತನ್ನ ದೇಶದ ಜನರಲ್ಲಿ ಸ್ವಾಭಿಮಾನ ಸ್ವದೇಶಾಭಿಮಾನಗಳನ್ನು ತುಂಬುತ್ತಿರುವುದು."[30]

(viii) ಶಾಹೀರ್ ಗೀತೆಗಳು :

ಧರ್ಮಯುದ್ಧದಲ್ಲಿ ಮಡಿದ ಹುತಾತ್ಮರಿಗೆ 'ಷಾಯರ್' ಎಂದೂ, ಅವರನ್ನು ಕುರಿತ ವೀರರಸಭರಿತ ಲಾವಣಿಗಳಿಗೆ 'ಷಾಯರ್ ಗೀತೆ'ಗಳೆಂದೂ ಹೆಸರು. ಮರಾಠಿಗರು ಈ ಪರ್ಷಿಯನ್ ಪದವನ್ನೇ 'ಶಾಹೀರ್' ಎಂದು ಮಾಡಿಕೊಂಡು ವೀರಗೀತೆಗಳನ್ನು ರಚಿಸಿದರೆಂದೂ ಶ್ರೀ ಬೆಟಗೇರಿಯವರು ಹೇಳುತ್ತಾರೆ.[31]

(ix) ಲಾವಣಿಗಳು :

ಕರ್ಣಾಟಕದಲ್ಲಿ ವೀರಕಾವ್ಯಗಳ ಅಭಾವವಿದೆ ಎಂಬ ಶ್ರೀ ಬೆಟಗೇರಿಯವರ ಆಕ್ಷೇಪಣೆಯನ್ನು ಒಪ್ಪಬಹುದು. ಆದರೆ ಅಜ್ಞಾತಕವಿಗಳಿಂದ ವಿರಚಿತವಾದ ಹಲವು ಜಾನಪದ ಕೃತಿಗಳುಂಟು. ಅವರೇ ತಿಳಿಸುವಂತೆ ನರಗುಂದದ ನಾನಾ ಸಾಹೇಬನ ಬಂಡಾಯದ ಲಾವಣಿ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿರಾಯಣ್ಣ—ಇವರ ಲಾವಣಿ, ಮೈಸೂರು ಟಿಪ್ಪೂಸುಲ್ತಾನನ ಲಾವಣಿ—ಮೊದಲಾದವುಗಳು ಇವೆ. ಇದೇ ರೀತಿಯಲ್ಲಿ ಗರುಡನದುರ್ಗದ ಸರ್ಜಪ್ಪನಾಯಕನ ಮೇಲಿನ ಹಾಡೂ, ಕೆಳದಿಯ ಚೆನ್ನಾಮ್ಮಾಜಿಯ ಬಗ್ಗೆ ಇರುವ ಜಾನಪದ ಗೀತೆಗಳೂ, ಶ್ರೀ ಮುಗೂರು ಮಲ್ಲಪ್ಪನವರ 'ಹುಲಿಯ ಬೇಟೆ'ಯ ಪದವೂ ಈ ವರ್ಗಕ್ಕೆ ಸೇರತಕ್ಕವುಗಳಾಗಿವೆ.[32] ಇವುಗಳಲ್ಲಿ ಉನ್ನತಮಟ್ಟದ ಸಾಹಿತ್ಯಾಂಶಗಳಿಲ್ಲದಿದ್ದರೂ ಜನಮನವನ್ನು ಸೂರೆಗೊಳ್ಳಬಲ್ಲ ಸತ್ತ್ವ ಅಡಗಿದೆ.

---

[30] ವಿವರಕ್ಕೆ ಶ್ರೀ ಬೆಟಗೇರಿ ಕೃಷ್ಣಶರ್ಮರ 'ಕರ್ಣಾಟಕ ಜನಜೀವನ' ಎಂಬ ಕೃತಿಯ 'ಚಾರಣ ಸಾಹಿತ್ಯ ಮೀಮಾಂಸೆ'—ಪು. 108 ನೋಡಿ.

[31] ಅದೇ, ಪುಟ 109.

[32] "ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡೀ......" ಎಂಬ ಜೋಗದ ಜೋಕು ಗೀತೆಯ ಪ್ರಖ್ಯಾತಿ. ಈ 'ಹುಲಿಯ ಬೇಟೆ' ಶಿರಾಳಕೊಪ್ಪದ ಶ್ರೀ ಎಸ್. ಭೀಮಪ್ಪನವರಲ್ಲಿದ್ದುದು.

Sri Vidyabharathi Book Centre, Sringeri

CC-O. In Public Domain. Digitized by eGangotri

(x) ಯಕ್ಷಗಾನಗಳು :

ಇದೊಂದು ಜಾನಪದ ಕಲೆ. ಕರ್ಣಾಟಕದ ಸಂಸ್ಕೃತಿಯ ಒಂದು ಉತ್ತಮವಾದ ಅಂಗ.[33] ಆದರೆ ಈ ಶಬ್ದದ ವ್ಯುತ್ಪತ್ತಿ ಹಾಗೂ ಈ ಕಲೆಯ ತೌರಿನ ಬಗ್ಗೆ ಸಾಕಷ್ಟು ವಾದ ವಿವಾದಗಳು ನಡೆದಿವೆ. ತೆಲುಗಿನಲ್ಲಿ ರಾಳ್ಳಪಲ್ಲಿ ಅನಂತಕೃಷ್ಣಶರ್ಮರಿಗೂ, ಶ್ರೀ ಸುರವರಂ ಪ್ರತಾಪರೆಡ್ಡಿಯವರಿಗೂ 'ಜಕ್ಕಲು' ಬಗ್ಗೆ ನಡೆದ ವಾದ ಪ್ರತಿ ವಾದದಂತೆ, ಕನ್ನಡದಲ್ಲಿ ಶ್ರೀ ಕುಕ್ಕಿಲ ಕೃಷ್ಣಭಟ್ಟರಿಗೂ, ಡಾ॥ ಕೋಟಾ ಶಿವರಾಮ ಕಾರಂತರಿಗೂ, 'ಯಕ್ಷಗಾನ'ದ ಬಗ್ಗೆ ವಾಗ್ವಾದ ನಡೆದಿದೆ.[34] ಆದರೆ ಅವರ ವಾದಗಳಿಗೆ ಇನ್ನೂ ಯಾರೂ ತೀರ್ಪು ಬರೆದಿಲ್ಲ ! ಅವರ ಅಭಿಪ್ರಾಯಗಳನ್ನಿಲ್ಲಿ ಸಂಗ್ರಹಿಸಿ ಹೇಳಬಹುದು.

ಶ್ರೀ ಕುಕ್ಕಿಲ ಕೃಷ್ಣಭಟ್ಟರು ಶಾರ್ಙ್ಗದೇವನ ಸಂಗೀತ ರತ್ನಾಕರದಲ್ಲಿ ರಾಜ ವಿವೇಕಾಭ್ಯುದಯದ ದ್ವಿತೀಯ ಪ್ರಕರಣದಲ್ಲಿ ಬರುವ ಬೇರೆ ಬೇರೆ ವಿಧದ ಗಾಯಕರ ಲಕ್ಷಣವನ್ನು ತಿಳಿಸುವ ಶ್ಲೋಕವನ್ನು ಉದ್ಧರಿಸಿ,[35] ಏಕಲ (ಗಾಯನ), ಯಮಲ (ಗಾಯನ), ವೃಂದ (ಗಾಯನ)—ಎಂದು ಗಾಯಕರ ಮೂರು ಭೇದಗಳನ್ನು ಹೇಳಿ, ಅನೇಕ ಆಧಾರಗಳನ್ನು ಕೊಟ್ಟು,[36] "ಇವುಗಳನ್ನೆಲ್ಲಾ ಪರಿಭಾವಿಸಿದರೆ 'ಎಕ್ಕಲ ಗಾಣ' ನಂದರೆ ಸಂಗೀತ ಶಾಸ್ತ್ರಗಳಲ್ಲಿ 'ಏಕಲ ಗಾಯನ'ನೇ ಎಂದರೆ ಒಂಟಿಯಾಗಿ ವಾದ್ಯಾದಿಗಳ ಮೇಳವಿಲ್ಲದೆ ಹಾಡುವ ಗಾಯಕನೆಂಬುದೂ 'ಯಕ್ಷಗಾನ' ಎಂಬರ್ಥವೂ ಆ ಶಬ್ದಕ್ಕೆ ಸರ್ವಥಾ ಸಾಧುವಲ್ಲವೆಂಬುದೂ ವಿದಿತವಾಗದಿರದು." ಎಂದಿದ್ದಾರೆ.[37]

---

[33] ಡಾ॥ ಕೋ. ಶಿ. ಕಾರಂತ, ಯಕ್ಷಗಾನ, ಪು. 3

[34] ರಾಷ್ಟ್ರಮತ—ವಾರಪತ್ರಿಕೆ—ವಿಶೇಷಾಂಕ—1960–61 ಜನವರಿ—ಸಂ. 8. ಪ್ರಧಾನ ಸಂಪಾದಕರು : ಶ್ರೀ ಕಡಂಗೋಡ್ಲು ಶಂಕರಭಟ್ಟರು, ವಿಶೇಷ ಸಂಚಿಕೆಯ ಸಂಪಾದಕರು : ಶ್ರೀ ಸೇಡಿಯಾಪು ಕೃಷ್ಣಭಟ್ಟರು. ಈ ಸಂಚಿಕೆಯಲ್ಲಿನ ಶ್ರೀ ಕುಕ್ಕಿಲ ಕೃಷ್ಣಭಟ್ಟರ 'ಯಕ್ಕಲಗಾಣ' (ಪು. 107–122) ಎಂಬ ಲೇಖನವನ್ನೂ ಮತ್ತೂ, ಡಾ॥ ಕೋ. ಶಿ. ಕಾರಂತರ 'ಯಕ್ಷಗಾನ ಬಯಲಾಟ' ಗ್ರಂಥವನ್ನೂ ನೋಡಿ.

[35] "ಏಕಲೋ ಯಮಲೋ ವೃಂದಗಾಯನಶ್ಚೇತಿ ತ್ರೇಧಾ
ಏಕೆ ಏವತು ಯೋ ಗಾಯೇದ ಸಾಮೇ ಕಲಗಾಯನಃ
ಸದ್ವಿತೀಯೋ ಯಮಲಕೋ ಸ ವೃಂದೋ ವೃಂದಗಾಯನಃ
—ಸಂಗೀತ ರತ್ನಾಕರ

[36] (*a*) ಗೋವಿಂದ ದೀಕ್ಷಿತನ 'ಸಂಗೀತ ಸುಧಾ', ಪು. 256 :
(*b*) ಸಂಗೀತ ಸಾರಾಮೃತ, ಪು. 75 ;
(*c*) ಸಂಗೀತ ದರ್ಪಣ, ಶ್ಲೋಕ 344–345;
(*d*) ಪ್ರೊ॥ ಸಾಂಬಮೂರ್ತಿಯವರ 'Dictionary of South Indian Music' ಇತ್ಯಾದಿ.

[37] ರಾಷ್ಟ್ರಮತ—ವಿಶೇಷಾಂಕ—ಸಂ. 8, ಜನವರಿ 1960–61—'ಎಕ್ಕಲಗಾಣ'—ಪು. 5.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದನ್ನು ವಿರೋಧಿಸಿ ಶ್ರೀ ಕಾರಂತರು—'ಏಕ್ಕಲ' ಎಂಬ ಮಾತಿಗೆ 'ಒಂದು' ಎಂಬ ಅರ್ಥ ಕಲ್ಪಿಸಿ, ಒಬ್ಬಂಟಿಗನ ಹಾಡುಗಾರಿಕೆ ಎಂದೂ ಅರ್ಥಮಾಡಿದ್ದಾರೆ. ಆದರೆ 'ಏಕ್ಕಲಗಾಣ' ಪದ್ಧತಿಯನ್ನು ಕುರಿತು ಟೀಕೆಗಳು ಸಾಹಿತ್ಯದಲ್ಲಿ ಬರುತ್ತವೆ. ಆದುದರಿಂದ ನಾವು 'ಒಂದು' ಎಂಬುದಕ್ಕಿಂತ 'ಗಾಣ' ಎಂಬುದಕ್ಕೆ ಪ್ರಾಧಾನ್ಯ ಕೊಡಬೇಕಾಗುತ್ತದೆ. "ಏಕ್ಕಲಗಾಣ ಯಕ್ಷಗಾನವಾಗುತ್ತದೆ" ಎಂದು ತಮ್ಮನ್ನು ತಾವು ಸಮರ್ಥಿಸಿಕೊಂಡಿದ್ದಾರೆ.[38]

'ಯಕ್ಷಗಾನ'ದ ಪ್ರಾಚೀನತೆ ಮತ್ತು ಜನ್ಮಸ್ಥಾನಗಳ ಬಗ್ಗೆ—ಅದು ಅರ್ವಾಚೀನವೆಂದೂ, ಕೇರಳದ ಕಥಕ್ಕಳಿಯಿಂದ ಬಂದುದೆಂದೂ ಶ್ರೀ ಕುಕ್ಕಿಲ ಕೃಷ್ಣಭಟ್ಟರು ಹೇಳಿದರೆ, ಶ್ರೀ ಕಾರಂತರು ಕ್ರಿ.ಶ. 1600 ಕ್ಕಿಂತಲೂ ಹಿಂದೆಯೇ ಅಸ್ತಿತ್ವದಲ್ಲಿತ್ತೆಂದೂ ಅದು ಎರವಲು ಬಂದ ಕಲೆಯಲ್ಲ, ಕನ್ನಡ ನಾಡಿನ ಅದರಲ್ಲೂ ಮಲೆನಾಡಿನ ಮೆಚ್ಚಿನ ಕಲೆ.—ಈ ಜಾನಪದ ಕಲೆಯು ವಿಕಾಸಗೊಂಡು ಬೆಳೆಯುವುದಕ್ಕೆ ಬೇಕಾದಂತ ಬಿತ್ತು, ಕ್ಷೇತ್ರ, ಆರೈಕೆ—ಎಲ್ಲವೂ ಹಿಂದಣಕಾಲದ ಮಲೆನಾಡಿನಲ್ಲಿ ಇತ್ತೆಂಬುದರಿಂದಲೇ ಈ ಭಾಗದಲ್ಲಿಯೇ ಅದಿನ್ನೂ ಜೀವಂತವಾಗಿ ಉಳಿದುಕೊಂಡಿದೆ" ಎಂದಿದ್ದಾರೆ.[39]

(xi) ಇತಿಹಾಸ ಗ್ರಂಥಗಳು :

ಕಾವ್ಯಮಯವಾದ ಇತಿಹಾಸ ರಚನೆಯೂ ಆಸ್ಥಾನಸಾಹಿತ್ಯದ ವೈಶಿಷ್ಟ್ಯಗಳಲ್ಲಿ ಒಂದು.[40] "ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಇಲ್ಲ, ಎನ್ನುವ ಮಾತು ಆಗಾಗ ಕೇಳಿಬರುತ್ತದೆ.[41] ಆದರೆ ಇದು ಸರಿಯಲ್ಲ. ವೇದಕೃತಿರಚಕರ ಮತ್ತು ಮಹಾಭಾರತ, ಪುರಾಣಗಳಲ್ಲಿನ ಅನುವಂಶಿಕ ಚರಿತ್ರೆಯ ಪಟ್ಟಿಗಳು ನಮ್ಮ ಸಮರ್ಥನೆಗಿವೆ. ಪವಾಡಕಥೆಗಳನ್ನಷ್ಟೇ ಅಲ್ಲದೆ ಹಲವು ಐತಿಹಾಸಿಕ ಮಹತ್ವಗಳನ್ನೂ ಪುರಾಣಗಳು ಪಡೆದಿವೆ ಎಂಬುದು ನಿಸ್ಸಂದೇಹವಾದ ವಿಷಯ."[42] ಆದರೂ ಕ್ರಿ.ಶ. 1030ರಲ್ಲಿ

---

38 ಯಕ್ಷಗಾನ ಬಯಲಾಟ–ಪು. 9n

39 ಅದೇ, ಪು. 5.

40 ವಿವರಣೆಗೆ ಎಸ್. ಎನ್. ದಾಸಗುಪ್ತರ "A History of Sanskrit Literature (classical period)" Vol. I, pp. 676–683ರಲ್ಲಿ ಬರುವ 'Historical Kavyas" ನೋಡಿ.

41 "ಕವಿಗಳು ತಮ್ಮ ಆಶ್ರಯದಾತನ ಕೀರ್ತಿಯನ್ನು ಅಮರವನ್ನಾಗಿಸುವುದಕ್ಕೋಸ್ಕರ ಅವರುಗಳ ಚರಿತ್ರೆಯನ್ನು ಸುಂದರವಾದ ಶೈಲಿಯಲ್ಲಿ ರಚಿಸುವ ಪ್ರಯತ್ನ ಮಾಡಿರುತ್ತಾರೆ. ಆದರೆ ಈ ರಚನೆಗಳು ಶುದ್ಧ ಸಾಹಿತ್ಯದಲ್ಲಿ ಬರುತ್ತವೆಯೇ ಹೊರತು ಇತಿಹಾಸ ವಿಭಾಗದಲ್ಲಿ ಬರುವದಿಲ್ಲ. ಏಕೆಂದರೆ ಅವರು ತಮ್ಮ ಆಶ್ರಯದಾತನಿಗೆ ಸಂಬಂಧಿಸಿದ ಅತ್ಯಾವಶ್ಯಕವಾದ ಇತಿಹಾಸ ವಿಷಯವನ್ನು ತಿಳಿಸುವುದಿಲ್ಲ"—ಬಲದೇವ ಉಪಾಧ್ಯಾಯ, ಸಂಸ್ಕೃತ ಸಾಹಿತ್ಯ ಇತಿಹಾಸ (ಹಿಂದಿ). ಪುಟ 281–82.

42 M. Winternitz, *Indian Lit*. Vol. III, pp. 69–70.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತಕ್ಕೆ ಬಂದು, ಅದರ ವಿಷಯದಲ್ಲೇ ಬರೆದ 'ಅಲ್ಬರೂನಿ' ಎಂಬ ಅರೇಬಿಯದ ಪ್ರವಾಸಿಗನು, "ದುರದೃಷ್ಟವಶಾತ್ ಭಾರತೀಯರು ತಮ್ಮ ರಾಜರುಗಳ ಚಾರಿತ್ರಿಕ ಅನುಕ್ರಮಣಿಕೆಗೆ ಹೆಚ್ಚು ಗಮನ ಕೊಡುತ್ತಿಲ್ಲ. ಪಾರಂಪರ್ಯವಾಗಿ ಅಧಿಕಾರಕ್ಕೆ ಬಂದ ರಾಜರುಗಳ ಬಗ್ಗೆ ಬರೆದಿಡಲು ಅವರು ತುಂಬಾ ನಿರುತ್ಸಾಹಿಗಳು............... ಪ್ರಣಯದ ಕಡೆ ಹೆಚ್ಚು ಗಮನ ಹರಿಸುತ್ತಾರೆ"[43] ಎಂದಿದ್ದಾನೆ. ಆದರೆ ಇತಿಹಾಸರಚನೆ ಒಂದೇ ಭಾರತೀಯ ಕವಿಯ ಗುರಿಯಾಗಿರಲಿಲ್ಲ. ಇತಿಹಾಸವಿದ್ದರೂ ಅದು ಅವನ ಕಾವ್ಯಕ್ಷೇತ್ರದ ಒಂದು ಅಂಗವಾಗಿರುತ್ತಿತ್ತೇ ಹೊರತು ಪ್ರಧಾನವಾಗಿರಲಿಲ್ಲ.

ತಮಗೆ ಆಶ್ರಯ ಕೊಟ್ಟ ರಾಜರುಗಳ ಪೌರುಷ ಪ್ರತಾಪಗಳನ್ನು ಬಿತ್ತರಿಸುವುದಕ್ಕೆ ಐತಿಹಾಸಿಕ ಕಾವ್ಯರಚನೆ ಉತ್ತಮವಾದುದು. ಸಂಸ್ಕೃತದಲ್ಲಿ ಪದ್ಮಗುಪ್ತನ 'ನವ ಸಾಹಸಾಂಕ ಚರಿತ'ವೇ ಮೊದಲನೆಯ ಐತಿಹಾಸಿಕ ಮಹಾಕಾವ್ಯ. ಅನಂತರದಲ್ಲಿ ಬಿಲ್ಹಣನ ವಿಕ್ರಮಾಂಕ ಚರಿತ, ಕಲ್ಹಣನ ರಾಜತರಂಗಿಣಿ ಮೊದಲಾದುವು ಬಂದುವು. ಕನ್ನಡದಲ್ಲೂ ಹಲವು ಐತಿಹಾಸಿಕ ಕೃತಿಗಳಿವೆ. ನಂಜುಂಡಕವಿಯ (ಕ್ರಿ.ಶ. 1525) ಕುಮಾರರಾಮ ಸಾಂಗತ್ಯ, ಪಾಂಚಾಳ ಗಂಗನ (ಕ್ರಿ.ಶ. 1650) ಕುಮಟಿ ರಾಮನ ಕಥೆ, ಗೋವಿಂದವೈದ್ಯನ (ಕ್ರಿ.ಶ. 1648) ಕಂಠೀರವ ನರಸರಾಜ ವಿಜಯ, ತಿರುಮಲಾರ್ಯನ (ಕ್ರಿ.ಶ. 1645–1706) ಚಿಕ್ಕದೇವರಾಜ ರಾಜವಿಜಯ, ಚಿಕ್ಕದೇವರಾಜವಂಶಾವಳಿ, ಚಿಕ್ಕದೇವರಾಜ ಶತಕ (?), ವೇಣು ಗೋಪಾಲದಾಸರ ವರಪ್ರಸಾದನ (ಕ್ರಿ.ಶ. 1680) ಚಿಕ್ಕದೇವರಾಜವಂಶಾವಳಿ, ನೂರೊಂದನ (ಕ್ರಿ.ಶ. 1740) ಸೌಂದರ ಕಾವ್ಯ, ದೇವಚಂದನ (ಕ್ರಿ.ಶ. 1770–1841) ರಾಜಾವಳೀ ಕಥೆ, ಶಾನುಭೋಗ ವೆಂಕಟರಮಣಯ್ಯನ (ಕ್ರಿ.ಶ. 1790) ಮೈಸೂರು ರಾಜರ ಚರಿತ್ರೆ (ಗದ್ಯ), ತಮ್ಮಯ್ಯ ಕವಿಯ (ಕ್ರಿ.ಶ. 1834) ರಾಜವಂಶ ರತ್ನಪ್ರಭೆ, ಮದ್ದಗಿರಿ ನಂಜಪ್ಪನ (ಕ್ರಿ.ಶ. 1840) ಕೃಷ್ಣರಾಜೇಂದ್ರ ವಿಲಾಸ ಮೊದಲಾದುವು. ಅದೇ ರೀತಿ ರಾಜೇಂದ್ರನಾಮೆ, ಹೈದರ್‌ನಾಮೆ, ಬೀಳಗಿ ಅರಸರ ವಂಶಾವಳಿ, ಕೆಳದಿ ಅರಸರ ವಂಶಾವಳಿ, ಕೆಳದಿಯ ಅರಸಿನವರ ಚರಿತ್ರೆಯು,[44] ಕೆಳದಿಯ ಕವಯಿತ್ರಿ ಗಂಗಾದೇವಿಯ 'ಕೆಳದಿ ರಾಜಾಭ್ಯುದಯಮ್' ಕೆಳದಿಯ ಗಣ್ಯಕವಿ ಲಿಂಗಣ್ಣನ 'ಕೆಳದಿ ನೃಪವಿಜಯಂ'—ಮೊದಲಾದ ಗ್ರಂಥಗಳೂ ಈ ಮಾಲಿಕೆಯಲ್ಲಿ ಸೇರುತ್ತವೆ.

ಈ ಐತಿಹಾಸಿಕ ಗ್ರಂಥಗಳಲ್ಲಿ ಹಲವು ರೂಪಗಳನ್ನು ಕಾಣುತ್ತೇವೆ. ಪಂಪ, ರನ್ನರಂತೆ ಕಥಾನಾಯಕನನ್ನು ಪೌರಾಣಿಕ ವ್ಯಕ್ತಿಯೊಡನೆ 'ತಗುಳ್ಚಿ' ಹೇಳುವುದು ಒಂದು. ಆಂಡಯ್ಯನಂತೆ ರಾಜಕೀಯ ಶ್ಲೇಷೆ, ಧಾರ್ಮಿಕ ವಿಡಂಬನೆಗಳನ್ನು ತುಂಬಿ

---

[43] E. C. Sachu, Alberuni's India, English Edn. II, p. 10.
[44] ಕೆಳದಿ ಗುಂಡಾಜೋಯಿಸರ ಬಳಿ ಇರುವ ಅಪ್ರಕಟಿತ ಹಸ್ತಪ್ರತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳುವುದು ಎರಡು; ಚಂದ್ರಶೇಖರನ ಸುರಜನ ಚರಿತ[45] ಅಥವಾ ನಂಜುಂಡನ ಕುಮಾರರಾಮನ ಸಾಂಗತ್ಯಗಳಂತೆ ಅಥವಾ ಗಂಗಾಂಬಿಕೆಯ ಕೆಳದಿರಾಜ್ಯಾಭ್ಯುದಯಮ್‌ನಂತೆ ಅಥವಾ ಗೋವಿಂದವೈದ್ಯನ 'ಕಂಠೀರವ ನರಸರಾಜ ವಿಜಯಂ'ನಂತೆ ಕಾವ್ಯಾಂಶ ವಿಶೇಷವಾಗಿ, ಐತಿಹಾಸಿಕಾಂಶ ಕಡಮೆ ಇರುವುದು ಮೂರು: ನೇರವಾಗಿ ಕಲ್ಹಣನಂತೆ ಅಥವಾ ಕೆಳದಿಯ ಲಿಂಗಣ್ಣನಂತೆ ಒಂದು ಅರಸುಮನೆತನದ: ಆನುವಂಶಿಕ ಚರಿತ್ರೆಯನ್ನು ರಚಿಸುವುದು ನಾಲ್ಕು.[46] ಹೀಗೆ ಹಲವು ರೂಪಗಳನ್ನು ಕಾಣುತ್ತೇವೆ.

---

45 ಪ್ರಾರಂಭದ ಆರು ಸರ್ಗಗಳು ವಾಣೀವಿಲಾಸ ಪ್ರೆಸ್ಸಿನಲ್ಲೂ. 7-12 ಸರ್ಗಗಳು ಅಡಿಯಾರ್ ಲೈಬ್ರರಿಯಿಂದಲೂ ಪ್ರಕಾಶಗೊಂಡಿವೆ.—1945.

46 ರಾಜ ರಾಜರುಗಳಿಗೆ ಸಂಬಂಧಿಸಿದ ಐತಿಹಾಸಿಕ ಅಂಶಗಳನ್ನು ಇಂತಹ ಚಾರಣ ಕಾವ್ಯಗಳಲ್ಲೇ ಅಥವಾ ಐತಿಹಾಸಿಕ ಗ್ರಂಥಗಳಲ್ಲೇ ಹುಡುಕಬೇಕು. ಆದರೆ ಕವಿಯ ಸ್ವವಿಷಯಗಳು ಅವನ ಕಾವ್ಯಗಳಲ್ಲಿ ಕಾಣಸಿಗುತ್ತವೆ. ಆಚಾರ್ಯ ಹಜಾರೀ ಪ್ರಸಾದ್ ದ್ವಿವೇದಿಯವರು ಬಾಣನ ಜೀವನವನ್ನು ಅವನ ಕಾವ್ಯಗಳಿಂದಲೇ ಹೆಕ್ಕಿ ತೆಗೆದಿದ್ದಾರೆ. (ನೋಡಿ–ಬಾಣ ಭಟ್ಟನ ಆತ್ಮಕಥೆ). ಅಂತೆಯೇ, ಶ್ರೀ ಬಲದೇವ ಉಪಾಧ್ಯಾಯರು ಕಾಳಿದಾಸನ ಕೃತಿಗಳಿಂದಲೇ ಅವನ ಕಾಲ, ದೇಶ, ಬದುಕು ಇತ್ಯಾದಿಗಳನ್ನು ಬಹು ಸೂಕ್ಷ್ಮವಾಗಿ ಬೇಧಿಸಿ ತೆಗೆದಿದ್ದಾರೆ. ನೋಡಿ: ಬಲದೇವ ಉಪಾಧ್ಯಾಯ, ಸಂಸ್ಕೃತ ಸಾಹಿತ್ಯ ಇತಿಹಾಸ್, ಪು. 164).

Sri Vidyabharathi Book Centre, Sringeri

CC-O. In Public Domain. Digitized by eGangotri

ತೆಕ್ಕುಂಜ ಗೋಪಾಲಕೃಷ್ಣ ಭಟ್ಟ

ಕನ್ನಡ ಭಾಷಾಶುದ್ಧಿ ವಿಚಾರ

"ಭಾಷೆಯೆಂದರೆ ಮನಸ್ಸಿನಲ್ಲಿರುವ ಭಾವವನ್ನು—ಅಭಿಪ್ರಾಯವನ್ನು ಎಂದರೆ ಅರ್ಥವನ್ನು ಪ್ರಕಟಪಡಿಸುವ ವಿಧಾನ. ಸಾಧಾರಣವಾಗಿ ನಾವು ಶಬ್ದಗಳ ಮೂಲಕ ಅಕ್ಷರ ಪದ ವಾಕ್ಯಗಳ ಮೂಲಕ—ಅರ್ಥವನ್ನು ವ್ಯಕ್ತಪಡಿಸುವ ವಿಧಾನವನ್ನು ಮಾತ್ರ ಭಾಷೆ ಎಂದು ಹೇಳುವೆವಾದರೂ, ಸರಿಯಾಗಿ ಹೇಳುವುದಾದರೆ ಸ್ಫುಟಾಕ್ಷರಗಳಿಲ್ಲದ 'ಕೂಗು'ಗಳಿಂದಾಗಲೀ, ಸನ್ನೆಗಳಿಂದಾಗಲೀ, ಅವಯವ ಚೇಷ್ಟೆಗಳಿಂದಾಗಲೀ, ಇನ್ನಾವ ವಿಧದಿಂದಾಗಲೀ ಅಭಿಪ್ರಾಯವನ್ನು ವ್ಯಕ್ತಪಡಿಸುವ ವಿಧಾನಗಳೆಲ್ಲಾ ಭಾಷೆಗಳೇ ಆಗಿವೆ ಎನ್ನಬೇಕಾಗುತ್ತದೆ. ಈ ವ್ಯಾಪಕವಾದ ಅರ್ಥದಲ್ಲಿ ಜೀವಜಾತಿಗೆಲ್ಲ ಭಾಷೆ ಎಂಬುದು ಇದ್ದೇ ಇದೆ. ಆದರೆ ಸ್ಫುಟಾಕ್ಷರಗಳುಳ್ಳ ಭಾಷೆ—ಇದನ್ನೇ ನಮ್ಮ ಋಷಿಗಳು ವೈಖರಿ ಎಂದಿರುವುದು[1]—ಮನುಷ್ಯ ಜಾತಿಗೆ ಮಾತ್ರ ಮೀಸಲಾಗಿದೆ. ಈ ವೈಖರಿ ಭಾಷೆಯನ್ನು ಮಾತ್ರ ನಾವು ಸಾಮಾನ್ಯವಾಗಿ ಭಾಷೆ. ಭಾಷೆ. ಎಂದು ಕರೆಯುತ್ತೇವೆ."[2]

ಭಾಷೆಯು ಈ ಸ್ಫುಟಾಕ್ಷರವೂ ಇಬ್ಬಗೆಯಾಗಿದೆಯೆಂದು ಕೇಶಿರಾಜನು ತನ್ನ 'ಶಬ್ದಮಣಿ ದರ್ಪಣ'ದಲ್ಲಿ ಹೇಳುತ್ತಾನೆ ;

> ವ್ಯವಹರಿಪುವೆರಡು ರೂಪಿಂ ।
> ದವಕ್ಕರಂ ಶ್ರಾವಣಂ ಸ್ವನೈಕಾಕಾರಂ ॥
> ವಿವಿಧಾಕಾರಂ ಲಿಪಿಭೇ ।
> ದವೃತ್ತಿಯಿಂ ಚಾಕ್ಷುಷಂ ಪುರಾತನಮತದಿಂ ॥ 13 ॥ (ಡಿ. ಎಲ್. ಎನ್. ಪ್ರತಿ)

ಸಾಮಾನ್ಯವಾಗಿ ಕನ್ನಡವು ಉಚ್ಚಾರಗೊಂಡಂತೆ ಬರೆಯಲ್ಪಡುತ್ತದೆ ; ಮತ್ತು ಬರೆದಂತೆ ಉಚ್ಚರಿಸಲ್ಪಡುತ್ತದೆ. ಇತರ ಕೆಲವು ಭಾಷೆಗಳು ಹೀಗಿಲ್ಲ ಎಂಬುದು ಸರ್ವವಿದಿತ. ಬರೆಹವೂ ಉಚ್ಚಾರವೂ ಈ ರೀತಿ ಸಾಮಾನ್ಯವಾಗಿ ಒಂದೇ ಬಗೆಯಾಗಿರುವುದರಿಂದ ಉಚ್ಚಾರಾನುಗುಣವಾಗಿ ಬರೆಯುವುದೂ, ಬರೆದಂತೆ ಓದುವುದೂ ಅವಶ್ಯವೆನಿಸುತ್ತದೆ.

---

[1] ವೈಖರೀ ಶಬ್ದನಿಷ್ಪತ್ತಿಃ ಮಧ್ಯಮಾ ಶ್ರುತಿಗೋಚರಾ ।
ದ್ಯೋತಿತಾರ್ಥಾ ತು ಪಶ್ಯಂತೀ ಸೂಕ್ಷ್ಮಾವಾಗನಪಾಯಿನೀ ॥

[2] ಸೇಡಿಯಾಪು ಕೃಷ್ಣಭಟ್ಟ—"ಹೊಸಗನ್ನಡ ಗದ್ಯಭಾಷೆ"—1959ರಲ್ಲಿ ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ಣಾಟಕ ಸಂಘವು ಪ್ರಕಟಿಸಿದ "ಒಸಗೆ" ಎಂಬ ಪುಸ್ತಕದಲ್ಲಿ ಪುನರ್ಮುದ್ರಿತ; ದ್ವಿತೀಯ ಭಾಗ: ಪು. 79.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲವಾದರೆ ಕಾಗುಣಿತದ ಸ್ಖಾಲಿತ್ಯವಿದೆಯೆಂದು ಲಿಪಿಯಲ್ಲಿ ದೋಷವನ್ನು ಗುರುತಿಸುತ್ತೇವೆ. ಹೀಗಾಗಿ 'ಬರೆಪಂಬೊಕ್ಕುಚ್ಚರಿಸಲ್ಪರುವ' ವರ್ಗದ ಕನ್ನಡದ ಭಾಷಾ ಪ್ರಯೋಗವನ್ನು ಎಚ್ಚರದಿಂದ ನಿರ್ವಹಿಸಬೇಕಾದುದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ.

ಜೀವಂತಭಾಷೆ ಯಾವುದೇ ಇದ್ದರೂ ಅದು ಅನ್ಯಭಾಷಾ ಪದಗಳನ್ನೋ ಪ್ರಯೋಗಗಳನ್ನೋ ತನಗರಿವಿಲ್ಲದಂತೆಯೂ ಗೊತ್ತಿದ್ದೂ ತನ್ನದನ್ನಾಗಿಸುವುದು ಸಹಜವಾಗಿದೆ. ಆಗ ಮೂಲಭಾಷೆಯ ಪದಪ್ರಯೋಗ ಸ್ವರೂಪವನ್ನು ಕೆಲವು ವೇಳೆ ಬದಲಿಸಿಕೊಳ್ಳುವುದೂ ಇರುತ್ತದೆ; ಇದ್ದಂತೆಯೇ ಬಳಸುವುದೂ ಇರುತ್ತದೆ. ಔಚಿತ್ಯವನ್ನರಿತುಕೊಂಡು ಅಂಥವುಗಳನ್ನು ಅಂಗೀಕರಿಸಿದರೆ ಎರಡೂ ಭಾಷೆಗಳಿಗೆ ಅಪಚಾರವಾಗದೆಯೂ ಇರುತ್ತದೆ. ಆದರೆ ಸ್ವಚ್ಛಂದವಾಗಿ ಬಳಸಿದಾಗ, ಕೆಲವು ಸಂದರ್ಭಗಳಲ್ಲಿ ಮೂಲದ ಕುಲಗೆಡಿಸುವುದೂ ಉಂಟು. ಇದಕ್ಕೆ ಎಷ್ಟೋ ಸಂದರ್ಭಗಳಲ್ಲಿ ಅಜ್ಞರ ಅಥವಾ ಅಲ್ಪಜ್ಞರ ಅಜ್ಞತೆಯೋ ಅಲ್ಪಜ್ಞತೆಯೋ ಕಾರಣವಾಗಿರುತ್ತದೆ. ಅಂಥವುಗಳನ್ನು ಪ್ರಾಜ್ಞರೆನ್ನಿಸಿದವರು ಅವು 'ರೂಢಿ'ಗೆ ಬಂದಿವೆಯೆಂದು ವಾದಿಸಿ ಇದ್ದಕ್ಕಿದ್ದಂತೆಯೇ ಸ್ವೀಕರಿಸುವುದೂ ಪ್ರಯೋಗಿಸುವುದೂ ಸಾಧುವಾದೀತೆ ? ಅನ್ಯರ ಅಭಿಪ್ರಾಯಗಳನ್ನು ನಮ್ಮದನ್ನಾಗಿಸಿ ಪ್ರಯೋಗಿಸುವ ಈ ವಿಧಾನದಲ್ಲಿ ಕೆಲವಾದರೂ ಅಪಪ್ರಯೋಗಗಳು ಬಂದು ಸೇರುವುದು ನಮಗೆ ಕಂಡಬರುತ್ತದೆ. ಹಲವು ಕಾಲದ ಅನಂತರ ಇಂತಹ ಅಪಪ್ರಯೋಗಗಳನ್ನು 'ರೂಢಿ'ಯಿಂದ ಕಳೆಯುವುದೇನೊ ಕಷ್ಟವೆಂಬುದು ಸತ್ಯವಾದರೂ ವಿದ್ವಾಂಸರೆನ್ನಿಸಿದವರು ಅಂತಹ ಪ್ರಯೋಗಗಳನ್ನು ತಿದ್ದಿ ಬಳಸುತ್ತ ಬಂದರೆ ಕಾಲಕ್ರಮೇಣ ತಿದ್ದಿದ ರೂಪಗಳೇ 'ರೂಢಿ'ಯಾಗಲಾರವೆ ? ಈ ದೃಷ್ಟಿಯಿಂದ ಇಲ್ಲಿ ಕೆಲವು ಪದ ಪ್ರಯೋಗಗಳ ಸಾಧುತ್ವಾಸಾಧುತ್ವಗಳನ್ನು ಪರಿಶೀಲಿಸಲಾಗುತ್ತದೆ.

ಶಾಲಾವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವ ಉದ್ದೇಶವುಳ್ಳ ಕೆಲವು ಪುಸ್ತಕಗಳಲ್ಲಿ, ವಿದ್ಯಾರ್ಥಿಗಳು ಸಾಮಾನ್ಯವಾಗಿ ಮಾಡುವ ಅಥವಾ ಅವರ ಅಜ್ಞಾನದಿಂದಲೋ ಅಲ್ಪಜ್ಞಾನದಿಂದಲೋ ಪ್ರಮಾದದಿಂದಲೋ ನಡೆಯುವ ತಪ್ಪುಗಳನ್ನು ತೋರಿಸಿಕೊಡುತ್ತಾರೆ. (ತೋರಿಸಿಕೊಡುವ ಈ ತಪ್ಪು-ಒಪ್ಪುಗಳಲ್ಲಿ ಒಪ್ಪುಗಳನ್ನು ತಪ್ಪೆಂದು ತೋರಿಸಿಕೊಟ್ಟುದೂ ಇದೆ. ಆ ವಿಷಯ ಬೇರೆ.) ಆದರೆ ಎಷ್ಟು ಮಂದಿ ಇವುಗಳ ಪ್ರಯೋಜನವನ್ನು ಪಡೆಯುತ್ತಾರೆಂದು ಹೇಳುವಂತಿಲ್ಲ. ಇಂತಹ ರೂಪವೇ ಸಾಧು, ಇಂತಹ ರೂಪವು ಅಸಾಧು ಎಂದು ನಿರ್ದಿಷ್ಟವಾಗಿ ತೋರಿಸುವ ಕೋಶಗಳೂ ನಮ್ಮಲ್ಲಿಲ್ಲ. ತಿಳಿದೋ ತಿಳಿಯದೆಯೋ ಕೆಲವರು ಅಪಪ್ರಯೋಗಗಳನ್ನು ಮಾಡಿದ್ದರೆ, ಅವುಗಳನ್ನೂ ಕೋಶದಲ್ಲಿ ಕೊಟ್ಟು ಭಾಷಾಭ್ಯಾಸಿಗಳಿಗೆ ಇನ್ನಷ್ಟು ಗಲಿಬಿಲಿಯನ್ನೇ ಉಂಟುಮಾಡುವ ಪರಿಸ್ಥಿತಿಯಿದೆ. ಶುದ್ಧಾಶುದ್ಧರೂಪಗಳ ನಿಷ್ಕೃಷ್ಟಜ್ಞಾನವಾಗುವಂತೆ ಈ ಕೋಶಗಳಿದ್ದರೆ ಇನ್ನಷ್ಟು ಪ್ರಯೋಜನಕರವಾದೀತೆಂಬುದರಲ್ಲಿ ಸಂದೇಹವಿರಲಾರದು. 'ರೂಢಿ'ಗೆ ಬಂದ ಎಲ್ಲ ಮಾತುಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಥವನ್ನೂ ಕೊಡುವುದೇ ಕೋಶಗಳ ಉದ್ದೇಶವಾದುದರಿಂದ ಮತ್ತು ತಪ್ಪೊಪ್ಪುಗಳ ಜ್ಞಾನದಾನಮಾಡುವುದು ಕೋಶಕಾರನ ಕೆಲಸವಲ್ಲದ ಕಾರಣ, ಎಲ್ಲ 'ಅಪರೂಪ'ಗಳನ್ನೂ ಸಂಗ್ರಹಿಸಲಾಗುತ್ತದೆ ಎನ್ನುವ ಮಂದಿಯಿದ್ದಾರೆ. ತರ್ಕಕ್ಕೆ ಇದು ಸರಿಯೆನ್ನಬಹುದಾದರೂ ಕಿಟ್ಟೆಲ್‌ಕೋಶವನ್ನು ಪರಿಶೀಲಿಸುವಾಗ ಒಂದು ವಿಷಯವು ಸ್ಪಷ್ಟವಾಗುತ್ತದೆ: ಕನ್ನಡ ಶಬ್ದವಾವುದು, ಅನ್ಯಭಾಷಾಶಬ್ದವಾವುದು ಎಂದು ಗುರುತಿಸುವಂತೆ ಅದನ್ನು ಸಿದ್ಧಪಡಿಸಲಾಗಿದೆ. ಅದರಲ್ಲಿ ಕೂಡ ಕನ್ನಡದಲ್ಲಿ ಯಾವೆಲ್ಲ ಶಬ್ದಗಳು ಬಳಕೆಗೊಳ್ಳುತ್ತವೆಯೋ ಅವನ್ನೆಲ್ಲ ಒಂದೇ ರೀತಿಯಲ್ಲಿ ಮುದ್ರಿಸಬಹುದಾಗಿತ್ತು. ಅಲ್ಲಿ ಕನ್ನಡವೆಂದಿರುವ ಶಬ್ದಗಳನ್ನು ದಪ್ಪಕ್ಷರಗಳಲ್ಲಿಯೂ ಅನ್ಯ ಶಬ್ದಗಳನ್ನು ಚಿಕ್ಕ ಅಕ್ಷರಗಳಲ್ಲಿಯೂ ಅಚ್ಚುಗೊಳಿಸಲಾಗಿದೆ. ಹೀಗಿದ್ದಮೇಲೆ ಶುದ್ಧಾಶುದ್ಧಶಬ್ದಗಳ ವ್ಯತ್ಯಾಸವನ್ನು ಗುರುತಿಸುವ ಯಾವುದಾದರೂ ಒಂದು ಕ್ರಮವನ್ನು ಅನುಸರಿಸಿದರೆ ಹಾನಿಯಿದೆಯೆ ? ಹೀಗೆ ಮಾಡುವುದರಿಂದ ಮುದ್ರಣಕಾರ್ಯಕ್ಕೆ ತೊಡಕಾಗುತ್ತದೆ ಎಂದು ವಾದಿಸುವುದಾದರೆ "ಅಂಗಡಿಯಿಂದ ತರುವ ಜೀನಸು ಶುದ್ಧವಾಗಿಲ್ಲದಿದ್ದಾಗ, ಶುದ್ಧೀಕರಿಸುವುದು ಕಷ್ಟವಾಗುವುದೆಂದು ಇದ್ದಹಾಗೆಯೇ ಉಪಯೋಗ ಮಾಡಬಹುದು, ಮಾಡಬೇಕು" ಎಂದು ಹೇಳಿದಂತಾಗದೆ ? ಶುದ್ಧಾಶುದ್ಧರೂಪಗಳನ್ನು ತೋರಿಸಿಕೊಟ್ಟರೂ ಜನರು ಅವುಗಳನ್ನು ಪ್ರಯೋಜನಕರವಾಗುವಂತೆ ಬಳಸುವುದು ಸಂದೇಹ ; ಏಕೆಂದರೆ ಕೇಶಿರಾಜಾದಿ ವೈಯಾಕರಣರು ತೋರಿಸಿಕೊಟ್ಟ ಅಶುದ್ಧಪ್ರಯೋಗಗಳು ಶುದ್ಧೀಕೃತವಾಗಿವೆಯೆ ? ಆದುದರಿಂದ ಹಾಗೆ ಮಾಡಬೇಕಾಗಿಲ್ಲ ಎಂದು ಹೇಳುವವರೂ ಇದ್ದಾರೆ. ಪ್ರಯೋಜನ ಪಡೆಯುವವರು ಪಡೆಯಲಿ. ಪಡೆಯ ಬಯಸದವರು ಬಿಡಲಿ ಎಂದು ಶುದ್ಧಾಶುದ್ಧರೂಪಗಳನ್ನು ತೋರಿಸಿಕೊಡುವುದು ಉಚಿತತರವಲ್ಲವೆ ? ಇರಲಿ.

ಪ್ರಕೃತ, ಸಾಮಾನ್ಯವಾಗಿ ಕಾಗುಣಿತವು ಸರಿಯಿಲ್ಲದಿರುವ ಕೆಲವು ಶಬ್ದಗಳನ್ನು ಪರಿಶೀಲಿಸೋಣ :

ದುರ್ಯೋಧನ – ದುರ್ಯೋಧನ ಎಂಬೆರಡು ರೂಪಗಳಲ್ಲಿ (ಹೇಗೆ ಬರೆದಿದ್ದರೂ ಉಚ್ಚರಿಸುವುದು ಒಂದೇ ರೀತಿ ಎನ್ನೋಣ) ಯಾವುದು ಸರಿ ? ಎಷ್ಟೋ ಮಂದಿ ಮೊದಲಿನ ರೂಪವೇ – ದುರ್ಯೋಧನ ಎಂಬುದೇ – ಸರಿ ಎನ್ನುತ್ತಾರೆ. ಉಳಿದವರು ದುರ್ಯೋಧನ ಎಂಬ ರೂಪವೇ ಸಾಧು ಎನ್ನುತ್ತಾರೆ. ಈ ಎರಡನೆಯ ವರ್ಗದವರು "ಉಚ್ಚಾರ ಮಾಡುವ ಕಾಲಕ್ಕೆ ರಕಾರವು ದೀರ್ಘೋಚ್ಚಾರಕ್ಕಿಂತ ಮೊದಲೇ ಆಗುವುದರಿಂದ ದುರ್ಯೋಧನ ಎಂಬ ರೂಪವೇ ಸರಿ" ಎಂದು ಸಮರ್ಥಿಸುತ್ತಾರೆ. ಈ ಸಮರ್ಥನವು ಸರಿಯೆ ? ಸೂರ್ಯಾಸ್ತ ಎಂಬ ಶಬ್ದವಿದ್ದರೆ ಇದನ್ನು ಸೂರ್ಯಾ(ೕ)ಸ್ತ ಎಂದು ಬರೆಯುತ್ತೇವೆಯೆ ? ಇಲ್ಲವೆಂದಾದರೆ ಇದಕ್ಕೆ ಕಾರಣವೇನು ? ಇವರೇ 'ಯಾ' ಎಂಬುದು ದೀರ್ಘಚಿಹ್ನೆಯುಕ್ತವಾದ ಅಕ್ಷರವಾಗಿದ್ದು ಇದನ್ನು ತುಂಡು ಮಾಡಲಿಕ್ಕಾಗದ ಕಾರಣ ದೀರ್ಘದ ಗುರುತಿನ ಅನಂತರವೇ ಅರ್ಕವೊತ್ತನ್ನು ಹಾಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕೆಂದು ಒಪ್ಪುತ್ತಾರೆ. 'ಯಾ' ಎಂಬಲ್ಲಿ 'ಾ' ಎಂಬ ಚಿಹ್ನವೂ 'ಯೋ' ಎಂಬಲ್ಲಿರುವ 'ೀ' ಚಿಹ್ನವೂ ಭಿನ್ನವಲ್ಲ. ಎಂದಮೇಲೆ ಇದೇ ವಾದವನ್ನು 'ದುರ್ಯೋಧನ'ದಲ್ಲಿ ಬರುವ 'ಯೋ' ಎಂಬ ಅಕ್ಷರಕ್ಕೂ ಸಮನ್ವಯಗೊಳಿಸಿದರೆ, ದೀರ್ಘಾಕ್ಷರವಾದಮೇಲೆಯೇ ಅರ್ಕವೊತ್ತನ್ನು ಬರೆಯಬೇಕೆಂಬುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಹಾಗೆಯೇ ನಿರ್ದೇಶ–ನಿರ್ದೇಶ, ನಿರ್ವೀರ್ಯ–ನಿರ್ವೀರ್ಯ ಮುಂತಾದವುಗಳಲ್ಲಿ ದೀರ್ಘಾಕ್ಷರದ ಅನಂತರ ಅರ್ಕವೊತ್ತಿರುವ ರೂಪವೇ ಸರಿ ; ಇನ್ನೊಂದು ಬಗೆಯದಲ್ಲ ಎಂದು ನಿರ್ಧರಿಸಿಕೊಳ್ಳಬಹುದು. ಮೂರನೆಯ ವರ್ಗದವರು ಈ ತೊಡಕನ್ನು ತಪ್ಪಿಸಿ ಕೊಳ್ಳುವುದಕ್ಕೋ ಎಂಬಂತೆ ದುರ್ಯೋಧನ ಎಂದೋ ದುರ್ಯ್ಯೋಧನ ಎಂದೋ ಬರೆದು ಸಮಾಧಾನ ತಂದುಕೊಳ್ಳುತ್ತಾರೆ. ಇಲ್ಲಿಯೂ ಮೊದಲಿನ ಸಮಸ್ಯೆಯೇ ತಲೆ ಯೆತ್ತುತ್ತದೆ. ಮುದ್ರಣಾಲಯಗಳಲ್ಲಿ ಹೆಚ್ಚಾಗಿ 'ರ್ಯೊ' ಎಂದಾದಮೇಲೆ ದೀರ್ಘದ ಚಿಹ್ನವನ್ನು ಹಾಕುತ್ತಾರೆ. ಅವರು ತಮ್ಮ ಸೌಕರ್ಯಕ್ಕೋ ಸೌಲಭ್ಯಕ್ಕೋ ಆ ರೂಪವನ್ನು ಬಳಸುತ್ತಾರೆ ಎಂಬುದರಿಂದ – ಅದು 'ರೂಢಿ'ಗೆ ಬಂದಿದೆಯೆಂಬುದರಿಂದ – ಅದನ್ನು ಹಾಗೆಯೇ ಸರಿಯೆಂದು ಒಪ್ಪಿಕೊಳ್ಳಬೇಕೆ? ಹಾಗಿದ್ದಲ್ಲಿ ಇಲ್ಲಿ 'ರ್ಯೋ' ಎಂಬ ರೂಪವನ್ನು ಅಲ್ಲಿ 'ರ್ಯೋ' ಎಂಬ ರೂಪವನ್ನೂ ಇರಿಸಿದರೆ ಸರಿಯಲ್ಲವೆಂದು ನಿರಾಕರಿಸಬೇಕೆ ? ಒಂದು ಅಕ್ಷರವು ಪೂರ್ಣವಾದಮೇಲೆ ಒತ್ತನ್ನು ಹಾಕಿದರೆ ಹೆಚ್ಚು ಸಮಂಜಸವೆಂದು ಈ ಹಿಂದೆ ತೋರಿಸಿಕೊಡಲಾಗಿದೆಯಷ್ಟೆ. ಇಲ್ಲಿಯೂ 'ರ್ಯೋ' ಎಂಬ ರೂಪವನ್ನೇ ಉಳಿಸಿಕೊಳ್ಳುವುದಾದರೆ ತಪ್ಪೇನೂ ಆಗದು.

ಇಷ್ಟಕ್ಕೂ, ಸಂಸ್ಕೃತದ – ಎಂದರೆ ದೇವನಾಗರೀಲಿಪಿಯ – ಅಕ್ಷರಸ್ವರೂಪವನ್ನು ಗಮನಿಸಿ ಕನ್ನಡದ ಅಕ್ಷರಸ್ವರೂಪವನ್ನು - ನಿರ್ಧರಿಸುವುದು - ಉಚಿತ. - ಅಲ್ಲಿ 'दुर्योधन' ಎಂದು - ಬರೆಯಲಾಗುವುದೇ - ಹೊರತು - 'दुर्योधन' ಎಂದಾಗಲಿ 'दुर्य ोधन' ಎಂದಾಗಲಿ 'दुर्या ेधन' ಎಂದಾಗಲಿ ಬರೆಯುವುದಿಲ್ಲ. ಇದನ್ನು ಮುಂದಟ್ಟುಮಾಡಿ ಕೊಂಡರೆ ಕನ್ನಡದಲ್ಲಿ ಇದರ ಸ್ವರೂಪವು 'ದುರ್ಯೋಧನ' ಎಂದೇ ಇರಬೇಕೆಂಬುದು ಸಿದ್ಧವಾಗುತ್ತದೆ.

ಕಾಗುಣಿತದ ಸ್ಖಾಲಿತ್ಯಕ್ಕೆ ಉಚ್ಚಾರದೋಷವೂ ಕಾರಣವಾಗುತ್ತದೆ. ಅನೇಕರು ಸ್ವರಗಳಿರಬೇಕಾದ ಶಬ್ದಗಳನ್ನು ಹಕಾರ ಸಹಿತವಾಗಿಯೂ, ಹಕಾರದಿಂದಾರಂಭವಾಗುವ ಶಬ್ದಗಳನ್ನು ಹಕಾರರಹಿತವಾಗಿಯೂ ಉಚ್ಚರಿಸಿ ಬರವಣಿಗೆಯಲ್ಲಿಯೂ ಅದನ್ನು ತಂದುಬಿಡುತ್ತಾರೆ. ಇದಕ್ಕೆ 'ಬರೆಯುವ ದಾರಿ'ಯಲ್ಲಿ 'ಆಸನ-ಹರಸೀಕೆರೆ'ಯ ಕಥೆಯನ್ನು ಕೊಡಲಾಗಿದೆ. "ಒಬ್ಬ ರೈಲ್ವೆ ಕೆಲಸಗಾರನಿದ್ದನಂತೆ. ಅವನು 'ಹಾಸನ' ದಲ್ಲಿ ಕೆಲಸಕ್ಕಿದ್ದಾಗ ರೈಲು ಬಂದ ಕೂಡಲೇ, 'ಆಸನಾ, ಆಸನಾ' ಎಂದು ಕೂಗು ತ್ತಿದ್ದನಂತೆ. ಸ್ಟೇಷನ್‌ಮಾಸ್ಟರ್ ಅವನನ್ನು ತಿದ್ದಲು ಯತ್ನಿಸಿ ವಿಫಲ ರಾದರಂತೆ. ಹೋಗಲಿ ಇವನಿಗೆ 'ಹ' ಕಾರ ರೋಗಕ್ಕೆ ಔಷಧಿ ಎಂದು ಅವನನ್ನು 'ಅರಸೀಕೆರೆ'ಗೆ ವರ್ಗಾಯಿಸಿದರಂತೆ. ಅಲ್ಲಿ ಅವನು 'ಹರಸೀಕೆರೆ'-ಹರಸೀಕೆರೆ'

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಕೂಗಲಾರಂಭಿಸಿದನಂತೆ. ಹೀಗಿದೆ ಈ ಮಹಾಪ್ರಾಣದ ಕಥೆ. ನೀವೇನೂ 'ಅಸಿವೆಯಾದಾಗ ಅಸುವಿನ ಆಲು' ಕುಡಿಯುವ ಕೂಸುಗಳಲ್ಲ...... "[3] ವಿದ್ಯಾರ್ಥಿಗಳ ಉತ್ತರಪತ್ರಗಳಲ್ಲಿ "ಇದನ್ನು ಪಂಪಭಾರತದಿಂದ ಹಾರಿಸಲಾಗಿದೆ..." "ಕೌರವನು ಪಾಂಡವರಿಗೆ ರಾಜ್ಯವನ್ನು ಕೊಡಲಾರೆನೆಂದಾಗ ಕೃಷ್ಣನು 'ಈಗೆ ಏಳಬಾರದು...' ಎಂದನು." ಎಂಬಂತೆ ಬರೆಯಲ್ಪಟ್ಟಿರುವುದನ್ನು ಅನೇಕರು ಕಂಡಿರಬೇಕು. ಅನೇಕರ ಆಡುಮಾತೇ ಹಾಗಿರುವದರಿಂದ ಅಂತಹ ತಪ್ಪುಗಳಿರುವುದು ಸಹಜ. ಆದರೆ ವಿದ್ಯಾಭ್ಯಾಸವನ್ನು ಪಡೆದವರು – ಅದರಲ್ಲಿಯೂ ಐಚ್ಛಿಕವಾಗಿ ಕನ್ನಡವನ್ನು ಆರಿಸಿ ಕೊಂಡವರು ಆ ಬಗೆಯ ತಪ್ಪುಗಳನ್ನು ನಿವಾರಿಸಿಕೊಳ್ಳದಿದ್ದಲ್ಲಿ ಅವರ ಓದಿಗೆ ಬೆಲೆ ಯೇನು ? ಆಡುನುಡಿಯಲ್ಲಿರುವ ಈ ದೋಷವೇ 'ರೂಢಿಗೆ' ಬಂತು ಎಂಬುದರಿಂದ ತಪ್ಪು ಸರಿಯಾದೀತೆ ?

ವಿದ್ಯಾರ್ಥಿಗಳ ಉತ್ತರಪತ್ರಿಕೆಗಳಲ್ಲಿ ಇನ್ನೊಂದು ಬಗೆಯ ತಪ್ಪನ್ನು ಕಾಣುತ್ತೇವೆ: ಕವಿಯ ಹೆಸರು 'ಸರ್ವಜ್ಞ' ಎಂದಿದ್ದರೂ ಕೆಲವರು ಅದನ್ನು ಉಚ್ಚರಿಸುವಂತೆ ಬರೆಯಹೊರಟು 'ಸರ್ವಗ್ನ' ಎಂದು ಬರೆಯುವುದಿದೆ. ಇಂತಹವರು 'ಕೃತಜ್ಞ' ಎಂಬುದನ್ನು 'ಕೃತಗ್ನ' ಎಂದೇ ಬರೆಯುತ್ತಾರೆ. ಇಲ್ಲಿ ಕೊನೆಗೆ ಮಹಾಪ್ರಾಣವನ್ನು ಬರೆದು 'ಕೃತಘ್ನ' ಎಂಬ ಅಭಿಪ್ರಾಯವುಂಟಾಗುವಂತೆ ಮಾಡುವುದಿಲ್ಲವೆಂಬುದೊಂದು ಸಮಾಧಾನ ! ಅವರಿಗೆ 'ಗ್ನಾನ' ವಿರುತ್ತದೆ ಹೊರತು 'ಜ್ಞಾನ' ವಿರುವುದಿಲ್ಲ. ಡಾ. ಶಿವರಾಮಕಾರಂತರು ವಿಡಂಬನಾತ್ಮಕವಾದ ಲೇಖನಗಳ ಸಮುಚ್ಚಯಕ್ಕೆ ವಿಡಂಬ ನಾತ್ಮಕವಾಗಿ 'ಗ್ನಾನ' ಎಂಬ ಹೆಸರು ಹಾಕಿದುದನ್ನು ಕಂಡ ಕೆಲವರು ದಕ್ಷಿಣ ಕನ್ನಡ ದಲ್ಲಿಯೂ 'ಜ್ಞಾನ'ವನ್ನು 'ಗ್ನಾನ'ವೆಂದು ಉಚ್ಚರಿಸುತ್ತಾರ ಎಂದು ಪ್ರಾಮಾಣಿಕ ವಾಗಿ ನಂಬುತ್ತಾರೆ. ಇನ್ನೂ ಕೆಲವರು 'ವ್ರತ'ವನ್ನು 'ವೃತ'ವೆಂದೂ, ಕೃಷ್ಣ ಎಂದಿರಬೇಕಾದುದನ್ನು ಕ್ರುಷ್ಣ ಎಂದೋ ಕ್ರಿಷ್ಣ ಎಂದೋ ಉಚ್ಚರಿಸುತ್ತಾರೆ, ಬರೆಯುತ್ತಾರೆ. ಈ ಬಗೆಯ ಸ್ಖಾಲಿತ್ಯಗಳೆಲ್ಲ ಹೆಚ್ಚಾಗಿ ಬರುವುದು ಅನ್ಯಭಾಷೆಯ ಅದರಲ್ಲೂ ಸಂಸ್ಕೃತದ ಶಬ್ದಗಳನ್ನು ಬಳಸುವಾಗ, ಎನ್ನಬಹುದು. "ಅತಿಥಿಗಳಾಗಿ ಬಂದವರಿಗೆ ಅಥವಾ ಕರೆದುತಂದವರಿಗೆ ಅಪಚಾರಮಾಡಬಾರದು ತಾನೆ ?"[4]

ಅನೇಕರ ಬಾಯಿಯಲ್ಲಿ ನ-ಣ ಮತ್ತು ಲ-ಳ ಗಳು ವ್ಯತ್ಯಾಸಗೊಂಡು ಉಚ್ಚಾರ ಗೊಳ್ಳುತ್ತವೆ. ಇದರಿಂದಾಗಿ ಬರವಣಿಗೆಯಲ್ಲಿಯೂ ಅಂತಹ ವ್ಯತ್ಯಸ್ತರೂಪಗಳೇ ಕಾಣಿಸಿಕೊಳ್ಳುವುದು ಇದೆ. ಅನ್ನ-ಅಣ್ಣ, ಮನೆ-ಮಣೆ, ಸೊನೆ-ಸೊಣೆ, ಮನ-ಮಣ ಎಂಬಂತೆಯೂ ಉಲಿ–ಉಳಿ, ಸುಲಿ–ಸುಳಿ, ತಲೆ-ತಳೆ, ಹಾಲು-ಹಾಳು ಎಂಬಂತೆಯೂ ಉಚ್ಚಾರಗೊಂಡು ಬರೆಯಲ್ಪಟ್ಟಾಗ ಅವುಗಳೊಳಗಿನ ಅರ್ಥವ್ಯತ್ಯಾಸವೇನಾಗುವ್ವು

---

[3] ಎಸ್. ಎಂ. ವೃಷಭೇಂದ್ರಸ್ವಾಮಿ: 'ಬರೆಯುವ ದಾರಿ', 1960: ಪು. 7.

[4] ಅದೇ. ಪು. 6.

Sri Vidyabharathi Book Centre, Sringeri

CC-O. In Public Domain. Digitized by eGangotri

ದೆಂದು ಗ್ರಹಿಸಿಕೊಳ್ಳಬೇಕು. ಇಂತಹ ದ್ವಂದ್ವಗಳು ಸಂಖ್ಯೆಯಲ್ಲಿ ಕಡಮೆಯಲ್ಲ ಎಂಬುದನ್ನು ಪರಿಶೀಲನದಿಂದ ತಿಳಿಯಬಹುದು.

ಉಚ್ಚಾರವನ್ನು ಶುದ್ಧಗೊಳಿಸುವ ಉದ್ದೇಶವನ್ನೂ ಇಟ್ಟುಕೊಂಡು ಹಿಂದಣವರು ಎಷ್ಟೋ ಕಡೆ ಮಕ್ಕಳಿಗೆ ಅಮರಕೋಶವೇ ಮುಂತಾದವುಗಳನ್ನು ಕಲಿಸಿಕೊಡುತ್ತಿದ್ದರು. ಇಂದು ಅಂತಹ ಅಭ್ಯಾಸವೇ ಇಲ್ಲವೆಂದರೂ ಸಲ್ಲುತ್ತದೆ. ಹೀಗೆ ಉಚ್ಚಾರವೇ ಶುದ್ಧವಾಗಿಲ್ಲದಿರುವ ಕಾರಣದಿಂದಾಗಿ ಬರವಣಿಗೆಯಲ್ಲಿಯೂ ಸ್ಖಾಲಿತ್ಯಗಳು ಅಸ್ಖಲಿತವಾಗಿ ಕಾಣಿಸಿಕೊಳ್ಳುತ್ತವೆ. ಮಕ್ಕಳು ಎಳೆಯರಾಗಿದ್ದಾಗ ಅವರ ಮಾತು ಶುದ್ಧವಾಗಿಲ್ಲದೆ ಇದ್ದರೂ ತೊದಲಿಗಳನ್ನು ಪ್ರೋತ್ಸಾಹಿಸಿ ಹಿರಿಯರೂ ಅವರೊಡನೆ ಅವರಂತೆಯೇ ಮೊದಮೊದಲು ತೊದಲು ಮಾತುಗಳನ್ನಾಡುತ್ತಾರೆ. ಕ್ರಮೇಣ ಉಚ್ಚಾರವನ್ನು ತಿದ್ದಿ ಸರಿಪಡಿಸುತ್ತಾರೆ. ಹಿರಿಯರೂ ಉಚ್ಚಾರಶುದ್ಧಿಯ ಕಡೆಗೆ ಸಾಕಷ್ಟು ಗಮನ ಕೊಡದಿದ್ದರೆ, ಮುಂದಣ ಜನಾಂಗವು ತಪ್ಪುದಾರಿಯಲ್ಲೆ ನಡೆದರೆ, ಅದರ ಹೊಣೆ ಹೊರುವವರಾರು ? ಆದುದರಿಂದ ಮಕ್ಕಳ ಉಚ್ಚಾರವನ್ನು ಸರಿಪಡಿಸುವ ಕೆಲಸವನ್ನು ಹಿರಿಯರೂ ಬಲ್ಲವರೂ ಅತಿ ಶ್ರದ್ಧೆಯಿಂದ ಕೈಕೊಳ್ಳಬೇಕಾದುದು ಪ್ರಥಮ ಕರ್ತವ್ಯವಾಗಿದೆ. ಉಚ್ಚಾರವನ್ನು ಸರಿಪಡಿಸಿದರೂ ಕೆಲವರು ಪ್ರಮಾದದಿಂದ ತಪ್ಪಾಗಿ ಬರೆಯುವುದಿದೆ. 'ಶಕುಂತಲೆ ಎಂಬುದನ್ನು ಶಂಕುತಲೆ, ಶಂಕುಂತಲೆ, ಶಕುತಂಲೆ ಎಂದೆಲ್ಲ ಬರೆಯುವವರಿದ್ದಾರೆ.' ಅವರನ್ನು ಶ್ರದ್ಧೆವಹಿಸಿ ಬರೆಯುವಂತೆ ತಿದ್ದಿ 'ಶ್ರದ್ಧಾವನ್ ಲಭತೇ ಜ್ಞಾನಂ' ಎಂದು ಬೋಧಿಸಿ ಸರಿದಾರಿಗೆ ತರುವುದು ಕಷ್ಟವಾಗದು.

ನಿಷ್ಕೃಷ್ಟವಾದ ಶಬ್ದ ಸ್ವರೂಪವನ್ನೂ ಶಬ್ದಾರ್ಥವನ್ನೂ ತಿಳಿಯದೆ. ಬಲ್ಲವರೆನ್ನಿಸಿದವರೂ ಪದಪ್ರಯೋಗವನ್ನು ಮಾಡಿಬಿಡುತ್ತಾರೆ. ಇದನ್ನು ಕಾಣುವಾಗ ಬಹಳ ಖೇದವಾಗುತ್ತದೆ. ಭೇದ, ಬೋಧ, ಮುಂತಾದವುಗಳಲ್ಲಿ ಅಲ್ಪಪ್ರಾಣ ಮಹಾಪ್ರಾಣಗಳು ಸ್ಥಾನವ್ಯತ್ಯಾಸ ಪಡೆದುಕೊಳ್ಳುವುದೂ ಕಂಡುಬರುತ್ತದೆ. ಇದೂ ಅಲ್ಲದೆ, ಸಂಸ್ಕೃತದ ಕೆಲವು ಅವ್ಯಯ ಪದಗಳನ್ನು ಕನ್ನಡದಲ್ಲಿಯೂ ಅವ್ಯಯವಾಗಿಯೇ ಪ್ರಯೋಗಿಸುವಾಗ, ಸಂಸ್ಕೃತದಲ್ಲಿ ಅವುಗಳ ಸ್ವರೂಪಗಳು ಹೇಗಿವೆಯೆಂದು ಲಕ್ಷಿಸದೆ ಬಳಸುವವರು ಇದ್ದಾರೆ. ವಿನಾ, ಮಧ್ಯೆ, ಅಥವಾ, ಯದ್ವಾತದ್ವಾ ಮೊದಲಾದವುಗಳೆಲ್ಲ ದೀರ್ಘಸ್ವರಾಂತವಾಗಿಯೇ ಬಳಕೆಗೊಳ್ಳಬೇಕಾದವುಗಳೆಂದು ಗಮನಿಸಿದೆ, ವಿನಃ ವಿನಹ. ವಿನಹಃ, ಮಧ್ಯೆ, ಅಥವ, ಅಥಾವ, ಯದ್ವತದ್ವ, ಯದ್ವಾತದ್ವ, ಎಂದೆಲ್ಲ ಪ್ರಯೋಗಿಸುವುದು ಸಾಧುವೆ: ಇವುಗಳಲ್ಲಿಯೂ ಮಧ್ಯೇ ಎಂಬುದನ್ನು ಮಧ್ಯೆ ಎಂದೇ ಹ್ರಸ್ವವಾಗಿ ಪ್ರಯೋಗಿಸುವುದು ಕಂಡು ಬರುತ್ತದೆ. ಇದು ಸರಿಯಲ್ಲವೆಂದು ಹೇಳಿದರೆ "ದೀರ್ಘಾಂತಗಳಾದ ಸಂಸ್ಕೃತದ ಎಷ್ಟೋ ಶಬ್ದಗಳು ಕನ್ನಡಕ್ಕೆ ಬರುವಾಗ ಸಮಸಂಸ್ಕೃತವಾಗುವಾಗ – ಹ್ರಸ್ವಾಂತಗಳಾಗಿ ಪ್ರಯೋಗಗೊಳ್ಳುತ್ತವೆ ಎಂಬ ವಾದವನ್ನು ಅಂಥವರು ಮುಂದಿಡುತ್ತಾರೆ. ಹಾಗೆಂದು ವಿನಾ ಎಂಬುದನ್ನು ದೀರ್ಘಾಂತವಾಗಿಯೇ ಬಳಸಬೇಕೆಂದು ಒಪ್ಪಿಕೊಳ್ಳುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತದ ವಿಶೇಷಣ ಶಬ್ದಗಳು ಭಾವನಾಮಗಳಾಗುವಾಗ ಯಾವ ರೂಪಗಳನ್ನು ಪಡೆಯುತ್ತವೆ ಎಂಬುದರ ಪೂರ್ಣಪರಿಜ್ಞಾನವಿಲ್ಲದೆ ಕೆಲವರು ಯದ್ವಾತದ್ವಾ ಪ್ರಯೋಗಿಸುತ್ತಾರೆ. ಈ ವರ್ಗಕ್ಕೆ ವಿದ್ವಾಂಸರೆನ್ನಿಸಿಕೊಂಡವರೂ ಸೇರಿರುವುದು ಆಶ್ಚರ್ಯಕರವೇ ಸರಿ. ಈ ಕೆಳಗೆ ಕೊಟ್ಟಿರುವ ಪಟ್ಟಿಯನ್ನು (ಇದು ಅಸಮಗ್ರ) ಚೆನ್ನಾಗಿ ಪರಿಶೀಲಿಸಿದರೆ, ತಪ್ಪೊಪ್ಪುಗಳ ನಿಶ್ಚಯಜ್ಞಾನವುಂಟಾದೀತು.

ಮೂಲ ಶಬ್ದ (ವಿಶೇಷಣ)	ನಾಮರೂಪ	ತಪ್ಪು
ಉದಾರ	ಉದಾರತೆ ಔದಾರ್ಯ	ಔದಾರ್ಯತೆ
ಏಕ	ಏಕತೆ ಐಕ್ಯ	ಐಕ್ಯತೆ
ಕಠಿನ	ಕಠಿನತೆ ಕಾಠಿನ್ಯ	ಕಾಠಿನ್ಯ(ಣ್ಯ)ತೆ
ಪ್ರಮುಖ	ಪ್ರಮುಖತೆ ಪ್ರಾಮುಖ್ಯ	ಪ್ರಾಮುಖ್ಯತೆ
ಪ್ರಧಾನ	ಪ್ರಧಾನತೆ ಪ್ರಾಧಾನ್ಯ	ಪ್ರಾಧಾನ್ಯತೆ
ವಿವಿಧ	ವಿವಿಧತೆ ವೈವಿಧ್ಯ	ವೈವಿಧ್ಯತೆ

ಇತ್ಯಾದಿ. ಈ ಪಟ್ಟಿಯನು ಎಷ್ಟೊ ದೀರ್ಘವಾಗಿ ಮುಂದುವರಿಸಬಹುದು. ಮೇಲಿನ ಪಟ್ಟಿಯಲ್ಲಿ ಕಂಡುಬರುವ ಪ್ರಮುಖ ಎಂಬುದರ ಪ್ರಾಮುಖ್ಯ ಎಂಬ ನಾಮ ರೂಪಕ್ಕೆ ಪ್ರಾಮುಖ್ಯತೆ ಎಂಬ 'ಅಪರೂಪ'ವನ್ನು ಪ್ರಯೋಗಿಸುವುದಕ್ಕೆ ಒಂದು ಕಾರಣವನ್ನು ಊಹಿಸಬಹುದು: ಮುಖ್ಯವೆಂಬ ಶಬ್ದವು ಮುಖ್ಯತೆ ಎಂಬ ರೂಪವನ್ನು ತಾಳುತ್ತದೆಯಷ್ಟೆ. ಇದರ ಸ್ವರೂಪಸಾಮ್ಯದಿಂದ ಪ್ರಮುಖ ಎಂಬ ಮೂಲ ರೂಪಕ್ಕೆ ಪ್ರಾಮುಖ್ಯ ಎಂಬುದೇ ನಾಮರೂಪವೆಂದು ಗ್ರಹಿಸದೆ ಪ್ರಾಮುಖ್ಯತೆಯನ್ನು ಬಳಸಲಾಗುತ್ತದೆ.

ಸಂಸ್ಕೃತದ ಸಂಧಿನಿಯಮಗಳನ್ನು ತಿಳಿದುಕೊಳ್ಳದೆ ಸಂಸ್ಕೃತಪದಗಳನ್ನು ಬಳಸುವ ಮಂದಿ ಎಷ್ಟೆಷ್ಟು ತಪ್ಪುಗಳನ್ನು ಮಾಡುತ್ತಾರೆ ಎಂದು ಲೆಕ್ಕಿಸುವುದೂ ಕಷ್ಟವಾಗಬಹುದು. ಸಂಸ್ಕೃತದ ಸಕಾರಾಂತ (ರೇಫಾಂಶ) ಅಥವಾ ವಿಸರ್ಗಾಂತ ಪದಗಳ ಮುಂದೆ ವಿಭಿನ್ನಾಕ್ಷರಗಳು ಬಂದಾಗ ಎಂತಹ ರೂಪಗಳು ಸಿದ್ಧಿಗೊಳ್ಳುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬುದನ್ನು ದೃಢಪಡಿಸಿಕೊಳ್ಳದೆ ಸ್ವಚ್ಛಂದತೆಯಿಂದ ಮುಂಬರಿವವರ ಬರಹಗಳಲ್ಲಿ ಮನರಂಜನೆ. ಮನೋಸಾಕ್ಷಿ. ತಪ್ಪೋಫಲ ಇತ್ಯಾದಿ ದುಷ್ಪ್ರಪ್ರಯೋಗಗಳು ಕಂಡುಬರುತ್ತವೆ. ಇವು ಕ್ರಮವಾಗಿ ಮನೋರಂಜನೆ. ಮನಸಾಕ್ಷಿ. ತಪಃಫಲ ಎಂಬ ರೂಪಗಳಲ್ಲಿ ಇರಬೇಕು. ತಪ್ಪೋಬಲ ಎಂಬ ರೂಪವು ಸರಿಯೆಂಬುದರಿಂದ ತಪೋಫಲ ಎಂಬುದು ಸರಿಯಾಗುವುದಿಲ್ಲವೆಂದು ಎಷ್ಟು ಜನ ಗ್ರಹಿಸುತ್ತಾರೆ? ಇದೇ ರೀತಿ ಅಂಶಃ (ಅಂಕಸ್. ಅಂತರ್) ಪುನಃ (ಪುನಸ್. ಪುನರ್) ಮುಂತಾದವುಗಳು ಪೂರ್ವಪದವಾಗಿರುವಾಗ ಮುಂದೆ ವಿಭಿನ್ನಪದಗಳು ಸೇರಿ ನಿಷ್ಪನ್ನವಾಗುವ ಪದಗಳು ಹೇಗಿರಬೇಕೆಂದು ಅನೇಕರು ತಿಳಿದುಕೊಂಡಂತಿಲ್ಲ. ಅಂತರ್ಶಾಲೆ, ಅಂತ ರ್ರಾಷ್ಟ್ರೀಯ, ಪುನರ್ರೂಪಿಸು, ಪುನಾಪ್ರತಿಷ್ಠೆ ಎಂದು ಮುಂತಾದ ಪದಗಳನು ಇಷ್ಟಬಂದಂತೆ ಪ್ರಯೋಗಿಸುತ್ತಾರೆ. ಇವುಗಳು ಕ್ರಮವಾಗಿ ಅಂತರ್ಶಾಲೆ. ಅಂತರಾ ಷ್ಟ್ರೀಯ. ಪುನಾರೂಪಿಸು. ಪುನಃ ಪ್ರತಿಷ್ಠೆ ಎಂಬ ರೂಪಗಳನ್ನು ಪಡೆದಿರಬೇಕು. ಕೆಲವರು ಪುನಹಪ್ರತಿಷ್ಠೆ ಎಂದೂ ಅಂತಹರಾಷ್ಟ್ರೀಯ ಎಂದೂ ಬರೆದರೆ ಏನೂ ಆಶ್ಚರ್ಯಪಡಬೇಕಾಗಿಲ್ಲ. ಮುಂದೆ ರಕಾರವಿದ್ದರೆ ಹಿಂದಿನ ವಿಸರ್ಗ (ಸ್. ರ್) ಲೋಪವಾಗಿ, ಇದರ ಹಿಂದಣ ಸ್ವರವು ದೀರ್ಘವಾಗುತ್ತದೆ ಎಂಬ ಲಕ್ಷಣವನು ವಿವರಿಸಿದ ಬಳಿಕ ವಿಸರ್ಗದ ಮುಂದೆ ಯಾವ ಅಕ್ಷರವಿದ್ದರೂ ಹಿಂದಣಸ್ವರವನ್ನೇ ದೀರ್ಘಗೊಳಿಸುವ ರೋಗವು ಅಂಟಿಕೊಂಡುದು ಕಂಡುಬಂದಿದೆ. ಆದುದರಿಂದಲೇ ಅಂತಾಕಲಹ, ಪುನಾವಿವೇಚನೆ ಮುಂತಾದವುಗಳು ಅಲ್ಲಲ್ಲಿ ಕಾಣಸಿಕೊಳ್ಳುವಂತಾಗಿದೆ.

ಸಂಸ್ಕೃತಶಬ್ದಗಳ ನಿಷ್ಕೃಷ್ಟಾರ್ಥವನ್ನು ತಿಳಿದುಕೊಳ್ಳದೆ ಅವುಗಳನ್ನು ಇಷ್ಟ ಬಂದಂತೆ ಬಳಸಿ ಸಂಸ್ಕೃತಬಲ್ಲವರಿಗೆ ಶಿರೋವೇದನೆಯನ್ನುಂಟುಮಾಡುವವರು ಕಡಮೆಯೇನೂ ಅಲ್ಲ. ಸಂಸ್ಕೃತದಲ್ಲಿ 'ಸಭಿಕ' ಎಂಬುದಕ್ಕೆ ದ್ಯೂತಕಾರಕ ಎಂದರೆ 'ಜೂಜಿನ ಮನೆಯ ಒಡೆಯ' ಎಂದಬುದು ಮೂಲಾರ್ಥ. ಇಂದು ಸಭೆಯಲ್ಲಿ ಉಪಸ್ಥಿತರಾದವರನ್ನೆಲ್ಲ ಆ ರೀತಿ ಸಂಬೋಧಿಸಿದರೆ ಸಂಸ್ಕೃತಜ್ಞರೂ ದ್ಯೂತದ ಸಂಸರ್ಗವಿಲ್ಲದವರೂ ನೊಂದುಕೊಳ್ಳುವ ಸಂಭವವಿಲ್ಲವೆ? ಅದಕ್ಕಿಂತ ಸಭಾಸದರೆ. ಸಭ್ಯರೆ ಇತ್ಯಾದಿಯಾಗಿ ಸಂಬೋಧಿಸುವುದು ಉಚಿತವಲ್ಲವೆ? ಇನ್ನು ನಗರಗಳಲ್ಲಿ ಪಟ್ಟಣಗಳಲ್ಲಿ. ಬೀದಿಗಳಲ್ಲಿ (ಫಲಕಗಳಲ್ಲಿ) 'ಉಪಹಾರಗ್ರಹಗಳನ್ನು ಕಂಡಾಗ ನವಗ್ರಹ (ಈಗ ಬೇರೆ ಗ್ರಹಗಳೂ ಕಂಡು ಬಂದು. ಗ್ರಹಗಳ ಸಂಖ್ಯೆ ಹೆಚ್ಚಾಗಿದೆ) ಭಿನ್ನವಾದ ಈ ಗ್ರಹಗಳಾವುವೆಂದೂ ಈ ಗ್ರಹಗಳಲ್ಲಿ ಯಾವ ಬಲಿ ಅಥವಾ ಬಹುಮಾನ ನಡೆಯುವುದೆಂದೂ ಅಥವಾ ಬಲಿ ಅಥವಾ ಬಹುಮಾನ ಎಂಬ ಗ್ರಹದ ವೈಚಿತ್ರ್ಯ ವೇನೆಂದೂ ಪ್ರಶ್ನೆಯೇಳುವಂತಾಗುತ್ತದೆ. 'ಉಪಹಾರ ಗೃಹ' ಎಂದೇ ಇದ್ದರೆ ಅರ್ಥವಾಗುವುದಿಲ್ಲವೆ. 'ಜಾಯಮಾನ' ಎಂಬುದನ್ನು ಇಂದು ಸಾಮಾನ್ಯವಾಗಿ. ಎಲ್ಲರೂ 'ಪ್ರಕೃತಿ ಗುಣ' ಎಂಬರ್ಥದಲ್ಲಿ ಪ್ರಯೋಗಿಸುತ್ತಾರೆ. ಇದು ಸರಿಯೆ? ಉಪಮಾನ ಪವಮಾನ. ಬಹುಮಾನ. ಯಜಮಾನ ಮುಂತಾದವುಗಳ ವರ್ಗಕ್ಕೆ ಇದು ಸೇರುವುದೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲವಾದರೆ ದೇದೀಪ್ಯಮಾನ, ಭಜ್ಯಮಾನ, ವೀಜ್ಯಮಾನ ಮುಂತಾದವುಗಳ ವರ್ಗಕ್ಕೆ ಸೇರುವುದೆ ? ಸಂಸ್ಕೃತಕೋಶವನ್ನು ಪರಿಶೀಲಿಸಿದರೆ, 'ಮಾನ' ವೆಂಬ ಪ್ರತ್ಯಯ ಯುಕ್ತವಾಗಿ ವಿಶೇಷಣಶಬ್ದವಾಗಿ ಪ್ರಯೋಗಗೊಳ್ಳಬೇಕಾದುದು 'ಜಾಯಮಾನ' ಎಂಬ ಶಬ್ದವೆಂದು ಕಂಡುಬರುತ್ತದೆ. ಹೀಗಿರುತ್ತಾ ಇದನ್ನು ವಿಶೇಷ್ಯವನ್ನಾಗಿ ಪ್ರಯೋಗಮಾಡುವುದು ಸಾಧುವೆನ್ನಿಸೀತೆ ? ಇದರಂತೆ ಆಪ್ಯಾಯಿನ ಮತ್ತು ಆಪ್ಯಾಯ ಮಾನ ಎಂಬೆರಡರಲ್ಲಿ ಮತ್ತಿನ ಆಪ್ಯಾಯಮಾನ ಎಂಬುದು ವಿಶೇಷಣವಾಗಿದೆ; ವಿಶೇಷ್ಯವಲ್ಲ.

ವಿದ್ವಾಂಸರೆಂಬವರ ಬರೆಹಗಳಲ್ಲಿಯೂ 'ವಿದ್ವತ್ಪೂರ್ಣ' ಹಾಗೂ 'ವಿದ್ವತ್ತು' ಎಂಬವುಗಳು ಅವುಗಳ ನಿಜವಾದ ಅರ್ಥದಲ್ಲಿ ಪ್ರಯೋಗಗೊಳ್ಳದೆ ಭಿನ್ನಾರ್ಥದಲ್ಲಿ ಪ್ರಯೋಗಗೊಳ್ಳುವುದನ್ನು ಕಾಣುತ್ತೇವೆ. ವಿದ್ವತ್ ಎಂಬುದು ವಿದ್ವಾನ್ (ವಿದ್ವಾಂಸ) ಎಂಬುದರ ಮೂಲರೂಪ. ಆದುದರಿಂದಲೇ 'ವಿದ್ವತ್ಸಭೆ' ಎಂದರೆ ವಿದ್ವಾಂಸರ ಸಭೆ ಎಂಬರ್ಥವಾಗುತ್ತದೆ. ಇದೇ ರೀತಿ ಕೆಲವು ವಿಮರ್ಶಕರೆನ್ನಿಸಿದವರು ಬಲ್ಲವರ ಪ್ರೌಢಕೃತಿಗಳನ್ನು "ವಿದ್ವತ್ಪೂರ್ಣ"ವಾಗಿ ಬರೆದಿದ್ದಾರೆ ಎಂಬಂತೆ ಬರೆಯುತ್ತಾರೆ. ಇಲ್ಲಿ ಇದಕ್ಕೆ 'ವಿದ್ವಾಂಸರು ತುಂಬಿದ' ಎಂದು ಅರ್ಥಮಾಡಬಹುದೆ ? ಆದರೆ ಇರುವ ಅರ್ಥವು ಅದೇ. ಬರೆದವರು 'ಪಾಂಡಿತ್ಯಪೂರ್ಣ' ಎಂಬರ್ಥದಲ್ಲಿ ವಿದ್ವತ್ಪೂರ್ಣ ಎಂದು ಬರೆದಿರುತ್ತಾರೆಂಬುದು ಆ ಪ್ರಕರಣದಿಂದ ತಿಳಿಯುವಂತಿರುತ್ತದೆ. ಈ 'ಪಾಂಡಿತ್ಯಪೂರ್ಣ' ಎಂಬರ್ಥವನ್ನು ಕೊಡುವ ಪ್ರಯೋಗವು 'ವಿದ್ವತ್ತಾಪೂರ್ಣ' ಎಂದಿರಬೇಕಾಗುತ್ತದೆ. ಯಾರಾದರೊಬ್ಬರ ವೈದುಷ್ಯವನ್ನು ಹೇಳಬೇಕಾದಲ್ಲಿ "ಅವರಲ್ಲಿ ವಿದ್ವತ್ತೆ (ಸಂಸ್ಕೃತದ ವಿದ್ವತ್ತಾ ಎಂಬುದು ಕನ್ನಡದಲ್ಲಿ ಸಮಸಂಸ್ಕೃತವಾಗುವಾಗ ವಿದ್ವತ್ತೆ ಎಂದಾಗುವುದೇ ಉಚಿತ) ಇದೆ" ಎನ್ನಬೇಕೇ ಹೊರತು "ಅವರಲ್ಲಿ ವಿದ್ವತ್ತು ಇದೆ" ಎನ್ನಬಾರದು. ಏಕೆಂದರೆ ವಿದ್ವತ್ ಎಂಬುದು ಸಮಸಂಸ್ಕೃತವಾಗುವಾಗ ವಿದ್ವತ್ತು (ಮರುತ್ ಎಂಬುದು ಮರುತ್ತು ಎಂದಾದಂತೆ) ಎಂಬ ರೂಪವನ್ನು ಪಡೆಯುತ್ತದೆ. ಆಗ "ಅವರಲ್ಲಿ ವಿದ್ವತ್ ಇದೆ" ಎಂಬ ವಾಕ್ಯಕ್ಕೆ "ಅವರಲ್ಲಿ ಪಾಂಡಿತ್ಯ ವಿದೆ" ಎಂಬರ್ಥವಾಗದೆ "ಅವರಲ್ಲಿ ಪಂಡಿತನಿದ್ದಾನೆ" ಎಂಬ ಅಭಿಪ್ರಾಯವಾಗ ಬಹುದು. ಇದನ್ನು ವಿದ್ವದ್ವರ್ಗವೇ ಗಮನಿಸದಿದ್ದರೆ ಸಾಮಾನ್ಯರು ಭಾಷಾಶುದ್ಧಿಯನ್ನು ಕಾಪಾಡುವುದಿಲ್ಲವೆಂದು ದೂರಿದರಾದೀತೆ ?

ಆಗ್ರಹ ಎಂಬ ಸಂಸ್ಕೃತಶಬ್ದಕ್ಕೆ ಸಿಟ್ಟು ಎಂಬರ್ಥವಿಲ್ಲ. ಆದರೆ ಅನೇಕರು ಆಗ್ರಹ ಎಂದರೆ ಸಿಟ್ಟು ಎಂದೇ ಅರ್ಥಮಾಡಿ ಪ್ರಯೋಗಿಸುತ್ತಾರೆ. ಹಾಗೆಯೇ ಪೂರ್ವಗ್ರಹ ಎಂಬುದನ್ನು ಪೂರ್ವಾಗ್ರಹ ಎಂದು ತಪ್ಪಾಗಿ ಪ್ರಯೋಗಿಸುವವರಿದ್ದಾರೆ. ಪೂರ್ವಗ್ರಹ ಎಂದರೆ ಮೊದಲೇ ನಿರ್ಧರಿಸಿಟ್ಟುಕೊಂಡ ವಿಷಯ (ಅಭಿಪ್ರಾಯ) ವೆಂದರ್ಥ. ಹಾಗಿದ್ದರೂ ಅದು ಪೂರ್ವ + ಆಗ್ರಹ ಎಂದಾಗಬೇಕೆಂದು ಭ್ರಮಿಸುವವರು ಇಲ್ಲದಿಲ್ಲ. ಅಬದ್ಧವನ್ನು ಅಪದ್ಧವಾಗಿ ಬಳಸುವವರು ಯಾವ ವರ್ಗಕ್ಕೆ ಸೇರುತ್ತಾರೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಥವರಿಗೆ ಅನೇಕ ವಸ್ತುವಿಷಯಗಳು 'ಆಕರ್ಷಣೀಯ'ವಾಗುತ್ತವೆ; ಸುಂದರ ದೃಶ್ಯಗಳಾಗಲಿ, ಉತ್ತಮ ಕಾವ್ಯಗಳಾಗಲಿ 'ಆಕರ್ಷಕ'ವಾಗುವುದೇ ಇಲ್ಲ. ಎಂದರೆ ಯಾವ ವಸ್ತು ನಮ್ಮನ್ನು (ನಮ್ಮ ಮನಸ್ಸನ್ನು) ಸೆಳೆಯುವುದೋ ಅದು 'ಆಕರ್ಷಕ', ಯಾವುದನ್ನು ನಾವಾಗಿ ಸೆಳೆದುಕೊಳ್ಳಬೇಕೋ ಅದು 'ಆಕರ್ಷಣೀಯ'. ಈ ಅರ್ಥ ವ್ಯತ್ಯಾಸವನ್ನು ಮುಂದಿಟ್ಟುಮಾಡಿಕೊಳ್ಳದೆ "ಸುಂದರ ದೃಶ್ಯವು ಆಕರ್ಷಣೀಯ"ವೆಂದು ಹೇಳಿದರೆ, ಆ ದೃಶ್ಯಕ್ಕೆ ನಮ್ಮನ್ನು–ನಮ್ಮ ಕಣ್ಣು ಮನಸ್ಸುಗಳನ್ನು—ಸೆಳೆಯುವ ಶಕ್ತಿಯಿಲ್ಲ, ಇನ್ನಾರದೋ ಒತ್ತಾಯಕ್ಕಾಗಿ ನಾವು ಅದನ್ನು ನೋಡಬೇಕಾಗಿದೆ ಎಂಬ ಅಭಿಪ್ರಾಯವುಂಟಾದೀತು.

ಸಂಸ್ಕೃತದಲ್ಲಿ ಭಾರತೀಯ ಮತ್ತು ಭಾರತೇಯ ಎಂಬ ಎರಡೂ ಶಬ್ದಗಳಿವೆ ಯಷ್ಟೆ. ಇವುಗಳೊಳಗೆ ಅರ್ಥವ್ಯತ್ಯಾಸವೇನೆಂದು ಗ್ರಹಿಸದೆ ಪ್ರಯೋಗಿಸಿದರೆ ಕೆಲವೊಮ್ಮೆ ಅನರ್ಥವೂ ಆಗಬಹುದು. ಅಕಾರಾಂತವಾದ ಭಾರತ ಎಂಬುದಕ್ಕೆ 'ಈಯ' ಎಂಬ ಪ್ರತ್ಯಯವು ಸೇರಿದಾಗ ಭಾರತೀಯ ಎಂಬುದು ನಿಷ್ಪನ್ನವಾಗಿ ಇದಕ್ಕೆ "ಭಾರತಕ್ಕೆ ಸಂಬಂಧಪಟ್ಟ" ಎಂಬರ್ಥವಾಗುತ್ತದೆ. ರಾಘವ–ಪಾಂಡವೀಯ, ಕಿರಾತಾರ್ಜುನೀಯ ಮುಂತಾದವುಗಳು ಇದೇ ರೀತಿ ನಿಷ್ಪನ್ನವಾದವುಗಳು. ಭಾರತಿ (= ವಿದ್ಯೆ) ಎಂಬ ಇಕಾರಾಂತ (ಈಕಾರಾಂತ) ಶಬ್ದಕ್ಕೆ 'ಈಯ' ಎಂಬುದು ಸೇರುವಾಗ ಭಾರತೇಯ ಎಂದಾಗುತ್ತದೆ. ದ್ರೌಪದೇಯ, ಆಗ್ನೇಯ ಮುಂತಾದವುಗಳೂ ಹೀಗೆಯೇ ನಿಷ್ಪನ್ನವಾಗಿವೆ. ಈ ಭಾರತೇಯ ಎಂಬುದಕ್ಕೆ "ವಿದ್ಯೆಗೆ ಸಂಬಂಧಪಟ್ಟ" ಎಂಬರ್ಥವಾಗುತ್ತದೆ. "ಭಾರತೀಯರಾದ ನಾವೆಲ್ಲ ಭಾರತದ ಮೇಲ್ಮೆಗಾಗಿ ಹೆಣಗಬೇಕು" ಎಂಬ ವಾಕ್ಯದಲ್ಲಿ ಬರುವ 'ಭಾರತೀಯ' ಎಂದರೆ ಭಾರತದ ಪ್ರಜೆ ಅದರ ಸ್ಥಾನದಲ್ಲಿ 'ಭಾರತೇಯ' ಇದ್ದರೆ "ವಿದ್ಯಾವಂತರಾದ ನಾವೆಲ್ಲ......" ಎಂಬರ್ಥ ವಾಗಿ "ಅವಿದ್ಯಾವಂತರಾದವರು ಭಾರತದ ಮೇಲ್ಮೆಗಾಗಿ ಹೆಣಗಬೇಕಾಗಿಲ್ಲ" ಎಂದೋ "... ಹೆಣಗಬಾರದು" ಎಂದೋ ಅಭಿಪ್ರಾಯವಾಗಬಹುದು. ಆದುದರಿಂದ ಇಂತಹ ಪ್ರಕರಣಗಳಲ್ಲಿ ಬಲ್ಲವರು ಬಹಳ ಎಚ್ಚರದಿಂದಿರಬೇಕಾದುದು ಅವಶ್ಯಕ.

ಸಂಸ್ಕೃತಜ್ಞರೂ 'ಪ್ರಸ್ತಾಪ'ವನ್ನು ಪ್ರಸ್ತಾವಿಸುತ್ತಾರೆ. ಎಂದರೆ ಪ್ರಸ್ತಾವ ಎಂಬ ಶುದ್ಧ ರೂಪವನ್ನೂ ಬಿಟ್ಟು ಪ್ರಸ್ತಾಪ ಎಂದು ಬರೆಯುತ್ತಾರೆ. ಪ್ರ ಎಂಬುದು ಉಪಸರ್ಗವಾಗಿದ್ದು ಅದನ್ನು ಕಳೆದರೆ ಒಂದರಲ್ಲಿ 'ಸ್ತಾವ' ಎಂದೂ ಇನ್ನೊಂದರಲ್ಲಿ 'ಸ್ತಾಪ' ಎಂದೂ ಉಳಿಯುತ್ತದೆ. ಸ್ತಾವ ಎಂಬುದು ಸ್ತು ಎಂಬ ಧಾತುವಿ ನಿಂದ ನಿಷ್ಪನ್ನವಾಗುತ್ತದೆ: ಸ್ತಾಪ ಎಂಬುದಕ್ಕೆ ಮೂಲಧಾತುವೇ ಇಲ್ಲವಾಗಿದೆ. ಸಂಸ್ಕೃತಕೋಶಗಳಲ್ಲಿಯೂ ಸ್ತಾವವಿದೆ, ಪ್ರಸ್ತಾವವಿದೆ; ಸ್ತಾಪವಾಗಲೀ ಪ್ರಸ್ತಾಪ ವಾಗಲೀ ಇಲ್ಲ. ಸಂಸ್ಕೃತದಲ್ಲಿ ಪ್ರಸ್ಥಾಪನವಿದೆಯಾದರೂ ಈಗ ಬಳಕೆಗೊಳ್ಳುವ 'ಪ್ರಸ್ತಾಪ'ವು ಇದರ ರೂಪಾಂತರವೆನ್ನುವ ಹಾಗೆಯೇ ಇಲ್ಲ. ಸಂಸ್ಕೃತದಲ್ಲಿ ಡಾಕ್ಟರೇಟ್ ಪಡೆದ ಒಬ್ಬರು, ಕನ್ನಡದಲ್ಲಿ ಪ್ರಸ್ತಾಪ ಎಂದು ಪ್ರಯೋಗಿಸಿದುದರ

Sri Vidyabharathi Book Centre, Sringeri

CC-O. In Public Domain. Digitized by eGangotri

ಔಚಿತ್ಯವನ್ನು ಪ್ರಶ್ನಿಸಿದಾಗ, ಮೊದಲು ಆ ತಪ್ಪನ್ನು ಕರಡು ತಿದ್ದಿದ ಪ್ರಕಾಶಕರ ಮೇಲೆ ಹೊರಿಸಿ, ಅನಂತರ "ಅದು ಪ್ರಸ್ತಾವದ ತದ್ಭವವೆಂದು ಅಂಗೀಕರಿಸಬಹುದು" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರಿಗೆ ಸಂಸ್ಕೃತಶಬ್ದಗಳು ಅಪಭ್ರಂಶ ವಾಗುವಾಗ ಯಾವ ಬಗೆಯ ರೂಪಗಳನ್ನು ಪಡೆದುಕೊಳ್ಳುತ್ತವೆ ಎಂಬುದರ ಪರಿಜ್ಞಾನವು ಸಾಕಷ್ಟಿಲ್ಲದುದೇ ಈ ಅಭಿಪ್ರಾಯಕ್ಕೆ ಕಾರಣವೆಂದು ತೋರುತ್ತದೆ.

ಇತ್ತೀಚೆಗೆ ಇನ್ನೊಬ್ಬರು ಪ್ರಸ್ತಾಪ ಎಂಬುದು ಪ್ರಸ್ಥಾಪ ಎಂಬುದರ ತದ್ಭವ ವಾಗಲು ಸಾಧ್ಯವೆಂದು ವಾದಿಸಹೊರಟಿದ್ದಾರೆ. ಸಂಸ್ಕೃತದಲ್ಲಿ ಪ್ರಸ್ಥಾಪವಾಗಲೀ ಸ್ಥಾಪವಾಗಲೀ ಇಲ್ಲದಿರುವಾಗ ಪ್ರಸ್ಥಾಪದ ತದ್ಭವವಾಗಿ ಪ್ರಸ್ತಾಪವಿರುವುದು ಹೇಗೆ ಸಾಧ್ಯ? ಪ್ರಸ್ಥಾಪನಾ ಎಂಬುದರಿಂದ ಕೊನೆಯ ಅಕ್ಷರವನ್ನು ಕಳಚಿಹಾಕಿ ಪ್ರಸ್ಥಾಪ ಎಂದು ಮಾಡಿಕೊಳ್ಳುವುದಕ್ಕೆ ಯಾವ ವ್ಯಾಕರಣವೂ ಅವಕಾಶಕೊಡದೆಂದೇ ತೋರುತ್ತದೆ. ಒಂದು ವೇಳೆ ಮಹಾಪ್ರಾಣವಿದ್ದಲ್ಲಿಗೆಲ್ಲ ಅಲ್ಪಪ್ರಾಣವನ್ನು ಹಾಕಿ ತದ್ಭವವೆಂದು ಒಪ್ಪಿಕೊಳ್ಳುವುದಾದರೆ ಪ್ರಧಾನ→ಪ್ರದಾನ, ಪ್ರಖ್ಯಾತ→ಪ್ರಕ್ಯಾತ, ಪ್ರಥಿಮನ್→ಪ್ರತಿಮನ್, ವಿಧುರ→ವಿದುರ, ಕಂಧರ→ಕಂದರ, ಸಂಘ→ಸಂಗ ಎಂಬಂತೆ ಒಂದರ (ಮಹಾಪ್ರಾಣವುಳ್ಳದರ) ತದ್ಭವವು ಇನ್ನೊಂದೆಂದು ಪ್ರಯೋಗಿಸ ಬಹುದಲ್ಲ! ಮಹಾ ವಿದ್ವಾಂಸರು ಎನ್ನಿಸಿದವರೂ ಪ್ರಸ್ತಾಪ ಎಂದು ಪ್ರಯೋಗಿಸಿ ದ್ದಾರೆ ಎಂಬುದರಿಂದ ತಪ್ಪು ಸರಿಯಾಗುವುದೆ? ಪ್ರಸ್ತಾವ ಎಂಬುದು ಕನ್ನಡದಲ್ಲಿ ಪ್ರಕರಣ, ಸಂದರ್ಭ ಎಂಬರ್ಥಗಳಲ್ಲಿ ಪ್ರಯೋಗವಾಗುವುದೆಂದು ಹೇಳುವವರು ಅದಕ್ಕೆ ಬೇರೆ ಅರ್ಥವೂ ಇದೆಯೆಂಬುದನ್ನು ಕೋಶಗಳನ್ನು ನೋಡಿ ತಿಳಿದುಕೊಳ್ಳುವುದು ಮೇಲಲ್ಲವೆ?

ದೊಡ್ಡವರೂ ತಪ್ಪನ್ನು 'ರೂಢಿ'ಗೆ ತಂದು, ಇಂದು ಅದೇ ಸರಿಯೆಂದು ಹೇಳುವ ಶಬ್ದಗಳಲ್ಲಿ 'ವಯಸ್ಕ' ಎಂಬುದೂ ಒಂದು. 'ವಯಸ್ಕರ ಶಿಕ್ಷಣ ಸಮಿತಿ' ಎಂದು ಮುಂತಾಗಿ ಯಾವ ಸಂಕೋಚವು ಇಲ್ಲದೆ ಪ್ರಯೋಗಿಸುವುದನ್ನು ಕಂಡು ಕಂಡು ಸಂಸ್ಕೃತ ಪಂಡಿತರೂ ಅದೇ ಸರಿಯೆಂದು ಭ್ರಮಿಸಿದುದೂ ಇದೆ. ವಯಸ್ ಎಂಬುದು ಸ್ವತಂತ್ರವಾಗಿ ಪ್ರಯೋಗವಾಗುವಾಗ 'ವಯಸ್ಥ' ಎಂಬ ರೂಪವನ್ನು ಪಡೆದು 'ವಯಸ್ಸಾದವನು' ಎಂಬರ್ಥವನ್ನು ಕೊಡುತ್ತದೆ. ಹಿಂದೆ ಪ್ರೌಢ, ಬಾಲ್ಯ, ಪ್ರಾಪ್ತ ಮುಂತಾದ ಬೇರೆ ಪದಗಳು ಸೇರಿ ಸಮಾಸವಾದಾಗ ಅದು ಪ್ರೌಢವಯಸ್ಕ, ಬಾಲ್ಯವಯಸ್ಕ, ಪ್ರಾಪ್ತವಯಸ್ಕ ಎಂಬಂತೆ ರೂಪುಗೊಳ್ಳುತ್ತದೆ. ಪೂರ್ವ ಪದವನ್ನು ಕಳೆದು 'ವಯಸ್ಕ' ಎಂದು ಪ್ರಯೋಗಿಸುವುದೆಂದಾದರೆ ಇದಕ್ಕೆ ಪ್ರಕ್ರಿಯೆಯೇನು? ಇದನ್ನು ವಯಸ್ಥ ಎಂದೇ ಪ್ರಯೋಗಿಸಿದರೆ ತಪ್ಪೇನು? ಅಲ್ಲವಾದರೆ ಪ್ರೌಢವಯಸ್ಕ ಎಂದು ಮುಂತಾಗಿಯೇ ಪ್ರಯೋಗಿಸಿದರಾಗದೆ'?

ಅನಂತರ ಎಂದಿರಬೇಕಾದುದನ್ನು ನಂತರ, ನಂತ್ರ ಎಂದೆಲ್ಲ ಉಚ್ಚರಿಸಿಸುವುದೂ ಬರೆಯುವುದೂ ರೂಢವಾಗುತ್ತದೆ. ಸಂಸ್ಕೃತದಲ್ಲಿ ಮುಂದೆ ಸ್ವರವಿದ್ದಾಗ 'ನ' ಎಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಷೇಧಾರ್ಥಕವು ಬರುವಾಗ 'ಅನ್' ಎಂಬ ಆದೇಶವನ್ನೂ ವ್ಯಂಜನವಿದ್ದಾಗ 'ಅ' ಎಂಬ ಆದೇಶವನ್ನೂ ಪಡೆಯುತ್ತದೆ: ನ+ಅಂತರ=ಅನಂತರ; ನ+ಇಚ್ಛೆ=ಅನಿಚ್ಛೆ; ನ+ಬ್ರಾಹ್ಮಣ=ಅಬ್ರಾಹ್ಮಣ; ನ+ಹಿಂಸೆ=ಅಹಿಂಸೆ ಇತ್ಯಾದಿ. ಈ ನಿಯಮವನ್ನು ನಿರಾಕರಿಸಿ ನ+ಅಂತರ=ನಂತರ ಎಂದು ಕನ್ನಡ ಸಂಧಿನಿಯಮವನ್ನು ಇದಕ್ಕೆ ಅನ್ವಯಿಸುವುದು ಸರಿಯಾಗದು. ಕನ್ನಡದಲ್ಲಾದರೆ ನಾಮರೂಢಿ ಅಳಿಯದ ಪಕ್ಷದಲ್ಲಿ ಲೋಪ ಸಂಧಿಯೇ ಮುಖ್ಯವೆಂದಿದೆ. 'ತತ್‌ಕ್ಷಣ'ವೆಂಬ ಇನ್ನೊಂದು ಶಬ್ದವೂ 'ತಕ್ಷಣ' ವಾಗಿಯೇ ಬಳಕೆಗೊಳ್ಳುತ್ತದೆ. 'ತಕ್ಷಣ' ಎಂದರೆ (ಮರವನ್ನು) ಕೆತ್ತು ವುದು ಎಂದರ್ಥ. ಆದರೆ ಒಂದು ಕೋಶದಲ್ಲಿ ತಕ್ಷಣದ ತದ್ಭವವೇ ತಕ್ಷಣ ಎಂದು ಬರೆದುಕೊಟ್ಟು ದಾರಿತಪ್ಪಿಸಿದ್ದಾರೆ. ಹೀಗೆ ತಪ್ಪುದಾರಿ ಹಿಡಿದವರು ಸಂಸ್ಕೃತದ 'ಏತಕ್ಷಣ' ಎಂಬುದನ್ನು ಕಂಡು ಸರಿಯಾಗಿ ಅರ್ಥ ತಿಳಿದುಕೊಳ್ಳದೆ ತಕ್ಷಣ ಎಂಬುದಕ್ಕೆ 'ಕೂಡಲೆ' ಎಂಬುದು ಅರ್ಥವೆಂದು ನಿರ್ಧರಿಸಿ 'ಈ ತಕ್ಷಣ' 'ಆ ತಕ್ಷಣ' ಎಂದೂ ಪ್ರಯೋಗಿಸುತ್ತಾರೆ. ಇನ್ನೂ ಕೆಲವರು ತಕ್ಷಣ ಎಂಬುದು ಸರಿಯಲ್ಲವೇನೋ ಎಂದು ಶಂಕೆಗೊಳಗಾಗಿ 'ಈ ತಕ್ಷಣ' ಎಂದು ಮುಂತಾಗಿ ಪ್ರಯೋಗಿಸುತ್ತಾರೆ. 'ತಕ್ಷಣ' ಎಂಬುದಕ್ಕೆ 'ಆಕ್ಷಣ' ಎಂಬುದು ಅವಯುವಾರ್ಥವಾಗಿರುತ್ತಾ 'ಈ ತಕ್ಷಣ' ಎಂದರೆ 'ಈ ಆಕ್ಷಣ' ಎಂಬರ್ಥವಾಗುತ್ತದೆ ಎಂದು ತಿಳಿದುಕೊಳ್ಳುವುದಿಲ್ಲ.

ಇದುವರೆಗೆ ಸಂಸ್ಕೃತಶಬ್ದಗಳಿಗೆ ಸಂಬಂಧಿಸಿದ ಕೆಲವು ಮಾತುಗಳನ್ನು (ಎಲ್ಲ ವಿವರ ವಿಮರ್ಶೆಗಳನ್ನೂ ಕೊಟ್ಟಿಲ್ಲ) ಹೇಳಲಾಯಿತು. ಈ ವಿಷಯವಾಗಿ ಹೇಳ ಲಿಕ್ಕಿರುವುದು ಇಷ್ಟೇ ಸರಿ ಎಂದು ಯಾರೂ ತಿಳಿದುಕೊಳ್ಳಬಾರದು. ಇನ್ನೂ ಎಷ್ಟೆಷ್ಟೋ ಶಬ್ದ(ಪದ)ಗಳ ಬಗೆಗೆ ಹೇಳಬೇಕಾದ ಎಷ್ಟೆಷ್ಟೋ ಮಾತುಗಳಿವೆ. ಆದರೆ ಅಂತಹ ಸ್ಖಾಲಿತ್ಯಗಳನ್ನೋ ನ್ಯೂನತೆಗಳನ್ನೋ ದೋಷಗಳನ್ನೋ ತೋರಿಸಿ ಕೊಟ್ಟರೂ ಅವುಗಳನ್ನು ತಿದ್ದಿಕೊಳ್ಳುವ ಎಷ್ಟುಮಂದಿ ಇದ್ದಾರು ? ಸಂಸ್ಕೃತದ ಪರಿಜ್ಞಾನವಿಲ್ಲದೆ ಇಂತಹ ಅನೇಕಾನೇಕ ಸ್ಖಾಲಿತ್ಯಗಳು ಕನ್ನಡದಲ್ಲಿ ಸೇರಿಕೊಳ್ಳುವಾಗ ಅವುಗಳನ್ನು ತಡೆಯಹೋಗುವುದು ಪ್ರವಾಹಕ್ಕೆದುರಾಗಿ ಈಜಿ ಹೋಗುವಂತೆಯೇ ಸರಿ. ನಮಗೆ ಸಂಸ್ಕೃತದ ಸಂಪರ್ಕವೇ ಬೇಡವೆಂದು ಅವರು ನಿರಾಕರಿಸುತ್ತಾರೆಂದಾದರೆ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಭಾಷೆಯೇ ಉಳಿಯಲಾರದು. ಈಗಲೂ ಕನ್ನಡವನ್ನು ಶಾಲೆಗಳಲ್ಲಿ ಕಲಿಸುವವರು ಸಂಸ್ಕೃತದ ಸಂಧಿ ಸಮಾಸಗಳನ್ನು ಕಲಿಸಿಕೊಡುತ್ತಿದ್ದಾರಷ್ಟೆ. ಅವರು ಸಂಸ್ಕೃತದ ಕೃತ್ತದ್ಧಿತ ಪ್ರಕರಣಗಳನ್ನೂ ಕಲಿತು ಕಲಿಸಿದರೆ ಮುಂದಣ ವರಾದರೂ ಆದಷ್ಟು ಶುದ್ಧರೂಪಗಳನ್ನು ಬೆಳೆಸಬಹುದು. ಅಂತಾಗಲಿ ಎಂಬ ಹಾರೈಕೆಯಿಂದ ಇಷ್ಟು ಮಾತನ್ನು ಹೇಳಿದ್ದೇನೆ.

ಇನ್ನು, ಕೆಲವು ಕನ್ನಡ ಶಬ್ದಗಳ ಪ್ರಯೋಗದಲ್ಲಿ ಕಂಡುಬರುವ ಸ್ಖಾಲಿತ್ಯಗಳಲ್ಲಿ ಕೆಲವನ್ನು ಪ್ರಸ್ತಾಪಿಸಬಹುದು. 'ಬೆಳಿಗ್ಗೆ' ಎಂಬುದು ತಪ್ಪೆಂದು ತಿಳಿದವರಿಲ್ಲವೆ? ಹಾಗಿದ್ದರೂ ಹಾಗೆಯೇ ಹೇಳುವವರಿಲ್ಲವೆ ? ಪ್ರತಿಶತ ತೊಂಬತ್ತುಮಂದಿಯೂ

Sri Vidyabharathi Book Centre, Sringeri

CC-O. In Public Domain. Digitized by eGangotri

'ಬೆಳಿಗ್ಗೆ' ಎಂದೇ ಪ್ರಯೋಗಿಸುತ್ತಾರೆ. 'ಬೆಳಕು' ಎಂಬುದರಿಂದ ನಿಷ್ಪನ್ನವಾಗುವ (ಬೆಳಗು ಎಂಬುದು ಧಾತು.) ಈ ಶಬ್ದವು 'ಬೆಳಗ್ಗೆ' ಎಂದಿರಬೇಕಲ್ಲದೆ 'ಬೆಳಿಗ್ಗೆ' ಎಂದಲ್ಲ. 'ಬೆಳಿಕು' ಎಂದಿರುತ್ತಿದ್ದರೆ. ಇದರಿಂದ 'ಬೆಳಿಗ್ಗೆ' ಎಂಬುದು ನಿಷ್ಪನ್ನವಾಗುತ್ತಿತ್ತು. 'ಬೆಳಗಾಯಿತು' ಎಂದು ಹೇಳುವಲ್ಲಿ ಸರಿಯಾಗಿ ಹೇಳಿ ಬೆಳಗಿಗೆ. ಬೆಳಗ್ಗೆ ಎಂಬಲ್ಲಿ ಆ ಸ್ಥಾನದಲ್ಲಿ ಇಕಾರವನ್ನು ಏಕೆ ತರುತ್ತಾರೋ ತಿಳಿಯದು.

ಇದುವರೆಗೆ ನಾನು ಕಂಡಂತೆ, ಕೇಳಿದಂತೆ, ಕನ್ನಡದ ಸಂಖ್ಯಾವಾಚಕಗಳಲ್ಲಿ ಎರಡನ್ನು ತಪ್ಪಾಗಿ ಪ್ರಯೋಗಿಸಿದವರು ಒಬ್ಬರ. ಅವರು 'ಹದಿನೊಂದು' 'ಹದಿನೆರಡು' ಎಂದು ಬಳಸಿದುದನ್ನು ಅನೇಕರು ಕಂಡಿದ್ದಿರಬಹುದು. ಪ್ರಾಯಶಃ ಉಳಿದ ಕೆಲವು ಸಂಖ್ಯಾವಾಚಕಗಳಲ್ಲಿ. ಮುಂದೆ ವ್ಯಂಜನಯುಕ್ತವಾದ ಸಂಖ್ಯೆ ಬಂದಾಗ 'ಹದಿ' (ಹಳಗನ್ನಡದಲ್ಲಿ ಪದಿ) ಎಂದೂ ಸ್ವರಯುಕ್ತವಾದ ಸಂಖ್ಯೆ ಬಂದಾಗ ಹದಿನ್ (ಪದಿನ್) ಎಂದೂ ಬರುವುದನ್ನು ಕಂಡು ಇಲ್ಲಿ ಸ್ವರಯುಕ್ತವಾದ ಸಂಖ್ಯೆ ಮುಂದೆ ಬರುವುದಾದಕಾರಣ ಇಲ್ಲಿಯೂ ಹಾಗೆಯೇ ಹದಿನ್ ಎಂಬುದು ಬರಲೇಬೇಕೆಂದು ನಿಶ್ಚಯಮಾಡಿ ಹಾಗೆ ಪ್ರಯೋಗಿಸುತ್ತಾರೋ ಏನೋ ! ಆದರೆ ವ್ಯಾಕರಣ ನಿಯಮವನ್ನು ಲಕ್ಷಿಸದೆ ಅವರು ಹಾಗೆ ಮಾಡಿದುದು ಉಚಿತವೆನ್ನಿಸೀತೆ? ಒಂಬತ್ತು ಎಂಬುದು ಮುಂದೆ ಬರುವಾಗ ಹತ್ತು ಎಂಬುದಕ್ಕೆ ಯಾವ ಆದೇಶವೂ ಇಲ್ಲವೆಂಬ ವ್ಯಾಕರಣ ನಿಯಮವನ್ನು ಮೀರದೆ ಅವರು ಹತ್ತೊಂಬತ್ತು ಎಂದೇ ಪ್ರಯೋಗಿಸುತ್ತಾರೆ. ಇಲ್ಲಿಯೂ ಅವರು ಹದಿನೊಂಭತ್ತು ಎಂದು ಪ್ರಯೋಗ ಮಾಡುತ್ತಿದ್ದರೆ ಮುಂದಣವರು ಅವರ ಪ್ರಯೋಗದ ಆಧಾರದಿಂದ ಹತ್ತು ಎಂಬುದು ಪೂರ್ವ ಪದವಾಗಿದ್ದು ಮುಂದೆ ಸ್ವರಯುಕ್ತವಾದ ಸಂಖ್ಯಾ ವಾಚಕವಿದ್ದಾಗ ಹದಿನ್ ಎಂಬ ಆದೇಶವನ್ನು ಸರ್ವತ್ರ ಪಡೆಯುತ್ತದೆ ಎಂಬ ಹೊಸ ವ್ಯಾಕರಣ ಸೂತ್ರವನ್ನು ಬರೆಯಬಹುದಾಗಿತ್ತು. ಹಿಂದೊಮ್ಮೆ ಒಬ್ಬರು ಆಡುಮಾತಿನಲ್ಲಿ 'ಹನ್ನೊಂಬತ್ತು' ಎಂದು ಪ್ರಯೋಗಿಸಿದುದನ್ನು ಕೇಳಿದ ನೆನಪು ನನಗೆ. ಅವರು ಹನ್ನೊಂದು ಹನ್ನೆರಡು ಎಂಬೆರಡು ಶಬ್ದಗಳ ಸಾಮ್ಯದಿಂದ ಆ ರೀತಿ ಪ್ರಯೋಗಿಸಿದುದೆಂದು ಊಹಿಸುವಂತಿದೆ, 'ಹನ್ನೊಂಬತ್ತು' ಎಂಬ ಪ್ರಯೋಗ. ಎಲ್ಲರಿಗೂ ತಿಳಿದಿರುವಂತೆ ಹನ್ನೊಂದು, ಹನ್ನೆರಡು ಎಂಬ ರೂಪಗಳು ಸರಿ: ಹದಿನೊಂದು. ಹದಿನೆರಡು, ಹನ್ನೊಂಭತ್ತು ಎಂಬವುಗಳು ಸರಿಯಲ್ಲ.

ಅಡಕೆ ಎಂದಿರಬೇಕಾದುದನ್ನು ಅಡಿಕೆ ಎಂದು ಪ್ರಯೋಗಿಸುವ ರೂಢಿ ಕರ್ನಾಟಕದಲ್ಲೆಲ್ಲ ಪಸರಿಸಿದೆ. ಹಳಗನ್ನಡದಲ್ಲಿ ಅಡಕೆ ಎಂಬ ರೂಪವೇ ಇದೆ.[5] ಹವೀಕರು

---

5 ಅ: ಒಡವೆಯನರ್ಥಿಗಿತ್ತನವನೀತಳವಮಂ ಗುರುಗಿತ್ತನೀಗಳೊಂ ।
ದಡಕೆಯುಮಿಲ್ಲ ಕೈಯೊಳ್...... (ಪಂಪ ಭಾರತ: 2–46)

ಆಃ......ನೆಱುಗಂಪಿನ ಸೊಂಪುಗಳ್ಗಿಂಬಾದ ಪೊಂಬಾಳೆಗಳೊಳಂ
ಬಳ್ಳಿವಡಕೆಯ ಸಾಲ್ಗಳೊಳಂ......ಕಬ್ಬಿಗರ ಕಾಸ ಸಂ ದೇ.ಜ. ಗೌ ಪ ೨೭ ರ ಗದ್ಯ ಇತ್ಯಾದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

(ಮಂಗಳೂರು ಪುತ್ತೂರು ಮುಂತಾದ ಕೆಲೆವೆಡೆ) ಅಡಕ್ಕೆ ಎಂದೇ ಹೇಳುತ್ತಾರೆ. ಇತರ ಕೆಲವು ದ್ರಾವಿಡಭಾಷೆಗಳಲ್ಲಿಯೂ ಹಾಗೆಯೇ ಇದೆ. ಹೀಗಿರುವದರಿಂದ ಅಡಕೆ ಎಂಬ ರೂಪವೇ ಸಾಧುತರವೆಂದು ನಿರ್ಧರಿಸಬಹುದು. ಹೀಗೆಯೇ ಸಾಲಗೆ ಯನ್ನು ಸಾಲಿಗೆ ಎಂದೂ ಬೇಸಗೆಯನ್ನು ಬೇಸಿಗೆ ಎಂದೂ ಮಾರ್ಪಡಿಸಿದುದನ್ನು ಕಾಣುತ್ತೇವೆ.

ಸಾರ್ವತ್ರಿಕವಾಗಿ ರೂಢವಾದುದೆಂದು ಹೇಳಬಹುದಾದ ಶಬ್ದಗಳಲ್ಲಿ 'ಹಜ್ಜೆ' ಎಂಬುದೂ ಒಂದು. ಇತ್ತ ಕಡೆಯ ಹವೀಕರಲ್ಲಿ (ಹವೀಕರ ಆಡುನುಡಿಯಲ್ಲಿ ಪ್ರಾಚೀನರೂಪಗಳು ಬಹು ಪ್ರಮಾಣದಲ್ಲಿ ಉಳಿದುಕೊಂಡಿರುವದರಿಂದ ಇಲ್ಲಿ ಹವೀಕರ ರೂಢಿಗಳನ್ನು ಉದ್ಧರಿಸಲಾಗಿದೆ) ಹಾಗೂ ಇತರ ಕೆಲವರಲ್ಲಿ ಹೆಜ್ಜೆ (ಪೆಜ್ಜೆ) ಎಂದರೆ ದ್ರವಯುಕ್ತವಾದ ಎಂದರೆ ನೀರನ್ನು ಬಸಿಯದ ಅನ್ನ ಎಂದೇ ಅದಕ್ಕೆ ಅರ್ಥ. ಇದು ಪೇಯ ಎಂಬುದರ ತದ್ಭವವಾಗಿದ್ದು ಕೊಂಕಣಿ ಭಾಷೆಯಲ್ಲಿ 'ಪೇಜ್' ಎಂಬ ರೂಪವನ್ನು ತಾಳಿದೆ. "ರಾಮನು ಹೆಜ್ಜೆಯನ್ನು ಮುಂದಿಟ್ಟನು" ಎಂಬ ವಾಕ್ಯ ವಿದ್ದರೆ "ರಾಮನು ದ್ರವಯುಕ್ತವಾದ ಅನ್ನವನ್ನು ಎದುರುಗಡೆ (ಊಟಕ್ಕಾಗಿ) ಇಟ್ಟನು." ಎಂದು ಅರ್ಥವಾಗುವ ಸಂಭವವೂ ಇರುವುದರಿಂದ ಈ ಹೆಜ್ಜೆ ಅಪಾರ್ಥಕ್ಕೂ ಎಡೆಕೊಡುತ್ತದೆ ಎಂಬುದು ಸ್ಪಷ್ಟ. ಇಲ್ಲಿ ಇರಬೇಕಾದ ಶಬ್ದ 'ಹಜ್ಜೆ' ಎಂಬುದು. ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಇದು 'ಪದ್ಧತಿ' ಎಂಬುದರ ತದ್ಭವವೆಂದು ಉಲ್ಲೇಖವಿದ್ದರೂ ವಿಚಾರಮಾಡಿದರೆ ಇದು ಅದರ ತದ್ಭವವಲ್ಲ, ಪದ್ಯಾ (ಪದ್ಯೆ) ಎಂಬುದರ ತದ್ಭವವೆಂಬುದು ಗೊತ್ತಾಗುತ್ತದೆ. ಈ ಕಾರಣದಿಂದಲೇ ಇಲ್ಲಿ ಇದು 'ಹಜ್ಜೆ' ಎಂದು ರೂಪುಗೊಳ್ಳಬೇಕಾದುದು, 'ಹೆಜ್ಜೆ' (ಪೆಜ್ಜೆ) ಎಂದಲ್ಲ. ಆದರೆ ಕನ್ನಡದ ಅಧ್ಯಾಪಕರೊಬ್ಬರು ಶಬ್ದಮಣಿದರ್ಪಣದಲ್ಲಿ 'ಪೋದ ಪೆಜ್ಜೆಯಿಂ ಕಾಣಿಸಿದಂ' ಎಂಬ ಪ್ರಯೋಗವಿದೆಯೆಂದೂ ಆದುದರಿಂದ ಹೆಜ್ಜೆಯೆಂಬುದು ಅಸಾಧುವಾಗ ಬೇಕಾಗಿಲ್ಲವೆಂದೂ, ಕೆಲವೇ ವರ್ಗದವರಿಗೆ 'ಗಂಜಿ' (ದ್ರವಯುಕ್ತವಾದ ಅನ್ನ) ಎಂಬರ್ಥವಾದೀತೆಂಬುದರಿಂದ ಇದು ತ್ಯಾಜ್ಯವಾಗಬೇಕಾಗಿಲ್ಲವೆಂದೂ ವಾದಿಸಹೊರಟಿದ್ದಾರೆ. ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿದ ಶಬ್ದಮಣಿದರ್ಪಣದಲ್ಲಿ ಹಾಗಿಲ್ಲ: 'ಪೋದ ಪಜ್ಜೆಯಿಂ ಕಾಣಿಸಿದಂ' ಎಂದಿದೆ. ಬರಹಗಾರರ ಕಯ್ಗುಳ ಕೇಡು ಹೀಗಾಗುವುದು ಪ್ರಸಿದ್ಧ. ಎಂದಮಾತ್ರಕ್ಕೆ ಈ 'ಅಪರೂಪ'ವೇ ಸರಿಯೆನ್ನುವುದು ಸರಿಯೆ ? ಅಲ್ಪಸಂಖ್ಯಾತರಿಗೆ ಬೇರೆ ಅರ್ಥವಾಗುತ್ತದೆ ಎಂಬುದರಿಂದ 'ಹೆಜ್ಜೆ'ಯನ್ನು ನಿರಾಕರಿಸಬೇಕೆಂದಿಲ್ಲವಾದರೂ 'ಹಜ್ಜೆ'ಯನ್ನೇ ಇಟ್ಟುಕೊಂಡರೆ ತಪ್ಪಾಗುತ್ತದೆಯೇ ?

ಇನ್ನೂ ಎರಡು ಪದಗಳ ಸ್ವರೂಪಗಳು ಬಹುಸಂಖ್ಯಾತರಲ್ಲಿ ಬದಲಾವಣೆಗೊಂಡಂತೆ ತೋರುತ್ತದೆ. ಬರು ಮತ್ತು ತರು ಎಂಬೆರಡು ಧಾತುಗಳಿಗೆ ನಿಷೇಧಾರ್ಥದಲ್ಲಿ ಆದ್ಯಕ್ಷರ ದೀರ್ಘವಾಗಿ ಬಾರ ಮತ್ತು ತಾರ ಎಂಬ ರೂಪಗಳುಂಟಾಗುತ್ತವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯೆಂದು ವ್ಯಾಕರಣದಲ್ಲಿ ಇತ್ತೀಚಿನವರೆಗೂ ಇದ್ದ (ಪ್ರಾಯಶಃ ಈಗಲೂ ಇರುವ) ನಿಯಮ. ಅದರ ಪ್ರಕಾರ ಬಾರದೆ, ತಾರದೆ, ಬಾರನು, ತಾರನು, ಬಾರೆನು, ತಾರೆನು, ಎಂಬಂತಹ ರೂಪಗಳಿರಬೇಕೆ ಹೊರತು ಬರದೆ, ತರದೆ, ಎಂದು ಮುಂತಾಗಿ ಇರುವುದು ಸರಿಯಲ್ಲ. ಹಾಗೆಂದು ಬರು ಮತ್ತು ತರು ಎಂಬವುಗಳಿಗೆ ಮುಂದೆ ನಿಷೇಧಾರ್ಥಕಪದವು ಸೇರುವಾಗ ಈ ಆದಿದೀರ್ಘತ್ವವಿಲ್ಲ: ಬರಬೇಡ, ತರಲಿಲ್ಲ, ಬರಬಾರದು, ತರುವುದಿಲ್ಲ ಎಂಬಂತೆ ರೂಪಗಳುಂಟಾಗುತ್ತವೆ. ಬಾರಬೇಡ, ತಾರಲಿಲ್ಲ ಇತ್ಯಾದಿ ರೂಪಗಳು ಬರುವದಿಲ್ಲ.

ದ್ವಿರುಕ್ತಿಯಾಗಿ ಪ್ರಯೋಗಗೊಳ್ಳುವ ಪದಗಳಲ್ಲಿಯೂ ಇಂತಹ ಅನವಸ್ಥೆಯಿರುವುದು ಕಂಡುಬರುತ್ತದೆ. ಕಟ್ಟಕಡೆ ಎಂಬ ದ್ವಿರುಕ್ತಿಪ್ರಯೋಗವನ್ನು ಕಂಡು ಅದರ ಧ್ವನಿಸಾಮ್ಯದಿಂದ ತುಟ್ಟತುದಿಯೆಂದೂ ಮೊಟ್ಟಮೊದಲು ಎಂದೂ ವಿದ್ವಾಂಸರೆನ್ನಿಸಿದ ಅನೇಕರೂ ಬಳಸುವುದನ್ನು ಕಾಣುತ್ತೇವೆ. ಕಡೆ ಎಂಬಲ್ಲಿ ದ್ವಿತೀಯಾಕ್ಷರವು ಟ ವರ್ಗದ ತೃತೀಯಾಕ್ಷರವಾಗಿದೆ. ಕಡ ಕಡೆ ಎಂದು ಒಂದುಗೂಡುವಾಗ ಅಲ್ಲಿ ಮೊದಲನೆಯ ಪದದ 'ಡ' ಎಂಬುದಕ್ಕೆ ಅದೇ ವರ್ಗದ ಪ್ರಥಮಾಕ್ಷರವು ದ್ವಿತ್ವಯುಕ್ತವಾಗಿ ಅಕಾರಾಂತವಾಗಿ ಬರುತ್ತದೆ ; ಕಟ್ಟಕಡೆ ಎಂಬ ರೂಪವನ್ನು ತಾಳುತ್ತದೆ. ಇದೇ ಲಕ್ಷಣವನ್ನನುಸರಿಸಿ ಪರಿಶೀಲಿಸಿದರೆ ತುದಿ, ಮೊದಲು (ಮೊದಲ್-ಹಳಗನ್ನಡ) ಎಂಬವುಗಳಲ್ಲಿ ದ್ವಿತೀಯಾಕ್ಷರವು ದಕಾರವಾಗಿದ್ದು ದ್ವಿರುಕ್ತವಾಗುವಾಗ ತದ್ವರ್ಗದ ಪ್ರಥಮಾಕ್ಷರವು ದ್ವಿತ್ವಯುಕ್ತವಾಗಿ ಅಕಾರಾಂತವಾಗಿ ಬರಬೇಕೆಂಬುದನ್ನು ನಿರ್ಧರಿಸಬಹುದು. ಆಗ ತುತ್ತ ಮತ್ತು ಮೊತ್ತ ಎಂಬವುಗಳು ಪೂರ್ವಪದರೂಪಗಳಾಗಿರಬೇಕೆಂಬುದನ್ನು ತಿಳಿಯಬಹುದು. ಅವೆರಡೂ ಪದಗಳು ತುತ್ತತುದಿ ಮತ್ತು ಮೊತ್ತಮೊದಲು ಎಂದೇ ಇರಬೇಕೆಂಬುದು ಸಿದ್ಧವಾಗುತ್ತದೆ.

'ಕಂಡಾಬಟ್ಟೆ' ಎಂಬುದು ಹಲವರಿಗೆ ಕಂಡಾಪಟ್ಟಿ, ಕಂಡಾಪಟ್ಟೆ, ಕಂಡಾಬಟ್ಟಿ ಎಂದೆಲ್ಲ ಆಗಿಬಿಡುವುದಿದೆ. (ಮೂರಾ ಬಟ್ಟೆ ಎಂಬುದು ಹಾಗಾಗದಿರುವುದು ಕನ್ನಡದ ಭಾಗ್ಯವೆನ್ನಬಹುದು. ಅದೂ ರೂಪಾಂತರಗೊಂಡಿದೆಯೆಂದಾದರೆ ಕನ್ನಡವನ್ನು ಕುಲಗೆಡಿಸುವವರ ಕೈ ಎಷ್ಟು ದೂರಕ್ಕೆ ನೀಡಿದೆಯೆಂದು ಊಹಿಸಿಕೊಳ್ಳಬಹುದು) ಇದಕ್ಕೆ ಕಾರಣವೆಂದರೆ ಕಂಡಾಬಟ್ಟೆ ಎಂಬುದನ್ನು ವಿಭಜಿಸುವುದು ಹೇಗೆಂದೂ, ಹಾಗೆ ವಿಭಕ್ತವಾದಾಗ ಏನು ಅರ್ಥವಾಗುವುದೆಂಬುದನ್ನೂ ಖಚಿತವಾಗಿ ತಿಳಿದುಕೊಳ್ಳದಿರುವುದು. 'ಕಂಡ ಆ ಬಟ್ಟೆ' ಎಂದು ಅದನ್ನು ವಿಂಗಡಿಸಬೇಕೆಂದು ಕನ್ನಡದ ಸಾಮಾನ್ಯಜ್ಞಾನವುಳ್ಳವನೂ ತಿಳಿಯುವಂತಿದೆ. 'ಬಟ್ಟೆ' ಎಂಬುದು ಮಾತ್ರ ಕೆಲವರಿಗೆ ಸರಿಯಾದ ಅರ್ಥಬೋಧನೆಯನ್ನು ಮಾಡದಿರಬಹುದು. ಇದಕ್ಕೆ 'ದಾರಿ' ಎಂಬುದೇ ಈ ಸಂದರ್ಭದಲ್ಲಿ ಅರ್ಥವೆಂದು ತಿಳಿದರೆ, 'ಕಂಡಾಬಟ್ಟೆ' ಎಂಬುದಕ್ಕೆ "ಕಣ್ಣಿಗೆ ಕಾಣಿಸಿದ ದಾರಿ" "ಗುರಿಯಿಲ್ಲದ ಮಾರ್ಗ" ಎಂಬ ಅಭಿಪ್ರಾಯವಾಗಿ, ಉಳಿದ ದುಷ್ಟರೂಪಗಳು ಬಾರದಿರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಚುರ ಪ್ರಯೋಗದ ಇನ್ನೊಂದು ಪದ ' ಅನ್ನು ' ಎಂಬುದು. ಹೇಳು ಎಂಬರ್ಥದ ' ಎನ್ ' ಎಂಬ ಮೂಲದಿಂದ ಇದು ಬಂದುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈಗ ' ಎನ್ನು ' ಎಂಬುದು ಹೆಚ್ಚಿನಂಶ ತೊಲಗಿಹೋಗಿ, ' ಅನ್ನು ' ಎಂಬುದಕ್ಕೆ ಎಡೆಮಾಡಿಕೊಟ್ಟಂತಿದೆ. ಅಂದರೆ, ಅನ್ನುತ್ತಾನೆ, ಅನಿ(ನ್ನಿ)ಸಿಕೆ ಮುಂತಾದವು ಗಳೆಲ್ಲ ಈಗ ಸಾಮಾನ್ಯವಾಗಿ ಬಳಕೆಗೊಳ್ಳುವ ರೂಪಗಳು ಪದಗಳು. ಇವುಗಳನ್ನು ಎಂದರೆ, ಎನ್ನುತ್ತಾನೆ ಎನಿ(ನ್ನಿ)ಸಿಕೆ ಎಂದರೆ ತಪ್ಪೇನೋ ತಿಳಿಯದು. ಶಬ್ದಸ್ವರೂಪ ವನ್ನು ಅವರವರ ಇಷ್ಟದಂತೆ ಬದಲಿಸುವುದರಿಂದ ಭಾಷೆ ಅಭಿವೃದ್ಧಿ ಪಡೆಯುವುದೆಂದು ನಂಬಿಕೊಂಡಿದ್ದರೆ, ಮೊದಲಿದ್ದ ಎಲ್ಲ ಶಬ್ದಗಳನ್ನೂ ಸ್ವಚ್ಛಂದವಾಗಿ ಬದಲಿಸಿ ಬಿಡೋಣ. ಪರಿಣಾಮವೇನೆಂದು ನೋಡೋಣ !

ಈ ಬಗೆಯ ಅನೇಕ ನ್ಯೂನತೆಗಳೂ ದೋಷಗಳೂ ಕನ್ನಡದಲ್ಲಿಂದು ಕಂಡು ಬರುತ್ತವೆ. ಆಂಗ್ಲಭಾಷೆಯನ್ನು ಕಲಿತವರೂ ಕಲಿಸುವವರೂ ಅಕ್ಷರ ಸ್ಖಾಲಿತ್ಯ, ವ್ಯಾಕರಣದೋಷ ಇತ್ಯಾದಿಗಳನ್ನು ತಪ್ಪೆಂದು ನಿರ್ದಾಕ್ಷಿಣ್ಯವಾಗಿ ಹೊಡೆದು ತೋರಿಸು ತ್ತಾರೆ. ಆಂಗ್ಲದೇಶದಲ್ಲಿ ಪ್ರಾದೇಶಿಕವಾದ ಆಡುಮಾತಿನಲ್ಲಿ ಕೆಲವು ವ್ಯತ್ಯಾಸಗಳೂ ಅಸಂಸ್ಕೃತ ಪ್ರಯೋಗಗಳೂ ಇರಬಹುದಾದರೂ, ರಾಜಭಾಷೆ (Kings English) ಎಂದು ಕರೆಯಿಸಿಕೊಳ್ಳುವುದರಲ್ಲಿ ಅಂತಹ ಪ್ರಯೋಗಗಳನ್ನು ತಡೆಯಲು ಶತಪ್ರಯತ್ನ ಮಾಡುತ್ತಾರೆ. ಕನ್ನಡಕ್ಕೆ ಅಂತಹ ಪ್ರಯತ್ನ ನಡೆಯುತ್ತದೆಯೇ ? ನಡೆಯಿಸಿದರೂ ಫಲವಿದ್ದೀತೆ ? ಜೀವದ್ಭಾಷೆಗೆ ನಿರಂತರವೂ ಬದಲಾಗುವ ರೂಪಗಳೂ ಪ್ರಯೋಗಗಳೂ ಜೀವಂತತೆಯ ಲಕ್ಷಣವೆಂದಾದರೂ ಅಪಗತಿಗಳೂ ವಿಕೃತರೂಪಗಳೂ ಪ್ರಗತಿಯ ಲಕ್ಷಣವೆಂದಾಗಬಹುದೆ ? ಭಾರತದ ಆಂಗ್ಲಭಾಷೆಯನ್ನು 'Indian English' (ಭಾರ ತೀಯ ಆಂಗ್ಲಭಾಷೆ) ಎಂದು ಆ ದೇಶದವರು ಹೀನಾಯಿಸುತ್ತಾರಂತೆ ! ಹಾಗಿದ್ದರೆ ನಾವು ಮಾತ್ರ ನಮ್ಮಲ್ಲಿ ನಿರಾತಂಕವಾಗಿ ಬಂದುಸೇರುವ ಸ್ಖಾಲಿತ್ಯಗಳನ್ನೂ 'ಅಪರೂಪ' ಗಳನ್ನೂ, ಅಬದ್ಧಪ್ರಯೋಗಗಳನ್ನೂ ಅಂಗೀಕರಿಸಿ ಅವುಗಳನ್ನು ನಮ್ಮ ಪ್ರಗತಿಯ ಒಂದೊಂದು ಹಜ್ಜೆಯೆನ್ನಬೇಕೆ ? ಹಾಗೆಸಗುವುದು ನಮ್ಮ ಅಜ್ಞಾನವೆನ್ನಿಸಲಾರದೆ ?

ಇನ್ನುಮುಂದೆ ಕೆಲವು ವಾಕ್ಯಖಂಡಗಳನ್ನೋ ವಾಕ್ಯಗಳನ್ನೋ, ಉದ್ಧರಿಸಿಕೊಂಡು ಪರಿಶೀಲಿಸೋಣ :

1. ರಾಮಾಯಣವು ಓದತಕ್ಕ ಪುಸ್ತಕವಾಗಿದೆ.

2. ಪರಸ್ತ್ರೀಯರನ್ನು ಅಪಹರಿಸತಕ್ಕ ರಾವಣನು ದುಷ್ಟನೇ ಸರಿ.

ಈ ಎರಡು ವಾಕ್ಯಗಳಲ್ಲಿ ಬರುವ ' ತಕ್ಕ ' (ತಕ್ಕಂಥ ಎಂದೂ ಪ್ರಯೋಗವಿದೆ) ಎಂಬ ಪ್ರಯೋಗವನ್ನು ಚೆನ್ನಾಗಿ ಪರಿಶೀಲಿಸಬೇಕು. ಮೊದಲನೆಯ ವಾಕ್ಯದ ಪ್ರಕಾರ ' ರಾಮಾಯಣವು ಓದಲು ಅರ್ಹತೆಯನ್ನು ಪಡೆದ ಪುಸ್ತಕವಾಗಿದೆ ' ಎಂಬ ಉಚಿತವಾದ ಅರ್ಥವಾಗುತ್ತದೆ. ಎರಡನೆಯ ವಾಕ್ಯದಲ್ಲಿ " ರಾವಣನು ಪರಸ್ತ್ರೀಯರನ್ನು ಅಪಹರಿ ಸಲು ಅರ್ಹತೆ ಪಡೆದಿದ್ದಾನೆ...... : " ಅಥವಾ " ಪರಸ್ತ್ರೀಯರನ್ನು ರಾವಣನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪಹರಿಸಿದುದು ಔಚಿತ್ಯಪೂರ್ಣವಾದುದು..." ಎಂಬ ಅರ್ಥವನ್ನು ಕೊಡುತ್ತದೆ ಆದುದರಿಂದಲೇ ಈ 'ತಕ್ಕ' ಎಂಬುದನ್ನು ಸೇರಿಸಿ ವಾಕ್ಯರಚನೆ ಮಾಡುವಾ. ಬಹಳ ಎಚ್ಚರದಿಂದಿರಬೇಕಾಗುತ್ತದೆ. ಆದರೆ ಆಕಾಶವಾಣಿಯಿಂದ ಪ್ರಸಾರವಾಗುವ ಅನೇಕ ಕಾರ್ಯಕ್ರಮಗಳಲ್ಲಿ, ಅನೇಕರ ಭಾಷಣಗಳಲ್ಲಿ ಹಾಗೂ' ಲೇಖನಗಳಲ್ಲಿ 'ತಕ್ಕ' ಎಂಬುದು 'ತಕ್ಕತೈ' ಎಂದು ಸ್ವಚ್ಛಂದವಾಗಿ ಕುಣಿಯುವುದನ್ನು ಗಮನಿಸಬಹುದು !

'ಕಸೂತಿ ಕೆಲಸದ ಹೂಗಳನ್ನುಳ್ಳ ವಸ್ತ್ರವೆಂದು ಇಲ್ಲಿನ ಅರ್ಥ' ಎಂಬೊಂದು ವಾಕ್ಯಾಂಶವಿದ್ದರೆ, 'ಹೂಗಳನ್ನುಳ್ಳ' ಎಂಬ ಮಾತು ಕೆಲವರ ಗಮನವನ್ನಾದರೂ ಸೆಳೆಯುತ್ತದೆ. ಇದನ್ನು 'ಹೂಗಳುಳ್ಳ' ಎಂದು ಪ್ರಯೋಗಿಸಲಾಗದೆ ? 'ಉಳ್' ಎಂಬ ಧಾತುವಿನ ಕೃದಂತರೂಪವೇ 'ಉಳ್ಳ' ಎಂಬುದು. 'ಉಳ್' ಎಂಬ ಧಾತು ಕ್ರಿಯಾಪದವಾಗುವಾಗ ಅಕರ್ಮಕವಾಗಿರುತ್ತದೆಯೇ ಹೊರತು ಸಕರ್ಮಕವಾಗುವುದಿಲ್ಲ. ಹಾಗಿರುವಾಗ 'ಹೂಗಳುಳ್ಳ' ಎಂಬ ಪ್ರಯೋಗವೇ ಸಾಧುವಲ್ಲವೆ ? ಹಿಂದಣ ಪ್ರಯೋಗಗಳಲ್ಲಿ ಕೂಡ ಹೀಗಿರುವುದು ಕಂಡುಬರುತ್ತದೆ: "ಪೊನ್ನುಳ್ಳವನೆ ಕುಲೀನಂ..." "ಲಾಭಾಂತರಾಯಕ್ಷಯದಿಂ ಪರಿತ್ಯಕ್ತ ಕಬಳಾಹಾರಕ್ರಿಯೆಯುಳ್ಳ ಕೇವಳಿಗಳ್" ಮುಂತಾದ ಪ್ರಯೋಗಗಳಲ್ಲಿ ಕಂಡುಬರುವ ರೂಪಗಳಿಗೆ 'ಪೊನ್ನನ್ನುಳ್ಳವನೆ' ಎಂದೂ 'ಕ್ರಿಯೆಯನ್ನುಳ್ಳ' ಎಂದೂ ರೂಪವಿರಬೇಕಿತ್ತೆ? ಕೆಲವು ಕಡೆ ಕೆಲವರು ಪ್ರಮಾದದಿಂದಲೋ, ಭ್ರಾಂತಿಯಿಂದಲೋ ಇನ್ನಾವ ಕಾರಣದಿಂದಲೋ "ಉಳ್ಳ" ಎಂಬುದನ್ನು ಸಕರ್ಮಕವೆಂಬಂತೆ ಪ್ರಯೋಗಿಸಿದುದಿದ್ದರೆ, ಅದಂಗ ನಿಯಮಕ್ಕೆ ಅಪವಾದವೆನ್ನಿಸೀತೆ ಹೊರತು ನಿಯಮವೆನ್ನಿಸಲಾರದು.

ಕೆಲವು ಪ್ರಶ್ನಪತ್ರಗಳಲ್ಲಿ ಹೀಗಿರುತ್ತದೆ : 1." ಕೆಳಗಣ ಪದ್ಯವನ್ನು ವ್ಯಾಖ್ಯಾನಿಸಿ" 2." ನಾಲ್ಕು ವಾಕ್ಯಗಳ ಸಂದರ್ಭ ಸೂಚಿಸಿ ಅರ್ಥವಿವರಿಸಿ" 3. "ಟಿಪ್ಪಣಿ ಬರೆಯಿರಿ" ಇತ್ಯಾದಿ. ಕೊನೆಯ ಮಾತಿನಲ್ಲಿ 'ಬರೆಯಿರಿ' ಎಂಬ ರೂಪವೇ ಇದ್ದು ಉಳಿದವುಗಳಲ್ಲಿ "ವ್ಯಾಖ್ಯಾನಿಸಿ" "ವಿವರಿಸಿ" ಎಂದಿದೆ. ಇಂತಹ ಪ್ರಯೋಗವು ಸಮಂಜಸವೆ ? ಎರಡನೆಯ ವಾಕ್ಯದಲ್ಲಿ "ಸಂದರ್ಭ ಸೂಚಿಸಿ" ಎಂಬಲ್ಲಿ ಅಪೂರ್ಣ ಕ್ರಿಯಾಪದವಿದೆ ಎಂಬುದನ್ನು ಸುಲಭವಾಗಿ ತಿಳಿಯುವಂತಿದೆಯಷ್ಟೆ. ಮುಂದಣ "ಅರ್ಥ ವಿವರಿಸಿ" ಎಂಬುದೂ ಹೀಗೆಯೇ ಅಪೂರ್ಣಕ್ರಿಯಾಪದವೆಂದು ಗ್ರಹಿಸಿದರೆ ತಪ್ಪೆಂದು ಹೇಳುವುದಂ ಹೇಗೆ ? ಪೂರ್ಣವಿರಾಮ ಚಿಹ್ನವನ್ನು ಹಾಕಿ ಅದು ಪೂರ್ಣಕ್ರಿಯಾಪದವೆಂದು ತೋರಿಸಿಕೊಟ್ಟಂತಾಗುತ್ತದೆ ಎಂದು ವಾದಿಸುವುದಾದರೆ, ಹಿಂದೆ ಉದ್ಧರಿಸಿದ ಮೂರನೆಯ ವಾಕ್ಯವನ್ನು ಹಿಂದಣದಕ್ಕೇ ಸೇರಿಸಿದರೆ, "ಅರ್ಥವಿವರಿಸಿ" ಎಂಬುದೂ ಅಪೂರ್ಣಕ್ರಿಯಾಪದವಾಗುತ್ತದೆ (ಪೂರ್ಣವಿರಾಮ ಚಿಹ್ನವಿಲ್ಲದಿದ್ದರೆ). ಹಾಗೂ ಮೂರನೆಯ ವಾಕ್ಯದಲ್ಲಿ ಬರುವ "ಬರೆಯಿರಿ" ಎಂಬುದನ್ನು ಹಿಂದಣವುಗಳಂತೆ "ಬರೆಯಿ" ಎಂಬಲ್ಲಿಗೇ ನಿಲ್ಲಿಸಿ ಪೂರ್ಣವಿರಾಮ ಚಿಹ್ನವನ್ನು ಹಾಕಬಹುದಲ್ಲ ! ನನಗೆ ತಿಳಿದಮಟ್ಟಿಗೆ ಹಾಗೆ ಯಾರೂ ಮಾಡುವುದಿಲ್ಲ. ಆದುದರಿಂದ ಪೂರ್ಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ರಿಯಾಪದರೂಪವನ್ನು ತೋರಿಸುವಲ್ಲಿ 'ರಿ(ಇರಿ)' ಎಂಬುದನ್ನು ಬಿಡದೆ ಪ್ರಯೋಗಿಸುವುದೇ ಮೇಲಲ್ಲವೇ? ಹಳಗನ್ನಡದಲ್ಲಿ ಪೇಳಿಂ, ಮಾಡಿಂ ಎಂಬಂತೆ ಮಧ್ಯಮ ಪುರುಷ ಬಹುವಚನರೂಪವಿರುವುದರಿಂದ ಹೊಸಗನ್ನಡದಲ್ಲಿ ಕೊನೆಯ ಅನುಸ್ವಾರವನ್ನು ಕಳೆದು ಪ್ರಯೋಗಿಸುವುದು ತಪ್ಪಾಗದು ಎಂದೇ ತೋರಬಹುದಾದರೂ ಬರೆಯಿರಿ ಎಂಬುದನ್ನು ಹಾಗೆ ಪ್ರಯೋಗಿಸುವಾಗ ಉಳಿದವುಗಳನ್ನೂ ಹಾಗೆಯೇ ರಿ (ಇರಿ) ಸೇರಿಸಿ ಪ್ರಯೋಗಿಸುವುದು ವಾಸಿ. ಮಾತ್ರವಲ್ಲ. ಅಪೂರ್ಣಕ್ರಿಯಾಪದ ಸ್ವರೂಪವೂ ಪೂರ್ಣಕ್ರಿಯಾಪದ ಸ್ವರೂಪವೂ ಒಂದೇ ರೀತಿಯಲ್ಲಿದ್ದರೆ ಅರ್ಥ ಮಾಡಲು ಸುಗಮವಾದೀತೆ?

"ಭಾಷೆಗಳನ್ನು ಧ್ವನಿಲಿಪಿಯುಳ್ಳವು ಉಳ್ಳದವು. ಎಂದೂ ವಿಂಗಡಿಸುವುದುಂಟು" ಎಂಬ ವಾಕ್ಯವು ಒಂದು ಲೇಖನಸಮುಚ್ಚಯದಲ್ಲಿದೆ. ಇದನ್ನು ಬರೆದವರು ಕನ್ನಡದಲ್ಲಿ ವಿದ್ವಾಂಸರೆಂದು ಹೆಸರುಗೊಂಡವರು. ಇಂಥವರ ಈ ವಾಕ್ಯವನ್ನೋದುವಾಗ "ಧ್ವನಿಲಿಪಿ ಇರುವ ಮತ್ತು ಇಲ್ಲದ ಭಾಷೆಗಳೆಂದು ಭಾಷೆಗಳನ್ನು ವಿಂಗಡಿಸುತ್ತಾರೆ" ಎಂಬರ್ಥವನ್ನು ಇದಕ್ಕೆ ಅವರು ಇಟ್ಟುಕೊಂಡಂತೆ ತೋರುತ್ತದೆ. ಆದರೆ ಈ ವಾಕ್ಯದ 'ಉಳ್ಳದವು' ಎಂಬ ರೂಪವು ಸಾಧುವೆ? ಕನ್ನಡಧಾತುಗಳಿಗೆ ನಿಷೇಧಾರ್ಥದಲ್ಲಿ 'ಅ' ಎಂಬ ವಿಕರಣವು ಸೇರಿ ನಿಷೇಧರೂಪವುಂಟಾಗುತ್ತದೆ. ಉದಾಹರಣೆಗೆ. 'ಮಾಡು' ಎಂಬ ಧಾತುವಿಗೆ 'ಅ' ಎಂಬ ವಿಕರಣವು ಸೇರಿದಾಗ 'ಮಾಡ' ಎಂಬ ರೂಪವುಂಟಾಗಿ ಅನಂತರ ಪುರುಷವಾಚಕ ಪ್ರತ್ಯಯಗಳು ಸೇರುವಾಗ ಮಾಡನು, ಮಾಡಳು, ಮಾಡದು ಇತ್ಯಾದಿ ರೂಪಗಳುಂಟಾಗುವುವಷ್ಟೆ. ಹಾಗೆಯೇ 'ಉಳ್' ಧಾತುವಿಗೆ ನಿಷೇಧರೂಪವು 'ಉಳ್ಳ' ಎಂದಾದೀತೆ? ಈಗಲೂ (ಹಿಂದೆಯೂ) ಬಳಕೆಯಲ್ಲಿರುವಂತೆ (ಇದ್ದಂತೆ) 'ಉಳ್ಳ' ಎಂಬುದು ನಿಷೇಧರೂಪವಾಗಿದೆ. ಇದಕ್ಕೆ 'ಇರುವ' ಎಂಬರ್ಥವೇ ಇದೆ (ಇತ್ತು). ಆದರೆ 'ಳ' ಕಾರಾಂತವಾದ ಇತರ ಕೆಲವು ಧಾತುಗಳಿಗೆ ಉಂಟಾಗುವ ನಿಷೇಧರೂಪಗಳನ್ನು ಪರಿಶೀಲಿಸಿದರೆ, ಇದಕ್ಕೂ ಅಂತಹ ರೂಪವು ಸಾಧ್ಯವೆಂದೂ ಸಾಧುವೆಂದೂ ತೋರಬಹುದು. ಉದಾಹರಣೆಗೆ, ಕಳ್, ಕೊಳ್ ಮೊದಲಾದ ವ್ಯಂಜನಾಂತವಾದ ಧಾತುಗಳು ('ಉಳ್' ಎಂಬುದರಂತೆ ಕಾಣುವವುಗಳು) ನಿಷೇಧಾರ್ಥಕ 'ಅ' ಕಾರವನ್ನು ಸೇರಿಸಿಕೊಂಡಾಗ ಕಳ, ಕೊಳ್ಳ, (ಕಳ್ ಎಂಬ ಧಾತುವಿಗೆಲ್ಲಿಯೂ ದ್ವಿತ್ವವಿಲ್ಲ) ಎಂಬ ರೂಪಗಳನ್ನು ಪಡೆದುಕೊಳ್ಳುತ್ತವೆ. ಅನಂತರ ಕಳನು ಕೊಳ್ಳದು ಎಂಬಿತ್ಯಾದಿ ರೂಪಗಳನ್ನು ಸಾಧಿಸಿಕೊಳ್ಳಬಹುದು. ಇವುಗಳಂತೆ 'ಉಳ್' ಎಂಬುದಕ್ಕೆ ಅಂತಹ ರೂಪವು ಬರಬಹುದೆ? ಕಳ್, ಕೊಳ್, ಮುಂತಾದವುಗಳನ್ನು ಒಂದು 'ಗಣ' ದಲ್ಲಿ ಸೇರಿಸಿಕೊಳ್ಳಬಹುದಾದಂತೆ ಉಳ್ ಎಂಬುದನ್ನೂ ಅದೇ 'ಗಣಕ್ಕೆ' ಸೇರಿಸಿಕೊಳ್ಳಬಹುದು ಎನ್ನುವಂತಿಲ್ಲ. ಇವೆಲ್ಲ ಒಂದೇ 'ಗಣ'ಕ್ಕೆ ಸೇರಿದ ಧಾತುಗಳಾಗಿರುತ್ತಿದ್ದರೆ ಕೇಶಿರಾಜನು 'ಉಳ್' ಎಂಬ ಒಂದು ಧಾತುವನ್ನೆತ್ತಿಕೊಂಡು ಈ ರೀತಿ ಹೇಳುತ್ತಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಅವತರಿಸಿರ್ಕುಮುದುಳ್ ದಧಾ
ತುವಿನ ಳಕಾರಕ್ಕೆ ಣತ್ವಮುಂದುಗೆ ಟುಕಾರಂ..." [6]

ಇದರ ಪ್ರಕಾರ 'ಉಳ್' ಧಾತುವಿಗೆ 'ಉದು' ಎಂಬ ಆಖ್ಯಾತಪ್ರತ್ಯಯವು ಸೇರುವಾಗ. ಳಕಾರಕ್ಕೆ ಣತ್ವವು ಬಂದು ಉದುಗೆ ಟುಕಾರವು ಆದೇಶವಾಗಿ 'ಉಂಟು' ಎಂಬ ಪದವು ನಿಷ್ಪನ್ನವಾಗುತ್ತದೆ. ಉಳಿದ--ಅದೇ 'ಗಣ'ಕ್ಕೆ ಸೇರುವವುಗಳೆಂದು ತೋರಬಹುದಾದ—ಧಾತುಗಳಿಗೆ ಅಂತಹ ರೂಪವುಂಟಾಗುವುದಿಲ್ಲ ಎಂಬುದರಿಂದ ಕೇಶಿರಾಜನ ಕಾಲಕ್ಕೆ 'ಉಳ್' ಎಂಬ ಧಾತು ಪ್ರತ್ಯೇಕತೆಯನ್ನು ಪಡೆದಿತ್ತು ಎಂದು ಹೇಳುವಂತಿದೆ. ಮುಂದಣ (256ನೆಯ) ಸೂತ್ರದ ವೃತ್ತಿಯಲ್ಲಿ "ಉಂಟೆಂಬುದರ್ಕೆಲ್ಲಮಂತೆ ಪ್ರತಿಷೇಧವಾಗಿ ಇಲ್ಲೆಂದಾಯ್ತು" (ಉಂಟು ಎಂಬುದಕ್ಕೆ ಎಲ್ಲವುಗಳಂತೆ ಪ್ರತಿಷೇಧವಾಗಿ ಇಲ್ಲ ಎಂದಾಯಿತು) ಎಂದಿದೆ. ಇದರಿಂದಲೂ ಉಳ್ ಎಂಬುದು ಕಳ್. ಕೊಳ್ ಎಂಬ ಧಾತುಗಳಂತಲ್ಲವೆಂದು ಸ್ಫುಟವಾಗುತ್ತದೆ.

ಕನ್ನಡವೂ ಜೀವಂತಭಾಷೆಯಾದುದರಿಂದ 'ಉಳ್' ಎಂಬ ಧಾತುವಿಗೂ ನಿಷೇಧರೂಪವಾಗಿ 'ಉಳ್ಳದ' ಎಂಬ ರೂಪವನ್ನು ನಿಷ್ಪಾದಿಸಿಕೊಂಡು ಭಾಷೆಯನ್ನು ಬೆಳೆಯಿಸೋಣವೆಂದು ಹೇಳುವವರೂ ಇರಬಹುದು. ಇದುಮಾತ್ರ ಸಮಂಜಸವೆಂದು ತೋರುವುದಿಲ್ಲ. ಏಕೆಂದರೆ 'ತುಳು' ಭಾಷೆಯಲ್ಲಿಯೂ ಉಂಡು (ಉಂಟು) ಎಂಬುದಕ್ಕೆ ನಿಷೇಧರೂಪವಾಗಿ 'ಇದ್ದಿ' (ಇಜ್ಜಿ) ಎಂಬ ರೂಪವಿದೆಯೇ ಹೊರತು ಉಳ್ ಎಂಬ ಮೂಲದ ನಿಷೇಧರೂಪವಿಲ್ಲ. ಒಂದು ವೇಳೆ ಆ ರೀತಿ ಪದಸಿದ್ಧಿಯನ್ನು ಮಾಡಿಕೊಳ್ಳಬಹುದೆಂದಾದರೆ ಕೇಶಿರಾಜನು ಸೂಚನೆ ಸಹ ಕೊಡುತ್ತಿರಲಿಲ್ಲ ಎಂದೇ ತೋರುತ್ತದೆ.

ಮುಂದೆ ಕೊಟ್ಟಿರುವ ವಾಕ್ಯಯುಗ್ಮವನ್ನು ಪರಿಶೀಲಿಸಿರಿ:–

1. ಆಲೋಚನೆ ನಡೆಯುದ ಹೊರತು. ನಡೆದಿರದ ಹೊರತು. ಮಾತು ಮೂಡಲಾರದು, ಹೊಮ್ಮಲಾರದು.

2. ಸಂಸ್ಕೃತ ಶ್ಲೋಕವನ್ನೊ ಇಂಗ್ಲಿಷ್ ವಾಕ್ಯವನ್ನೊ ಸೇರಿಸಿದ ಹೊರತು ಬರವಣಿಗೆ ಸೊಗಸುವುದಿಲ್ಲ

ಈ ಎರಡೂ ವಾಕ್ಯಗಳಲ್ಲಿ 'ಹೊರತು' ಎಂಬುದರ ಹಿಂದಿರುವ ಪದಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು. ಮೊದಲಿನ ವಾಕ್ಯದಲ್ಲಿ 'ನಡೆಯುದ' ಮತ್ತು 'ನಡೆದಿರದ' ಎಂಬ ನಿಷೇಧರೂಪಗಳ ಮುಂದೆ 'ಹೊರತು' ಎಂಬುದರ ಪ್ರಯೋಗವಾಗಿದೆ. ಮತ್ತಿನವಾಕ್ಯದಲ್ಲಿ 'ಸೇರಿಸಿದ' ಎಂಬ ನಿಯತ (Positive) ರೂಪವೇ ಇದೆ. ಮೇಲಿನ ಎರಡುರೂಪಗಳಲ್ಲಿ ಯಾವುದು ಸರಿ, ಎರಡೂ ಸರಿಯೆ? ಇರಲಾರದು. 'ಹೊರತು' ಎಂಬ ಅವ್ಯಯವು ನಿಷೇಧವನ್ನು ತಿಳಿಸುವುದರಿಂದ.

---

6 ಶಬ್ದಮಣಿದರ್ಪಣಂ: (ಪಂ: ಡಿ. ಎಲ್. ನರಸಿಂಹಾಚಾರ್). 1959. ಸೂತ್ರ: 255.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರ ಹಿಂದಿರಬೇಕಾದ ಪದವು ನಿಷೇಧರೂಪದಲ್ಲಿರಬಾರದು. ನಿಯತರೂಪದಲ್ಲಿರಬೇಕು ಎಂಬುದನ್ನು ಒಂದು ಸುಲಭೋಪಾಯದಿಂದ ತಿಳಿಯಬಹುದು. ಮೊದಲಿನ ವಾಕ್ಯದ 'ನಡೆಯದ' ಮತ್ತು 'ನಡೆದಿರದ' ಎಂಬೆರಡನ್ನೂ 'ನಡೆಯದೆ' ಮತ್ತು ನಡೆದಿರದೆ' ಎಂದು ಪ್ರಯೋಗಿಸಿದರೆ. 'ಹೊರತು' ಎಂಬುದನ್ನೇ ಬಿಡಬಹುದಾಗುತ್ತದೆ. ಮತ್ತಿನವಾಕ್ಯದಲ್ಲಿ ಹಾಗಾಗುವುದಿಲ್ಲ. ಒಂದು ವೇಳೆ 'ಸೇರಿಸಿ' ಎಂದೇ ನಿಲ್ಲಿಸಿದರೂ ಅರ್ಥವು ಸರಿಯಾಗಿ ಆಗುವಂತಿಲ್ಲ. ಇದರಿಂದ ನಾವು ಒಂದು ನಿಯಮವನ್ನು ಅರ್ಥಮಾಡಿಕೊಳ್ಳಬಹುದು. 'ಹೊರತು' ಎಂಬುದನ್ನು (ವಿನಾ ಎಂಬ ಸಂಸ್ಕೃತದ ಅವ್ಯಯವನ್ನು ಕೂಡ) ಪ್ರಯೋಗಿಸುವಾಗ ಹಿಂದಣ ಪದವು ಪ್ರತಿಷೇಧವನ್ನು ಹೇಳುವ ಪದವಾಗಬಾರದು.

ಮೇಲಿಂದ ಮೇಲೆ ಓದಿದರೆ ತಪ್ಪಿಲ್ಲದಂತೆ ಕಾಣಬಹುದಾದ ಈ ಕೆಳಗಣ ವಾಕ್ಯಗಳ ವಿಮರ್ಶೆಯನ್ನು ಮಾಡಿರಿ:–

1. ಸ್ವಯಂ ನಾನೇ ಅಧಃಪತನವಾಗುವುದು ಸುಲಭ.
2. ಧರ್ಮಕ್ರೋಧ ಹೆಡೆಯೆತ್ತಿದಾಗ ಮನಸ್ಸು ಕ್ಷುಬ್ಧಗೊಳ್ಳುವುದುಂಟು
3. ಅದು ಮಿತಿಯಾಗಿದ್ದು ಶುಚಿಯಾಗಿದ್ದರೆ ಸರಿ.
4. ಅವರು ನೋಡಲು ಸುಂದರವಾಗಿದ್ದಾರೆ.
5. ಇವುಗಳ ಅಧ್ಯಯನದಿಂದ ಮನಸ್ಸು ಮಾರ್ದವವಾಗುತ್ತದೆ.
6. ಅವರು ಊರಲ್ಲೆಲ್ಲ ಪ್ರಸಿದ್ಧಿಯಾಗಿದ್ದಾರೆ.
7. ಭಾಷಣವನ್ನು ಓದಿ ಅತೃಪ್ತಗೊಂಡಿದ್ದ ನನಗೆ ಈ ದಿನ ಸಮಾಧಾನವಾಯಿತು.

ಇವುಗಳಲ್ಲಿ ಆಗು ಮತ್ತು ಕೊಳ್ಳು ಎಂಬ ಧಾತುಗಳಿಂದ ನಿಷ್ಪನ್ನವಾದ ಪದಗಳ ಹಿಂದೆ ಇರುವ ಪದಗಳನ್ನು ಪರಿಭಾವಿಸಿರಿ. ಹಾಗೆಯೇ ಆಗು ಮತ್ತು ಕೊಳ್ಳು ಎಂಬ ಧಾತುಗಳ ಸ್ವಭಾವವನ್ನು ಗ್ರಹಿಸಿಕೊಳ್ಳಿರಿ. ಆಗು ಎಂಬ ಧಾತು ಅಕರ್ಮಕವಾಗಿದ್ದು ಕೊಳ್ಳು ಎಂಬುದು ಸಕರ್ಮಕವಾಗಿದೆ. ಇದನ್ನು ಗಮನಿಸಿದರೆ ಮೇಲಿನ ವಾಕ್ಯಗಳಲ್ಲಿ ಏನು ದೋಷವಾಗಿದೆ ಎಂದು ಗೊತ್ತಾಗುತ್ತದೆ. ಮೊದಲನೆಯ ವಾಕ್ಯದಲ್ಲಿ ಅಧಃಪತನ ಎಂಬುದು ಆಗು ಎಂಬುದರ ಹಿಂದೆ ಬಂದಿರುವುದರಿಂದ ಏನೂ ದೋಷವಿದ್ದಂತೆ ಮೊದಲನೋಟಕ್ಕೆ ಕಂಡುಬರುವುದಿಲ್ಲ. ಇಡಿಯ ವಾಕ್ಯವನ್ನು ಚೆನ್ನಾಗಿ ಪರಿಶೀಲಿಸುವಾಗ 'ನಾನು ಅಧಃಪತನವಾಗುವುದು' ಎಂಬ ಪ್ರಯೋಗವು ಸರಿಯಲ್ಲವೆಂದು ತಿಳಿಯುತ್ತದೆ. 'ನನ್ನ ಅಧಃಪತನವಾಗುವುದು' ಎಂದಿದ್ದರೆ ತಪ್ಪಿಲ್ಲ. ಎಂದರೆ ಆಗು ಎಂಬುದರ ಹಿಂದೆ ನಾಮಪದವಿರುವುದಾದರೆ 'ಅದರ ಹಿಂದಣ' ಪದದ ವಿಭಕ್ತಿ ಬೇರೆಯಾಗಿರಬೇಕಾಗುತ್ತದೆ. ಅಥವಾ 'ನಾನು ಅಧಃಪತನಾಗುವುದು' ಎಂಬ ಪ್ರಯೋಗವಿದ್ದರೂ ತಪ್ಪಾಗುವುದಿಲ್ಲ. ಏಕೆಂದರೆ ಆಗು ಎಂಬುದರ ಹಿಂದೆ ವಿಶೇಷಣ ಪದವಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನು ಎರಡನೆಯ ವಾಕ್ಯದ ವಿಚಾರಕ್ಕೆ ಬರೋಣ: ಉಪವಾಕ್ಯವಾದ 'ಧರ್ಮಕ್ರೋಧ ಹೆಡೆಯೆತ್ತಿದಾಗ' ಎಂಬುದನ್ನು ಬಿಟ್ಟು ಪ್ರಧಾನವಾಕ್ಯವನ್ನು ಮಾತ್ರ ಪರಿಶೀಲಿಸಬೇಕಾದುದು ಪ್ರಕೃತೋದ್ದೇಶ. ಇಲ್ಲಿ 'ಕ್ಷುಬ್ಧಗೊಳ್ಳು' ಎಂಬ ಪದವು ಸರಿಯೇ ಎಂಬುದೇ ಮುಖ್ಯ ಪ್ರಶ್ನೆ. 'ಕೊಳ್ಳು' ಎಂಬುದು ಸಕರ್ಮಕವಾದ ಕಾರಣ 'ಯಾವುದನ್ನು ?' ಎಂಬ ಆಕಾಂಕ್ಷೆ ಇದಕ್ಕೆ ಸಹಜವಾಗಿ ಉಂಟಾಗುತ್ತದೆ. ಆಗ 'ಕ್ಷುಬ್ಧವನ್ನು' ಎಂಬುದೇ ಉತ್ತರವಾಗುತ್ತದೆ. 'ಕ್ಷುಬ್ಧ' ಎಂಬುದು ವಿಶೇಷಣ ರೂಪದಲ್ಲಿದೆ. ನಾಮರೂಪದಲ್ಲಿಲ್ಲ. ನಾಮರೂಪವು 'ಕ್ಷೋಭೆ' ಎಂಬುದು. 'ಕ್ಷೋಭೆಯನ್ನು' ಎಂದು ಆ ಆಕಾಂಕ್ಷೆಗೆ ಉತ್ತರ ಹೇಳುವಾಗ ಅದು ಸಮರ್ಪಕವೆನ್ನಿಸುವುದನ್ನು ಸಾಮಾನ್ಯ ಕನ್ನಡಜ್ಞಾನವುಳ್ಳವನೂ ಒಪ್ಪುತ್ತಾನೆ. ಹಾಗಾಗಿ "ಮನಸ್ಸು ಕ್ಷೋಭೆಗೊಳ್ಳುವುದುಂಟು' ಎಂದು ಆ ವಾಕ್ಯವಿದ್ದರೆ ಶುದ್ಧವಾಗುತ್ತದೆ. 'ಕ್ಷುಬ್ಧ' ಎಂಬುದನ್ನೇ ಉಳಿಸಿಕೊಳ್ಳಬೇಕೆಂಬ ಚಲವಿದ್ದರೆ 'ಮನಸ್ಸು ಕ್ಷುಬ್ಧವಾಗುವುದುಂಟು' ಎಂದು ಬರೆದರೆ ತಪ್ಪಾಗುವುದಿಲ್ಲ. ಏಕೆಂದರೆ ಆಗು ಎಂಬ ಅಕರ್ಮಕ ಕ್ರಿಯಾಪದಕ್ಕೆ ವಿಶೇಷಣ ರೂಪವಾದ 'ಕ್ಷುಬ್ಧ'ವು ಸೇರಿಕೊಳ್ಳುತ್ತದೆ. ಮುಂದಣ (ಮೂರನೆಯ) ವಾಕ್ಯದಲ್ಲಿ 'ಮಿತಿಯಾಗು' 'ಶುಚಿಯಾಗು' ಎಂಬೆರಡು ಪದಗಳಿವೆ. ಮಿತಿಯಾಗು ಎಂಬುದರ ಬದಲು ಮಿತವಾಗು ಎಂದಿದ್ದರೆ ಸರಿಯಾಗುತ್ತದೆ. 'ಶುಚಿಯಾಗು' ಎಂಬುದು ಸರಿಯಾಗಿಯೇ ಇದೆ. ಶುಚಿಯೆಂಬ ವಿಶೇಷಣ ಪದವನ್ನು ಶುಚಿತ್ವ ಎಂದು ನಾಮರೂಪಕ್ಕೆ ಬದಲಿಸಿದರೆ 'ಶುಚಿತ್ವವಾಗು' ಎಂದು ಪ್ರಯೋಗಿಸುವುದು ಸರಿಯಾಗುವುದಿಲ್ಲ; 'ಶುಚಿತ್ವಗೊಳ್ಳು' ಎಂಬುದಾಗಿ ಪ್ರಯೋಗಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಐದನೆಯ ವಾಕ್ಯದ 'ಮನಸ್ಸು ಮಾರ್ದವವಾಗುತ್ತದೆ' ಎಂಬ ಪ್ರಯೋಗವು ಸಾಧುವಲ್ಲ. ಮಾರ್ದವ ಎಂಬುದು ಮೃದು ಎಂಬುದರ ನಾಮರೂಪ. ಮಾರ್ದವ ಎಂಬುದನ್ನೇ ಉಳಿಸಿಕೊಳ್ಳಬೇಕೆಂದಿದ್ದರೆ 'ಆಗು' ಎಂಬುದನ್ನು ಬಳಸದೆ 'ಕೊಳ್ಳು' ಎಂಬುದನ್ನು ಪ್ರಯೋಗಿಸಬೇಕು. ಎಂದರೆ ಆ ವಾಕ್ಯವು 'ಮನಸ್ಸು ಮೃದುವಾಗುತ್ತದೆ' ಎಂದೋ 'ಮನಸ್ಸು ಮಾರ್ದವಗೊಳ್ಳುತ್ತದೆ' ಎಂದೋ ಇರಬೇಕು. ಈ ವ್ಯತ್ಯಾಸವನ್ನು ತಿಳಿದುಕೊಳ್ಳದೆ ಕೆಲವರು ಪ್ರಮಾದವಶಾತ್ 'ಮನಸ್ಸು ಮೃದುಗೊಳ್ಳುತ್ತದೆ' ಎಂದೂ ಬಳಸುತ್ತಾರೆ. ಹಳೆಯ ಕಾವ್ಯಗಳಲ್ಲಿಯೂ ಇಂತಹ ಪ್ರಯೋಗಗಳು ಕಾಣಿಸಿಕೊಳ್ಳುತ್ತವೆ: ಕನ್ನಡ ಜೈಮಿನಿ ಭಾರತದ ಹತ್ತೊಂಬತ್ತನೆಯ ಸಂಧಿಯ 13ನೆಯ ಪದ್ಯವನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು.

ನರನಾಥ ಕೇಳವನಿಸುತೆ ನುಡಿದ ಮಾತಿಗು
ತ್ತರವನಾಡದೆ ಮನದೊಳುರೆ ನೊಂದು ರಾಘವೇ
ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೇಣುಸಿರುದಿರ್ದಪೆನೊ ನಿಷ್ಠುರದೊಳು
....

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿ ಕಷ್ಟ ಎಂಬುದರ ಪ್ರಯೋಗವು ಔಚಿತ್ಯಪೂರ್ಣವಾಗಿಲ್ಲ. ಏಕೆಂದರೆ ಕಷ್ಟವೆಂಬುವು ಇಲ್ಲಿ ವಿಶೇಷಣ ರೂಪದಲ್ಲಿದೆ. ಹಾಗೆಯೆ 'ನಿಷ್ಠುರತೆ' ಎಂಬುದರ ಬದಲು ನಿಷ್ಠುರ ಎಂದಿದೆ. ಮಹಾಕವಿಗಳೇ ಹೀಗೆ ಮಾಡಿದಮೇಲೆ ನಮಗೆ ಅಂತಹ ಪ್ರಯೋಗವು ನಿಷಿದ್ಧವಾಗದೆಂದು ಹೇಳಬಹುದೆ? ಹಾಗೆ ಮಾಡಿದರೆ ಭಾಷೆಯಲ್ಲಿ ಅನವಸ್ಥೆ ಯುಂಟಾಗದೆ? ಆಧುನಿಕರು ಭಾಷಾಂತರಿಸಿದ ಈ ಪದ್ಯವನ್ನು ನೋಡಿರಿ:

ಪ್ರಚಂಡಮಾದ ದಿನಕರಂ ಜಗವನ್ನೆಲ್ಲ ತಪಿಸಿರೆ
ಮನೋಜ್ಞಮಾದ ಹಿಮಕರಂ ತಣುಪನಂತೆ ಸೂಸಿರೆ
....
ಅನಂಗಭಾವದುಲ್ಬಣಂ ಶಮದಗೊಂಡವೋಲಿರೆ

ಇಲ್ಲಿ ದಿನಕರಂ ಮತ್ತು ಹಿಮಕರಂ ಎಂಬವುಗಳು ಪುಲ್ಲಿಂಗರೂಪದಲ್ಲಿದ್ದು ವಿಶೇಷಣವು ಪ್ರಚಂಡಮಾದ ಮತ್ತು ಮನೋಜ್ಞಮಾದ ಎಂದು ನಪುಂಸಕರೂಪದಲ್ಲಿದೆ. ಈ ಎರಡನ್ನೂ ಪ್ರಚಂಡನಾದ ಮತ್ತು ಮನೋಜ್ಞನಾದ ಎಂದು ತಿದ್ದಿದರೆ ಸರಿಹೋಗುತ್ತದೆ. ಮುಂದೆ ಉಲ್ಬಣತೆ ಎಂದಿದ್ದರೆ ತಪ್ಪಾಗುವುದಿಲ್ಲ. ಉಲ್ಬಣಂ ಎಂಬುದು ವಿಶೇಷಣವಾಗಿರುವುದರಿಂದ ಈಗಿರುವಂತೆ ಪ್ರಯೋಗಿಸುವುದು ಸರಿಯಾಗದು.

ಮೇಲೆ ಕೊಟ್ಟ ಏಳನೆಯ ವಾಕ್ಯದಲ್ಲಿ 'ಅತೃಪ್ತಗೊಂಡಿದ್ದ,' ಎಂದಿರುವ ಪದವನ್ನು ಅತೃಪ್ತಿಗೊಂಡಿದ್ದ ಎಂದು ಸರಿಪಡಿಸಿಕೊಳ್ಳಬಹುದು ; ಅಥವಾ ಅತೃಪ್ತವಾಗಿದ್ದ ಎಂದು ಪ್ರಯೋಗಿಸಬಹುದು. ಉಳಿದ ವಾಕ್ಯಗಳಲ್ಲಿಯೂ ಇಂತಹ ಪ್ರಯೋಗಗಳಿರುವುದನ್ನು ಪರೀಶಿಲಿಸಿ ತಿಳಿದುಕೊಳ್ಳಬಹುದು.

ಕೆಲವು ವಾಕ್ಯಗಳ ರಚನೆ ಹೀಗಿರುತ್ತದೆ.—

1. ಈ ಅಕ್ಷರ ಒಂದೊಂದು ಸಲ ವಕಾರವಾಗಿ ಬರೆದಿರುತ್ತದೆ.
2. ಈ ಲಿಪಿಯನ್ನು ಮಸಿಯಲ್ಲಿ ಬರೆದಿರುತ್ತದೆ.
3. ಕೆಲವು ಪದಗಳನ್ನು ಅಧಿಕವಾಗಿ ಹಾಕಿದೆ.

ಈ ಮೂರು ವಾಕ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ 'ಬರೆದವರ ಅಭಿಪ್ರಾಯವು ಇಲ್ಲಿನ ಪ್ರಯೋಗಗಳಲ್ಲಿ ಸಾಕಷ್ಟು ಸ್ಪಷ್ಟವಾಗಿರುವಂತೆ ಕಾಣುವುದಿಲ್ಲ. ಮೊದಲನೆಯ ವಾಕ್ಯದಲ್ಲಿ "ಈ ಅಕ್ಷರವನ್ನು ಒಂದೊಂದು ಸಲ ವಕಾರವಾಗಿ ಬರೆಯಲಾಗುತ್ತದೆ." ಎಂಬ ಅರ್ಥವನ್ನು ಆ ರೀತಿ ಬರೆಯಲಾಗಿದೆ. ಇದ್ದ ಹಾಗೆ ಅರ್ಥಮಾಡಹೊರಟರೆ ಈ "ಅಕ್ಷರ" ಎಂಬುದು ಪ್ರಥಮೈಕ ವಚನದಂತಿದ್ದು ಬರೆದಿರುತ್ತದೆ ಎಂಬುದಕ್ಕೆ ಕರ್ತೃಪದವೆಂಬ ಭ್ರಾಂತಿಯನ್ನು ಹುಟ್ಟಿಸುತ್ತದೆ. 'ಬರೆ' ಎಂಬ ಧಾತು ಸಕರ್ಮಕವಾದುದರಿಂದ ಇದಕ್ಕೆ 'ಅಕ್ಷರ' ಎಂಬ ಕರ್ತೃಪದವಿದ್ದಂತೆ ಭಾಸವಾಗಿ ಕರ್ಮಪದವಾವುದು ಎಂದು ಹುಡುಕುವುದಕ್ಕೆ ಈ ಮಾತು ಅವಕಾಶಕೊಡುತ್ತದೆ. ಪ್ರಥಮಾ ವಿಭಕ್ತಿಯ ಪ್ರತ್ಯಯವನ್ನು ಸರ್ವತ್ರ ಬಿಟ್ಟೇ ಬಳಕೆ ಮಾಡುವ ರೂಢಿ ಪ್ರಬಲಿಸುತ್ತಾ ಇರುವಾಗ ಈ ರೀತಿ ಆಗುವುದು ಆಶ್ಚರ್ಯವೇನೂ ಅಲ್ಲ. "ವ್ಯಾಕರಣ ಭಾಷೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಳವಣಿಗೆಗೆ ಅಡ್ಡಿಯಿಲ್ಲ" ಎಂಬ ವಾಕ್ಯದಲ್ಲಿ ಕರ್ತೃಪದವಾದ "ವ್ಯಾಕರಣ" ಎಂಬುದಕ್ಕೆ ಪ್ರಥಮಾವಿಭಕ್ತಿ ಪ್ರತ್ಯಯವನ್ನು ಸೇರಿಸದ ಕಾರಣ ಇಲ್ಲಿ "ವ್ಯಾಕರಣ ಭಾಷೆ" ಎಂದು ಸಮಸ್ತ ಪದವನ್ನಾಗಿ ಭ್ರಮಿಸುವ ಸಂಭವವೂ ಇದೆ. ದೂರ ದೂರವಾಗಿ ಬರೆದುದರಿಂದ ಎರಡೂ ಭಿನ್ನಪದಗಳೆಂದು ಗ್ರಹಿಸಬೇಕಾಗಿದೆ. ಹೀಗೆ ಭಿನ್ನಪದವೆನ್ನಿಸುವಾಗ ಓದುವಲ್ಲಿ ಪ್ರಥಮಾವಿಭಕ್ತಿಯ ಪದವನ್ನುಚ್ಚರಿಸಿ ಒಂದು ಬಗೆಯ ಆಘಾತ (accent)ವನ್ನು ಕೊಟ್ಟು ಅದು ಪ್ರಥಮಾ ವಿಭಕ್ತಿಯ ಪದವೆಂಬುದನ್ನು ಕಾಣಿಸಬೇಕಾಗುತ್ತದೆ. ಹೀಗೆ ಪ್ರಯೋಗಿಸುವುದಕ್ಕಿಂತ "ವ್ಯಾಕರಣವು ಭಾಷೆಯ ಬೆಳವಣಿಗೆಗೆ ಅಡ್ಡಿಯಿಲ್ಲ" ಎಂದು ಪ್ರಯೋಗಿಸಿದರೆ ಹಾನಿಯೇನು ? ಇದರಂತೆ "ರಾಜ ಸಿಂಹಾಸನವನ್ನೇರಿದನು" ಎಂದಿದ್ದರೆ ಆಘಾತ ಕೊಡದೆ ಸಂಧಿಮಾಡಿ ಓದುವಾಗ "ರಾಜ ಸಿಂಹಾಸನವನ್ನೇರಿದನು" ಎಂದಾಗಿ ಕರ್ತೃಪದದ ಆಕಾಂಕ್ಷೆಯೊದಗುತ್ತದೆ. ಪ್ರಥಮಾವಿಭಕ್ತಿಯನ್ನು ಬಿಟ್ಟೇ ಪ್ರಕೃತಿ ಶಬ್ದವನ್ನೇ ಪ್ರಯೋಗಿಸುವುದು ಕ್ರಮ. ಪ್ರಾಪ್ತವೆನ್ನುವುದಾದರೊ ಕರ್ಮಪದವನ್ನು ದ್ವಿತೀಯಾ ವಿಭಕ್ತಿ ಪ್ರತ್ಯಯ ರಹಿತವಾಗಿ ಬಳಸಬಹುದು ಎಂಬುದಕ್ಕೆ ಎಷ್ಟೊ ದೃಷ್ಟಾಂತಗಳನ್ನು ಕೊಡಬಹುದು.

1. ಒಂದು ಕಾಗದ ಟಪ್ಪಾಲುಪೆಟ್ಟಿಗೆಯೊಳಗೆ ಹಾಕುವಾಗ ಅದರಲ್ಲಿ ಫ್ರಂ ಎಡ್ರೆಸ್ಸು ಮತ್ತು ಟು ಎಡ್ರೆಸ್ಸು ಸರಿಯಾಗಿ ಬರೆದಿದ್ದರೆ......

2. ಹೊಟ್ಟೆತುಂಬಿಸುವುದಕ್ಕಾಗಿ ಇಂದೂ ಕೂಡ ಅನ್ಯರ ಮುಖ ನಾವು ನೋಡುವಂತಾಯಿತು.

3. ತಾಯಿಯ ಬಗ್ಗೆ ಅಪಾರ ಗೌರವ ಮನುಷ್ಯ ತೋರಿಸಬೇಕು.

4. ಜಾತಿಯ ವಿಭಾಗ ಅಷ್ಟು ಸುಲಭದಲ್ಲೇ ಮಾಡಲು ಬರುವುದಿಲ್ಲ.

5. ಆ ಅಭ್ಯಾಸ ಮಗುವಿಗೆ ಕಲಿಸದೆ ಹೋದರೆ......

ಈ ಐದು ವಾಕ್ಯಗಳಲ್ಲಿ (ವಾಕ್ಯಖಂಡವನ್ನೂ ವಾಕ್ಯವೆಂದೇ ಅಂಗೀಕರಿಸಲಾಗಿದೆ. ಕರ್ಮಪದವು ದ್ವಿತೀಯಾ ವಿಭಕ್ತಿ ಪ್ರತ್ಯಯವಿಲ್ಲದೆ ಪ್ರಯೋಗಗೊಂಡುದನ್ನು ಕಾಣುತ್ತೇವೆ. ಮೊದಲನೆಯ ವಾಕ್ಯವನ್ನು "ಟಪ್ಪಾಲುಪೆಟ್ಟಿಗೆಯೊಳಗೆ ಒಂದು ಕಾಗದ ಹಾಕುವಾಗ..." ಎಂದು ಮಾರ್ಪಡಿಸಿದರೆ ವಾಕ್ಯವನ್ನು "ಕಾಗದ ಹಾಕು". ಎಂಬುದು "ಊಟಮಾಡು" (ಇದನ್ನು ಕೆಲವರು ಊಟಾ ಮಾಡು ಎಂದು ಹೇಳುತ್ತಾರೆ) ಎಂಬುದರಂತೆ ಕ್ರಿಯಾಸಮಾಸವೆಂದು ವ್ಯಾಕರಣಾನುಸಾರವಾಗಿ ಅಂಗೀಕರಿಸಿ ಶುದ್ಧ ಪ್ರಯೋಗವೆಂದು ಒಪ್ಪಿಕೊಳ್ಳಬಹುದು. ಎರಡನೆಯ ವಾಕ್ಯದಲ್ಲಿ "ಹೊಟ್ಟೆ ತುಂಬಿಸು" ಎಂಬುದು ಕ್ರಿಯಾಸಮಾಸವಾಗಿರುವುದರಿಂದ ತಪ್ಪಲ್ಲವಾದರೂ "ಮುಖ ನಾವು ನೋಡುವಂತಾಯಿತು" ಎನ್ನುವಲ್ಲಿ "ಮುಖ"ದ ಮುಂದೆ "ನಾವು" ಬಂದಿರುವುದರಿಂದ ಅದನ್ನು ಕ್ರಿಯಾಸಮಾಸವೆಂದು ಅಂಗೀಕರಿಸುವಂತಿಲ್ಲ. ಮೂರನೆಯ ವಾಕ್ಯದಲ್ಲಿ "ಮನುಷ್ಯ ತೋರಿಸಬೇಕು" ಎಂಬುದನ್ನು ಕ್ರಿಯಾಸಮಾಸವೆಂದು ಪ್ರತಿಪಾದಿಸಿದರೆ, ಇದಕ್ಕೆ ಕರ್ತೃಪದವಾಗಿ "ಅಪಾರ ಗೌರವ" ಇರಬೇಕಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಆ ವಾಕ್ಯಕ್ಕೆ ಅರ್ಥವೇ ಸಂಗತವಾಗುವುದಿಲ್ಲ. ಆದುದರಿಂದ ವಿಭಕ್ತಿಪ್ರತ್ಯಯಗಳನ್ನು ಸೇರಿಸಿಯೇ ಪ್ರಯೋಗಿಸುವುದು ಅರ್ಥಾಭಿವ್ಯಕ್ತಿಗೆ ಅನುಕೂಲವಾಗುವುದಿಲ್ಲವೆ ?

"ಕೆಲವು ಪದಗಳನ್ನು ಅಧಿಕವಾಗಿ ಹಾಕಿದೆ" ಎಂಬುದು ಇನ್ನೊಂದು ಬಗೆಯ ವಾಕ್ಯವಾಗಿದೆ. ಇದರಲ್ಲಿ ಬರುವ "ಹಾಕಿದೆ" ಎಂಬುದು ಹೊಸಗನ್ನಡದಲ್ಲಿ ಅನೇಕರು ರೂಢಿಗೆ ತರುತ್ತಿರುವ ಎನು (ಎನ್) ಎಂಬುದರ ಕೊನೆಯ ಅಕ್ಷರವನ್ನು ಕಳೆದು ಪ್ರಯೋಗಿಸುವ ಉತ್ತಮಪುರುಷೈಕವಚನದ ರೂಪವೆಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಆಗ ಈ ವಾಕ್ಯಕ್ಕೆ "ನಾನು" ಎಂಬುದನ್ನು ಅಧ್ಯಾಹರಿಸಿಕೊಳ್ಳಬೇಕೆಂಬ ಎಣಿಕೆಯುಂಟಾಗುವುದು ಸಹಜ. ಆದರೆ ಇದು "ಕೆಲವು ಪದಗಳನ್ನು ಅಧಿಕವಾಗಿ ಹಾಕಲಾಗಿದೆ" ಎಂಬ ಕರ್ಮಣ್ಯರ್ಥದ ವಾಕ್ಯವಾಗಿದೆ. ಇಂಥವುಗಳನ್ನು ಬಿಟ್ಟರೆ ಕನ್ನಡಕ್ಕೆ ಕೊರತೆಯಾಗದು. "ಈ ಲಿಪಿಯನ್ನು ಮಸಿಯಲ್ಲಿ ಬರೆದಿರುತ್ತದೆ" ಎಂಬ ವಾಕ್ಯದಲ್ಲಿ "ಯಾವುದು" ಎಂಬ ಆಕಾಂಕ್ಷೆಯುಂಟಾಗುವುದಿಲ್ಲವೆ ? ಇದನ್ನು 'ಈ ಲಿಪಿಯನ್ನು ಮಸಿಯಲ್ಲಿ ಬರೆದು ಅದು ಇರುತ್ತದೆ' ಎಂದು ವಿಭಾಗಿಸಿದರೆ ಅಷ್ಟು ತಪ್ಪೆಂದು ಕಾಣಲಾರದು. ಇಲ್ಲಿಯೂ "ಈ ಲಿಪಿಯನ್ನು ಮಸಿಯಲ್ಲಿ ಬರೆಯಲಾಗಿದೆ" ಎಂದು ಮಾರ್ಪಡಿಸಿದರೆ ತಪ್ಪಾಗದು.

ಸಾಮಾನ್ಯವಾಗಿ ಹೊಸಗನ್ನಡದಲ್ಲಿ ಯಾವ ಶಬ್ದವನ್ನೂ ವ್ಯಂಜನಾಂತವಾಗಿ ಪ್ರಯೋಗಿಸುವುದಿಲ್ಲ. ಆದರೆ ಅನ್ಯಭಾಷಾಶಬ್ದಗಳು ವ್ಯಂಜನಾಂತವಾಗಿದ್ದರೆ ಅವುಗಳನ್ನು ಪ್ರಥಮಾವಿಭಕ್ತಿಯ ಏಕವಚನ ಸ್ವರೂಪದಲ್ಲಿ ಇದ್ದಂತೆಯೇ ಇರಿಸಿಕೊಳ್ಳುತ್ತಾರೆ. ಉದಾಹರಣೆಗೆ, ಇಂಗ್ಲೆಂಡ್, ಸೈಕಲ್, ಬೆಲ್, ವಾಷಿಂಗ್ಟನ್ ಮೊದಲಾದವುಗಳನ್ನು ನೋಡಬಹುದು. ಇಂಥವುಗಳ ಮುಂದೆ ಬೇರೆ ಪದಗಳನ್ನು ಸೇರಿಸಿಕೊಂಡಾಗಲೂ ಅವುಗಳ ವ್ಯಂಜನಾಂತ ಸ್ವರೂಪಗಳನ್ನು ಬದಲಿಸುವುದಿಲ್ಲ. ಉದಾಹರಣೆಗೆ. ಇಂಗ್ಲೆಂಡ್ ದೇಶ, ಸೈಕಲ್ ಸವಾರಿ, ಬೆಲ್ ಮಾಡು, ವಾಷಿಂಗ್ಟನ್ ನಗರ ಇತ್ಯಾದಿಯಾಗಿ ಪ್ರಯೋಗವಾಗುವುದಿದೆ. ಆದರೆ ವ್ಯಂಜನಾಂತ ಶಬ್ದಗಳನ್ನು ಕನ್ನಡಕ್ಕೆ 'ಸಮಮಾಡಿ' ತರುವಾಗ ಪ್ರಥಮೈಕವಚನದಲ್ಲಿ ಉಕಾರಾಂತವಾಗಿ ಇರಿಸಿಕೊಳ್ಳುವುದೇ ಉಚಿತತರ. (ಧಾರವಾಡ ಮುಂತಾದ ಉತ್ತರ ಕರ್ಣಾಟಕ ಪ್ರದೇಶಗಳಲ್ಲಿ ಅಕಾರಾಂತವಾಗಿ ಇಂಗ್ಲಂಡ, ಸೈಕಲ, ಇತ್ಯಾದಿಯಾಗಿ ಬಳಸುವುದೇ ಹೆಚ್ಚು ರೂಢಿ. ಹಳಗನ್ನಡ ವ್ಯಾಕರಣದ ಪ್ರಕಾರ ಉಕಾರಾಂತವಾಗಿರುವುದು ವಿಹಿತ) ಆಗ ಇಂಗ್ಲೆಂಡು, ಸೈಕಲು, ಬೆಲ್ಲು, ವಾಷಿಂಗ್ಟನ್ನು ಎಂಬ ರೂಪಗಳುಂಟಾಗುತ್ತವೆ. ಉಕಾರವು ಸೇರುವಾಗ (ಯಾವುದೇ ಸ್ವರವು ಸೇರುವಾಗ) ಕೆಲವೆಡೆ ದ್ವಿತ್ವವಾಗುವುದೂ, ಕೆಲವೆಡೆ ದ್ವಿತ್ವವಾಗದಿರುವುದೂ ವ್ಯಾಕರಣದಲ್ಲಿ ಹೇಳಿದ ವಿಷಯ. ಇಲ್ಲಿ ಈ ವಿಷಯವನ್ನು (ದ್ವಿತ್ವ ವಿಚಾರವನ್ನು) ಹೆಚ್ಚು ವಿವರಿಸ ಹೋಗುವುದಿಲ್ಲ. ಪುಲ್ಲಿಂಗವಾಚಕವಾಗಿದ್ದಲ್ಲಿ ಪ್ರಥಮೈಕವಚನದಲ್ಲಿ ಬೆಲ್ಲನು, ವಾಷಿಂಗ್ಟನ್ನನು ಎಂಬಂತೆ ರೂಪವೊದಗುತ್ತದೆ. ಇತರ ವಿಭಕ್ತಿಪ್ರತ್ಯಯಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇರುವಾಗ ಇಂತಹ ವ್ಯಂಜನಾಂತಗಳು ಯಾವ ರೂಪ ತಳೆಯುತ್ತವೆ ಎಂದು ನೋಡೋಣ

ಪುಲ್ಲಿಂಗವಾದಲ್ಲಿ,

ಏಕವಚನ	ಬಹುವಚನ
ನಿಕ್ಸನ್ನನು	ನಿಕ್ಸನ್ನರು
ನಿಕ್ಸನ್ನನನ್ನು	ನಿಕ್ಸನ್ನರನ್ನು
ನಿಕ್ಸನ್ನನಿಂದ	ನಿಕ್ಸನ್ನರಿಂದ
ನಿಕ್ಸನ್ನನಿಗೆ	ನಿಕ್ಸನ್ನರಿಗೆ
ನಿಕ್ಸನ್ನನಿಂದ	ನಿಕ್ಸನ್ನರಿಂದ
ನಿಕ್ಸನ್ನ(ನ್ನಿ)ನ	ನಿಕ್ಸನ್ನರ
ನಿಕ್ಸನ್ನನಲ್ಲಿ	ನಿಕ್ಸನ್ನರಲ್ಲಿ

ಎಂಬ ರೂಪಗಳು ಸಪ್ತವಿಭಕ್ತಿಗಳ ಏಕ ಮತ್ತು ಬಹುವಚನಗಳಲ್ಲಿ ಬರುತ್ತವೆ.

ಸ್ತ್ರೀಲಿಂಗವಾದಲ್ಲಿ,

ಎಲಿಜಬೆತ್ತಳು	ಎಲಿಜಬೆತ್ತರು
ಎಲಿಜಬೆತ್ತಳನ್ನು	ಎಲಿಜಬೆತ್ತರನ್ನು

ಇತ್ಯಾದಿಯಾಗಿಯೂ

ನಪುಂಸಕಲಿಂಗವಾದರೆ,

ಇಂಗ್ಲೆಂಡು	ಇಂಗ್ಲೆಂಡುಗಳು
ಇಂಗ್ಲೆಂಡನ್ನು	ಇಂಗ್ಲೆಂಡುಗಳನ್ನು

ಇತ್ಯಾದಿಯಾಗಿಯೂ ರೂಪಿಸಿಕೊಳ್ಳಬೇಕಾಗಿದೆ. ಮೂಲ ಶಬ್ದಗಳನ್ನು ವ್ಯಂಜನಾಂತವಾಗಿಯೇ ಇರಿಸಿ ವಿಭಕ್ತಿಪ್ರತ್ಯಯಗಳನ್ನು ಸೇರಿಸಿದರೆ ಅವುಗಳ ರೂಪಗಳು ಕೆಡುವುದು ಬೇರೆ, ಉಚ್ಚಾರ ಕೆಡುವುದು ಬೇರೆ. ನಿಕ್ಸನ್‌ನಿಂದ, ವಾಷಿಂಗ್ಟನ್‌ಗೆ ಎಲಿಜಬೆತ್ತಳಿಂದ, ಎಲಿಜಬೆತ್‌ಗೆ (ಳಿಗೆ). ಇಂಗ್ಲೆಂಡ್‌ನಿಂದ, ಇಂಗ್ಲೆಂಡ್‌ನಲ್ಲಿ ಎಂದು ಮುಂತಾಗಿ ಬರೆದರೆ ಅನುಕ್ರಮವಾಗಿ ನಿಕ್ಸನ್ನಿಂದ, ವಾಷಿಂಗ್ಟನ್ನಿಗೆ, ಎಲಿಜಬೆತ್ಳಿಂದ, ಎಲಿಜಬತ್ಗೆ (ಎಲಿಜಬೆತ್ಳಿಗೆ) ಇಂಗ್ಲೆಂಡ್ನಿಂದ, ಇಂಗ್ಲಂಡ್ನಲ್ಲಿ, ಎಂದು ಉಚ್ಚರಿಸಬೇಕಾಗುತ್ತದೆ. ಪ್ರತ್ಯಯಗಳು 'ನಿಂದ; ನಲ್ಲಿ' ಇತ್ಯಾದಿಗಳೆಂಬಂತೆ ತಪ್ಪಾಗಿ ಗ್ರಹಿಸುವಂತಾಗುತ್ತದೆ. ಬೊಂಬಾಯಿನಲ್ಲಿ, ಮನೇದಲ್ಲಿ ಮುಂತಾದ ಪ್ರಯೋಗಗಳೂ ಸರಿಯಲ್ಲವೆಂದು ವಿಚಾರವಂತರು ತಿಳಿಯಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ವ್ಯಾಕರಣ ಪುಸ್ತಕದಲ್ಲಿ ಹೀಗೊಂದು ವಾಕ್ಯವಿದೆ: "ಕೃಷ್ಣ ಉಪಾಧ್ಯಾಯರು ಹುಡುಗರನ್ನು ಪಾಠಶಾಲೆಯಲ್ಲಿ ಕಲಿಸುತ್ತಾರೆ." ಇದರಲ್ಲಿ "ಕಲಿಸು" ಎಂಬುದು ಸಕರ್ಮಕವಾದುದರಿಂದ "ಹುಡುಗರನ್ನು" ಎಂಬ ಕರ್ಮವನ್ನು ಪ್ರಯೋಗಿಸಿದಂತೆ ತೋರುತ್ತದೆ. ಕಲಿಸು ಎಂಬುದಕ್ಕೆ ಕರ್ಮಪದವಾಗಿ "ಹುಡುಗರು" ಎಂಬುದು ಬರಲಾರದು. ಸಂಸ್ಕೃತದಲ್ಲಿ ದ್ವಿಕರ್ಮಗಳುಳ್ಳ ಕ್ರಿಯಾಪದಗಳಿರುವಂತೆ ಕನ್ನಡದಲ್ಲಿಲ್ಲ. ಕನ್ನಡದಲ್ಲಿ ಒಂದು ಕರ್ಮಪದವಿದ್ದು ಇನ್ನೊಂದು ಬೇರೆ ಕಾರಕವಾಗಿಯೋ ಸಂಬಂಧ ವಾಗಿಯೋ ಇರುತ್ತದೆ. ಮೇಲಿನ ವಾಕ್ಯದಲ್ಲಿ "ಹುಡುಗರನ್ನು" ಎಂಬ ಕರ್ಮ ಪದಕ್ಕೆ ಬದಲಾಗಿ "ಹುಡುಗರಿಗೆ" ಎಂಬ ಸಂಪ್ರದಾನ ಪದವನ್ನು ಪ್ರಯೋಗಿಸಿದರೆ ಅರ್ಥವು ಸುಗಮವಾಗುತ್ತದೆ. ಆಗ "ಕಲಿಸುತ್ತಾರೆ" ಎಂಬ ಆಖ್ಯಾತಪದಕ್ಕೆ ಕರ್ಮವನ್ನೆಲ್ಲಿಂದ ತರುವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. "ಕಲಿಸು" ಎಂಬ ಧಾತುವೇ ಕರ್ಮವಾದ "ವಿದ್ಯೆ," "ಪಾಠ" ಇತ್ಯಾದಿಗಳನ್ನು ಅಧ್ಯಾಹಾರಮಾಡುವುದು ಎಲ್ಲರ ಗಮನಕ್ಕೂ ಬಂದ ವಿಷಯ. ಆದುದರಿಂದ ಆ ವಾಕ್ಯವನ್ನು "ಕೃಷ್ಣ ಉಪಾಧ್ಯಾ ಯರು ಹುಡುಗರಿಗೆ ಪಾಠಶಾಲೆಯಲ್ಲಿ (ಪಾಠ) ಕಲಿಸುತ್ತಾರೆ" ಎಂದು ಪ್ರಯೋಗಿಸಿದರೆ ಸರಿಯಾಗುತ್ತದೆ.

ಒಬ್ಬರು ದ್ವಿಕರ್ಮಕರ್ತರಿ ಪ್ರಯೋಗವು ಕನ್ನಡದಲ್ಲಿಯೂ ಇದೆಯೆಂದು ವಾದಿಸಿದ್ದಾರೆ: ಶಬ್ದಮಣಿ ದರ್ಪಣದಿಂದ ತಮ್ಮ ವಾದಕ್ಕೆ ಸಮರ್ಥನೆಯೆಂದು ಕೆಲವು ಮಾತುಗಳನ್ನೂ ಹೇಳಿದ್ದಾರೆ. ಈ ವಿಷಯವಾಗಿ ಈ ಮಾತನ್ನು ಹೇಳಬಹುದು:

ಶಬ್ದಮಣಿದರ್ಪಣದಲ್ಲಿ ದ್ವಿತೀಯಾವಿಭಕ್ತಿ ಯಾವ ಅರ್ಥದಲ್ಲಿ ಬರುತ್ತದೆ ಎನ್ನುವಲ್ಲಿ "ಇಷ್ಟದೊಳಂ ಅನಿಷ್ಟದೊಳಂ ಕಾಲದೊಳಂ ಅಧ್ವದೊಳಂ ಎಡೆವ ಱಿಯದೆ ದ್ವಿತೀಯೆಯಕ್ಕುಂ" ಎಂದು ಹೇಳಿ "ದೋಹನಾದಿಗಳೊಳ್ ದ್ವಿಕರ್ಮ ಮುಂಟು" ಎಂದು ಹೇಳಿದುದರಿಂದಲೇ ಈ ದ್ವಿಕರ್ಮವು ಕ್ವಚಿತ್ಪ್ರಯೋಗವೆಂದು ಕೇಶಿರಾಜನೇ ತಿಳಿದಿದ್ದನೆಂಬುದು ಸ್ಪಷ್ಟ. ಮಾತ್ರವಲ್ಲ, ಎಷ್ಟೋ ಕವಿಗಳು ಚೆನ್ನಾಗಿ ಸಂಸ್ಕೃತವನ್ನು ಕಲಿತು ಅನಂತರ ಕನ್ನಡದಲ್ಲಿ ಬರೆಯ ಹೊರಟವರು ಎಂಬುದನ್ನು ಮರೆಯಬಾರದು. ಸಂಸ್ಕೃತದ ಪ್ರಯೋಗವನ್ನೇ ಕನ್ನಡಕ್ಕೆ ಭಾಷಾಂತರ ಮಾಡಿದುದು ಅಂಥವರ ಸಂಸ್ಕೃತ ಪಾಂಡಿತ್ಯಕ್ಕೆ ದೃಷ್ಟಾಂತವೆಂದು ವಿಚಾರವಂತರು ತಿಳಿದು ಕೊಳ್ಳುತ್ತಾರೆ. ಕನ್ನಡದ ಸಾಜವನ್ನು ತಿಳಿದವರು ಅಂತಹ ಪ್ರಯೋಗಗಳು ಸಾಧು ವೆಂದು ಹೇಳುವುದಿಲ್ಲ. ಇದಕ್ಕೆ "ಪಂಚಮೀ ವಿಭಕ್ತಿ" ಎಂಬ ಲೇಖನವನ್ನು[7] ಚೆನ್ನಾಗಿ ಅಧ್ಯಯನಮಾಡುವುದು ಒಳ್ಳೆಯದು. ಹಾಗೆಯೇ ಭಟ್ಟಾಕಳಂಕನು ಕನ್ನಡದಲ್ಲಿಲ್ಲದ ಎಷ್ಟೋ ಪ್ರಯೋಗಗಳನ್ನು ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಿಸಿ ತನ್ನ ಶಬ್ದಾನು

---

[7] 'ಬಿಸಗೆ'—ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟವಾದ ಪುಸ್ತಕ: ಭಾಗ 2—ಪು. 109–128.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಸನದಲ್ಲಿ ಸೇರಿಸಿಕೊಂಡಿರುವುದನ್ನು ಕಾಣಬಹುದು. ಸಂಸ್ಕೃತದಲ್ಲಿ ಪ್ರಯೋಗದಲ್ಲಿರುವುದನ್ನೆಲ್ಲ ಕನ್ನಡಕ್ಕೆ ಹಾಗೆಯೇ ತಂದರೆ ಅದು ಕನ್ನಡವಾಗುವುದಿಲ್ಲ. "ಅಹಂ ಗೃಹಂ ಗಚ್ಛಾಮಿ" ಎಂಬ ಸಂಸ್ಕೃತ ವಾಕ್ಯವನ್ನು "ನಾನು ಮನೆಯನ್ನು ಹೋಗುತ್ತೇನೆ" ಎಂದು ಭಾಷಾಂತರ ಮಾಡಿದರೆ ಅದು ಕನ್ನಡವಲ್ಲವೆಂದು ಕನ್ನಡಿಗರು ತಿಳಿಯುತ್ತಾರೆ. ದ್ವಿಕರ್ಮಪ್ರಯೋಗಕ್ಕೆ ಕೊಟ್ಟ ಉದಾಹರಣೆಗಳನ್ನೇ ಕನ್ನಡದಲ್ಲಿ ಸಹಜವಾಗಿ ಪ್ರಯೋಗಿಸಲು ಸಾಧ್ಯವಾಗುವುದೇ ಎಂಬುದನ್ನು ಸ್ವಲ್ಪ ಸಹನೆಯಿಂದ ಪರಿಶೀಲಿಸುವುದು ಒಳ್ಳೆಯದು.

ಕೆಲವೊಮ್ಮೆ ಕೆಲವು ಪ್ರಯೋಗಗಳು ಅಶ್ಲೀಲಾರ್ಥವನ್ನೂ ಕೊಡುತ್ತವೆ :

1. ಮಲಬಾರದ ಕ್ರೈಸ್ತರ ಕೀರ್ತಿ ಬಹುದೂರದವರೆಗೆ ಹಬ್ಬಿತ್ತು.

2. ಇಲ್ಲಿಯ ಎರಡುಲಕ್ಷ ಕ್ರೈಸ್ತರನ್ನು ರೋಮದ ಸಂಪ್ರದಾಯಕ್ಕೆ ಕೂಡಿಸಿಕೊಂಡು...

ಇಲ್ಲಿ ಮೊದಲನೆಯ ವಾಕ್ಯದ ಮೊದಲನೆಯ ಪದವೇ ಅಶ್ಲೀಲಾರ್ಥಕ್ಕೆ ಅವಕಾಶ ಕೊಡುವದಿಲ್ಲವೆ ? ಇದೇ ರೀತಿ ಎರಡನೆಯ ವಾಕ್ಯದ "ರೋಮದ" ಎಂಬುದೂ ಸದರ್ಥವನ್ನು ಕೊಡುವುದು ಕಷ್ಟ. ಎರಡೂ ಕಡೆಯ ಷಷ್ಠಿಯ ಪ್ರತ್ಯಯವನ್ನು ಕಳೆದರೆ 'ಮಲಬಾರ' ಮತ್ತು "ರೋಮ" ಎಂಬ ಪ್ರಕೃತಿರೂಪಗಳುಳಿಯುವುವು. ಅವು ಮೂಲತಃ "ಮಲಬಾರ್" ಮತ್ತು "ರೋಮ" ಎಂಬ ರೂಪಗಳಲ್ಲೇ ರೂಢವಾಗಿದ್ದು ಕನ್ನಡದ ಸ್ವಭಾವದಂತೆ ಅವು ಲಿಂಗವಾಗಬೇಕಾದರೆ "ಮಲಬಾರು" ಮತ್ತು "ರೋಮ್" ಎಂಬ ರೂಪ ಪಡೆಯಬೇಕಾಗುತ್ತದೆ. ಇವುಗಳಿಗೆ ಷಷ್ಠೀ ವಿಭಕ್ತಿ ಪ್ರತ್ಯಯ ಸೇರುವಾಗ "ಮಲಬಾರಿನ" ಮತ್ತು "ರೋಮಿನ" ಎಂಬ ರೂಪಗಳನ್ನು ಪಡೆಯುತ್ತವೆ. ಆ ರೀತಿಯಿದ್ದರೆ ಅಶ್ಲೀಲಾರ್ಥಕ್ಕೆ ಅವಕಾಶವಿರಲಾರದು.

ಕನ್ನಡದ ಪ್ರಯೋಗಗಳಲ್ಲಿ ಇನ್ನೂ ಎಷ್ಟೆಷ್ಟೋ ಸ್ಖಾಲಿತ್ಯಗಳಿರುವುದನ್ನು ತೋರಿಸಿಕೊಡಬಹುದು. ಆದರಿಂದ ಮುಂದಣವರು ಸರಿಯಾದ ಪ್ರಯೋಗಗಳನ್ನು ಮಾಡುತ್ತಾರೆಂದು ಹಾರೈಸುವಂತಿಲ್ಲ. ತಿದ್ದಬೇಕೆಂದು ಹೊರಡುವವರು ಬೇಡದುದಕ್ಕೆ ಕೈಯಿಕ್ಕಿದ್ದಾರೆಂದೇ ದೂರು ಕೇಳಬೇಕಾದೀತು, ಅಷ್ಟೆ. ಆದರೆ ತಿದ್ದಿಕೊಳ್ಳುವ ಮನಸ್ಸುಳ್ಳವರಿಗಾದರೂ ಪ್ರಯೋಜನವಾಗುವುದಿದ್ದರೆ ಆಗಲಿ ಎಂದು ಇಷ್ಟನ್ನು ಹೇಳಲಾಗಿದೆ. ಹೇಳಬೇಕಾದುದು ಇನ್ನೂ ಎಷ್ಟೋ ಉಳಿದಿದೆ. ಅವಕಾಶವಿದ್ದರೆ ಆಸಕ್ತರಿಗೆ - ಅವುಗಳನ್ನು ವಿಶದೀಕರಿಸುವ - ಪ್ರಯತ್ನಮಾಡಬಹುದು ; ಲಾಭ ಪಡೆಯುವುದಿದ್ದರೆ ಪಡೆಯಬಹುದು !

(ಕೃತಜ್ಞತೆ: ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು ೨—ಇಲ್ಲಿಂದ ಪ್ರಕಟವಾಗುವ 'ಕಲಾದರ್ಶನ' ಮಾಸಪತ್ರಿಕೆಯಲ್ಲಿ ಇದರ ಹೆಚ್ಚಿನಂಶ ಪ್ರಕಟವಾಗಿದೆ. ಸಂಬಂಧಪಟ್ಟವರಿಗೆಲ್ಲ ಕೃತಜ್ಞತೆಗಳು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂ. ಚಿದಾನಂದಮೂರ್ತಿ

ಶಬ್ದಕೋಶ ಪ್ರಪಂಚದ ಅಗ್ನಿಕುಂಡ ಬೈಗುಳಗಳು

ಈ ಪ್ರಬಂಧದ ಶೀರ್ಷಿಕೆಯನ್ನು ನೋಡುತ್ತಿದ್ದಂತೆಯೇ ಓದುಗರಿಗೆ ಇದೂ ಕೂಡ ಗಂಭೀರ ಪ್ರಬಂಧವೊಂದರ ವಸ್ತುವಾಗಬಲ್ಲುದೇ ಎಂದು ಸಂದೇಹ ಮೂಡುವುದನ್ನು ನಾನು ಊಹಿಸಿಕೊಳ್ಳಬಲ್ಲೆ. ಹೆಚ್ಚೆಂದರೆ ಇದು—ಎಂದರೆ ಬೈಗುಳಗಳ ವಿಷಯ—ಒಂದು ಲಘುಹರಟೆಗೆ ಅಥವಾ ವಿನೋದ ಪ್ರಬಂಧಕ್ಕೆ ಸಾಮಗ್ರಿಯನ್ನು ಒದಗಿಸುತ್ತದೆ ಎಂದೇ ಬಹುಜನರ ಅಭಿಪ್ರಾಯ. ಯಾವುದೇ ಭಾಷೆಯ ಶಬ್ದ ಕೋಶವನ್ನು ತೆಗೆದುಕೊಂಡರೂ ಅಲ್ಲಿ ಬೈಗುಳಕ್ಕೆ ಸಂಬಂಧಿಸಿದ ಉಕ್ತಿಗಳು ಬಹು ಮುಖ್ಯವಾಗಿರುತ್ತವೆ. 'ಬಹು ಮುಖ್ಯ' ಎಂಬುದನ್ನು ಪಂಡಿತರ ದೃಷ್ಟಿಯಿಂದ ಹೇಳು ತ್ತಿಲ್ಲ: ಆ ಭಾಷೆಯನ್ನಾಡುವವರ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇಬ್ಬರು ಸೇರಿ ಕುಶಲಪ್ರಶ್ನೆಯ ಮಾತುಗಳನ್ನಾಡುತ್ತಿದ್ದರೆ ಅವನ್ನು ನಿಂತು ಯಾರೂ ಆಲಿಸಲು ಬಯಸುವುದಿಲ್ಲ. ಆದರೆ ಇಬ್ಬರು ಜಗಳವಾಡುತ್ತ ಪರಸ್ಪರ ಬೈಯುತ್ತಿದ್ದರೆ ಅಲ್ಲಿ ಜನ ಸೇರುತ್ತಾರೆ. ಕೆಲವರಿಗಾದರೂ ಮನರಂಜನೆಯಾಗುತ್ತದೆ. ಬೈಗುಳಗಳಿಗೆ ಹೀಗೆ ಜನರ ಗಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿಯಿದೆ. ಈ ಶಕ್ತಿ ಈ ಪ್ರಮಾಣ ದಲ್ಲಿ ಶಬ್ದಭಂಡಾರದ ಇತರ ಯಾವುದೇ ಭಾಗಕ್ಕೂ ಇರುವಂತೆ ತೋರುವುದಿಲ್ಲ. ಬೈಗುಳಗಳು ಅಲ್ಲಿ ನೇರವಾಗಿ ಭಾಗಿಯಾಗುವ ಇಬ್ಬರು ಅಥವಾ ಹಲವರಿಂದ ತೀವ್ರ, ತಕ್ಷಣದ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ. ಶಬ್ದಭಂಡಾರದ ನಿಗಿ ನಿಗಿ ಭಾಗವೇ ಬೈಗುಳಗಳು. ಅವು ಒಂದು ರೀತಿಯಲ್ಲಿ ಪೆಟ್ರೋಲ್ ಇದ್ದಂತೆ ಎಂದೂ ವಿವರಿಸ ಬಹುದು. ಶುದ್ಧಿಮಾಡುವ, ಯಂತ್ರಗಳನ್ನು ಓಡಿಸುವ, ಬೆಂಕಿ ಹತ್ತಿ ಎಲ್ಲವನ್ನೂ ಕ್ಷಣದಲ್ಲಿ ಸುಡುವ ಶಕ್ತಿಗಳು ಎರಡಕ್ಕೂ ಸಮಾನ. ಇಷ್ಟು ಮುಖ್ಯವಾಗಿರುವ ಬೈಗುಳಗಳ ಬಗ್ಗೆ ಗಂಭೀರವಾಗಿ ಯೋಚಿಸಲು ಅವಕಾಶವಿಲ್ಲದಿದ್ದರೆ, ಇನ್ನಾವುವರ ಬಗ್ಗೆ ಅವಕಾಶವಿದೆ ಯೆಂದು ಕೇಳಬೇಕಾಗುತ್ತದೆ. ಬೈಗುಳ ಶಬ್ದಗಳ ಬಗ್ಗೆ ಕನ್ನಡದಲ್ಲಿ ಒಂದೆರಡು ಚಿಕ್ಕ ಬಿಡಿ ಲೇಖನಗಳನ್ನು ಬಿಟ್ಟರೆ ಹೆಚ್ಚು ಬರಹ ಬಂದಿಲ್ಲವೆಂಬುದು ಸ್ಪಷ್ಟ. ಇನ್ನೂ ಹೆಚ್ಚು ಹೆಚ್ಚಾದ ಶಾಸ್ತ್ರೀಯ ವಿವೇಚನೆ ನಡೆಯುವುದಕ್ಕೆ ಪ್ರಚೋದಕವಾಗಲಿ ಎಂಬ ಉದ್ದೇಶದಿಂದ ಈ ಲೇಖನವನ್ನು ಬರೆದಿದ್ದೇನೆ.

ಬೈಗುಳ ಎನ್ನುವುದು ಬರಿಯ ಕೆಟ್ಟಮಾತಲ್ಲ. ಬೈಗುಳಗಳೆಲ್ಲವೂ ಕೆಟ್ಟಮಾತುಗಳು[1] ನಿಜ; ಆದರ ಕೆಟ್ಟಮಾತೆಲ್ಲವೂ ಬೈಗುಳಗಳಲ್ಲ. ಸ್ತ್ರೀಪುರುಷರ ಗುಪ್ತಾಂಗಗಳನ್ನು

---

[1] 'ಕೆಟ್ಟ' ಎಂಬುದು ಬಹುವಾದ ಸಾಪೇಕ್ಷಾರ್ಥದ ಪದ—ಯಾವುದು ಕೆಟ್ಟದು, ಯಾವುದು ಅಲ್ಲ ಎಂಬುದನ್ನು ಸಾಪೇಕ್ಷವಾಗಿ, ಯಾದೃಚ್ಛಿಕವಾಗಿ ಮಾತ್ರ ನಿರ್ಧರಿಸಲು ಸಾಧ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನೇಕ ಸಮಾಜಗಳು 'ಅಶ್ಲೀಲ'ವೆಂದು 'ಹೊಲ'ಸೆಂದು ಕೆಟ್ಟಮಾತೆಂದು ಭಾವಿಸುತ್ತವೆ. ಅವುಗಳನ್ನು ಸಹಜ ಸಂಭಾಷಣೆಗಳಲ್ಲಿ ಬಳಸುವ ಬಗ್ಗೆ ಸಾಮಾಜಿಕ ನಿರ್ಷೇಧಗಳಿರುತ್ತವೆ. ಆದರೆ ಅವು ತಮಗೆ ತಾವೇ ಬೈಗುಳಲ್ಲ— ಆದರೆ ಬೈಗುಳದ ಭಾಗವಾಗಿ ಅವು ಬರಬಹುದು. ಬೈಗುಳನ್ನು ಶಾಬ್ದಿಕವಾದ ಹೊಡೆತ ಎನ್ನಬಹುದು. ಹೊಡೆತವು ದೈಹಿಕ ವಾದುದು—ತನಗೆ ಆಗದವನಿಗೆ ದೈಹಿಕವಾಗಿ ನೋವುಂಟುಮಾಡುವುದು ಹೊಡೆತದ ಉದ್ದೇಶವಾದರೆ, ಬೈಗುಳದ ಉದ್ದೇಶ ತನ್ನ ಶತ್ರುವಿಗೆ ಮಾನಸಿಕವಾಗಿ ನೋವುಂಟುಮಾಡು ವುದು. ಹೊಡತಕ್ಕೆ ಇರುವ ವಿಧಾನ ಒಂದೇ—ತನ್ನ ಕೈಯಿಂದ ಇನ್ನೊಬ್ಬನ ದೇಹವನ್ನು ಮುಟ್ಟಲೇಬೇಕು. ಒಬ್ಬ ಮನುಷ್ಯ ಇನ್ನೊಬ್ಬನನ್ನು ಇಲ್ಲವೇ ಹೊಡೆಯುತ್ತಾನೆ ಅಥವಾ ಹೊಡೆಯುವುದಿಲ್ಲ. ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವಾದುದು: ಸಂಕೀರ್ಣ ವಾದುದು ಮತ್ತು ನುಣುಚಿಕೊಳ್ಳಲು ಅವಕಾಶವೀಯುವಂತಹದು ಎಂದರೆ ಒಬ್ಬ ಇನ್ನೊಬ್ಬನನ್ನು ಬೈದರೂ ತಾನು ವಾಸ್ತವವಾಗಿ ಬೈಯಲಿಲ್ಲವೆಂದೂ ತನ್ನ ಮಾತಿನ ಅರ್ಥ ಬೇರೆಯೆಂದೂ ವಾದಿಸಬಹುದು. ಮತ್ತು ವ್ಯಕ್ತಿ ಕಣ್ಣ ಮುಂದಿಲ್ಲದಿದ್ದರೂ ಅವನಿಗೆ ಬೈಗುಳದ ಏಟು ಮುಟ್ಟುವಂತೆ ಮಾಡಬಹುದು. ಹೊಡೆತದ ನೋವನ್ನು ಮನುಷ್ಯ ಮರೆಯಬಹುದು; ಆದರೆ ಬೈಗುಳದ ನೋವು ಅಷ್ಟು ಸುಲಭವಾಗಿ ಹೋಗುವಂತಹುದಲ್ಲ. ಒಮ್ಮೊಮ್ಮೆ ಜೀವನದ ಉದ್ದಕ್ಕೂ, ಅಂತ್ಯದವರೆಗೂ ಅದು ವ್ಯಕ್ತಿಯನ್ನು ಹಿಂಬಾಲಿಸಿಕೊಂಡು ಬರಬಹುದು. 'ಶಬ್ದವೇ ಕ್ರಿಯೆ' ಎಂಬುದನ್ನು ಅರ್ಥಮಾಡಿಕೊಳ್ಳಲು ಬೈಗುಳಕ್ಕಿಂತ ಒಳ್ಳೆಯ ಉದಾರಣೆ ದೊರಕಲಾರದು.

ಒಬ್ಬ ವ್ಯಕ್ತಿಯ ಬಗ್ಗೆ ಪ್ರಶಂಸೆಯ ಮಾತನ್ನಾಡಬೇಕಾದರೆ ಆತನ ಬಗ್ಗೆ ನಮಗೆ ಗೊತ್ತಿರಬೇಕು. ಆದರೆ ಬೈಗುಳ ಹಾಗಲ್ಲ. ಯಾರ ಬಗ್ಗೆಯೂ ಏನೂ ಬೇಕಾದರೂ ಅನ್ನಬಹುದು. ಪ್ರಶಂಸೆ ನಿಜವಾಗಿದ್ದರೆ ಮಾತ್ರ ಅದಕ್ಕೆ ಬೆಲೆ. ಆದರೆ ಬೈಗುಳವು 'ಬೆಲೆ' ಪಡೆಯಬೇಕಾದರೆ ಅದು ಸತ್ಯವೇ ಆಗಿರಬೇಕಿಲ್ಲ ಎಂದರೆ ಬೈಗುಳ ನಿಜವೇ ಆಗಿರಬೇಕಾಗಿಲ್ಲ. ಹೊಗಳಿಕೆ. ಒಂದು ವೇಳೆ ಸುಳ್ಳಾಗಿದ್ದರೂ, ಅದನ್ನು ಸಾಮಾನ್ಯ ವಾಗಿ ನಿರಾಕರಿಸುವುದಿಲ್ಲ. ಆದರೆ ಬೈಗುಳ. ಒಂದು ವೇಳೆ ನಿಜವೇ ಆಗಿದ್ದರೂ ಸಾಮಾನ್ಯವಾಗಿ ಒಪ್ಪಿಕೊಳ್ಳುವುದಿಲ್ಲ. ಪ್ರಶಂಸೆ ಮತ್ತು ಬೈಗುಳಗಳಿಗೆ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಪ್ರಶಂಸೆ ನಮಗೆ ತಿಳಿದಿರುವ ವ್ಯಕ್ತಿಗಳ ಬಗ್ಗೆ ಮಾತ್ರ ಆದರೆ ಬೈಗುಳವನ್ನು ನಮಗೆ ತಿಳಿಯದ ಎಂದರೆ ಈ ಮೊದಲೆ ಪರಿಚಯವಿರದ, ಈಗತಾನೇ ನೋಡಿದ ವ್ಯಕ್ತಿಯ ಬಗ್ಗೆ ಬೇಕಾದರೂ ಆಡಬಹುದು ಪ್ರಶಂಸೆ ಅಥವಾ ಹೊಗಳಿಕೆಗೆ ತನ್ನದೇ ಆದ ಭಾಷೆ ಅಥವಾ ನುಡಿಗಟ್ಟುಗಳು ಇರುವಂತೆ ತೋರುವುದಿಲ್ಲ, ಆದರೆ ಬೈಗುಳಕ್ಕೆ ತನ್ನದೇ ನುಡಿಗಟ್ಟುಗಳು ಉಂಟು- ಅವುಗಳನ್ನು ಬಳಸುವವರು ಬೇರೆ ಬೇರೆ ರೀತಿಗಳಲ್ಲಿ ಜೋಡಿಸಿ ಅವಕ್ಕೆ ಹೊಸತನವನ್ನು ತಂದುಕೊಡುತ್ತಾರೆ (ಮುಂದೆ ಬರುವ ಗಾದೆ ಬೈಗಂಳ ಬಗ್ಗೆ ನೋಡಿ). ಬೈಗುಳದ ಭಾಷೆಗೆ ತನ್ನದೇ ವ್ಯಕ್ತಿತ್ವವುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೈಗುಳಗಳು ಕತ್ತಿಯಿದ್ದಂತೆ—ಅವುಗಳನ್ನು ಹೇಗೆ ಬೇಕೆಂದರೆ ಹಾಗೆ ಬಳಸಲು ಬರುವುದಿಲ್ಲ; ಅವುಗಳನ್ನು ಬಳಸುವವನು ಎಚ್ಚರಿಕೆಯಿಂದಿರಬೇಕು. ಏಕೆಂದರೆ, ಅವುಗಳ ಬೇಕಾಬಿಟ್ಟಿ ಬಳಕೆಯಿಂದ ಇತರರಿಗೆ ಹೇಗೋ ಅಷ್ಟೇ ಅವನಿಗೂ ಅಪಾಯ ಉಂಟು.

ವಾಸ್ತವವಾಗಿ ಬೈಗುಳ ಫಲಕಾರಿಯಾಗುವುದು ಇಬ್ಬರು—ಬೈದವನು ಮತ್ತು ಬೈಸಿಕೊಂಡವನು—ಅದರಲ್ಲಿ ಪಾಲುಗಾರರಾದಾಗ. ಒಬ್ಬ ಬೈದು ಇನ್ನೊಬ್ಬ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಇರುವ ಸಂಭವವುಂಟು. ವಯಸ್ಸಾಗಿ ಇತರರ ಉಪೇಕ್ಷೆಗೆ ಈಡಾದವರು ಬಹಳವಾಗಿ ಬೈಯುವವರು, ಹುಚ್ಚರು. ಇವರ ಬೈಗುಳಗಳು ಬಹಳ ಸಾರಿ ವ್ಯರ್ಥವಾಗುತ್ತವೆ. ಇಂತಹ ಸಂದರ್ಭದಲ್ಲಿ ಬೈದವನಿಗೆ ತನ್ನ ಆ ಬೈಗುಳವು ಪ್ರತಿಕ್ರಿಯೆ ಮಾಡದೇ ಹೋದಾಗ ಪೆಚ್ಚಾಗಬಹುದು. ಬೈಗುಳಕ್ಕೆ ಪ್ರತಿಕ್ರಿಯೆ ತೋರಿಸದೆ ಇರುವುದು ಬೈದವನ ಬಗ್ಗೆ ಇನ್ನೊಬ್ಬ ವ್ಯಕ್ತಿಗೆ ಇರುವ ಅಸಡ್ಡೆ ಅಥವಾ ತಿರಸ್ಕಾರ ಅಥವಾ ಲಘುಭಾವನೆಯ ಸಂಕೇತವಾಗಿರಬಹುದು.

ಬೈಗುಳದ ಸನ್ನಿವೇಶಗಳನ್ನು ಪಟ್ಟಿಮಾಡುವುದು ಕಷ್ಟ ಮತ್ತು ಅನಗತ್ಯವೂ ಹೌದು. ವ್ಯಕ್ತಿಯ ದೇಹ ಅಥವಾ ಮನಸ್ಸಿಗೆ ಯಾತನೆ ಅಥವಾ ನೋವು ಅಥವಾ ಬೇಸರ ಉಂಟುಮಾಡುವ ಯಾವುದೇ ಸನ್ನಿವೇಶವು ಬೈಗುಳನ್ನು ಸೃಷ್ಟಿಸಬಹುದು. ದೈಹಿಕವಾಗಿ ನಾವು ಪ್ರತಿಕ್ರಿಯೆ ತೋರಲು ಅಸಮರ್ಥರಾದರೆ ಆಗ ನಮ್ಮ ದೌರ್ಬಲ್ಯವನ್ನು ಬೈಗುಳದ ಮೂಲಕ ಮುಚ್ಚಿಡುವ ಪ್ರಯತ್ನ ಮಾಡಬಹುದು ಅಲ್ಲಿಯೂ ಅದು ಒಂದು ಬಗೆಯ ದೌರ್ಬಲ್ಯದ ಸಂಕೇತವಾಗಬಹುದು. ದೈಹಿಕವಾಗಿ ಅಥವಾ ಮಾನಸಿಕವಾಗಿ ಬಲಿಷ್ಠ ಅಥವಾ ಸ್ವಸ್ಥರಾದವರ ಬಾಯಿಂದ ಬೈಗುಳಗಳ ಸಂಖ್ಯೆ ಕಡಿಮೆಯೆಂಬುದು ಇಲ್ಲಿ ಲಕ್ಷಿಸತಕ್ಕ ಅಂಶವಾಗಿದೆ.

ಬೈಗುಳ ವೈಯಕ್ತಿಕವಾದರೂ ಅದಕ್ಕೆ ಸಾಮಾಜಿಕ ಒಪ್ಪಿಗೆ ಬೀಳದೆ ಅದಕ್ಕೆ ಬೈಗುಳದ ಪ್ರಶಸ್ತಿ ದೊರಕಲಾರದು. ಯಾವುದು ಬೈಗುಳ ಯಾವುದು ಅಲ್ಲ ಎಂಬುದನ್ನು ನಿರ್ಧರಿಸುವುದು ಸಮಾಜ, ಆ ಸಮಾಜದ ಕಟ್ಟುಪಾಡು ಮತ್ತು ರೀತಿನೀತಿಗಳು (ಇದು ಮುಂದೆ ಇನ್ನೂ ಸ್ಪಷ್ಟವಾಗುತ್ತದೆ). ಸಾಮಾನ್ಯವಾಗಿ ಬೈಗುಳನ್ನು ಬಳಸುವವನು ವ್ಯಕ್ತಿಯೇ ಆದರೂ, ಅಂತಹ ವ್ಯಕ್ತಿಗಳು ಸೇರಿದ ಒಂದು ಗುಂಪು ಇನ್ನೊಬ್ಬನನ್ನು ಅಥವಾ ಇನ್ನೊಂದು ಗುಂಪನ್ನು ಕುರಿತು ಅವನ್ನು ಬಳಸಬಹುದು. ಬೈಗುಳವು ವ್ಯಕ್ತಿಗೆ ಆಗಿರುವ ಆಘಾತದ ಚಿಹ್ನೆಯೆಂಬುದು ನಿಜವಾದರೂ ಅದಕ್ಕೆ ಇನ್ನೂ ಕೆಲವು ನಿಯೋಗಗಳುಂಟು (ನಿಯೋಗ = function). ಆ ನಿಯೋಗಗಳಲ್ಲಿ ಬಹು ಮುಖ್ಯವಾದುವನ್ನು ಇಲ್ಲಿ ಹೆಸರಿಸಬಹುದು.

1. **ಉಪಶಮನ** : ದೇಹಕ್ಕೆ ಅಥವಾ ಮನಸ್ಸಿಗೆ ಆದ ನೋವು ಬೈಗುಳದ ಮೂಲಕ ವ್ಯಕ್ತವಾಗಿ ಸ್ವಲ್ಪ ಸಮಾಧಾನವನ್ನು ಪಡೆಯಬಹುದು. ಇಲ್ಲಿಯೂ ದೇಹಕ್ಕಿಂತ ಮನಸ್ಸೇ ಮುಖ್ಯ. ದೇಹಕ್ಕೆ ನಾವೇ ಅರಿಯದ ಘಾತ ಮಾಡಿಕೊಂಡಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೈಗುಳ ಬರುವುದಿಲ್ಲ. ಅಥವಾ ಅರಿಯದೆ ಯಾರೋ ಮಾಡಿದ ತಪ್ಪಿನಿಂದಾಗಿ, ಅಚಾತುರ್ಯದಿಂದಾಗಿ ನಮಗೆ ನೋವಾದಾಗಲೂ ಬೈಯುವುದಿಲ್ಲ. ಅಥವಾ ಬೈಗುಳ ಬಂದರೂ ಅದು ತಾತ್ಕಾಲಿಕ—ಅಲ್ಲಿ ಮಾನಸಿಕವಾಗಿ ನೋವು ಮುಂದುವರಿಯುವುದಿಲ್ಲ. ಆದರೆ ಬೇಕೆಂದೇ ಯಾರೋ ಮಾಡಿದ ಕಾರ್ಯ ನಮಗೆ ವಿರುದ್ಧವಾಗಿದ್ದರೆ ಆಗ ಬೈಗುಳು ಬರುತ್ತದೆ ಮತ್ತು ಅದು ಮಾನಸಿಕವಾಗಿ ಬಹಳ ಕಾಲ ಮುಂದುವರಿಯಬಹುದು. ಆದ್ದರಿಂದ ಇನ್ನೊಬ್ಬರಿಂದ ಅರಿಯದೆ ನಮಗೆ ಆದ ದೈಹಿಕ ನೋವಿಗಿಂತ ಆತ ದ್ವೇಷ ಭಾವನೆಯಿಂದ ಮಾಡಿದ ಚಿಕ್ಕ ಕಾರ್ಯ—ಒಂದು ಸಣ್ಣ ಏಟು, ಆಡಿದ ಒಂದು ಕೆಟ್ಟಮಾತು—ಬಹಳ ಕಾಲ ಮನಸ್ಸನ್ನು ಕೊರೆಯುತ್ತದೆ. ಮನಸ್ಸಿಗೆ ತೀವ್ರ ನೋವಾದಾಗ ಪ್ರತಿಯಾಗಿ ಬೈದರೆ ಅದರಿಂದ ಎಷ್ಟೋ ಉಪಶಮನವಾಗುತ್ತದೆ. ಬಾಯಿ ಬಿಟ್ಟೇ ಬೈಗುಳಗಳನ್ನು ಆಡಬೇಕಿಲ್ಲ, ಮನಸ್ಸಿನಲ್ಲೇ ಬೈಯಬಹುದು. ಈ ಉಪಶಮನವು ವ್ಯಕ್ತಿ ಮಾಡಬಹುದಾದ ಎಷ್ಟೋ ಅನಾಚಾರಗಳನ್ನು ಅಥವಾ ಅಪ್ರಿಯ ಕಾರ್ಯಗಳನ್ನು ತಡೆಯಬಹುದು.

2. ಸಮತೋಲನ : ಉಪಶಮನದ ಅಗತ್ಯ ಏಕೆ ಎಂದರೆ ವ್ಯಕ್ತಿಯ ಮನಸ್ಸಿಗೆ ಏಟು ಬಿದ್ದು ಅಲ್ಲಿನ ತೋಲನ ತಪ್ಪಿರುವುದು. ತನಗೆ ಅವಮಾನವಾದಾಗ, ಮನಸ್ಸಿನ ಒಂದು ಭಾಗ ಕೆಳಗಿಳಿಯುತ್ತದೆ. ಇತರರ ಕಣ್ಣಲ್ಲಿ ತಾನು ಕೀಳಾದಂತೆ ಭಾಸವಾಗುತ್ತದೆ. ಆಗ ವ್ಯಕ್ತಿಯ ಮನಸ್ಸಿನ ಅಹಂ ಎನ್ನುವುದು ಮೇಲೆದ್ದು ತನ್ನ ಹಿಂದಿನ ಸ್ಥಿತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತದೆ. ಹಾಗೆ ಏಳುವಾಗ ಒಮ್ಮೊಮ್ಮೆ ರಭಸದಿಂದ ಮೇಲೆ ಸಿಡಿಯಲು ಸಾಧ್ಯ. ಆ ರಭಸವು ಬೇರೆ ಬೇರೆ ಶ್ರೇಣಿಯ ಬೈಗುಳದಲ್ಲಿ ವ್ಯಕ್ತವಾಗಬಹುದು. ಬೈಗುಳದಿಂದ ಕೆರಳಿದ ಇನ್ನೊಬ್ಬ ವ್ಯಕ್ತಿ ಅದೇ ವಿಧಾನವನ್ನು ಅನುಸರಿಸಿದಾಗ ಅದಕ್ಕೆ ಕೊನೆಯೆಂಬುದು ಇಬ್ಬರು ತಮ್ಮಲ್ಲಿನ ಶಕ್ತಿಯನ್ನು ಕಳೆದುಕೊಳ್ಳುವವರೆಗೆ ಅಥವಾ ಮಧ್ಯಸ್ಥಿಕೆಗಾರರು (ಸಮಾಜ) ಬಂದು ಅದಕ್ಕೆ ಒಂದು ಮುಕ್ತಾಯವನ್ನು ಕೊಡಲು ಪ್ರಯತ್ನಿಸುವವರೆಗೆ.

3. ಸ್ವರಕ್ಷಣೆ : ಮುಖ್ಯವಾಗಿ ಮಾನಸಿಕ ದೌರ್ಬಲ್ಯವಿದ್ದವರು ಬೈಗುಳದ ಮೂಲಕ ತಮಗೆ ಶಕ್ತಿಯಿದೆಯೆಂಬುದನ್ನು ತೋರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇವರ ಬೈಗಳು ಆಕ್ರಮಣ ಶೀಲತೆಯನ್ನು ವ್ಯಕ್ತಪಡಿಸುವಂತೆ ಕಂಡರೂ ಬಹುಪಾಲು ಅದು ಸ್ವರಕ್ಷಣೆಯ ಒಂದು ವಿಧಾನವಾಗಿರುತ್ತದೆ. ಇಂಥವರು ಮೇಲುನೋಟಕ್ಕೆ ಧೈರ್ಯಶಾಲಿಗಳೂ, ಸಿಡುಕರೂ, ಒರಟರೂ, ನಿಷ್ಠುರರೂ, ಅವರ ತಂಟೆಗೆ ಹೋಗಲು ಇತರರು ಹೆದರಬೇಕಾದ ವ್ಯಕ್ತಿಗಳಂತೆಯೂ ಕಂಡರೂ ಒಳಗಡೆ ವಾಸ್ತವವಾಗಿ ಅಂಜುಬುರಕರೂ ಮುಖೇಡಿಗಳೂ ಯಾವುದೋ ನೈಚ್ಯತೆಯಿಂದ ಬಳಲುತ್ತಿರುವವರೂ ಆಗಿರುತ್ತಾರೆ. ಬೈಗುಳ ಇವರಿಗೆ ಮುಖವಾಡವೂ ಆಗಿರುತ್ತದೆ. ಕವಚವೂ ಆಗುತ್ತದೆ.

ವ್ಯಕ್ತಿಗಳು ಕೂಡಿಯೇ ಸಮಾಜವಾದರೂ, ಒಟ್ಟು ಸಮಾಜವೆಂಬುದು ತನ್ನದೇ ಆದ ಅಸ್ತಿತ್ವವನ್ನು ಹೊಂದಿರುವ ಘಟಕ ಎಂಬ ನಂಬಿಕೆ ಆದರ ಸದಸ್ಯರಲ್ಲಿರುವುದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಾಜಶಾಸ್ತ್ರಜ್ಞರು ಗುರುತಿಸಿದ್ದಾರೆ. ಸಾಮಾಜಿಕವಾಗಿ ಬೈಗುಳದ ನಿಯೋಗ ವೇನೆಂಬುದನ್ನು ನಿರ್ಧರಿಸುವಾಗ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಳ್ಳಲೇಬೇಕೆಂಬುದು ಸ್ಪಷ್ಟವಾಗಿದೆ. ಆಗಲೇ ನೋಡಿದಂತೆ, ಬೈಗುಳಕ್ಕೆ ಬೆಲೆ ಬರುವುದು ಅದು ಸಾಮಾಜಿಕ ಒಪ್ಪಿಗೆ ಪಡೆಯುವುದರಿಂದ. ಆದ್ದರಿಂದಲೇ, ವ್ಯಕ್ತಿಗಳಿಬ್ಬರೇ ಇದ್ದಾಗ ಪರಸ್ಪರ ಬೈದಾಡಿದರೆ ಬೈಗುಳ ಅಷ್ಟು ಪ್ರಮುಖವಾಗುವುದಿಲ್ಲ. ಅಂಥ ಸಮಯದಲ್ಲಿ ಬೈಯಿಸಿ ಕೊಂಡ ವ್ಯಕ್ತಿ ಸುಮ್ಮನಾಗಬಹುದು. ಮನುಷ್ಯ ತನ್ನ ಸ್ಥಾನಮಾನಕ್ಕೆ ಸಾಮಾಜಿಕವಾಗಿ ಚ್ಯುತಿ ಬಂದದ್ದನ್ನು ಬಹಳ ಗಂಭೀರವಾಗಿ ಭಾವಿಸುತ್ತಾನೆ. ಬೈಗುಳ ಸಾಮಾಜಿಕ ಹೊಲಸು ಅಭಿವ್ಯಕ್ತವಾಗಿ ಹೊರಬೀಳುವುದಕ್ಕೆ ಒಂದು ಅತ್ಯಂತ ಅಗತ್ಯವಾದ ಮಾಧ್ಯಮ, ಎಂದರೆ ಬೈಗುಳಕ್ಕೆ ತಿದ್ದುವಿಕೆಯ ಮೌಲ್ಯವೂ ಇದೆ. ಸಮಾಜ ತನ್ನ ನೀತಿ ಪ್ರಜ್ಞೆಯನ್ನು ಕಾಪಾಡಿಕೊಳ್ಳುವುದರಲ್ಲಿ ಬೈಗುಳದ್ದೂ ಒಂದು ಪಾತ್ರ ಇದೆ. ವ್ಯಕ್ತಿಯ, ತನ್ಮೂಲಕ ಇಡೀ ಸಮಾಜದ, ಮಾನಸಿಕ ಅಸ್ವಾಸ್ಥ್ಯತೆಗೆ ಒಂದು ಪರಿಣಾಮಕಾರಿ ಔಷಧವೂ ಕೂಡ ಆಗಬಲ್ಲುದೆಂಬುದನ್ನು ಹಿಂದೆ ನಾವು ನೋಡಿದ್ದೇವೆ. ಈ ದೃಷ್ಟಿಯಿಂದ ಇತರ ಶಬ್ದಗಳಂತೆಯೇ ಬೈಗುಳವೂ ಒಂದು ಮೂಲಭೂತವಾದ ಸಾಮಾಜಿಕ ಅಗತ್ಯವನ್ನು ಪೂರೈಸುತ್ತದೆಯೆಂದು ಹೇಳಲು ಸಾಧ್ಯವಾಗುತ್ತದೆ.

ಬೈಗುಳವು ಸಾಮಾಜಿಕ ಅಂತಸ್ತನ್ನು ಸೂಚಿಸುವ ಒಂದು ಅಂಶ (a social-marker) ಉದಾಹರಣೆಗೆ, ಕೆಟ್ಟಮಾತನ್ನು ಬೈಯುವವನು ಕೆಳಮಟ್ಟ ದವನು, ಬೈಯದೇ ಇರುವವನು ಒಳ್ಳೆಯವನು. ಶ್ರೇಷ್ಠ ಎಂಬ ನಂಬಿಕೆ ಜನರಲ್ಲಿ ಉಂಟು. ಇದು ಬೈಗುಳದ ಒಂದು ಮುಖ. ಬೈಗಳನ್ನು ಬಳಸುವವನು ದುರ್ಬಲ ನೆಂದೂ, ಬಳಸದವನು ಶಕ್ತನೆಂದೂ, ತಿಳಿಯುವುದರಿಂದ, ಕೆಲವು ಸಾರಿ ಯಾವಾಗಲೂ ಬೈಗಳನ್ನು ಆಡುತ್ತಿರುವವನ ಬಗ್ಗೆ ಜನ ನಂಬಿಕೆ ಇಡಬಹುದು; ಅವನು 'ಅಪಾಯಕಾರಿ' ಮನುಷ್ಯನಲ್ಲವೆಂದೂ, ಸುಮ್ಮನಿರುವವನು ನಾವು ಹುಷಾರಾಗಿರಬೇಕಾದ ವ್ಯಕ್ತಿ ಯೆಂದೂ', 'ಆಳ'ದ (deep) ಮನುಷ್ಯನೆಂದೂ ಭಾವಿಸುವ ಸಂದರ್ಭಗಳೂ ಉಂಟು. ಬೈಗುಳಗಳನ್ನು ಬಳಸದ ವ್ಯಕ್ತಿಯ ಜೊತೆ ಸದರವಾಗಿ ನಡೆದುಕೊಳ್ಳುವುದು ಕಷ್ಟ. ಏಕೆಂದರೆ ಅವನು ಶಕ್ತ (ಆದ್ದರಿಂದ ನಾವು ಹುಷಾರಾಗಿರಬೇಕಾದವರು).

ಬೈಗುಳವು ಮನುಷ್ಯನ ಸಹಜ ಸ್ವಭಾವಕ್ಕೆ ಅವನಲ್ಲಿರುವ ಪ್ರಾಣಿತನಕ್ಕೆ ತೀರ ಹತ್ತಿರವಾದುದು. ಸಂಸ್ಕೃತಿ ಅಥವಾ ಸರಿಯಾಗಿ ಹೇಳಬೇಕೆಂದರೆ ನಾಗರೀಕತೆ ಹೆಚ್ಚಿ ದಂತೆ ಅವುಗಳ ಬಳಕೆ ಕಡಿಮೆಯಾಗುತ್ತಾ ಹೋಗುತ್ತದೆ. ನಾಗರೀಕತೆಯ ಮುಖ್ಯ ಲಕ್ಷಣ ಬಚ್ಚಿಡುವುದು ಅಥವಾ ಮರೆಮಾಡುವುದು ಅಥವಾ ದಮನಮಾಡುವುದು (Suppression). ಉದಾಹರಣೆಗೆ, ಹಳ್ಳಿಗಳಲ್ಲಿ ವ್ಯಕ್ತಿಗಳು ತಮ್ಮ ಕಷ್ಟ ಗಳನ್ನು ಬಾಯಿಬಿಟ್ಟು ಹೇಳಿಕೊಳ್ಳುವಂತೆ ನಾಗರೀಕರು ಹೇಳಿಕೊಳ್ಳುವುದಿಲ್ಲ. ಸಾಮಾಜಿಕವಾದ ದೋಷವನ್ನು (stigma) ಲೇಪನಮಾಡಿಕೊಂಡಿರುವ ಬೈಗುಳಗಳ ಬಳಕೆ ಪಟ್ಟಣಗಳಲ್ಲಿ ಅಥವಾ ನಾಗರೀಕರಲ್ಲಿ ಕಡಿಮೆ. ವಿದ್ಯಾವಂತರಲ್ಲಿ, ಮತ್ತು ಮುಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ವರಿದ ಜಾತಿಗಳಲ್ಲಿ ಇವು ಒಟ್ಟಾರೆ ಕಡಿಮೆ. ಬೈಗುಳದ ಮೂಲಕ ವ್ಯಕ್ತವಾಗಿ ಮನಸ್ಸಿನ ಹೊಲಸು ಉಪಶಮನಗೊಳ್ಳುತ್ತಿದ್ದ ಅವಕಾಶ ಹೋದದ್ದರಿಂದ, ಎಷ್ಟೋ ಸಾರಿ ಆ ಹೊಲಸು ಅಥವಾ ದುರ್ಭಾವನೆ ದಮನಗೊಂಡು ಇನ್ನೂ ಅಪಾಯಕಾರಿಯಾದ ಬೇರೆ ರೀತಿಗಳಲ್ಲಿ ವ್ಯಕ್ತವಾಗುವ ಸಾಧ್ಯತೆಗಳು ಇರುತ್ತವೆ.

ಕೆಲವು ಸಾಮಾಜಿಕ ವರ್ಗಗಳು—ಇವು ಬಹುತೇಕ ಅನಕ್ಷರಸ್ಥರವು, ಆದ್ದರಿಂದ 'ಕೆಳವರ್ಗ'ದವು—ಬೈಗುಳನ್ನು ಮತದ ಅಥವಾ ಕರ್ಮಾಚರಣೆಯ (ritual) ಮಟ್ಟಕ್ಕೆ ಏರಿಸಿರುವುದು ಇಲ್ಲಿ ಲಕ್ಷಿಸಬೇಕಾದ ಸಂಗತಿ. ಶಿವ, ರಾಮ, ಕೃಷ್ಣ, ಹನುಮಂತ ಇವು ಉತ್ತಮದೈವಗಳು; ಆದ್ದರಿಂದ ಇವನ್ನು ಹೊಗಳಬೇಕು. ಈ ದೈವಗಳ ಜೊತೆ ಭಯದಿಂದ ನಡೆದುಕೊಳ್ಳಬೇಕೆ ಹೊರತು, ಸಲಿಗೆಯಿಂದ ಅಲ್ಲ. ಆದರೆ ಕರಿಯವ್ವ ಮಾರಿಯಂತಹ ಕೆಳ ದೈವಗಳನ್ನು ಬೈದರೆ ಅವಕ್ಕೆ ತೃಪ್ತಿ. ಶಿವ. ರಾಮ. ಕೃಷ್ಣ, ಹನುಮಂತರಿಗೆ ಸಾತ್ವಿಕ ಆಹಾರ, ಸಾತ್ವಿಕ ಪೂಜಾವಿಧಾನಗಳು; ಮತ್ತು ಎಲ್ಲವೂ ವಿಧಿವತ್ತಾಗಿ ನಡೆಯಬೇಕು. ಮಂತ್ರಪಠನವಾಗಬೇಕು. ಆದರೆ ಕರಿಯವ್ವ ಮಾರಿಯವ್ವರಿಗೆ ಇದು ಬೇಕಿಲ್ಲ. ಅವಕ್ಕೆ ತೃಪ್ತಿಯಾಗುವುದು ನಿಯಮವನ್ನು ಮೀರಿದಾಗಲೇ. ಅವಕ್ಕೆ ಕುರಿ, ಕೋಣ ಕಡಿಯಬೇಕು. ಪೂಜಾವಿಧಾನಗಳಲ್ಲಿ ಹೆಚ್ಚು ಕಡಿಮೆಯಾದರೂ ಚಿಂತೆಯಿಲ್ಲ. ಇವಕ್ಕೆ ಮಂತ್ರಪಠನವನ್ನು ಎಲ್ಲಿಂದ ತರಬೇಕು? ಬೈಗುಳಗಳೇ ಇವಕ್ಕೆ ಮಂತ್ರಪಠನ. ಆಸಾದಿಯೋ ದುಮವ್ವಾಲೆಯೋ ಚೆನ್ನಾಗಿ ಕುಡಿದು ಮಧ್ಯಾಹ್ನದ ಉರಿಬಿಸಿಲಲ್ಲಿ ಆ ದೇವತೆಯನ್ನು ಅತ್ಯಂತ ಹೊಲಸಾದ ಭಾಷೆಯಲ್ಲಿ ಬೈದು ಹಾಡುತ್ತಿದ್ದರೆ ಆಕೆಗೆ ಖುಷಿಯಾಗುತ್ತದೆ (ಆ ನೆಪದಲ್ಲಿ ಜನಕ್ಕೂ ಖುಷಿ). ಮತೀಯ ಸಂಗತಿಗಳಲ್ಲಿ ನಮ್ಮ ಸಾಮಾಜಿಕ ಸಂಗತಿಗಳ ಪ್ರತಿಫಲನವು ಎಷ್ಟು ಸ್ಪಷ್ಟವಾಗಿ ನಡೆಯುತ್ತದೆ ಯೆಂಬುದನ್ನು ಗುರುತಿಸಬೇಕು, ಮತ್ತು ಇದರ ಅಧ್ಯಯನ ಬಹಳ ಸ್ವಾರಸ್ಯವಾಗಿರುತ್ತದೆ. ಜನರಂತೆ ಸಮಾಜ, ಮತ್ತು ಜನರಂತೆ ಅವರ ದೈವಗಳು. ಕೆಳವರ್ಗದ ಜನರಲ್ಲಿ ಬೈಗುಳವು ದ್ವೇಷದ ಸಂಕೇತವಾಗಿರುವಂತೆ ಸ್ನೇಹಸಲಿಗೆಗಳ ಸಂಕೇತವೂ ಆಗಬಹುದು. ಹಾಗೆ ಬಳಕೆಯಾದಾಗ, ಬೈದ ವ್ಯಕ್ತಿ ಬೈಯಿಸಿಕೊಂಡ ವ್ಯಕ್ತಿಗಳಿಬ್ಬರೂ ಸಂತೋಷ ಪಡುವುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಗ್ರಾಮದೇವತೆಗಳನ್ನು ಆರಾಧನಾಪೂರ್ವಕವಾಗಿ ಬೈಯುವುದನ್ನು ವಿಶ್ಲೇಷಿಸಲು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಪಟ್ಟಣಿಗರಿಗಿಂತ ಹಳ್ಳಿಗರಲ್ಲಿ, ವಿದ್ಯಾವಂತರಿಗಿಂತ ಅವಿದ್ಯಾವಂತರಲ್ಲಿ, ಮೇಲು ಜಾತಿಗಳಿಗಿಂತ ಕೆಳಜಾತಿಗಳಲ್ಲಿ, ಹಿಂದಿಗಿಂತ ಹಿಂದೂಸ್ತಾನಿಯಲ್ಲಿ. ಸಂಸ್ಕೃತಕ್ಕಿಂತ ಕನ್ನಡದಲ್ಲಿ ಬೈಗುಳಗಳ ಸಂಖ್ಯೆ ಹೆಚ್ಚು ಮತ್ತು ಅವು ಹೆಚ್ಚು ಮೊನಚು ಎಂಬುದನ್ನು ಸುಲಭವಾಗಿ ಅರಿಯಬಹುದು. ಎರಡೂ ದಿನಬಳಕೆಯ ಭಾಷೆಗಳಾದರೂ ಹಿಂದೂಸ್ತಾನಿಯ ಮುಂದೆ ಕನ್ನಡವೂ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೈಗುಳಗಳೆಲ್ಲವೂ ಒಂದೇ ಸ್ವರೂಪದವಾಗಿರುವುದಿಲ್ಲ. ಅವುಗಳಲ್ಲಿ ಕೆಲವನ್ನು ಉಪೇಕ್ಷಿಸಬಹುದು. ಇನ್ನು ಕೆಲವು ಗಂಭೀರವಾಗಿ ತೆಗೆದುಕೊಳ್ಳುವಂಥವು. ಇನ್ನು ಕೆಲವಂತೂ ತೀವ್ರಸ್ವರೂಪದವಾಗಿರುತ್ತವೆ.

ಬೈಗುಳದ ಸ್ವರೂಪವನ್ನು ಪಟ್ಟಿಮಾಡುವುದು ಸುಲಭವೇನೂ ಅಲ್ಲ. ಬಹುತೇಕ ಬೈಗುಳಗಳು ಅಥವಾ ತೀವ್ರಸ್ವರೂಪದ ಬೈಗುಳಗಳು ಕಾಮಕ್ಕೆ (sex) ಸಂಬಂಧಪಟ್ಟವು, ಅನೈತಿಕ ಅಥವಾ ಅಸಹಜ ಸಂಬಂಧಗಳು, ಅನೈತಿಕ ಜನನ ಇಂಥವಕ್ಕೆ ಸಂಬಂಧಿಸಿದ ಬೈಗುಳಗಳು 'ಅಹಂ'ಗೆ ನೇರವಾಗಿ ಏಟು ಕೊಡುತ್ತವೆ. ಈ ವರ್ಗದ ಬೈಗುಳಗಳಲ್ಲಿನ ವೈವಿಧ್ಯ ಅಪರಿಮಿತ ಮತ್ತು ಇವು ಅತ್ಯಂತ ವರ್ಣರಂಜಿತವಾಗಿರುತ್ತವೆ. ಇಲ್ಲಿಯೂ ಅನೇಕ ಉಪಪ್ರಭೇದಗಳನ್ನು ಗುರುತಿಸಲು ಸಾಧ್ಯ, ಮತ್ತು ಇಲ್ಲಿಯೂ ಶ್ರೇಣಿಗಳುಂಟು. ತೀವ್ರ–ತೀವ್ರತರ–ತೀವ್ರತಮ ಬೈಗುಳಗಳುಂಟು. ವ್ಯಕ್ತಿಯ ದೈಹಿಕ ದೋಷಕ್ಕೆ ಸಂಬಂಧಿಸಿದ ಬೈಗುಳಗಳಿವೆ. ಕುಲ, ಜಾತಿ, ವರ್ಗ, ವೃತ್ತಿಗಳಿಗೆ ಸಂಬಂಧಿಸಿದ ಬೈಗುಳಗಳಿವೆ. ಆಹಾರಕ್ಕೆ ಸಂಬಂಧಿಸಿದ ಬೈಗುಳಗಳಿವೆ.

ಬೈಗುಳಗಳಲ್ಲಿ ಸರಳ ಮತ್ತು ಸಂಕೀರ್ಣವೆಂದು ಎರಡು ಸ್ಥೂಲಭೇದಗಳನ್ನು ಗುರುತಿಸಬಹುದು. 'ಸರಳ' ಎನ್ನುವುದು ಯಾವುದೋ ಒಂದು ಅಂಶವನ್ನು ಮಾತ್ರ ಬಳಸಿಕೊಂಡಿರುವುದನ್ನು ಹೇಳುತ್ತದೆ. ಉದಾ. ಅನೈತಿಕ ಜನನ, ಅಥವಾ ಕುಲ ಅಥವಾ ದೈಹಿಕ ದೋಷ. ಆದರೆ ಬೈಗುಳಗಳು ಯಾವಾಗಲೂ ಹೀಗೆ ಸರಳವಾಗಿಯೇ ಇರುವುದಿಲ್ಲ. ಎರಡು ಮೂರು ಅಂಶಗಳನ್ನು ಅವು ಒಳಗೊಂಡು ಸೃಜನವಾಗುತ್ತಲೇ ಇರುತ್ತವೆ. ಇಂಥವನ್ನು ಸಂಕೀರ್ಣವೆನ್ನಬಹುದು. ಒಂದು ಜಗಳದ ಸನ್ನಿವೇಶದಲ್ಲಿ, ಮಾತಿಗೆ ಮಾತು ಹತ್ತಿ ಸನ್ನಿವೇಶ ಕಾವೇರಿದಾಗ, ಒಬ್ಬ ವ್ಯಕ್ತಿ ಒಂದು ಬೈಗುಳ ಬೈದರೆ, ಪ್ರತಿಯಾಗಿ ಅದನ್ನು ಮೀರಿಸುವ ಇನ್ನೊಂದು ಬೈಗುಳ ಇನ್ನೊಬ್ಬ ವ್ಯಕ್ತಿಯಿಂದ, ಅದನ್ನು ಮೀರಿಸುವ ಬೈಗುಳ ಮೊದಲ ವ್ಯಕ್ತಿಯಿಂದ ಬರುತ್ತ ಬೈಗುಳಗಳ ಸಂಖ್ಯೆ ಬೆಳೆಯುತ್ತದೆ. ಪೈಪೋಟಿ ಮುಂದುವರಿದಂತೆ ಸಂಖ್ಯೆಯ ಜೊತೆ ಅವುಗಳ ಸ್ವರೂಪವೂ ಮಾರ್ಪಡುತ್ತದೆ. ಆಗ, ಈಗಾಗಲೇ ತಿಳಿದಿರುವ ಬೈಗುಳಗಳ ಹೊಸ ಹೊಸ ಜೋಡಣೆಯ ಕಾರ್ಯ ನಡೆಯುತ್ತದೆ. ಈ ಜೋಡಣೆಯ ಕಾರ್ಯವನ್ನು 'ನಿರ್ಮಾಣ'ವೆಂಬ ಮಾತಿನಿಂದ ಕರೆದರೂ ತಪ್ಪೆಯುತ್ತದೆ. ವ್ಯಕ್ತಿಗಳ ತೀವ್ರಭಾವ ಸನ್ನಿವೇಶದಲ್ಲಿ ಹೊಸ ಬೈಗುಳಗಳ ಸೃಜನವೂ ನಡೆಯಬಹುದು.

ಬೈಗುಳಗಳು ಬಹುತೇಕ 'ಕಾಮ'ದ ಸುತ್ತಲೇ ತಿರುಗುವುದು ಏಕೆ ಎಂಬುದು ಗಮನಾರ್ಹ. ಕಾಮ ಒಂದು ಬಗೆಯ ನಿಷಿದ್ಧ (taboo) ; ಅದನ್ನು ನಿಷಿದ್ಧವೆಂದು ಭಾವಿಸಲು ಕಾರಣ ಅದು ಬಹು ಮುಖ್ಯವಾಗಿರುವುದೇ ಆಗಿದೆ. ವ್ಯಕ್ತಿ ತನ್ನ ರಕ್ತದ ಪಾವಿತ್ರ್ಯದ ಮತ್ತು ತನ್ನ ಸಂಸಾರದ ಬಗ್ಗೆ ತೀರಾ ಆಸಕ್ತನಾಗಿರುತ್ತಾನೆ. ಇದು ನೇರವಾಗಿ ಕಾಮಕ್ಕೆ ಸಂಬಂಧಪಟ್ಟಿದೆ. ಆದ್ದರಿಂದಲೇ ಯಾವುದರ ಬಗ್ಗೆ ವ್ಯಕ್ತಿ ಹೆಮ್ಮೆಯಿಂದಿರುತ್ತಾನೆಯೋ ಆ ಹೆಮ್ಮೆಯ ಬುಡವನ್ನೇ ಕತ್ತರಿಸಿಬಿಡುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನಿಗೆ ದೊಡ್ಡ ಏಟು ಕೊಟ್ಟಂತೆ. ಇತರ ಬೈಗುಳಗಳಿಗಿಂತ ಕಾಮಕ್ಕೆ ಸಂಬಂಧಿಸಿದ ಬೈಗುಳಗಳು ಹೆಚ್ಚು ಹರಿತವಾಗಿರಲು ಇದೇ ಮುಖ್ಯ ಕಾರಣ. ಬೈಗುಳಗಳು ಸೃಜನ ವಾಗುವುದು ಕಾಮಪ್ರಪಂಚಕ್ಕೆ ಸಂಬಂಧಪಟ್ಟಂತೆಯೇ ಎಂಬುದೂ ಲಕ್ಷಿಸಬೇಕಾದ ಸಂಗತಿ. ('ನಿಷಿದ್ಧ'ಗಳು ಒಟ್ಟಾರೆ ತಿರಸ್ಕರಣೀಯ ವಸ್ತುಗಳಲ್ಲಿ; ಅವು ಅತ್ಯಂತ ಮಹತ್ವದ ಸಂಗತಿಗಳಾದ್ದರಿಂದಲೇ ಅವು 'ನಿಷಿದ್ಧ'ಗಳಾಗಿರುತ್ತವೆ; ಇದು ನಿಷಿದ್ಧ ಗಳನ್ನು ಕುರಿತಂತೆ ಒಂದು ಸಾಮಾನ್ಯ ಸಂಗತಿ.)

ಬೈಗುಳಗಳ ರಚನೆಯ (structure) ಬಗ್ಗೆ ಚರ್ಚಿಸುವುದರಲ್ಲಿ ಒಂದು ತೊಂದರೆ ಯಿದೆ. ಗಾದೆಗಳ ಜೊತೆ ಅವನ್ನು ಹೋಲಿಸಿದರೆ ಇದು ಸ್ಪಷ್ಟವಾಗುತ್ತದೆ. ಗಾದೆ ಗಳೂ ಕೂಡ ಭಾಷೆಯ ಬಹು ಪರಿಣಾಮಕಾರಿಯಾದ ಭಾಗ. ಅವು ಜನಗಳ ಮನಸ್ಸನ್ನು ಬಹು ಬೇಗ ಸೆಳೆದುಕೊಳ್ಳುತ್ತವೆ. ಆದರೆ, ಗಾದೆಗಳ ರಚನೆಯನ್ನು ಆಗಲೇ ಆಯಾ ಭಾಷಾಸಮಾಜ ನಿರ್ಧರಿಸಿರುತ್ತದೆ. ಅವು ಒಂದು ರೀತಿಯ ಸಿದ್ಧೋಕ್ತಿಗಳು. ಅವುಗಳ ಆಕಾರ ಅರ್ಥಗಳೆರಡನ್ನೂ ಆಗಲೇ ಜನ ನಿರ್ಧರಿಸಿರುತ್ತಾರೆ. ಅವನ್ನು ಬಲ್ಲವರು ಯಥೋಚಿತವಾಗಿ ಬಹುತೇಕ ಅವು ಇರುವಂತೆಯೇ ಬಳಸಿಕೊಳ್ಳಬೇಕು. ಭಾಷೆಯಲ್ಲಿ ಬಳಸುವಾಗ ಗಾದೆಗಳ ರಚನೆಯಲ್ಲಿ ಮಾರ್ಪಾಟುಗಳು ಆಗುವುದು ತೀರಾ ಅಪೂರ್ವ; ಆದರೂ ಅವು ಕನಿಷ್ಠ ಪ್ರಮಾಣದಲ್ಲಿರುತ್ತವೆ ಎಂದರೆ ಗಾದೆಗಳನ್ನು ಅವು ಇರುವಂತೆಯೇ ನಾವು ಗ್ರಹಿಸುತ್ತೇವೆ. ನಾವು ಮಾಡಬೇಕಾದ ಕೆಲಸವೆಂದರೆ—ಅವನ್ನು ಯಾವಾಗ ಬಳಸಬೇಕೆಂಬುದನ್ನು ತೀರ್ಮಾನಿಸುವುದು ಮಾತ್ರ. ನಮಗಿರುವ ಸ್ವಾತಂತ್ರ್ಯ ಅಷ್ಟೇ. ಗಾದೆಯ ಶಕ್ತಿ ಇರುವುದು ಅದರ ಎರಡು ಗುಣಗಳಲ್ಲಿ—ಒಂದು ಅದರ ಸಂಕ್ಷಿಪ್ತತೆ, ಎರಡು ಅದರ ಪ್ರಾಸವಿನ್ಯಾಸ. ಯಾವುದಾದರೂ ಗಾದೆಯ ಈ ಎರಡು ಗುಣಗಳನ್ನು ಕೆಡಿಸಿ ಅದರ ಅರ್ಥವನ್ನು ಬೇರೆ ಮಾತುಗಳಲ್ಲಿ ವಿವರಿಸಿದರೆ ಅದರ ಇಡೀ ಸ್ವಾರಸ್ಯ ಹಾಳಾಗಿ ಹೋಗುತ್ತದೆ. ಎಂದರೆ, ಗಾದೆ ನಿಲ್ಲುವುದು ಮುಖ್ಯವಾಗಿ ಅದರ ರಚನೆಯ ಮೇಲೆ, ಅರ್ಥದ ಮೇಲೆ ಅಲ್ಲ. ಬೈಗುಳ ಬಹುಶಃ ಬೇರೆ. ಯಾವ ಪದ ಬೈಗುಳ ವಾಗುತ್ತದೆ ಎಂಬುದನ್ನು ಸ್ಥೂಲವಾಗಿ ಸಂಪ್ರದಾಯ ನಿರ್ಧರಿಸುತ್ತದೆ. ಬೈಗುಳದ ನುಡಿಗಳು ಅಥವಾ ನುಡಿಕಟ್ಟುಗಳು ಇರುತ್ತವೆ. ಆದರೆ ಬೈಗುಳಗಳಿಗೆ ಪೂರ್ವನಿಶ್ಚಿತ ರಚನೆಯೊಂದಿರುವಂತೆ ಕಾಣದು. ಬೈಗುಳದ ಪದಗಳನ್ನು ವ್ಯಕ್ತಿ ತನಗೆ ತೋಚಿದಂತೆ ಹೇಗೆ ಬೇಕೆಂದರೆ ಹಾಗೆ ಬಳಸಬಹುದು. ಇಲ್ಲಿ ಮುಖ್ಯವಾಗುವುದು ರಚನೆ ಅಲ್ಲ, ಅರ್ಥ. ಯಾರೋ ಬಳಸಿದ ಅಥವಾ ರಚಿಸಿದ ಉಕ್ತಿಯು ಗಾದೆಯಾಗಬೇಕಾದರೆ ಅದು ಇರುವಂತೆಯೇ ಮತ್ತೆ ಮತ್ತೆ ಬಳಕೆಗೆ ಬಂದು ಪ್ರಚಾರವಾಗಬೇಕು. ಬೈಗುಳ ನಿಂತಿರುವುದು ಅರ್ಥದ ಮೇಲೆ ಎನ್ನುವುದು ಬಹುತೇಕ ನಿಜ. ಇಲ್ಲಿ ಗಾದೆಗಳನ್ನು ಪ್ರಸ್ತಾಪಿಸಿದ್ದು ಬೈಗುಳಗಳನ್ನು ಇನ್ನೂ ಹೆಚ್ಚು ಪರಿಷ್ಕಾರವಾಗಿ ತಿಳಿದುಕೊಳ್ಳು ವುದಕ್ಕಾಗಿಯೇ ಹೊರತು ಅವೆರಡಕ್ಕೂ ಹೋಲಿಕೆಯಿದೆ ಎಂಬುದನ್ನು ತೋರಿಸಲಿಕ್ಕಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಸಂಗಿಕವಾಗಿ ಇದನ್ನು ಗಮನಿಸಬಹುದು. (ವಿದ್ಯೆ ಹೆಚ್ಚಿದಂತೆ ಅಥವಾ ನಾಗರೀಕತೆ ಬೆಳೆದಂತೆ ಗಾದೆಯ ಬಳಕೆಯೂ ಕಡಿಮೆಯಾಗುತ್ತ ಬರುತ್ತದೆ.)

ಒದೆತ ವಾಸ್ತವವಾಗಿ ದ್ವೇಷದ ಸಂಕೇತ. ಹಾಗೆಯೆ ಅದು ಸ್ನೇಹದ ಸಂಕೇತವೂ ಆಗಬಹುದು. ಸ್ನೇಹಿತ ಬಂದು ಬೆನ್ನಮೇಲೆ ಗುದ್ದಿದರೆ ಅಥವಾ ಕೈಯನ್ನು ತೀರ ಬಲವಾಗಿ ಹಿಸುಕಿದರೆ ಅದನ್ನು ಸಹಿಸಿಕೊಂಡಷ್ಟು ಅವರ ಸ್ನೇಹ ವ್ಯಕ್ತವಾಗುತ್ತದೆ. ಸಹಿಸಿಕೊಳ್ಳುವುದು ಸ್ನೇಹಕ್ಕಾಗಿ ತೋರಬಹುದಾದ ತ್ಯಾಗವೆಂದರೂ ತಪ್ಪಾಗದು. ಬೈಗುಳವೂ ಭಾಷಿಕವಾದ ಒದೆತ ತಾನೇ. ಆದ್ದರಿಂದ ಕೆಟ್ಟ ಬೈಗುಳನ್ನು ನಗುನಗುತ್ತಾ ಸ್ವಾಗತಿಸುವುದು ಸಲಿಗೆ, ಸ್ನೇಹ, ಪ್ರೀತಿ, ಪ್ರೇಮಗಳ ಕುರುಹು (ಇದರ ಪ್ರಸ್ತಾಪ ಹಿಂದೆ ಆಗಲೇ ಸೂಚ್ಯವಾಗಿ ಬಂದಿದೆ). ಹಳ್ಳಿಗಳಲ್ಲಿ ದೊಡ್ಡ ದೇವರ ಜೊತೆಗೂ ಒಮ್ಮೊಮ್ಮೆ—ತೀರ ವಿರಳವಾಗಿ ಬೈಗುಳದಲ್ಲಿ ಮಾತನಾಡುವುದುಂಟು. ಇದು ಕೂಡ ಸಲಿಗೆಯ ಪ್ರತೀಕ, (ಆದರೆ, ಕೆಳವರ್ಗದ ದೇವತೆಗಳನ್ನು ಬೈಯುವುದನ್ನು ವಿಧಿವತ್ತಾಗಿ ಮಾಡಿರುವುದಕ್ಕೂ ಇದಕ್ಕೂ ವ್ಯತ್ಯಾಸವಿದೆ.)

ಹೀಗೆ ಬೈಗುಳಕ್ಕೆ ಎರಡು ಮುಖಗಳಿವೆ. ಒಂದು ದ್ವೇಷದ್ದು. ಇನ್ನೊಂದು ಸ್ನೇಹದ್ದು. ಇವೆರಡರಲ್ಲಿ ಮೊದಲನೆಯದೇ ಮುಖ್ಯವಾದುದು. ಎರಡನೆಯದು ತೀರ ಅನುಷಂಗಿಕ. ಇದು ಸರಿಯೇ. ಆದರೆ ಬೈಗುಳಗಳು ಉಳಿದ ಸಾವಿರಾರು ಪದಗಳಂತೆ ನಿರ್ಭಾವದ ರೀತಿಯಲ್ಲಿ ಬಳಕೆಯಾಗುತ್ತಿರುವುದನ್ನೂ ಇಲ್ಲಿ ಗಮನಿಸಬಹುದು. ಅಂಥವನ್ನು ಕೇಳುವಾಗ ಹಲ್ಲು ಕಳೆದುಕೊಂಡ ಹಾವುಗಳು ಜ್ಞಾಪಕಕ್ಕೆ ಬರುತ್ತವೆ. ಒಬ್ಬ ರೈತ ಮಳೆಯ ಬಗ್ಗೆ ಮಾತಾಡುವಾಗ ಇನ್ನೇನೋ ಸಂಗತಿ ಬಗ್ಗೆ ವರದಿ ಮಾಡುವಾಗ ತೀವ್ರಸ್ವರೂಪದ ಬೈಗುಳಗಳನ್ನು ಮಧ್ಯೆ ಮಧ್ಯೆ ಯಥೇಷ್ಟವಾಗಿ ತರಬಹುದು. ಕೆಲವರಂತೂ ಇಂತಹ ಬೈಗುಳಗಳನ್ನು ತರದೆ ಮಾತನಾಡುವುದೇ ಅಪೂರ್ವ ಎನ್ನಿಸಿಬಿಡುತ್ತದೆ. ಇಲ್ಲಿ ಬೈಗುಳವು ಯಾವುದೇ ಭಾವನೆಯ ದ್ಯೋತಕವಾಗಿ ಬರದೆ ಕೇವಲ ಒಂದು ಅಭ್ಯಾಸವಾಗಿ ಅಥವಾ ವಾಗ್ರೂಢಿಯಾಗಿ ಪರಿಣಮಿಸಿರುತ್ತದೆ. ಅವರ ಮಾತಿಗೆ ಇದರಿಂದ ಒಂದು ವೈಶಿಷ್ಟ್ಯವೂ ಸೊಗಡೂ (ವಾಸನೆಯೂ) ಅಂಟಿಕೊಳ್ಳುತ್ತದೆ. ಎಂದರೆ ಬೈಗುಳವು ಶೈಲಿಯ ನಿಯೋಗವನ್ನು (stylistic function) ಪಡೆದುಕೊಳ್ಳುತ್ತದೆ, ಈ ಬೈಗುಳಗಳು ಅವರ ಮಾತಿಗೆ ರಂಗನ್ನು ತರುತ್ತದೆ ಮತ್ತು ಕೇಳುವವರಿಗೆ ಹಿತವಾಗಿಯೂ ಇರುತ್ತದೆ.

ಈ ಪ್ರಬಂಧ ಇನ್ನೂ ಬರೆಯಲಿರುವ ಮಹಾ ಪ್ರಬಂಧವೊಂದರ (Thesis) ರೂಪರೇಷೆಯಂತೆ ಕಂಡುಬಂದರೆ ಆಶ್ಚರ್ಯವೇನೂ ಇಲ್ಲ. (ವಾಸ್ತವವಾಗಿ ಅಂತಹ ಮಹಾಪ್ರಬಂಧವೊಂದನ್ನು ಬರೆಯುವ ಯೋಜನೆಯನ್ನೇನೂ ನಾನು ಇಟ್ಟುಕೊಂಡಿಲ್ಲ). ಆದರೆ ಇಷ್ಟು ಮಾತು ಮಾತ್ರ ನಿಜ; ಬೈಗುಳಗಳನ್ನು ಕುರಿತಂತೆಯೇ ಸಂಶೋಧನೆ ನಡೆಸಲು ಅವಕಾಶವಿದೆ. ಸಮಾಜಶಾಸ್ತ್ರ, ಮನಶ್ಶಾಸ್ತ್ರ ಮಾನವವಿಜ್ಞಾನ, ಭಾಷಾವಿಜ್ಞಾನ ಜಾನಪದ ಇವೆಲ್ಲವೂ ಬೈಗುಳಗಳ ಅಧ್ಯಯನಕ್ಕೆ ಸಹಾಯಕವಾಗುತ್ತವೆ. ಪ್ರತ್ಯಕ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಸನ್ನಿವೇಶಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಲು ಅವಕಾಶವುಂಟು. ಯಾವುದೇ ಬೀದಿನಲ್ಲಿಯು ಹತ್ತಿರ ಹೋಗಿ ಒಂದು ಗಂಟೆ ಅಲ್ಲಿ ನಿಂತಿದ್ದರೂ, ಸಿಡುಕಿನಿಂದ ಅಥವಾ ಸಣ್ಣ ಬೈಗುಳದಿಂದ ಆರಂಭವಾದ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಮಾರಾಮಾರಿಗೆ ಕೇಶಾಕೇಶಿಗೆ ಅವಕಾಶ ಮಾಡಿಕೊಡುವುದನ್ನು ಪ್ರತ್ಯಕ್ಷವಾಗಿ ನೋಡಲು ಅವಕಾಶ ವುಂಟು. ಅಲ್ಲಿ ನೂರಾರು ಬೈಗುಳಗಳು ಸೃಜನವಾಗುತ್ತವೆ. ಜೊತೆಗೆ, ಬೈಗುಳ ಗಳನ್ನು ಬೇರೆ ಬೇರೆ ದೃಷ್ಟಿಗಳಿಂದಲೂ ನೋಡಲು ಸಾಧ್ಯವೆಂಬುದನ್ನು ಈ ಪ್ರಬಂಧ ದಲ್ಲಿ ಉದ್ದಕ್ಕೂ ಗುರುತಿಸಿದೆ.

ಈ ಪ್ರಬಂಧದಲ್ಲಿ ಬೇಕೆಂದೇ ಒಂದು ಬೈಗುಳವನ್ನು ಅಪ್ಪಿತಪ್ಪಿಯಾದರೂ ಉದಾಹರಿಸಿಲ್ಲ. ಆಯಾ ಭಾಗವನ್ನು ಓದುತ್ತಿರುವಂತೆ ಓದುಗರಿಗೆ ನಾನು ಕೊಡ ಬೇಕೆಂದಿದ್ದ ಒಂದು ಉದಾಹರಣೆಗೆ ಬದಲು ಹಲವು ಇನ್ನೂ ಉತ್ತಮ ಉದಾಹರಣೆ ಗಳು ಖಂಡಿತವಾಗಿಯೂ ಜ್ಞಾಪಕಕ್ಕೆ ಬರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾ. ರಾ. ಗೋಪಾಲ್

ಶಾಸನಗಳಲ್ಲಿ ಕನ್ನಡ ಭಾಷೆ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಶಾಸನ ಸಾಹಿತ್ಯವೆಂಬ ಒಂದು ಪ್ರಾಕಾರವನ್ನು ಗುರುತಿಸಲಾಗಿದೆ. ಇದು ಕನ್ನಡ ಭಾಷೆಗೆ ಸಂಬಂಧಿಸಿದಂತೆ ಒಂದು ವೈಶಿಷ್ಟ್ಯ. 11-12 ನೆಯ ಶತಮಾನಗಳ ಮತ್ತು ಆ ನಂತರದ 2-3 ಶತಮಾನಗಳ ಚಾಲುಕ್ಯ, ಹೊಯ್ಸಳ, ವಿಜಯನಗರದ ಅರಸುಮನೆತನಗಳ ಕಾಲದ ಅನೇಕ ಶಾಸನಗಳು ಉತ್ಕೃಷ್ಟ ಸಾಹಿತ್ಯಕೃತಿಗಳೆನಿಸಿಕೊಂಡಿವೆ. ಹಲವಾರು ಶಾಸನಗಳ ಕರ್ತೃಗಳು ಖ್ಯಾತಸಾಹಿತಿಗಳು. ಬೇರೆ ಯಾವ ಮೂಲಗಳಿಂದಲೂ ತಿಳಿದು ಬರದಿದ್ದ ಅನೇಕ ಕವಿಗಳು ತಮ್ಮ ಶಾಸನಗಳ ಮೂಲಕ ಬೆಳಕಿಗೆ ಬಂದಿದ್ದಾರೆ. ಇನ್ನೂ ಅನಾಮಿಕರಾಗಿಯೇ ಉಳಿದಿರುವ ಶಾಸನ ಕವಿಗಳು ನೂರಾರು. ಇವರೆಲ್ಲ ಕನ್ನಡ ಸಾಹಿತ್ಯವನ್ನು ಪೋಷಿಸಿ ದಷ್ಟಪುಷ್ಟವಾಗಿ ಮಾಡಿದ್ದಾರೆ. ಭಾರತದ ಬೇರಾವ ಭಾಷೆಯಲ್ಲಿಯೂ ಇಂತಹ ವೈಶಿಷ್ಟ್ಯವನ್ನು ಇಷ್ಟು ವಿಪುಲವಾಗಿ ನಾವು ಕಾಣುವುದಿಲ್ಲ.

ವಾಸ್ತವಿಕವಾಗಿ ಶಾಸನಗಳ ಉದ್ದೇಶ ಸಾಹಿತ್ಯವೇ ಅಲ್ಲ. ಅದೊಂದು ದಾಖಲೆ ಪತ್ರ. ಶಾಸನ ಎಂಬುದು ಮೂಲತಃ ರಾಜನ ಆಜ್ಞೆಗೆ ಸಂಬಂಧಿಸಿದಂತೆ ಉಪಯೋಗಿಸಲ್ಪಟ್ಟ ಒಂದು ಪದ. ಅರಸ ಅಥವಾ ಆತನ ಅಧಿಕಾರಿ ಹೊರಡಿಸಿದ ಯಾವುದೇ ಆಜ್ಞೆ, ರೂಪಿಸಿದ ಯಾವುದೇ ಕಾನೂನು, ಮಾಡಿದ ಯಾವುದೇ ದಾನ 'ಶಾಸನ' ಎನಿಸಿಕೊಳ್ಳುತ್ತದೆ. ಕಾಲಕ್ರಮೇಣ ವೈಯಕ್ತಿಕ ದಾಖಲೆಗಳೂ ಹುಟ್ಟಿದವು. ಆರಂಭಕಾಲದಲ್ಲಿ ಸಾಮಾನ್ಯವಾಗಿ ದೇವಸ್ತುತಿಯಿಂದ ಆರಂಭಿಸಿ ದಾನಿ, ಪ್ರತಿಗ್ರಹಿ, ದಾನದ ವಿವರ ಇವುಗಳನ್ನು ಶಾಸನ ಒಳಗೊಂಡಿರುತ್ತದೆ. ಕ್ರಮೇಣ ದಾನಿಯನ್ನು ಕುರಿತ ವಿಶೇಷಣಗಳು, ಸ್ವೀಕರಿಸಿದವನ ಯೋಗ್ಯತೆ-ಅರ್ಹತೆಗಳು, ಅವರ ವೈಯಕ್ತಿಕ ಸಾಧನೆಗಳು, ಇವುಗಳೆಲ್ಲಾ ಶತಮಾನಗಳು ಕಳೆದಂತೆ ಹೆಚ್ಚು ವಿವರಗಳನ್ನೊಳಗೊಂಡು ಶಾಸನಗಳಲ್ಲಿ ಕಂಡುಬರುತ್ತವೆ. ಈ ಸಂದರ್ಭದಲ್ಲಿ ಶಾಸನವನ್ನು ರಚಿಸಿದಾತ ತನ್ನ ಪ್ರತಿಭೆಯನ್ನು ತೋರಿಸಿಕೊಳ್ಳಲೆಂದೋ, ಅರಸನ ಅಥವಾ ಆಶ್ರಯದಾತನ ಮೆಚ್ಚುಗೆಯನ್ನು ಪಡೆಯಲೆಂದೋ ವಿಷಯವನ್ನು, ಆನುಷಂಗಿಕವಾಗಿ ಕಲಾತ್ಮಕವಾಗಿ ಸಾಹಿತ್ಯ ರೂಪದಲ್ಲಿ ರಚಿಸುತ್ತಾನೆ. ಇದು ಅಷ್ಟೇ ಆನುಷಂಗಿಕವಾಗಿ ಆ ಕಾಲದ ಭಾಷೆಯ, ಸಾಹಿತ್ಯದ ಸ್ಥಿತ್ಯಂತರಗಳನ್ನು ತೋರಿಸುತ್ತದೆ. ಈ ದೃಷ್ಟಿಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಶಾಸನಸಾಹಿತ್ಯ ಒಂದು ವಿಧದಲ್ಲಿ ಪೋಷಕ. ಸಮಕಾಲೀನ ಸಾಹಿತ್ಯದ ಏರುಪೇರುಗಳನ್ನು ಈ ಶಾಸನ ಸಾಹಿತ್ಯದ ಮೂಲಕವೂ ಗುರುತಿಸಬಹುದು. ಸಾಹಿತ್ಯ ಕೃತಿಗಳು—ಲಭ್ಯವಿಲ್ಲದಿರುವಾಗ ಈ ಶಾಸನ ಸಾಹಿತ್ಯ ಬಹಳ ಸಹಾಯಕ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ಸಾಹಿತ್ಯದ ಮಾತಾಯಿತು. ಭಾಷೆಯ ಬೆಳವಣಿಗೆಯನ್ನು ಗುರುತಿಸು ವುದರಲ್ಲಂತೂ ಶಾಸನ ವಹಿಸುವ ಪಾತ್ರ ಅದ್ವಿತೀಯವಾದುದು. ನಮಗೆ ತಿಳಿದಂತೆ ಕನ್ನಡದಲ್ಲಿ ಸಾಹಿತ್ಯಕೃತಿಗಳಿಗಿಂತಲೂ ಶಾಸನಗಳೇ ಪ್ರಾಚೀನ. ಈ ಶಾಸನಗಳು ಆಯಾಕಾಲದ ಭಾಷೆಯ ಸ್ಥಿತಿಯನ್ನು ಸೂಚಿಸುತ್ತವೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಗಮನಿಸಬೇಕು. ಶಾಸನ ಜನಸಾಮಾನ್ಯರಿಗೆ ಅರ್ಥವಾಗಬಹುದಾದ ಭಾಷೆಯಲ್ಲಿ ರಚಿಸಿರಬೇಕು. ಹಾಗಿದ್ದರೇನೇ ಅವುಗಳು ಅರ್ಥಪೂರ್ಣ. ಅಧಿಕೃತ ದಾಖಲೆ ಗಳಲ್ಲಿ ಅಧಿಕೃತ ಭಾಷೆಯನ್ನು ಉಪಯೋಗಿಸುವುದು ಸ್ವಾಭಾವಿಕ. ಆದರೆ ಜನಸಾಮಾನ್ಯಕ್ಕೆ ಅರ್ಥವಾಗಬೇಕಾದರೆ ಸಮಕಾಲೀನ ವ್ಯಾವಹಾರಿಕ ಭಾಷೆಯನ್ನು— ಆಡುಮಾತುಗಳನ್ನು ಉಪಯೋಗಿಸುವುದು ಸೂಕ್ತ. ನಾವು ಶಾಸನಗಳಲ್ಲಿ ಅನೇಕ ಸಂದರ್ಭಗಳಲ್ಲಿ ಇಂತಹ ಭಾಷೆಯನ್ನು ಕಾಣುತ್ತೇವೆ. ಆದರೆ ನಮಗೆ ಲಭಿಸಿರುವ ಪ್ರಾಚೀನ ಶಾಸನಗಳು ಹೆಚ್ಚಿನ ಮಟ್ಟಿಗೆ ಸಂಸ್ಕೃತದಲ್ಲಿಯೇ ಇವೆ. ಆದುದರಿಂದ ಸಂಸ್ಕೃತ ಜನಸಾಮಾನ್ಯರಲ್ಲಿ ಬಳಕೆಯಲ್ಲಿದ್ದ ಭಾಷೆಯೆಂದು ಹೇಳಲಾಗದು.

ಈ ಸಂದರ್ಭದಲ್ಲಿ ಉತ್ತರ ಭಾರತದ ಹಾಗೂ ಕರ್ನಾಟಕದ ಪ್ರಾಚೀನ ಶಾಸನ ಗಳ ಭಾಷೆಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಗಮನಿಸಬೇಕು. ಭಾರತದಲ್ಲಿ ಅತಿ ಪ್ರಾಚೀನವೆಂದೆನಿಸಿದ ಅಶೋಕನ ಶಾಸನಗಳು ಸಂಸ್ಕೃತ ಭಾಷೆಯಲ್ಲಿಲ್ಲ; ಪ್ರಾಕೃತ ಹಾಗೂ ಪಾಳೀ ಭಾಷೆಗಳಲ್ಲಿವೆ. ಅದೇ ಜನಸಾಮಾನ್ಯರಲ್ಲಿ ಪ್ರಚಾರದಲ್ಲಿದ್ದ ಆಡುಮಾತು. ಅದನ್ನೇ ಅರಸ ತನ್ನ ಆಜ್ಞೆಗಳಲ್ಲಿ, ಶಾಸನಗಳಲ್ಲಿ ಬಳಸಿದ. ಆದರೆ ಅತಿ ಪ್ರಾಚೀನ ವೈದಿಕ ಸಾಹಿತ್ಯವೆಲ್ಲಾ ಸಂಸ್ಕೃತ ಭಾಷೆಯಲ್ಲಿಯೇ ಇವೆ. ಅವುಗಳ ಕಾಲದ ಬಗೆಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ, ಉಪಲಬ್ಧ ಶಾಸನಗಳಿಗಿಂತಲೂ ಅವು ಪ್ರಾಚೀನ ಎಂಬುದನ್ನು ಮರೆಯಲಾಗದು. ಎಂದಮೇಲೆ ಸಂಸ್ಕೃತ ಸಾಹಿತ್ಯಕ ಭಾಷೆ ಯಾಗಿ ಉಪಯೋಗಿಸಲ್ಪಟ್ಟಿದ್ದರೂ ಉತ್ತರ ಭಾರತದ ಶಾಸನಗಳಲ್ಲಿ ಮಾತ್ರ ಜನ ಸಾಮಾನ್ಯರ ಭಾಷೆಗಳಾದ ಪ್ರಾಕೃತ ಹಾಗೂ ಪಾಳಿಗಳೇ ಅತಿ ಪ್ರಾಚೀನ. ಆದರೆ ಕರ್ನಾಟಕದಲ್ಲಿ ಹಾಗಾಗಲಿಲ್ಲ. ಹಲ್ಮಿಡಿಯಂತಹ ಒಂದೆರಡು ಶಾಸನಗಳನ್ನು ಹೊರತು ಪಡಿಸಿದರೆ ಇತರ ಪ್ರಾಚೀನ ಶಾಸನಗಳು ಸಂಸ್ಕೃತದಲ್ಲಿವೆ. ಇದರಿಂದ ಒಂದೆರಡು ವಿಷಯಗಳನ್ನು ಊಹಿಸಬಹುದು.

ಕನ್ನಡ ನಾಡಿನಲ್ಲಿ ಪ್ರಾಕೃತ ಭಾಷೆಯ ಶಾಸನಗಳು, ಅಶೋಕನ ಶಾಸನಗಳನ್ನೂ ಹೊರತುಪಡಿಸಿದರೆ, ವಿರಳ. ಲಭ್ಯವಿರುವ ಶಾಸನಗಳಿಂದ ಕ್ರಿ.ಶ. 3-5ನೆಯ ಶತಮಾನಗಳಲ್ಲಿ ಪ್ರಾಕೃತ ಪ್ರಧಾನಭಾಷೆಯಾಗಿತ್ತೆಂದು ತೋರುತ್ತದೆ. ಅನಂತರದ ಶಾಸನಗಳು ಬಹುಮಟ್ಟಿಗೆ ಸಂಸ್ಕೃತದಲ್ಲಿವೆ. ಹಲ್ಮಿಡಿ ಶಾಸನದ ಕಾಲಕ್ಕೆ ಸಂಬಂಧಿಸಿ ದಂತೆ 5ನೆಯ ಶತಮಾನದ ಮಧ್ಯಭಾಗ, 6ನೆಯ ಶತಮಾನದ ಕೊನೆಯ ಭಾಗ ಇವೆರಡು ಮಿತಿಗಳು. ಈ ಶಾಸನ ಬಹುಮಟ್ಟಿಗೆ ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿದೆ ಎಂಬುದು ತಿಳಿದ ವಿಷಯ. ಇದರಿಂದ ಕರ್ನಾಟಕದಲ್ಲಿ ಆಡುಮಾತು ಏನೇ ಇದ್ದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತಕ್ಕೆ ಹೆಚ್ಚಿನ ಪ್ರಾಶಸ್ತ್ಯ ಲಭಿಸಿ ಅದು ಆಡಳಿತ ಭಾಷೆ ಎನಿಸಿಕೊಂಡಿತು ಎಂಬುದು ಸ್ಪಷ್ಟ. ಆರ್ಯಸಂಸ್ಕೃತಿ ದಕ್ಷಿಣಾಪಥಕ್ಕೆ ಹಬ್ಬಿದುದರ ಫಲ ಇದು. ಸುಮಾರು ಕ್ರಿ.ಶ. 200ರ ವೇಳೆಗೆ ಕನ್ನಡದಲ್ಲಿ ಬಿಡಿ ಪದ್ಯಗಳು ಶಾಸನಸ್ಥವಾಗಿದ್ದರೂ ಅವುಗಳೆಲ್ಲಾ ಸಂಸ್ಕೃತ ದಿಂದ ಪ್ರಭಾವಿತ.

ಶ್ರವಣಬೆಳಗೊಳದ ಪ್ರಾಚೀನ ಕನ್ನಡ ಶಾಸನಗಳು ಭಾಷೆ, ಛಂದಸ್ಸುಗಳ ದೃಷ್ಟಿಯಿಂದ ಪೂರ್ವದ ಹಳಗನ್ನಡ ಹಳಗನ್ನಡಕ್ಕೆ ತಿರುಗುತ್ತಿರುವ, ಪ್ರಯೋಗಗಳಿಂದ ಪರಿಣತೆಯ ಕಡೆಗೆ ಸಾಗುತ್ತಿರುವ ಕಾಲವನ್ನು ಸೂಚಿಸುತ್ತವೆ ಎನ್ನಲಾಗಿದೆ.[1] ಅಲ್ಲದೆ ಅವೆಲ್ಲಾ ಜೈನಧರ್ಮ ಪರವಾದ ಪ್ರಶಸ್ತಿ ಶಾಸನಗಳು. ಆ ವೇಳೆಗೆ ಪ್ರಾಕೃತದಲ್ಲಿ ಜೈನ ಸಾಹಿತ್ಯ ಕೃತಿಗಳು ರಚಿತವಾಗಿದ್ದವು. ಆ ಕೃತಿಗಳನ್ನು ರಚಿಸಿದವರೇ ಈ ಶಾಸನಗಳ ಕರ್ತೃಗಳೂ ಆಗಿರಬೇಕು. ಸಾಹಿತ್ಯ ಕೃತಿಗಳು ಜನಸಾಮಾನ್ಯರಿಗಾಗಿ ಅಲ್ಲದಿದ್ದರೂ ಈ ಶಾಸನಗಳು ಅವರನ್ನು ಆಕರ್ಷಿಸಬೇಕು. ಜೈನ ಯತಿಯ, ಜಿನಭಕನ ಹಿರಿಮೆ ಎಲ್ಲರಿಗೂ ತಿಳಿಯಬೇಕು. ಹಾಗಿದ್ದಲ್ಲಿ ಅಂದಿನ ಪ್ರಚಲಿತ ಭಾಷೆಯಲ್ಲಿ—ಆಡುಮಾತಿನಲ್ಲಿ—ಅದನ್ನು ಹೇಳಬೇಕು. ಎಂತಲೇ ಜೈನ ಕವಿಗಳು ಈ ಬಿಡಿ ಪದ್ಯಗಳನ್ನು ರಚಿಸಿದರು... ಇಂತಹವುಗಳನ್ನು ಹೊರತುಪಡಿಸಿದರೆ ಸಾಹಿತ್ಯಕ್ಕೆ ಮೌಲ್ಯವುಳ್ಳ ಶಾಸನ ಪದ್ಯಗಳು ಸಮಕಾಲೀನವಾಗಿ ಕಡಿಮೆ ಸಂಖ್ಯೆಯಲ್ಲಿವೆ. ಅವೂ ಸಹ ವ್ಯಕ್ತಿಪ್ರಶಂಸೆಗಳೇ.

ಪ್ರಾಚೀನ ತಾಮ್ರ ಶಾಸನಗಳ ಭಾಷೆ ಸಂಸ್ಕೃತವಾದರೂ ದಾನಮಾಡಿದ ಭೂಮಿಯ ಮೇರೆಗಳು, ಗ್ರಾಮಗಳ ಹೆಸರುಗಳು, ತತ್ಸಂಬಂಧವಾದ ಇತರ ವಿವರಗಳೂ ಕನ್ನಡದಲ್ಲಿವೆ. ಕದಂಬರ ಕಾಲದ ಶಾಸನ ಸಂಪತ್ತಿಗೆ ಹೋಲಿಸಿದರೆ ಬಾದಾಮಿಯ ಚಾಲುಕ್ಯರ, ರಾಷ್ಟ್ರಕೂಟರ, ಕನ್ನಡ ಶಾಸನಗಳು ಸಂಖ್ಯೆಯಲ್ಲಿ ಹೆಚ್ಚು. ಆದರೆ ದಕ್ಷಿಣ ಕರ್ನಾಟಕದ ಗಂಗರ ಸಮಕಾಲೀನ ಶಾಸನಗಳಲ್ಲಿ ಮಾತ್ರ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಬಳಸಲಾಗಿದೆ. ಸಾಹಿತ್ಯದೃಷ್ಟಿಯಿಂದ ಇತರರ ಶಾಸನಗಳಿಗೆ ಸಮನೆನಿಸ ದಿದ್ದರೂ ಭಾಷಾರಚನೆ, ಭಾವವಾಹಿತ್ವ, ಉದ್ದೇಶಗಳನ್ನೂ ಸ್ಪಷ್ಟಗೊಳಿಸುವಿಕೆ ಗಳಲ್ಲಿ ಇವು ಯಶಸ್ವಿಯಾಗಿವೆ. ಸಂಸ್ಕೃತದ ರೀತಿರಚನೆಗಳನ್ನು ಅನುಕರಿಸದ ಕನ್ನಡ ಭಾಷೆಯ ಕನ್ನಡತನ-ದೇಶೀಯತೆ-ಇಲ್ಲಿ ಕಾಣುತ್ತದೆ. ವ್ಯಾವಹಾರಿಕ ಭಾಷೆ ಎಷ್ಟು ನಿರಾಡಂಬರ, ನೇರ, ಸಹಜ ಎಂಬುದು ಕಂಡುಬರುತ್ತದೆ. ಉತ್ತರ ಕರ್ನಾಟಕದ ಭಾಗಗಳು ಆರ್ಯಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಪ್ರಾಕೃತ-ಸಂಸ್ಕೃತ ಭಾಷೆ ಗಳನ್ನು ಬಳಸುತ್ತಿದ್ದಾಗ, ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು ಕೋಲಾರ ಮುಂತಾದ ಜಿಲ್ಲೆಗಳ ಪ್ರದೇಶ ದಕ್ಷಿಣ ಭಾರತದ ತಮಿಳು ಭಾಷೆ ಸಂಸ್ಕೃತಿಗಳ ಪ್ರಭಾವಕ್ಕೆ ಒಳಪಟ್ಟವೆಂದು ತೋರುತ್ತದೆ. ರಾಜಕೀಯವಾಗಿಯಂತೂ ಇದು

---

[1] ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡಸಾಹಿತ್ಯ ಚರಿತ್ರೆ, ಸಂಪುಟ ೨. ಪು. ೬೭೩–೭೪.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪಲಾದದ್ದೇ! ಪ್ರಾಚೀನ ಕನ್ನಡ ಸಾಹಿತ್ಯದ ಆರಂಭದ ಕೃತಿಗಳ ಕರ್ತೃಗಳೆಲ್ಲಾ ಬಹುಮಟ್ಟಿಗೆ ತುಂಗಭದ್ರೆಗೆ ಉತ್ತರದವರೇ. ಕನ್ನಡಸಾಹಿತ್ಯ ತುಂಗಭದ್ರೆಯ ಕೆಳಗಿನ ದಕ್ಷಿಣ ಕರ್ನಾಟಕದಲ್ಲಿ ತಲೆ ಎತ್ತಿದುದು ನಿಧಾನವಾಗಿಯೇ ಎಂಬ ಅಂಶವನ್ನು ಇಲ್ಲಿ ಸೂಚಿಸಬಹುದಾಗಿದೆ. ಬಾದಾಮಿಯ ಚಾಲುಕ್ಯರ ಕನ್ನಡ ಶಾಸನಗಳನ್ನು ಗಂಗರ ಶಾಸನಗಳೊಡನೆ ಹೋಲಿಸಿದಾಗ ಅವೆರಡೂ ಭಿನ್ನಭಾಷೆಗಳ ಪ್ರಭಾವಕ್ಕೊಳ ಪಟ್ಟಿರುವುದನ್ನು ಕಾಣಬಹುದು. ಗಂಗರ ಶಾಸನಗಳ ಭಾಷೆಯಲ್ಲಿ ಅಭಿರುಚಿ ನಯ ಕಾಣಿಸಿಕೊಳ್ಳುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಆ ಶಾಸನಗಳ ಅರ್ಥವೇ ಸ್ಪಷ್ಟವಾಗುವುದಿಲ್ಲ. ಇದಕ್ಕೆ ಕಾರಣ ಅಲ್ಲಿ ಬಳಸಲಾದ ಇನ್ನೂ ಸುಧಾರಿಸದ ಭಾಷೆ, ದಿನಬಳಕೆಯ ಆಡುಮಾತುಗಳ ಪ್ರಯೋಗ. ಆ ಮಾತುಗಳು ನಂತರ ಚಲಾವಣೆಯಲ್ಲಿ ಉಳಿಯಲಿಲ್ಲ, ಎಂತಲೇ ಅಸ್ಪಷ್ಟತೆ.

ಕವಿರಾಜ ಮಾರ್ಗಕಾರ "ಕನ್ನಡದೊಳ್‌ದೇಸಿ ಬೇಱಿವೇ ಱಿಪ್ಪುದಱಿಂ" ಎಂದಿರುವುದಕ್ಕೆ ಹಲವಾರು ವ್ಯಾಖ್ಯಾನಗಳನ್ನು ಮುಂದೂಡಲಾಗಿದೆ. ಆದರೆ ನನಗನಿಸುವ ಮಟ್ಟಿಗೆ ಅವನ ಕಾಲಕ್ಕೂ ಮೊದಲಿದ್ದ ಕನ್ನಡ ಗ್ರಂಥಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಆತನು ಆ ಮಾತನ್ನಾಡಿದ್ದಾನೆ ಎನ್ನುವುದಕ್ಕಿಂತಲೂ ಪ್ರಚಲಿತವಾಗಿದ್ದ ಕನ್ನಡ ಭಾಷೆಯನ್ನು—ಆಡುಮಾತುಗಳನ್ನು ಅನುಲಕ್ಷಿಸಿ ಹೇಳಿದ್ದಾನೆನ್ನುವುದು ಹೆಚ್ಚು ಸಮಂಜಸವಾದೀತು. ಇವುಗಳು ಪ್ರಾಂತಭೇದಗಳೇ. ಆತನು ಹೇಳುವ ದಕ್ಷಿಣ ಮಾರ್ಗ ದಕ್ಷಿಣ ಕರ್ನಾಟಕದಲ್ಲಿ ಆಗ ಇದ್ದಂತಹ ದೇಸಿ ಎಂದು ಅರ್ಥವಿಸುವುದು ತಪ್ಪಾಗಲಾರದು. ಶಾಸನಗಳಿಗೆ ಸಂಬಂಧಿಸಿದಮಟ್ಟಿಗಾದರೂ ಈ ವ್ಯಾಖ್ಯಾನ ಸರಿಯೇನೋ ಅನಿಸುತ್ತದೆ.

ಚಾಮರಾಜನಗರ ತಾಲ್ಲೂಕಿನ ಹೊಮ್ಮಗ್ರಾಮದ ಗಂಗ ಶ್ರೀಪುರುಷನ ಶಾಸನದಲ್ಲಿ[2] ಕಾಣಿಸಿಕೊಳ್ಳುವ 'ವೆಲೆಕೊಣ್ಡು' 'ತೆನ್ಕಣ್ಡ' 'ವಡಕಣ್ಡ' 'ಕುಂಬು', ಎಂಬ ಪದಗಳು ತಮಿಳಿನಿಂದ ಎರವಲು ಪಡೆದವುಗಳು. 'ಬೆಲೆಯನ್ನು ತೆಗೆದುಕೊಂಡು' 'ದಕ್ಷಿಣದ ಕಣ್ಣು' 'ಉತ್ತರದ ಕಣ್ಣು' 'ನಮಸ್ಕರಿಸು;' ಎಂದು ಕ್ರಮವಾಗಿ ಆ ಪದಗಳ ಅರ್ಥ. 8ನೆಯ ಶತಮಾನದ ಹೊಳಲಿವಾಡಿ ಶಾಸನದಲ್ಲಿ[3] ಬರುವ ಕವಿನಿ ಎಂಬ ಮಾತಿಗೆ ತಮಿಳಿನಲ್ಲಿ ಭತ್ತದ ಗದ್ದೆ ಎಂಬ ಅರ್ಥ. ಹೆಬ್ಬಲ್ಚ ಗುಪ್ಪೆ ಶಾಸನದಲ್ಲಿ[4] 'ಕೋಯಿಲ್ವಸದಿ' ಎಬ ಪದದ ಪ್ರಯೋಗವಿದೆ. ಕೋಯಿಲ್ ಎಂಬುದನ್ನು ಕೇವಲ ದೇಸ್ಯ, ದೇಸಿ ಎಂದು ನಿಘಂಟಿನಲ್ಲಿ ವಿವರಿಸಿದ್ದರೂ ಇದು ತಮಿಳಿನಿಂದ ಬಂದುದು. ಶುದ್ಧಕನ್ನಡವಲ್ಲವೆಂಬುದಂತೂ ನಿಜ. ಅಂತೆಯೇ

---

2 ಎಪಿಗ್ರಾಫಿಯ ಕರ್ನಾಟಕ, ಸಂಪುಟ ೪ (ಪರಿಷ್ಕೃತ. 1975). Cn 147.

3 ಅದೇ. ಸಂಪುಟ ೩ (1974). Nj 187.

4 ಅದೇ. Hg. 169.

Sri Vidyabharathi Book Centre, Sringeri

CC-O. In Public Domain. Digitized by eGangotri

'ನೆಲ್ಮಣ್ಣು' 'ನೆಲ್ಲಕ್ಕಿ' ಎಂಬ ಪದಗಳು 'ಕೇಸವ ಭಟ್ಟರುಳ್ಳಟ್ಟ ಸಭೆಯು' ಎಂಬಲ್ಲಿ 'ಉಳ್ಳಿಡು' ಎಂಬುದು 8-9 ನೆಯ ಶತಮಾನದ ಶಾಸನಗಳಲ್ಲಿ ಕಾಣಸಿಕೊಳ್ಳುವ 'ಪೊನ್ನರ ಕೊಟ್ಟು ಮಣ್ಣರ ಕೊಣ್ಡು' ಎಂಬ ಪದಪುಂಜ, 10ನೆಯ ಶತಮಾನದ ಶಾಸನಗಳಲ್ಲಿ ಬರುವ 'ಸನ್ದಾವೆಳಕು' ಎಂಬ ಪದ,—ಇವೆಲ್ಲ 'ದೇಸಿ' ಪದಗಳು. ಇವುಗಳಲ್ಲಿ ಅನೇಕವು ಆ ಕಾಲದಲ್ಲಿ ಚಲಾವಣೆಯಲ್ಲಿದ್ದ ಈಗ ಬಳಕೆಯಲ್ಲಿಲ್ಲದ ಪದಗಳು. ಇವೆಲ್ಲಾ ತಮಿಳು ಭಾಷೆಯಿಂದಲೇ ಬಂದುವೆಂದು ಹೇಳಲು ಖಚಿತವಾದ ಆಧಾರಗಳಿಲ್ಲವೆಂದರೂ, ಆ ಭಾಷೆಯಲ್ಲಿ ಇವು ಇನ್ನೂ ಬಳಕೆಯಲ್ಲಿದ್ದು ಕನ್ನಡದಲ್ಲಿ ಕಣ್ಮರೆಯಾದವುಗಳು. ಇವು ಅನ್ಯ ಭಾಷಾಪ್ರಭಾವಗಳ ಫಲ ಎಂಬುದಂತೂ ನಿಜ.

ಆದರೆ ಇದೇ ಕಾಲಕ್ಕೆ ಉತ್ತರ ಕರ್ನಾಟಕದ ಶಾಸನಗಳ ಭಾಷೆಯಲ್ಲಿ ಸಂಸ್ಕೃತ—ಕನ್ನಡಗಳ ಮಧುರ ಮಿಶ್ರಣ, ಹೆಚ್ಚು ಪ್ರೌಢಿಮೆ ಸಾಹಿತ್ಯಕ ಲಕ್ಷಣಗಳನ್ನು ಕಾಣುತ್ತೇವೆ. "ರಾಷ್ಟ್ರಕೂಟರ ಕಾಲಕ್ಕೆ ಬರುವಷ್ಟರಲ್ಲಿ ಕಲಾದೃಷ್ಟಿಯಿಂದ ಶಾಸನಗಳನ್ನು ರಚಿಸಲನುವಾದ ನೋಟವು ಹೆಚ್ಚು ಹೆಚ್ಚು ಗೋಚರವಾಗುವುದು. ಶಾಸನಗಳನ್ನು ಬರೆಯುವ ಒಂದು ಕ್ರಮವು ಈ ಕಾಲದಲ್ಲಿ ಬಳಕೆಗೆ ಬಂದಿತು. ವಿವರಗಳು ಹೆಚ್ಚಿದವು. ಭಾಷೆ ಸಂಸ್ಕಾರಗೊಂಡಿತು. ಕಥನವು ನಿರೂಪಣೆಯಾಯಿತು. ನಿರೂಪಣೆ ವರ್ಣನೆಯ ದಾರಿಯನ್ನು ಹಿಡಿಯಿತು; ವರ್ಣನೆಯಲ್ಲಿ ಕಾವ್ಯರಸವು ಹನಿಯಿಡಲಾರಂಭಿಸಿತು."[5] ಎಂಬ ದೇಸಾಯರ ಮಾತುಗಳು ಅರ್ಥಪೂರ್ಣವಾಗಿವೆ. 9-10ನೆಯ ಶತಮಾನಗಳ ನಂತರದ ದಕ್ಷಿಣ ಕರ್ನಾಟಕದ ಗಂಗರ ಶಾಸನಗಳಲ್ಲಿಯೂ, ಗದ್ಯ ತನ್ನ ಮೊದಲಿನ ಗ್ರಾಮ್ಯವನ್ನು ಕಳಚಿಕೊಂಡು ಹೆಚ್ಚು ಪರಿಷ್ಕಾರವಾಗಿವೆ. ಅವು ಹೆಚ್ಚು ಕಸುವಿನಿಂದ ಕೂಡಿಕೊಂಡು ಶಾಸನಗಳಲ್ಲಿ ಪದ್ಯಗಳ ಬಳಕೆ ಹೆಚ್ಚುಹೆಚ್ಚಾಗಿ ಆಗತೊಡಗಿವೆ.

ಪಂಪನ ಕಾಲಕ್ಕೆ ಕನ್ನಡ ಸಾಹಿತ್ಯ ಹೆಚ್ಚು ಶ್ರೀಮಂತವಾಗಿ ಚಂಪೂಶೈಲಿ ವಿಶೇಷವಾಗಿ ಬಳಕೆಗೆ ಬಂದಿತು. ಶಾಸನಗಳಲ್ಲಿಯೂ ಇಂತಹ ಸಾಹಿತ್ಯಮೌಲ್ಯಗಳನ್ನು ಕಾಣಬಹುದು. 9ರಿಂದ 12ನೆಯ ಶತಮಾನದ ಮಧ್ಯಭಾಗದ ವೇಳೆಗೆ ಐವತ್ತಕ್ಕೂ ಮಿಕ್ಕಿದ ಶಾಸನ ಕವಿಗಳು ಕಾಣಸಿಕೊಂಡಿದ್ದಾರೆ. 9-10ನೆಯ ಶತಮಾನಗಳ ನಂತರದ ಶಾಸನಗಳಲ್ಲಿ ಸಾಮಾನ್ಯವಾಗಿ ಬಳಸಲಾದ ಛಂದಸ್ಸು ಕಂದ. ಶಾಸನಗಳಲ್ಲಿ ಈ ಛಂದಸ್ಸುಗಳನ್ನು ಕೆಲವು ಬಾರಿ ಕಂದ, ವೃತ್ತ ವಚನಗಳೆಂದು ಸೂಚಿಸಲಾಗಿದೆ. 10ನೆಯ ಶತಮಾನದ ನಂತರದ ಶಾಸನಗಳಲ್ಲಿ ಇತರ ವೃತ್ತಗಳನ್ನು ಬಳಸಲಾಗಿದೆ. ಶ್ರವಣ ಬೆಳಗೊಳದ ಗಂಗರ ಮಾರಸಿಂಹನ ಸ್ಮಾರಕಸ್ತಂಭ ಶಾಸನದಲ್ಲಿ[6] 1055ರ ಕೋಗಳಿ ಶಾಸನದಲ್ಲಿ, 1079ನೆಯ ವರ್ಷದ ನೀಲಗುಂದ ಶಾಸನದಲ್ಲಿ ಕ್ರಮವಾಗಿ ತೋಮರ ರಗಳೆ ಮತ್ತು ತ್ರಿಪದಿ ವೃತ್ತಗಳನ್ನು ಹೆಸರಿಸಿದೆ ಎಂಬುದನ್ನು ದೇಸಾಯರು

[5] ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೩೧, ಸಂಚಿಕೆ ೨, ಪು. ೩೨.

[6] ಎ. ಕ. ಸಂಪುಟ ೨ (1973), No. 64.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಿದ್ದಾರೆ. ಬೆಳತೂರು ಶಾಸನದಲ್ಲಿ[7] ಅಕ್ಕರ ಮತ್ತು ಲಲಿತವೃತ್ತಗಳನ್ನೂ ಆರ್ವಡಿ ವಿಕ್ರಮಾದಿತ್ಯನ ರಂಜೋಲ್ ಶಾಸನದಲ್ಲಿ[8] ತರಳ,[9] ಮಣಿ ವಿಭೂಷಣ ಮತ್ತು ಉಪೇಂದ್ರವಜ್ರವೃತ್ತಗಳನ್ನೂ ಅಕ್ಕಲಕೋಟೆಯ ಶಾಸನದಲ್ಲಿ ಪೃಥ್ವೀ ಎಂಬ ವೃತ್ತವನ್ನೂ ಹೆಸರಿಸಲಾಗಿದೆ.

ಈ ಮೇಲಿನ ವಿವೇಚನೆಯಿಂದ ಒಂದೆರಡು ಅಂಶಗಳು ಸ್ಪಷ್ಟವಾಗುತ್ತವೆ. ಕನ್ನಡಭಾಷೆ ಆರಂಭದಲ್ಲಿ ಉತ್ತರ ಕರ್ನಾಟಕದಲ್ಲಿ ಗಮನಾರ್ಹವಾಗಿ, ದಷ್ಟಪುಷ್ಟವಾಗಿ ಸಂಸ್ಕೃತದ ಪ್ರಭಾವಕ್ಕೊಳಗಾಗಿ 'ಮಾರ್ಗ' ರೀತಿಯಲ್ಲಿ ಬೆಳೆಯಿತು. ದಕ್ಷಿಣ ಕರ್ನಾಟಕದಲ್ಲಿ ಇದು ತಮಿಳಿನ ಪ್ರಭಾವಕ್ಕೊಳಪಟ್ಟು 8-9ನೆಯ ಶತಮಾನಗಳ ನಂತರವೇ 'ದೇಸಿ' ಯನ್ನು ಕಳಚಿ ಪ್ರೌಢವಾಯಿತು. ಎಂತಲೇ ಕನ್ನಡ ಸಾಹಿತ್ಯದ ಆರಂಭದ ಹೆಜ್ಜೆಗಳನ್ನು ಉತ್ತರ ಕರ್ನಾಟಕದಲ್ಲಿ ಗುರುತಿಸಬಹುದು.

---

7 ॥ ಸಂ. ೩ (1974) Hg. 60.

8 ಕರ್ನಾಟಕ ಭಾರತಿ, ಸಂಪು ೧, ಸಂಚಿಕೆ ೧, ಪು. 147–156.

9 *Karnatak Inscriptions*, Vol. (ii), No. 12 of 1940–41.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆ. ನಾರಾಯಣ

ಕನ್ನಡ ಭಾಷೆಯಲ್ಲಿ ನಿಘಂಟು

ಮಾನವನು ಮೂಲತಃ ಸಮಾಜಜೀವಿ. ಅತನು ಸಮಾಜಜೀವಿಯಾದುದರಿಂದ ಸಂಪರ್ಕಮಾಧ್ಯಮವಾಗಿ ಭಾಷೆಯನ್ನು ರಚಿಸಿಕೊಂಡಿದ್ದಾನೆ. ಭಾಷೆಯು ಸಾಹಿತ್ಯದಿಂದ ಆಯಾ ಸಮಾಜದ ಸಂಸ್ಕೃತಿಯನ್ನು ಅಳೆಯಬಹುದು. ಮಾನವನ ಸಾಮಾಜಿಕಜೀವನ ವಿಕಾಸವಾದಂತೆಲ್ಲಾ ಆತನ ಭಾಷಾಪಾಂಡಿತ್ಯವೂ ಹೆಚ್ಚುತ್ತಾ ಹೋಗುತ್ತದೆ. ಭಾಷೆಯ ಪದಸಂಪತ್ತು ಈ ರೀತಿಯ ವಿಕಾಸದ ಒಂದು ಚಿಹ್ನೆ. ನಿಘಂಟು ಭಾಷೆಯ ಇಂತಹ ಪದಸಂಪತ್ತನ್ನು ಒಂದು ಕಡೆ ಕಲೆ ಹಾಕುತ್ತದೆ. ಎಂದರೆ ನಿಘಂಟೇ ಭಾಷೆಯ ಸಂಸ್ಕೃತಿಯ ನಿಜವಾದ ದ್ಯೋತಕವೆಂದೆನ್ನಬಹುದು. ಅದು ಭಾಷೆಯ ಬೆಳವಣಿಗೆಯನ್ನೇ ಅಲ್ಲದೆ ಸಮಾಜದ ಬೆಳವಣಿಗೆಯನ್ನೂ ನಿರೂಪಿಸುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಕನ್ನಡಭಾಷೆಯಲ್ಲಿ ನಿಘಂಟಿನ ರಚನೆಯ ಇತಿಹಾಸ ಹತ್ತನೇ ಶತಮಾನದಿಂದಲೇ ಶುರುವಾಗುತ್ತದೆ. ರನ್ನಕಂದ—ರನ್ನಕವಿ(?) ಕ್ರಿ.ಶ. 993 ; ಅಭಿದಾನ ವಸ್ತುಕೋಶ — ನಾಗವರ್ಮ II, ಕ್ರಿ.ಶ. 1145 ; ಶಬ್ದಮಣಿದರ್ಪಣ (ಶಬ್ದಾಕರ ಪಟ್ಟಿಗಳು) — ಕೇಶಿರಾಜ, ಕ್ರಿ.ಶ. 1260; ನಚಿರಾಜೀಯ—ನಚಿರಾಜ, ಕ್ರಿ.ಶ. 1300; ಅಕಾರಾದಿ ವೈದ್ಯಕೋಶ—ಅಮೃತ ನಂದಿನಿ, ಕ್ರಿ.ಶ. 1300; ಚತುರಾಸ್ಯ ನಿಘಂಟು— ಚತುರಾಸ್ಯ ಬಮ್ಮರಸ, ಕ್ರಿ.ಶ. 1450; ಕಬ್ಬಿಗರ ಕೈಪಿಡಿ — ಲಿಂಗಮಂತ್ರಿ, ಕ್ರಿ.ಶ. 1530 ; ಕರ್ಣಾಟಕ ಶಬ್ದಮಂಜರಿ— ವಿರಕ್ತ ತೋಂಟದಾರ್ಯ, 1560; ಕರ್ಣಾಟಕ ಸಂಜೀವನ —ಶೃಂಗಾರ ಕವಿ, ಕ್ರಿ.ಶ. 1600 ; ನಾನಾರ್ಥ ರತ್ನಾಕರ—ದೇವೋತ್ತಮ, ಕ್ರಿ.ಶ. 1600. ಅಮರಕೋಶ (ಭಾಷ್ಯ) — ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ, 1873. ಈ ನಿಂಘಂಟುಗಳೆಲ್ಲ ಕನ್ನಡ–ಕನ್ನಡ ಮತ್ತು ಸಂಸ್ಕೃತ–ಕನ್ನಡ ನಿಘಂಟುಗಳು. ಇವು ಈಗ ರಚಿಸಬಹುದಾದಂತಹ ನಿಘಂಟುಗಳಿಗೆ ಒಳ್ಳೆಯ ಆಕರಗಳಾದರೂ ಅನೇಕ ರೀತಿಯಿಂದ ಸೀಮಿತವಾಗಿವೆ. ಇವು ಕೇವಲ ಕ್ಲಿಪ್ತಪದಾರ್ಥ ಕೋಶಗಳಾಗಿವೆ.

ಮುಂದೆ ಭಾರತದಲ್ಲಿ ಇಂಗ್ಲೀಷ್ ಅಭ್ಯಾಸ ಪ್ರಾರಂಭವಾಗಿ ಆಂಗ್ಲ ಮಿಷನರಿಗಳು ಬಂದ ಮೇಲೆ ಕೆಲವು ಇಂಗ್ಲಿಷ್–ಕನ್ನಡ, ಕನ್ನಡ–ಇಂಗ್ಲಿಷ್ ನಿಘಂಟುಗಳು ಬಂದುವು 1. An English-Kanarese School Dictionary (1876) by Rev. F. Ziegler, Dharwar; 2. Anglo-Kanarese Crown Dictionary (1888?) by Christanuja Wasta, Mangalore; 3. Kannada-English Dictionary (1857) by Rev. Reev and Sanderson: 4. Kannada-

Sri Vidyabharathi Book Centre, Sringeri

CC-O. In Public Domain. Digitized by eGangotri

English Dictionary (1894) by Rev. Dr. F. Kittel: 5. Kannada-English School Dictionary (1899) by Rev. J. Bucher.

ಈ ಡಿಕ್ಷನರಿಗಳಲ್ಲಿ ಕೆಲವಾದರೂ ಇಂಗ್ಲೀಷಿನವರು ಕನ್ನಡವನ್ನೂ ಕನ್ನಡದವರು ಇಂಗ್ಲೀಷನ್ನೂ ಕಲಿಯಲು ಉಪಯುಕ್ತವಾಗುವಂತೆ ರಚಿಸಲ್ಪಟ್ಟವುಗಳು. ಇಲ್ಲಿಂದ ಮುಂದೆ ಈಗಿನವರೆಗೆ, ಸದ್ಯದ ಅಗತ್ಯಕ್ಕೆ ಅನುಗುಣವಾಗಿ ಹಿಂದಿ-ಕನ್ನಡ. ಕನ್ನಡ-ಹಿಂದಿ, ಹಿಂದಿ-ಇಂಗ್ಲಿಷ್-ಕನ್ನಡ. ಪ್ರಾಕೃತ-ಕನ್ನಡ ಮೊದಲಾದ ನಿಘಂಟುಗಳು ಹುಟ್ಟಿದವು. ಅಲ್ಲದೆ ಐತಿಹಾಸಿಕ ನಿಘಂಟುಗಳು, ವಾಗ್ರೂಢಿ ನಿಘಂಟುಗಳು. ಗಾದೆಗಳ ನಿಘಂಟುಗಳು, ತಾಂತ್ರಿಕ ನಿಘಂಟುಗಳೂ ಕೂಡ ಬಂದುವು.

ನಿಘಂಟು ಎಂದರೇನು ?

ಒಂದು ಭಾಷೆಯಲ್ಲಿಯ ಎಲ್ಲ ಪದಗಳ ಅರ್ಥ. ಅವುಗಳ ವ್ಯಾಕರಣ ಅನುಶಾಸನ-ಕಾರ್ಯ, ವ್ಯುತ್ಪತ್ತಿ, ವಾಕ್ಯರಚನೆಯ ಪ್ರಭೇದಗಳು, ಉಚ್ಚಾರಣೆ. ಪ್ರಚಲಿತ ಸಂದರ್ಭೋಚಿತ ಅರ್ಥ, ಸಮಾನಾರ್ಥ, ವ್ಯತಿರಿಕ್ತಾರ್ಥ, ಪೂರ್ವಗ್ರಂಥಗಳಲ್ಲಿ ಉಪಯೋಗವಾಗಿರುವ ಸಂದರ್ಭೋಚಿತ ಅರ್ಥ, ಚಿತ್ರಣ ಇವುಗಳನ್ನು ತಿಳಿಸುವ ಅಕಾರಾದಿ ಪದಗಳನ್ನೊಳಗೊಂಡ ಕೃತಿಗೆ ನಿಘಂಟು ಎಂಬ ಹೆಸರು. ಭಾಷಾಶಾಸ್ತ್ರಜ್ಞರು ಭಾಷೆಯನ್ನು ವೈಜ್ಞಾನಿಕದೃಷ್ಟಿಯಿಂದ ನೋಡಲು ಪ್ರಾರಂಭಿಸಿದ ಮೇಲೆ ನಿಘಂಟಿನ ಅರ್ಥ ಇನ್ನೂ ವಿಸ್ತರಿಸಿದೆ. ನಿಘಂಟುಗಳು ಭಾಷೆಯ ಪದಗಳನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಂಡರೆ ಭಾಷಾಶಾಸ್ತ್ರಜ್ಞರು ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಭಾಷೆಯಲ್ಲಿಯ ಶಬ್ದಪ್ರಯೋಗದ ಕೂಲಂಕಷ ಅಧ್ಯಯನ ಮಾಡಿ, ಪ್ರಾದೇಶಿಕ ವೈಶಿಷ್ಟಗಳನ್ನು ಅಧ್ಯಯನಮಾಡಿ. ಭಾಷೆಯ ಪುನರ್‌ನಿರ್ಮಾಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ನಿಘಂಟಿನ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ.

ಭಾಷೆಯ ಬೆಳವಣಿಗೆ ಅಥವಾ ವಿಕಾಸವಾದಂತೆಲ್ಲಾ ಭಾಷೆಯಲ್ಲಿ ಧ್ವನಿಮಾ ವ್ಯತ್ಯಾಸ, ಆಕೃತಿಮಾ ವ್ಯತ್ಯಾಸ, ವಾಕ್ಯರಚನಾ ವ್ಯತ್ಯಾಸಗಳುಂಟಾಗುತ್ತವೆ, ಮತ್ತು ಭಾಷೆಯ ಉಪಭಾಷೆಗಳು ಬೆಳೆದಂತೆಲ್ಲಾ, ಬೇರೆ ಬೇರೆ ಭಾಷೆಗಳ ಸಂಪರ್ಕ ಉಂಟಾದಂತೆಲ್ಲಾ ನಿಘಂಟಿನ ಅವಶ್ಯಕತೆ ಹೆಚ್ಚಾಗುತ್ತಾ ಬರುತ್ತದೆ. ಇದು ವಿವಿಧ ಬಗೆಯ ನಿಘಂಟುಗಳ ಸೃಷ್ಟಿಗೆ ಅವಕಾಶಮಾಡಿಕೊಡುತ್ತದೆ.

ನಿಘಂಟಿನ ಬಗೆಗಳು :

1. ವ್ಯುತ್ಪತ್ತಿ ನಿಘಂಟು (ತುಲನಾತ್ಮಕ ನಿಘಂಟು)
2. ಐತಿಹಾಸಿಕ ನಿಘಂಟು
3. ಸಾಮಾನ್ಯ ನಿಘಂಟು: (ಅ) ಏಕಭಾಷಾ ನಿಘಂಟು (ಆ)ಬಹು ಭಾಷಾ ನಿಘಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

4. ವಿಶಿಷ್ಟೋದ್ದೇಶ ನಿಘಂಟು: (ಅ) ಉಚ್ಚಾರಣಾನಿಘಂಟು, (ಆ) ತಾಂತ್ರಿಕ ನಿಘಂಟು. (ಇ) ವ್ಯುತ್ಪತ್ತಿಪದ ನಿಘಂಟು, (ಈ) ಗ್ರಾಂಥಿಕ ನಿಘಂಟು ಇತ್ಯಾದಿ.

(1) ವ್ಯುತ್ಪತ್ತಿ ನಿಘಂಟು: ವ್ಯುತ್ಪತ್ತಿ ನಿಘಂಟು ಭಾಷೆಯಲ್ಲಿ ಈಗ ಬಳಕೆಯಲ್ಲಿರುವ ಮತ್ತು ಒಂದು ಕಾಲಕ್ಕೆ ಬಳಕೆಯಲ್ಲಿದ್ದು ಈಗ ಬಳಕೆಯಿಂದ ತಪ್ಪಿಹೋದ ಆಕೃತಿಮಾಗಳ ಸಹಾಯದಿಂದ ಭಾಷೆಯು ಆಕೃತಿಮಾಗಳ ಪ್ರಾಗ್ರೂಪವನ್ನು ಪುನಾರಚಿಸುತ್ತದೆ. ಸುಲಭದಲ್ಲಿ ಹೇಳುವುದಾದರೆ ಇದು ಭಾಷೆಯಲ್ಲಿಯ ಪದಗಳ ಪೂರ್ವೇತಿಹಾಸವನ್ನು ತಿಳಿಸುತ್ತದೆ ಎನ್ನಬಹುದು. ವ್ಯುತ್ಪತ್ತಿನಿಘಂಟು ಆಕೃತಿಮಾದ ರೂಪ ಮತ್ತು ಅರ್ಥದ ಮೇಲೆ ಆದ್ಯ ಗಮನವನ್ನಿರಿಸುತ್ತದೆ.

ವ್ಯುತ್ಪತ್ತಿ ನಿಘಂಟು ಒಂದು ಭಾಷೆಯ ಉಪಭಾಷೆಗಳನ್ನು ಮತ್ತು ಗ್ರಾಂಥಿಕ ಆಧಾರಗಳನ್ನು ಬಳಸಿಕೊಂಡು ಅದೇ ಭಾಷೆಯ ಆಕೃತಿಮಾಗಳ ವ್ಯುತ್ಪತ್ತಿಯನ್ನು ಹೇಳಬಹುದು ಅಥವಾ ಒಂದೇ ಭಾಷಾಕುಟಂಬದ ಭಾಷೆಗಳನ್ನು ಆಧಾರವಾಗಿಟ್ಟು ಕೊಂಡು ರಚಿತವಾಗಿರಬಹುದು. ಈ ರೀತಿಯ ನಿಘಂಟು ರಚಿತವಾದಾಗ ಅದು ತುಲನಾತ್ಮಕ ನಿಘಂಟೂ ಆಗುತ್ತದೆ. ವ್ಯುತ್ಪತ್ತಿನಿಘಂಟಿನಲ್ಲಿ ಬೇರೆ ಭಾಷಾಕುಟುಂಬ ದಿಂದ ಎರವಲು ಪಡೆದ ವರ್ಣ ಮತ್ತು ಆಕೃತಿಮಾಗಳನ್ನು ಗಮನಕ್ಕೆ ತೆಗೆದುಕೊಳ್ಳು ವುದಿಲ್ಲ.

19ನೇ ಶತಮಾನದಲ್ಲಿ ಕನ್ನಡದಲ್ಲಿ ಪಾಂಡುರಂಗ ಚಿಂತಾಮಣಿ ಪೇಟ್ಕರ್ ಬರೆದ "ಶಬ್ದವ್ಯುತ್ಪತ್ತಿ" ಮೊದಲನೆಯದು. ಅನಂತರ ಈ ರೀತಿಯ ನಿಘಂಟು ಕನ್ನಡದಲ್ಲಿ ಬಂದಿಲ್ಲ.

A Dravidian Etymological Dictionary (1961), T. Burrow and Emeneau ಅವರ ನಿಘಂಟು ಈ ರೀತಿಯ ಒಂದು ನಿಘಂಟು. ಅದರಿಂದ ಒಂದು ನಿದರ್ಶನ:

Ta. Kori sheep. Ma. Kori a small kind of sheep. Ko. Koryar, r (ar goat) To. Kury sheep. Ka. Kuri, Kori sheep, ram; kuritana. a sheepish, foolish disposition. Kod. kori sheep. Tu. Kuri id. Te. gore gorre id. (B. also several species of wild animals *viz.* jungle sheep, a species of antelope); gorriya (B) goriya a sheep kol. ckin. SR) gorre. id, (cf.: 1485 kol. goria) konda gorya goat. kuwi (F) gori; (S) gorri ia.

(2) ಐತಿಹಾಸಿಕ ನಿಘಂಟು: ಐತಿಹಾಸಿಕ ನಿಘಂಟು ಒಂದು ಭಾಷೆಯಲ್ಲಿಯ ಪದಗಳ ರೂಪ ಮತ್ತು ಅವುಗಳ ಅರ್ಥಗಳು ಕಾಲಾನುಕ್ರಮದಲ್ಲಿ ತೋರಿಸುವ ಬದಲಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲ್ಪಟ್ಟಿರುತ್ತದೆ. ಐತಿಹಾಸಿಕ ನಿಘಂಟು ಪದದ ಅರ್ಥ, ಅರ್ಥದ ಬದಲಾವಣೆ ಸಂಕೋಚ, ವಿಸ್ತರಣೆ ಇವುಗಳೆಡೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ಯ ಗಮನವನ್ನು ಕೊಡುತ್ತದೆ. ಮತ್ತು ಪದವು ಪ್ರಯೋಗಿಸಲ್ಪಟ್ಟ ಕಾಲವನ್ನು ಪದಗಳ ಆಗಮನ ನಿರ್ಗಮನಗಳನ್ನು ಸೂಚಿಸುತ್ತದೆ. ಪದಗಳ ಆಗಮನಕಾಲವನ್ನು ಖಚಿತವಾಗಿ ಸೂಚಿಸಿದರೆ ನಿರ್ಗಮನ ಕಾಲವನ್ನು ಸೂಚಿಸುವುದು ಕಷ್ಟ. ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನವರು ತಯಾರಿಸುತ್ತಿರುವ ಕನ್ನಡ ಭಾಷೆಯ ಐತಿಹಾಸಿಕ ನಿಘಂಟಿನಿಂದ ಶಬ್ದಗಳ ಐತಿಹಾಸಿಕ ಚರ್ಚೆಗೆ ಉದಾಹರಣೆಯಾಗಿ ಒಂದನ್ನು ಉಲ್ಲೇಖಿಸ ಬಹುದು.

ಅಗ್ರಾರ, ಆಗರ, ಅಗ್ರರ, ಅಘ್ರಾರ (ನಾ)...ಅಗ್ರಹಾರ ೧: ಅಗ್ರಾರಕೆ ಬರ್ಸಿದ ಬ್ರಾಂಹ್ಮಣರು (ಸಾ. ಇ ಇ ix—ii , ೪೦೮-೯; 1364) ಆರಾಮವಗ್ರಾರ ಧರ್ಮ ತಟಾಕಗಳ್ಚಾರುತರದ ದೇವಾಲ್ಯ (ಕದವಿ. ೨೬–೩೭)ಅಗರ್ಗ : ಅಗರದ ಪಾರ್ವರೋಟ್ಟಿ ನಂತೆಯುಂ ಪರದರ ಪಾಳಯದಂತೆಯುಂ(ಚಿಕವಂ. ೨೩–೧೦) ಚಿಗುರಿದೆ ದೇಗುಲಂಗಳ್ಗ ಗರುಂ ಪೊಗರೇಱಿ ಪೊಬಿಲ್ಲಳೇಟ್ಟ್ಗಿಯಿಂ ಸೊಗಯಿಸೆ (ಚಿ. ಕವಿ. ೨–೬೦) ೩. ಆಗರ ಎಂಬ ಹೆಸರಿನ ಊರುಗಳು ಹಲವು ಇವೆ. (ರೂಢಿ) ಅಗ್ರರ; ೧. ಅಗ್ರರ ಬಚಳಿ ವೀರಪನ ಮಗ ಹೊನಂಗಲ (ಮೈ ಅರಿ ೯೪೦. ೧೧.೧. 1700) ಅಘ್ರಾರ: ೧. ಸಾತಳಿಗೆಯ ಸಾವಿರ ಐದು ಭೂಮಿ ಒಂಬತ್ತು ಅಘ್ರಾರದವರ ಮುಂದಿಟ್ಟು (ಮೈ. ಅರಿ ೯೩೨. ೪೨-೨೬ ; 1418) : ಈ ಗ್ರಾಮ ಶೂದ್ರವಾದವಾಗಿದ್ದುದನು ಅಘ್ರಾರವ ಮಾಡಿ (ಮೈ. ಅರಿ ೯೪೦, ಪ್ರ೫- ೭, ಸು 1500 ಸಂ. ಅಗ್ರಹಾರ.

(3) ಸಾಮಾನ್ಯ ನಿಘಂಟು (General Dictionary): ದಿನನಿತ್ಯದ ಉಪಯೋಗಕ್ಕೆ ಸಾಮಾನ್ಯ ನಿಘಂಟುಗಳ ಅಗತ್ಯವಿದ್ದೇ ಇದೆ. ಇವುಗಳಲ್ಲಿ ಎರಡು ಬಗೆ.

(ಅ) ಏಕಭಾಷಾ ನಿಘಂಟು, (ಆ) ಬಹುಭಾಷಾ ನಿಘಂಟು.

ಅ. ಏಕಭಾಷಾ ನಿಘಂಟು: ಏಕಭಾಷಾ ನಿಘಂಟು ಆ ಭಾಷೆಯನ್ನು ಬಲ್ಲವರ ಉಪಯೋಗಕ್ಕಾಗಿ ನಿರ್ಮಿತವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಭಾಷೆಯಲ್ಲಿರುವ ಎಲ್ಲ ಪದಗಳನ್ನೂ ಉಪಯೋಗಿಸುವುದಿಲ್ಲ. ನಿತ್ಯೋಪಯೋಗಿ ಪದಗಳು ಮಿತವಾಗಿರು ತ್ತವೆ. ಕೆಲವು ಸಮಯ ಆತನಿಗೆ ಕೆಲವು ಪದಗಳ ಅರ್ಥ ಗೊತ್ತಿದ್ದರೂ ಅವನ್ನು ಉಪಯೋಗಿಸುವುದಿಲ್ಲ. ಕೆಲವು ಪದಗಳನ್ನು ಕೆಲವು ಸಂದರ್ಭಗಳಲ್ಲಿ ಮಾತ್ರ ಉಪಯೋಗಿ ಸಲು ಗೊತ್ತಿರುತ್ತದೆ. ಆದರೆ ಪದಗಳ ಬೇರೆ ಬೇರೆ ರೀತಿಯ ಪ್ರಯೋಗ ತಿಳಿದಿರು ವುದಿಲ್ಲ, ಮತ್ತೆ ಕೆಲವು ವೇಳೆ ಗ್ರಂಥಗಳಲ್ಲಿ ಪ್ರಯೋಗವಾಗಿರುವ ಸಂದರ್ಭೋಚಿತ ಅರ್ಥವನ್ನು ತಿಳಿಯಬೇಕಾಗಿರುತ್ತದೆ. ತನ್ನದೇ ಭಾಷೆಯ ಉಪಭಾಷೆಗಳಲ್ಲಿ ಶಬ್ದಗತ ಅರ್ಥವನ್ನು ತಿಳಿಯಬೇಕಾಗಿರುತ್ತದೆ. ಶುದ್ಧಶೈಲಿಯ ಭಾಷೆಯನ್ನು ಬಳಸ ಬೇಕಾಗುತ್ತದೆ. ಇಷ್ಟಲ್ಲದೆ ಈ ನಿಘಂಟುಗಳು ಆ ಭಾಷೆಯನ್ನು ಎರಡನೆ ಭಾಷೆಯಾಗಿ ಕಲಿತವನ ಉಪಯೋಗಕ್ಕೂ ಬೇಕಾಗುತ್ತವ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟು ಕೊಂಡು ಏಕಭಾಷಾ ನಿಘಂಟನ್ನು ತಯಾರಿಸಬೇಕಾಗುತ್ತದೆ. ಈ ಕೆಳಕಂಡ ಕನ್ನಡ-ಕನ್ನಡ ನಿಘಂಟುಗಳು ಕನ್ನಡದಲ್ಲಿ ಏಕಭಾಷಾ ನಿಘಂಟುಗಳು. 1. ಶಬ್ದಮಂಜರಿ

Sri Vidyabharathi Book Centre, Sringeri

CC-O. In Public Domain. Digitized by eGangotri

(19 ನೇ ಶತಮಾನ) — ಗಂಗಾಧರ ಮಡಿವಾಳ ತುರಮುರಿ: 2. ಶಬ್ದಸಂಗ್ರಹ (19 ನೇ ಶತಮಾನ)— ಗುರುರಾವ್ ವಿಠ್ಠಲರಾವ್ ಮೊಹ್ರೆ. 3. ಕನ್ನಡ ನಿಘಂಟು (1951)—ಮುಚ್ಚಿಮತೆ ಶಂಕರ ನಾರಾಯಣರಾವ್ ಮುಂತಾದವರು.

ಏಕಭಾಷಾ ನಿಘಂಟಿನ ಮತ್ತೊಂದು ಅಂಗ **ಪ್ರಾದೇಶಿಕ** ಅಥವಾ **ಉಪಭಾಷಾ ನಿಘಂಟು** (Dialectal Dictionary.) ಭಾಷೆಯಲ್ಲಿ ನಾವು ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳನ್ನು ಕಾಣುತ್ತೇವೆ. ಈ ರೀತಿಯ ನಿಘಂಟುಗಳು ಎರಡು ದೃಷ್ಟಿಯಿಂದ ತಯಾರಾಗಿರಬಹುದು. ಒಂದೇ ಪ್ರಾದೇಶಿಕ ಭಾಷೆಯನ್ನು ಗಮನದಲ್ಲಿಟ್ಟು ಕೊಂಡು ತಯಾರಾಗಿರಬಹುದು ಅಥವಾ ಬೇರೆ ಬೇರೆ ಪ್ರಾದೇಶಿಕ ಉಪಭಾಷೆಗಳನ್ನು ಗಮನದಲ್ಲಿಟ್ಟುಕೊಂಡು ತಯಾರಾಗಿರಬಹುದು. ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶವನ್ನು ಪ್ರಮುಖತಃ ದಕ್ಷಿಣ ಕನ್ನಡ ಪ್ರಾದೇಶಿಕ ಭಾಷೆಗೆ ಮತ್ತು ಜೆ. ವಿ. ಕವಲಿಯವರ ಕಸ್ತೂರಿ ಕನ್ನಡ ಕೋಶವನ್ನು ಪ್ರಮುಖತಃ ಧಾರವಾಡದ ಪ್ರಾದೇಶಿಕ ಉಪಭಾಷೆಗೆ ನಿಘಂಟುಗಳೆಂದು ತಿಳಿಯಬಹುದು.

ಆ. ಬಹುಭಾಷಾ ನಿಘಂಟು: ದ್ವಿಭಾಷಾ ಅಥವಾ ಬಹುಭಾಷಾ ನಿಘಂಟುಗಳು ಎರಡು ಅಥವಾ ಹೆಚ್ಚು ಭಾಷೆಗಳ ಪದಗಳನ್ನೊಳಗೊಂಡಿರುತ್ತವೆ. ದ್ವಿಭಾಷಾ ನಿಘಂಟಿನ (ಇನ್ನುಮುಂದೆ ಬಹುಭಾಷಾ ನಿಘಂಟು ಎಂಬ ಅರ್ಥದಲ್ಲೂ) ಮುಖ್ಯ ಉದ್ದೇಶ ಒಂದು ಭಾಷೆಯ ಪದಗಳಿಗೆ ಇನ್ನೊಂದು ಭಾಷೆಯಲ್ಲಿಯ ಸಮಾನಾರ್ಥಕ ಪದಗಳನ್ನು ಸೂಚಿಸುವುದು, ಈ ರೀತಿಯ ನಿಘಂಟುಗಳನ್ನು ತಯಾರುಮಾಡಬೇಕಾದರೆ ಅನೇಕ ವಿಷಯಗಳನ್ನು ಗಮನದಲ್ಲಿಡಬೇಕಾಗುತ್ತದೆ.

(i) ಅದು ಮೂಲಭಾಷೆ (Source Language) ಮತ್ತು ಧ್ಯೇಯಭಾಷೆ (Target Language) ಯ ಪದಗಳಿಗೆ ಸಮಾನತೆಯನ್ನು ಕಲ್ಪಿಸಿಕೊಟ್ಟಿರಬೇಕು.

(ii) ಮೂಲ ಭಾಷೆಯ ಪದ, ನುಡಿಗಟ್ಟು, ವಾಗಾಡಂಬರ, ವಿಶೇಷ ರೀತಿಯ ಪ್ರಯೋಗಗಳನ್ನು ಹೊಂದಿರಬೇಕು.

(iii) ಮೂಲ ಭಾಷೆಯ ಪದಗಳ ಸಾಧಿತ ರೂಪ, ಅರ್ಥಛಾಯೆಗಳನ್ನು ವಿವರಿಸುತ್ತಿರಬೇಕು.

(iv) ಪದಗಳ ಎಲ್ಲಮಟ್ಟದ ಪ್ರಯೋಗಗಳನ್ನು ಅಂದರೆ, ಕೀಳುಮೇಲರಿಮೆ ಗಳನ್ನೂ, ಸಂದರ್ಭೋಚಿತ ಪ್ರಯೋಗಗಳನ್ನೂ, ನಿಷಿದ್ಧ ಪದಗಳನ್ನೂ ಹೊಂದಿರಬೇಕು.

(v) ಶ್ರೇಷ್ಠವ್ಯಕ್ತಿಗಳ, ಸ್ಥಳಗಳ, ಪ್ರಸಿದ್ಧಗ್ರಂಥಗಳ, ವಿವಿಧ ಗ್ರಂಥಗಳಲ್ಲಿ ಬರುವ ಪಾತ್ರಗಳ ವಿವರಗಳನ್ನು ತಿಳಿಸುತ್ತಿರಬೇಕು.

(vi) ವ್ಯಾವಹಾರಿಕ ಮತ್ತು ತಾಂತ್ರಿಕ ವಿಶಿಷ್ಟಪದಗಳನ್ನೊಳಗೊಂಡಿರಬೇಕು.

(vii) ಪದಗಳ ಪರ್ಯಾಯ ಪ್ರಯೋಗಗಳನ್ನು, ಪ್ರಚಲಿತ ಪ್ರಯೋಗ ಗಳನ್ನು ತಿಳಿಸುತ್ತಿರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

(viii) ಭಾಷೆಯನ್ನು ಆಡುವವರು ಮಾತನಾಡುವಾಗ ಉಚ್ಚರಿಸುತ್ತಿರುವ ರೀತಿಯಲ್ಲಿರಬೇಕು.

(ix) ಮತ್ತು ಅವಶ್ಯಕತೆ ಇದ್ದಲ್ಲಿ ಚಿತ್ರಗಳಿಂದ ಕೂಡಿದ್ದರೆ ಹೆಚ್ಚು ಉಪಯುಕ್ತ ವಾಗಬಲ್ಲದು.

ಒಂದು ದ್ವಿಭಾಷಾ ನಿಘಂಟು ಪರಿಪೂರ್ಣವಾಗಿರಬೇಕಾದರೆ ಮೇಲೆ ಹೇಳಿದ ಎಲ್ಲ ಅಂಶಗಳನ್ನೊಳಗೊಂಡಿರಬೇಕು.

ಮೇಲಿನ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮಲ್ಲಿ ಬಂದಿರುವ ಸ್ಟಾಂಡರ್ಡ್ ಇಂಗ್ಲೀಷ್-ಕನ್ನಡ ಡಿಕ್ಶನರಿ (1944) ಡಿ. ಕೆ. ಭಾರದ್ವಾಜ ಮತ್ತು ವೈದ್ಯಗುರು; ಇಂಗ್ಲೀಷ್–ಕನ್ನಡ ನಿಘಂಟು (1946) ಮೈಸೂರು ವಿಶ್ವವಿದ್ಯಾಲಯ; ಶಾರದ ಇಂಗ್ಲೀಷ್–ಕನ್ನಡ ನಿಘಂಟು (1955) ಶಾರದ ಸದನ, ಮೈಸೂರು; ಇಂಗ್ಲಿಷ್–ಇಂಗ್ಲಿಷ್–ಕನ್ನಡ ನಿಘಂಟು (1944) ಜಂಬುನಾಥನ್; ಇಂಗ್ಲೀಷ್–ಇಂಗ್ಲೀಷ್–ಕನ್ನಡ ಡಿಕ್ಶನರಿ (1962) ಕೆ. ವಿಠ್ಠಲ ಶಣೈ; ಹಿಂದಿ–ಕನ್ನಡ ನಿಘಂಟು (1945) ಪ್ರೊ॥ ಜಂಬುನಾಥನ್; ಹಿಂದಿ–ಕನ್ನಡ ಕೋಶ (1948) ಪಂಡಿತ ಸಿದ್ಧಾಂತ ಪಂತ; ಹಿಂದಿ–ಕನ್ನಡ ಕೋಶ (1948–50) ಶ್ರೀ ಮಣ್ಣೂರ್; ಹಿಂದಿ–ಕನ್ನಡ ಶಬ್ದಕೋಶ (1956) ಗುರುನಾಥ ಜೋಶಿ; ಹಿಂದಿ–ಹಿಂದಿ–ಕನ್ನಡ ರತ್ನಕೋಶ–ಜೆ. ಡಿ. ಮೈಸಾಳೆ: ಕನ್ನಡ–ಕನ್ನಡ–ಹಿಂದಿ ಆದರ್ಶಕೋಶ (1957) ಜೆ. ಡಿ. ಮೈಸಾಳೆ, ಪ್ರೊ॥ ಎ. ವಿ. ಭಟ್, ಮತ್ತು ಪ್ರೊ॥ ಗುರುನಾಥ ಜೋಶಿ; ಆಧುನಿಕ ಹಿಂದಿ–ಕನ್ನಡ–ಇಂಗ್ಲೀಷ್ ಶಬ್ದಕೋಶ–ಎಲ್. ಎಸ್. ಚಿಟಗುಬ್ಬಿ ಮುಂತಾದ ನಿಘಂಟುಗಳನ್ನು ನೋಡಿದಾಗ ಕೋಶಕಾರರ ವ್ಯುತ್ಪನ್ನಮತಿಯ ಪರಿಶ್ರಮ ವನ್ನು ಗುರುತಿಸಿ ನಿಘಂಟುವಿಜ್ಞಾನದ ದೃಷ್ಟಿಯಿಂದ ಕೆಳಕಂಡ ಕೊರತೆಗಳನ್ನು ಕಾಣಬಹುದು.

(i) ಪದಗಳ ಸರಿಯಾದ ಉಚ್ಚಾರಣೆಗಳನ್ನು ಕೊಟ್ಟಿರುವುದಿಲ್ಲ.

(ii) ಸ್ವರಾಘಾತ (stress) ಸನ್ನಿಕರ್ಷ (juncture) ಇವುಗಳನ್ನು ತಿಳಿಸಿರು ವುದಿಲ್ಲ.

(iii) ಆಕೃತಿಮಾಗಳ ಕಾರ್ಯ, ವಿಭಜನೆಯನ್ನು ತಿಳಿಸಿರುವುದಿಲ್ಲ.

(iv) ಲಕ್ಷಾರ್ಥಗಳ ಕಡೆಗೆ ಹೆಚ್ಚು ಗಮನ ಕೊಟ್ಟಿರುವುದಿಲ್ಲ.

(v) ಅರ್ಥಗಳು ಕೆಲಸಮಯ ಅನಿಶ್ಚಿತವಾಗಿರುತ್ತವೆ.

(vi) ಸಂದರ್ಭೋಚಿತ ಪದ ಪ್ರಯೋಗಗಳನ್ನು ಕೊಟ್ಟಿರುವುದಿಲ್ಲ.

(4) ವಿಶಿಷ್ಟೋದ್ದೇಶ ನಿಘಂಟು: ವಿಶಿಷ್ಟೋದ್ದೇಶ ನಿಘಂಟುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಸೀಮಿತವಾಗಿರುವ ನಿಘಂಟುಗಳು. ಅವುಗಳನ್ನು ಹೀಗೆ ಸಂಗ್ರಹಿಸ ಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಉಚ್ಚಾರಣಾನಿಘಂಟು : ಭಾಷೆಯ ಪ್ರತಿಯೊಂದು ಪದವೂ ತನ್ನದೇ ಆದ ಉಚ್ಚಾರಣೆಯನ್ನು ಹೊಂದಿರುತ್ತದೆ. ಮಾತೃಭಾಷೆ ಮತ್ತು ಅನ್ಯ ಭಾಷೆಗಳನ್ನು ನಿರ್ದೇಶಿಸಿದ ರೀತಿಯಲ್ಲಿ ಉಚ್ಚಾರಣೆ ಮಾಡಲು ಸಹಾಯಕವಾಗಿ ಮಾಡುವಂತಹ ನಿಘಂಟುಗಳು ಉಚ್ಚಾರಣಾ ನಿಘಂಟುಗಳು. ಇವುಗಳು ಪದದ ಸ್ವರಾಘಾತ, ಸನ್ನಿಕರ್ಷ ಇವುಗಳನ್ನು ಸಮರ್ಪಕವಾಗಿ ಕೊಟ್ಟಿರುತ್ತವೆ. Daniel Jones ನ English Pronouncing Dictionary ಇದಕ್ಕೆ ಉತ್ತಮ ಉದಾಹರಣೆ. ಕನ್ನಡದಲ್ಲಿ ಇಂತಹ ಕೋಶಗಳು ಬಂದಿಲ್ಲ.

ವೃತ್ತಿಪದ ನಿಘಂಟುಗಳು ಆಯಾ ವೃತ್ತಿಯಲ್ಲಿ ಪ್ರಯೋಗವಾಗುವ ಮತ್ತು ಬಳಕೆಯಲ್ಲಿರುವ ಪದಗಳನ್ನು ಒಂದೆಡೆ ಸೇರಿಸುತ್ತವೆ. ಗ್ರಾಂಥಿಕ ನಿಘಂಟುಗಳು ಒಂದು ಗ್ರಂಥದಲ್ಲಿ ಬರುವ ಪದಗಳನ್ನು ಕೊಟ್ಟಿರುತ್ತವೆ. ಇದೇ ರೀತಿ ತಾಂತ್ರಿಕ ನಿಘಂಟುಗಳು, ಸಮಾನಾರ್ಥ. ವಿರುದ್ಧಾರ್ಥ ಪದಕೋಶಗಳು, ಪದವೃಂದ ನಿಘಂಟು ಗಳು, ಗಾದೆಗಳ ನಿಘಂಟುಗಳು ಮತ್ತು ಪತ್ರಿಕಾ ನಿಘಂಟುಗಳು. ಇವೇ ವಿಶಿಷ್ಟೋದ್ದೇಶ ನಿಘಂಟುಗಳು.

ಅಕಾರಾದಿ ವೈದ್ಯನಿಘಂಟು (1300), ಅಮೃತನಂದಿನಿ; ಮರಾಠಿ–ಕನ್ನಡ–ಸಂಸ್ಕೃತ ವನಸ್ಪತಿಕೋಶ: ಡಾ॥ ಬೋಧರಾವ್ ಮಹಿಷಿ; ಔಷಧ ಕೋಶ (1940). ಎಂ. ವೆಂಕಟರಾವ್ ಮತ್ತು ಹೆಚ್. ಶೇಷಅಯ್ಯಂಗಾರ್, ಇಂಗ್ಲೀಷ್ ಕನ್ನಡ ವೈದ್ಯಪದಕೋಶ, ಡಾ॥ ಡಿ. ಎಸ್. ಶಿವಪ್ಪ ಮತ್ತು ಮೈಸೂರು ವಿಶ್ವ ವಿದ್ಯಾಲಯದವರು ಹೊರತರುತ್ತಿರುವ ವೈಜ್ಞಾನಿಕ ನಿಘಂಟುಗಳು; ಕಿಟ್ಟೆಲ್ ಕೋಶದ ಗಾದೆಗಳ ನಿಘಂಟು. ರಾಗೌರವರ ಗಾದೆಗಳು. ಎಂ. ರಾಜಗೋಪಾಲ ಆಚಾರ್ಯರ ವಾಗ್ರೂಢಿಗಳು, ನಾನಾರ್ಥ ಶಬ್ದಾವಳಿ ಮತ್ತು ಶಬ್ದಾರ್ಥಗಳು (1895), ಬೋಳಾರ್ ರಾಮಕೃಷ್ಣಯ್ಯ; ಜೆ. ಎಂ. ಹನಸೋಗೆಯವರ ಕನ್ನಡ ಶಬ್ದಸಾಗರ–ಕನ್ನಡ–ಇಂಗ್ಲೀಷ್, ಇಂಗ್ಲೀಷ್–ಕನ್ನಡ ಸಮಾನಾರ್ಥ ಹಾಗೂ ವಿರುದ್ಧಾರ್ಥ ಶಬ್ದಕೋಶಗಳು, ಇವರದೇ ಮುಂದೆ ಬರಲಿರುವ ನವಭಾಷಾ ನಿಘಂಟು. ಮ. ಪ್ರ. ಪೂಜಾರರ ಜೈನಧರ್ಮ ಪರಿಭಾಷೆ, ಎನ್. ಎಸ್. ಕೃಷ್ಣಾಜೋಯಿಸರ ಉದ್ಯೋಗಪರ್ವ ನಿಘಂಟು, ಡಿ. ವಿ. ಹೊಳ್ಳ (1953) ಅವರ ಸಂಜ್ಞಾರ್ಥತತ್ವಕೋಶ, ಹಳಕಟ್ಟಿ ಯವರ ಶಿವಾನುಭವ ಶಬ್ದಕೋಶ, ಟಿ. ವಿ. ವೆಂಕಟಾಚಲಶಾಸ್ತ್ರಿಯವರು ಸಂಪಾದಿ ಸಿರುವ ಶ್ರೀವತ್ಸನಿಘಂಟು, ಭಾರತೀಯ ಭಾಷಾಸಂಸ್ಥಾನ ಇವರು ತಯಾರಿಸಿರುವ Kannada-Hindi Common Vocabulary ಇವುಗಳು ವಿಶಿಷ್ಟೋದ್ದೇಶ ನಿಘಂಟುಗಳು.

ಮಾಡಬೇಕಾಗಿರುವ ಕೆಲಸಗಳು :

ಕನ್ನಡ ಭಾಷೆಯಲ್ಲಿ ನಿಘಂಟುಗಳು ವಿಫಲವಾಗಿ ಬಂದಿದ್ದರೂ ಇನ್ನೂ ಕೆಲವು ದಿಸೆಗಳಲ್ಲಿ ಕಾರ್ಯವಾಗಬೇಕಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

(i) ಶಾಸನ ನಿಘಂಟು : ಪದಗಳ ಚಾರಿತ್ರಿಕಜ್ಞಾನದ ಮತ್ತು ಆಡಳಿತ ಪದಗಳ ಐತಿಹಾಸಿಕ ದೃಷ್ಟಿಯಿಂದ ಈ ರೀತಿಯ ನಿಘಂಟಿನ ಅವಶ್ಯಕತೆ ತುಂಬಾ ಇದೆ.

(ii) ವ್ಯುತ್ಪತ್ತಿ ನಿಘಂಟು: ಗ್ರಾಂಥಿಕ ಭಾಷೆ, ಆಡುಭಾಷೆ. ಉಪಭಾಷೆ ಪ್ರಾದೇಶಿಕ ಭಾಷೆಗಳನ್ನು ಆಧಾರವಾಗಿಟ್ಟುಕೊಂಡು ಈ ರೀತಿಯ ನಿಘಂಟುಗಳನ್ನು ತಯಾರಿಸಬೇಕಾಗಿದೆ.

(iii) ಪ್ರಾದೇಶಿಕ ಮತ್ತು ಉಪಭಾಷಾ ನಿಘಂಟು: ಪ್ರಾದೇಶಿಕ ಮತ್ತು ಉಪ ಭಾಷೆಗಳ ಅಧ್ಯಯನವನ್ನು ವಿಸ್ತಾರವಾಗಿಮಾಡಿ ಅಲ್ಲಿ ಕಂಡುಬರುವ ಉಚ್ಚಾರಣೆ, ಅರ್ಥ, ವ್ಯಾಕರಣಾನುಶಾಸನ. ಪದಪ್ರಯೋಗ ಇವುಗಳನ್ನು ಆಧಾರವಾಗಿಟ್ಟು ಕೊಂಡು ಪ್ರಾದೇಶಿಕ ಅಥವಾ ಉಪಭಾಷಾ ನಿಘಂಟುಗಳನ್ನು ತಯಾರಿಸಬೇಕು. ಪುಣೆಯ ಡೆಕ್ಕನ್ ಕಾಲೇಜು ಕನ್ನಡ ಉಪಭಾಷೆಗಳ ಒಂದು ಅಧ್ಯಯನವನ್ನು ನಡೆಸಿತು. ಇದರಿಂದ ನಂಜನಗೂಡುಕನ್ನಡ, ಗುಲ್ಬರ್ಗಕನ್ನಡ. ಹಾಲಕ್ಕಿಕನ್ನಡ, ಬಾರಕೂರುಕನ್ನಡ. ತಿಪಟೂರುಕನ್ನಡ. ಕೂರ್ಗ್‌ಕನ್ನಡ. ಇವುಗಳ ಪ್ರಭೇದಗಳನ್ನು ಅರಿಯಬಹುದು. ಇದೇ ರೀತಿ ಉಳಿದ ಕನ್ನಡ ಪ್ರಾದೇಶಿಕ ಭಾಷೆಗಳ ಅಧ್ಯಯನವು ಆಗಬೇಕು. ಈ ಪುಸ್ತಕಗಳ ಕೊನೆಗೆ ಕೊಟ್ಟ ನಿಘಂಟುಗಳು ವ್ಯುತ್ಪತ್ತಿ ಮತ್ತು ಉಪಭಾಷಾ ನಿಘಂಟನ್ನು ರಚಿಸಲು ಸಹಕಾರಿಯಾಗಿವೆ.

(iv) ದ್ವಿಭಾಷಾ ನಿಘಂಟು: ದ್ವಿಭಾಷಾ ನಿಘಂಟುಗಳಲ್ಲಿ (ಹಿಂದೆಯೇ ಹೇಳಿರು ವಂತೆ) ಉಚ್ಚಾರಣೆಗೆ ಸ್ವರಾಘಾತ, ಸನ್ನಿಕರ್ಷ ಇವುಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಿದ ದ್ವಿಭಾಷಾ ನಿಘಂಟುಗಳು ಬರಬೇಕಾಗಿವೆ.

(v) ಕನಿಷ್ಠಯುಗ್ಮನಿಘಂಟು (Dictionary of minimal pairs): ಕನ್ನಡ ವನ್ನು ಬೇರೆ ಭಾಷೆಯವರು ಕಲಿಯಬೇಕಾಗಿರುವಾಗ ಮತ್ತು ಬೋಧಿಸುವಾಗ ಈ ನಿಘಂಟುಗಳು ಉಚ್ಚಾರವನ್ನು ಕಲಿಸುವಲ್ಲಂತೂ ಬಹಳ ಸಹಕಾರಿಯಾಗುತ್ತವೆ.

(vi) ಸ್ಥಳ ಮತ್ತು ವ್ಯಕ್ತಿಸೂಚಿ ನಿಘಂಟುಗಳು: ಇವು ನಮ್ಮ ನಾಡಿನ ಸಂಸ್ಕೃತಿ ಮತ್ತು ಚರಿತ್ರೆಯನ್ನು ತಿಳಿಸಲು ಬಹಳ ಸಹಕಾರಿಯಾಗಬಲ್ಲವು. ಡಾ|| ಆರ್. ಸಿ. ಹಿರೇಮಠ್ ಮತ್ತು ಡಾ|| ಚಿದಾನಂದಮೂರ್ತಿಯವರು ಈ ದೆಸೆಯಲ್ಲಿ ಸ್ವಲ್ಪ ಕೆಲಸಮಾಡಿದ್ದಾರೆ.

(vii) ತಾಂತ್ರಿಕ ಮತ್ತು ವೃತ್ತಿಪದ ನಿಘಂಟುಗಳು: ಪ್ರತಿಯೊಂದು ಭಾಷೆ ಯಲ್ಲೂ ಪ್ರಯೋಗವಾಗುತ್ತಿರುವ ತಾಂತ್ರಿಕ, ವೈಜ್ಞಾನಿಕ ಪದಗಳ ಮತ್ತು ಎರವಲು ಪಡೆದ ಪದಗಳ ಸಂಗ್ರಹಣೆಮಾಡಿ ಈ ರೀತಿಯ ನಿಘಂಟುಗಳನ್ನು ರಚಿಸಬೇಕು. ಇವುಗಳು ಕನ್ನಡ ಮಾಧ್ಯಮವನ್ನು ಎಲ್ಲಾ ಸ್ತರಗಳಲ್ಲೂ ಉಪಯೋಗಿಸಲು ಸಹಕಾರಿಯಾಗಬಲ್ಲವು.

(viii) ಕನ್ನಡ ವ್ಯಾಕರಣ ಪದಕೋಶ : ಕನ್ನಡ ವ್ಯಾಕರಣಗಳು ತಮ್ಮದೇಆದ ಪರಿಭಾಷೆಯನ್ನು ಉಪಯೋಗಿಸಿವೆ. ಆ ಕೋಶದ ಅಗತ್ಯವೂ ತುಂಬಾ ಇದೆ. ಇದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಉದಾಹರಣೆಯಾಗಿ ಅಭ್ಯಂಕರ್‌ರವರ (1961) "A Dictionary of Sanskrit Grammar" ಅನ್ನು ನೋಡಬಹುದು.

(ix) ಆಕೃತಿಮಾ ನಿಘಂಟು (Lexicon) : ಆಕೃತಿಮಾನಿಘಂಟು ನಿಘಂಟಿನ ಒಂದು ಪ್ರಕಾರವೆಂದೆನಿಸಬಹುದಾದರೂ ಅದಕ್ಕೆ ತನ್ನದೇಆದ ಸ್ವರೂಪವಿದೆ. ಹಿಂದಿನ ಚರ್ಚೆಯಲ್ಲಿ ವಿವರಿಸಿದ ಯಾವುದೇ ಪ್ರಕಾರದ ನಿಘಂಟಿನಿಂದ ಆಕೃತಿಮಾನಿಘಂಟು ಭಿನ್ನವಾಗಿರುತ್ತದೆ. ನಿಘಂಟಿಗೇ ಆಗಲೀ ಆಕೃತಿಮಾನಿಘಂಟಿಗೇ ಆಗಲೀ ಶಾಸ್ತ್ರೀಯ ವಾಗಿ ರಚಿತವಾದ ವರ್ಣನಾತ್ಮಕ ವ್ಯಾಕರಣ ಹಿನ್ನೆಲೆಗೆ ಇರಬೇಕಾಗುತ್ತದೆ. ಕನ್ನಡದಲ್ಲಿ ಈವರೆಗೆ ಬಂದ ನಿಘಂಟುಗಳು ಈ ಕೊರತೆಯಿಂದ ತುಂಬಾ ನರಳುತ್ತಿವೆ. ಆಕೃತಿಮಾನಿಘಂಟಿನ ರಚನೆಯಲ್ಲಿ ಅದರ ಹೆಸರೇ ಸೂಚಿಸುವಂತೆ ಆ ಭಾಷೆಯ ಎಲ್ಲಾ ಆಕೃತಿಗಳ ಪೊತ್ತಪು ಅಕಾರಾದಿಯಾಗಿ ಹೊಂದಿಸಲ್ಪಟ್ಟಿರುತ್ತವೆ. ನಿಘಂಟಿನಲ್ಲಿ ಪ್ರಕೃತಿಗಳನ್ನು ಮಾತ್ರ ಶಿರಃಶಬ್ದ (Head words) ಗಳನ್ನಾಗಿ ತೋರಿಸಿ ಆ ಪ್ರಕೃತಿ ಗಳ ವ್ಯಾಕೃತರೂಪಗಳನ್ನು ಶಿರ:ಶಬ್ದದ ಕೆಳಗೆ ತೋರಿಸಲಾಗುತ್ತದೆ. ಆದರೆ ಆಕೃತಿಮಾಕೋಶದಲ್ಲಿ ಭಾಷೆಯಲ್ಲಿಯ ಪ್ರತಿಯೊಂದು ಆಕೃತಿಮಾವು ಶಿರಃಶಬ್ದದಂತೆ ನಮೂದಿಸಲ್ಪಟ್ಟು ವ್ಯಾಕರಣದಲ್ಲಿ ಅದರ ಕ್ರಿಯೆಯನ್ನು ಕೆಳಗೆ ಸೂಚಿಸಲಾಗುತ್ತದೆ. ಭಾಷಾಭ್ಯಾಸಿಗೆ ನಿಘಂಟು ಅಗತ್ಯವಾದಂತೆ ಭಾಷಾಶಾಸ್ತ್ರಜ್ಞ ಅಥವಾ ವೈಯ್ಯಾಕರಣಿಗೆ ಆಕೃತಿಮಾನಿಘಂಟಿನ ಅಗತ್ಯ ತುಂಬಾ ಇದೆ. ಈ ರೀತಿಯ ನಿಘಂಟು ಕನ್ನಡ ಭಾಷೆಗೂ ಬೇಕು.

ನಿಘಂಟು ಮತ್ತು ಭಾಷಾಶಾಸ್ತ್ರ

ನಿಘಂಟು ಯಾವಪ್ರಕಾರದ್ದೇ ಇರಲಿ, ನಿಘಂಟಿನ ಕಾರ್ಯ ಎಂದೂ "ಮುಗಿಸಿದ ಕೆಲಸ"ವಾಗದು. ಏಕೆಂದರೆ ಭಾಷೆಯಲ್ಲಿ ಹೊಸ ಪದಗಳು ಹುಟ್ಟುತ್ತಿರುತ್ತವೆ. ಇದ್ದ ಪದಕ್ಕೆ ಹೊಸ ಅರ್ಥ, ಲಕ್ಷ್ಯಾರ್ಥಗಳು ಮೂಡಿಕೊಳ್ಳುತ್ತಿರುತ್ತವೆ. ಆದುದರಿಂದ ಕಾಲ ಕಾಲಕ್ಕೆ ನಿಘಂಟಿಗೆ ಆವೃತ್ತಿಗಳು ಹುಟ್ಟಿಕೊಳ್ಳುವುದು ಸಹಜವಾಗಿದೆ.

ನಿಘಂಟನ್ನು ತಯಾರಿಸುವಲ್ಲಿ ಭಾಷಾಶಾಸ್ತ್ರದ ಜ್ಞಾನ ಅನಿವಾರ್ಯವೆನಿಸುತ್ತದೆ. ಏಕೆಂದರೆ, ಭಾಷಾಶಾಸ್ತ್ರಜ್ಞ ಭಾಷೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುತ್ತಾನೆ. ಆತ ಭಾಷೆಯ ಧ್ವನಿಗಳ ವೈಜ್ಞಾನಿಕ ಅಭ್ಯಾಸದಿಂದ ಪದಗಳ ಸ್ವರಾಘಾತ, ಸನ್ನಿಕರ್ಷ ಇವುಗಳನ್ನು ಸರಿಯಾಗಿ ನಿಗದಿಪಡಿಸಬಲ್ಲ. ಉಪಭಾಷೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಬಲ್ಲ. ಭಾಷೆಯ ಧ್ವನಿಮಾ, ಆಕೃತಿಮಾ ಇವುಗಳ ಪುನಾರಚನೆ ಭಾಷಾಶಾಸ್ತ್ರದ ಒಂದು ಅಂಗವಾಗಿರುವುದರಿಂದ ವ್ಯುತ್ಪತ್ತಿನಿಘಂಟನ್ನು ವೈಜ್ಞಾನಿಕವಾಗಿ ಭಾಷಾವಿಜ್ಞಾನಿ ನಿರ್ದೇಶಿಸಬಲ್ಲ, ವ್ಯಾಕರಣದ ವಿವರಗಳನ್ನು ಮತ್ತು ವಾಕ್ಯರಚನೆಯ ವೈಶಿಷ್ಟ್ಯವನ್ನು ತಿಳಿಸಬಲ್ಲ. ನಿಘಂಟಿನ ತಯಾರಿಕೆಯಲ್ಲಿ ಈ ಎಲ್ಲಾ ದೃಷ್ಟಿಯಿಂದ ಭಾಷಾಶಾಸ್ತ್ರದ ಅನಿವಾರ್ಯತೆ ಕಂಡುಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಂಥ ಋಣ

1. Manual of Lexicography (1971): Ladislav Zgusta.
2. Readings in Modern English Lexicology: Collected papers (year? Russian Publication).
3. National Conference on Dictionary Making in India (1970): Central Institute of Indian Languages, Mysore.
4. Kannada-Kannada Dictionary Observations (1967): Dr. B. B. Rajpurohit (un-published).
5. Problems in Lexicography (1960): Fred W. Householder and Solsaporta; Indiana University, Bloomington.

(ಈ ಲೇಖನವನ್ನು ಕೂಲಂಕಷವಾಗಿ ಪರಿಶೀಲಿಸಿ ಸಹಾಯಮಾಡಿದ ಡಾ॥ ಬಿ. ಬಿ. ರಾಜಪುರೋಹಿತರಿಗೆ ಲೇಖಕನು ಋಣಿಯಾಗಿದ್ದೇನೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾ. ಮಾ. ನಾಯಕ

ಕರ್ನಾಟಕದ ಜಾನಪದ ಚಟುವಟಿಕೆಗಳು —ಒಂದು ಸ್ಥೂಲ ಸಮೀಕ್ಷೆ

ಶಿಷ್ಟ ಸಾಹಿತ್ಯದಂತೆಯೇ ಜನಪದ ಸಾಹಿತ್ಯಕ್ಕೂ ಒಂದು ಪರಂಪರೆ ಇರುತ್ತದೆ; ಆದರೆ ಇತಿಹಾಸ ಇರುವುದಿಲ್ಲ. ಇದಕ್ಕೆ ಕಾರಣ, ಇತಿಹಾಸಕ್ಕೆ ಅಗತ್ಯವಾದ ಕಾಲಾನುಕ್ರಮದ ದಾಖಲೆಗಳು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇರುವುದು ಸಾಧ್ಯವಿಲ್ಲ. ಕನ್ನಡ ಸಾಹಿತ್ಯಕ್ಕೆ ದೀರ್ಘವೂ ಸಂಪದ್ಯುಕ್ತವೂ ಆದ ಇತಿಹಾಸ ಪರಂಪರೆಗಳಿವೆ. ಕನ್ನಡ ಜನಪದ ಸಾಹಿತ್ಯಕ್ಕೂ ಶ್ರೀಮಂತವಾದ ಪರಂಪರೆ ಇದೆ. ಆದರೆ ಇದರ ಪ್ರಾಚೀನತೆಯನ್ನು ಅಳೆಯಲು ನಮಗೆ ತಕ್ಕಷ್ಟು ಸಾಮಗ್ರಿ ಇಲ್ಲ.

ಕನ್ನಡದ ಪದ್ಯದ ಪ್ರಾರಂಭಿಕ ಕೃತಿಯಾದ 'ಕವಿರಾಜಮಾರ್ಗ' (9ನೆಯ ಶತಮಾನ)ದಲ್ಲಿ ಒಂದು ಮಾತು ಬರುತ್ತದೆ. ಕನ್ನಡಿಗರ ಸಹಜಶಕ್ತಿ ಪ್ರತಿಭೆಗಳ ಬಗೆಗೆ ಹೇಳುವಾಗ ಮಾರ್ಗಕಾರ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್..." ಎನ್ನುತ್ತಾನೆ. ಇದರ ಬಗೆಗೆ ಬೇಕಾದಷ್ಟು ಚರ್ಚೆ ನಡೆದಿದೆ. ಕೆಲವರ ಅಭಿಪ್ರಾಯದಲ್ಲಿ ಈ ಮಾತು ಕನ್ನಡ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನೂ ಪ್ರಾಚೀನತೆಯನ್ನೂ ಕುರಿತಿದೆ. ಏಕೆಂದರೆ ಜನಪದ ಕವಿಗಳು ಸಹಜಸೃಷ್ಟಿಕಾರರು. ಅವರು ಅಭ್ಯಾಸಮಾಡಿ ನಿಯಮಗಳನ್ನು ಅರಿತು ಸಾಹಿತ್ಯ ರಚನೆಗೆ ತೊಡಗುವವರಲ್ಲ. ಈ ಮಾತಿನ ನಿಜವಾದ ಅರ್ಥ ಏನೇ ಇರಲಿ, ಕನ್ನಡದಲ್ಲಿ ಜನಪದ ಸಾಹಿತ್ಯ ಕವಿರಾಜಮಾರ್ಗಕ್ಕಿಂತಲೂ ಹಿಂದಿನಿಂದ ಇತ್ತು ಎನ್ನುವುದನ್ನು ಕುರಿತು ಚರ್ಚೆಮಾಡಬೇಕಾದ ಅಗತ್ಯವಿಲ್ಲ. ಶಿಷ್ಟಸಾಹಿತ್ಯದೊಡನೆಯೇ ಜನಪದ ಸಾಹಿತ್ಯವೂ ಅಸ್ತಿತ್ವದಲ್ಲಿರುವುದು, ಶಿಷ್ಟಸಾಹಿತ್ಯ ರೂಪುಗೊಳ್ಳುವ ಮೊದಲೇ ಜನಪದ ಸಾಹಿತ್ಯ ಪ್ರಚಲಿತವಾಗಿರುವುದು, ಜನಪದ ಸಾಹಿತ್ಯವೇ ಶಿಷ್ಟಸಾಹಿತ್ಯವಾಗಿ ಮಾರ್ಪಾಡುಗೊಳ್ಳುವುದು—ಇದಕ್ಕೆಲ್ಲ ಜಗತ್ತಿನ ಸಾಹಿತ್ಯದಲ್ಲಿ ಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಉಳಿದು ಬಂದಿರುವ ಆಡುನುಡಿಗಳು, ಗಾದೆ ಮಾತುಗಳು, ನಂಬಿಕೆ ನಡವಳಿಕೆಗಳು, ಕಲಾ ಉಲ್ಲೇಖಗಳು, ನಮ್ಮ ಜಾನಪದದ ಹಳಮೆಯನ್ನು ಸ್ಥಿರಪಡಿಸುತ್ತವೆ. ಈ ಹಳಮೆಯು ಕನ್ನಡ ಜನಪದ ಸಾಹಿತ್ಯ ಸಂಪದ್ಭರಿತವೂ, ವೈವಿಧ್ಯಮಯವೂ ಆಗಿದೆ. ಆದರೆ ಅದನ್ನು ಸಂಗ್ರಹಿಸುವ, ಅಧ್ಯಯನ ಮಾಡುವ ಕೆಲಸ ಮಾತ್ರ ತೀರ ಈಚಿನದು. ಸಮಗ್ರ ಜಾನಪದದ ಕಲ್ಪನೆ ಯೂರೋಪಿನಲ್ಲಿ ಮೂಡಿದ್ದೇ ಕಳೆದ ಶತಮಾನದ ಮಧ್ಯಭಾಗದಲ್ಲಿ. ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲ್ಪನೆ ಮೂಡಿದಮೇಲೂ ಅಲ್ಲಿನ ಬಹುಪಾಲು ಕೆಲಸ, ಸಂಗ್ರಹಕ್ಕೆ ಮೀಸಲಾಯಿತು, ಇಲ್ಲವೆ ತೌಲನಿಕ ಪುರಾಣಗಳನ್ನು ಕುರಿತ ಅಧ್ಯಯನಕ್ಕೆ ಸೀಮಿತವಾಯಿತು. ಕಳೆದ ಶತಮಾನದ ಕೊನೆಯಲ್ಲಿ ಹಾಗೂ ಈ ಶತಮಾನದ ಆರಂಭದಲ್ಲಿ ಜಾನಪದ ಅಧ್ಯಯನ ಒಂದು ಹೊಸ ತಿರುವನ್ನು ಪಡೆಯಿತು. ಅದರ ಪ್ರಭಾವ ಭಾರತವನ್ನು ಮುಟ್ಟುವುದು ಮಾತ್ರ ತುಂಬ ತಡವಾಯಿತು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 19ನೆಯ ಶತಮಾನದ ಚಟುವಟಿಕೆಗಳು ವಿಶಿಷ್ಟವಾದವು. ಮಿಷನರಿಗಳ ಕಾರ್ಯ ಚಟುವಟಿಕೆಗಳೇ ಈ ವೈಶಿಷ್ಟ್ಯಕ್ಕೆ ಕಾರಣ. ಪ್ರಾಚೀನ ಗ್ರಂಥಗಳ ಶುದ್ಧಪಾಠಗಳನ್ನು ಸಂಪಾದಿಸಿ ಪ್ರಕಟಿಸುವುದು, ಪಾಂಡಿತ್ಯದ ಪರಿಕರಗಳಾದ ನಿಘಂಟು, ವ್ಯಾಕರಣಗಳನ್ನು ಸಿದ್ಧಪಡಿಸುವುದು ಭಾಷಾಬೋಧನೆಗೆ ಅಗತ್ಯವಾದ ಪಠ್ಯಪುಸ್ತಕಗಳನ್ನು ರೂಪಿಸುವುದು, ಸಾಹಿತ್ಯೇತರ ಗ್ರಂಥಗಳನ್ನು ದೇಶಭಾಷೆಗಳಲ್ಲಿ ಹೊರತರುವುದು, ಸಾಹಿತ್ಯ ಸಂಸ್ಕೃತಿ ಸಂಬಂಧವಾದ ಪುಸ್ತಕಗಳನ್ನು ಪ್ರಕಟಿಸುವುದು—ಇವೇ ಮುಂತಾದ, ಕನ್ನಡ ಆವರೆಗೆ ಕಂಡರಿಯದ ಕೆಲಸಗಳನ್ನು ಈ ಮಿಷನರಿಗಳು ಹಾಗೂ ವಿದೇಶೀ ಅಧಿಕಾರಿಗಳೂ ಶ್ರದ್ಧೆ ನಿಷ್ಠೆಗಳಿಂದ ಕೈಗೊಂಡರು. ಅವರು ಮಾಡಿದ ಕೆಲವು ಕೆಲಸಗಳನ್ನು ಮೀರುವುದು ನೂರು ವರ್ಷಗಳ ನಂತರವೂ ನಮಗೆ ಸಾಧ್ಯವಾಗಿಲ್ಲವೆನ್ನುವುದು ಅವರ ಕೆಲಸದ ಘನಮಹತ್ವವನ್ನು ತೋರಿಸುತ್ತದೆ. ಹೊಸ ವಿಚಾರಧಾರೆಗಳನ್ನು ಹರಡುವುದರೊಂದಿಗೆ ಹೊಸ ಕೆಲಸಗಳನ್ನು ಕೈಗೊಂಡಿದ್ದೂ ಅವರ ಹೆಚ್ಚಳವಾಗಿದೆ. ಜಾನಪದ ಸಂಗ್ರಹವನ್ನು ಆರಂಭಿಸಿದವರೂ ಅವರೇ ಎನ್ನುವುದು ಚಾರಿತ್ರಿಕ ಆಕಸ್ಮಿಕ ಎನ್ನಿಸಬಹುದು. ಆದರೆ ಅದು ನಿಜ. ಹತ್ತೊಂಬತ್ತನೆ ಶತಮಾನದಲ್ಲಿ ನಡೆದ ಜೊರುಪಾರು ಸಂಗ್ರಹ ಕೆಲಸವನ್ನು ಈ ವಿದೇಶೀ ವಿದ್ವಾಂಸರೇ ಆರಂಭಿಸಿದರು. ಈ ಸಂದರ್ಭದಲ್ಲಿ ಮೂವರು ಮಹನೀಯರ ಕೆಲಸವನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಚಾರಲ್ಸ್ ಇ. ಗೋವರ್ ಅವರು The folksongs of South India ಎಂಬ ಗ್ರಂಥವನ್ನು 1871ರಲ್ಲಿ ಪ್ರಕಟಿಸಿದರು. ಅದರಲ್ಲಿ Canarese folk songs ಎಂಬ ವಿಭಾಗದಲ್ಲಿ ಕೆಲವು ಹರಿದಾಸರ ಪದಗಳನ್ನು ಕೊಟ್ಟಿದ್ದಾರೆ. ವಾಸ್ತವವಾಗಿ ಇದು ಜಾನಪದದೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲ. ಆದರೆ ಗೋವರ್ ಅವರ ದೃಷ್ಟಿ, ಧೋರಣೆ, ಉದ್ದೇಶಗಳು ಖಚಿತವಾಗಿಯೂ ಜಾನಪದಕ್ಕೆ ಸಂಬಂಧಿಸಿದವೇ. ಜನಪದ ಸಾಹಿತ್ಯ ಸಂಗ್ರಹಣೆಯ ಮಹತ್ವ, ಕ್ಷೇತ್ರಕಾರ್ಯದ ತೊಡಕುಗಳು, ಜಾನಪದದ ಸ್ವರೂಪ ಇವನ್ನೆಲ್ಲ ಗೋವರ್ ಸ್ಪಷ್ಟವಾಗಿ ಬಲ್ಲವರಾಗಿದ್ದರೂ ಕನ್ನಡ ಜಾನಪದಕ್ಕೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಸೂಚ್ಯವಾಗಿ ಹೇಳಿದ್ದರೂ, ನಿಜವಾದ ಕನ್ನಡ ಜನಪದ ಸಾಹಿತ್ಯ ಅವರ ಕೈಗೆ ಸಿಕ್ಕದೆ ಹೋದದ್ದು ಒಂದು ವಿಪರ್ಯಾಸವೇ ಸರಿ.

ಜೆ. ಎಫ್. ಫ್ಲೀಟ್ ಅವರು 1885ರಲ್ಲಿ Indian Antiquary ಸಂಪುಟದಲ್ಲಿ ಐದು ಲಾವಣಿಗಳನ್ನು ಪ್ರಕಟಿಸಿದರು. ಅವರು ಎಂಟು ಲಾವಣಿಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗ್ರಹಿಸಿದ್ದರೂ ಮೂರು ಇನ್ನೂ ಪ್ರಕಟವಾಗಬೇಕಾಗಿವೆ. ಪ್ರತಿಯೊಂದು ಲಾವಣಿಗೂ ಅಗತ್ಯವಾದ ಹಿನ್ನೆಲೆಯ ವಿವರಗಳನ್ನು ಕೊಟ್ಟು ಫ್ಲೀಟರು ಈ ಬಗೆಯ ಕೆಲಸ ಮಾಡುವವರಿಗೆ ಮಾರ್ಗದರ್ಶನ ಮಾಡಿದ್ದಾರೆ. ಸಮಕಾಲೀನ ರಾಜಕೀಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಫ್ಲೀಟರು ತಮ್ಮ ಕಾರ್ಯದಲ್ಲಿ ನಿರ್ವಿಕಾರ ದೃಷ್ಟಿಯನ್ನು ತೋರಿದ್ದಾರೆಂಬುದೂ, ಧೈರ್ಯತಳೆದಿದ್ದಾರೆಂಬುದೂ ಸ್ಪಷ್ಟವಾಗುತ್ತದೆ. ಲಾವಣಿ ಸಾಹಿತ್ಯದ ಸೊಗಸು ಹಾಗೂ ಮಹತ್ವಗಳನ್ನು ಅವರು ಚೆನ್ನಾಗಿ ಗುರುತಿಸಿದ್ದಾರೆ.

1894ರಲ್ಲಿ ಪ್ರಕಟವಾದ ಕಿಟ್ಟೆಲ್ಲರ ಕೋಶ ಗಾದೆಗಳ ಒಂದು ಕಣಜವಾಗಿದೆ. ಅರ್ಥವಿವರಣೆಗೆ ಕಿಟ್ಟೆಲ್ಲರು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಲೇಖಕರ ಕೃತಿಗಳನ್ನು ಮಾತ್ರ ಅವಲಂಬಿಸದೆ ಗಾದೆಗಳಿಗೂ ಮೊರೆಹೋಗಿದ್ದಾರೆ. ಇದರಿಂದ ಅವರ ಕೋಶದಲ್ಲಿ 4260 ಗಾದೆಗಳು ಸೇರಿವೆ. ಇದು ಸಣ್ಣ ಸಂಖ್ಯೆ ಏನಲ್ಲ. ನಾಡಿನ ನಾನಾಭಾಗಗಳಲ್ಲಿ ಆಗ ಪ್ರಚಲಿತವಾಗಿದ್ದ ಗಾದೆಗಳನ್ನು ಸಂಗ್ರಹಿಸಿ, ಉಳಿಸಲು ಕಿಟ್ಟೆಲ್ ಸಾಹಸ ಮಾಡಿದ್ದಾರೆಂದೇ ಹೇಳಬಹುದು. ಪಂಡಿತ ಕೋಶಕಾರರ ಕಣ್ಣಿಗೆ ಈ ಪಾಮರ ಸಾಹಿತ್ಯ ಬೀಳುವುದು ಸುಲಭವಲ್ಲ. ಈ ಗಾದೆಗಳನ್ನು ಆಗಲೇ ಪ್ರತ್ಯೇಕವಾಗಿ ಸಂಗ್ರಹಿಸಿದಂತೆ ತೋರುತ್ತದೆ. ಈಚೆಗೆ ರಾಮೇಗೌಡ ಅವರ ಕಿಟ್ಟೆಲ್ ಕೋಶದ ಗಾದೆಗಳ ಸಂಗ್ರಹ ಎರಡು ಮುದ್ರಣಗಳನ್ನು ಕಂಡಿದೆ.

ಕನ್ನಡ ಜನಪದ ಸಾಹಿತ್ಯದಲ್ಲಿ ಮೊದಲು ಗ್ರಂಥಸ್ಥವಾದ ಪ್ರಕಾರವೆಂದರೆ ಗಾದೆ. 1874ರಲ್ಲಿ ಪ್ರಕಟವಾದ "ಸಹಸ್ರ ಗಾಥಾಮೃತ ಕಲಶವು", 1894ರಲ್ಲಿ ಅಚ್ಚಾದ "ಸಾಮತಿ ಸಂಗ್ರಹ" ಮತ್ತು "Popular Canarese Proverbs and their English Equivalents" ಮುಂತಾದ ಗಾದೆಗಳ ಸಂಗ್ರಹಗಳು ಈ ಮಾತನ್ನು ದೃಢಪಡಿಸುತ್ತವೆ. ಈ ಶತಮಾನದ ಆರಂಭದಲ್ಲಿಯೂ ಗಾದೆಗಳ ಸಂಗ್ರಹ–ಪ್ರಕಟಣೆಯ ಕೆಲಸ ಮುಂದುವರಿಯಿತು. Three hundred Canarese Proverbs (1903), A Hand book of Canarese Proverbs (1912), ಕರ್ಣಾಟಕ ಲೋಕೋಕ್ತಿ ವಿಧಾನ (ಎ. ಮು. 1919) ಮುಂತಾದ ಪ್ರಕಟಣೆಗಳು ಇದಕ್ಕೆ ಸಾಕ್ಷಿಯಾಗಿವೆ.

ಹೀಗೆ ವಿದೇಶೀಯ ವಿದ್ವಾಂಸರು ಕನ್ನಡ ಜನಪದ ಸಾಹಿತ್ಯದ ಮೇಲೆ ಕಣ್ಣುಹಾಯಿಸಿದರೂ ಗಾದೆಗಳ ಪ್ರಕಟಣೆಯಲ್ಲಿ ಅನೇಕರು ಆಸಕ್ತಿ ವಹಿಸಿದರೂ, ಒಟ್ಟಿನಲ್ಲಿ ಬಹುಕಾಲದವರೆಗೆ ಜಾನಪದ ಅನಾದರದ ವಿಷಯವಾಗಿಯೇ ಉಳಿದದ್ದು ಒಂದು ಸೋಜಿಗ. 1915ರಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಆರಂಭದ ಸಭೆಗಳಲ್ಲಿ ಜಾನಪದ ಪುನರುಜ್ಜೀವನಕ್ಕೆ ಸಂಬಂಧಿಸಿದ ಯೋಜನೆಗಳನ್ನು ಹಾಕಿಕೊಂಡದ್ದು ಗಮನಾರ್ಹವಾದ ಸಂಗತಿ. ಅದರ ವಾರ್ಷಿಕ ಸಮ್ಮೇಳನಗಳಲ್ಲಿ ಆಗೊಮ್ಮೆ ಈಗೊಮ್ಮೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಬಂಧಗಳು ವಾಚಿಸಲ್ಪಡುತ್ತಿದ್ದವು. ಐದನೆಯ ಸಮ್ಮೇಳನದ (1919) ಲಾವಣಿಗಳನ್ನು ಕುರಿತ ಪ್ರಬಂಧ: ಒಂಬತ್ತನೇ ಸಮ್ಮೇಳನದ (1923) 'ಹಳ್ಳಿಯ ಹಾಡುಗಳು' ಎಂಬ ಶೀರ್ಷಿಕೆಯಲ್ಲಿ ಜನಪದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತೆಗಳನ್ನು ಕುರಿತ ಪ್ರಬಂಧ ಇವನ್ನು ಈ ನಿಟ್ಟಿನಲ್ಲಿ ಉಲ್ಲೇಖಿಸಬಹುದು. ಆದರೆ 1925ರಲ್ಲಿ ಶ್ರೀ ಮಾಸ್ತಿ ವೆಂಕಟೇಶಅಯ್ಯಂಗಾರ್ ಅವರು ಪ್ರಕಟಿಸಿದ "ಕನ್ನಡ ನಾಡಿನ ಲಾವಣಿ ಸಾಂಗತ್ಯ" ಲೇಖನ ಅನಾದರಕ್ಕೊಳಗಾಗಿ ಅಳಿದುಹೋಗುತ್ತಿದ್ದ ಜನಪದ ಸಾಹಿತ್ಯದ ಸೊಗಸು ಸ್ವಾರಸ್ಯಗಳ ಕಡೆಗೆ ಕನ್ನಡಿಗರನ್ನು ಕರೆಯುವ ಕೈಮರವಾಯಿತು. ಇಂಗ್ಲೀಷ್ ಸಾಹಿತ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದ ಮಾಸ್ತಿಯವರು ಅಲ್ಲಿನ ಬ್ಯಾಲೆಡ್ ಸಂಗ್ರಹಕಾರ್ಯದಿಂದಾದ ಲಾಭ ಕನ್ನಡಕ್ಕೂ ದೊರೆಯಬೇಕೆಂದು ಸಹಜವಾಗಿಯೇ ಆಶಿಸಿದರು. ಇದೇ ಸಂದರ್ಭದಲ್ಲಿಯೇ ಅವರು ಕೆಲವು ಜನಪದ ಸಂಪ್ರದಾಯಗಳ ಬಗೆಗೂ ಸೂಚ್ಯವಾಗಿ ಹೇಳಿದ್ದಾರೆ.

ಜನಪದ ಸಾಹಿತ್ಯದ ಮಹತ್ವಗಳನ್ನು ಸಾರುವ ಈ ಎಲ್ಲ ಪ್ರಯತ್ನಗಳ ಫಲವಾಗಿ ಹಾಗೂ ಕನ್ನಡ ಸಾಹಿತ್ಯದ ನವೋದಯದ ಚಟುವಟಿಕೆಗಳ ಕಾರಣದಿಂದಾಗಿ 1931ರಲ್ಲಿ 'ಗರತಿಯ ಹಾಡು' ಎಂಬ ತ್ರಿಪದಿಗಳ ಸಂಕಲನವೊಂದು ಹಲಸಂಗಿ ಸೋದರರಿಂದ ಸಂಗ್ರಹಿತವಾಗಿ ಪ್ರಕಟಿಸಲ್ಪಟ್ಟಿತು. ಇದು ಒಂದು ಅದ್ಭುತವಾದ ಕೃತಿ. ಬಹುಶಃ ಮೊತ್ತಮೊದಲ ಪ್ರಕಟಣೆಯಾಗುವ ಅವಕಾಶವನ್ನು ಪಡೆದದ್ದರಿಂದಲೋ ಏನೋ 'ಗರತಿಯ ಹಾಡು' ಇದುವರೆಗೂ ತನಗಿಂತ ಉತ್ತಮವಾದ ಸಂಗ್ರಹಕ್ಕೆ ಆಸ್ಪದವನ್ನೇ ಕೊಟ್ಟಿಲ್ಲ. ಜನಪದ ಗೀತೆಗಳ ಸೃಷ್ಟಿಕಾರ್ಯದಲ್ಲಿ ಮಹಿಳೆಯನ್ನು ಕೇಂದ್ರ ವ್ಯಕ್ತಿಯನ್ನಾಗಿ ಉಳ್ಳ ಇಲ್ಲಿನ ಸುಮಾರು ಎಂಟುನೂರು ತ್ರಿಪದಿಗಳು ಕನ್ನಡದ ಅತ್ಯುತ್ತಮ ಜನಪದ ಗೀತೆಗಳಾಗಿವೆ. ಇವೆಲ್ಲ ಕೌಟುಂಬಿಕ, ಸಾಮಾಜಿಕ ಹಾಗೂ ಕಾರ್ಯನಿರ್ವಾಹಕ (working) ಗೀತೆಗಳು. ಈ ಪ್ರಕಟಣೆಯನ್ನು ಹಿರಿಯರಾದ ಬಿ. ಎಂ. ಶ್ರೀಕಂಠಯ್ಯ, ಮಾಸ್ತಿ, ಬೇಂದ್ರೆ ಅವರು ಕೊಂಡಾಡಿದರು. ಅದೇ ಸಂದರ್ಭದಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ವಿಸ್ತಾರವಾಗಿ ಪ್ರಸ್ತಾಪಿಸಿದರು. ಮುಂದಿನ ಕೆಲಸಗಳಿಗೆಲ್ಲ "ಗರತಿಯ ಹಾಡು" ಪ್ರಕಟಣೆ ನಾಂದಿಯಾಯಿತು.

ಇದೇ ಕಾಲದ ಕೆಲವು ಮಹತ್ವಪೂರ್ಣ ಕೃತಿಗಳನ್ನು ಇಲ್ಲಿ ಉಲ್ಲೇಖಿಸಬೇಕು. ಜನಪದ ಗೀತೆಗಳ ಸಂಗ್ರಹ "ಮಲ್ಲಿಗೆ ದಂಡೆ" (1935), ಲಾವಣಿಗಳ ಸಂಕಲನ "ಜೀವನ ಸಂಗೀತ" (1933) ಉತ್ತರ ಕರ್ನಾಟಕದ ಭಾಗದಿಂದ ಬಂದ ಇನ್ನೆರಡು ಸುಂದರವಾದ ಕೃತಿಗಳು. ವಿ. ವಿ. ತೊರ್ಕೆಯವರು 1933ರಲ್ಲಿ ಉತ್ತರ ಕನಡ ಜಿಲ್ಲೆಯ ಕೆಲವು ಗೀತೆಗಳನ್ನು ಒಂದು ಚಿಕ್ಕ ಸಂಗ್ರಹದಲ್ಲಿ ಪ್ರಕಟಿಸಿದರು. 1933ರಲ್ಲಿ ಅರ್ಚಕ ರಂಗಸ್ವಾಮಿಯವರು ಪ್ರಕಟಿಸಿದ 'ಹುಟ್ಟಿದ ಹಳ್ಳಿ—ಹಳ್ಳಿಯ ಹಾಡು' ಎಂಬ ಗ್ರಂಥ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಮಾತ್ರವಲ್ಲ ಭಾರತೀಯ ಜಾನಪದ ಪ್ರಕಟಣೆಗಳಲ್ಲಿಯೇ ಒಂದು ಮಹತ್ವದ ಗ್ರಂಥವೆಂದು ನಾನು ಭಾವಿಸಿದ್ದೇನೆ. ಇಂದು ಯಾವುದನ್ನು ನಾವು ಜಾನಪದವೆಂದು ಕರೆಯುತ್ತೇವೆಯೋ ಅದರ ಪರಿಚಯವೇ ಇಲ್ಲದೆ ಆ ಕಲ್ಪನೆಗೆ ಸೊಗಸಾದ ರೂಪಕೊಟ್ಟ ಗ್ರಂಥ ಇದು. ಬಂಡಿಹೊಳೆ ಎಂಬ ತಮ್ಮ ಊರಿನ ಆಚಾರ ವಿಚಾರಗಳು, ನಂಬಿಕೆ ನಡವಳಿಕೆಗಳು, ಪೌರಾಣಿಕ ಐತಿಹಾಸಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗತಿಗಳು, ಕಲೆ, ಸಾಹಿತ್ಯ, ನಡೆನುಡಿ ಎಲ್ಲವನ್ನೂ ಒಂದೆಡೆ ಸಂಗ್ರಹಿಸಿಕೊಟ್ಟಿದ್ದಾರೆ. ಸೊಗಸಾದ ಗೀತೆಗಳು, ಗಾದೆಗಳು ಇಲ್ಲಿ ಸಂಗ್ರಹಿತವಾಗಿವೆ. ವಿಮರ್ಶಕರೊಬ್ಬರು ಸರಿಯಾಗಿ ಗುರುತಿಸಿರುವಂತೆ ಇದು "ಗ್ರಾಮಜೀವನದ ಒಂದು ವಿಶ್ವಕೋಶ". ಗೊರೂರು ರಾಮಸ್ವಾಮಿ ಅಯ್ಯಂಗಾರರು ಮತ್ತು ಟಿ. ಎನ್. ರಂಗಸ್ವಾಮಿಯವರು ಸಂಗ್ರಹಿಸಿದ "ಹಳ್ಳಿಯ ಹಾಡುಗಳು" (1938) ಹಳೆಯ ಮೈಸೂರು ಪ್ರದೇಶದ ಗೀತೆಗಳ ಮೊದಲ ಹಾಗೂ ಅತ್ಯುತ್ತಮವಾದ ಸಂಗ್ರಹವಾಗಿದೆ. ಮತಿಘಟ್ಟ ಸೋದರರ 'ನಾಡಪದಗಳು' (1947) ಕನ್ನಡದ ಅತ್ಯುತ್ತಮ ಸಂಗ್ರಹಗಳಲ್ಲಿ ಒಂದಾಗಿದೆ. ಎಲ್. ಗುಂಡಪ್ಪನವರ ಸಂಪಾದಕತ್ವದಲ್ಲಿ ಪ್ರಕಟವಾದ ಈ ಕೃತಿ ತನ್ನ ಸ್ವರೂಪವ್ಯಾಪ್ತಿಗಳಲ್ಲಿ ಇಂದಿಗೂ ಏಕೈಕವಾಗಿದೆ. ಜನಪದ ಸಾಹಿತ್ಯ ಜೀವನಗಳ ಮೇಲೆ ಬೆಳಕು ಚೆಲ್ಲುವ ದೇವುಡು ನರಸಿಂಹಶಾಸ್ತ್ರಿಗಳ 'ಕರ್ನಾಟಕ ಸಂಸ್ಕೃತಿ' (1935), ಗೊರೂರರ 'ಹಳ್ಳಿಯ ಬಾಳು' (1943), ಅನಂತರಂಗಾಚಾರ್ಯರ 'ಮಾನೌಮಿ ಪದಗಳು' (1940), ಅಜ್ಜಪ್ಪನವರ 'ಕನ್ನಡ ಗಾದೆಗಳು' (1944) ಸ್ವಾತಂತ್ರ್ಯ ಪೂರ್ವದಿನಗಳಲ್ಲಿ ಬಂದ ಕೆಲವು ಮುಖ್ಯ ಪ್ರಕಟಣೆಗಳಾಗಿವೆ.

ಸಮಾಜವಾದೀ ರಾಷ್ಟ್ರಗಳಲ್ಲಿ ಜಾನಪದವನ್ನು ಹೇಗೆ ಪರಿಣಾಮಕಾರಿಯಾದ ಪ್ರಚಾರಸಾಧನವನ್ನಾಗಿ ಬಳಸಿಕೊಂಡರೆಂಬುದು ನಮಗೆ ಗೊತ್ತಿದೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಮೈಸೂರಿನ ಜವಾಬ್ದಾರಿ ಸರ್ಕಾರದ ಹೋರಾಟದ ಕಾಲದಲ್ಲಿ ಲಾವಣಿ ಹಾಡಿನ ಪ್ರಕಾರ ತುಂಬ ಪ್ರಭಾವ ಬೀರಿತೆಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು. ಬ್ರಿಟಿಷರ ಅಮಾನುಷ ದೌರ್ಜನ್ಯಗಳನ್ನೂ, ಭಾರತೀಯ ನಾಯಕರ ಗುಣಮಹಿಮೆಗಳನ್ನೂ ಹಾಡುವುದರ ಜೊತೆಗೆ ಈ ಲಾವಣಿ ಹಾಡುಗಳು ಜನರಲ್ಲಿ ಉತ್ಸಾಹ ಪುಳಕಗಳನ್ನುಂಟುಮಾಡುವುದರಲ್ಲಿಯೂ ಮಹತ್ವದ ಪಾತ್ರವಹಿಸಿದವು. ಈ ಲಾವಣಿ ಹಾಡುಗಳ ಸಂಗ್ರಹ ಈಗ ಅಗತ್ಯವಾಗಿ ಆಗಬೇಕಾಗಿದೆ. ಇವು ಈಗ ನಮ್ಮ ಜನಪದದ ಒಂದು ಭಾಗವಾಗಿ ಹೋಗಿವೆ.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕಂಡುಬಂದ ಎಷ್ಟೋ ಹೊಸ ಚಟುವಟಿಕೆ ಗಳಲ್ಲಿ ಜನಪದ ಸಾಹಿತ್ಯ ಸಂಗ್ರಹದತ್ತ ಗಮನ ಹರಿಸಿರುವುದೂ ಒಂದು. ಬಿ. ಎಂ.ಶ್ರೀ, ಬೇಂದ್ರೆ, ಮಾಸ್ತಿ, ಬೆಟಗೇರಿ, ಲಿಂಗಣ್ಣ, ದೇವುಡು, ಕಾರಂತ, ಗೊರೂರು, ಮತಿಘಟ್ಟ, ತೀ. ನಂ. ಶ್ರೀ —ಮೊದಲಾದವರು ಜನಪದ ಸಾಹಿತ್ಯ ಪ್ರಚಾರವನ್ನು ತಮ್ಮ ಜೀವನದ ಉದ್ದೇಶಗಳಲ್ಲಿ ಒಂದನ್ನಾಗಿಸಿಕೊಂಡಿದ್ದಾರೇನೋ ಎನ್ನುವಷ್ಟರಮಟ್ಟಿಗೆ ಈ ಕ್ಷೇತ್ರದೊಡನೆ ತಾದಾತ್ಮ್ಯತೆಯನ್ನು ತೋರಿದ್ದು ಅನೇಕ ಉತ್ಸಾಹಿ ತರುಣರನ್ನು ಜಾನಪದದತ್ತ ಆಕರ್ಷಿಸಲು ಕಾರಣವಾಯಿತು. ಉತ್ತರ ಕರ್ನಾಟಕದ ಕಡೆ ಬಿ. ಎಸ್. ಗದ್ದಗಿ ಮಠ, ಹಳೆ ಮೈಸೂರಿನಲ್ಲಿ ಕೆ. ಆರ್. ಕೃಷ್ಣಸ್ವಾಮಿ ಜನಪದ ಸಂಗ್ರಹ ಪ್ರಕಟಣೆಗಳ ಕೆಲಸವನ್ನು ವ್ಯಾಪಕವಾಗಿ ಕೈಗೊಂಡರು. ಗದ್ದಗಿಮಠ ಜಾನಪದ ವಿಷಯವನ್ನು ಆರಿಸಿ ಕೊಂಡು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪಿಎಚ್. ಡಿ. ಪದವಿ ಪಡೆದರು. ಜಾನಪದ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಕನ್ನಡದಲ್ಲಿ ಇಂಥ ಪದವಿ ಪಡೆದವರಲ್ಲಿ ಅವರೇ ಮೊದಲಿಗರು. ಆರೆಂಟು ಸಂಗ್ರಹಗಳನ್ನು ಪ್ರಕಟಿಸಿದ ಗದ್ದಗಿಮಠರು ಅಕಾಲಮರಣಕ್ಕೆ ತುತ್ತಾದದ್ದು ಜಾನಪದ ಕ್ಷೇತ್ರದಲ್ಲಿ ಭರಿಸಲಾಗದ ಒಂದು ನಷ್ಟವೆಂದೇ ಹೇಳಬೇಕು. ಕೃಷ್ಣಸ್ವಾಮಿ ತಮ್ಮ ಒಬ್ಬಿಬ್ಬರು ಮಿತ್ರರ ನೆರವಿನಿಂದ ಇಪ್ಪತ್ತೈದಕ್ಕೂ ಹೆಚ್ಚು ಗೀತಲಾವಣಿಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. ನಮ್ಮಲ್ಲಿ ಇನ್ನೊಬ್ಬ ವ್ಯಕ್ತಿ ಇಷ್ಟೊಂದು ಪ್ರಮಾಣದ ಕೆಲಸವನ್ನು ಮಾಡಿಲ್ಲವೆಂಬುದು ನಿಜ. ಆದರೆ ಅವರ ಕೆಲಸ ಕೇವಲ ಗುದ್ದಲಿ ಕೆಲಸ. ಸಂಗ್ರಹ ಸಂಪಾದನೆಗಳ ವಿಚಾರ ಅಷ್ಟಾಗಿ ತಿಳಿಯದ ಕೃಷ್ಣಸ್ವಾಮಿ ಸಾಹಿತ್ಯದ ಕೆಲವು ಭಾಗಗಳನ್ನು ಉಳಿಸಿಕೊಟ್ಟು ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದಾರೆ. 'ಜನಪದ ಸಾಹಿತ್ಯ ಅಕಾಡೆಮಿ' ಎಂಬ ಒಂದು ಪ್ರಕಾಶನ ಸಂಸ್ಥೆಯನ್ನೇ ಕಟ್ಟಿ ಸಾಕಷ್ಟು ಕೀರ್ತಿ ಸಂಪತ್ತುಗಳನ್ನು ಗಳಿಸಿದ ಈ ತರುಣರು ಈಗ ಯಾವ ಕೆಲಸವನ್ನೂ ಮಾಡದೆ ತಟಸ್ಥರಾಗಿರುವುದು ಕನ್ನಡ ಜನಪದ ಕ್ಷೇತ್ರದ ಸೋಜಿಗಗಳಲ್ಲಿ ಒಂದಾಗಿದೆ.

ಅನೇಕ ಉತ್ಸಾಹೀ ಸಂಗ್ರಾಹಕರು ಕಾಲಕಾಲಕ್ಕೆ ವಿವಿಧ ಪ್ರದೇಶಗಳ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಜನಪದ ಗೀತೆಗಳ ಸಂಗ್ರಹ ಕನ್ನಡದಲ್ಲಿ ನಡೆದ ದೊಡ್ಡ ಕೆಲಸ. ದಕ್ಷಿಣ ಕನ್ನಡ ಜಿಲ್ಲೆಯ ಗೀತೆಗಳನ್ನು ಮರಕಿಣಿ, ಚಂದ್ರಶೇಖರ ಐತಾಳ, ಶಿವರಾಮ ಐತಾಳ, ಸುಬ್ರಹ್ಮಣ್ಯ ಕೆದಲಾಯ ಅವರೂ, ಬಳ್ಳಾರಿ ಜಿಲ್ಲೆಯ ಗೀತೆಗಳನ್ನು ವಿರೂಪಾಕ್ಷಗೌಡ, ಮುದೆನೂರ ಸಂಗಣ್ಣ ಅವರೂ ಉತ್ತರ ಕನ್ನಡ ಜಿಲ್ಲೆಯ ಗೀತೆಗಳನ್ನು ಎಲ್. ಆರ್. ಹೆಗಡೆ, ಎನ್. ಆರ್ ನಾಯಕ ಅವರೂ, ಚಾಮರಾಜ ನಗರ, ಹೆಗ್ಗಡದೇವನಕೋಟೆ ಪ್ರದೇಶಗಳ ಗೀತೆಗಳನ್ನು ಮಹಾದೇವನಾಯಕರೂ, ಮಲೆನಾಡು ಕಡೆಯ ಗೀತಗಳನ್ನು ಕೆ. ವಿ. ಸುಬ್ಬಣ್ಣ, ಕೆ. ವಿ. ಲಿಂಗಪ, ಶ್ರೀಕಂಠ ಕೂಡಿಗೆ ಅವರೂ, ಹಳೇ ಮೈಸೂರು ಭಾಗಗಳಿಂದ ಜೀ. ಶಂ. ಪರಮಶಿವಯ್ಯ, ಮತಿಘಟ್ಟ ಕೃಷ್ಣಮೂರ್ತಿ, ಗೊ. ರು. ಚನ್ನಬಸಪ್ಪ, ಎಚ್. ಎಲ್. ನಾಗೇಗೌಡ, ಡಿ. ಲಿಂಗಯ್ಯ, ರಾಜಶೇಖರ, ವಸಂತಕುಮಾರ, ರಾಮೇಗೌಡ ಮೊದಲಾದವರೂ ಉತ್ತರ ಕರ್ನಾಟಕದ ಕಡೆಯಿಂದ ಚಂದ್ರಶೇಖರ ಕಂಬಾರ, ಸುಶೀಲಾ ಪಟ್ಟಣಶೆಟ್ಟಿ, ಆರ್. ಎಸ್. ಪಂಚಮುಖಿ, ಜ್ಯೋತಿಹೊಸೂರ ಮೊದಲಾದವರೂ ಹೇರಳವಾಗಿ ಸಂಪಾದಿಸಿದ್ದಾರೆ. ಇವು ಕೇವಲ ಪ್ರಾತಿನಿಧಿಕವಾದ ಕೆಲವು ಹೆಸರುಗಳು. ಈ ತಂಡ ಇನ್ನೂ ಬಹಳ ದೊಡ್ಡದಿದೆ.

ಪ್ರಕೃತ ಲೇಖಕನು ಕನ್ನಡ ಜಾನಪದ ಗ್ರಂಥಸೂಚಿಯೊಂದನ್ನು ಸಿದ್ಧಪಡಿಸಿದ್ದು ಅದರಲ್ಲಿ ಈವರೆಗೆ ಅಚ್ಚಾದ ನೂರಾರು ಜಾನಪದ ಗ್ರಂಥಗಳ ಸ್ವರೂಪ ವಿವರಣೆ ದೊರೆಯುತ್ತದೆ. ಇದರಲ್ಲಿ ಬಹುಪಾಲು ಜನಪದ ಗೀತೆಗಳ ಸಂಗ್ರಹವೇ ಆಗಿದೆ ಎನ್ನುವುದು ಕನ್ನಡದಲ್ಲಿ ನಡೆದಿರುವ ಕೆಲಸದ ಬಗೆಯನ್ನು ಸೂಚಿಸುತ್ತದೆ. 1953ರ ವರೆಗೂ ಕನ್ನಡ ಜನಪದ ಕಥೆಗಳ ಸಂಗ್ರಹವೊಂದು ಪ್ರಕಟವಾಗಲಿಲ್ಲವೆಂಬುದನ್ನು ಗಮನಿಸಿದರೆ ಜಾನಪದ ಪ್ರಕಟಣೆಗಳ ಸೀಮಿತ ಸ್ವರೂಪ ಇನ್ನೂ ಸ್ಪಷ್ಟವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಕ್ಕೂ ಮೊದಲೆ ಗ್ರಿಮ್ ಸೋದರರ ಕಥೆಗಳು, ಭಾರತದ ಇತರ ಪ್ರದೇಶಗಳ ಕತೆಗಳು ಅನುವಾದಗೊಂಡು ಕನ್ನಡದಲ್ಲಿ ಪ್ರಕಟವಾಗಿದ್ದರೂ ಕನ್ನಡ ಜನಪದ ಕಥೆಗಳ ಸಂಗ್ರಹ ಪ್ರಕಟವಾಗುವುದು ತೀರ ತಡವಾಯಿತು. ಈ ಮಾತು ಇತರ ಪ್ರಕಾರಗಳಿಗೂ ಅನ್ವಯುವಾಗುತ್ತದೆ. ಕನ್ನಡದಲ್ಲಿ ಜಾನಪದಕ್ಕೂ ಜನಪದ ಸಾಹಿತ್ಯಕ್ಕೂ ಇರುವ ಸಂಬಂಧಗಳ ಅರಿವು ಮೂಡಿದ್ದೇ ಈಚೆಗೆ. ಅದರಲ್ಲಿಯೂ ಜನಪದ ಸಾಹಿತ್ಯ ಎಂದರೆ ಗೀತೆಗಳು ಮಾತ್ರವೇ ಎಂದು ಭ್ರಮಿಸಿದ್ದ ಕಾಲವೂ ದೀರ್ಘವಾಗಿದೆ.

1966ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವಗಳ ಅಂಗವಾಗಿ ನಡೆದ ಲೇಖಕರ ಸಮ್ಮೇಳನದಲ್ಲಿ ನಡೆದ ಜಾನಪದ ಗೋಷ್ಠಿ, ಕನ್ನಡ ಜಾನಪದ ಚಟುವಟಿಕೆಗಳಿಗೆ ನೂತನ ತಿರುವೊಂದನ್ನು ತಂದುಕೊಟ್ಟಿತು. ಜಾನಪದದ ಕಲ್ಪನೆಯನ್ನು ಅಲ್ಲಿ ವಿವರಿಸಿ, ಜಾನಪದ ವೈಜ್ಞಾನಿಕ ಅಧ್ಯಯನಕ್ಕೆ ಕರೆಕೊಡಲಾಯಿತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ. ಎ. ತರಗತಿಗಳಿಗೆ ಜಾನಪದ ಸಾಹಿತ್ಯವನ್ನು ಪಠ್ಯವಿಷಯವನ್ನಾಗಿ ಸೇರಿಸಿದ್ದು, ಜಾನಪದ ವಸ್ತುಸಂಗ್ರಹಾಲಯವೊಂದನ್ನು ಸ್ಥಾಪಿಸಿದ್ದು, ಜಾನಪದ ಗ್ರಂಥಗಳನ್ನು ಪ್ರಕಟಿಸಲು ತೊಡಗಿದ್ದು, ಈ ಕ್ಷೇತ್ರಕ್ಕೆ ಹೊಸ ಚಾಲನೆ ನೀಡಿತು. 1967ರಲ್ಲಿ ಮೊದಲಬಾರಿಗೆ ತರೀಕೆರೆಯಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆದದ್ದು, ಆ ಸಂದರ್ಭದಲ್ಲಿ ಕರ್ನಾಟಕ ಜಾನಪದ ಪರಿಷತ್ ಅಸ್ತಿತ್ವಕ್ಕೆ ಬಂದದ್ದು ತುಂಬ ಮಹತ್ವದ ಘಟನೆಗಳು. ಈ ಎಲ್ಲ ಕಾರ್ಯಗಳೂ ಉತ್ಸಾಹೀ ಕಾರ್ಯಕರ್ತರಿಗೆ ನವದಿಗಂತಗಳನ್ನು ತೆರೆದಿವೆ. ಈ ಆರೇಳು ವರ್ಷಗಳಲ್ಲಿ ಅನೇಕ ತರುಣರು ಜಾನಪದ ಅಧ್ಯಯನವನ್ನು ತಮ್ಮ ಜೀವನದ ಉದ್ದೇಶವನ್ನಾಗಿ ಸ್ವೀಕರಿಸಿದ್ದಾರೆ. ಜೀಶಂಪ, ಸಿ.ಪಿ.ಕೆ, ರಾಮೇಗೌಡ, ಸುಧಾಕರ, ರಾಜೇಗೌಡ, ಮರುಳಸಿದ್ದಪ್ಪ, ಸುಂಕಾಪುರ, ಧೂಪದ, ಕ್ಯಾತನಹಳ್ಳಿ ರಾಮಣ್ಣ, ರಾಜಪ್ಪ, ತಿಪ್ಪೇಸ್ವಾಮಿ, ಧವಳಶ್ರೀ, ದಾಸೇಗೌಡ, ಈಶ್ವರಚಂದ್ರ, ರಾಜೇಂದ್ರ ಲಕ್ಕಪ್ಪಗೌಡ, ವಿವೇಕರೈ ಮೊದಲಾದವರನ್ನು ಈ ಸಂದರ್ಭದಲ್ಲಿ ಹೆಸರಿಸಬಹುದು. ಬರಿಯ ಜಾನಪದ ಗೀತಗಳಿಂದಲೇ ತುಂಬಿಹೋಗಿದ್ದ ಜಾನಪದ ಲಾವಣಿ, ಒಗಟು, ಗಾದೆ, ನಂಬಿಕೆ, ಶಿಶುಪ್ರಾಸ, ವಿಚಾರ, ವಿಮರ್ಶೆ, ಸಂಶೋಧನೆ, ಕಲೆ, ಸಂಪ್ರದಾಯ, ಆಟಗಳು, ವೈದ್ಯ, ಉಡುಗೆ ತೊಡುಗೆ ಮುಂತಾದ ನಾನಾ ಪ್ರಕಾರಗಳಲ್ಲಿ ಈಗ ಸಂಪದ್ಯುಕ್ತವಾಗಿದೆ. ನೂರಾರು ಪುಸ್ತಕಗಳು ಪ್ರಕಟವಾಗಿವೆ. ಪಿಎಚ್. ಡಿ. ಪ್ರಬಂಧಗಳು ಸಿದ್ಧವಾಗುತ್ತಿವೆ. ರಾಜ್ಯ ಸಾಹಿತ್ಯ ಅಕಾಡೆಮಿ ಜಾನಪದ ಪುಸ್ತಕಗಳಿಗಾಗಿಯೇ ಪ್ರತ್ಯೇಕ ಬಹುಮಾನದ ವ್ಯವಸ್ಥೆ ಮಾಡಿದೆ. ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನೇ ಗಳಿಸಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತು 'ಜಾನಪದ'ಕ್ಕಾಗಿ ಮೀಸಲಾದ ಒಂದು ನಿಯತ ಕಾಲಿಕವನ್ನೇ ಪ್ರಕಟಿಸುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ. ಎ. ತರಗತಿಗಿದ್ದ ಒಂದು ಪತ್ರಿಕೆ ಈಗ ಒಂದು ಐಚ್ಛಿಕ ಗುಂಪಾಗಿ ಬೆಳೆದಿವೆ. ಇದರಲ್ಲಿ ವಿದ್ಯಾರ್ಥಿಗಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತಿಯ ಸ್ವರೂಪವನ್ನೂ, ಜಾನಪದದ ವಿಧಿವಿಧಾನಗಳನ್ನೂ ಕನ್ನಡ ಜನಪದ ಸಾಹಿತ್ಯವನ್ನೂ ಬೋಧಿಸಲಾಗುತ್ತಿದೆ. ವಾಸ್ತವವಾಗಿ ಈ ತರಗತಿಗಳಿಂದ ಹೊರ ಬಂದ ಅನೇಕ ವಿದ್ಯಾರ್ಥಿಗಳು ಈಗ ಜಾನಪದಕ್ಷೇತ್ರದಲ್ಲಿ ಗಣನೀಯ ಕೆಲಸ ಮಾಡಿದ್ದಾರೆ. ಜಾನಪದ ಅಧ್ಯಯನ ಕೇವಲ ಕನ್ನಡ ಎಂ.ಎ. ತರಗತಿಗಳಿಗೆ ಸೀಮಿತವಾಗಬಾರದೆಂಬ ಉದ್ದೇಶದಿಂದ ಕೆಲವು ವರ್ಷಗಳ ಕೆಳಗೆ ಜಾನಪದದಲ್ಲಿ ಸ್ನಾತಕೋತ್ತರ ಡಿಪ್ಲೊಮಾ ತರಗತಿಗಳನ್ನು ಆರಂಭಿಸಲಾಯಿತು. ಕನ್ನಡ ಅಧ್ಯಯನ ಸಂಸ್ಥೆಯು ಜಾನಪದ ಮಾಲೆಯಲ್ಲಿ ಈತನಕ ಮೂವತ್ತಕ್ಕೂ ಹೆಚ್ಚು ಬಗೆಬಗೆಯ ಗ್ರಂಥಗಳು ಪ್ರಕಟ ವಾಗಿವೆ. ಇಲ್ಲಿನ ಜಾನಪದ ವಸ್ತುಸಂಗ್ರಹಾಲಯ ದೇಶವಿದೇಶಗಳ ವಿದ್ವಾಂಸರನ್ನು ಆಕರ್ಷಿಸುತ್ತಿದೆ. ಇದಕ್ಕೆಲ್ಲ ಕಿರೀಟಪ್ರಾಯವಾಗಿರುವಂತೆ, 1965ರ ಶೈಕ್ಷಣಿಕ ವರ್ಷ ದಿಂದ ಜಾನಪದದಲ್ಲಿ ಎಂ.ಎ. ತರಗತಿಗಳನ್ನು ಆರಂಭಿಸಲಾಯಿತು. ಬಹುಶಃ ಇಡಿಯ ರಾಷ್ಟ್ರದಲ್ಲಿ, ಖಂಡಿತವಾಗಿಯೂ ದಕ್ಷಿಣ ಭಾರತದಲ್ಲಿ, ಇದು ಈ ಬಗೆಯ ಮೊದಲ ನೆಯ ಪ್ರಯತ್ನ.

ಮೈಸೂರು ವಿಶ್ವವಿದ್ಯಾನಿಲಯದ ಹಾದಿಯನ್ನೇ ಕರ್ನಾಟಕದ ಇನ್ನೆರಡು ವಿಶ್ವ ವಿದ್ಯಾಲಯಗಳೂ ಅನುಸರಿಸಿವೆ. ಅಲ್ಲಿಯೂ ಕನ್ನಡ ಎಂ.ಎ. ತರಗತಿಗಳಲ್ಲಿ ಜಾನಪದ ವನ್ನು ಬೋಧಿಸಲಾಗುತ್ತಿದೆ. ಜಾನಪದ ಪ್ರಕಟಣೆಗಳನ್ನು ಹೊರತರಲಾಗುತ್ತಿದೆ. ಕರ್ನಾಟಕ ವಿಶ್ವವಿದ್ಯಾಲಯ ಜನಪದ ಸಾಹಿತ್ಯದಲ್ಲಿ ಎಂ.ಎ. ತರಗತಿಗಳನ್ನು ಆರಂಭಿಸಿದೆ; ಜಾನಪದ ಸಮ್ಮೇಳನಗಳನ್ನು ನಡೆಸುತ್ತಿದೆ. ವಿಶ್ವವಿದ್ಯಾನಿಲಯಗಳು ಜಾನಪದದತ್ತ ಗಮನ ಹರಿಸಿದ್ದರಿಂದ ಈ ಅಧ್ಯಯನಕ್ಕೆ ವಿಶೇಷ ಮಹತ್ವ ಒದಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ವಿಶ್ವವಿದ್ಯಾನಿಲಯದ ತರಗತಿಗಳು ಜಾನಪದ ಅಧ್ಯಯನಕ್ಕೆ ಇನ್ನೂ ಹೆಚ್ಚಿನ ಶಕ್ತಿ ಸಾಮರ್ಥ್ಯವನ್ನೂ, ಶಾಸ್ತ್ರೀಯ ದೃಷ್ಟಿಯನ್ನೂ ತಂದುಕೊಡಬೇಕಾಗಿದೆ ಎಂಬುದನ್ನು ನಾವು ಮರೆಯಬಾರದು.

1967ರಲ್ಲಿ ಕರ್ನಾಟಕ ಜಾನಪದ ಪರಿಷತ್ತು ಆರಂಭವಾದ ಮೇಲೆ ಮಂಗಳೂರು, ನಾಗಮಂಗಲಗಳಲ್ಲಿ ಎರಡು ದೊಡ್ಡ ಸಮ್ಮೇಳನಗಳನ್ನು ನಡೆಸಿದೆ. ಕನ್ನಡ ಸಾಹಿತ್ಯ ಪರಿಷತ್ತು ಜನಪದ ಕಲೆಗಳ ಮಾಹಿತಿಗಳನ್ನು ಸಂಗ್ರಹಿಸುವ ಯೋಜನೆಯೊಂದನ್ನು ಹೊಂದಿದ್ದು, ಪ್ರತಿ ಜಿಲ್ಲೆಗಳಲ್ಲಿಯೂ ಕಲಾ ಮೇಳಗಳನ್ನು ನಡೆಸುತ್ತಿದೆ. ಈ ಮೇಳ ಸಮ್ಮೇಳನಗಳಲ್ಲಿ ಜಾನಪದ ವಿದ್ವಾಂಸರೂ, ಕಲಾವಿದರ ತಂಡಗಳೂ ಬೇರೆ ಬೇರೆ ಭಾಗಗಳಿಂದ ಬಂದು ಸೇರಲು ಚರ್ಚಿಸಲು ವಿಚಾರವಿನಿಮಯ ಮಾಡಿಕೊಳ್ಳಲು ಅವಕಾಶ ಒದಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರತಿವರ್ಷವೂ ಜನಪದ ಕಲಾಮೇಳಗಳನ್ನು ನಡೆಸುತ್ತದೆ. ಸರ್ಕಾರಿ ಸಮಾರಂಭ. ಗಳಲ್ಲಿ ಜನಪದ ಕಲಾಮೇಳಗಳಿಗೆ ಈಗೀಗ ಅವಕಾಶ ದೊರೆಯುತ್ತಿದೆ. ಮುಗ್ಧರಾದ ಜನಪದ ಕಲಾವಿದರಿಗೆ ಸಣ್ಣಪುಟ್ಟ ಪ್ರಮಾಣದಲ್ಲಾದರೂ ಸನ್ಮಾನ, ಗೌರವಗಳು ಸಲ್ಲುತ್ತಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಕ್ಷಗಾನ ನಮ್ಮ ಹೆಮ್ಮೆಯ ಜನಪದ ಕಲೆಗಳಲ್ಲಿ ಒಂದಾಗಿದೆ. ಅದರ ಪುನರುಜ್ಜೀವನಕ್ಕೆ ಉಡುಪಿಯಲ್ಲಿ ಒಂದು ಕೇಂದ್ರವೇ ಆರಂಭವಾಗಿದೆ. ಡಾ. ಶಿವರಾಮ ಕಾರಂತರೂ, ಕು. ಶಿ. ಹರಿದಾಸಭಟ್ಟರೂ ಈ ಕೇಂದ್ರದ ಪ್ರಾಣಸ್ವರೂಪ ರಾಗಿದ್ದಾರೆ. ಇಂದಿನ ಅಗತ್ಯಕ್ಕೆ ತಕ್ಕಂತೆ ಯಕ್ಷಗಾನವನ್ನು ಉಳಿಸಿ ಬೆಳೆಸಿ ಕೊಳ್ಳುವ ಪ್ರಯತ್ನ ಇಲ್ಲಿ ನಡೆದಿದೆ. ಯಕ್ಷಗಾನಕ್ಕೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಾನ್ಯತೆ ದೊರಕಿಸುವಲ್ಲಿ ಈ ಕೇಂದ್ರದ ಸಾಧನೆ ತುಂಬ ದೊಡ್ಡದು. ಹೊಟ್ಟೆಯ ಪಾಡಿಗಾಗಿ ಹೋರಾಡಬೇಕಾಗಿಬಂದಿರುವ ಈ ದಿನಗಳಲ್ಲಿ ಸಹಜವಾಗಿಯೇ ಹೊಸ ಪೀಳಿಗೆಯವರಲ್ಲಿ ಯಕ್ಷಗಾನ ಕಲಿಯುವ ಕಡೆ ಆಸಕ್ತಿ ಇಲ್ಲ. ಕಲಿತರೂ ಅದು ಶುದ್ಧ ಯಕ್ಷಗಾನವಲ್ಲ. ಈ ಪರಿಸ್ಥಿತಿಯನ್ನು ಹೋಗಲಾಡಿಸಿ ಕೆಲವರಿಗಾದರೂ ಈ ಕಲಿಕೆಯನ್ನು ಶಾಸ್ತ್ರೀಯವಾಗಿ ಕಲಿಸುವ ಈ ಕೇಂದ್ರದ ಯೋಜನೆ ಅಭಿಮಾನ ಮೂಡಿಸುವಂಥದು.

ಕರ್ನಾಟಕದಲ್ಲಿ ಜಾನಪದ ಚಟುವಟಿಕೆಗಳು ಈಗ ತುಂಬ ಜೀವಂತವಾಗಿವೆ. ಭಾರತದ ಇತರ ಭಾಷಾಪ್ರದೇಶಗಳಿಗೆ ಹೋಲಿಸಿದರೆ ತುಂಬ ಮಹತ್ವದವಾಗಿವೆ. ಬಹುಪಾಲು ಕೆಲಸ ಸಾಹಿತ್ಯ ಸಂಗ್ರಹಕ್ಕೇ ಸೀಮಿತವಾಗಿದ್ದರೂ, ವೈದ್ಯ, ಕಲೆ, ನಂಬಿಕೆ, ನಡವಳಿಕೆಗಳ ಬಗೆಗೆ ಕೆಲವರಾದರೂ ಆಸಕ್ತಿ ವಹಿಸುತ್ತಿರುವುದು ಶುಭಸೂಚನೆ ಯಾಗಿದೆ. ಇಲ್ಲಿಯೂ ಈಗ ನಡೆಯುತ್ತಿರುವುದು ಕೇವಲ ಸಂಗ್ರಹ ಕಾರ್ಯವೆ. ಸಿದ್ಧಾಂತಗಳನ್ನು ಮಂಡಿಸುವುದು, ವಿಶ್ಲೇಷಣೆ ಮಾಡುವುದು ಏನೇನೂ ನಡೆಯುತ್ತಿಲ್ಲ. ಆದರೆ ಶೀಘ್ರಗತಿಯ ನಗರೀಕರಣದಿಂದ ಬೇಗ ಬೇಗ ಮಾಸುತ್ತಿರುವ ಜನಪದ ಜೀವನವನ್ನೂ ಅದರ ಅಭಿವ್ಯಕ್ತಿಯನ್ನೂ ಸಂಗ್ರಹಿಸಬೇಕಾದದ್ದು ತೀರ ಅಗತ್ಯ. ಈ ತಲೆಮಾರು ಅದನ್ನು ಉಳಿಸಿಟ್ಟರೆ ಮುಂದಿನ ತಲೆಮಾರು ತನಗೆ ಬೇಕಾದ ಹಾಗೆ ಅದನ್ನು ಬಳಸಿಕೊಳ್ಳಲು ಬರುತ್ತದೆ. ಆಧಾರವೇ ಇಲ್ಲದಿದ್ದರೆ ಸಿದ್ಧಾಂತದ ಮಂಡನೆ ಹೇಗೆ ಸಾಧ್ಯ ? ಸದ್ಯಕ್ಕಂತೂ ಜಾನಪದವನ್ನು ಕುರಿತ ವಿಚಾರಸಾಹಿತ್ಯವೆಂದರೆ ಬಹುಮಟ್ಟಿಗೆ ಆ ಸಾಹಿತ್ಯದ ಕಾವ್ಯಸೌಂದರ್ಯವನ್ನು ವ್ಯಾಖ್ಯಾನಿಸುವುದಷ್ಟೇ ಆಗಿದೆ. ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ, ಮನಶ್ಶಾಸ್ತ್ರ ಇವುಮುಂತಾದ ದೃಷ್ಟಿಕೋನಗಳಿಂದ ಜನಪದ ಸಾಹಿತ್ಯವನ್ನೂ ಜಾನಪದವನ್ನೂ ಅಧ್ಯಯನ ಮಾಡಲು ನಾವು ಇನ್ನೂ ತೊಡಗಬೇಕಾಗಿದೆ. ಅಲ್ಲದೆ ಜಾನಪದವನ್ನು ಜಾನಪದ ವೆಂದೇ ನೋಡಬೇಕಾದ ಅಗತ್ಯವೂ ಇದೆ. ಬಹುಶಃ ಈ ಹೊತ್ತು ನಾಡಿನಾದ್ಯಂತ ನಡೆಯುತ್ತಿರುವ ಬಗೆಬಗೆಯ ಚಟುವಟಿಕೆಗಳು ಈ ಬಗೆಯ ಕೆಲಸಕ್ಕೆ ಬಹು ಬೇಗನೆ ಪ್ರಚೋದನೆಯನ್ನು ನೀಡಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎ. ಕೃಷ್ಣಮೂರ್ತಿ
ಎಂ. ಎನ್. ಪ್ರಭಾಕರ್

ಹರ್ತಿ ಬಯಲಿನ ಜನಪದ ಖಂಡಕಾವ್ಯಗಳು

ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಎರಡುಮೂರು ದಶಕಗಳು ಕಳೆದರೂ ಕನ್ನಡ ಜಾನಪದದ ವಿಚಾರದ ಬಗ್ಗೆ ಬಹುಜನ ವಿದ್ವಾಂಸರ ಗಮನ ಹರಿಯದೇ ಹೋದುದು ಆಶ್ಚರ್ಯಕ್ಕೆ ಕಾರಣವಾಗುತ್ತದೆ. ನಾಡಿನ ಮೂಲೆ ಮೂಲೆಯಿಂದ ಎಲ್ಲ ವಿಧದ ಸಾಹಿತ್ಯ ಪ್ರಾಕಾರ ಪರಿಶೋಧನೆ ನಡೆಯಿತಾದರೂ ಜಾನಪದದ ಬಗ್ಗೆ ಹೆಚ್ಚು ಜನರ ಆಸಕ್ತಿ ಹೊರಳಲಿಲ್ಲ. ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನವೋದಯ ಕ್ರಾಂತಿಯಾದಾಗ ಕಾವ್ಯರಸಿಕರ, ವಿದ್ವಾಂಸರ ಅಭಿರುಚಿ ಆಸಕ್ತಿಗಳಲ್ಲೂ ದೊಡ್ಡ ಪರಿವರ್ತನೆಯೇ ಆಗಿ ಜಾನಪದವನ್ನೂ ಮನ್ನಿಸುವ ದಿನಗಳು ಹತ್ತಿರವಾದವು.[1]

ಗೋವರ್, ಫ್ಲೀಟ್, ಕಿಟಲ್, ರೈಸ್ ಇವರುಗಳು ಕರ್ಣಾಟಕದಲ್ಲಿನ ಸಾವಿರಾರು ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದರು. ತಾಡಪ್ರತಿಗಳನ್ನು ಸಂಗ್ರಹಿಸಿ ಪರಿಷ್ಕರಿಸಿ ಸಂಪಾದಿಸಿದರು. ಇದರೊಡನೆ ಜಾನಪದ ಅಧ್ಯಯನಕ್ಕೂ ಬುನಾದಿ ಹಾಕಿಕೊಟ್ಟರು. ಸುಮಾರು 1919ರ ವೇಳೆಗೆ ಬೆಳಕು ಕಂಡ ಮಾಸ್ತಿಯವರ ಲೇಖನ 'ಲಾವಣಿ ಸಾಹಿತ್ಯ' ಜನಪದ ಸಾಹಿತ್ಯಲೋಕದ ವಿಸ್ಮಯಕಾರಿ ವ್ಯಕ್ತಿಗಳನ್ನು ಕಥೆಯ ತುಣುಕುಗಳನ್ನೂ ತೋರಿ ಅತ್ತ ಎಲ್ಲರ ಆಸಕ್ತಿಯನ್ನೂ ಹುಟ್ಟಿಸಿತು. ಮುಂದೆ ಜಾನಪದದ ಅಧ್ಯಯನ ವ್ಯವಸ್ಥಿತರೂಪದಲ್ಲಿ ಆರಂಭವಾಯಿತು. ಇದೇ ಸಂದರ್ಭದಲ್ಲಿ ಜಾನಪದ ಮತ್ತು ಜನಪದ ಪದಗಳನ್ನು ನಿರ್ದಿಷ್ಟವಾದ ಅರ್ಥದಲ್ಲಿ ಬಳಸಿ ಅದರ ಶಾಸ್ತ್ರೀಯ ಅಧ್ಯಯನಕ್ಕೆ ಕಾರಣರಾದವರು ಡಾ|| ಹಾ. ಮಾ. ನಾಯಕರವರು. ಈ ದೆಸೆಯಲ್ಲಿ ಇದೊಂದು ಮೈಲಿಗಲ್ಲು.

ಹಾ. ಮಾ. ನಾಯಕರವರು ಜಾನಪದವನ್ನು ನಾಲ್ಕು ಬಗೆಯಾಗಿ ವಿಂಗಡಿಸುತ್ತಾರೆ. ಸಾಹಿತ್ಯಿಕ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆ ಎಂಬುದಾಗಿ. ಪುರಾಣ ಕಥೆ, ಹಾಡು, ಮೊದಲ ಗುಂಪಿನವಾಗಿ ಎರಡನೆಯ ಗುಂಪಿಗೆ ಮಾತು, ಗಾದೆ, ಒಗಟುಗಳು ಬರುತ್ತವೆ. ಮದ್ದು, ಚಿಕಿತ್ಸೆ, ಯಕ್ಷಿಣಿ, ಭವಿಷ್ಯ ಹಾಗೂ ವೈಜ್ಞಾನಿಕ ಬಗೆಗಳು ಮೂರನೇ ಭಾಗಕ್ಕೆ ಸೇರಿದವು. ಕೊನೆಯದರಲ್ಲಿ ನೃತ್ಯ,

---

[1] ಈ ಅಭಿಪ್ರಾಯವನ್ನು ಜೀಶಂಪ ಅವರ 'ಸ್ವಾತಂತ್ರ್ಯಪೂರ್ವ ಜನಪದ ಸಾಹಿತ್ಯ ಸಂಗ್ರಹ' ಎಂಬ ಲೇಖನದಿಂದ ತೆಗೆದುಕೊಳ್ಳಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗೀತ, ಆಟ, ವಿನೋದ, ನಾಟಕ, ಉಡುಗೆ ತೊಡಿಗೆಗಳ ವೈವಿಧ್ಯತೆ ಸೇರಿಕೊಳ್ಳುತ್ತವೆ.[2] ಸಾಹಿತ್ಯವರ್ಗದಲ್ಲಿ ಅಗತ್ಯವಾಗಿ ಕಂಡುಬರುವುದು ಕಲಾತ್ಮಕ ಭಾಷೆ. ಭಾಷಿಕ ವರ್ಗದಲ್ಲಿ ವ್ಯಕ್ತವಾಗುವುದು ಭಾಷೆಯ ಸಾಮಾನ್ಯ ಸ್ವರೂಪ. ಸದ್ಯಕ್ಕೆ ನಮ್ಮ ಅವಗಾಹನೆಗೆ ಬೇಕಾಗಿರುವುದು ಸಾಹಿತ್ಯಿಕ ಬಗೆಗೆ ಸಂಬಂಧಪಟ್ಟ ಚಿತ್ರದುರ್ಗ ಜಿಲ್ಲೆಯ ಹರ್ತಿ ಬಯಲಿನ[3] ಜನಪದ ಖಂಡಕಾವ್ಯಗಳ ಅಥವಾ ಕಥನಗೀತೆಗಳ ವಿಚಾರ.

ಯಾವುದೇ ನಾಡಿನ ಜನಪದ ಸಾಹಿತ್ಯವನ್ನು ಅಭ್ಯಾಸದೃಷ್ಟಿಯಿಂದ ಕೆಲವು ಪ್ರಾದೇಶಿಕ ಘಟಕಗಳನ್ನಾಗಿ ವಿಂಗಡಿಸಿಕೊಳ್ಳುವುದು ಅನಿವಾರ್ಯ ಎಂಬುದು ವಿದ್ವಾಂಸರ ಅಭಿಪ್ರಾಯ.[4] ಈ ವಿಭಾಗ ಭಾಷಾ ವೈವಿಧ್ಯಕ್ಕೆ ಸಂಬಂಧಿಸಿರಬಹುದು. ಸಾಂಸ್ಕೃತಿಕ, ರಾಜಕೀಯ, ಅಥವಾ ಭೌಗೋಳಿಕ ಪರಿಧಿಯಲ್ಲಿ ಒಳಗೊಂಡಿರಬಹುದು. ಈ ಚೌಕಟ್ಟಿನೊಳಗೆ ಆಯಾ ಪ್ರಾಂತದ ಜನಪದ ಸಾಹಿತ್ಯವನ್ನೆಲ್ಲ ಪರಿಗಣಿಸಿ ಪರಿಶೀಲಿಸಿದಾಗಲೇ ಆ ಕಾರ್ಯ ಅತ್ಯಂತ ಸಮರ್ಪಕವಾದೀತು.

ಕರ್ಣಾಟಕದ ಜನಪದ ಸಾಹಿತ್ಯಕ್ಕೆ ಪ್ರಾದೇಶಿಕ ರೇಖೆಗಳನ್ನೆಳೆಯುವುದೇ ಕಷ್ಟ. ಆದರೂ ಕೆಲವು ಕಡೆ ಈ ಪ್ರಾದೇಶಿಕ ವಿಂಗಡಣೆ ಸಾಧ್ಯವಾಗಬಹುದು ಎನಿಸುತ್ತದೆ.

ಹರ್ತಿಯ ಜನಪದ ಗೀತೆಗಳಲ್ಲೆಲ್ಲಾ ಆ ಬಯಲಿನ ಎಲ್ಲ ಸ್ಥಳಗಳ ಹೆಸರೂ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಆಳಿದ ಪಾಳೆಯಗಾರರ ಹೆಸರೂ ಬರುತ್ತದೆ. ಈ ಆಧಾರದ ಮೇಲೆ ಕೆಲವು ಐತಿಹಾಸಿಕ ಕಥನಗೀತೆಗಳ ಕಾಲಮಾನವನ್ನೂ ಗುರುತಿಸಬಹುದೆನಿಸುತ್ತದೆ. ದೊರಕಿರುವ ಕಥನಗೀತೆಗಳನ್ನೆಲ್ಲಾ ಸದ್ಯಕ್ಕೆ ಮೂರು ಭಾಗಗಳಾಗಿ ವಿಂಗಡಿಸಬಹುದು. ಭಕ್ತಿ ಗೀತೆಗಳು, ಐತಿಹಾಸಿಕ ಗೀತೆಗಳು, ಇತರ ಕಥನ ಗೀತೆಗಳೆಂದು.

ಭಕ್ತಿ ಗೀತೆಗಳು: ಭಗವಂತನ ಮೇಲಿರುವ ಜೀವದ ಅನುರಕ್ತಿ ಭಕ್ತಿಯಾಗುತ್ತದೆ. ಪ್ರೀತಿ ಮತ್ತು ಪ್ರಕೃತಿ ಎರಡನ್ನು ಬಿಟ್ಟರೆ ಜೀವನದ ಮೇಲೆ ಮಹತ್ತರ ಪ್ರಭಾವ ಬೀರಿರುವುದು ಭಕ್ತಿಯೇ. ಇದಕ್ಕೆ ಅಪಾರ ನಂಬಿಕೆ ಜೀವನ ಶ್ರದ್ಧೆಗಳು ಅಗತ್ಯ.

---

2 ಡಾ॥ ಹಾ. ಮಾ. ನಾಯಕ್ ಅವರ 'ಜಾನಪದ ಸ್ವರೂಪ' ಕೃತಿಯಿಂದ.

3 ದೊಡ್ಡೇರಿ, ಸಿರಾ, ತಾವರೆಕೆರೆ, ಹಿರಿಯೂರು, ಐಮಂಗಲ, ನಿಡಂಗಲ್ಲು ಈ ಸ್ಥಳಗಳ ಬಯಲನ್ನು ಹರ್ತಿ ಬಯಲು ಎಂದು ಕರೆಯಲಾಗಿದೆ. ಈ ರೀತಿಯ ವಿಂಗಡಣೆ ಪಾವಗಡ 46ನೆಯ ಶಾಸನದಲ್ಲಿ ಕಂಡುಬಂದು ಅದನ್ನೆ ಇಲ್ಲಿ ಶೀರ್ಷಿಕೆಗೆ ಇಟ್ಟುಕೊಳ್ಳಲಾಗಿದೆ. '. . . . ಹರತಿಯ ವೀರ ಹೊಟ್ಟ್ಯಂಗ ನಾಯಕರಿಗೆ ಪಾಲಿಸಿದಂತಾ ರಾಯಸ್ತದ ನಿರೂಪದ ಪಟ್ಟೆಪ್ರತಿ ಪೂರ್ವ ನಿಮಗೆ ಸಲುವಂತಾ ಸೀಮೆ ದೊಡೇರಿ, ಸಿರೇಹ, ತಾವರೆಗೆರೆ, ಹಿರಿಯೂರು, ಆಯಿಮಂಗಲ, ನಿಡುಗಲ್ಲುದುರ್ಗಯಿದಕ್ಕೆ ಸಲುವಂತಹಾ ....' Vol. : XII E.C. ಕಾಲ : 1640.

4 ಜೀಶಂಪ ಅವರ 'ದಕ್ಷಿಣ ಕರ್ಣಾಟಕ ಜನಪದ ಸಾಹಿತ್ಯ ಸಂಗ್ರಹ' ಲೇಖನದಿಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಗರಿಕತೆಯಿಂದ ಇನ್ನೂ ದೂರವಿರುವ ಹಳ್ಳಿಯ ಮುಗ್ಧಜೀವರಲ್ಲಿ ಇದನ್ನು ನಿಚ್ಚಳವಾಗಿ ಕಾಣುತ್ತೇವೆ. ಭಕ್ತಿ ಅವರಿಗೆ ಬೇರೆಯ ಪರಿಕರಗಳಂತೆ ಅಲ್ಲ. ಜೀವನದಲ್ಲಿ ಹಾಸುಹೊಕ್ಕಾಗಿರುವ ದೇದೀಪ್ಯಮಾನ ಪ್ರಭೆ. ಅವರ ಬಾಳಿಗೆ ಭಕ್ತಿ ಆಸರೆ. ಊರುಗೋಲು. ಶಕ್ತಿ ಕೂಡ. ನೊಂದ ಜೀವರಿಗೆ ಸಾಂತ್ವನ ದಕ್ಕುವುದು ಭಕ್ತಿಯಿಂದಲೇ. ದೈನಂದಿನ ಬದುಕಿನಲ್ಲಿ ಬೇಸತ್ತು ಬಳಲಿದ ಜೀವಕ್ಕೆ ಇದು ಆಧಾರವಾಗುವುದರಿಂದ ತಮ್ಮನ್ನು ನಡೆಸುತ್ತಿರುವುದು ಈ ಶಕ್ತಿಯೇ ಎಂದು ತಿಳಿದು ತಮ್ಮ ಭಾರವನ್ನೆಲ್ಲ ಭಗವಂತನ ಮೇಲೆ ಹಾಕಿ ಹಗುರ ಮಾಡಿಕೊಳ್ಳುವುದರಿಂದ ಈ ಭಕ್ತಿಯ ಪ್ರಭಾವ ಸಾಮಾನ್ಯ ಜನಜೀವನದ ಮೇಲೆ ಇನ್ನಿಲ್ಲದ ಹಿಡಿತವನ್ನು ಹೊಂದಿದೆ. ಗ್ರಾಮೀಣ ಜನಾಂಗದಲ್ಲಿ ವ್ಯಕ್ತವಾಗುವ ಭಕ್ತಿ ಮುಗ್ಧ. ಕಂಡಕಂಡದ್ದೆಲ್ಲವನ್ನೂ ದೈವವೆಂದು ಪೂಜಿಸುವ ಭಕ್ತಿಯಿಂದ ಪುಳಕಿತರಾಗಿ ಹಾಡುವ ಈ ಜನರ ಜೀವನ ಅಷ್ಟೇ ಕ್ಲಿಷ್ಟ. ಇವರ ಬದುಕು ಪ್ರಕೃತಿಯೊಡನೆ ಸತತ ಹೋರಾಟದ್ದು. ಬದುಕಿಗೆ ಆಸರೆಯಾದ ಅವಲಂಬನವಾದ ದೇವರನ್ನು, ಗುರುವನ್ನು ಅವರ ಮಹಿಮೆಗಳನ್ನು ಕುರಿತು ತೆರೆ ತೆರೆಯಾಗಿ ಆರ್ತರಾಗಿ ಹಾಡಿದ್ದಾರೆ. ತಮ್ಮ ಜೀವನವನ್ನು ತೋರಿ ತುಂಬಿಕೊಂಡಿದ್ದಾರೆ. ಮಾನವನಿಗೆ ಎಂದಿನಿಂದ ಈ ಭಕ್ತಿಯ ಪೊಳಕೆ ಕಾಣಿಸಿಕೊಂಡಿತೋ, ಅದು ಅನಿವಾರ್ಯವಾಗಿ ಅವಶ್ಯಕತೆಯಾಗಿ ತೋರಿತೋ ಅಂದಿನಿಂದ ಇಂಥ ಭಕ್ತಿ ಸಾಹಿತ್ಯ ರಚಿತವಾಗ ತೊಡಗಿತು.[5]

ಹರ್ತಿ ಬಯಲಿನ ಎಲ್ಲ ಗ್ರಾಮಗಳಲ್ಲೂ ಆಯಾಯ ಗ್ರಾಮಕ್ಕೆ ಸಂಬಂಧಪಟ್ಟ ದೇವತೆಯನ್ನು ನಾವು ಕಾಣಬಹುದು. ಅಲ್ಲದೆ ಈ ಎಲ್ಲ ಗ್ರಾಮದೇವತೆಗಳ ಮೇಲೂ ತಪ್ಪದಂತೆ ಭಕ್ತಿಗೀತೆಗಳು ಪ್ರಚಲಿತದಲ್ಲಿವೆ. ವರ್ಷಕ್ಕೊಮ್ಮೆ ಆ ದೇವತೆಯ ಹೆಸರಿನಲ್ಲಿ ಜಾತ್ರೆ ನಡೆಯುವಾಗ ಗ್ರಾಮದ ವಯಸ್ಕ ಮಹಿಳೆಯರು ಉತ್ಸವದ ಸಂದರ್ಭದಲ್ಲಿ ಹಿಂದೆ ಹಾಡಿಕೊಂಡು ಹೋಗುತ್ತಾರೆ. ಈ ಗೀತೆಗಳ ಹಾಡುಗಾರಿಕೆ ಸಾಮಾನ್ಯವಾಗಿ ಜಾತ್ರೆಯ ಸಂದರ್ಭಗಳಲ್ಲೇ. ಇವು ಮೂರು ಸಂಧಿಗಳಿಂದ ಕೂಡಿದ್ದು ಮೊದಲಭಾಗದಲ್ಲಿ ಸಂಪೂರ್ಣವಾಗಿ ಆ ದೇವತೆಯ ಪೂಜಾರಿ, ದೇವರಿಗಾಗಿ ಮುಂಜಾನೆಯೆದ್ದು ಮಿಂದು ಬುಟ್ಟಿ ಹಿಡಿದು ಹೂತಿರಿಯುವುದಕ್ಕಾಗಿ ಹೊರಟು ವನವೆಲ್ಲ ತಿರುಗುವುದು ಬರುತ್ತದೆ. ಎರಡನೆಯ ಭಾಗದಲ್ಲಿ ಹೂವಿನ ಬುಟ್ಟಿಯನ್ನು ಗುಡಿಗೆ ತಂದಿಟ್ಟು ಪೂಜಾರಿ ದೇವರನ್ನು ಮೀಯಲಿಕ್ಕಾಗಿ ಉತ್ಸವ ಹೊರಡಿಸುತ್ತಾನೆ. ಅಲಂಕರಿಸಿದ ತೇರಿನಲ್ಲೋ ಬಂಡಿಯಲ್ಲೋ ಹೊರಟ ದೇವರು ಗಂಗೆಯಲ್ಲಿ ಮಿಂದು ಹಿಂದಿರುಗಿ ಬರುವಾಗ ಊರಪ್ರಮುಖರಿಂದ ಎಡೆಮಾಡಿಸಿಕೊಳ್ಳುತ್ತದೆ. ಮತ್ತೆ ಗುಡಿಯ ಬಳಿಗೆ ಬಂದು ಗುಡಿ ದುಂಬಿಸಿಕೊಳ್ಳುತ್ತಾನೆ. ಹಾಡುವವರು ಇದನ್ನು ಕ್ರಮವಾಗಿ 'ಪುಷ್ಪ ಎತ್ತದು,' 'ಜಲದಿಗೋಗದು,' 'ಗುಡಿದುಂಬದು' ಎಂದು ಕರೆಯು

---

[5] ರಾ. ಗೌ. ಅವರ 'ಜನಪದ ಭಕ್ತಿ ಗೀತೆಗಳು' ಎಂಬ ಲೇಖನದಿಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಾರೆ. ಎಲ್ಲ ಗ್ರಾಮಗಳ ದೇವತೆಗಳ ಮೇಲೂ ಈ ಗೀತೆ ಒಂದೇ ತೆರನಾಗಿದ್ದು ಪದ್ಯಗಳಲ್ಲಿ ಆಯಾಯ ದೇವತೆಯ, ಗ್ರಾಮದ ಹೆಸರು ಮಾತ್ರ ಬದಲಾಗುತ್ತದೆ. 'ಪುಸ್ಪ ಎತ್ತುವ' ಭಾಗದಲ್ಲಿ ಪೂಜಾರಿ ಹೂತಿರಿಯಲು ಸಿದ್ಧನಾಗಿ ಹೊರಟು ವನವೆಲ್ಲ ಸುತ್ತುವ ಪದ್ಯಗಳು ಹೀಗೆ ಬರುತ್ತವೆ:

ತಣ್ಣೀರು ಮಿಂದವನೆ ಬಣ್ಣಾವ ಪೊದ್ದವನೆ
ಚಿನ್ನಾದ ಕರಡೀಗೆ ಬಲಗೈಲಿ। ಪೂಜಾರಿ
ಸಣ ಮಲ್ಲಿಗೆಯ ಬಿಡಿಸಾಲೊರಟಾನೆ॥

ಏರಿಮ್ಯಾಲೋಗುತ ಜ್ಯಾಜಿ ಪೂ ಬಿಡಿಸೂತ
ಜ್ಯಾವಕ್ಕೊಂದಜ್ಜೆ ಇಡುವೂತ। ಪೂಜಾರಿ
ದ್ಯಾವರಿಗೂವೆತ್ತಲೊರಟಾನೆ॥

ಅಂಬರದಾಗಿದ್ದ ಪೊಂಬಾಳೆ ಕೊಯ್ದಾನೆ
ರಂಬೆ ಸಿದ್ದಮ್ನ ಮಗ ಜಾಣ। ಪೂಜಾರಿ
ಕೊಂಬಿಗೊಂದೂವ ಕೊಯ್ದಾನೆ॥

ಆದವುಳ್ಳ ತ್ವಾಟಾಕ ಚಂದವುಳ್ಳ ಏಣಿಹಾಕಿ
ಗೊಂಡೇದಚ್ಚಡದ ಮಾಡಲೊಡ್ಡಿ। ಪೂವನ್ನೇ
ಕುಯ್ಯೋ ಚಂದ್ರಯ್ಯನ್ನಾರ ಮಗನಮ್ಮ॥

ಹೀಗೆ ನಲವತ್ತು ಐವತ್ತು ತ್ರಿಪದಿಗಳಲ್ಲಿ, ಪೂಜಾರಿಯು ವಿವಿಧ ರೀತಿಯ ಹೂಗಳನ್ನೆಲ್ಲ ಹೆಕ್ಕುವ ವಿವರಣೆ ಸುಂದರವಾಗಿ ಬರುತ್ತದೆ.[6] ಪೂಜಾರಿ ಹೂ ಶೇಖರಿಸಿ ಗುಡಿಮೊಖನಾಗುವಲ್ಲಿಗೆ ಒಂದು ಭಾಗ ಮುಕ್ತಾಯವಾಗುತ್ತದೆ. ಎರಡನೆಯ ಭಾಗದಲ್ಲಿ ದೇವರು ಜಲಧಿಗೆ ಹೊರಡುವುದು. ಜಾತ್ರೆಗಳೆಲ್ಲ ನಡೆಯುವುದು ಸಾಮಾನ್ಯವಾಗಿ ಮಳೆಗಾಲ ಕಳೆದಮೇಲೆಯೇ. ತುಂಬಿದ ಕೆರೆಗೋ, ತೊರೆಯ ಕಡೆಗೋ ದೇವರ ಉತ್ಸವ ಹೊರಡುತ್ತದೆ. ಜಲಧಿಗೆ ಹೋಗುವ ಪದ್ಯಗಳು ಹೀಗೆ ಬರುತ್ತವೆ :

---

[6] ಈ ಎಲ್ಲ ಜನಪದ ಭಕ್ತಿಗೀತೆಗಳಲ್ಲಿ ಬರುವ ಸಾಲುಗಳು ಹರಿಹರನ ಪುಷ್ಪರಗಳೆಯ

'... ಏನವ್ವ ಸಂಪಿಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಪೊಸ ಕುಸುಮಮಂ ನೀಡು ನೀಡೆಂದು।...
...ಜಾತಿ ನೀನೆ ಸಕಲ ಪುಷ್ಪ ಜಾತಿಗೆ ಜಾತಿ
ಭೂತೇಶ್ವರನ ಜಡೆಯ ಮುಡಿಗೇರಿದೊಡೆ ಜಾತಿ।...
...ದವನವೇ ಶಿವನ ಪರಿಮಳದ ಹಬ್ಬವೇ ಬಾರ
ಭುವನದೊಳ್ ನಿನಗೆ ಸರಿಯಿಲ್ಲ ಸೌರಭ ಸಾರಾ।...

ಈ ಪದ್ಯಗಳನ್ನು ನೆನಪಿಗೆ ತರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜೋರು ಜೋರಿಗೆ ಮಳೆ ಬಂದು ಜ್ಯಾವೊತ್ತಿಗೆ
ಕೆರಿಯು ತುಂಬಿ ಜಾಜಿಮಲ್ಲಿಗೆ ತೆರೆವೊಯ್ತು । ಮಾಲಿಂಗಾಗೆ[7]
ಜ್ಯಾವೊತ್ತಿನ ಮಜ್ಜಿನವು ಅಸನಾಗಿ ॥

ಮಲ್ಲಿಗೊವಿನಂಗೆ ವಲ್ಲಿ ಎಗಲಾ ಮ್ಯಾಲೆ
ಎಲ್ಲೀಗೆ ನಿಂಗಣ್ಣ ನಿನ ಪಯಣ । ಜಡಿಗೆ ಕುಂಟೆ
ಮಾಲಿಂಗನ ತೇರು ಜಲದೀಗರುದಾವೆ ॥

ನಿಂಬೇಯ ಅಣ್ಣನಂಗೆ ತುಂಬಿರುವೋ ಗಂಗಮ್ಮ
ಇಂಬೇ ಕೊಡುವವಮ್ಮ ವಡಿಯಾಗೆ । ಮಾಲೀಗಾನ
ಬಂಗಾರದ ತೇರೀಲಿ ತಂದೇವು ॥

ಜಲಧಿಗೆ ಹೋಗಿ ಹಿಂತಿರುಗಿ ಬಂದ ಸ್ವಾಮಿಗೆ 'ಊರ ಎಂಟುಕಟ್ಲೆ' ಯವರೂ ಎಡೆ ಕೊಡುತ್ತಾರೆ. ಅವರವರ ಭಕ್ತಿಗೆ ಶಕ್ತಿಗೆ ತಕ್ಕಂತೆ ಎಡೆಸಲ್ಲಿಸಿಕೊಳ್ಳುತ್ತ ಗುಡಿಯ ಬಳಿಗೆ ಬಂದ ದೇವರು ಗರ್ಭಾಂಕಣವನ್ನು ತುಂಬಿಕೊಳ್ಳುತ್ತದೆ. ಹಾಗೆ ಗುಡಿದುಂಬುವಾಗಿನ ಪದ್ಯಗಳು :

ಒಳಗಾಳ ಗುಡಿಯಾಗ ಅಳದೀಯ ಆಸಿ
ಅರಳುಮಲ್ಲಿಗೆ ತಲೆಗಿಂಬು । ಜಡಿಗೆ ಕುಂಟೆ
ಮಾಲಿಂಗ ನೀನೋಗಿ ಪವಡೀಸೋ ॥

ಕಂಚುಮಿಂಚೆಂಬ ಮಂಚವನಿಟ್ಟಾರೆ
ಸಂಪಿಗೆ ಹೂವ ಅರಡ್ಯಾರೆ । ಜಡಿಗೆ ಕುಂಟೆ
ಸಂಪನ್ನ ಕುಂಡರುವ ಜಗುಲೀಗೆ ॥

ಮುದ್ದುರಿಸಿ ನ್ಯನದೇವು ನಿದ್ದೆಗಣ್ಣಯ್ಯನ
ಗೆಜ್ಜೆ ಕುದುರೆ ಮ್ಯಾಲೆ ಕುಣಿವೋನ । ಮಾಲಿಂಗಾನ
ಮುದ್ದುರಿಸಿ ಕಯ್ಯ ಮುಗುದೇವು ॥

ಎಂದು ಬರುತ್ತವೆ. ಇಲ್ಲಿಗೆ ಭಕ್ತಿಗೀತೆಗಳು ಮಂಗಳ ಹಾಡಿಸಿಕೊಳ್ಳುತ್ತವೆ. ಎಲ್ಲ ಗ್ರಾಮದೇವತೆಗಳ ಮೇಲಿನ ಭಕ್ತಿಗೀತೆಗಳೂ ಒಂದೇ ತೆರನಾಗಿದ್ದು ಕೆಲವು ಮಾತ್ರ ತೀರ ಭಿನ್ನವಾಗಿ ದೊರಕುತ್ತವೆ. ಅಂಥವುಗಳಲ್ಲಿ ಯರ್ರಪ್ಪ, ಖಾದ್ರಿ ನರಸಿಂಹ, ಕಾಟಲಿಂಗೇಶ್ವರ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಯಾವಲಕಟ್ಟೆ ಮಾರಕ್ಕ, ಕಟ್ಟೆಮಾರಮ್ಮ, ಹನುಮಂತರಾಯ ಇವುಗಳು ಪ್ರಮುಖ.

ಯರ್ರಪ್ಪ ಹಿರಿಯೂರು ತಾಲ್ಲೋಕಿನ ಮದನಕುಂಟೆ ಗ್ರಾಮದ ಮಹಿಮೆಯುಳ್ಳ, ಆ ಗ್ರಾಮದ ಎಲ್ಲ ಜನಗಳನ್ನು ಭಕ್ತಿಯಿಂದ, ನಂಬಿಕೆಯಿಂದ ನಡೆಸಿಕೊಳ್ಳುತ್ತಿರುವ ದೇವರು. ಒಂದು ಕಾಲಕ್ಕೆ ದನ ಕಾಯುವ ಕಾಯಕದವನಾಗಿದ್ದ

---

7 'ಮಾಲಿಂಗಾಗೆ' ಅನ್ನುವ ಸ್ಥಳದಲ್ಲಿ ಬೇರೆಯ ಗ್ರಾಮದ ಬೇರೆಯ ದೇವತೆಯಾದರೆ ಆ ಭಕ್ತಿಗೀತೆಯಲ್ಲಿ ಆ ದೇವರು, ಆ ಸ್ಥಳ ಸೇರಿಸಲ್ಪಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧುವ್ಯಕ್ತಿ ಯರ‍್ರಪ್ಪ ಕಾರಣಾಂತರಗಳಿಂದ ಮಡಿದುಹೋಗುತ್ತಾನೆ. ಜನರು ಆತನ ಹೆಸರಿನಲ್ಲಿ ಗದ್ದುಗೆಯನ್ನು ಸ್ಥಾಪಿಸಿದರು. ವರ್ಷಕ್ಕೊಮ್ಮೆ ಜಾತ್ರೆಯನ್ನೂ ನಡೆಸುತ್ತ ಬಂದರು. ಈಗ ಯರ‍್ರಪ್ಪ ದೇವತೆಯ ಮಹಿಮೆಯೆಂದರೆ ಸುತ್ತಮುತ್ತಲ ಗ್ರಾಮಗಳಲ್ಲಿ ಯಾರನ್ನೇ ಆಗಲಿ ಯಾವುದೇ ವಿಷಜಂತು ಕಚ್ಚಿದರೂ ದೇವರ ಹೆಸರು ಹೇಳಿಕೊಂಡು ಗುಡಿಗೆ ಬಂದು ಪೂಜೆ ಮಾಡಿಸಿ ತೀರ್ಥ ಚಿಮುಕಿಸಿಕೊಂಡರೆ ಆತ ವಿಷದಿಂದ ಪಾರಾಗುತ್ತಾನೆಂಬ ನಂಬಿಕೆ ಜನರಲ್ಲಿ ಬೇರೂರಿದೆ. ಇಂದಿಗೂ ಗ್ರಾಮಸ್ಥರು ನಮಗೆ ಯಾವ ಹಾವಿನ ವಿಷದ ಭಯವೂ ಇಲ್ಲ ಎಂದು ಹೇಳುತ್ತಾರೆ. ಅಷ್ಟಲ್ಲದೆ ದೇವರನ್ನು ಕುರಿತ ಪ್ರಾರ್ಥನಾಪದ್ಯಗಳಲ್ಲಿ :

ದೇವಾನ ನ್ಯನದಾರೆ ದಾವೂತಿ ನಮಗಿಲ್ಲ
ಆವು ಕಚ್ಚಿದರೆ ಇಸವಿಲ್ಲ। ಮದನಾಗುಂಟೆ
ಸ್ವಾಮಿಯಾಡಿದ ಮಾತು ವುಸಿಯಲ್ಲ॥
ಅಪ್ಪಾನ ನ್ಯನದಾರೆ ತಪ್ಪಿಲ್ಲ ತೊಡರಿಲ್ಲ
ಸರ್ಪಾ ಕಚ್ಚಿದರೆ ಇಸವಿಲ್ಲ। ಮದನಾಗುಂಟೆ
ಅಪ್ಪಾಡಿದ ಮಾತು ವುಸಿಯಲ್ಲ॥

ಎಂಬ ಪದಗಳು ಬರುತ್ತವೆ. ಯರ‍್ರಪ್ಪನ ಹುಟ್ಟು, ಕಾಯಕ, ಮಡಿದದ್ದು, ಕೊನೆಗೆ ಗದ್ದುಗೆ ನಿಲಿಸಿದ್ದು ಈ ಹಿನ್ನೆಲೆಯಲ್ಲಿ ಸುಮಾರು ನೂರಹತ್ತು ತ್ರಿಪದಿಗಳು ರಚಿತ ವಾಗಿದ್ದು ಆ ಗ್ರಾಮದ ಮಹಿಳೆಯರು ಯರ‍್ರಪ್ಪನ ಜಾತ್ರೆಯ ಸಂದರ್ಭದಲ್ಲಿ ಇದನ್ನು ಹಾಡುತ್ತಾರೆ. ಇದೇ ರೀತಿಯಲ್ಲಿ ಉಳಿದ ಭಕ್ತಿಗೀತೆಗಳೂ ಕೂಡ ತಮ್ಮ ತಮ್ಮದೇ ಆದ ವಿಶೇಷ ಮಹಿಮೆಗಳಿಂದ ಕೂಡಿವೆ. ಇವುಗಳಲ್ಲೆಲ್ಲ ಅತ್ಯಂತ ವಿಸ್ತಾರ ವಾದದ್ದು ಹಾಗೂ ಸೊಗಸಾದ ನಿರೂಪಣೆಯುನ್ನುಳ ಗೀತೆಯೆಂದರೆ ಖಾದ್ರಿ ನರಸಿಂಹ. ನರಸಿಂಹನ ಭಕ್ತರೆಂದರೆ ಚಳ್ಳಕೆರೆ ತಾಲ್ಲೋಕಿನ ಚಿಕ್ಕೇನಹಳ್ಳಿ ಗೊಲ್ಲರಟ್ಟಿಯವರು. ಭಕ್ತರು ಬುತ್ತಿಕಟ್ಟಿಕೊಂಡು ನರಸಿಂಹನ ಗುಡ್ಡಕ್ಕೆ ಸಾಲುಗಟ್ಟಿ ಪರಿಸೇ ಹೋಗು ವುದು, ಆತನ ದರ್ಶನ ಪಡೆದು ಮಹಿಮೆಯನ್ನು ಹಾಡಿ ಕೊಂಡಾಡುವುದು, ಮತ್ತು ಗುಡ್ಡವಿಳಿದು ಆತನದೇ ಧ್ಯಾನದಲ್ಲಿ ಊರಮೊಖನಾಗುವುದು ಇವೆಲ್ಲವೂ ವಿವರ ವಿವರವಾಗಿ ಸುಮಾರು ಇನ್ನೂರೈವತ್ತು ತ್ರಿಪದಿಗಳಲ್ಲಿ ಮೂಡಿಬಂದಿದೆ.

ಐತಿಹಾಸಿಕ ಕಥನ ಗೀತೆಗಳು : ಅಕ್ಷರರೂಪಕ್ಕಿಳಿದಿರುವ ಜನಪದ ಕಥನ ಗೀತೆಗಳಲ್ಲಿ ಐತಿಹಾಸಿಕ ವಸ್ತುಗಳನ್ನೇ ಆಧಾರವಾಗಿಟ್ಟುಕೊಂಡು ರಚಿತವಾಗಿರುವ ಗೀತೆಗಳು ತುಂಬ ವಿರಳ. ಕೇವಲ ಅಲ್ಲೊಬ್ಬ ಇಲ್ಲೊಬ್ಬ ಪಾಳೆಯಗಾರರನ್ನು ಕುರಿತ ಕೆಲವು ಗೀತೆಗಳು ಮಾತ್ರ ದೊರೆತಿವೆ. ನಾಡಿನ ಇತಿಹಾಸ ಪರಂಪರೆಯತ್ತ ದೃಷ್ಟಿ ಹರಿಸಿದರೆ ದೊರೆತಿರುವ ಐತಿಹಾಸಿಕ ಕಥನ ಗೀತೆಗಳು ಎಷ್ಟು ಅತ್ಯಲ್ಪ ಎನ್ನುವುದು ಮನವರಿಕೆಯಾಗದಿರದು. ಐತಿಹಾಸಿಕ ವ್ಯಕ್ತಿಗಳಾದ ಕುಮಾರರಾಮ, ಪಿರಿಯಾ ಪಟ್ಟಣದ ವೀರರಾಜದೊರೆ, ಚಿತ್ರದುರ್ಗದ ಮದಕರಿನಾಯಕ, ಕಿತ್ತೂರು ಚೆನ್ನಮ್ಮ,

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗೊಳ್ಳಿ ರಾಯಣ್ಣ, ಕೆಂಪೇಗೌಡ, ಸರ್ಜಪ್ಪನಾಯಕ ಮುಂತಾದುವರನ್ನು ಕುರಿತು ಸ್ವಲ್ಪಮಟ್ಟಿನ ಸಾಹಿತ್ಯ ಮಾತ್ರ ಪ್ರಕಟವಾಗಿವೆ.

ಹರ್ತಿ ಬಯಲಿನಲ್ಲಿ ದೊರಕುವ ಐತಿಹಾಸಿಕ ಗೀತೆಗಳಲ್ಲೆಲ್ಲ ಪ್ರಸಿದ್ಧವಾದುವು, ಓದುಗರಿಗೆ ಸೊಗಸುವುವು ಅಂದರೆ ಮಹಾಸತಿಯರನ್ನು ಕುರಿತ ಕಥನ ಗೀತೆಗಳು. ಈ ಕಥನಗೀತೆಗಳಲ್ಲಿನ ಮಹಾಸತಿಯರಿಗೆ ಸಂಬಂಧಿಸಿದಂತೆ ಕೆಲವೊಮ್ಮೆ ಆಧಾರಗಳೂ, ದೊರಕುವುದುಂಟು. ಗೀತೆಯಲ್ಲಿ ಮಹಾಸತಿಯು ಕೊಂಡಕ್ಕೆ ಬಿದ್ದ ಜಾಗವನ್ನು ನಿರ್ದೇಶಿಸಿ ಹಾಡುತ್ತಾರೆ. ಆ ಸ್ಥಳಕ್ಕೆ ಭೇಟಿಕೊಟ್ಟಲ್ಲಿ ಕೊಂಡದ ಅಗಲಕ್ಕೆ ಎತ್ತರವಾದ ಜಗುಲಿಯೊಂದು ಕಟ್ಟಲ್ಪಟ್ಟಿರುತ್ತದೆ. ಪಕ್ಕಕ್ಕೆ ಆಲ, ಬನ್ನಿ, ಬೇವು ಮರವೊಂದನ್ನು ಬೆಳೆಸಿರುತ್ತಾರೆ. ಮಹಾಸತಿ ಕಲ್ಲು ಕೂಡ ಇರಿಸಲ್ಪಟ್ಟಿರುತ್ತದೆ. ಹಿರಿಯಟ್ಟಿ, ಯರಬಳ್ಳಿ, ಹರ್ತಿಕೋಟೆ, ಮದನಕುಂಟೆ ಗ್ರಾಮಗಳಲ್ಲಿ ಪ್ರಚಲಿತವಿರುವ ಮಹಾಸತಿ ವೀರದಿಮ್ಮವ್ವ[8] ಐತಿಹಾಸಿಕ ಕಥನಗೀತೆಗಳಲ್ಲೆಲ್ಲ ಹೃದಯಂಗಮವಾದುದು ಹಾಗೂ ಉನ್ನತ ಸಾಹಿತ್ಯಕ ಭಾವನೆಗಳನ್ನುಳ್ಳುದು.

ವೀರನಾದ ನಾಗಣ್ಣನ ಕಾಯಕ ದನಗಳನ್ನು ಕಾಯುವುದು. ನಾಗಣ್ಣನ ತಾಯಿಯ ಕಾಯಕವೆಂದರೆ 'ಸಿರಾಪ್ಯಾಟೆ'ಗೆ ಹಾಲುಮಜ್ಜಿಗೆಯನ್ನೊತ್ತು ಮಾರುವುದು. ನಾಗಣ್ಣ ದನಗಳನ್ನು ಕಾಯಬೇಕಾದರೆ ಅವುಗಳ ಮೇಲೆ ಎರಗಿ ಬರುವ ಹುಲಿಯನ್ನೂ ಎತ್ತಿ ಕುಕ್ಕುವಷ್ಟು ಪರಾಕ್ರಮಶಾಲಿ.

ಇಂಥವನನ್ನು ಸಿರಾದ ರಂಗಣ್ಣ ನಾಯಕ ಪಾಳೆಯಗಾರ ಕರೆಸಿ ಪರೀಕ್ಷಿಸಿದ.

ಚಿಕ್ಕ ಸೀರ‍್ಯಾದ ಚಿತ್ತಾರದ ಪ್ಯಾಟ್ಯಾಗ
ಕಟ್ಟೇದ ವುಲಿಯ ವಡೆದಾನೆ। ನಾಗಣ್ಣಾನ
ಕರದೂತನ್ನಿರಂದ ರಾಯ॥

ವೀರನಾಗಣ್ಣನನ್ನು ರಂಗಣ್ಣನಾಯಕ ತನ್ನ ಸೈನ್ಯಕ್ಕೆ ಸೇರಿಸಿಕೊಂಡ. ನಾಗಣ್ಣನಂಥ ಯುವಕನನ್ನು ಲಗ್ನವಾಗಲು ಬಯಲಿನ ಹೆಣ್ಣುಮಕ್ಕಳಿಗೆಲ್ಲ ಇಷ್ಟ. ಆದರೆ ವೀರನಿಗೆ ಹರ್ತಿಕೋಟೆಯ ತಿಮ್ಮವ್ವನ ಮೇಲೆ ಇಷ್ಟ. ಅಂತೆಯೇ ನಾಗಣ್ಣ ತಿಮ್ಮವ್ವರಿಗೆ ಲಗ್ನ ನೆರವೇರಿತು.

ಕಾಲುಂಗ್ರ ಕಡಿಸೂಸ್ರ ಪಳೊನ್ನಿನ ತಾಲಿ
ದೀರಾ ಅರ್ಜುಣರ ಮಗಳು। ತಿಮ್ಮವ್ವಾಗೆ
ವಾರೇಯನೆರಿಯಾಕೆ ಸಿವಬಂದ॥

---

[8] ವೀರದಿಮ್ಮವ್ವನ ಹೆಸರಿನಲ್ಲಿ ಇರಿಸಿರುವ ಮಾಸ್ತಿಕಲ್ಲನ್ನು, ಆಕೆ ಕೊಂಡಕ್ಕೆ ಬಿದ್ದದ್ದು ಇದೇ ಸ್ಥಳದಲ್ಲಿ ಎಂದು ಗ್ರಾಮಸ್ಥರು ತೋರುವ ಸ್ಥಳದಲ್ಲಿ ಇಂದಿಗೂ ಕಾಣಬಹುದು. ಆ ಸ್ಥಳದಲ್ಲಿ ಉತ್ತರಕ್ಕೆ ಕಟ್ಟಲ್ಪಟ್ಟಿರುವ ಜಗುಲಿಯಿದೆ. ಜಗುಲಿಯ ಪಕ್ಕಕ್ಕೆ ಹಿರಿದಾದ ಬನ್ನಿಮರವೊಂದಿದೆ. ಗೀತೆಯಲ್ಲೂ ಈ ಸ್ಥಳ ನಿರ್ದೇಶಿಸಲ್ಪಟ್ಟಿದೆ. ಸುಮಾರು ಇನ್ನೂರು ವರ್ಷಗಳ ಹಿಂದೆ ಈ ಕಥಾನಕದ ವಸ್ತು ಘಟಿಸಿರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಳಿಯಾ ಬೆಳದಿಂಗಳು ಒಳಗಬ್ಬರಾರೋರು
ಗಳಿಗೇ ಬಟ್ಟಲ ಇಡಕಂಡು ! ತಿಮ್ಮವ್ವಾಗೆ
ಬೆಳುಗೀಲಿ ದಾರೇಯನೆರುದಾರು ॥

ಬಾಲೆ ತಿಮ್ಮವ್ವನನ್ನು ಗಂಡನ ಮನೆಗೆ ಕಳಿಸಿಕೊಡಬೇಕಾದಲ್ಲಿ ತಾಯಿಗೆ ಇನ್ನಿಲ್ಲದ ಯಾತನೆ. ಕಣ್ಣನೀರ ಒರೆಸಿಕೊಳ್ಳುತ್ತಲೇ ಮಡುಲಕ್ಕಿ ಹೊಯ್ದು 'ಪೆಟ್ಟಿಗ್ಯಾಗಳ ಪಟ್ಟೇದ ಸೀರೀಯು' ತೆಗೆದುಕೊಟ್ಟಳು.

ಆಡೆದಾರೆ ಎಣುಮಕ್ಕಳ ಕರೆದಾರೆ ದ್ಯಾವರೆಸರ
ಒಡಲು ಬರಿದು ಮನಿ ಬರಿದು । ಎಣುಮಕ್ಕಳ
ಅಡಿಬಾರದೇಳು ಜಲುಮಾಕ ॥

ಅಣ್ಣಗಳ ವಲದಾಗ ಸಣ್ಣಾ ಮಲ್ಲಿಗೆ ಸಾವುರ
ಇನ್ಯಾರೆ ಮಗಳೇ ಮುಡಿವ್ರೋರು । ಅಂದಿನ್ನ
ಅವರವ್ವ ಆಡಾಡಿ ಅಳುತಾಳೆ ॥

ಹೀಗೆ ಶೋಕಿಸಿದ ತಾಯಿಗೆ ತಿಮ್ಮವ್ವನೇ ದೃಢಮನಸ್ಕಳಾಗಿ ಉತ್ತರಕೊಟ್ಟಳು.

ಎಣುಮಗಳ ಯಾಕಡದೆ ನನ್ನವ್ಮಾ
ಎಣ್ಯಾಗ ಬತ್ತಿ ಉರುದಂಗ । ಮಾನವರ
ಕಣ್ಯಾಗ ನಾವು ಉರುದೇವು ॥

ಅಡೆದೋಳು ನೀ ಅಣೆಬರಿಯಾ ಬರಿಲಿಲ್ಲ
ಅರುಗೀಲಿ ಒಬ್ಬಾಳು ಇದಿರಂತೆ । ಕುತುಕಂಡು
ಸರಿಬಂದಾ ಬರಿಯಾ ಬರೆದಾಳು ॥

ಊರಾ ಮುಂದಲ ವುಣಸೆ ವೂವಾಗಿ ಕಾಯಾಗಿ
ದ್ಯೋರೆ ಅಣ್ಣಾಗಿ ಉದುರ್ತ್ಯಾವೆ । ಎಣುಮಗಳ
ದೂರಾ ಕೊಟ್ಯಾಕೆ ಅಳುತೀಯೆ ॥

ತನ್ನನ್ನೇ ಉರಿಸಿಕೊಂಡು ಬೆಳಕುನೀಡುವ ಎಣ್ಣೆಯೊಳಗಿನ ಬತ್ತಿಯ ಹಾಗಿನ ಹೆಣ್ಣು ಮಕ್ಕಳ ಬದುಕನ್ನೂ, ಅವರ ಹಣೆಯ ಬರಹದ ನಿರ್ಧಾರವನ್ನೂ, ಹೆತ್ತಮನೆಗೆ ಮಗಳ ನಿಷ್ಪ್ರಯೋಜಕತೆಯನ್ನೂ ಕುರಿತು ಹೇಳಿ ತಾಯಿಗೆ ತಿಮ್ಮವ್ವ ಸಮಾಧಾನಿಸಿದಳು. ಗಂಡನ ಮನೆಗೆ ನಡೆದಳು.

ಕೆಲವು ವರ್ಷಗಳಲ್ಲೇ ನಾಗಣ್ಣ ಸಾಣೆಕೆರೆಯ 'ಲಡಾಯ'ದಲ್ಲಿ ಭಾಗವಹಿಸಿ ತೀರಿಕೊಂಡ. ಸುದ್ದಿ ಕೇಳಿದ ತಿಮ್ಮವ್ವ ಬಂಧುಬಳಗವನ್ನೆಲ್ಲ ಬಿಟ್ಟು ಕೊಂಡಕ್ಕೆ ನಡೆದಳು. ತನಗೆ ಹುಟ್ಟಿದ ಎರಡು ಮಕ್ಕಳನ್ನು ತೊಟ್ಟಿಲಿಗಾಕಿ ತೂಗಿದಳು, ಕೊನೆಯದಾಗಿ.

ಬಾಳೇಯ ಮರಕ ಬಾಲನ ತೊಟ್ಟಿಲ ಕಟ್ಟಿ
ಕಂದಯ್ಯ ಕಂದ ಅಳದೀರೋ । ಬೈಗಿನ ಕಡೆಲಿ
ಅಂಗುಳಾರಿದರೆ ಮಲಿಯಿಲ್ಲ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂದಳು. 'ಅರಿಷಿಣಗಂಬಿ' ಸೀರೆ ಉಟ್ಟವಳು 'ನಿಂಬೀ ಅಣ್ಣ ಆರಿಬಾರಕೀಡಾಡುತ' ಧಗಧಗಿಸುತ್ತ ಉರಿಯುತ್ತಿದ್ದ ಕೊಂಡದ ಬಳಿಗೆ ಬಂದಳು.

ಕಿಚ್ಚುಮಾಡೋರು ಎಚ್ಚಾಗಿ ಮಾಡೀರಿ
ಒಡಲಾ ಕಿಚ್ಚಿಗೀ ಕಿಚ್ಚು ಕಿರಿದಂದು। ತಿಮ್ಮವ್ವ
ಆಲಾದ ಮಾರನೊಂದ ಕಡಿಸ್ಯಾಳೆ॥

ಒಡಲ ಬೇಗೆಯನ್ನು ಈ ಬೆಂಕಿ ಸುಡಲು ಶಕ್ತವಲ್ಲ ಎಂದಂದು ಉರಿ ಹೆಚ್ಚು ಹಾಕಿಸಿ ಹಾರಿ ಮಹಾಸತಿಯಾದಳು. ಈ ಕಥನಗೀತೆಯಲ್ಲಿ ಸುಮಾರು ಇನ್ನೂರೈವತ್ತು ತ್ರಿಪದಿಗಳಿದ್ದು ಮಹಾಸತಿಯರನ್ನು ಕುರಿತ ಗೀತೆಗಳಲ್ಲೆಲ್ಲ ಇದೇ ಅತ್ಯಂತ ದೊಡ್ಡದು. ಇದೇ ಧಾಟಿಯಲ್ಲಿ ಕಥೆ ಬೇರೆಯಾಗಿ ಬರುವ ಗೀತೆಗಳೆಂದರೆ ಕೊಂಡದ ಕಾಟವ್ವ, ಕೊಂಡದ ಚಿತ್ತವ್ವ, ಕೊಂಡದ ಕೆಂಚವ್ವ, ವೀರ ಚಿಕ್ಕಣ್ಣ[9] ಇವುಗಳು. ತೀರ ಇತ್ತೀಚೆಗೆ ನಡೆದ ಘಟನೆಗಳ ಮೇಲೂ ಕಥನಗೀತೆಗಳು ಈ ಬಯಲಲ್ಲಿ ಹುಟ್ಟಿಕೊಂಡಿರುವುದುಂಟು. ಅಂಥದ್ದೊಂದು 'ರಣಸಾಗರದ ಗೌಡ'. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಊರಗೌಡನೊಬ್ಬನನ್ನು ಊರಿನ ಇತರ ಜಾತಿಯ ಪ್ರಮುಖರು ಸೇರಿಕೊಂಡು ಕೊಲ್ಲಿಸಿದ ಪ್ರಕರಣದ ಸುತ್ತ ಈ ಕಥೆ ಹೆಣೆಯಲ್ಪಟ್ಟಿದೆ. ಈ ಗೀತೆಯ ಬಿಡಿಬಿಡಿಯಾದ ಭಾಗಗಳು ಅನೇಕ ಕಡೆಗಳಲ್ಲಿ ಕೋಲು ಮೇಳದೊಡನೆ ಹಾಡಲ್ಪಡುತ್ತಿದ್ದು ಸಂಪೂರ್ಣವಾದ ಪಾಠ ಹೆಚ್ಚು ಜನಕ್ಕೆ ಹಾಡಲು ಬರುವುದಿಲ್ಲ. ಗೀತೆಯ ನಾಯಕನಾದ ಪಾಪಣ್ಣಗೌಡನ ಬಳಿಯಲ್ಲೇ ಜೀತಕ್ಕಿದ್ದ ಒಬ್ಬ ವಯಸ್ಕ ವ್ಯಕ್ತಿಗೆ ಮಾತ್ರ ಈ ಕಥನಗೀತೆ ಪೂರ್ಣವಾಗಿ ಬರುತ್ತಿದ್ದು ಆತನ ನಂತರದಲ್ಲಿ ಅದು ಅಳಿಯಬಹುದು.[10]

ವೀರಸಿರಿಯಣ್ಣ, ಪಾಲ್ನಾಯಕ, ಕರಡಿಬುಳ್ಳಪ್ಪ, ಜಗಳೂರಜ್ಜ, ಕಸಗಾನಳ್ಳಿ ನಾಗ ಇವೆಲ್ಲವೂ ಐತಿಹಾಸಿಕ ವೀರಗೀತೆಗಳಾಗಿವೆ. ಈ ವ್ಯಕ್ತಿಗಳೆಲ್ಲರೂ ಒಂದು ಕಾಲಕ್ಕೆ ಐತಿಹಾಸಿಕ ಪುರುಷರಾಗಿದ್ದು, ಜನಪ್ರಿಯ ಸಾಧನಗಳನ್ನೆಸಗಿ ಪ್ರಸಿದ್ಧರಾಗಿದ್ದು. ಮಡಿದನಂತರದಲ್ಲಿ ಅದೇ ಜನಮನದಲ್ಲಿ ನಿಂತು ಈಗ ಪೂಜಾರ್ಹ ವ್ಯಕ್ತಿಗಳಾಗಿದ್ದಾರೆ.

---

9 ಕೊಂಡದ ಚಿತ್ತವ್ವ, ವೀರಚಿಕ್ಕಣ್ಣ ಇನ್ನೂ ಸಂಗ್ರಹವಾಗಿಲ್ಲ. ಆದರೂ ಅವು ಮಹಾಸತಿಯರನ್ನು ಕುರಿತ ಕಥನಗೀತೆಗಳು ಎಂಬುದು ಸ್ಪಷ್ಟ. ವೀರಚಿಕ್ಕಣ್ಣ ಮಡಿದನಂತರ ಆತನ ಹೆಂಡತಿ ಕೊಂಡಕ್ಕೆ ಬಿದ್ದು ಮಹಾಸತಿಯಾಗಿರುತ್ತಾಳೆ. ಇವರ ಹೆಸರಿನಲ್ಲೂ ಮಹಾಸತಿ ಕಲ್ಲಿರಿಸಲ್ಪಟ್ಟಿದೆ.

10 'ರಣಸಾಗರದ ಗೌಡ' ಗೀತೆಯನ್ನು ಹಾಡಿದವನ ಹೆಸರು ಸಣ್ಣಬಯಲಯ್ಯ. ಈತನ ವಯಸ್ಸು ಸುಮಾರು ಎಂಬತ್ತೈದು. ಕಥಾನಾಯಕನ ಮನೆಯಲ್ಲಿ ಕೆಲಸಕ್ಕಿದ್ದವ. ಕಥೆಯನ್ನು ಹಾಡುವಾಗ ತನ್ನ ಒಡೆಯನ ಕೊಲೆಯ ಸಂದರ್ಭದಲ್ಲಿ ಕಣ್ಣಿನಲ್ಲಿ ನೀರು ಸುರಿಸುತ್ತಿದ್ದ. ಕೊಲೆಯಾಗುವ ನುಡಿಗಳು ಮುಗಿದಮೇಲೆ ಒಡೆಯನ ಹೆಸರಿನಲ್ಲಿ ಗಂಧದಕಡ್ಡಿ ಹಚ್ಚಿಸಿ, ಕಾಯಿ ಒಡೆಸಿ, ಕರ್ಪೂರ ಉರಿಸಿ ಪೂಜೆ ಮಾಡಿದ. 'ನಾ ಸ್ವಾಮಿ ಪಾಪನ್ನ ಗೌಡುಡು' ಎಂದು ತೆಲುಗಿನಲ್ಲಿ ಹೇಳಿ ಕೈ ಮುಗಿದು ಮುಂದೆ ಹೇಳಲು ಆರಂಭಿಸಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಾಮದ ಜನರು ಇವರನ್ನು ಕುರಿತು ಪೂಜಿಸುವ ಸ್ಥಳಗಳೆಂದರೆ ಅವರ ಸಮಾಧಿಯನ್ನೇ. ಅವರ ಹುಟ್ಟು, ಬೆಳವಣಿಗೆ, ಸಾಧನೆ ಇವುಗಳ ಸುತ್ತ ಕಥನ ಗೀತೆ ನಿರ್ಮಾಣಗೊಂಡು ಬಾಯಿಂದ ಬಾಯಿಗೆ ಹರಿದುಬಂದಿವೆ. ಒಂದೊಂದೂ ಸುಮಾರು ನೂರೈವತ್ತು ತ್ರಿಪದಿಗಳಿಗಿಂತ ಮೀರಿಯೇ ಇದ್ದು ರೂಪದಲ್ಲಿ ಖಂಡಕಾವ್ಯಗಳಾಗಿವೆ.

ಇತರ ಕಥನಗೀತೆಗಳು: ಈ ವಿಭಾಗದಲ್ಲಿ ಪ್ರಮುಖವಾಗಿ ಕಂಡುಬರುವ ಕಥನಗೀತೆಗಳು ಈರ್ಯೈಯ್ಯಜುಂಜ, ನಿಂಗಣ್ಣ ಸೆರೆವೋದದ್ದು, ವೀರ ಅಭಿಮನ್ಯು, ಇರಿಯಟ್ಟಿ ಚಿತ್ರಲಿಂಗ, ಎತ್ತಪ್ಪ, ಕ್ಯಾತಪ್ಪ, ಅರ್ಜುನ ದ್ರೌಪದಿ, ದ್ರೌಪದಿಯ ಓಕುಳಿಯಾಟ, ಕತ್ತಲರಾಯ.

ಕನ್ನಡ ಜನಪದ ಕಥಾನಕಗಳಲ್ಲಿ ಜುಂಜಪ್ಪನ ಕಥೆ ತನ್ನದೇ ಆದ ವೈಶಿಷ್ಟ್ಯವನ್ನು ಗಳಿಸಿಕೊಂಡಿದೆ. ಏಳು ದೊಡ್ಡಿಯ ದನಗಳನ್ನು ತನ್ನ ತಮ್ಮಂದಿರಾದ ಮಾರಣ್ಣ ಮೈಲಣ್ಣರೊಂದಿಗೆ ಕಾಯುತ್ತಲೇ ತನ್ನ ಮೇಲಾಟಕ್ಕೆ ಬಂದ ಕಂಚೀರಗೊಲ್ಲರ ಮತ್ತಿತರರ ಗರ್ವವನ್ನು ಅಡಗಿಸುವುದೇ ಕಥೆಯ ಜೀವಾಳ. ಅಪೂರ್ವವಾದ ವರ್ಣನೆಗಳಿಂದಲೂ, ಆಕರ್ಷಕ ಘಟನಾವಳಿಗಳಿಂದಲೂ, ಸುಂದರ ನಿರೂಪಣೆಯಿಂದಲೂ ಜುಂಜಪ್ಪನ ಕಥೆ ಮನೋಜ್ಞವಾಗಿದೆ.

ದುಡ್ಡೀನ ದೂಪಾನೊಯ್ದು ದೊಡ್ಡೋನ ನ್ಯನದೇನ
ದೊಡ್ಡಟಿಯಾಗ ಇರುವೋನ। ಜುಂಜಣ್ಣ
ದೊಡ್ಡೋನ ಮದಲು ನೈನದೇನ॥

ಸಾಂಬ್ರಾಣಿನಾಕಿ ಸ್ವಾಮಿ ನಿಮ್ಮ ನ್ಯನದೇನು
ಸಾಲೆಬ್ಬಿಯಾಗ ಇರುವೋನೆ। ಜುಂಜಣ್ಣ
ಸಾಂಬ್ರಾಣೆಯನಾಕಿ ನ್ಯನದೇನ॥

ಈ ಪ್ರಾರ್ಥನಾ ಪದ್ಯಗಳೊಡನೆ ಆರಂಭವಾಗಿ ತ್ರಿಪದಿಗಳಲ್ಲೇ ಮುಂದುವರೆದು ಮಧ್ಯ ಮಧ್ಯ ವಚನಗಳೂ ಕೂಡ ಬರುತ್ತವೆ. ಈ ಜುಂಜಪ್ಪನ ಕಥೆಯನ್ನು ಹಾಡುವಲ್ಲಿ ಸನಿಹದಲ್ಲೇ ಕುಳಿತ ಇನ್ನೊಬ್ಬಾತ ಬಿದಿರ ಉದ್ದದ ಗಣೆಯೊಂದನ್ನು ಊದುತ್ತಿರುತ್ತಾನೆ. ಗಣೆ ಹಾಗೂ ಜುಂಜಪ್ಪನನ್ನು ಕುರಿತ ಹಾಡುಗಾರಿಕೆ, ಎರಡರ ಮೇಳ ಕೇಳುಗರನ್ನು ಅದರಲ್ಲೇ ತಲ್ಲೀನರಾಗಿರಿಸುವಂತೆ ಮಾಡುತ್ತದೆ. ಈ ಕಥೆ ಎಲ್ಲ ಕಡೆಯಲ್ಲಿಯೂ ಪ್ರಚಲಿತವಿದೆಯಾದರೂ ಇದರ ಮೂಲ ಹರ್ತಿ ಬಯಲಿನ ಕಳವರಳ್ಳಿ. ಅಲ್ಲಿ ಜುಂಜಪ್ಪನ ಸಮಾಧಿಯನ್ನು ಜನ ತೋರಿಸುತ್ತಾರೆ. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಜುಂಜಪ್ಪನಿಗೆ ಸಂಬಂಧಿಸಿದಂತೆ ಗ್ರಾಮಸ್ಥರಲ್ಲಿ ಹಲವಾರು ನಂಬಿಕೆಗಳೂ ಉಂಟು. ಕಳವರಳ್ಳಿಯ ಸುತ್ತಮುತ್ತ ಈ ಕಥೆಯನ್ನು ಹಾಡುವವರು ಹೇರಳವಾಗಿ ದೊರಕುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಹೇಳಿರುವ ಎಲ್ಲ ಕಥನಗೀತೆಗಳಲ್ಲಿಯೂ ಅತ್ಯಂತ ದೀರ್ಘವಾದುದೂ ಹಾಗೂ ಕುತೂಹಲಕಾರಿಯಾದ ಕಥಾನಕವೆಂದರೆ ನಿಂಗಣ್ಣ ಸೆರೆಹೋದದ್ದು. ಸುಮಾರು ನಾನೂರು ತ್ರಿಪದಿಗಳನ್ನೊಳಗೊಂಡ ಖಂಡಕಾವ್ಯ ಇದು.

ನಿಂಗಣ್ಣ ಸಾಕ್ಷಾತ್ ಈಶ್ವರನ ಮಗನಾಗಿ ಭೂಮಿಗೆ ಅವತರಿಸಿ ಬಂದವ. ರೆಡ್ಡಿಗ ಮತಸ್ಥರ ಮನೆದೇವರಾದ. ಅವರಿಗೆ ಸಕಲ ಸಂಪತ್ತನ್ನೂ ಕರುಣಿಸಿ ಆ ಒಕ್ಕಲುಗಳಿಗೆಲ್ಲ ಮೆಚ್ಚಿನ ದೇವತೆಯಾದ. ಕಾಲಕ್ರಮದಲ್ಲಿ ನಿಂಗಣ್ಣದೇವರ ಮೇಲೆ ರೆಡ್ಡಿಗರು ವ್ರತಕೆಟ್ಟು ನಡೆದುಕೊಂಡರು. ಅವರನ್ನು ತೊರೆದ ನಿಂಗಣ್ಣ ದನ ಕಾಯುತ್ತಿದ್ದ ಗೊಲ್ಲರ ಬೊಮ್ಮಣ್ಣನೊಡನೆ ಮತ್ಸ್ಯ ಸಮುದ್ರಕ್ಕೆ ಪ್ರಯಾಣ ಮಾಡಿದ. ಅಲ್ಲಿ ಕರಿಯಣ್ಣ, ಸಿರಿಯಣ್ಣ, ಸಿರಿಯಮ್ಮ, ಬೊಮ್ಮಣ್ಣನೇ ಆದಿಯಾಗಿ ಭಕ್ತರಾದರು. ನಿಂಗಣ್ಣನ ಕೀರ್ತಿಯನ್ನು ಕೇಳಿದ ತುರುಕರು ಆತನ ಗುಡಿಯ ಮೇಲೆ ದಾಳಿ ನಡೆಸುವ ಇಚ್ಛೆಯಿಂದ ದಂಡೆತ್ತಿ ಬಂದರು. ಕರಿಯಣ್ಣ, ಸಿರಿಯಣ್ಣರನ್ನು ಕೊಂದು ನಿಂಗಣ್ಣನೇ ಆದಿಯಾಗಿ ಗರ್ಭಾಂಕಣದ ಸಕಲ ಸಂಪತ್ತನ್ನೂ ಕೊಳ್ಳೆಹೊಡೆದರು. ನಿಂಗಣ್ಣ ತುರುಕರಿಗೆ ಸೆರೆಹೋದ. ಇದನ್ನು ಕೇಳಿದ ನಿಂಗಣ್ಣನ ತಂಗಿ ಗೌರಸಮುದ್ರದ ಮಾರಿ ಕಣ್ಣುಗಳಲ್ಲಿ ಕೆಂಡ ಮೂಗಿನಲ್ಲಿ ಹೊಗೆ ಉದುರಿಸುತ್ತಾ ದುರ್ಗದ ಕಡೆಗೆ ಇತ ದುರ್ಗೆಯರನ್ನು ಕರೆದುಕೊಂಡು ಹೊರಟಳು. ಚಿತ್ರಕಲ್ಲು ದುರ್ಗಕ್ಕೆಲ್ಲ ಪ್ಲೇಗು ಬೇನೆ ಹತ್ತಿ ತುರುಕರೆಲ್ಲ ಮರಣಕ್ಕೀಡಾದರು. ತುರುಕರ ದೊರೆಯ ರಾಣಿಯೂ ತೀರಿಕೊಂಡಳು. ನಂತರ ಗೌರಸಮುದ್ರದ ಮಾರಿ ಕೊರವಂಜಿ ವೇಷವನ್ನು ತೊಟ್ಟು ತುರುಕರ ದೊರೆಗೆ, ನಾಶಕ್ಕೆ ಕಾರಣವನ್ನು ವಿವರಿಸಿದಳು. ಹೆದರಿದ ದೊರೆ ನಿಂಗಣ್ಣನನ್ನು ಸಕಲ ಮರ್ಯಾದೆಗಳೊಡನೆ ಹಿಂದಕ್ಕೆ ಕಳಿಸಿಕೊಟ್ಟ. ಈಗ ಅದೇ ನಿಂಗಣ್ಣದೇವರು ಚೆನ್ನಮ್ಮನಾಗತಿ ಹಳ್ಳಿಯಲ್ಲಿ ನೆಲೆಸಿದ್ದಾನೆ. ಇದೇ ಹಳ್ಳಿಯ ಇಬ್ಬರು ವಯಸ್ಕ ಮಹಿಳೆಯರು ನಾನೂರು ತ್ರಿಪದಿಗಳ ಈ ದೀರ್ಘ ಕಾವ್ಯವನ್ನು ಸಂಪೂರ್ಣವಾಗಿ ಹಾಡುತ್ತಾರೆ. ಉಳಿದ ಕಡೆಗಳಲ್ಲಿ ಇದರ ತುಂಡು ತುಂಡು ಭಾಗಗಳು ಮಾತ್ರ ಪ್ರಚಲಿತದಲ್ಲಿದೆ. ಮುಸ್ಲಿಮರ ಕಣ್ಣು ಸಾಮಾನ್ಯವಾಗಿ ಹಿಂದೂ ದೇವಾಲಯಗಳ ಗರ್ಭಾಂಕಣದ ಐಶ್ವರ್ಯದ ಮೇಲೆ ಇದ್ದು ಅವರು ನಡೆಸುತ್ತಿದ್ದ ದಾಳಿಯ ಹಿನ್ನೆಲೆಯಲ್ಲಿ ರಚಿತವಾಗಿರುವ ಈ ಕಥನಗೀತೆ ಐತಿಹಾಸಿಕ, ಕಾಲ್ಪನಿಕ, ಭೌಗೋಳಿಕ ಅಲ್ಲದೆ ಕೆಲವು ನಂಬಿಕೆ, ಶ್ರದ್ಧೆ, ವ್ರತ ಈ ಎಲ್ಲ ಅಂಶಗಳಿಂದ ಕೂಡಿದೆ. ಇರಿಯಟ್ಟಿ ಚಿತ್ರಲಿಂಗ, ಉತ್ತಪ್ಪ, ಕ್ಯಾತಪ ಇವು ಗೊಲ್ಲಜನಾಂಗದಲ್ಲಿ ಬಹಳವಾಗಿ ಪ್ರಚಲಿತದಲ್ಲಿದ್ದು ಇನ್ನಿತರ ಜಿಲ್ಲೆಗಳಲ್ಲಿ ದೊರಕಬಹುದಾದಂಥ ಪಾಠಗಳಿಗಿಂತ ಬಹುಶಃ ಶುದ್ಧವಾಗಿ, ತ್ರಿಪದಿಗಳಲ್ಲೇ ಸಂಪೂರ್ಣವಾಗಿ, ದೀರ್ಘಕಥಾನಕಗಳಾಗಿ, ವೈವಿಧ್ಯತೆಯ ವಿಶೇಷದಿಂದ ದೊರಕುತ್ತವೆ.

ಮೇಲಿನವಕ್ಕೆ ಭಿನ್ನವಾಗಿ ಮಹಾಭಾರತ ಕಥೆಗೆ ಸಂಬಂಧಿಸಿದಂತೆ ದೊರಕುವ ಕಥನಗೀತೆಗಳೆಂದರೆ ವೀರಅಭಿಮನ್ಯು, ಅರ್ಜುನ ದ್ರೌಪದಿ, ದ್ರೌಪದಿಯ ಓಕುಳಿ ಯಾಟ. ವೀರಅಭಿಮನ್ಯು ಕಥನಗೀತೆಯನ್ನು ಶ್ರೀಮಾನ್ ಕ. ರಾ. ಕೃ ಅವರು ಹಣತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕಲನದಲ್ಲಿ ಸಂಗ್ರಹಿಸಿ ಪ್ರಕಟಿಸಿರುವವರಾದರೂ ಅದು ಅಪೂರ್ಣ. ಓದುಗರಿಗೆ ಅದು ಪೂರ್ಣಪಾಠದಂತೆ ಕಂಡುಬಂದರೂ ಹರ್ಷಿ ಬಯಲ ಇನ್ನಿತರ ಕಡೆಗಳಲ್ಲಿ ಅದರ ಪೂರ್ಣಪಾಠ ನಲವತ್ತು ಪುಟಗಳಷ್ಟು ಮುಂದುವರೆಯುತ್ತದೆ. ಈ ಕಥೆಗೆ ಮೂಲ ಮಹಾಭಾರತವಾದರೂ, ಎರಡೂ ಕಥೆಗೆ ಸಂಬಂಧವೇ ಇಲ್ಲ. ಸುಭದ್ರೆ ಅಭಿಮನ್ಯು ಇವರಿಬ್ಬರ ಹೆಸರು ಮಾತ್ರ ಮಹಾಭಾರತಕ್ಕೆ ಸಂಬಂಧಿಸಿದ್ದು ಉಳಿದವರೆಲ್ಲರ ಹೆಸರು ಬೇರೆಯೇ. ಸುಪ್ಪಕ್ಕ, ನಾರಂದ, ಲಚ್ಚಣ್ಣ, ಮದಲಿಂಗ, ಮಾದೇವಿ ಇವರು ಕಥಾನಕದಲ್ಲಿ ಜೀವಂತ ಪಾತ್ರಗಳು. ನಾಯಕ ಅಭಿಮನ್ಯು ಸೋದರಮಾವನ ಮಗಳು ಮಾದೇವಿಯನ್ನು (ಮಹಾಭಾರತದಲ್ಲಿ ಶಶಿರೇಖೆ) ವಿವಾಹವಾಗಲೆತ್ನಿಸಿ ಕೌರವರ ದಂಡಿನೊಡನೆ ಹೋರಾಡಿ ಮಡಿಯುತ್ತಾನೆ. ಮಹಾಭಾರತದಲ್ಲಿ ಅಭಿಮನ್ಯುವಿನ ಸಾವು ಚಕ್ರವ್ಯೂಹವನ್ನು ಭೇದಿಸುವಲ್ಲಿ. ಜನಪದ ಕವಿಗಳ ಪ್ರಕಾರವಾಗಿ ಆತನ ಸಾವು ಮಾದೇವಿಯನ್ನು ಸತಿಯಾಗಿ ಪಡೆಯುವಲ್ಲಿ. ಅಭಿಮನ್ಯು ಹಾಗೂ ಮಾದೇವಿಯರ ಪ್ರೇಮ ಗೀತೆಯಲ್ಲಿ ಅನನ್ಯವಾಗಿ ಚಿತ್ರಿತವಾಗಿದೆ.

ಅಭಿಮನ್ಯುವೇ ತನ್ನ ಗಂಡನೆಂದು ಪ್ರೀತಿಸಿದ ಮಾದೇವಿಯ ವರ್ತನೆಗೆ ರೋಸಿದ ತಾಯಿ ಸುಪ್ಪಕ್ಕ ಆಕೆಯನ್ನು ಲಗ್ನದವರೆಗೆ ಸೆರೆಮನೆಯಲ್ಲಿರಿಸಿ ಕಾವಲಿಗೆ ಹುಲಿ, ಕರಡಿಗಳನ್ನು ಕಟ್ಟಿಸಿದಳು. ಮಾದೇವಿ :

ಅಜ್ಜ ಅಜ್ಜಿಗಳ ನೆನೆವುತಲಿ ಸತ್ತಿವಂತರು
ಪಾಂಡವರಾ ನೆನೆವುತ ಆಕೀದ ಸಂಕುವಾಲೆ
ಅರುಗಾಗಿ ಪೋಗಾಲಿ ಎಂದಾಳೋ ॥

ಹಿರಿಯರ ಮೇಲೆ ಭಕ್ತಿ ಅಭಿಮನ್ಯುವಿನ ಮೇಲೆ ನಿಜವಾದ ಪ್ರೀತಿ ತನಗಿದ್ದಲ್ಲಿ ಹಾಕಿದ ಸಂಕೋಲೆ ಹರಿದು, ಹುಲಿ ಕರಡಿಗಳು ಅರುಗಾಗಲಿ ಎಂದಳು. ರಾತ್ರೋ ರಾತ್ರಿಯಲ್ಲಿ ಪ್ರೀತಿಸಿದವನನ್ನು ಹುಡುಕಿಕೊಂಡು ಹೊರಟಳು. ಆ ಕಡೆಯಿಂದ ಅಭಿಮನ್ಯುವು ಕನಸು ಕಂಡೆದ್ದು ಕುದುರೆಯ ಮೇಲೆ ಬರುತ್ತ ಎದುರಿನಲ್ಲಿ ಆಕೆಯನ್ನು ಸಂಧಿಸಿದ. ನಕ್ಷತ್ರಗಳ ಬೆಳಕಿನಲ್ಲಿ ಪ್ರೇಯಸಿಯ ಮುಖವನ್ನು ಗುರುತಿಸಿದ. ತೊಡೆಯ ಮೇಲೆ ಕೂರಿಸಿಕೊಂಡು ಕೆದರಿದ ಆಕೆಯ ತಲೆಯನ್ನು ನೇವರಿಸಿದ. ಮಾದೇವಿ ಕಣ್ಣಲ್ಲಿ ನೀರು ಮಿಡಿದು,

ಬಾಳೇವನಕೆ ದಂಡು ಇಳಿದಾವೆ ಕೇಳಯ್ಯ
ನಾಳೆಗೆಂಟು ದಿನಕೆ ಮದುವ್ಯಂತೆ ನನ್ನಯ್ಯ
ನಾಳೆಗೆಂಟು ದಿನಕೆ ಮದುವ್ಯಂತೆ ಮಾವಯ್ಯ
ಅತ್ತೀಯಾ ಮಗನೇ ನನ್ನಾ ಮದುವ್ಯಾಗೋ
ಒಪ್ಪಾದಿಂದ ಬಂದಾವು ಅತ್ತು ಸಾವಿರ ದಂಡು
ನಿಂಬೀ ವನವಾಗೆ ಇಳಿದಾವು ನನ್ನಯ್ಯ
ನನ್ನಾನೀ ಬ್ಯಾಗಾನೆ ಕರೆದೊಯ್ಯೊ ದೇವಾ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಕೇಳಿಕೊಳ್ಳುತ್ತಾಳೆ. ಮದುವೆಗೆ ಎರಡು ದಿನ ಮೊದಲು ಬಳೆಗಾರನ ವೇಷ ತೊಟ್ಟು ಮಾದೇವಿಯನ್ನು ಹಾರಿಸಿಕೊಂಡುಹೋಗಲು ಪ್ರಯತ್ನಿಸಿದ ಅಭಿಮನ್ಯು ಕೌರವರ ದಂಡಿಗೆ ಸಿಕ್ಕಿ ಬಲಿಯಾಗುತ್ತಾನೆ. ದುರಂತ ನಾಯಕನಾಗುತ್ತಾನೆ. ಮಹಾಭಾರತ ಕಥೆಯೇ ಅಲ್ಲದ ಈ ಜನಪದ ಗೀತೆಯಲ್ಲಿ ಅಭಿಮನ್ಯು ಮಾದೇವಿಯರೇ ಮುಖ್ಯ ಪಾತ್ರಗಳಾಗಿ ಅವರ ಪ್ರಣಯ ಹಾಗೂ ಅದರ ವೈಫಲ್ಯವೇ ಈ ಖಂಡ ಕಾವ್ಯದ ಮುಖ್ಯವಸ್ತು. ಹರ್ತಿ ಬಯಲಿನಲ್ಲಿ ಅತ್ಯಂತ ಜನಪ್ರಿಯವಾಗಿರುವ ಗೀತೆಯಿದು. ಮುಮ್ಮೇಳ ಹಿಮ್ಮೇಳಗಳು[11] ಸೇರಿಕೊಂಡು ಹಾಡಲು ಕೂತರೆ ಮುಗಿಯಲು ಮೂರು ರಾತ್ರಿಗಳಾದರೂ ಬೇಕು.[12]

ಅರ್ಜುನ ದ್ರೌಪದಿಯರ ಹಾಡನ್ನು ಡಾ|| ಬಿ. ಎಸ್. ಗದ್ದಿಗೆಮಠ ಅವರು ಸಂಪೂರ್ಣವಾಗಿ 'ಅರ್ಜುನಜೋಗಿ' ಎಂಬ ಹೆಸರಿನಲ್ಲಿ ಪ್ರಕಟಿಸಿರುವವರಾದರೂ ಅದರದೇ ಕಥೆಯುಳ್ಳ, ಆದರೆ ನುಡಿಯೆಲ್ಲ ಬೇರೆಯಾಗಿ 'ಅರ್ಜುನ ದ್ರೌಪದಿ' ಅನ್ನುವ ಹೆಸರಿನಲ್ಲಿ ದೊರಕುತ್ತದೆ.

ಕೊನೆಯದಾಗಿ, ಕತ್ತಲರಾಯ ಗೀತೆಯನ್ನು ಎರಡು ಕಡೆಗಳಲ್ಲಿ ಸಂಗ್ರಹಿಸಲಾಗಿದೆ. ಆಶ್ಚರ್ಯವೆಂದರೆ ಎರಡೂ ಕಡೆಗಳಲ್ಲೂ ಎರಡು ಭಿನ್ನರೀತಿಯ ಪಾಠಗಳು ದೊರೆತಿವೆ. ಮೊದಲು ಸಂಗ್ರಹಿಸಿದುದರ ಎರಡರಷ್ಟಿದೆ ಎರಡನೆಯದು. ಅಂದರೆ ಎರಡನೆಯ ಗೀತೆಯ ಅರ್ಧದಷ್ಟು ಕಥೆ ಮಾತ್ರ ಇದರಲ್ಲಿ ಬಂದಿದೆಯೆಂದಲ್ಲ. ಎರಡರಲ್ಲಿಯೂ ಅದರದೇ ಆದ ಕಥಾವಸ್ತು, ಭಿನ್ನರೀತಿಯ ನಿರೂಪಣೆ, ನುಡಿಗಟ್ಟುಗಳು ಬಂದಿವೆ. ಒಂದರ ವಿಸ್ತೃತರೂಪ ಇನ್ನೊಂದಲ್ಲ. ಅಥವಾ ಒಂದರ ಸಂಕುಚಿತರೂಪ ಇನ್ನೊಂದಲ್ಲ. ಮೇಲಾಗಿ ಸಂಗ್ರಹಿಸಿದ ಎರಡು ಸ್ಥಳಗಳ ಅಂತರ ಕೇವಲ ಆರು ಮೈಲಿ. ಹಾಡಿದ ಇಬ್ಬರೂ ಗೀತೆಯನ್ನು ಬೇರೆಬೇರೆಯವರಿಂದ ಕಲಿತಿದ್ದಾರೆಂದು ಅವರನ್ನು ಕುರಿತು ಮಾಡಿದ ಸಂದರ್ಶನದಿಂದ ತಿಳಿಯಬಹುದಾಗಿದೆ.[13]

ಗೀತೆಗಳ ಛಂದಸ್ಸು ಮತ್ತು ಹಾಡುಗಾರಿಕೆ : ಹರ್ತಿ ಬಯಲಿನ ಹೆಚ್ಚುಪಾಲು ಕಥನಗೀತೆಗಳೆಲ್ಲ ತ್ರಿಪದಿಯ ಛಂದದಲ್ಲಿಯೇ ರಚಿತವಾಗಿವೆ. ಸಾಂಗತ್ಯ ಮತ್ತು

---

11 ಮೇಳ ಎಂದರೆ ಗೀತೆಯನ್ನು ಸಂಪೂರ್ಣವಾಗಿ ಹಾಡಲು ಬಲ್ಲವರು. ಹಿಮ್ಮೇಳ ಎಂದರೆ ಮೇಳದವರು ಹಾಡಿದ್ದನ್ನು ಮತ್ತೆ ಹಾಡಿ ಕಲಿಯುವವರು.

12 ಹಬ್ಬಹರಿದಿನಗಳಲ್ಲಿ ವೀರಅಭಿಮನ್ಯು ಗೀತೆಯನ್ನು ಹಾಡಿಸುವುದು ಪದ್ಧತಿಯಲ್ಲಿದೆ ಸಂಜೆ ಏಳರಿಂದ ರಾತ್ರಿ ಎರಡು ಗಂಟೆಯವರೆಗೆ ವೇಳೆ ಇಟ್ಟುಕೊಂಡು. ಮೂರು ರಾತ್ರಿ ಹಾಡುತ್ತಾರೆ. ಈ ವಿಚಾರವನ್ನು ಹಾಡಿದವರೇ ತಿಳಿಸಿರುತ್ತಾರೆ.

13 ಈವರೆಗೆ ಮೇಲೆ ಹೇಳಿದ ಖಂಡಕಾವ್ಯಗಳ ಸಂಖ್ಯೆ ಇಪ್ಪತ್ತಾಗಿದ್ದು ಸುಮಾರು ನಾಲ್ಕು ಸಾವಿರ ಪದ್ಯಗಳ ಸಂಗ್ರಹವಾದಂತಾಗಿದೆ. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಗೀತೆಗಳನ್ನು ಹಾಡಿದವರ ಸಂದರ್ಶನವನ್ನು ಮಾಡಲಾಗಿದೆ. ಗೀತೆಗಳನ್ನು ಹಾಡಿದವರ ಹೆಸರು, ಸ್ಥಳ, ಮತ, ಇವುಗಳನ್ನೇ ಆಗಲಿ, ಇನ್ನಿತರ ಹೆಚ್ಚಿನ ವಿವರಣೆಯನ್ನೇ ಆಗಲಿ ಲೇಖನದಲ್ಲಿ ಕೊಡಲಾಗಿಲ್ಲ. ಮೇಲಿನದು ಗೀತೆಗಳ ಕೇವಲ ಪರಿಚಯಾತ್ಮಕ ಲೇಖನವಷ್ಟೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚೌಪದಿಗಳು ಕ್ವಚಿತ್ತಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುವುದುಂಟು. ತ್ರಿಪದಿಯಲ್ಲಿ ಅಂಶ ಗಣಾವಲಂಬಿಯಾದ ರಚನೆಗಳೇ ಹೆಚ್ಚು. ಮಾತ್ರಾಗಣಾವಲಂಬಿಯಾದ ರಚನೆಗಳೂ ಉಂಟು. ಕಥನಗೀತೆಯೊಂದರ ಪ್ರಾರ್ಥನಾ ಪದ್ಯ ಮಾತ್ರಾಗಣಾವಲಂಬಿಯಾಗಿರುವುದನ್ನು ಉದಾಹರಣೆಯಾಗಿ ನೋಡಬಹುದು :

ಎಲ್ಲಾರ । ವಚನಾಕ । ನಿಲ್ಲೋಳೆ । ಸರಸೋತಿ
ನೆಲ್ಲು ತೆನೇಯಾಂಗ । ಬಳುಕೂತ । ಬಾಗೂತ
ನಿಲ್ಲಮ್ಮ । ನಮ್ಮ । ವಚನಾಕ ॥

ಐದು ಮಾತ್ರೆಗಳ ನಾಲ್ಕು ಗಣಗಳ ಓಟ ಈ ತ್ರಿಪದಿಯಲ್ಲಿ ಸ್ಪಷ್ಟವಾಗಿದೆ. ಯತಿಗೂ ಕೂಡ ಚ್ಯುತಿಯಿಲ್ಲ. ರಸದಶಸ್ಥಾನದಲ್ಲಿ ಬ್ರಹ್ಮಗಣ ಬಂದಿದೆ. ಒಳ ಪ್ರಾಸ ದ್ವಿತೀಯಾಕ್ಷರ ಪ್ರಾಸ ಎಲ್ಲವೂ ಸರಿಯಾಗಿಯೇ ಇವೆ. ಏಳು ಮತ್ತು ಹನ್ನೊಂದನೇ ಗಣಗಳ ಪ್ರಾರಂಭದಲ್ಲಿ ಎರಡು ಲಘುಗಳು,—ಇದು ಜಯಕೀರ್ತಿ ಹೇಳಿದಂತೆ ಚಿತ್ರಾ ತ್ರಿಪದಿಕೆಯ ಲಕ್ಷಣ. ಮುಂದಿನದೊಂದು ತ್ರಿಪದಿಯನ್ನು ನೋಡಿದಾಗ

ಬಿತ್ತೀದೊ । ಲದಾಗ ಸ। ತ್ತಿವಂತೆ । ಬರುತಾಳೆ
ಮುತ್ತೊತ್ತಿ । ದ್ವಾಲೆ । ಕಿವಿಯಾಗೆ । ಕಾಟಮ್ಮ
ಮುತ್ತೈದೆ । ಳಾಗಿ । ಬರುತಾಳೆ ॥

ಮಾತ್ರಾಗಣಾವಲಂಬಿಯಾಗಿದ್ದ ತ್ರಿಪದಿ ಇಲ್ಲಿ ಅಂಶಗಣಾವಲಂಬಿಯಾಗಿದೆ. ಮಾತ್ರಾಗಣದಲ್ಲಿದ್ದ ಪದ್ಯಗಳು ಕೆಲವು ಅಂಶಗಣಕ್ಕೆ ಜಾರಿಕೊಳ್ಳುವುದನ್ನು ಹಲವು ಪದ್ಯಗಳಲ್ಲಿ ಕಾಣಬಹುದು. ದ್ವಿತೀಯಾಕ್ಷರ ಪ್ರಾಸವಿದೆ. ಸ್ವಾಭಾವಿಕವಾಗಿ ಏರ್ಪಡುವ ಯತಿ ಇಲ್ಲ.

ಉದ್ದಾನೆ । ಕೊಂಡಾಕ । ಗೆಜ್ಜೆಮು । ಚ್ಚಲುಗಲ್ಲು
ರುದ್ರಣ್ಣ । ನೆಂಬೋ । ಕುದುರೇಯ । ನೇರಿಕಂಡು
ಪೋದಾಳೆ । ಶಿವನಾ । ಅರಮನಿಗೆ ॥

ಈ ತ್ರಿಪದಿಯಲ್ಲಿ ಹನ್ನೊಂದನೆ ಗಣ ವಿಷ್ಣುಗಣಕ್ಕೆ ಬದಲಾಗಿ ರುದ್ರಗಣ ಬಂದಿದೆ. ಇದು ವಿಚಿತ್ರ ತ್ರಿಪದಿಯ ಲಕ್ಷಣ. ಎಂಟನೆಯ ಗಣ ತ್ರಿಪದಿಯ ಸುಲಭವಾದ ಓಟಕ್ಕೆ ತಡೆಯನ್ನುಂಟುಮಾಡುತ್ತದೆ. ಅಂಶಗಣದ ಛಂದದಲ್ಲಿ ಇದೆಲ್ಲ ಸ್ವಾಭಾವಿಕ. ಜನಪದ ಗೀತೆಗಳ ಒಂದು ವಿಶೇಷ ಲಕ್ಷಣವೆಂದರೆ ಒಂದು ಬಾರಿ ಕೇಳಿದ್ದನ್ನೇ ಮತ್ತೊಮ್ಮೆ ಅವರಿಂದಲೇ ಹೇಳಿಸಿದಲ್ಲಿ ನುಡಿಗಳಲ್ಲಿ, ಗಣಗಳ ಜೋಡಣೆಯಲ್ಲಿ, ಮಾತ್ರೆಗಳ ಸಂಬಂಧದಲ್ಲಿ ವ್ಯತ್ಯಾಸವಾಗುವುದುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಪದಿ ತಾಳಹೀನ ಎಂಬುದಾಗಿ ಸಂಗೀತರತ್ನಾಕರ ಹೇಳುವುದನ್ನು ಡಾ॥ ಡಿ. ಎಸ್. ಕರ್ಕಿಯವರು ತಮ್ಮ ಕನ್ನಡ ಛಂದೋವಿಕಾಸ ಕೃತಿಯಲ್ಲಿ ತಿಳಿಸಿರುತ್ತಾರೆ. ಇದು ಅಂಶಗಣಬಂಧವಾದ ತ್ರಿಪದಿಗಳಿಗೆ ಸಂಬಂಧಿಸಿದ್ದು. ಜನಪದ ತ್ರಿಪದಿಗಳ ಹಾಡುಗಾರಿಕೆಯಲ್ಲಿ ಅಕ್ಷರಗಳನ್ನು ಹಿಗ್ಗಿಸಿ ಹಾಡುವದರಿಂದ ತಾಳದ ಹೊಂದಿಕೆ ಅವರಿಗೆ ಕಷ್ಟವಲ್ಲ. ಐದು ಮಾತ್ರೆಗಳನ್ನು ಹೊಂದಿಸಿ ನಾಲ್ಕು ಗಣಗಳ ಓಟದ ಸಾಲುಗಳನ್ನು ಹೇಳಲು ಸರಾಗ. ಇದು ಲಲಿತಲಯದ ಮಟ್ಟಾಗುತ್ತದೆ. ಮೊದಲೆರಡು ಪಾದದಲ್ಲಿ ಕೊನೆಯ ಗಣವನ್ನುಳಿದು ಮಿಕ್ಕೆಲ್ಲವನ್ನು ಹಾಡಿ ಸೊಲ್ಲುನುಡಿಯುತ್ತಾರೆ. ನಂತರ ಎರಡನೇ ಮೂರನೇ ಪಾದಗಳನ್ನು ಹೇಳಿ ತಿರುಗಿ ಸೊಲ್ಲುನುಡಿಯುತ್ತಾರೆ. ಸೊಲ್ಲು ಅನ್ನುವ ಪದ ಈ ಬಯಲಿನ ಹಾಡುಗಾರರಲ್ಲಿ ಹೆಚ್ಚು ಪ್ರಚಲಿತದಲ್ಲಿಲ್ಲ. ಸೊಲ್ಲು ಪದಕ್ಕೆ ಬದಲಾಗಿ 'ದಣಿ' ಪದ ಚಾಲ್ತಿಯಲ್ಲಿದೆ. ಪ್ರತಿಯೊಂದು ಕಥನ ಗೀತೆಗೂ ಸುಮಾರು ಮೂರರಿಂದ ಹಿಡಿದು ಹತ್ತರವರೆಗೆ ಸೊಲ್ಲುಗಳಿರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರ ಮೊಕಾಶಿ ಪುಣೇಕರ

ಲೇಖಿಕೆಯರಿಗೆ—ಮಹಿಳೆಯರಿಗೆ

ತಾವು ರಚಿಸಿದ ಕಾದಂಬರಿಗಳ ಬಗ್ಗೆ ವಿಮರ್ಶೆ ಬರೆಯುತ್ತಿಲ್ಲವೆಂದು ಮಹಿಳೆಯರು ಮಿಡುಕಬಾರದು. ವಿಮರ್ಶಕರು ಯಾವ ಕಾರಣಕ್ಕಾಗಿ ಕೆಲ ಸಪ್ಪೆ ಗ್ರಂಥಗಳನ್ನು ಹೊಗಳುತ್ತಾರೆಂದು ಚೌಕಾಶಿ ಮಾಡಲು ಯತ್ನಿಸಬಾರದು. ಹಾಗೆ ಚೌಕಾಶಿ ಮಾಡಿ ಪಡೆದ ಉತ್ತರಗಳನ್ನು ತಮ್ಮ ಕಾದಂಬರಿಗಳ ನಿಯಮಗಳೆಂದು ಗ್ರಹಿಸಬಾರದು. ಸದ್ಯದ ವಿಮರ್ಶೆ ಓದುಗರಿಂದ ದೂರವಾಗಿದೆ. ಆದರಿಂದ ಸೃಷ್ಟಿಶೀಲ ಲೇಖಕರಿಗೆ ಹೆಚ್ಚಿನ ಲಾಭವಿಲ್ಲ. ಲೇಖಿಕೆಯರಿಗೆ ಈಗಾಗಲೆ ಅವರ ಯೋಗ್ಯತೆ ಮೀರಿ ಓದುಗರು ದೊರಕಿದ್ದಾರೆ. ಅವರು ಸಾಹಿತ್ಯಕ ಗುಂಪುಗಳಲ್ಲಿ ಪ್ರಶಸ್ತಿ ಪಡೆದಿಲ್ಲ. ಇಷ್ಟೆ. ಈ ಸಾಹಿತ್ಯದ ಗುಂಪುಗಳಲ್ಲಿ ಮನ್ನಣೆ ಪಡೆಯುವ ಹವ್ಯಾಸಕ್ಕೆ ಬೀಳಬಾರದು. ತಮ್ಮ ಲೇಖನಕಲೆಯತ್ತ ಹೆಚ್ಚು ಲಕ್ಷ್ಯಕೊಡಬೇಕು.

ಮೊದಲನೆಯದಾಗಿ ರೂಪದರ್ಶಿ ಕಲೆ ಬೆಳೆಸಿಕೊಳ್ಳಿರಿ. ಕಾದಂಬರಿಗೆ ರೂಪವಿರುತ್ತದೆ. ವಿಧವಿಧ ಸಂದರ್ಭಗಳ ನಡುವೆ ಕಾರಣ–ಕಾರ್ಯ ಸಂಬಂಧವಿರುತ್ತದೆ. ಕೆಲ ವ್ಯಕ್ತಿಗಳು ಕೆಲ ಸಂದರ್ಭಗಳಲ್ಲಿ ತಮ್ಮ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ವರ್ತಿಸುತ್ತಾರೆ. ಇಂಥ ವರ್ತನೆಗೆ 'ವ್ಯಕ್ತಿ ಚಿತ್ರಣ'ವೆಂದು ಹೆಸರು. ಸಂದರ್ಭಗಳಿಗೆ episode ಎಂದು ಹೆಸರು. ಈ ಸಂದರ್ಭಗಳನ್ನು ಒಂದು ಅಂತ್ಯದವರೆಗೆ ಜೋಡಣೆ ಮಾಡಿ, ಅವುಗಳ ಕಾರ್ಯಕಾರಣ ಸಂಬಂಧವನ್ನು ಬಲೆಕಟ್ಟಾಗಿ ಮಾಡಿದರೆ ಕಾದಂಬರಿಗಳಿಗೆ ಒಟ್ಟಂದದ ಒಪ್ಪ ಬರುತ್ತದೆ. ಇದಕ್ಕೆ form, unity, ರೂಪ ಎಂದು ಹೆಸರು.

ನಾನು ಓದಿದ ಕೆಲವೇ ಮಹಿಳಾ ಕಾದಂಬರಿಗಳ ಮೇಲಿಂದ ಹೇಳುವುದಾದರೆ, ಮಹಿಳೆಯರು ಸಂದರ್ಭಗಳನ್ನು ಬಣ್ಣಿಸುವಲ್ಲಿ ಎತ್ತಿದ ಕೈ. ಆದರೆ ಸಂದರ್ಭಗಳ ನಡುವಿನ ಸಂಬಂಧವನ್ನು ಸರಿಯಾಗಿ ಜೋಡಿಸಿರುವುದಿಲ್ಲ. ಇಂಥ ಜೋಡಣೆಯ ಕಲೆಯನ್ನು ಬೆಳೆಸಿಕೊಳ್ಳುವದೆಂತು ? ಪಾಶ್ಚಾತ್ಯರಲ್ಲಿ ಈ ಕಲೆ ಗ್ರೀಕರ ಕಾಲದಿಂದ ಬೆಳೆದು ಬಂತು. ಆದ್ದರಿಂದ ಅವರ ಕಾದಂಬರಿಗಳು ಮಹತ್ವದ ಕೃತಿಗಳಿರಲಿ, ಇಲ್ಲದಿರಲಿ, ಜೋಡಣೆಯ ಕಲೆಯನ್ನು ಅಲ್ಲಿ ಕಾಣಬಹುದು. ಒಂದು Girlie novel ಅಥವಾ comic strip ಓದಿದರೂ ಈ ರೂಪದರ್ಶಿ ಕಲೆ ಅವರಲ್ಲಿ ಕಾಣುತ್ತೇವೆ. ಅದೇನೆ ಇದ್ದರೂ, ಸದ್ಯಕ್ಕೆ ನಿಮ್ಮಲ್ಲಿರುವ ಸಂದರ್ಭ ವರ್ಣನೆಯ ಕಲೆಯನ್ನು ಬಿಟ್ಟುಕೊಡಬೇಡಿರಿ. ನಿಮ್ಮ ಕೃತಿಗಳನ್ನು ಸಿನಿಮಾ ನಿರ್ಮಾಪಕರು ಆರಿಸಿಕೊಳ್ಳುವದಕ್ಕೂ ಇದೇ ಕಾರಣ. ಇದನ್ನು ಬಿಟ್ಟುಕೊಟ್ಟು, ಕೇವಲ ಮಾನಸಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶ್ಲೇಷಣೆಯತ್ತ ನೀವು ತಲೆ ಹಾಕಿದರೆ, ನಿಮಗೆ ವಿಮರ್ಶಕರಿಂದ ಹೊಗಳಿಕೆ ದೊರಕೀತು. ಆದರೆ ನೀವು ಓದುಗರಿಂದಲೂ ಸಿನೆಮಾ ನಿರ್ಮಾಪಕರಿಂದಲೂ ದೂರವಾಗುವಿರಿ.

ಸಂದರ್ಭಗಳಿಗೆ ರೂಪದ ಒಪ್ಪಕೊಡುವ ಕಲೆಯನ್ನು ಸಾಧಿಸುವುದೆಂತು?—ಇತ್ತೀಚೆಗೆ ಪಾಶ್ಚಾತ್ಯರಲ್ಲಿ ಇದಕ್ಕಾಗಿ Literary agency ಗಳು ಬೆಳೆದಿವೆ. ಯುನಿವರ್ಸಿಟಿಗಳಲ್ಲೂ Creative Literature ಎಂಬ ವಿಷಯ ಸೇರಿಸಲಾಗಿದೆ. ಕರ್ನಾಟಕದಲ್ಲಿ ಇನ್ನೂ ಇದಾಗಿಲ್ಲ. ಇದನ್ನು ಬೆಳೆಸಿಕೊಳ್ಳಲು ಒಂದು ಸುಲಭ ಉಪಾಯ ಹೇಳುತ್ತೇನೆ. ಕೆಲ ಪಾಶ್ಚಾತ್ಯ ಲೇಖಕರಲ್ಲಿ ರೂಪದರ್ಶಿ ಕಲೆ ಹೆಚ್ಚು ಸ್ಪಷ್ಟವಾಗಿ ಒಡಮೂಡಿದೆ. ಉದಾ: ಪ್ರೊ. ಬ್ರೆಟ್, ಹಾರ್ಟ್. ಮೊಪಾಸಾ, ಜಾರ್ಜ್ ಎಲಿಯಟ್ (ನಂತರದ ಕಾದಂಬರಿಗಳು), ಚೆಕವ್; ಇವರಿಂದ ರೂಪದರ್ಶಿ ಗುಣ ಕಲಿಯಬಹುದು. ಒಮ್ಮೆ ಒಬ್ಬ ಇಂಥ ಲೇಖಕನ ಕೃತಿಗಳನ್ನು ಓದಲು ಪ್ರಾರಂಭಿಸಿದರೆ, ಅವನ ಎಲ್ಲ ಕೃತಿಗಳನ್ನೂ ಸಾಲಾಗಿ ಓದಿರಿ. ನಡುವೆ ಇನ್ನೊಬ್ಬರ ಗ್ರಂಥಗಳನ್ನು ಓದಬೇಡಿರಿ. ಮೊದಲು ಓದಿದ ಕಥೆ ಕಾದಂಬರಿಗಳ ಸಾರವನ್ನು ಒಂದೆರಡು ಪ್ಯಾರಾಗಳಲ್ಲಿ ಬರೆಯಿರಿ—ಯಾವ ಸಂದರ್ಭದ ನಂತರ ಯಾವ ಸಂದರ್ಭ ಬಂದಿತೆಂಬುದನ್ನು ಸರಿಯಾಗಿ ಬರೆದಿಟ್ಟುಕೊಳ್ಳಿರಿ. ಮೊಪಾಸಾನ Necklace ಅಥವಾ Pierre and Jean ಇಂಥ ಕಥೆಗಳನ್ನು ಓದಿದರೆ ಸಂದರ್ಭಗಳ ಜೋಡಣೆ ಮನವರಿಕೆಯಾಗುವುದು. ವಿಶೇಷತಃ ಬ್ರೆಟ್ ಹಾರ್ಟ್‌ನ ಕತೆಗಳನ್ನು ಓದಿರಿ. (ಇವು ಮಾರುಕಟ್ಟೆಯಲ್ಲಿ 4–5 ರೂಪಾಯಿಗಳಲ್ಲಿ ದೊರೆತಾವು.) ಮಹಾ ಲೇಖಕರನ್ನು ಓದಲು ಯತ್ನಿಸಬೇಡಿರಿ. ಕಾದಂಬರಿಯನ್ನೇ ಓದುವುದಾದರೆ, ಜಾರ್ಜ ಎಲಿಯಟ್ಟಳ ಕಿರುಕಾದಂಬರಿ **ಸಿಲ್ಯಾಸ್ ಮಾರ್ನರ** ಓದಿರಿ. ಅದರ ಒಂದೊಂದು ವಾಕ್ಯವನ್ನೂ ಓದಿ ಒಂದೊಂದು ಸಂದರ್ಭದ ಸಾರವನ್ನೂ ಅಧ್ಯಾಯ 1, 2... ಹೀಗೆ ಬರೆದಿಟ್ಟುಕೊಳ್ಳಿರಿ. 6 ತಿಂಗಳಲ್ಲಿ ನಿಮ್ಮ ರೂಪದರ್ಶಿತ್ವ ಸುಧಾರಿಸುವುದು. ಸಿಲ್ಯಾಸ್ ಮಾರ್ನರದ ಮೊದಲನೆಯ ಅಧ್ಯಾಯ ತುಸು ಗಡುಚೆಂದು ಅನ್ನಿಸಬಹುದು. ಅದರ ಅರ್ಧದಷ್ಟು ಬಿಟ್ಟರೂ ಚಿಂತೆಯಿಲ್ಲ.

ಇನ್ನು ಶೈಲಿಯ ವಿಷಯ. ಇದರಲ್ಲಿ ನಾನು ಮಹಿಳೆಯರನ್ನು ಕ್ಷಮಿಸಲಾರೆ. ತುಂಡು ವಾಕ್ಯಗಳು, ಹರಕು ಮುರುಕು ಕನ್ನಡ, ವಾಕ್ಯಗಳ ಸೌಷ್ಠವ-ಸೌಂದರ್ಯಗಳ ಬಗ್ಗೆ ನಿರ್ಲಕ್ಷ, ಇವು ಓದುಗರಿಗೆ ಬೇಜಾರು ತರಿಸುತ್ತವೆ. ಮನೆಗೆಲಸದಲ್ಲಿ ಮಹಿಳೆ ಹಾಗೂ ಹೀಗೂ ಕಾದಂಬರಿ ಮುಗಿಸಿ ಪ್ರಕಾಶಕರತ್ತ ಹೋಗುತ್ತಾಳೆ. ಮಹಿಳೆಯರ ಗ್ರಂಥಗಳು ಸುಲಭವಾಗಿ ಮಾರಾಟವಾಗುತ್ತವೆಯೆಂದು ಪ್ರಕಾಶಕರು ಇನ್ನೊಂದು ವಿಚಾರವಿಲ್ಲದೆ ಪ್ರಕಟಿಸುತ್ತಾರೆ. ಮಹಿಳೆಯರ ಲೋಕಪ್ರಿಯತೆಗೆ ಮುಖ್ಯ ಕಾರಣ ವೆಂದರೆ ಸಂದರ್ಭಗಳ ವರ್ಣನೆ. ಸಿದ್ಧಹಸ್ತರೆಂದು ವಿಮರ್ಶಕರು ಹೊಗಳಿದ ಲೇಖಕರಲ್ಲಿರುವ ಗೂಢ ಮಾನಸಿಕ ವರ್ಣನೆಗಳಿಗೆ ಬೇಸತ್ತ ಸಾಮಾನ್ಯ ಓದುಗರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಿಳೆಯ ಕಾದಂಬರಿಗಳನ್ನು ಓದುತ್ತಾರೆ. ಆದರೆ ಶೈಲಿಯ ನಿರ್ಲಕ್ಷದಿಂದ ಈ ಸಂದರ್ಭವರ್ಣನೆಗೂ ಹಾನಿಯಾಗುತ್ತದೆ. ತುಣುಕು ಸಂದರ್ಭಗಳ ಪಟ್ಟಿಯನ್ನೇ ಬರೆಯಬೇಡಿರಿ. ಒಂದೊಂದು ಸಂದರ್ಭವನ್ನೂ ಕಾದಂಬರಿಯ ಒಟ್ಟು ವಸ್ತುವಿಗೆ ಪೋಷಕವಾಗುವಂತೆ ತುಸು ದೀರ್ಘವಾಗಿ ಬರೆಯಿರಿ. ಶೈಲಿಯತ್ತ ಲಕ್ಷ್ಯಕೊಟ್ಟರೆ, ಸಂದರ್ಭಗಳ ನಿರ್ವಹಣೆಯೂ ಸಹಜವಾಗಿಯೇ ಬಲಕಟ್ಟುಗೊಳ್ಳುವುದು. ಗಡಿಬಿಡಿಯಿಂದ ಬರೆಯಬೇಡಿರಿ, ಅಗತ್ಯಬಿದ್ದರೆ ಎರಡನೆಯ ಕಾಪಿ ಮಾಡಿರಿ. (ಇಲ್ಲಿ ಶಿಶಿರ ಕುಮಾರ ಘೋಷರು ಮಾಡಿದ ಸೂಚನೆ. ಒಂದು ಹಸ್ತಪ್ರತಿ ಬರೆಯುವದಾದಮೇಲೆ ಅದನ್ನು ಒಂದೆರಡು ತಿಂಗಳು ನೋಡದೆ ಬಿಟ್ಟುಕೊಡಬೇಕು. ನಂತರ ಇನ್ನೊಮ್ಮೆ ಓದಬೇಕು. ಆಗ ನಮ್ಮ ದೋಷಗಳು ಹೆಚ್ಚು ನಿಚ್ಚಳವಾಗಿ ತೋರುವವು).

ಇನ್ನು ಲೇಖಿಕೆಯರಿಗೆ ಕೊನೆಯ ಮಾತು. ನೀವು ಪುರುಷರನ್ನು ಅನುಕರಿಸಲು ಹೋಗಬೇಡಿರಿ. ಕಾದಂಬರಿಗೆ ಲೇಖಿಕೆಯರೇ ಕೊಡಬೇಕಾದ ಕೊಡುಗೆ ಇದೆ. ಕೆಲ ವಿಷಯಗಳು ಪುರಷರ ಕಣ್ಣಿಗೆ ಬೀಳುವುದಿಲ್ಲ. ಅವರು ಮಹಿಳೆಯರ ಮುಖ ನೋಡುತ್ತಾರೆಯೇ ಹೊರತು ಸೀರೆ ನೋಡುವುದಿಲ್ಲ. ಮಹಿಳೆ ಇನ್ನೊಬ್ಬ ಮಹಿಳೆ ಉಟ್ಟ ಸೀರೆಯ ಬಣ್ಣವನ್ನೂ ಕೂಲಂಕಷವಾಗಿ ನೋಡಿರುತ್ತಾಳೆ. ಗರ್ಭಧಾರಣೆಯ ಅನುಭವ, ಸ್ತನಪಾನ ಮಾಡಿಸುವ ದೈಹಿಕ ಅನುಭವ, ಮಗುವಿನ ಬೆಳೆವಣಿಗೆಯ ಅನುಭವ, ಅವನಲ್ಲಾಗುವ ಸೂಕ್ಷ್ಮ ಮಾನಸಿಕ ಬದಲಾವಣೆಗಳು, ಇವುಗಳನ್ನು ಮಹಿಳೆ ಯಥಾರ್ಥವಾಗಿ ಬಣ್ಣಿಸತೊಡಗಿದರೆ ಪುರುಷರು ಮೂಕರಾಗುವರು. ವ್ಹಿಕಿ ಬಾಮ್ ಎಂಬ ಜರ್ಮನ್ ಮಹಿಳೆ ಹೊಟ್ಟೆಯಲ್ಲಿಯ ಮಗುವಿನ ಉಲುಗಾಟವನ್ನು ವರ್ಣಿಸಿದ್ದಾಳೆ. ಮಹಿಳೆಯ ಕಾದಂಬರಿ ಸ್ತ್ರೀಮನಸ್ಸಿನ ಸ್ಪಷ್ಟ ಅವಿಷ್ಕಾರವಾಗಬೇಕು. ಪುರುಷ ಮನಸ್ಸು ಅವರ ತಲೆಯಲ್ಲೇ ಹೆಚ್ಚು. ಸ್ತ್ರೀಯ ಮನಸ್ಸು ಅವಳ ಅಂಗಾಂಗಗಳೆಲ್ಲರಲ್ಲೂ ಭೇದಿಸಿಕೊಂಡಿರುತ್ತದೆ. ಈವರೆಗೆ ಬೆಳೆದ ಸಾಹಿತ್ಯದಲ್ಲಿ ಪುರುಷರೇ ಹೆಚ್ಚು ಪಾಲುಗೊಂಡ ಮೂಲಕ, ಅವರ ಕೃತಿಗಳನ್ನು ಅನುಕರಿಸಲು ಮಹಿಳೆಯರು ಯತ್ನಿಸುತ್ತಾರೆ. ಇದರಿಂದ ಮಹಿಳೆಗೆ ನಷ್ಟ. ಅವಳಿಂದ ಬರಬೇಕಾದ ವಿಶಿಷ್ಟ ಕೊಡುಗೆ ಬಾರದೆ ಹೋಗುತ್ತದೆ. ಆದ್ದರಿಂದ ನಿಮ್ಮ ಸೂಕ್ಷ್ಮ ಅನುಭವ ಅವಲೋಕನಗಳನ್ನು ನಿಮ್ಮ ಕಾದಂಬರಿಗಳಲ್ಲಿ ವ್ಯಕ್ತಗೊಳಿಸಿರಿ. ಮಹಿಳೆಯ ಅಂತರಂಗವನ್ನು ಪುರುಷನು ಅರಿತುಕೊಳ್ಳುವಂತಾದರೆ ಅವನು ಸ್ತ್ರೀತ್ವಕ್ಕೆ ಹೆಚ್ಚು ಗೌರವ ಕೊಡುವನು. 'ಶರಪಂಜರ' ಉತ್ತಮ ಸಿನಿಮಾ ಆದದ್ದು ಅದರ psychology ಮೂಲಕವಲ್ಲ; ಅದರ physiology ಮೂಲಕ.

ಇದು ಲೇಖನ ಕಲೆಯ ಬಗ್ಗೆ ಮಾತಾಯಿತು. ಇದಕ್ಕೂ ಒಂದೆರಡು ಲೇಖನ ಕಲೆಗೆ ಸಂಬಂಧವಿಲ್ಲದ ಮಾತುಗಳನ್ನು ಹೇಳುತ್ತೇನೆ. ಅಂತರ್‍ರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಮಹಿಳೆಯರು ಮಾಡಿದ್ದೇನು ? ಎಲ್ಲಾ ಕಡೆಗೂ ಆದ ಚರ್ಚೆಗಳು, ಅವಿವಾಹಿತ ಮಹಿಳೆಯ ಸಮಸ್ಯೆ, ಗೃಹಿಣಿಯ ಸಮಸ್ಯೆ, ನೌಕರಿ ಮಾಡುವ ಹುಡುಗೆಯ ಸಮಸ್ಯೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲೇಜುಗಳಲ್ಲಿ ಮಹಿಳಾ ಹಾಸ್ಟೆಲ್ ಹೆಚ್ಚಾಗಬೇಕೆಂಬ ಬೇಡಿಕೆ. ಇದೇ ತಾನೆ? Underprivileged women ಬಗ್ಗೆ ನೀವು ವಿಚಾರ ಮಾಡಲಿಲ್ಲ—ನೀವು ಲೇಖಿಕೆಯರಾದ್ದರಿಂದ ನಿಮಗೆ ಮುಂದಾಳುತನ ಬರುವುದು ಸುಲಭ, ಸಹಜ. ಅದನ್ನೆಲ್ಲ ನಿಮ್ಮ ವರ್ಗದವರಿಗೇ ಮೀಸಲಾಗಿಡುವಿರಾ?—ನಿಮ್ಮ ಕಾದಂಬರಿಗಳಲ್ಲಿ ಈ ವಿಷಯ ಬರಬೇಕು ಎಂದು ನಾನು ಹೇಳುತ್ತಿಲ್ಲ. ಅದು ನಿಮ್ಮ ನಿಮ್ಮ ಪ್ರಕೃತಿಗೆ ಸಂಬಂಧಿಸಿದ ವಿಷಯ. ಆದರೆ. ನೀವು ಮನುಕುಲದವರಾದ್ದರಿಂದ, ಕೆಳವರ್ಗದ, ದನಿಯಿಲ್ಲದ, ಅಜ್ಞಮಹಿಳೆಗಾಗಿ ಹೋರಾಡುವದೂ ನಿಮ್ಮ ಧರ್ಮ; ಕುಲಧರ್ಮ, ಮನುಷ್ಯ ಧರ್ಮ. ಅವಳಿಗೆ ದನಿಯಿಲ್ಲವಾದರೆ, ಅದಕ್ಕೆ ನಿಮ್ಮ ದನಿ ಜೋಡಿಸಬೇಕು. ಅವಳ ಪರವಾಗಿ ನೀವು ಮಾತಾಡಬೇಕು. ಅವಳ ಸಮಸ್ಯೆಗಳನ್ನು ಆದ್ಯವಾಗಿ ಸಭೆ ಸಮ್ಮೇಳನಗಳಲ್ಲಿ ಒತ್ತಿ ಹೇಳಬೇಕು. ಇದನ್ನು ನೀವು ನಿಮ್ಮ ಸಭೆ ಸಮ್ಮೇಳನಗಳಲ್ಲಿ ಹೇಳದೆ ಹೋದರೆ, ನೀವು ಕರ್ತವ್ಯಚ್ಯುತರಾಗುವಿರಿ.

ಮುಂಬೈಯಂಥ ದೊಡ್ಡ ಊರುಗಳಲ್ಲಿ ಒಡ್ಡರ ಹೆಣ್ಣುಮಕ್ಕಳು ಮುಂಜಾನೆ ನಾಲ್ಕಕ್ಕೆದ್ದು ಗಂಡನಿಗೆ ಮಕ್ಕಳಿಗೆ ರೊಟ್ಟಿ ಬಡಿದು ಊಟಕ್ಕೆ ಹಾಕಿ ಅವರ ಜೊತೆಗೆ ತಾನೂ ಕೆಲಸಕ್ಕೆ ಹೋಗುತ್ತಾರೆ. ಕಂಕುಳದಲ್ಲಿ ಮಗು. ಒಂದು ಗೋಡೆಗೆ ಮರೆಯಾಗಿಟ್ಟು ಎಂಟುಗಂಟೆ ದುಡಿಯುತ್ತಾರೆ. (ಈ ವಿಷಯಕ್ಕೆ ಸಲೀಮ ಪೀರಾದೀನಾ ಎಂಬ ಕವಿ ಹೃದಯಕ್ಕೆ ತಟ್ಟುವಂಥ ಒಂದು ಕವನ ರಚಿಸಿದ್ದಾನೆ—ಇಂಗ್ಲೀಷಿನಲ್ಲಿ. ಆದರೆ modernist ಶೈಲಿಯಲ್ಲಿ ಬರೆದ ಮೂಲಕ ನನ್ನಂಥ ಇಂಗ್ಲಿಷ್ ಅಧ್ಯಾಪಕನಿಗೇ ತಿಳಿಯದ ಕವನ) ಕಾಲಕ್ಕೆ ತಕ್ಕಂತೆ ಈ ಹೆಣ್ಣುಮಕ್ಕಳ ಗಳಿಕೆಯೂ ಹೆಚ್ಚಾಗಿದೆ. ಆದರೆ ದೈಹಿಕಶ್ರಮ ಕಮ್ಮಿಯಾಗಿಲ್ಲ. ಇವರು ಬೆಳಿಗ್ಗೆ ಎದ್ದು ಒಲೆ ಹತ್ತಿಸಲೇಬೇಕೇ?—ರೇಲ್ವೆ ಹಳಿಗುಂಟ ಬಿದ್ದ ಚಿಪ್ಪಾಡಿ ದಂಟುಗಳನ್ನು ತಾವೇ ಹೆಕ್ಕಿ ತರಬೇಕೇ? ದೊಡ್ಡ ಮುನಿಸಿಪಾಲ್ಟಿ ಕಾರ್ಪೊರೇಶನ್‌ಗಳು night soilದ sedimentationಗಾಗಿ ಬಹಳ ಖರ್ಚಿನಿಂದ ಪ್ಲಾಂಟಗಳನ್ನು ರೂಪಿಸಿವೆಯೇ ಹೊರತು ಅದರಿಂದ ಗೊಬ್ಬರ, ಗ್ಯಾಸ್ ಉತ್ಪಾದಿಸುವ ಪ್ಲಾಂಟುಗಳನ್ನು ರಚಿಸಿಲ್ಲ. ಇಂಥ ಪ್ಲಾಂಟುಗಳ ರಚನೆಯಾಗಬೇಕು. ಗಿಡ ಕಡಿಯುವುದು ನಿಲ್ಲಬೇಕು. ಮಧ್ಯವರ್ತಿ ಕೇಂದ್ರಗಳಲ್ಲಿ ದೊಡ್ಡ ಪ್ರಮಾಣದ ಅನ್ನಬೇಯಿಸುವ ಪ್ಲಾಂಟುಗಳಾಗಬೇಕು. ಇದರ technology ಕಠಿಣವಲ್ಲ. ಲಾರ್ಸನ್-ಟೂಬ್ರೊ, ಎಚ್. ಎಂ. ಟಿ. ಇಂಥ ಸಂಸ್ಥೆಗಳು ಈ ಯೋಜನೆಯನ್ನು ಒಂದು ತಿಂಗಳಲ್ಲಿ ಮುಗಿಸಬಹುದು. ಹೀಗಾದ ಅನ್ನವನ್ನು ಪುಳಿಯೊಗರೆಯಾಗಿಯೋ, ಕಲಸನ್ನವಾಗಿಯೋ, ಚಿತ್ರಾನ್ನವಾಗಿಯೋ ಮಾಡಿ ಪ್ಯಾಕೆಟ್ ಮಾಡಿ, ಎಂಟಾಣೆಗೆ ದೊಡ್ಡ ಪ್ಯಾಕೆಟ್, ನಾಲ್ಕಾಣೆಗೆ ಸಣ್ಣ ಪ್ಯಾಕೆಟ್ ವಿತರಿಸುವುದು ಎಳ್ಳಷ್ಟು ಕಠಿಣ ಕೆಲಸವಲ್ಲ. ಇಂಥ ಒಂದು ಯೋಜನೆಯನ್ನು ಸರಕಾರಕ್ಕೆ ಬರೆದು ತಿಳಿಸಿದ್ದೆ. ಹಿಂದಿನ ರಾಷ್ಟ್ರಾಧ್ಯಕ್ಷ ವಿ. ವಿ. ಗಿರಿಯವರು ಇವರಲ್ಲಿ ಆಸ್ಥೆ ತೋರಿಸಿದ್ದರು. ಆದರೆ ಇಂಥ ಯೋಜನೆಗಳಿಗೆ ಮಹಿಳೆಯರ ಬೆಂಬಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಖ್ಯ. ಅವರು ಸ್ವತಂತ್ರ ಆಲೋಚನೆ ಮಾಡಬೇಕು. ತಮ್ಮ ದನಿಯಿಲ್ಲದ ಕಡುಬಡವ ಅಕ್ಕತಂಗಿಯರ ಯೋಗಕ್ಷೇಮವನ್ನು ಆಲೋಚಿಸಲು ಮುಂದಾಗಬೇಕು. ಇಂದಿನ ಸರಕಾರವು ಇಂಥ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಲಹೆ–ಸೂಚನೆಗಳನ್ನು ಖಾಸಗೀ ಅಥವಾ ಸಂಸ್ಥೆಗಳ ಪರವಾಗಿ ಆಲೋಚಿಸಲು ಸಿದ್ಧವಿದೆ. ಒಂದು ವರ್ಷ ವಾದರೂ ಈ ಯೋಜನೆ ಕಾರ್ಯಗತವಾಗಿಲ್ಲವೆಂಬ ಬಗ್ಗೆ ನನಗೆ ಎಳ್ಳಷ್ಟೂ ನಿರಾಶೆ ಯಿಲ್ಲ. ಕೆಲವು ವ್ಯವಹಾರಿಕ ತೊಂದರೆಗಳಿಂದ ಇದು ಕಾರ್ಯಗತವಾಗಿಲ್ಲವಾದರೂ, ಇಂದಿಲ್ಲ ನಾಳೆ ಇದು ಕಾರ್ಯಗತವಾಗುವದೆಂಬ ಭರವಸೆ ನನ್ನಲ್ಲಿದೆ. ಆದರೆ ನನಗೆ ನಿರಾಶೆಯಾದದ್ದು ಮಹಿಳೆಯರ ವಿಚಾರಸರಣಿಯ ಬಗ್ಗೆ. ಮಧ್ಯವರ್ಗದ ಬಿಳಿ ಕಾಲರ್ ಹೆಣ್ಣುಮಕ್ಕಳು, ಆಫೀಸರರ ಹೆಂಡಂದಿರು, ಲೇಖಿಕೆಯರು, ಮಹಿಳಾ ವರ್ಷದಲ್ಲಿ ನಡೆಸಿದ ಚಟುವಟಿಕೆಗಳಲ್ಲಿ ಬರಿ working woman ಬಗ್ಗೆ ಚರ್ಚೆ ಮಾಡುತ್ತಾರೆಯೇ ಹೊರತು working class woman ಬಗ್ಗೆ ಮಾತೇ ಎತ್ತಿಲ್ಲವಲ್ಲಾ ಎಂದು ನನಗೆ ಬೇಸರವಾಗಿದೆ. ಆಯಾ ವರ್ಗದ ಹಿತಾಸಕ್ತಿಗಳನ್ನು ಆಯಾವರ್ಗದವರೇ ನೋಡಿಕೊಳ್ಳಬೇಕೆಂದು ನೀವು ಹೇಳಬಹುದು. ಇದು ನನಗೆ ಒಪ್ಪಿಗೆಯಿಲ್ಲ. ಭಾರತದಲ್ಲಿ ಎಂದಿಗಾದರೂ ಮಧ್ಯವರ್ಗವು ಸೇವಾಭಾವ ತಳೆದಿದೆ. ಇದೀಗ ಇದು economise ಆಗಿದೆ, ಇಷ್ಟೆ. ದೀನದಲಿತರಿಗಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟ ಗಾಂಧೀಜಿ ಯಾವ ವರ್ಗದವರು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್. ಜಿ. ಸುಮಿತ್ರ

ಸೌರಾಷ್ಟ್ರದ ಕೆಲವು ಜನಪದ ಕಲೆಗಳು

ಒಂದು ಪ್ರತ್ಯಕ್ಷ ವರದಿ

ಗುಜರಾತಿನ ಉಳಿದ ಭಾಗಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ಪರಂಪರೆ ಕಾಥೇವಾಡ ಮತ್ತು ಸೌರಾಷ್ಟ್ರಕ್ಕಿದೆ. ಸಾಮಾನ್ಯ ಜನರ ಉಡುಗೆ–ತೊಡುಗೆ, ಅವರ ಆಡುಭಾಷೆ (dialect), ಸಂಗೀತ, ಕಸೂತಿ ಕೆಲಸ, ಇವೆಲ್ಲಕ್ಕೂ ಗಮನಾರ್ಹವಾದ ಪ್ರತ್ಯೇಕ ಲಕ್ಷಣಗಳಿವೆ.

ಬಡವನಾಗಲೀ ಶ್ರೀಮಂತನಾಗಲೀ ತನ್ನವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ತನ್ನ ಕರ್ತವ್ಯ ಎಂದು ಭಾವಿಸುತ್ತಾನೆ ಪ್ರತಿಯೊಬ್ಬ ಗುಜರಾತಿ. ಗುಜರಾತಿನ ಜನದ ಈ ಕರ್ಮನಿಷ್ಠ ಜೀವನಬದ್ಧ ಮನೋಧರ್ಮ ಅವರನ್ನು ವಾಣಿಜ್ಯೋದ್ಯಮಿಗಳನ್ನಾಗಿ ಮಾಡಿದೆ.

ಈ ಪ್ರಾಪಂಚಿಕ ಮನೋಧರ್ಮಕ್ಕೆ ಹಾಸುಹೊಕ್ಕಾಗಿಯೇ ಅವರ ಸಾಂಸ್ಕೃತಿಕ ಜೀವನ ಬೆಳೆದು ಬಂದಿದೆ. ಈ ಬೆಳವಣಿಗೆ ತುಂಬಾ ಸ್ವಾರಸ್ಯಕರವಾಗಿದೆ.

ಅದರಲ್ಲೂ ಜಾನಪದ ಕಲೆಗಳು, ಇಂದಿಗೂ ಸೌರಾಷ್ಟ್ರದಲ್ಲಿ ಸಾಮಾನ್ಯ ಜನ ಜೀವನದಲ್ಲಿ ನಿರಂತರವಾಗಿ ಅಭಿವ್ಯಕ್ತಗೊಳ್ಳುತ್ತ ಜೀವಂತವಾಗಿಯೇ ಇವೆ. ಸೌರಾಷ್ಟ್ರದ ಹಳ್ಳಿಗಳಲ್ಲಿ ಯಾರ ಮನೆಗಾದರೂ ಹೋಗಿ. ಮನೆಯ ಗೋಡೆಗಳ ಮೇಲೆ ಗಿಣಿ, ಹೂವು ಮುಂತಾದ ವಸ್ತುಗಳನ್ನುಳ್ಳ ಚಿತ್ರಗಳನ್ನು ಅಂದವಾದ, ಗಾಢವಾದ ಕೆಂಪು ಹಸಿರು ಹಳದಿ ಬಣ್ಣಗಳಿಂದ ಬರೆದಿರುತ್ತಾರೆ. ಅವನ್ನು ನಮ್ಮ ರಂಗೋಲಿ ಕಲೆಗೆ ಹೋಲಿಸಬಹುದು. ದಕ್ಷಿಣದ ಪ್ರಾಂತಗಳಲ್ಲಿ ಹಾವಿನ ಚಿತ್ರ ಸಾಮಾನ್ಯವಾಗಿರುವಂತೆ, ಗಿಣಿಗಳ ಚಿತ್ರ ಇಲ್ಲಿ ಸಾಮಾನ್ಯ. ಇವಲ್ಲದೆ, ಮತೀಯ (ritualistic) ಚಿತ್ರಗಳನ್ನೂ ಕಾಣುತ್ತೇವೆ. ಉದಾಹರಣೆಗೆ, ಗಣಪತಿಯನ್ನು ಮಧ್ಯೆ ಬರೆದು, ಅವನ ಸುತ್ತ ಹೂವು, ಗಿಡ, ಗಂಡಸರು, ಹೆಂಗಸರ ಚಿತ್ರಗಳನ್ನು ಬಿಡಿಸಿರುತ್ತಾರೆ. ಈ ಚಿತ್ರವನ್ನು ಚೌಕಾಕಾರದ ಬಟ್ಟೆಯ ಮೇಲೆ ಹೊಲಿಗೆಯಲ್ಲಿ ರಚಿಸಿರುವುದುಂಟು. ಮೇಲ್ಭಾಗಕ್ಕೆ ಕಮಾನಿನ ರಚನೆ ಇರುತ್ತದೆ. ಅಲ್ಲದೆ, ಮದುಮಕ್ಕಳು ಕುಳಿತುಕೊಳ್ಳುವ ಹಸೆಮಣೆಯ ಹಿಂಭಾಗದ ಗೋಡೆಯ ಮೇಲೂ ಇಂತಹ ಚಿತ್ರಗಳನ್ನು ಕೆಂಪು ಹಸಿರು ಬಣ್ಣಗಳಲ್ಲಿ ಬರೆದಿರುವುದುಂಟು.

ಇವಲ್ಲದೆ, ಬಟ್ಟೆಯ ತೋರಣಗಳು ಸೌರಾಷ್ಟ್ರದ ವೈಶಿಷ್ಟ್ಯ. ಗೋಡೆಯ ಮೇಲ್ಭಾಗದಲ್ಲಿ, ಗೋಡೆಯ ಉದ್ದಗಲಕ್ಕೂ ಬಹು ಸುಂದರವಾಗಿ ಕಸೂತಿ ಮಾಡಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ದೊಡ್ಡ ತೋರಣಗಳನ್ನು ಕಾಣಬಹುದು. ಈ ಕಸೂತಿ ಅಪ್ಲಿಕ್ (applique)* ನಿಂದ ತುಂಬಿರುತ್ತದೆ. ಈ ತೋರಣಗಳೇ ಅಲ್ಲದೆ, ಗೋಡೆಯ ಮೇಲೆ ನೇತು ಹಾಕುವ, ಚಚ್ಚೌಕವಾದ ಬಟ್ಟೆಗಳ ಮೇಲೆ ಕಸೂತಿ ಹಾಗೂ ಅಪ್ಲಿಕ್ ಮಾಡಿರುತ್ತಾರೆ. ಇವು ಬಹು ಅಮೂಲ್ಯ ಕೃತಿಗಳಾಗಿ ಉಳಿದುಬಂದಿವೆ. ಮಣಿಗಳಿಂದಲೂ ಕಸೂತಿ ಮಾಡಿರುವುದುಂಟು. ಅಲ್ಲದೆ ಮಣಿಗಳಿಂದ ವಿವಿಧ ಆಕೃತಿಗಳನ್ನೂ ಮಾಡಿರುತ್ತಾರೆ.

ಇಂದಿನ ಪೀಳಿಗೆಯವರು ಈ ಕಸೂತಿ ಕೆಲಸವನ್ನೂ, ಚಿತ್ರಕೆಲಸವನ್ನೂ ಸ್ವಲ್ಪ ಮಟ್ಟಿಗೆ ಮರೆಯುತ್ತ ಬಂದಿದ್ದಾರೆ. ಆದರೆ, ಗುಜರಾತಿನ ಆಧುನಿಕರು ಇವನ್ನು ಕೆಲವು ರೀತಿಯಲ್ಲಿ ಅಳವಡಿಸಿಕೊಂಡೂ ಇದ್ದಾರೆ. ಕಲಾಕೃತಿಗಳನ್ನು ಪ್ರಾಚೀನ ವಸ್ತುಸಂಗ್ರಾಹಕರು ತುಂಬ ಬೆಲೆ ಕೊಟ್ಟು ಕೊಂಡುಕೊಳ್ಳುತ್ತಿರುವುದುಂಟು. ಹಾಗಾಗಿ, ಕೆಲವಾರು ನಕಲಿ ವಸ್ತುಗಳೂ ಮಾರುಕಟ್ಟೆಗೆ ಬಂದಿರುವುದು ಅನೇಕರ ಗಮನಕ್ಕೆ ಬಂದಿದೆ.

ಈ ಕಸೂತಿ ಹಾಗೂ ಚಿತ್ರಕಲೆಗಳಲ್ಲಿ ಉಪಯೋಗಿಸಿರುವ ವಿನ್ಯಾಸಗಳು ಬಹಳ ಸರಳ. ಅವುಗಳ ಬಣ್ಣ ಎದ್ದುಕಾಣುವ ಶಕ್ತಿಉಳ್ಳದ್ದು. ಒಂದೊಂದು ಕಲಾಕೃತಿಯಲ್ಲೂ ಬಣ್ಣದ ಸಮತೋಲನ ಅದ್ಭುತವಾದದ್ದು. ಇಲ್ಲಿ ಉಪಯೋಗಿಸಿರುವ ಅತ್ಯಂತ ಸರಳ ಮಾರ್ಗದಿಂದ, ಇಷ್ಟು ರಂಜಕವಾದ ಕಲಾಕೃತಿಗಳನ್ನು ಬಿಡಿಸಿರುವುದು ಆಶ್ಚರ್ಯಕರವೇ ಸರಿ. ಇವುಗಳ ಕಲೆಗಾರಿಕೆ, ಕುಸುರಿಕೆಲಸ ತುಂಬ ಉತ್ತಮ ಮಟ್ಟದಲ್ಲಿದೆ. ಜನಪದ ಕಲೆಯ ಮಹತ್ವ ಇದು.

ಜನಸಾಮಾನ್ಯರು ತೊಡುವ ಉಡುಪುಗಳ ಮೇಲೂ ಬಹು ಉತ್ತಮ ರೀತಿಯ ಆಕರ್ಷಕವಾದ ಕಸೂತಿಗಳನ್ನು ಹಾಕಿರುವುದನ್ನು ಕಾಣುತ್ತೇವೆ. ಈ ಎಲ್ಲ ಕಸೂತಿಗಳನ್ನೂ ಮನೆಯಲ್ಲಿ ಹೆಂಗಸರು ಹಾಕುತ್ತಾರೆ. ಪ್ರತಿ ಹುಡುಗಿಯೂ ತನ್ನ ಮದುವೆಯಲ್ಲಿ ತನಗೆ ಬಳುವಳಿಯಾಗಿ ತಂದೆ ಕೊಡುವ ಉಡುಪುಗಳಿಗೆ ತಾನೇ ಕಸೂತಿ ಹಾಕಿ ಸಿದ್ಧಮಾಡಿಟ್ಟಿರುತ್ತಾಳೆ.

ರೈತರ ಗಂಡಸರು ದಿನನಿತ್ಯ ಹಾಕಿಕೊಳ್ಳುವ ಅಂಗಿಗಳ (waist coat) ಮೇಲೂ ಗಿಣಿಗಳನ್ನು ಕಸೂತಿ ಹಾಕಿರುತ್ತಾರೆ. ಇಂತಹ ಕೆಲವು ವೇಸ್ಟ್‌ಕೋಟ್‌ಗಳಿಗೆ ನೆರಿಗೆ ಇರುವುದೂ ಉಂಟು (ಮೊದಲನೆಯ ಚಿತ್ರ ನೋಡಿ). ಇವರು ಹಾಕಿಕೊಳ್ಳುವ ಪೈಜಾಮಗಳಿಗೆ ತೊಡೆಯ ನೇರಕ್ಕೆ ನೆರಿಗೆ ಇರುತ್ತದೆ.

ಹಾಲು ಮಾರುವ ಹೆಂಗಸರ ಲಂಗ ದಾವಣಿ ಕುಪ್ಪಸಗಳ ಮೇಲಿರುವ ಕಸೂತಿ ಕೆಲಸ ಆಕರ್ಷಕವಾದದ್ದು (ಎರಡನೆಯ ಚಿತ್ರ ನೋಡಿ). ತೆರೆದ ಬೆನ್ನಿನ ರವಿಕೆ,

---

* ಬಟ್ಟೆಯಲ್ಲಿ ವಿವಿಧ ಆಕೃತಿಯಲ್ಲಿ ಕತ್ತರಿಸಿ ಇನ್ನೊಂದು ಬಟ್ಟೆಯ ಮೇಲಿಟ್ಟು ಹೊಲಿಯುವ ಕಲೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಲಿಕ್ ಅಂಚುಳ್ಳ ಲಂಗ. ತಲೆಯ ಮೇಲೆ ಹೊದೆಯುವ ಕಸೂತಿ ದಾವಣಿಗಳು— ಇವನ್ನೆಲ್ಲ ಮನೆಯಲ್ಲೆ ಮಾಡಿದ್ದು ಎಂದು ನಂಬುವುದೇ ಕಷ್ಟ. ಅಷ್ಟು ಸುಂದರ ಅನುಪಮ ಈ ಕೈ ಕೆಲಸ. ರವಿಕೆಯ ಮುಂಭಾಗವನ್ನು 4–6 ತುಂಡು ಬಟ್ಟೆಗಳಿಂದ

ಚಿತ್ರ 1. ನೆರಿಗೆಯಿರುವ ವೇಸ್ಟ್‌ಕೋಟು

ಹೊಲಿದಿರುತ್ತಾರೆ. ರವಿಕೆಯನ್ನು ಹಿಂಭಾಗದಲ್ಲಿ ಕತ್ತಿನ ಹತ್ತಿರ ಮೇಲೆ, ಸೊಂಟದ ಹತ್ತಿರ ಬಟ್ಟೆಯ ದಾರದಿಂದ ಕಟ್ಟಿಕೊಳ್ಳುತ್ತಾರೆ. ದಿನನಿತ್ಯಕ್ಕೆ ದಪ್ಪನೆಯ ಕಪ್ಪು ಬಟ್ಟೆಯ ಲಂಗ ಲುಂಗಿಯ ರೀತಿ ಉಟ್ಟಿರುತ್ತಾರೆ. ಹಬ್ಬ ಹರಿದಿನಗಳಲ್ಲಿ ಬಣ್ಣಬಣ್ಣದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂದಿನಿ ಮತ್ತು ಕೈಕಸೂತಿ ಮಾಡಿದ ಬಟ್ಟೆಗಳನ್ನು ತೊಡುತ್ತಾರೆ. ಕೆಂಪು, ಹಸಿರು, ಹಳದಿ ಈ ಮೂಲ ಬಣ್ಣಗಳನ್ನು (primary colours) ಎಷ್ಟು ಅಂದ ವಾಗಿ ಉಪಯೋಗಿಸಬಹುದು ಎನ್ನುವುದಕ್ಕೆ ಈ ಬಟ್ಟೆಗಳು ಉತ್ತಮ ಉದಾ ಹರಣೆ. ಮಗಳನ್ನು ಮದುವೆ ಮಾಡಿ ಕಳಿಸುವಾಗ ಇಂತಹ ಮುವ್ವತ್ತು ಉಡುಪು

ಚಿತ್ರ 2. ಹೆಂಗಸರ ಉಡುಗೆಯ ಕಸೂತಿ

ಗಳನ್ನೂ, ಚಿನ್ನ ಬೆಳ್ಳಿಯ ಆಭರಣಗಳನ್ನೂ ತಂದೆ ಮಗಳಿಗೆ ಕೊಡುತ್ತಾನೆ. ತಲೆಯ ಮೇಲೆ ಗಡಿಗೆಗಳನ್ನು ಹೊತ್ತುಕೊಳ್ಳುವಾಗ ಉಪಯೋಗಿಸುವ ಸಿಂಬಿ ಮತ್ತು ಎಲೆಯಡಿಕೆ ಚೀಲವು, ತಂದೆ ಮಗಳಿಗೆ ಕೊಡುವ ಮುಖ್ಯ ವಸ್ತುಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೇರಿದ್ದು. ಸಿಂಬಿಗೆ ಉತ್ಕೃಷ್ಟವಾದ ಮಣಿ ಕೆಲಸ ಮಾಡಿರುತ್ತಾರೆ. ಎಲೆಯಡಿಕೆ ಚೀಲಕ್ಕೆ ಉತ್ತಮ ದರ್ಜೆಯ ಕಸೂತಿ ಕೆಲಸ ಮಾಡಿರುತ್ತಾರೆ. ಈ ಚೀಲದಲ್ಲಿ ಅಡಿಕೆ ಲವಂಗ ಇತ್ಯಾದಿಗಳನ್ನು ಹಾಕಿ ವಧುವಿಗೆ ಕೊಡುತ್ತಾರೆ. ಒಬ್ಬಳು ಹುಡುಗಿ, ತನ್ನ ಮದುವೆಯಲ್ಲಿ ತನ್ನ ತಂದೆ ಕೊಟ್ಟ ಇಂತಹ ಚೀಲವನ್ನು ತನ್ನ ಮದುವೆಯಾದ ಎರಡು ವರ್ಷಗಳ ನಂತರವೂ ತುಂಬ ಜೋಪಾನವಾಗಿಟ್ಟುಕೊಂಡು ನನಗೆ ಹೆಮ್ಮೆಯಿಂದ ತೋರಿಸಿದಳು. ಅದರಲ್ಲಿ ಅಪ್ಪ ಕೊಟ್ಟ ಅಡಿಕೆಯ ಚೂರುಗಳೂ ಉಳಿದಿದ್ದವು.

ಮದುವೆಯಲ್ಲಿ ಮಗಳಿಗೆ ಹಲವಾರು ಹಿತ್ತಾಳೆ, ಕಂಚಿನ ಪಾತ್ರೆಗಳನ್ನು ಕೊಡುವುದು ವಾಡಿಕೆ. ಪ್ರತಿ ಗುಜರಾತಿಯ ಮನೆಯಲ್ಲೂ, ಮುಖ್ಯ ಅಂಕಣದ ತೆರೆದ ಬಡುವಿನಲ್ಲಿ (shelves) ಈ ಪಾತ್ರೆಗಳನ್ನು ಓರಣವಾಗಿ ಜೋಡಿಸಿ, ಪ್ರದರ್ಶಿಸಿರುವುದನ್ನು ಕಾಣುತ್ತೇವೆ.

* * *

ಶ್ರಾವಣ ಮಾಸ, ಹಬ್ಬಗಳ ತಿಂಗಳು. ಅಲ್ಲದೆ, ಈ ತಿಂಗಳಲ್ಲಿ ವ್ರತಗಳನ್ನೂ ನಡೆಸುತ್ತಾರೆ. ಗಂಡಸರೂ ಹೆಂಗಸರೂ ಉಪವಾಸ ವ್ರತವನ್ನು ಮಾಡಿ ಒಪ್ಪೊತ್ತಿನ ಊಟಮಾಡುತ್ತಾರೆ. ಈ ತಿಂಗಳಲ್ಲಿ ದೇವಸ್ಥಾನಗಳಿಗೆ ಹೋಗುವುದು, ಪ್ರಾರ್ಥನೆ ಮಾಡುವುದು ಸರ್ವೇಸಾಮಾನ್ಯವಾಗಿ ನಡೆಯುತ್ತದೆ.

ಕೃಷ್ಣಜನ್ಮಾಷ್ಟಮಿಯಿಂದ ಮೊದಲುಗೊಂಡು ದೀಪಾವಳಿಯುವರೆಗೆ ಸಡಗರದ ಹಬ್ಬ ಸಾಲು.

ಇಂತಹ ಒಂದು ಹಬ್ಬಸಾಲನ್ನು ಕುರಿತು ಒಂದು ಪತ್ರಿಕೆಯಲ್ಲಿ ಬಂದ ವರದಿ ಇದು :—

"ಸೌರಾಷ್ಟ್ರದಲ್ಲಿ ಇದು ಜಾತ್ರೆಗಳ ಕಾಲ. ವೀರಾಂಗಾಂನಿಂದ ವಿರಾವಳ್ ಮತ್ತು ಗೋಘಾದಿಂದ ಓಘಾವರೆಗೆ ಪ್ರತಿ ಹಳ್ಳಿ ಮತ್ತು ಪಟ್ಟಣದಲ್ಲೂ ಹಬ್ಬದ ಸಡಗರ. ಯಾವುದಾದರೂ ದೇವಸ್ಥಾನ ಅಥವಾ ಕೊಳದ ಸುತ್ತಮುತ್ತ ಸ್ವಲ್ಪ ಜಾಗ ಇದ್ದರೂ ಸರಿ, ತಿಂಡಿಯ ಅಂಗಡಿಗಳು, ಆಟದ ಸಾಮಾನಿನ ಅಂಗಡಿಗಳು, ಬಟ್ಟೆಯ ಅಂಗಡಿಗಳು ತಲೆಯೆತ್ತುತ್ತವೆ. ಇಂತಹ ಸಂತೆಗಳು ಪ್ರಾರಂಭವಾದರೆ ಸಾಕು, ಸುತ್ತಮುತ್ತ 20 ಕಿಲೋಮೀಟರ್‌ವರೆಗೆ ಇರುವ ಹಳ್ಳಿಗಳಿಂದ ಜನರು ನಡೆದುಬರಲು ಪ್ರಾರಂಭಿಸುತ್ತಾರೆ.

ಜನ್ಮಾಷ್ಟಮಿಯಿಂದ ದೀಪಾವಳಿಯವರೆಗೆ ಹಬ್ಬದ ಹಿಗ್ಗು ಎಲ್ಲೆಡೆಯಲ್ಲೂ ತಾನೇ ತಾನಾಗಿರುತ್ತದೆ. ನವವಿವಾಹಿತೆಯರು ತಾಯಿಯ ಮನೆಗೆ ಬಂದಿರುತ್ತಾರೆ. ಅವರಿಗೆ ಸಡಗರದ ಹಬ್ಬದಲ್ಲಿ ನಿಶ್ಚಿಂತೆಯಾಗಿ ಓಡಾಡಬಹುದೆಂಬ ಸಂತಸ. ಈ ಹಬ್ಬದ ಸಂದರ್ಭದಲ್ಲಿ ಸ್ಕೂಲು, ಫ್ಯಾಕ್ಟರಿಗಳು, ಕೊನೆಗೆ ಡಾಕ್ಟರುಗಳು ಕೂಡ ಕೆಲಸ ಮಾಡುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಹಬ್ಬಗಳ ಸಮಯದಲ್ಲಿ ಹೊರಸೂಸುವ ಆನಂದ ಮುಂಬರುವ ಹುಲುಸಾದ ಬೆಳೆಯ ನಿರೀಕ್ಷಣೆಯಲ್ಲಿ ಜನ ಸುಖಿಸುವುದನ್ನು ಸೂಚಿಸುತ್ತದೆ. ಈ ಬಾರಿ ಅನೇಕ ಅಂಗಡಿಗಳ ಮಾಲೀಕರು ವ್ಯಾಪಾರ ಚೆನ್ನಾಗಿದೆ ಎಂದು ಹೇಳಿದರು. ರೈತರು ತುಂಬ ಸಂತೋಷದಲ್ಲಿದ್ದರು. ಅಂಗಡಿಗಳ ಮಾಲೀಕರಿಗೆ ಒಳ್ಳೆಯ ವ್ಯಾಪಾರವಾಯಿತೆಂದು ಹಿಗ್ಗು. ಮುಂದೆ ಒಳ್ಳೆಯ ಸುಗ್ಗಿ ಬರುತ್ತದೆಂದು ಎಲ್ಲರೂ ಖಚಿತವಾಗಿ ನಿರೀಕ್ಷಿಸು ತ್ತಿದ್ದರು.

"ಈ ಋತುವಿನ ಕೊನೆಯ ಮಳೆಗಾಗಿ ಇನ್ನೂ ಒಂದು ವಾರ ಕಾಯೋಣ. ಆಗಲೂ ಮಳೆ ಬರದಿದ್ದರೆ ಬಾವಿಗಳಿಂದ ನೀರನ್ನು ತೆಗೆಯುವ ಏರ್ಪಾಡು ಮಾಡೋಣ" ಎಂದ ಒಬ್ಬ ಮಧ್ಯವಯಸ್ಕರೈತ—ಅವನು ಪಟಾರ್ವೇ (Patanvey) ಗುಡ್ಡವನ್ನು ಹತ್ತಿ ಜಾತ್ರೆಗೆ ಹೋಗುತ್ತಿದ್ದ."

—The Times of India: "News"

ತ್ರಿನೇತ್ರದಲ್ಲಿ ನಡೆದ ಒಂದು ಸಂತೆಗೆ ನಾನು ಹೋಗಿದ್ದೆ. ಇದು ಥಾನ್ (Thān)ಗೆ ಹತ್ತಿರದಲ್ಲಿದೆ. ತ್ರಿನೇತ್ರ ಎನ್ನುವಾಗ, ಇಲ್ಲಿಯ ಜನ ತಾರ್-ನೇ-ತರ್ ಎಂಬಂತೆ ಉಚ್ಚರಿಸುತ್ತಾರೆ. ಥಾನ್ ರಾಜ ಕೋಟೆಯಿಂದ ಮೂವತ್ತೈದು ಮೈಲಿ ದೂರದಲ್ಲಿದೆ. ರಾಜಕೋಟೆ–ಅಹಮದಾಬಾದ್ ಹೆದ್ದಾರಿಯಿಂದ ಐದು ಮೈಲಿ ಒಳಭಾಗಕ್ಕಿದೆ.

ಈ ಜಾತ್ರೆ ತುಂಬ ಹೆಸರುವಾಸಿಯಾದದ್ದು. ಗಣೇಶ ಚತುರ್ಥಿಯ ಮಾರನೆಯ ದಿನ ಬರುವ ಋಷಿಪಂಚಮಿಯಂದು ಇಲ್ಲಿರುವ ದೇವಸ್ಥಾನದ ಪ್ರಕಾರದೊಳಗಿನ ಕೊಳದಲ್ಲಿ ಗಂಗೆ ಉದ್ಭವವಾಗುತ್ತಾಳೆಂದು ಪ್ರತೀತಿ. ಇಂದು ತ್ರಿವೇಣೀ ಸಂಗಮ ಎಂಬ ಭಾವನೆಯಿಂದ ಅಂದು ಸಹಸ್ರಾರು ಜನ ಅಲ್ಲಿ ಪುಣ್ಯಸ್ನಾನ ಮಾಡುತ್ತಾರೆ. ಈ ತರಹದ ಜಾನಪದ ನಂಬಿಕೆ ಭಾರತದ ಎಲ್ಲೆಡೆಗಳಲ್ಲೂ ಇರುವುದನ್ನು ಕಾಣುತ್ತೇವೆ. (ಉದಾ : ಶಿವಗಂಗೆಯ ಜಾತ್ರೆ). ತ್ರಿನೇತ್ರದ ಜಾತ್ರೆಯ ದಿನ ಋಷಿಪಂಚಮಿ ಯೆಂದೂ, ಆರ್ಯಾವರ್ತದ ಋಷಿಕೂಟದ ಎಲ್ಲ ಋಷಿಗಳೂ ಅಂದು ಇಲ್ಲಿ ಪುಣ್ಯ ಸ್ನಾನ ಮಾಡಿ ತಮ್ಮ ಜನಿವಾರಗಳನ್ನು ಬದಲಾಯಿಸಿಕೊಳ್ಳಲು ಇಲ್ಲಿಗೆ ಬರುತ್ತಾ ರೆಂದೂ ನಂಬಿಕೆಯಿರುವುದರಿಂದ ಈ ದಿನದ ಮಹತ್ವ ಬಹಳ ಹೆಚ್ಚು. ಅಲ್ಲದೆ ದ್ರೌಪದಿ ಈ ಸ್ಥಳದಲ್ಲಿ ಹುಟ್ಟಿದಳೆಂದು ಸೌರಾಷ್ಟ್ರದ ಜನ ನಂಬುತ್ತಾರೆ. ಈ ದೇವಸ್ಥಾನದಲ್ಲಿ ಒಂದು ಕಂಬದಲ್ಲಿ ಬಿಲ್ಲು ಬಾಣವನ್ನು ಕೆತ್ತಿದ್ದಾರೆ. ಮತ್ಸ್ಯವೇಧಿ ಅರ್ಜುನ ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ಮದುವೆಯಾದ ಜಾಗ ಇದು ಎಂದು ನಂಬಿಕೆ. ಈ ದೇವಸ್ಥಾನ, ತ್ರಿಣೇತ್ರೇಶ್ವರ ದೇವಸ್ಥಾನ.

ಜಾತ್ರೆ ಮೂರು ದಿನ ನಡೆಯುತ್ತದೆ. ಜನ ಸಹಸ್ರ ಲೆಕ್ಕದಲ್ಲಿ ಇಲ್ಲಿಗೆ ಬರು ತ್ತಾರೆ. ಅರವತ್ತು ಸಾವಿರ ಜನ ಬಂದಿದ್ದರು, ಎಪ್ಪತ್ತು ಸಾವಿರ ಜನ ಬಂದಿದ್ದರು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳುವುದು ವಾಡಿಕೆ. ಹಳ್ಳಿಗೆ ಹಳ್ಳಿಯೇ ದವಸಧಾನ್ಯಗಳ ಸಮೇತ ಇಲ್ಲಿಗೆ ಬಂದು ದಿನಗಟ್ಟಲೆ ಇಲ್ಲೇ ಬಿಡಾರ ಹೂಡುತ್ತದೆ. ಜನರು ಸಂಕೋಚ ವಿಲ್ಲದೆ ಬೆರೆತು, ಗರ್ಬ, ರಾಸ್, ಭಜನೆ ಮುಂತಾದವುಗಳನ್ನು ಹಾಡಿ ಆಡುವ ಈ ವಾತಾವರಣ ಅನುಭವಿಸಲು ತುಂಬ ಹಿತ.

ಇಲ್ಲಿಗೆ ನಾವು ಹೊತ್ತು ಮೀರಿ ಹೋದೆವು. ಜಾತ್ರೆ ಇನ್ನೇನು ಮುಗಿಯುವುದ ರಲ್ಲಿತ್ತು. ಆದರೂ ಅದಕ್ಕಾಗಿಯೇ ಹಾಕಿದ್ದ ಟೆಂಟುಗಳಲ್ಲಿ ರಾತ್ರೋ ರಾತ್ರಿ ಭಜನ ಮಂಡಳಿಗಳು ಭಜನೆ ನಡೆಸುತ್ತಿದ್ದವು. ಹಳ್ಳಿಯ ಗಂಡಸರು ಹೆಂಗಸರು ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಓಡಾಡುತ್ತಿದ್ದರು. ಚಿತ್ತಾಕರ್ಷಕವಾದ ಅವರ ಉಡುಗೆ-ತೊಡುಗೆ ಅವತ್ತಿಗೆ ಮಾತ್ರ ವಿಶಿಷ್ಟವೇನಲ್ಲ. ಅದು ಅವರ ಸಾಧಾರಣ ಬಟ್ಟೆಬರೆ. ಹೆಂಗಸರು ಮಣಿಗಳನ್ನೂ, ಮಣಿಮಾಲೆಗಳನ್ನೂ ಮಾರುತ್ತ ಓಡಾಡುತ್ತಿದ್ದರು. ಸಣ್ಣ ವಯಸ್ಸಿನ ಹುಡುಗಿಯರೂ. ಮುದುಕಿಯರೂ ತಲೆಯಮೇಲೆ ಮೂರು ನಾಲ್ಕು ಹೊಳೆ ಹೊಳೆಯುವ ಹಿತ್ತಾಳೆ ಪಾತ್ರೆಗಳನ್ನು ಹೊತ್ತುಕೊಂಡು ಹಾಲು ಮಾರುತ್ತಿದ್ದರು. ಅವನ್ನು ಹೊತ್ತುಕೊಂಡೂ ಸರಾಗವಾಗಿ ಓಡಾಡುತ್ತಿದ್ದ ಅವರ ನಡಿಗೆಯ ಚುರುಕು, ಬೆನ್ನು ಬಾಗಿಸದೆ ನೇರವಾಗಿ ಇರುತ್ತಿದ್ದ ಅವರ ನಡಿಗೆಯ ರೀತಿ, ಇಂದಿನ ರೂಪದರ್ಶಿ ಯುವತಿಯರಿಗೆ ಮಾರ್ಗದರ್ಶಿಯಾಗುವಂತಿತ್ತು.

ಮತ್ತಿಷ್ಟು ಜನರು ಹಾಡುತ್ತಿದ್ದರು. ಜಾತ್ರೆಯ ಮೊದಲು ಎರಡು ದಿನಗಳೂ, ನಾಲಕ್ಕು ಸುತ್ತಿನ ಬಯಲುಗಳು ಹಾಡುಗಾರರಿಂದ. ನೃತ್ಯಮಾಡಿ ಕುಣಿಯುವ ಗಂಡಸರು ಹೆಂಗಸರುಗಳಿಂದ ತುಂಬಿಹೋಗಿದ್ದವಂತೆ. ಇವರೆಲ್ಲ ಸುತ್ತಮುತ್ತ ಹಳ್ಳಿಗಳಿಂದ ಬಂದಿದ್ದ ಜನರು. ಹೀಗೆ ಗುಂಪು ಸೇರಿ ಗರ್ಬಾ ಕುಣಿಯುವುದು ಅವರ ಸಂಪ್ರದಾಯ. ಇಲ್ಲೇ ಅಲ್ಲದೆ, ಹೀಗೆ ಜನ ಗುಂಪು ಸೇರಿದ ಎಲ್ಲ ಕಡೆಗಳಲ್ಲೂ ಸಹಜವಾಗಿ ಕಲೆತು ನೃತ್ಯಮಾಡುವುದು ಈ ಸಂಸ್ಕೃತಿಯ ಒಂದು ಅಪೂರ್ವ ಅಂಗ.

ಈ ಜಾತ್ರೆಯಲ್ಲಿ 'ಕೋಳಿ' ಬುಡಕಟ್ಟಿನ ಒಬ್ಬ ಹುಡುಗನನ್ನು ಕಂಡೆ. ಅವನು ಕಸೂತಿ ಹಾಕಿದ ಕೈಗೆಲಸದ ಬಣ್ಣಬಣ್ಣದ ಬಟ್ಟೆಯ ಛತ್ರಿಯನ್ನು ಹಿಡಿದು ನಿಂತಿದ್ದ. ಅದನ್ನು ಹಿಡಿದು ನಿಂತು ಪ್ರದರ್ಶನ ಮಾಡುವುದರಲ್ಲಿ ಅವನಿಗೆ ಅದೆಂತಹ ಹೆಮ್ಮೆ! ಛತ್ರಿಗೆ ಉಪಯೋಗಿಸಿದ್ದು ನವಿಲು ಬಣ್ಣ ಮತ್ತು ಅಚ್ಚ ಕೆಂಪುಬಣ್ಣದ ಬಟ್ಟೆ. ಸಣ್ಣ ಕನ್ನಡಿಗಳು ಹರಳುಗಳಿಂದ ಅಲಂಕಾರ. ಸಣ್ಣ ಸಣ್ಣ ಗಿಣಿಗಳನ್ನು ಕಸೂತಿಯಲ್ಲಿ ರಚಿಸಿದ್ದರು. ತುದಿಯ ಉದ್ದಕ್ಕೂ ದಾರದ ಗೊಂಚಲುಗಳು. ಛತ್ರಿಯ ಮೇಲ್ಭಾಗದಲ್ಲಿ ಒಂದು ಮುದ್ದಾದ ಸಣ್ಣ ನವಿಲು. ಆ ಹುಡುಗನನ್ನು ಕಾಡಿ ಬೇಡಿದೆ. ಆದರೆ ಆ ಛತ್ರಿಯನ್ನು ಮಾರಲು ಆ ಹುಡುಗ ಒಪ್ಪಲಿಲ್ಲ. 'ಇದನ್ನು ನನ್ನ ಸಂತೋಷಕ್ಕೆ ಮಾಡಿದ್ದೀನಿ. ನೂರಐವತ್ತು ರೂಪಾಯಿ ಖರ್ಚು ಮಾಡಿದ್ದೀನಿ' ಎಂದ. ಅದಕ್ಕೂ ಹೆಚ್ಚಿಗೆ ಹಣಕ್ಕೂ ಮಾರಲು ಒಪ್ಪಲಿಲ್ಲ. ವ್ಯಾಪಾರದ ಮರ್ಮ ಚೆನ್ನಾಗಿ ಬಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂದುಕೊಂಡರೂ, ಆ ಹಣ ಛತ್ರಿಯ ಕಲೆಗೆ ಹೆಚ್ಚೇನಲ್ಲ. ಇನ್ನೂ ಸ್ವಲ್ಪ ಹೆಚ್ಚಾಗಿ ಕೊಟ್ಟರೂ ಕೊಡಬಹುದು.

ರಬಾರಿ ಕೋಳಿಗಳಲ್ಲದೆ ತೀರಪ್ರದೇಶದ ಮುಯೀರರು (meirs) ವೈಶಿಷ್ಟ್ಯ ಪೂರ್ಣ ಜನಾಂಗ. ಇವರು ಗ್ರೀಕರ ಬುಡಕಟ್ಟಿನವರು. ಹಿಂದೆ ಭಾರತಕ್ಕೆ ದಂಡೆತ್ತಿ ಬಂದಿದ್ದ ಗ್ರೀಕರ ವಂಶೀಯರು. ಗ್ರೀಕರ ಮುಖ ಲಕ್ಷಣಗಳನ್ನು ಇವತ್ತಿಗೂ ಇವರಲ್ಲಿ ಕಾಣಬಹುದು. ಇವರ ಕಲೆಗಳೂ ಜೀವನ ರೀತಿಯೂ ವ್ಯಾಸಂಗಕ್ಕೆ ತಕ್ಕವು.

ಇಲ್ಲಿ ವರ್ಣಿಸಿರುವ ಜನಪದ ಕಲೆಗಳೆಲ್ಲ ಒಮ್ಮೆ ಸೌರಾಷ್ಟ್ರಕ್ಕೆ ಭೇಟಿಕೊಟ್ಟು ಕೆಲವು ಭಾಗಗಳಲ್ಲಿ ಮಾತ್ರ ಸಂಚರಿಸಿದಾಗ ಕಂಡುಬಂದಿದ್ದು. ಸೌರಾಷ್ಟ್ರ, ಜನಪದ ಕಲೆಗಳ ಭಂಡಾರ. ಅವು ಅಲ್ಲಿ ಇನ್ನೂ ಉಳಿದಿವೆ. ಆಧುನಿಕ ಜನಜೀವನದ ಬದಲಾದ ಪದ್ಧತಿಗಳ ಪ್ರಾಬಲ್ಯದಿಂದ ಲಯಿಸಿಹೋಗಿಲ್ಲ. ಒಂದಲ್ಲ ಒಂದು ರೂಪ ಪಡೆಯುತ್ತ ಉಳಿದುಬಂದಿವೆ. ಅಲ್ಲದೆ ಆಧುನಿಕವಾದ ಕೆಲವು ಕಲಾ ಪ್ರಕಾರಗಳಿಗೂ ಸ್ಫೂರ್ತಿ ಕೊಟ್ಟು ಬೆಳೆದುಬಂದಿವೆ ಇಲ್ಲಿ. ಈ ಅಪೂರ್ವ ಪ್ರದೇಶ ಜಾನಪದದ ವಿದ್ಯಾರ್ಥಿಗಳಿಗೆ ಯಾತ್ರಾಸ್ಥಳದಂತಿದೆ ಎನ್ನಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸಂಪುಟದ ಲೇಖಕರು

1. ಎಚ್. ಎಂ. ಶಂಕರನಾರಾಯಣರಾವ್ : ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು 570004.
2. ಡಾ. ಎಚ್. ತಿಪ್ಪೇರುದ್ರಸ್ವಾಮಿ : ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ (ಮೈಸೂರು ವಿಶ್ವವಿದ್ಯಾನಿಲಯ). ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ.
3. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ : ಕನ್ನಡ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 570006.
4. ಎಂ. ವಿ. ಸೀತಾರಾಮಯ್ಯ : ನಿವೃತ್ತ ಕನ್ನಡ ಪ್ರಾಧ್ಯಾಪಕರು, ಅರವಿಂದ, 54, ಮೂರನೆಯ ಕ್ರಾಸ್ ರಸ್ತೆ, ಗವೀಪುರಂ ಬಡಾವಣೆ, ಬೆಂಗಳೂರು 560019.
5. (ದಿವಂಗತ) ಡಾ. ಎ. ಎನ್. ಉಪಾಧ್ಯೆ : ವಿಶ್ರಾಂತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ.
6. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ : ನಿರ್ದೇಶಕರು, ಪಠ್ಯಪುಸ್ತಕ ನಿರ್ದೇಶನಾಲಯ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
7. ಟಿ. ಎಸ್. ಶಿವಣ್ಣ : ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056.
8. ಹಂಪ. ನಾಗರಾಜಯ್ಯ : ಕನ್ನಡ ರೀಡರ್, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056.
9. ಡಾ. ಪಿ. ವಿ. ನಾರಾಯಣ : ಕನ್ನಡ ರೀಡರ್, ವಿಜಯಾ ಕಾಲೇಜು, ಬೆಂಗಳೂರು 560004.
10. ಡಾ. ಚಂದ್ರಶೇಖರ ಕಂಬಾರ : ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056.
11. ಡಾ. ಕೆ. ಕೃಷ್ಣಮೂರ್ತಿ : ಸಂಸ್ಕೃತ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

Sri Vidyabharathi Book Centre, Sringeri

CC-O. In Public Domain. Digitized by eGangotri

12. ಜಾ. ಗೋ. (ಡಾ. ಗೋವಿಂದ ಜಾಲಿಹಾಳ) : ಅಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು 560056.
13. ಕೆ. ನರಸಿಂಹಮೂರ್ತಿ : ವಿಭಾಗಾಧಿಕಾರಿಗಳು, ಗುಲ್ಬರ್ಗ ವಿಭಾಗ, ಗುಲ್ಬರ್ಗ.
14. ಎಚ್. ಎಸ್. ವೆಂಕಟೇಶಮೂರ್ತಿ : ಕನ್ನಡ ಅಧ್ಯಾಪಕರು, ಸೇಂಟ್ ಜೋಸೆಫ್ಸ್ ಕಾಲೇಜ್, ಬೆಂಗಳೂರು.
15. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ : ಕನ್ನಡ ರೀಡರ್, ಕನ್ನಡ ಅಧ್ಯಯನ ಕೇಂದ್ರ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056.
16. ಜಿ. ಎನ್. ರಂಗನಾಥರಾವ್ : ಉಪಸಂಪಾದಕರು, 'ಪ್ರಜಾವಾಣಿ,' ಬೆಂಗಳೂರು 560001.
17. ಡಾ. ಸಾ. ಶಿ. ಮರುಳಯ್ಯ : ಕನ್ನಡ ರೀಡರ್, ಸರ್ಕಾರಿ ಆರ್ಟ್ಸ್ ಕಾಲೇಜ್, ತುಮಕೂರು.
18. ತೆಕ್ಕುಂಜ ಗೋಪಾಲಕೃಷ್ಣ ಭಟ್ಟ : ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕರಂಗಲಪಾಡಿ, ಮಂಗಳೂರು 575003.
19. ಡಾ. ಎಂ. ಚಿದಾನಂದಮೂರ್ತಿ : ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಜ್ಞಾನ ಭಾರತಿ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056.
20. ಬಾ. ರಾ. ಗೋಪಾಲ್ : ಶಾಸನ ತಜ್ಞರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 570006.
21. ಕೆ. ನಾರಾಯಣ : ರಿಸರ್ಚ್ ಅಸಿಸ್ಟೆಂಟ್, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್, ಮಾನಸಗಂಗೋತ್ರಿ, ಮೈಸೂರು 570006.
22. ಡಾ. ಹಾ. ಮಾ. ನಾಯಕ : ನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 570006.
23. ಎ. ಕೃಷ್ಣಮೂರ್ತಿ : ಕನ್ನಡ ಅಧ್ಯಾಪಕರು, ಮುನಿಸಿಪಲ್ ಕಾಲೇಜ್, ಚಳ್ಳಕೆರೆ.
ಮ. ನಾ. ಪ್ರಭಾಕರ್ : ಎಸ್.ಬಿ.ಎಂ. ಬ್ಯಾಂಕ್, ಚಳ್ಳಕೆರೆ.
24. ಡಾ. ಶಂಕರ ಮೊಕಾಶಿ ಪುಣೇಕರ್ : ಇಂಗ್ಲಿಷ್ ರೀಡರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
25. ಎಲ್. ಜಿ. ಸುಮಿತ್ರ : ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಬೆಂಗಳೂರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೊಫೆಸರ್ ಜಿ.ವೆಂಕಟಸುಬ್ಬಯ್ಯನವರು ಸಾವಿರಾರು ಮನಸ್ಸುಗಳಲ್ಲಿ ಸಾಹಿತ್ಯದ ಬೆಳಕನ್ನು ಹಬ್ಬಿಸಿದ ಶಕ್ತಿ. ಖಚಿತವಾದ ವಿದ್ವತ್ತು, ಶುದ್ಧ ಅಭಿರುಚಿ, ಸೂಕ್ಷ್ಮ ಸಂವೇದನೆಗಳು ಅವರ ಬರಹಗಳಿಗೆಲ್ಲ ಸತ್ವವನ್ನು ನೀಡಿವೆ. ಸರಳರೂ ಸ್ನೇಹಶೀಲರೂ ಆದ ಅವರು ಹಲವು ಸಂಸ್ಥೆಗಳನ್ನು ಬೆಳೆಸುವುದರಲ್ಲಿ ಪಾಲ್ಗೊಂಡರು. ವ್ಯಕ್ತಿಯಾಗಿ, ವಿದ್ವಾಂಸರಾಗಿ, ಅಧ್ಯಾಪಕರಾಗಿ, ಸಂಸ್ಥೆಗಳಲ್ಲಿ ಕಾರ್ಯಶೀಲರಾಗಿ ಅವರು ಗೌರವ, ಮನ್ನಣೆಗಳನ್ನು ಪಡೆದ ಕನ್ನಡನುಡಿ ಸೇವಕರು.

ಎಲ್.ಎಸ್. ಶೇಷಗಿರಿರಾವ್

Sri Vidyabharathi Book Centre, Sringeri